**H. SIDDAVEERAPPA**
**Eminent Parlimentarian Series**
**Written by R. G. HALLI NAGARAJA**
**No.161, `Srimatha', 6th Cross,**
**K.R.Road, Shastrinagara, Bangalore - 28**
**Mobile: 99005 66020**
**Published by**
**Karnataka Legislature Library Committee**
**Vidhana Soudha, Bangalore - 560 001.**
Page: 354+ xxxii Price: 35/- Rs.
© **Chairman** Karnataka Legislative Council
& **Speaker** Karnataka Legislative Assembly
First Edition: 2010, Copies: 2000
**Printed & Designed by**
Government Press, Bangalore.

ಎಚ್. ಸಿದ್ದವೀರಪ್ಪ
ಪ್ರತಿಭಾವಂತ ಸಂಸದೀಯಪಟು ಪುಸ್ತಕ ಮಾಲಿಕೆ
ಲೇಖಕರು: ಆರ್.ಜಿ. ಹಳ್ಳಿ ನಾಗರಾಜ
ನಂ. 161, 'ಶ್ರೀಮಾತಾ', 6ನೇ ಕ್ರಾಸ್, ಶಾಸ್ತ್ರಿನಗರ,
ಕೆ.ಆರ್.ರಸ್ತೆ, ಬೆಂಗಳೂರು - 560 028.
ಸಂಚಾರಿ : 99005 66020
ಪ್ರಕಾಶನ
ಗ್ರಂಥಾಲಯ ಸಮಿತಿ
ಕರ್ನಾಟಕ ವಿಧಾನ ಮಂಡಲ
ವಿಧಾನಸೌಧ, ಬೆಂಗಳೂರು - 560 001.
ಪುಟ: 354.+32 ಬೆಲೆ: 35/- ರೂ.
© ಸಭಾಪತಿಗಳು: ಕರ್ನಾಟಕ ವಿಧಾನ ಪರಿಷತ್
ಸಭಾಧ್ಯಕ್ಷರು: ಕರ್ನಾಟಕ ವಿಧಾನಸಭೆ
ಮೊದಲ ಮುದ್ರಣ: 2010, ಪ್ರತಿಗಳು: 2,000
ಮುದ್ರಣ ಮತ್ತು ವಿನ್ಯಾಸ
ಸರ್ಕಾರಿ ಮುದ್ರಣಾಲಯ, ಬೆಂಗಳೂರು.

# ವಿಧಾನ ಮಂಡಲ ಗ್ರಂಥಾಲಯ ಸಮಿತಿ
# 2010–2011

---

ಅಧ್ಯಕ್ಷರು

ಶ್ರೀ ಡಿ.ಎಚ್. ಶಂಕರಮೂರ್ತಿ

ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರು

ಶ್ರೀ ಕೆ.ಜಿ. ಬೋಪಯ್ಯ

ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ

ಶ್ರೀ ಜಿ. ಸೋಮಶೇಖರ ರೆಡ್ಡಿ

ವಿಧಾನಸಭಾ ಸದಸ್ಯರು

ಶ್ರೀ ನೆ.ಲ. ನರೇಂದ್ರಬಾಬು

ವಿಧಾನಸಭಾ ಸದಸ್ಯರು

ಶ್ರೀ ಕಿಮ್ಮನೆ ರತ್ನಾಕರ್

ವಿಧಾನಸಭಾ ಸದಸ್ಯರು

ಶ್ರೀ ಸಾ.ರಾ. ಮಹೇಶ್

ವಿಧಾನಸಭಾ ಸದಸ್ಯರು

ಶ್ರೀ ಹೆಚ್.ಎಸ್. ಪ್ರಕಾಶ್

ವಿಧಾನಸಭಾ ಸದಸ್ಯರು

ಡಾ॥ ಶ್ರೀನಾಥ್

ವಿಧಾನ ಪರಿಷತ್ ಸದಸ್ಯರು

ಪ್ರೊ: ಪಿ.ವಿ. ಕೃಷ್ಣಭಟ್ಟ

ವಿಧಾನ ಪರಿಷತ್ ಸದಸ್ಯರು

ಶ್ರೀ ಲೇಹರ್ ಸಿಂಗ್ ಸಿರೋಯಾ

ವಿಧಾನ ಪರಿಷತ್ ಸದಸ್ಯರು

# ಪ್ರತಿಭಾವಂತ ಸಂಸದೀಯಪಟು ಪುಸ್ತಕ ಮಾಲಿಕೆ

## ಅಧಿಕಾರಿ – ಸಂಪಾದಕ ವರ್ಗ

## ಕರ್ನಾಟಕ ವಿಧಾನ ಮಂಡಲ

**ಹೆಚ್.ಎಂ. ಭಾರತೇಶ್** — **ಪ್ರಧಾನ ಕಾರ್ಯದರ್ಶಿ**

## ಕರ್ನಾಟಕ ವಿಧಾನಸಭೆ ಸಚಿವಾಲಯ

| | |
|---|---|
| ಎಸ್.ಬಿ. ಪಾಟೀಲ್ | ಕಾರ್ಯದರ್ಶಿ |
| ಟಿ.ಎನ್. ಧ್ರುವಕುಮಾರ್ | ಕಾರ್ಯದರ್ಶಿ–2 |
| ಎಂ. ಗುರುರಾಜ | ಜಂಟಿ ಕಾರ್ಯದರ್ಶಿ |
| ಕೆ. ಚಿನ್ನಸ್ವಾಮಿ | ಉಪ ಕಾರ್ಯದರ್ಶಿ |
| ಅನಸೂಯ ಎನ್. ದೇವಗಿರಿ | ಮುಖ್ಯ ಗ್ರಂಥಪಾಲಕಿ (ಪ್ರ) |

**ಸಂಪಾದಕರು**

ಮಹಾಬಲೇಶ್ವರ ಕಾಟ್ರಹಳ್ಳಿ

# ಮುನ್ನುಡಿ

28 ಅಕ್ಟೋಬರ್, 2010

ಸುವರ್ಣ ಮಹೋತ್ಸವದ ಆಚರಣೆಯ ಅಂಗವಾಗಿ ಈ ದೇಶಕ್ಕಾಗಿ ದುಡಿದ, ಅಗ್ರಮಾನ್ಯ ಸಂಸದೀಯ ಪಟುಗಳಾಗಿ ಕೊಡುಗೆಯನ್ನು ನೀಡಿದ ಮಹನೀಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಪ್ರತಿಭಾವಂತ ಸಂಸದೀಯ ಪಟುಗಳ ಬಗ್ಗೆ ಅನೇಕ ಹೊತ್ತಿಗೆಗಳನ್ನು ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ ಹೊರತಂದಿರುತ್ತಾರೆ. ಅವುಗಳಲ್ಲಿ ಡಾ॥ ರಾಮಮನೋಹರ ಲೋಹಿಯಾ, ಡಾ॥ ಬಿ.ಆರ್. ಅಂಬೇಡ್ಕರ್, ಡಾ॥ ಶಾಂಪ್ರಸಾದ್ ಮುಖರ್ಜಿ, ಡಾ॥ ರಾಜೇಂದ್ರ ಪ್ರಸಾದ್ ಮೊದಲಾದ ಗಣ್ಯರ ಪುಸ್ತಕಗಳನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಹೊರತಂದಿರುವ ಸಂತೋಷಕರ ವಿಷಯವನ್ನು ಉಲ್ಲೇಖಿಸಬಯಸುತ್ತೇವೆ.

ರಾಜ್ಯದ ಸಂಸದೀಯ ಪಟುಗಳಾದ ಅನೇಕ ಮಹನೀಯರನ್ನು ಕುರಿತು ಹೊತ್ತಿಗೆಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆಯನ್ನು ಕರ್ನಾಟಕ ವಿಧಾನ ಮಂಡಲವು ಹಮ್ಮಿಕೊಂಡಿದ್ದು, ವಿಧಾನ ಮಂಡಲದ ಗ್ರಂಥಾಲಯ ಸಮಿತಿಯು ಈಗಾಗಲೇ ಪ್ರಕಟಿಸುತ್ತಿದೆ. ಈ ಉಪ ಸಮಿತಿಯು ಕಾರ್ಯಪ್ರವೃತ್ತವಾಗಿ ರಾಜ್ಯದ ಲೇಖಕರ, ವಿದ್ವಾಂಸರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ನಮ್ಮ ನಾಡಿನ ಪ್ರಗತಿಪರ ಚಿಂತಕರು, ರಾಜಕೀಯ ಮುತ್ಸದ್ದಿಗಳ ಆಶಯಗಳನ್ನು ದಾಖಲಿಸಿ ಈ ಮೂಲಕ ಅವರ ಜೀವನ ಚಿತ್ರಣವನ್ನು ಪುಸ್ತಕ ರೂಪದಲ್ಲಿ ತರುತ್ತಿದೆ.

ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಈಗಾಗಲೇ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಶಾಂತವೇರಿ ಗೋಪಾಲಗೌಡ, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಕೆ.ಸಿ. ರೆಡ್ಡಿ, ಶ್ರೀ ಡಿ. ದೇವರಾಜ ಅರಸು, ಶ್ರೀ ಜೆ.ಹೆಚ್. ಪಟೇಲ್, ಶ್ರೀ ಟಿ.ಆರ್. ಶಾಮಣ್ಣ, ಶ್ರೀ ಎಸ್.ಡಿ. ಗಾಂವಕರ್, ಶ್ರೀಮತಿ ಬಿ.ಎಲ್. ಸುಬ್ಬಮ್ಮ, ಡಾ॥ ಲಂಕಾ ಸುಂದರಂ, ಸರದಾರ ಶರಣಗೌಡ ಇನಾಂದಾರ್, ಕೆ.ಹೆಚ್. ರಂಗನಾಥ್ ಮತ್ತಿತರ ಹಲವು ಗಣ್ಯರ ಬಗೆಗಿನ ಪುಸ್ತಕಗಳನ್ನು ಹೊರತರಲಾಗಿದೆ.

ಪತ್ರಕರ್ತರು, ಲೇಖಕರು ಆಗಿರುವ **ಆರ್.ಜಿ. ಹಳ್ಳಿ ನಾಗರಾಜ್** ಅವರು ರಚಿಸಿರುವ ರಾಜ್ಯದ ಹಿರಿಯ ಸಂಸದೀಯ ಪಟುವಾಗಿದ್ದ **ಶ್ರೀ ಎಚ್. ಸಿದ್ದವೀರಪ್ಪ** ಅವರ ಬಗೆಗಿನ ಈ ಪುಸ್ತಕವನ್ನು ತಮ್ಮ ಮುಂದಿಡಲು ಹೆಮ್ಮೆಯೆನಿಸುತ್ತದೆ. ಇವರ ಸದನದ ಭಾಷಣಗಳು ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಜೊತೆಗೆ ಈ ನಾಡಿನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಶಯಗಳನ್ನು ಬಿಂಬಿಸುತ್ತವೆ.

ಈ ಪುಸ್ತಕವನ್ನು ರಚಿಸಿದ ಲೇಖಕರಿಗೆ ಹಾಗೂ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೆ ಹಾಗೂ ಉಪ ಸಮಿತಿಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳ ಬಗೆಗಿನ ಈ ಪುಸ್ತಕವು ಮಾನ್ಯ ಸದಸ್ಯರುಗಳಿಗೆ, ಸಂಶೋಧಕರಿಗೆ ಹಾಗೂ ಸಾಮಾನ್ಯ ಓದುಗರಿಗೆ ಸಂಸದೀಯ ವಿಷಯಗಳಲ್ಲಿ ಹೆಚ್ಚಿನ ಅನುಭವ ನೀಡುತ್ತದೆ ಮತ್ತು ಉಪಯುಕ್ತವಾಗುತ್ತದೆಂದು ಭಾವಿಸುತ್ತೇವೆ.

**ಶ್ರೀ ಡಿ.ಎಚ್. ಶಂಕರಮೂರ್ತಿ**
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

**ಶ್ರೀ ಕೆ.ಜಿ.ಬೋಪಯ್ಯ**
ಸಭಾಧ್ಯಕ್ಷರು
ಕರ್ನಾಟಕ ವಿಧಾನಸಭೆ

# ನನ್ನ ಮಾತು :
# ಲೇಸೆಂಬ ಮಾತಿನ ಕೃತಜ್ಞತೆ

**ಲೇಸೆ ಕೇಳಿಸಲಿ ಕಿವಿಗೆ, ನಾಲಗೆಗೆ ಲೇಸೆ ನುಡಿದು ಬರಲಿ**
**ಲೇಸೆ ಕಾಣಿಸಲಿ ಕಣ್ಗೆ, ಜಗದೊಳಗೆ ಲೇಸೆ ಹಬ್ಬುತಿರಲಿ**
**ಲೇಸೆ ಕೈಗಳಿಂದಾಗುತಿರಲಿ, ತಾ ಬರಲಿ ಲೇಸೆ ನಡೆದು,**
**ಲೇಸನುಂಡು, ಲೇಸುಸಿರಿ, ಇಲ್ಲಿರಲಿ ಲೇಸೆ ಮೈಯಪಡೆದು.**

– ದ.ರಾ. ಬೇಂದ್ರೆ

ಕೇಳುವ ಮಾತು, ನುಡಿವ ನಾಲಗೆ, ಕಾಣುವ ನೋಟ – ಎಲ್ಲವೂ ಮಧುರವಾಗಿರಬೇಕು ಎಂಬುದೊಂದು ಅಪೇಕ್ಷೆ ಮನುಷ್ಯನಲ್ಲಿ ಸದಾ ಮಿಡಿಯುತ್ತಿರುತ್ತದೆ. ಹಿತವಾದದ್ದನ್ನು ಮನದೊಳಗೆ ತೆಗೆದುಕೊಂಡು ಪ್ರೀತಿ ವಿಶ್ವಾಸದಿಂದ ಅಪ್ಪುವಂತೆ, ಅಪ್ರಿಯ ಹಾಗೂ ಕಹಿಯನ್ನು ನಮ್ಮೊಳಗೆ ಪ್ರವೇಶಿಸಲೂ ಬಿಡದ ಇನ್ನೊಂದು ಮನಸ್ಸು ಇರುತ್ತದೆ. ಮನುಷ್ಯ ಸ್ವಭಾವವೇ ಹಾಗೆ. ತನಗೆ, ತನ್ನ ಕುಟುಂಬಕ್ಕೆ ಸದಾ ಒಳ್ಳೆಯದಾಗುತ್ತಿರಲಿ ಎಂದೇ 'ಲೇಸು' ಬಯಸಿಕೊಳ್ಳುವವ ಪರಚಿಂತೆ, ಪರಹಿತವನ್ನು ದೂರವೇ ಇಟ್ಟಿರುತ್ತಾನೆ. **'ಲೇಸೆ ಕೇಳಿಸಲಿ ಕಿವಿಗೆ, ನಾಲಗೆಗೆ ಲೇಸೆ ನುಡಿದು ಬರಲಿ'** ಎಂಬ ಕವಿ ಮಾತು ಸದಾಶಯದ ಸಿಂಚನವೆಂಬುದು ನಿಜ. ಈ ಸಂದರ್ಭದಲ್ಲಿ ಗಾಂಧೀಜಿಯವರ ಬಳಿ ಇದ್ದ ಮೂರು ಮಂಗಗಳ ಚಿತ್ರ ಕಣ್ಣೆದುರು ಬರುತ್ತದೆ. ಕೆಟ್ಟದ್ದನ್ನು ಕೇಳಬೇಡ, ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ನುಡಿಯಬೇಡ: ಕವಿಯ ಅರ್ಥ, ಗಾಂಧಿ ಸಾಂಕೇತಿಕರಿಸಿದ ಮಂಗಗಳ ಕತೆಗೂ ಒಂದೇ ಅರ್ಥ – ವ್ಯಾಖ್ಯೆ. ಯಾವುದೇ ಕವಿ, ಚಿಂತಕ, ದಾರ್ಶನಿಕ ಸದಾ ಜಗದ ಒಳಿತನ್ನೇ ಅಪೇಕ್ಷಿಸುತ್ತಾನೆ.

ನಾವು ಅಪೇಕ್ಷಿಸುವ ಸೌಂದರ್ಯದ ಹಿಂದೆ ಕುರೂಪ, ವಾಸ್ತವದಲ್ಲಿ ಖುಷಿ, ನಗುವಿನ ಹಿಂದೆ ಹಿಂಸೆ – ಕ್ರೌರ್ಯ ಇದ್ದೇ ಇದೆ. ಮನುಷ್ಯನಲ್ಲಿ ಅಸೂಯೆ, ಈರ್ಷ್ಯೆ ಹೇಗೋ – ಒಡೆದು ಆಳುವ ನೀತಿಯೂ ಇವನೊಟ್ಟಿಗೆ ಬೆಳೆದು ಬಂದಿದೆ. ಹಿಂಸೆಯಿಂದ, ನೋವಿನಿಂದ ಸಾಧಿಸದ್ದು – ಪ್ರೀತಿ, ಸಹನೆ, ಸಹಬಾಳ್ವೆಯಿಂದ ಸಾಧ್ಯವಿದೆ ಎಂಬುದನ್ನು ತೋರಿದ ಸಾಧಕರಿದ್ದಾರೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಮುಂತಾದ ಚಿಂತಕರ ಸಾಧನೆ ಬದುಕಿಗೊಂದು ಮಾರ್ಗಸೂಚಿ. 'ನನ್ನ ಹಿಂದೆ ಬನ್ನಿ' – ಎಂದು ಈ ಸಾಧಕರೇನು ಕರೆಯಲಿಲ್ಲ.

ಅವರ ಅನುಭವ, ಹಾಗೂ ಬದುಕು ಕೆಲವರಿಗಾದರೂ ದಾರಿ ದೀಪವಾಗಬಲ್ಲದು. ಮಾಡುವ ಕೆಲಸದಲ್ಲಿ ಪ್ರಾಮಾಣಿಕತೆ ಇದ್ದರೆ ಅದು ತಲುಪುವವರನ್ನು ತಲುಪಿಯೇ ತೀರುತ್ತದೆ.

ಇಂಥ ಸದಾಶಯ ಒಳ್ಳೆಯದೆ. ವಾಸ್ತವದಲ್ಲಿ ನಾವು ಕಂಡುಣ್ಣುವ ಬದುಕು, ಸಾಧಕರೆಂದು ಯಾರನ್ನು ಗುರ್ತಿಸಿದ್ದೇವೆಯೋ ಅಂಥವರು ಪ್ರಶ್ನಾತೀತರೆ? ನಮ್ಮ ಕಿವಿಗಳಿಗೆ ಕೇಳುವ 'ಲೇಸು' ಪ್ರಿಯವಾದದ್ದೆ? ಹಿತವಾದದ್ದು ಕೇಳುತ್ತಿದೆಯೆ? ಹಿತವಾದದ್ದನ್ನೇ ನುಡಿಯುತ್ತಿದ್ದೇವೆಯೆ? ಸುಂದರವಾದದ್ದನ್ನೇ ನೋಡುತ್ತಿದ್ದೇವೆಯೆ?

ವಾಸ್ತವದಲ್ಲಿ ನಿಂತು ಯೋಚಿಸೋಣ: ನಮ್ಮ ಪರಿಸರ/ವಾತಾವರಣ ಹೇಗಿದೆ? ಮನಸ್ಸು ಹೇಗೆ ಸ್ಪಂದಿಸುತ್ತಿದೆ? ಕಲುಷಿತಗೊಂಡ ವಾತಾವರಣಕ್ಕೆ ಏನು ಕಾರಣ? ಯಾರು ಇದರ ವಾರಸುದಾರ? ಅರ್ಥಾತ್ ಗುತ್ತಿಗೆದಾರ? ಪ್ರಶ್ನೆಗಳ ನಡುವೆಯೇ ಹುಡುಕಾಟ ನಡೆದಿದೆ.....

ಅದು ನಮ್ಮದೇ ಬದುಕಿನ ಏರಿಳಿತಗಳ ಆಗುಹೋಗು
ಅದು ಕಂಡುಂಡ ಬದುಕಿನ ಅಸ್ಪಷ್ಟ ಚಿತ್ರಣ
ಅದು ಅವರಿವರು ತೋರಿದ ದಾರಿಯ ಮಾರ್ಗಸೂಚಿ....
–ಹೀಗಾಗಿ ವಾಸ್ತವಕ್ಕೆ ಮುಖಾಮುಖಿ ಆಗಲು 'ಪ್ರಶ್ನೆ'ಗಳು
ನಮ್ಮೆದುರಿವೆ.

ಭಾರತದ ಸ್ವಾತಂತ್ರ್ಯಾನಂತರದ ನಮ್ಮ ಬದುಕು 'ಸ್ವಂತಿಕೆ' ಹಾಗೂ 'ಸ್ವಾಭಿಮಾನ'ಕ್ಕಾಗಿ ಹುಡುಕಾಟ ನಡೆಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಬದುಕಿಗೊಂದು ಶಿಸ್ತು; ನಡೆನುಡಿ ತಿದ್ದಿಕೊಳ್ಳಲು ಅಂಕುಶವಾದ ಕಾನೂನು ಕಟ್ಟಳೆ ನಮ್ಮನ್ನು ನಿಯಂತ್ರಿಸಿದೆ. ಇದಕ್ಕೆ 'ಸಂವಿಧಾನ'ದ ಚೌಕಟ್ಟು ಇದೆ. ಸ್ವಾತಂತ್ರ್ಯ, ಸಮಾನತೆ, ಅಭಿವ್ಯಕ್ತಿ – ಇವೆಲ್ಲಾ ಬದುಕಿನ ಭಾಗವಾಗಿದ್ದು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ 'ಒಗ್ಗಿ' ಹೋಗಿದ್ದೇವೆ.

**'ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ನಡೆಸುವ ಸರಕಾರವೇ ಪ್ರಜಾಪ್ರಭುತ್ವ ವ್ಯವಸ್ಥೆ'** ಎಂದ ರಾಜನೀತಿಜ್ಞ ಅಬ್ರಾಹಂ ಲಿಂಕನ್. ಇಂಥ ಪ್ರಜಾಪ್ರಭುತ್ವ

ನಮ್ಮದಾದ ನಂತರ ದೇಶದಲ್ಲಿ ಜನಪ್ರತಿನಿಧಿಗಳು ಆಡಳಿತದ ಚುಕ್ಕಾಣಿ ಹಿಡಿದು ಆಳತೊಡಗಿದರು. ರಾಜರ ಆಳ್ವಿಕೆ ನಂತರ ಆಂಗ್ಲರ ಗುಲಾಮಗಿರಿಗೆ ಒಳಗಾಗಿ – ಹೋರಾಟದ ವಿವಿಧ ಮಜಲುಗಳಿಂದ ಪಡೆದ ಸ್ವಾತಂತ್ರ್ಯಾ ನಂತರದ ಸಂವಿಧಾನಾತ್ಮಕ ಬದುಕಿನ ಚಿತ್ರಣವೇ ಪ್ರಜಾಪ್ರಭುತ್ವ ವ್ಯವಸ್ಥೆ. ಇದಕ್ಕೆ ಚುನಾವಣೆಯೆಂಬ ಕವಣೆ, ಅದರಲ್ಲಿ ಮತಬ್ಯಾಂಕ್ ಎಂಬ ಕಲ್ಲು; ಜತೆಗೆ ಹಕ್ಕುಗಳ ಸ್ಥಾನಮಾನಕ್ಕೆ ಸದಾ ಹೋರಾಟ.... ಹೀಗಾಗಿ ಪವಿತ್ರ ಮತವೆಂಬ ಸಂಜೀವಿನಿಯಿಂದ ಅಧಿಕಾರವೆಂಬ ಗದ್ದುಗೆ ಏರಿದವರು ನಮ್ಮ ಪ್ರಭುಗಳಾದರು. ಅವರ ಅಧಿಕಾರದಲ್ಲಿ ಜನಸಾಮಾನ್ಯನ ಆಗುಹೋಗು, ಊರುಕೇರಿಗಳ ಉದ್ಧಾರ – ರಸ್ತೆ, ಕುಡಿಯುವ ನೀರು, ಶಿಕ್ಷಣ, ಉದ್ಯೋಗ, ವಸತಿ, ಆರೋಗ್ಯ, ಹಣಕಾಸು ಇತ್ಯಾದಿ ಎಲ್ಲವೂ ಚುನಾವಣೆಯೆಂಬ ವ್ಯವಸ್ಥೆಯಲ್ಲಿ ಗೆದ್ದ 'ಶಾಸಕ'ರ ನಿಯಂತ್ರಣಕ್ಕೊಳಪಟ್ಟಿತು.

ಪ್ರಜೆಗಳ ಮತದಿಂದ ಗೆದ್ದು ಬಂದ ಶಾಸಕರು 'ಜನಪ್ರತಿನಿಧಿ'ಗಳಾದರು. ಜನ ತಮ್ಮ ಒಳಿತನ್ನು ಗೆದ್ದವರಲ್ಲಿ ಕಂಡುಕೊಳ್ಳುವ ಪ್ರಯತ್ನ ನಡೆಸಿ, ತಮ್ಮದೇ ಪ್ರತಿಬಿಂಬ ಹುಡುಕಿ ಹೊರಟರು.

ಸಂವಿಧಾನ, ಪ್ರಜಾಪ್ರಭುತ್ವದ ನೈಜ ಅರ್ಥಗಳೆಲ್ಲವೂ ಜನಸಾಮಾನ್ಯನ ಅರಿವಿಗೆ ಬಂದದ್ದೆ ಸ್ವಾತಂತ್ರ್ಯಾ ನಂತರ. ಅದರಲ್ಲೂ ಡಾ. ಬಿ.ಆರ್. ಅಂಬೇಡ್ಕರ್ ನೇತೃತ್ವದ 'ಸಂವಿಧಾನ' ರಚನೆ ಆದ ನಂತರ ನಿಜವಾದ ಅಭಿವ್ಯಕ್ತಿ, ಸ್ವಾತಂತ್ರ್ಯ, ಸಮಾನತೆ ಅಂದರೆ ಏನು ಅನ್ನುವ ಅರಿವು ಮೂಡಿತು. (ಕರ್ನಾಟಕದಲ್ಲಿ ಸಂವಿಧಾನಾತ್ಮಕ ಚುನಾವಣೆ ನಡೆವ ಮೊದಲೇ ಮೈಸೂರು ಮಹಾರಾಜರ ನೇತೃತ್ವದ ಪ್ರಜಾಪ್ರತಿನಿಧಿ ಸಭೆ ರಾಜ್ಯದ ಜನರ ಕಷ್ಟಸುಖಕ್ಕೆ ಸ್ಪಂದಿಸಿತ್ತು. ಸ್ವಾತಂತ್ರ್ಯಾ ನಂತರ ರಾಜ್ಯದ ಪ್ರಥಮ ಮುಖ್ಯಮಂತ್ರಿ ಆದವರು ಕೆ.ಸಿ. ರೆಡ್ಡಿ ಅವರು).

ಸಂವಿಧಾನ ರಚನೆ ಆದ ನಂತರ **'1952'ನೇ** ಇಸವಿ ದೇಶದ ಪ್ರಥಮ ಸಾರ್ವಜನಿಕ ಚುನಾವಣೆಗೆ ನಾಂದಿ ಹಾಡಿತು. ಆಗಿನ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿ ಆದವರು ಶ್ರೀ ಕೆಂಗಲ್ ಹನುಮಂತಯ್ಯನವರು. ಅವರು ರಚಿಸಿದ 'ಕ್ಯಾಬಿನೆಟ್'ನಲ್ಲಿ ಐವರು ಮಾತ್ರ ಸಚಿವರಿದ್ದರು. ಮುಖ್ಯಮಂತ್ರಿ ಒಳಗೊಂಡಂತೆ ಆರು ಜನ ಮಾತ್ರ ರಾಜ್ಯ ಚುಕ್ಕಾಣಿ ಹಿಡಿದರು. ಅದರಲ್ಲಿ ಪ್ರಮುಖ ಗೃಹ ಹಾಗೂ ಕೈಗಾರಿಕೆ ಖಾತೆಗಳನ್ನು ಹೊಂದಿದವರು **ಶ್ರೀ ಎಚ್.** ಸಿದ್ದವೀರಪ್ಪನವರು. ಅಂದಿನ ಚಿತ್ರದುರ್ಗ ಜಿಲ್ಲೆಯ 'ಹರಿಹರ'

ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದ ಕಾನೂನು ಪರಿಣಿತರು ಇವರು. ದಾವಣಗೆರೆ – ಹರಿಹರ – ಚಿತ್ರದುರ್ಗದಲ್ಲಿ ಖ್ಯಾತ ಕ್ರಿಮಿನಲ್ ವಕೀಲರಾಗಿ ಕಾರ್ಯನಿರ್ವಹಿಸಿ, ರೈತರ ಕಷ್ಟಗಳಿಗೆ ಸ್ಪಂದಿಸಿ, ಅವರ ಸಂಘಟನೆ ಮಾಡಿ ರೈತಸಂಘ ಸ್ಥಾಪಿಸಿ ನ್ಯಾಯಕ್ಕಾಗಿ ಸಾರ್ವಜನಿಕ ಬದುಕು ಮೀಸಲಿಟ್ಟವರು. ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಗೆದ್ದು ಕೆಲಸಮಾಡಿದ ಅನುಭವವೂ ಅವರ ಬೆನ್ನಿಗಿತ್ತು.

ವಿಧಾನಸಭೆಗೆ ಆಯ್ಕೆಯಾದ ಮೊದಲಬಾರಿಗೆ ಪ್ರಮುಖ ಖಾತೆಗಳ ಸಚಿವರಾದ ಎಚ್. ಸಿದ್ದವೀರಪ್ಪನವರು ಈ ರಾಜ್ಯ ಕಂಡ ಪ್ರಾಮಾಣಿಕ, ನಿಷ್ಠಾವಂತ ಹಾಗೂ ಧೈರ್ಯವಂತ ಸಚಿವರು. ಕೆಂಗಲ್ ನಂತರ ಶ್ರೀ ಕಡಿದಾಳ್ ಮಂಜಪ್ಪ, ಶ್ರೀ ಡಿ. ದೇವರಾಜ ಅರಸು ಅವರ ಸಚಿವ ಸಂಪುಟದಲ್ಲೂ ಪ್ರಮುಖ ಖಾತೆ ಹೊಂದಿದವರು. ವಿರೋಧಪಕ್ಷದ ಸಮರ್ಥ ನಾಯಕರಾಗಿ ಶ್ರೀ ವೀರೇಂದ್ರ ಪಾಟೀಲರ ಸರ್ಕಾರಕ್ಕೆ ಸವಾಲಾಗಿ, ಇಕ್ಕಟ್ಟಿಗೆ ಸಿಲುಕಿಸಿ ಸರ್ಕಾರ ಪತನವಾಗಲು ಕಾರಣರಾದವರು.

ಇಂಥ ಧೀಮಂತ ಎಚ್. ಸಿದ್ದವೀರಪ್ಪನವರ ಕುರಿತು ಕರ್ನಾಟಕ ಸರ್ಕಾರದ ವಿಧಾನ ಮಂಡಲ ಗ್ರಂಥಾಲಯ ಸಮಿತಿ **'ಪ್ರತಿಭಾವಂತ ಸಂಸದೀಯ ಪಟು'** ಮಾಲಿಕೆಯಲ್ಲಿ ಈ ಕೃತಿ ಹೊರ ತರುತ್ತಿರುವುದು ಸಂತೋಷ. ಇದಕ್ಕೆ ಸಂಬಂಧಿಸಿದ ಎಲ್ಲರಿಗೂ ಮೊದಲು ನನ್ನ ಕೃತಜ್ಞತೆಗಳು.

ಶ್ರೀ ಎಚ್. ಸಿದ್ದವೀರಪ್ಪನವರ ಬಾಲ್ಯದ ವಿವರಗಳ ಸಂಗ್ರಹಕ್ಕೆ ತೊಡಗಿದಾಗ ಅನೇಕ ತೊಡಕು ಎದುರಾಗಿವೆ. ಅವರ ಹುಟ್ಟೂರು ಹನಗವಾಡಿಗೆ ಭೇಟಿ ನೀಡಿದಾಗ, ಮೊದಮೊದಲು ಅವರ ಬಾಲ್ಯದ ಬಗ್ಗೆ ಹೇಳುವವರೇ ಸಿಕ್ಕಲಿಲ್ಲ! ನಾನು ವಿಷಯ ಸಂಗ್ರಹಕ್ಕೆ ಹೋದಾಗ ಸಿದ್ದವೀರಪ್ಪನವರು ತೀರಿಕೊಂಡು 25 ವರ್ಷಗಳಾಗಿದ್ದರೆ; ಅವರು ಹುಟ್ಟಿ 98 ವರ್ಷವಾಗಿತ್ತು. ಹೀಗಾಗಿ ಕರಾರುವಕ್ಕು ಮಾಹಿತಿ ಸಿಕ್ಕದೆ ನಿರಾಶನಾಗಿ ವಾಪಾಸು ಬರಬೇಕಾಯಿತು. ಅಂತೂ ಸಂಶೋಧಕನಂತೆ ಹಠಕ್ಕೆ ಬಿದ್ದು ಮಾಹಿತಿ ಸಂಗ್ರಹಿಸಬೇಕಾಯಿತು. ಈ ಕೃತಿ ಹೊರ ಬರುವ ಸಂದರ್ಭಕ್ಕೆ ಅವರು ಹುಟ್ಟಿ 105 ವರ್ಷ ಆಗುತ್ತಿದೆ.

'ಸಿದ್ದವೀರಪ್ಪನವರ ಬಾಲ್ಯ, ಓದು, ವೃತ್ತಿ, ಸಾಮಾಜಿಕ, ರಾಜಕೀಯ ಚಟುವಟಿಕೆ ಬಗ್ಗೆ ತಿಳಿದವರು ಮಾಹಿತಿ ಕೊಡಿ' – ಎಂದು ಪತ್ರಿಕೆಗಳ

ವಾಚಕರವಾಣಿಗೆ ಪತ್ರ ಬರೆದು ಮನವಿ ಮಾಡಿದೆ. ಒಳ್ಳೆ ಪ್ರತಿಕ್ರಿಯೆ ಬಂದವು. ಅವರನ್ನು ಮೆಚ್ಚಿದವರು ಹೊಗಳಿ ಉತ್ತುಂಗಕ್ಕೆ ಏರಿಸಿದ್ದರೆ; ವಿರೋಧಿಗಳು ತೆಗಳಿ ಬರೆದರು! ನನಗೆ ಕರಾರುವಕ್ಕು ಮಾಹಿತಿ ಕೊಟ್ಟವರು ದಾವಣಗೆರೆಯ ಹಿರಿಯ ವಕೀಲ ಶ್ರೀ ಆರ್.ಜಿ. ಸಿದ್ದಪ್ಪ ಹಾಗೂ ಹನಗವಾಡಿಯವರೇ ಆದ ಜಿಲ್ಲಾ ಪರಿಷತ್ತಿನ ಸದಸ್ಯ ಶ್ರೀ ವಿರೂಪಾಕ್ಷಪ್ಪ. ಅವರ ಮನೆಯಲ್ಲಿ ಬಿಸಿಬಿಸಿ ಜೋಳದರೊಟ್ಟಿ, ಕೆಂಪು ಚಟ್ನಿ, ಶೇಂಗಾಪುಡಿ, ಜೊತೆಗಿಷ್ಟು ಮೊಸರು – ರುಚಿ ನೋಡಿ ಮಾಹಿತಿ ಪಡೆದೆ. ತಮ್ಮ ನೆನಪಿನ ಅನೇಕ ಚಿತ್ರಣ ನೀಡಿದರು. ಹನಗವಾಡಿ ಹಾಗೂ ಸುತ್ತಮುತ್ತಲ ಕೆಲವು ಊರುಗಳಿಗೂ ಹೋಗಿ ಬಂದೆ. ಇಳಿ ವಯಸ್ಸಿನ ಹಿರಿಯರನ್ನು ಕಂಡದ್ದಷ್ಟೇ ತೃಪ್ತಿ. ಬೇಕಿದ್ದ ಮಾಹಿತಿ ಲಭ್ಯವಾಗಲಿಲ್ಲ. ಮುಪ್ಪಿನ ಕಾರಣಕ್ಕೆ ನೆನಪು ಮಾಸಿ ಹೋಗಿತ್ತು. ದೊಡ್ಡಬಾತಿ, ದಾವಣಗೆರೆ ಮುಂತಾದೆಡೆ ಸಿಕ್ಕ ಮಾಹಿತಿ ಸಂಗ್ರಹಿಸಿದೆ.

ಆಶ್ಚರ್ಯ ಏನಪ್ಪ ಅಂದರೆ, ಈ ರಾಜ್ಯದ ರಾಜಕಾರಣದಲ್ಲಿ, ಆಡಳಿತದಲ್ಲಿ ಹುಲಿಯಂತೆ ಮೆರೆದ ಸಿದ್ದವೀರಪ್ಪನವರ ಹೆಸರೇಳಲು ಕರ್ನಾಟಕದಲ್ಲಿ 'ವಂಶದ ಕುಡಿಗಳು' ಯಾರೂ ಇರಲಿಲ್ಲ! ಅವರ ಅನಾರೋಗ್ಯದ ಕೊನೆ ದಿನಗಳಲ್ಲಿ ಆಸ್ಪತ್ರೆಯಲ್ಲಿ ಜತೆಗಿದ್ದು ಆರೈಕೆ ಮಾಡಿದ ಮೊಮ್ಮಗಳು ಆಶಾಗೆ ಜಯನಗರದ ವಾಸದ ಮನೆ ಬರೆದು ಕೊಟ್ಟಿದ್ದರು, ಅಲ್ಲಿಗೆ ಫೋನಾಯಿಸಿದಾಗ ಆ ಕಡೆ ದನಿ ಹೇಳಿತು: 'ಆಶಾ ಅವರು ಕೆನಡಾದಲ್ಲಿದ್ದಾರೆ!'– ಮತ್ತೆ ನನಗೆ ಬೇಕಿದ್ದ ನಿರ್ದಿಷ್ಟ ಮಾಹಿತಿಗೆ ಹಿನ್ನೆಡೆ ಆಯಿತು. 'ಇದ್ದ ಒಬ್ಬನೇ ಪುತ್ರ ಡಾ. ಹಾಲಸ್ವಾಮಿ ಅಮೇರಿಕಾ ಸೇರಿ ತಂದೆಯನ್ನು ಊರನ್ನು ಮರೆತ' ಎಂದು ಸಂಬಂಧಿಗಳು ಗೋಳಿಟ್ಟರು. ಅವರನ್ನು ಸಂಪರ್ಕಿಸುವುದು ಕಷ್ಟವಾಗಿ ಸುಮ್ಮನಾದೆ.

ಒಂದು ದಿನ ಇದ್ದಕ್ಕಿದ್ದಂತೆ ದೂರವಾಣಿಯಲ್ಲಿ 'ಅಮೇರಿಕಾದಿಂದ ನಾನು ಡಾಕ್ಟರ್ ಹಾಲಸ್ವಾಮಿ.... ಸಿದ್ದವೀರಪ್ಪನವರ ಮಗ ಮಾತಾಡುತ್ತಿದ್ದೇನೆ!' ಎಂದಾಗ ಆಶ್ಚರ್ಯ ಆಯಿತು. ತಮ್ಮ ತಂದೆ ಬಗ್ಗೆ ಪುಸ್ತಕ ಬರುತ್ತಿರುವುದನ್ನು ವಿಧಾನಸೌಧದ ಗ್ರಂಥಾಲಯ ವಿಭಾಗದಿಂದ ಮಾಹಿತಿ ಪಡೆದಿದ್ದರು. ಅವರು ಒಂದು ವರ್ಷದ ನಂತರ ಬೆಂಗಳೂರಿಗೆ ಬಂದರು. ಭೇಟಿ ಆಗಿ ಒಂದಷ್ಟು ಮಾಹಿತಿ, ಅಪರೂಪದ ಫೋಟೋ ಪಡೆದೆ. ಕೃತಿ ಬರುವುದು ತಡವಾದಾಗ 'ಯಾವಾಗ ಬರುತ್ತೆ? ನನಗೂ ವಯಸ್ಸಾಯಿತು' ಎಂದು ಅಮೇರಿಕಾದಿಂದಲೇ ನೆನಪಿಸುತ್ತಿದ್ದರು.

2006ಕ್ಕೆ ಎಚ್. ಸಿದ್ದವೀರಪ್ಪನವರ ಶತಮಾನೋತ್ಸವ ಸಂಭ್ರಮದಿಂದ ನಡೆಯಬೇಕಿತ್ತು. ನಡೆಯಲೇ ಇಲ್ಲ. 'ನಮ್ಮ ಸಿದ್ದವೀರಪ್ಪ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವವರಾರೂ ನೆನಪಿಸಿಕೊಳ್ಳಲಿಲ್ಲ! ಅವರು ಅಧಿಕಾರದಲ್ಲಿದ್ದಾಗ ಮಾಡಿದ ಕೆಲಸಗಳ ಪಟ್ಟಿ ನೀಡಿದ್ದವರು; 'ಅವರಿಲ್ಲದಿದ್ದರೆ ಕುಕ್ಕವಾಡ ಶುಗರ್ ಫ್ಯಾಕ್ಟರಿ, ದೇವರಬೆಳಕೆರೆ ಪಿಕಪ್ ಡ್ಯಾಂ, ರೈತರ ಸಹಕಾರ ಸಂಘ, ಕೊಡಗನೂರು ಹೈಸ್ಕೂಲು ಇರುತ್ತಿರಲಿಲ್ಲ' ಎಂದು ಸ್ಮರಿಸಿದ್ದರು. ಜತೆಗೆ ಆಪಾರ ಜನಪರ ಕೆಲಸಗಳ ಕುರುಹುಗಳು ಹರಿಹರ, ದಾವಣಗೆರೆ ವ್ಯಾಪ್ತಿಯಲ್ಲಿವೆ. ಹೀಗಿದ್ದೂ ಯಾರೂ ಅವರನ್ನು ಸ್ಮರಿಸಿಕೊಳ್ಳಲಿಲ್ಲ ಏಕೆ? ಅವರ ಬಗ್ಗೆ ಸಂಗ್ರಹಿಸಿದ್ದ ಮಾಹಿತಿ ಆಧರಿಸಿ ನಾನೇ ರಾಜ್ಯಮಟ್ಟದ ದೈನಿಕವೊಂದಕ್ಕೆ 'ಸಿದ್ದವೀರಪ್ಪ – 100' ಎಂಬ ಲೇಖನ ಬರೆದೆ. ಯುವ ಪೀಳಿಗೆಗಾದರೂ ಇಂಥವರ ಬದುಕು, ಕಾರ್ಯದಕ್ಷತೆ ತಿಳಿಯಲಿ ಎಂಬುದು ನನ್ನ ಅಭಿಲಾಷೆಯಾಗಿತ್ತು.

ನನ್ನ ಈ ಕೆಲಸ ಸಾಕಷ್ಟು ನಿಧಾನವಾಗಿದೆ. ಇದನ್ನು ಸಹನೆಯಿಂದ ದೊಡ್ಡತನದಿಂದ ಸಹಿಸಿಕೊಂಡು ಬಂದವರು ಕರ್ನಾಟಕ ವಿಧಾನ ಮಂಡಲ ಗ್ರಂಥಾಲಯ ಸಮಿತಿಯ ಗೌರವಾನ್ವಿತ ಸದಸ್ಯರು ಹಾಗೂ ಗ್ರಂಥಾಲಯ ಸಿಬ್ಬಂದಿ. ಅವರ ಸಹಕಾರ ಅಪಾರ. ಅನೇಕ ಉಪಯುಕ್ತ ಮಾಹಿತಿ ಕೊಟ್ಟಿದ್ದಾರೆ, ಅದನ್ನು ಎಂದೂ ಮರೆಯಲಾರೆ.

ಮುಖ್ಯವಾಗಿ ಕರ್ನಾಟಕ ವಿಧಾನ ಪರಿಷತ್‌ನ ಹಿಂದಿನ ಸಭಾಪತಿಗಳಾದ ಮಾನ್ಯಶ್ರೀ ವೀರಣ್ಣ ಮತ್ತಿಕಟ್ಟಿ ಅವರು ಕೃತಿ ಮುಗಿಸಲು ಮತ್ತಷ್ಟು ಸಮಯಾವಕಾಶ ಕಲ್ಪಿಸಿದ್ದರು, ಅದಕ್ಕಾಗಿ ಅವರಿಗೆ ವಿಶೇಷ ಕೃತಜ್ಞತೆಗಳು. ಜತೆಗೆ ವಿಧಾನ ಪರಿಷತ್ತಿನ ಪ್ರಸ್ತುತ ಸಭಾಪತಿಗಳಾದ ಶ್ರೀ ಡಿ.ಎಚ್. ಶಂಕರಮೂರ್ತಿ ಅವರಿಗೂ ನಮನಗಳು.

ವಿಧಾನ ಪರಿಷತ್ ಮಾಜಿ ಸದಸ್ಯರು, ಗ್ರಂಥಾಲಯ ಸಮಿತಿಯ ಸದಸ್ಯರೂ ಆಗಿದ್ದ ಖ್ಯಾತ ಕವಿಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಎಲ್. ಹನುಮಂತಯ್ಯ ಅವರುಗಳ ಮಾರ್ಗದರ್ಶನಕ್ಕೆ ಕೃತಜ್ಞತೆ. ಹಲವು ರೀತಿಯಲ್ಲಿ ಸಹಕರಿಸಿದ ವಿಧಾನಮಂಡಲದ ಪ್ರಧಾನ ಕಾರ್ಯದರ್ಶಿ ಶ್ರೀ ಎಚ್.ಎಂ. ಭಾರತೇಶ್, ವಿಧಾನಸಭೆಯ ಕಾರ್ಯದರ್ಶಿ–2 ಶ್ರೀ ಟಿ.ಎನ್. ಧ್ರುವಕುಮಾರ್, ಉಪ ಕಾರ್ಯದರ್ಶಿ ಶ್ರೀ ಎಂ. ಗುರುರಾಜ ಅವರಿಗೆ ಧನ್ಯವಾದಗಳು.

ಗ್ರಂಥಾಲಯ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಅನಸೂಯ ಎನ್. ದೇವಗಿರಿ, ಶಾಖಾಧಿಕಾರಿ ಮೋಹನ್ ಎಂ ಹಾಗೂ ವಿ. ಮಂಜುನಾಥ್, ಎಂ.ಎನ್. ಮಹಾದೇವಯ್ಯ, ಗ್ರಂಥಾಲಯ ಸಹಾಯಕ ನಂಜುಂಡಸ್ವಾಮಿ, ಅಶೋಕ ನರಗುಂದ, ಲಕ್ಷ್ಮಣ್ ಅವರಿಗೆ, ಗ್ರಂಥಾಯದಲ್ಲಿ ಭಾಷಣ ಹುಡುಕುವಲ್ಲಿ ನನ್ನೊಂದಿಗಿದ್ದು, ಸಹಕರಿಸಿದ ಹೇಮಕಲಾಗೆ, ಈ ಮಾಲಿಕೆಯ ಸಂಪಾದಕರಾಗಿದ್ದ ಪ್ರೀತಿಯ ಸ್ನೇಹಿತರು, ಸಂಶೋಧಕರು ಆದ ಡಾ. ಮಲ್ಲಿಕಾರ್ಜುನ ಕೂಡ್ಲಿಗೆರೆ ಅವರು ಕೃತಿ ರಚನೆಯಲ್ಲಿ ನಿರಂತರ ಮಾರ್ಗದರ್ಶನ ಮಾಡಿ ಬೇಗ ಕೃತಿ ಹೊರತನ್ನಿ ಎಂದು ಒತ್ತಾಯಿಸಿದ್ದಾರೆ – ಅವರಿಗೆ ಹಾಗೂ ಲೇಖಕ ಮಿತ್ರ, ಸಂಪಾದಕ ಮಹಾಬಲೇಶ್ವರ ಕಾಟ್ರಹಳ್ಳಿ ಅವರಿಗೆ ಧನ್ಯವಾದಗಳು.

ಎಚ್. ಸಿದ್ದವೀರಪ್ಪನವರ ಬಗ್ಗೆ ಮಾಹಿತಿ ಸಂಗ್ರಹಕ್ಕೆ ಹೊರಟಾಗ ಮೊದಲು ಪ್ರೋತ್ಸಾಹಿಸಿ, ಬೆನ್ನುತಟ್ಟಿ ತಮ್ಮ ದ್ವಿಚಕ್ರ ವಾಹನದಲ್ಲಿ ದಾವಣಗೆರೆ ಗಲ್ಲಿಗಲ್ಲಿಗಳಲ್ಲಿ ಓಡಾಡಿಸಿ, ರುಚಿಯಾದ ಬೆಣ್ಣೆದೋಸೆ, ಮಂಡಕ್ಕಿ – ಮೆಣಸಿನಕಾಯಿ ತಿನ್ನಿಸಿ ಹಿರಿಯರ ಮುಂದೆ ಕೂಡ್ರಿಸಿ ವಿಷಯ ದಾಖಲಿಸಿದ ಹಿರಿಯಣ್ಣನಂತಿರುವ ರಂಗನಟ, ವೃತ್ತಿಯಲ್ಲಿ ವೈದ್ಯ ಡಾ. ಕೆ.ಎಚ್. ಪಂಚಾಕ್ಷರಪ್ಪ ಅವರಿಗೆ, ರಾಜ್ಯ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿವೃತ್ತ ಅಧಿಕಾರಿ ಎ.ಸಿ. ಚಂದ್ರಪ್ಪ ಅಪರೂಪದ ಮಾಹಿತಿ ಒದಗಿಸಿದ್ದಾರೆ – ಅವರಿಗೆ, ಪತ್ರಕರ್ತ ಬಿ.ಎನ್. ಮಲ್ಲೇಶ್, ಸಹೋದರರಾದ ಜಿ. ವಾಮದೇವಪ್ಪ, ಜಿ. ಮುರುಗೇಂದ್ರಪ್ಪ, ಗೌಡ್ರ ರುದ್ರಪ್ಪ, ಆರ್.ಜಿ. ಮಹಾದೇವಪ್ಪ, ಆರ್.ಜಿ. ದೇವರಾಜ್, ಸಂಗಾತಿ ಡಾ. ಎಚ್.ಎಲ್. ಪುಷ್ಪ, ಕವಿ ಗೆಳೆಯ ಎಲ್.ಎನ್. ಮುಕುಂದರಾಜ್, ಲೇಖಕರು, ಚಿಂತಕರು, ನನ್ನ ಆತ್ಮೀಯರು ಆದ ರ.ವಿ. ಜಹಗೀರ್‌ದಾರ, ಪತ್ರಕರ್ತ ಸಂಜಯದೊರೆ, ಜಾನಪದತಜ್ಞ ಮುದೇನೂರು ಸಂಗಣ್ಣ ಅವರು ಬರೆದ 'ಕೊಂಡಜ್ಜಿ ಬಸಪ್ಪ' ಕೃತಿ ನೀಡಿ ಒಂದಷ್ಟು ಅಪರೂಪದ ಮಾಹಿತಿಗೆ ಕಾರಣರಾದ ರಾಜ್ಯ ಸ್ಕೌಟ್ಸ್‌ನ ಕಮೀಷನರ್ ಕೊಂಡಜ್ಜಿ ಷಣ್ಮುಖಪ್ಪ, ತುಮಕೂರು ಜಿಲ್ಲಾಧಿಕಾರಿ ಆತ್ಮೀಯರಾದ ಡಾ. ಸಿ. ಸೋಮಶೇಖರ್, ಏಕೀಕರಣದ ಮಾಹಿತಿಗೆ ಕಾರಣರಾದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಹಾಗೂ ಡಾ. ಎಚ್.ಎಸ್. ಗೋಪಾಲರಾವ್, ಇವರನ್ನು ಸದಾ ಸ್ಮರಿಸುವೆ.

ಗಣ್ಯರು ಕಂಡಂತೆ ವಿಭಾಗಕ್ಕೆ ನೆನಪುಗಳನ್ನು ಹಂಚಿ ಮಾಹಿತಿ ನೀಡಿದ ಸಿರಿಗೆರೆ ತರಳಬಾಳು ಶಾಖಾಮಠ ಸಾಣೆಹಳ್ಳಿಯ 'ಶಿವಸಂಚಾರ'ದ ರುವಾರಿ

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳಿಗೆ ವಿಶೇಷ ಕೃತಜ್ಞತೆಗಳು. ಸಿದ್ದವೀರಪ್ಪನವರ ಪುತ್ರ ಅಮೇರಿಕವಾಸಿ ಡಾ. ಎಚ್.ಎಸ್. ಹಾಲಸ್ವಾಮಿ, ಶಾಸಕರು ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ರುವಾರಿಗಳು ಆದ ಶಾಮನೂರು ಶಿವಶಂಕರಪ್ಪ, ರಾಜ್ಯಸಭಾ ಮಾಜಿ ಸದಸ್ಯ ಕೆ.ಆರ್. ಜಯದೇವಪ್ಪ, ಮಾಜಿ ಸಚಿವ ಎಚ್. ಶಿವಪ್ಪ, ಜಾನಪದ ಅಕಾಡೆಮಿ ಅಧ್ಯಕ್ಷರು, ಹಿತೈಷಿಗಳೂ ಆದ ಗೊ.ರು. ಚನ್ನಬಸಪ್ಪ, ಮುದೇಗೌಡ್ರ ರೇವಣಸಿದ್ದಪ್ಪ, ಪತ್ರದ ಮೂಲಕ ಮಾಹಿತಿ ನೀಡಿದ ಹಿರಿಯ ವಕೀಲ ಆರ್.ಜಿ. ಸಿದ್ದಪ್ಪ 'ದಾವಣಗೆರೆ ಇದು ನಮ್ಮ ಜಿಲ್ಲೆ' ಕೃತಿಯ ಲೇಖಕಿ ಟಿ. ಗಿರಿಜ, ಹನಗವಾಡಿ ವಿರೂಪಾಕ್ಷಪ್ಪ, ದೊಡ್ಡಬಾತಿ ಉಮೇಶ್, ಮುದ್ರಣಾಲಯದ ಸಿಬ್ಬಂದಿ ವರ್ಗ – ಇವರೆಲ್ಲರನ್ನು ಪ್ರೀತಿಯಿಂದ ನೆನೆಯುವೆ.

ಬೆಂಗಳೂರು. — ಆರ್.ಜಿ. ಹಳ್ಳಿ ನಾಗರಾಜ

# ಪರಿವಿಡಿ

## ಭಾಗ – 1

ಪೀಠಿಕೆ – ಪ್ರಸ್ತಾವನೆ
ಹಾಗೂ ವ್ಯಕ್ತಿ : ವ್ಯಕ್ತಿತ್ವ 1 ರಿಂದ 55

1. ಹರಿಹರ ಹಾಗೂ ಭೌಗೋಳಿಕ ವಾತಾವರಣ
2. ಹುಟ್ಟು ಬಾಲ್ಯ, ವಿದ್ಯಾಭ್ಯಾಸ
3. ಪ್ರಾಥಮಿಕ – ಪ್ರೌಢ ಶಿಕ್ಷಣ
4. ಮೈಸೂರು ಮಹಾರಾಜ ಕಾಲೇಜು
5. 'ಲಾ' ಓದಿನ ಕನಸು
6. 'ಲಾ' ಓದಲು ಮದುವೆ!
7. ಪೂನಾ ಫರ್ಗ್ಯೂಷನ್ ಕಾಲೇಜಿನಲ್ಲಿ 'ಲಾ'
8. ಡಾ. ಬಿ.ಆರ್. ಅಂಬೇಡ್ಕರ್ ಪ್ರಭಾವ
9. ದಾವಣಗೆರೆಯಲ್ಲಿ ವಕೀಲ ವೃತ್ತಿ
10. ರೈತರ ಸಮಸ್ಯೆಗಳತ್ತ ಗಮನ
11. ಚಿತ್ರದುರ್ಗ ಜಿಲ್ಲಾ ಬೋರ್ಡ್ ಚುನಾವಣೆ ಸೋಲು
12. ರೈತರ ಪರಿಕರಗಳತ್ತ ಗಮನ
13. ಮತ್ತೆ ಜಿಲ್ಲಾ ಬೋರ್ಡ್ ಚುನಾವಣೆಯತ್ತ....
14. ಕೊಡಗನೂರು ಹೈಸ್ಕೂಲ್ ಸ್ಥಾಪನೆ
15. ರಾಜ್ಯ ರಾಜಕಾರಣಕ್ಕೆ
16. ಕೆಂಗಲ್ ಸಂಪುಟದಲ್ಲಿ ಗೃಹಖಾತೆ
17. ಸೋಲಿನ ನಂತರ ನೇಗಿಲು ಹಿಡಿದು ಉಳುಮೆ!
18. ಹತ್ತು ವರ್ಷ ಕಾಂಗ್ರೆಸ್ ಟಿಕೆಟ್ ಆಟ?
19. ಜನತಾ ಪಕ್ಷದ ಉದಯ
20. ಒಲಿದ ವಿರೋಧ ಪಕ್ಷದ ಸ್ಥಾನ

WD-H-035-2

21. ವೀರೇಂದ್ರ ಪಾಟೀಲರ ಸರ್ಕಾರ ಪತನ
22. 'ಹರಿಹರ' : ಹುಲಿ – ಸಿಂಹಗಳ ಕಾದಾಟ!
23. ತಪ್ಪಿದ ಮುಖ್ಯಮಂತ್ರಿ ಸ್ಥಾನ
24. ಜನೋಪಯೋಗಿ ಕೆಲಸಗಳ ಮೂಲಕ ಸ್ಮರಣೆ
25. ದೇವರಬೆಳಕೆರೆ ಪಿಕಪ್ ಡ್ಯಾಮ್
26. ಸಕ್ಕರೆ ಕಾರ್ಖಾನೆ ಕನಸು
27. ಇಂಗ್ಲಿಷ್ ವ್ಯಾಮೋಹ
28. ಸಿದ್ದವೀರಪ್ಪನವರ ಹೆಸರು ಉಳಿಸುವಲ್ಲಿ....

## ಭಾಗ – 2

## ಸದನದಲ್ಲಿ ಎಚ್. ಸಿದ್ದವೀರಪ್ಪ

1. ಆಹಾರ ಸಮಸ್ಯೆ ಹಾಗೂ ಬೆಲೆಯ ಸುತ್ತಾ 58
2. ಜಾಹೀರಾತು ಉದ್ದೇಶ 61
3. ಕೈಗಾರಿಕೆಗಳ ಸ್ಥಾಪನೆ ಹಾಗೂ ವಿಕೇಂದ್ರೀಕರಣ ಚರ್ಚೆ 64
4. ಕೈಮಗ್ಗ ನೇಯ್ಗೆಯವರ ಆರ್ಥಿಕ ಸ್ಥಿತಿ 72
5. ರಿವಾಲ್ವಾರ್ ಪ್ರಕರಣದ ಚರ್ಚೆ 76
6. ಕವಿ ಡಿ.ವಿ.ಜಿ. ಅವರ ತತ್ವ ಹಾಗೂ ಸುಖೀರಾಜ್ಯ ಕಲ್ಪನೆ 79
7. ಸೊಂಟ ಮುರಿದ ಕೈಗಾರಿಕೆಗಳಿಗೆ ಹಣ 85
8. ಎಂ. ಎಸ್. ಕೆ. ಮಿಲ್ ಕರ್ಮಕಾಂಡ 88
9. ಸವರ್ಣೀಯ ಹಿಂದುಗಳ ಬಗ್ಗೆ ಡಾ: ಅಂಬೇಡ್ಕರ್ 94
10. ಹರಿಜನರಿಗೆ ಶೇ.18 ಹುದ್ದೆ ಮೀಸಲು 98
11. ಸಹಕಾರ ಸಚಿವರ ವಿರುದ್ಧ ಕ್ರಿಯಾಲೋಪ 101
12. ಆಸ್ಪತ್ರೆಗಳ ಪರಿಸ್ಥಿತಿ ಮೇಲಿನ ಚರ್ಚೆ 102
13. ನಿಷ್ಪಕ್ಷಪಾತ ಚುನಾವಣೆ ಕುರಿತು 106
14. ಗೋಹತ್ಯೆ ಹಾಗೂ ಗೋಮಾಂಸ ಕುರಿತು 114
15. ಅಮ್ಮಸಂದ್ರ ಸಿಮೆಂಟ್ ಕಾರಖಾನೆ 118
16. ಗೃಹಖಾತೆ : ಪೊಲೀಸರ ಸ್ಥಿತಿಗತಿ 123
ಅ) 'ಆರಕ್ಷಕ' ಬದಲು 'ಪೊಲೀಸ್' ಇರಲಿ
ಆ) ರಾಜಕಾರಣಿಗಳಿಂದ ಪೊಲೀಸರ ದುರ್ಬಳಕೆ
ಇ) ನ್ಯಾಯಾಂಗ ತನಿಖೆಗೆ ರೆವಿನ್ಯೂ ಅಧಿಕಾರಿಗಳು ಬೇಡ

ಈ) ಪೊಲೀಸ್ ಪಟೇಲ್ ಹುದ್ದೆ ಬೇಡ
ಉ) ಹೋಂ ಗಾರ್ಡ್ಸ್ ಕುರಿತು
17. ಬಸವೇಶ್ವರ ಜಯಂತಿ ಆಚರಣೆ ಕುರಿತು 138
* ಮಹಾಜನ ವರದಿ ಮೇಲಿನ ನಿರ್ಣಯಕ ಚರ್ಚೆ 141
18. ಗ್ರಾಮಪಂಚಾಯ್ತಿ ಚುನಾವಣೆ ಪ್ರಜಾಪ್ರಭುತ್ವ.... 158
ಅ) ರೆಗ್ಯುಲೇಟೆಡ್ ಮಾರ್ಕೆಟ್ ಸದಸ್ಯ ನಾಮಕರಣ
ಆ) ಸಹಕಾರ ಸಂಘಗಳ ಪರಿಸ್ಥಿತಿ
ಇ) ಕಮ್ಯುನಿಟಿ ಡೆವಲಪ್‌ಮೆಂಟ್
* ಸಭಾಪತಿ ಬಾಳಿಗಾ ನಿಧನಕ್ಕೆ ಸಂತಾಪ 165
19. ವ್ಯವಸಾಯ ಇಲಾಖೆ ಚರ್ಚೆ 167
* ಪ್ರತಿಪಕ್ಷದ ಸಹಕಾರ ಕುರಿತು ಮಾತು 172
* ಉಪ ಮಂತ್ರಿಗಳ ಕಾರುಬಾರು ಸುತ್ತ 174
* ಕಂದಾಯ ಮಸೂದೆ ಕುರಿತು ಚರ್ಚೆ 178
* ರೈತನ ಮೇಲೆ ಒತ್ತಡ ಬೇಡ 184
* ವಿರೋಧ ಪಕ್ಷದ ನಾಯಕರಾಗಿ 188
* ಗೊಬ್ಬರದ ಗೊಂದಲ 190
* ಪ್ರಥಮ ಮಹಿಳಾ ಸ್ಪೀಕರ್‌ಗೆ ಅಭಿನಂದನೆ 196
* ಮತ್ತಷ್ಟು ಪಬ್ಲಿಕ್ ಸರ್ವೀಸ್ ಕಮೀಷನ್ ಚರ್ಚೆ 199
* ಮೆಡಿಕಲ್ ಸ್ನಾತಕೋತ್ತರ ಕುರಿತು 203
* ಆಡಳಿತರೂಢ ಪಕ್ಷದ ಬಗ್ಗೆ 210
* ಬಜೆಟ್ ಮೇಲಿನ ಚರ್ಚೆ 216
* ಖಾಸಗಿ ಮೆಡಿಕಲ್ ಕಾಲೇಜು ಸೀಟುಗಳಿಗೆ 231
* ತುಂಗಭದ್ರಾ ಹೊಳೆನೀರು ಕಲುಷಿತ 247
* ಪ್ರತಿಪಕ್ಷದ ನಾಯಕರ ಸುತ್ತ 250
* ಬಜೆಟ್ ಮೇಲಿನ ಚರ್ಚೆ 255
* ಖೋತಾ ಸೂಚನೆ ಮೇಲಿನ ಚರ್ಚೆ 271
* ಕೃಷ್ಣರಾಜೇಂದ್ರ ಹಿಲ್ ಸ್ಟೇಷನ್ ಕುರಿತು 274
* ಪೊಲೀಸ್ ಇಲಾಖೆಯಲ್ಲಿನ ಖರ್ಚು ಇತ್ಯಾದಿ 276
* ಪೊಲೀಸ್ ಗ್ರೇಡ್ ಚರ್ಚೆ 280
* ಲಿಫ್ಟ್ ಇರಿಗೇಷನ್ ಹಾಗೂ ವಿದ್ಯುತ್ ಬಗ್ಗೆ 282
* ಮೈಸೂರು ಪೊಲೀಸ್ ಬಿಲ್ 288

* ಪೊಲೀಸ್ ತಿದ್ದುಪಡಿ ಮಸೂದೆ ಬಗ್ಗೆ 293
* ಅನುದಾನದ ಮೇಲಿನ ಚರ್ಚೆ 296
* ನೀರಾವರಿ ಕಾಮಗಾರಿ ಕುರಿತು 301
* ಜಾನುವಾರು ತಳಿಯ ಬಗ್ಗೆ ಚರ್ಚೆ 306
* ರೆಗ್ಯೂಲೇಟೆಡ್ ಮಾರ್ಕೆಟ್ ಸ್ಥಾಪನೆ ಕುರಿತು 308
* ಪೊಲೀಸ್ ತಿದ್ದುಪಡಿ ಪ್ರಸ್ತಾಪ 311
* ಮೈಸೂರು ಪೊಲೀಸ್ ತಿದ್ದುಪಡಿ ಮುಂದುವರಿಕೆ 313
* ಕೈಗಾರಿಕೆಗಳಿಗೆ ಸರ್ಕಾರದ ಸಾಲ 321

## ಭಾಗ – 3

## ಗಣ್ಯರು ಕಂಡಂತೆ ಎಚ್. ಸಿದ್ದವೀರಪ್ಪ

1. ಅಪರೂಪದ ರಾಜಕೀಯ ಮುತ್ಸದ್ಧಿ
– ಶ್ರೀ ಪಂಡಿತಾರಾಧ್ಯ ಸ್ವಾಮೀಜಿ 326
2. ಸಾಮಾಜಿಕ ಕಳಕಳಿಯ ಸಚಿವರು
– ಗೊ.ರು. ಚನ್ನಬಸಪ್ಪ 331
3. ನನ್ನ ತಂದೆ ನಿಷ್ಠೂರವಾದಿ
– ಡಾ. ಎಚ್.ಎಸ್. ಹಾಲಸ್ವಾಮಿ 336
4. ಉತ್ತಮ ಸಂಸದೀಯಪಟು
– ಎಚ್. ಶಿವಪ್ಪ 341
5. ರೈತಪರ ಕಾಳಜಿ ಮೊದಲ ಆದ್ಯತೆ
– ಆರ್.ಜಿ. ಸಿದ್ದಪ್ಪ 345
6. ಪಾಪದ ಹಣ ಬೇಡ ಅಂದ್ರು
– ಮುದೇಗೌಡ್ರು ರೇವಣಸಿದ್ದಪ್ಪ 347
7. ದಕ್ಷತೆಗೆ ಹೆಸರಾದ ಶ್ರೀ ಎಚ್. ಸಿದ್ದವೀರಪ್ಪ
– ಕೆ.ಆರ್. ಜಯದೇವಪ್ಪ 350

## ಭಾಗ – 4

## ಎಚ್. ಸಿದ್ದವೀರಪ್ಪ ಅವರ ಬದುಕಿನ ವಿವಿಧ ಚಿತ್ರಗಳು

# ಭಾಗ – 1

# ಪೀಠಿಕೆ – ಪ್ರಸ್ತಾವನೆ ಹಾಗೂ ವ್ಯಕ್ತಿ : ವ್ಯಕ್ತಿತ್ವ

ಆವ ಜಾತಿಯಲ್ಲಾದರೂ ಆಗಲಿ, ಪುರಾತನ ಚರಿತ್ರೆಯಲ್ಲಿ ನಡೆದ
ಗುರು – ಲಿಂಗ – ಜಂಗಮಕ್ಕೆ ಅರ್ಥ ಪ್ರಾಣಾಭಿಮಾನವಂ ಕೊಟ್ಟು
ಅಹಂಕಾರವಳಿದಿಪ್ಪಂಥಾ ಪುರಾತನ ಮಹಾತ್ಮರ ಬಾಯತುಂಬುಲವ
ಮೆಲುವೆ ಬಿಳುಡುಗೆಯ ಹೊದೆವೆ, ಆತನ ಪಾದ
ರಕ್ಷೆಗಳೆರಡನೂ ಮಂಡೆಯಮೇಲೆ ಹೊತ್ತುಕೊಂಡು ಬದುಕು
ವೆನಯ್ಯಾ ಆ ಗಣಂಗಳ ದಾಸನ ದಾಸ ನಾನು ಜನ್ಮಜನ್ಮದಲ್ಲಿ
ಆಗುವೆ ಕಾಣಾ ಗುಹೇಶ್ವರಾ ॥

– ಅಲ್ಲಮಪ್ರಭು

# ಎಚ್. ಸಿದ್ದವೀರಪ್ಪ

## ಪೀಠಿಕೆ ಹಾಗೂ ಪ್ರಸ್ತಾವನೆ

"ಮಾನವ ನಿರ್ಮಿತವಾದ ಯಾವ ಸಂಸ್ಥೆಯೂ ಆತಂಕರಹಿತವಾಗಿಲ್ಲ. ಆ ಸಂಸ್ಥೆಯ ವ್ಯಾಪ್ತಿ ಹೆಚ್ಚಾದಂತೆ, ಅದರ ದುರುಪಯೋಗವಾಗುವ ಸಂಭವವೂ ಹೆಚ್ಚಾಗುತ್ತದೆ. ಪ್ರಜಾರಾಜ್ಯವು ಒಂದು ದೊಡ್ಡ ಸಂಸ್ಥೆಯಾದುದರಿಂದ ಅದರ ದುರುಪಯೋಗವಾಗುವ ಸಂಭವವೂ ಹೆಚ್ಚು. ಹೀಗೆಂದು ಪ್ರಜಾರಾಜ್ಯವೇ ಬೇಡವೆನ್ನುವುದು ಸರಿಯಲ್ಲ. ಅದರ ದುರುಪಯೋಗವು ತೀರ ಕಡಿಮೆಯಾಗುವಂತೆ ನಾವು ನೋಡಿಕೊಳ್ಳಬೇಕು..... ಪೂರ್ವಗ್ರಹಿಕೆ, ಅಜ್ಞಾನ, ಮೂಢನಂಬಿಕೆಗಳಿಂದ ಕೂಡಿದ ಪ್ರಜಾರಾಜ್ಯದ ಅವ್ಯವಸ್ಥೆ ನೆಲೆಸುವುದು; ಹೀಗಾಗಿ ಅದು ತನ್ನ ಅಳಿಗಾಲವನ್ನು ತಾನೇ ತಂದುಕೊಳ್ಳುವುದು".

– *ಮಹಾತ್ಮ ಗಾಂಧೀಜಿ*

## ಪೀಠಿಕೆ ಹಾಗೂ ಪ್ರಸ್ತಾವನೆ:

ನಮ್ಮ ಭಾರತ 'ಜಾತ್ಯತೀತ' ರಾಷ್ಟ್ರ. ಇಲ್ಲಿ ಎಲ್ಲ ಧರ್ಮ, ಜಾತಿ, ಮತ, ಪಂಥ, ಜನಾಂಗ, ಪಕ್ಷ ಪಂಗಡಗಳಿಗೂ ಪ್ರಾಶಸ್ತ್ಯ ಸಿಕ್ಕಿದೆ. ಸಂವಿಧಾನ ರೂಪಿಸಿದ ಸಮಾನ ಹಕ್ಕುಗಳು ಎಲ್ಲರಿಗೂ ದಕ್ಕಿವೆ. ರಾಷ್ಟ್ರಕ್ಕೂ ವ್ಯಕ್ತಿಗಿದ್ದಂತೆ ದೇಹ – ಮನಸ್ಸು – ಆತ್ಮಗಳಿವೆ. ಅವೆಲ್ಲವುಗಳ ಪೂರ್ಣ ವಿಕಾಸವೇ ರಾಷ್ಟ್ರೀಯತ್ವದ ಧ್ಯೇಯ.

ಕರ್ನಾಟಕ ಸಂಸ್ಕೃತಿ ಭಾರತೀಯ ಸಂಸ್ಕೃತಿಯನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಬೆಳೆಸಿ ಪೋಷಿಸುತ್ತಾ ಬಂದಿದೆ. ಕರ್ನಾಟಕದ ವಿಶಿಷ್ಟ ಸಂಸ್ಕೃತಿ, ಧರ್ಮ, ಇತಿಹಾಸ, ಭಾಷೆ, ಕಲೆ, ಆಚಾರ, ವಿಚಾರ, ಪರಂಪರೆ ಮುಂತಾದವುಗಳಿಗೆ ವಿಶೇಷ ಸಂಸ್ಕಾರಗಳನ್ನು ಕೊಟ್ಟು ತನ್ನದೇ ಆದ ಒಂದು ಬಣ್ಣದಿಂದ ಮೆರಗು ಕೊಟ್ಟಿದೆ. ಈ ವಿಶಿಷ್ಟ ಸಂಸ್ಕೃತಿಯೇ 'ಕರ್ನಾಟಕ ಸಂಸ್ಕೃತಿ'.

"ಕರ್ನಾಟಕ ಸಂಸ್ಕೃತಿಯಲ್ಲಿ ಭಾರತ ಸಂಸ್ಕೃತಿ ಅಂತರ್ಯಾಮಿಯಾಗಿದೆ. ಕರ್ನಾಟಕವೆಂದರೆ ಕೇವಲ ದೇಶಾಭಿಮಾನವಲ್ಲ. ಕೇವಲ ಭಾಷಾಭಿಮಾನವಲ್ಲ. ಕೇವಲ ಇತಿಹಾಸಾಭಿಮಾನವಲ್ಲ. ಇವೆಲ್ಲವುಗಳನ್ನು ಮೀರಿದ, ಇವೆಲ್ಲವುಗಳನ್ನು ಒಳಗೊಂಡ ಪರಿಶುದ್ಧ ಭಾವನೆ....

'ಕರ್ನಾಟಕ'ವೆಂಬುದೊಂದು ಶಬ್ದದಲ್ಲಿ ಎಂಥ ಮಾಂತ್ರಿಕ ಶಕ್ತಿ ತುಂಬಿರುತ್ತದೆಂಬುದು ಅದೊಂದೇ ಶಬ್ದವು ಇಡೀ ಕನ್ನಡ ನಾಡನ್ನು ಹೊಡೆದೆಬ್ಬಿಸಿದೆಂಬುದರಿಂದ ಗೊತ್ತಾಗುತ್ತದೆ...."

ಈ ಮಾತುಗಳು ಕನ್ನಡ ಕುಲಪುರೋಹಿತ, ಕವಿ, ಕನ್ನಡ ಕಟ್ಟಾಳು ಎನಿಸಿದ್ದ ಆಲೂರು ವೆಂಕಟರಾಯ ಅವರದ್ದು. ಭಾಷೆ, ಸಂಸ್ಕೃತಿ, ನಾಡ ಹಿರಿಮೆಗರಿಮೆ ಬಗ್ಗೆ ಹೆಮ್ಮೆಯಿಂದ ಹೇಳಿದ ಕವಿ ದಾರ್ಶನಿಕರ ಚಿಂತನೆಗಳು ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುತ್ತವೆ.

ಜತೆಗೆ ನಾಡನ್ನು ಕಟ್ಟಿ ಬೆಳೆಸಿದ ರಾಜ ಮಹಾರಾಜರುಗಳ ನಾಡಪ್ರೇಮ, ರಾಜ್ಯ ವಿಸ್ತರಣೆಯಲ್ಲಿ ಅವರುಗಳು ವಹಿಸಿದ ಪಾತ್ರಗಳ ಬಗೆಗೆ ಶಾಸನಗಳು, ಓಲೆಗರಿಗಳು ಇತ್ಯಾದಿ ಸಿಕ್ಕುತ್ತಿವೆ. ರಾಜಾಶ್ರಯದಲ್ಲಿದ್ದ ಕವಿಗಳು ಸಹಜವಾಗಿ ರಾಜನನ್ನು ಹೊಗಳಿದ ಕಾವ್ಯ ಸಿಕ್ಕರೆ; ರಾಜನ ಸನಿಹವಿದ್ದೂ ಅವನ ಆಳ್ವಿಕೆಯನ್ನು ಟೀಕಿಸಿದ್ದ ಕವಿಗಳೂ ಕನ್ನಡ ಸಾಹಿತ್ಯ ಇತಿಹಾದಲ್ಲಿ ಸಿಕ್ಕುತ್ತವೆ.

ಅನೇಕ ರಾಜಮಹಾರಾಜರುಗಳು ಈ ನಾಡನ್ನು ಆಳಿ ರಾಜ್ಯಾಡಳಿತಕ್ರಮದಲ್ಲಿ ಒಂದು ಒಳ್ಳೆಯ ಪರಂಪರೆ ಬೆಳೆಸಿ ಭಾರತದ ಇತರೆ ರಾಜ್ಯಗಳಿಗೆ ಆದರ್ಶಪ್ರಾಯರಾಗಿದ್ದಾರೆ.

ಕ್ರಿ.ಶ. 450ರ ಕಾಲದ ಹಲ್ಮಿಡಿ ಶಾಸನದಿಂದ ಕನ್ನಡ ಲಿಪಿ ಅರ್ಥಾತ್ ಬರಹದ ಬಗೆಗಿನ ಪ್ರಾಚೀನತೆಯ ಪುರಾವೆ ಸಿಕ್ಕುತ್ತದೆ. ಇಲ್ಲಿಗೆ ಒಂದೂವರೆ ಸಾವಿರಕ್ಕೂ ಹೆಚ್ಚಿನ ವರ್ಷಗಳ ದಾಖಲೆಗಳ ಇತಿಹಾಸದಿಂದ ಕನ್ನಡದ ಪರಂಪರೆಯೂ ತೆರೆದುಕೊಳ್ಳುತ್ತದೆ. ಕನ್ನಡನಾಡು ಇತಿಹಾಸ ಪ್ರಸಿದ್ಧವಾದ ಪರಂಪರೆ, ನೆಲ, ಜಲ – ಎಲ್ಲವನ್ನೂ ಹೊಂದಿತ್ತು. ಗಂಗರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಮತ್ತು ವಿಜಯನಗರ ಅರಸರು ಇಲ್ಲಿ ಸಾಮ್ರಾಜ್ಯಗಳನ್ನು ಕಟ್ಟಿ ಆಳಿದರು. ವಿಜಯನಗರ ಪತನಾನಂತರ ಕನ್ನಡನಾಡು ಹರಿದು ಹಂಚಿ ಹೋಯಿತು. ಹೈದರಾಲಿ, ಟಿಪ್ಪು ಸುಲ್ತಾನರ ಕಾಲದಲ್ಲಿ ಅದು ತನ್ನ ಹಿಂದಿನ ಹಿರಿಮೆಯನ್ನು ಪುನರುತ್ಥಾನಗೊಳಿಸಲು ನಡೆದ ಹಾದಿ ಅಲ್ಪ ಕಾಲದ್ದಾಗಿತ್ತು. ಕ್ರಿ.ಶ. 1799ರಲ್ಲಿ ಮೈಸೂರು ರಾಜ್ಯ ಬ್ರಿಟಿಷರ ವಶವಾದ ನಂತರ ಕನ್ನಡ ಭಾಷಿಕರ ಪ್ರದೇಶಗಳು ಮುಂಬಯಿ ಪ್ರಾಂತ, ಹೈದರಾಬಾದು ಸಂಸ್ಥಾನ ಮತ್ತು ಮದ್ರಾಸು ಪ್ರಾಂತಗಳಲ್ಲಿ ಹಂಚಿ ಹೋಗಿದ್ದಿತು. ಕನ್ನಡ ನಾಡಿನ ಅರ್ಧದಷ್ಟು ಭಾಗ ಮಾತ್ರ ಮೈಸೂರು ಸಂಸ್ಥಾನದ ಆಳ್ವಿಕೆಯಲ್ಲಿತ್ತು.

ರಾಜಕಾರಣಕ್ಕೂ, ಸಾಹಿತ್ಯಕ್ಕೂ ಅವಿನಾಭಾವ ಸಂಬಂಧವಿದೆ. ಹಾಗೆ ರಾಜಕೀಯ ಚರಿತ್ರೆಗೂ ಸಾವಿರಾರು ವರ್ಷಗಳ ಇತಿಹಾಸವಿದೆ.

**ಕರ್ನಾಟಕ ಎಂಬುದೇನು**
**ಹೆಸರೆ ಬರಿಯ ಮಣ್ಣಿಗೆ?**
**ಮಂತ್ರಕಣಾ! ಶಕ್ತಿ ಕಣಾ!**
**ತಾಯಿಕಣಾ! ದೇವಿಕಣಾ!**
**ಬೆಂಕಿ ಕಣಾ! ಸಿಡಿಲು ಕಣಾ! ....**

ಕನ್ನಡದ ಶಕ್ತಿ ಸಂಚಯದ ಬಗ್ಗೆ ರಾಷ್ಟ್ರಕವಿ ಕುವೆಂಪು ಹೀಗೆ ಹೇಳುತ್ತಿದ್ದರೆ ರೋಮಾಂಚನವಾಗುತ್ತದೆ. ಅವರು ಪರಿಭಾವಿಸುವ, ಆರಾಧಿಸುವ ಕರ್ನಾಟಕ ಯಾವಾಗಲೂ 'ಸಂಸ್ಕೃತಿ ಕರ್ನಾಟಕ'ವೇ ಆಗಿದೆ.

1949 ನವೆಂಬರ್‌ನಲ್ಲಿ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ "ಏಕೀಕರಣಕ್ಕೆ ಇದು ಸಕಾಲವಲ್ಲ" ಎಂಬ ನಿರ್ಣಯ ಅಂಗಿಕೃತವಾದಾಗ 'ಕರ್ನಾಟಕ ಮಂತ್ರದೀಕ್ಷೆ' ಎಂಬ ಕವಿತೆಯಲ್ಲಿ ಕವಿ ಕುವೆಂಪು –

**ದೀಕ್ಷೆಯ ತೊಡು ಇಂದೇ;**
**ಕಂಕಣ ಕಟ್ಟಿಂದೇ!**
**ಕನ್ನಡ ನಾಡೊಂದೇ;**
**ಇನ್ನೆಂದೂ ತಾನೊಂದೇ!**

ಎಂದು ಬರೆದು ಅಂದಿನ ಸರ್ಕಾರವನ್ನು, ಜನ ಪ್ರತಿನಿಧಿಗಳನ್ನು ಉದ್ದೇಶಿಸಿ ಹೇಳಿದ್ದು ಮುಂದಾದರೂ ಸಮಗ್ರ ಕರ್ನಾಟಕವಾಗಿ ಒಗ್ಗಟ್ಟಿನಿಂದ ಈ ರಾಜ್ಯ ಸಮೃದ್ಧವಾಗಿರಲಿ ಎಂಬುದೆ ಆಗಿತ್ತು. ಕವಿ ಕುವೆಂಪು ಆಶಯ ಇದಾದರೆ, ಅವರ ಗುರುಗಳು, ಮಾರ್ಗದರ್ಶಕರೂ, ನವೋದಯ ಸಾಹಿತ್ಯದ ಅಧ್ವರ್ಯರೂ ಆಗಿದ್ದ ಬಿ.ಎಂ. ಶ್ರೀ 1940ರ ಸುಮಾರಿಗೆ ಕನ್ನಡಿಗರಲ್ಲಿ ಸಾಂಸ್ಕೃತಿಕ ನಿಷ್ಠೆ, ರಾಜಕೀಯ ನಿಷ್ಠೆ ಪರಿಣಮಿಸಬೇಕು ಎಂದು ಆಶಿಸಿದ್ದರು....

"ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಕರ್ನಾಟಕ ಏಕೀಕರಣಕ್ಕೆ ಈಗ ಕಾಲ ಪಕ್ವವಾಗುತ್ತಿದೆ. ಸಾಹಿತ್ಯಿಕ ಹಾಗೂ ರಾಜಕೀಯ ಚಳವಳಿಗಳು ಪರಸ್ಪರವಾಗಿ ಪ್ರಭಾವಬೀರುತ್ತಿವೆ. 2000 ವರ್ಷಗಳ ಭ್ರಾತೃ ಜೀವನ ಮತ್ತು ಸಂಸ್ಕೃತಿಗಳ ನೆನಪು, ಅರಮನೆ, ಗುರುಮನೆಗಳ ವೈಭವ, ಭೌತಿಕ ಮತ್ತು ಆಧ್ಯಾತ್ಮಿಕ ಸಂಪತ್ತಿನ ಪಿತ್ರಾರ್ಜಿತ ಆಸ್ತಿ, ನಾನಾ ಜನಾಂಗಗಳ ಸಮ್ಮಿಲನ, ಇಂದಿನ ಅವಶ್ಯಕತೆ ಮತ್ತು ಮುಂದಿನ ಆಕಾಂಕ್ಷೆ ಇವು ಒಟ್ಟುಗೂಡಿ ಭಾರತದ ಈ ಭಾಗದ ಏಕೀಕರಣವನ್ನು ಸಾಧ್ಯಗೊಳಿಸುವಂತೆ ಕನ್ನಡಿಗರನ್ನು ಪ್ರೇರೇಪಿಸಬೇಕಾಗಿದೆ. ಜತೆಗೆ ಪ್ರಾಂತಗಳೂ ಸಂಘಟಿತವಾಗಬೇಕಾಗಿದೆ. ಕನ್ನಡ ಚಳವಳಿ ಜನತಾ ಆಂದೋಲನವಾಗಿ ಮಾರ್ಪಾಡಾಗಬೇಕಾಗಿದೆ.

ಕನ್ನಡಿಗರ ಆಶೆ ಆಕಾಂಕ್ಷೆಗಳು, ಅಗತ್ಯಗಳು, ಅವರ ಬಾಳುವೆಗಳು ವಿಷಮ ಸ್ಥಿತಿಯಲ್ಲಿವೆ, ನೀರಾವರಿ ಯೋಜನೆಗಳು, ಬಂದರುಗಳು, ವಿಶ್ವವಿದ್ಯಾಲಯಗಳು, ಬ್ಯಾಂಕುಗಳು, ಉದ್ಯಮಗಳು, ಆರ್ಥಿಕ ಮೂಲಗಳು, ಶಿಕ್ಷಣ ಮಾಧ್ಯಮ – ಈ ಒಂದೊಂದೂ ಚಳವಳಿಯ ವಿಷಯವಾಗಬೇಕು. ಸಾಂಸ್ಕೃತಿಕ ನಿಷ್ಠೆ, ರಾಜಕೀಯ ನಿಷ್ಠೆಯಾಗಿಯೂ ಪರಿಣಮಿಸಬೇಕು" – ಇದು ಬಿ.ಎಂ.ಶ್ರೀ ಅವರ ಭವಿಷ್ಯದ ಸುಂದರ ಸಮೃದ್ಧ ಕರ್ನಾಟಕದ ಸಮಗ್ರ ದರ್ಶನ.

ಒಲುಮೆಗಿಂತ ಗೆಲುವಿಲ್ಲ, ಒಕ್ಕೂಟಕ್ಕಿಂತ ಬಲವಿಲ್ಲ. ಸಣ್ಣದನ್ನು ದೊಡ್ಡದು ಮಾಡದೆ, ದೊಡ್ಡದನ್ನು ಸಣ್ಣದು ಮಾಡದೆ ತಾಳ್ಮೆ, ಶಿಸ್ತು, ಅಚ್ಚುಕಟ್ಟು, ಒಕ್ಕೂಟ, ಒಲುಮೆ, ಇವು ಕಲಿತರೆ "ಕನ್ನಡ ನಾಡಿನ ಮಣ್ಣು ಹೊನ್ನಾಗುವುದು. ಬಾಳು

ಬಾನಾಗುವುದು" ಎಂದಿದ್ದ ಶ್ರೀ ಅವರು ಆಂಗ್ಲರ ಗುಲಾಮಗಿರಿಯಿಂದ ಭಾರತದ ಬಿಡುಗಡೆ, ಕರ್ನಾಟಕದ ಒಕ್ಕೂಟ, ಕನ್ನಡದಲ್ಲಿ ವಿಶ್ವ ಸಂಸ್ಕೃತಿ ಎಲ್ಲೆಲ್ಲಿ ಮಿಡಿಯುತ್ತದೆ ಅಲ್ಲಿ ನಾನೂ ಮಿಡಿಯುತ್ತೇನೆ, ..... ಕರ್ನಾಟಕ ಏಕೀಕರಣ ಸಮಸ್ತ ಕನ್ನಡಿಗರ ಭಾವೈಕ್ಯ" - ಎಂದು ಭಾವನಾತ್ಮಕವಾಗಿ ಜೀವನದುಸಿರಾಗಿ ಮಾತಾಡಿದ್ದರು. ಸಾಧ್ಯವಾದೆಡೆ ಭಾಷಣ ಮಾಡಿದರು, ವಿಚಾರ ಹಂಚಿದರು. ಸಂಘಟಿತ ಹೋರಾಟವನ್ನೂ ಮಾಡಿದರು.

ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದ ಸಾಂಸ್ಕೃತಿಕ ಚಿಂತನೆಗೆ ನೀರೆರೆದು ಹಳೆ ಮೈಸೂರು, ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ (ನಿಜಾಮ್ ಆಳ್ವಿಕೆಯ ಪ್ರದೇಶಗಳು) ಮಧ್ಯ ಕರ್ನಾಟಕ, ಘಟ್ಟ ಪ್ರದೇಶ – ಈ ಎಲ್ಲ ಪ್ರದೇಶದ ಜನ "ಒಂದೇ ಕರ್ನಾಟಕ" ಎಂಬ ರಾಜ್ಯದ ಸೂರಿನಡಿ ಬಾಳಿ ಅಭಿವೃದ್ಧಿ ಪಥದತ್ತ ಹೆಜ್ಜೆ ಹಾಕಬೇಕು ಪ್ರಜಾಸತ್ತಾತ್ಮಕ ಆಡಳಿತದ ನೂರಾರು ವರ್ಷಗಳ ಕನಸು ನನಸಾಗಿಸಬೇಕು....

ಇಂಥದ್ದೊಂದು ಮಹತ್ವದ ಕಾರ್ಯ ಸಾಕಾರಗೊಳ್ಳಲು ನೂರಾರು ಲೇಖಕರು, ಸಾವಿರಾರು ಚಿಂತಕರು, ಲಕ್ಷಾಂತರ ಸಾಮಾಜಿಕ ಕಾರ್ಯಕರ್ತರು ನಾಡುನುಡಿಯ ಕನಸು ಕಟ್ಟಿದ್ದು ವಾಸ್ತವ.

ಏಕೀಕರಣದ ಮಾತಿನ ಬೆನ್ನಲ್ಲೇ ಭಾರತದ ಸ್ವಾತಂತ್ರ್ಯದ ಸಂದರ್ಭವೂ ದಾಖಲಾರ್ಹ. ಇನ್ನೂರು ವರ್ಷಗಳಿಗೂ ಹೆಚ್ಚುಕಾಲ ಆಂಗ್ಲರ ಆಳ್ವಿಕೆಗೆ ಸಿಲುಕಿದ್ದ ಭಾರತ ಪರಂಪರೆ, ಸಂಸ್ಕೃತಿ, ಇತಿಹಾಸದಲ್ಲಿ ಹೆಗ್ಗಳಿಕೆ ಪಡೆದಿದ್ದರೂ ಗುಲಾಮಗಿರಿಯ ಹಣೆಪಟ್ಟಿ ತೊಟ್ಟು ಸಂಕೋಲೆಯ ಬಂಧನದಲ್ಲಿತ್ತು. ಭಾರತದ ನೆಲದಿಂದ ಆಂಗ್ಲರನ್ನು ಓಡಿಸಿ ಸ್ವಾತಂತ್ರ್ಯದ ಸವಿ ಉಣ್ಣಲು ದೊಡ್ಡ ಯುದ್ಧಗಳೇ ನಡೆದವು. ಸೈನಿಕರು, ಸಾಮಾನ್ಯ ಜನರ ಸಾವು ರಕ್ತದ ಕೋಡಿಯಾಯಿತು. ಆಂಗ್ಲರ ಕುತಂತ್ರ, ಆಧುನಿಕ ಬಂದೂಕು, ಫಿರಂಗಿ, ತರಬೇತು ಆದ ಸೈನಿಕರಿಂದಾಗಿ ಭಾರತದ ಎಷ್ಟೋ ಪ್ರಬಲ ರಾಜ ಮಹಾರಾಜರು, ಸಾಮಂತರು ಸೋತು ತಲೆತಗ್ಗಿಸಬೇಕಾಯಿತು, ಇಲ್ಲಾ ಮರಣ ಹೊಂದಬೇಕಾಯಿತು. ಹೀಗೆ ಈ ಭಾರತದ ನೆಲದಲ್ಲಿ ಹಿಂಸೆಯ ರೂಪ ತಾಂಡವಾಡಿದರೂ ಸ್ವಾತಂತ್ರ್ಯದ ಕನಸು ದೂರವೇ ಉಳಿಯಿತು.

ಆದರೆ ಅಹಿಂಸಾತ್ಮಕ ಚಳವಳಿ, ಹೋರಾಟ, ಜನಸಂಘಟನೆ, ಆಂಗ್ಲರ ಆಡಳಿತಕ್ಕೆ ಅಸಹಕಾರದ ಹೊಸ ಮಾರ್ಗ ಕೊಟ್ಟವರು ಮಹಾತ್ಮಗಾಂಧಿ. ಇಡೀ ದೇಶವೇ ಇವರ ಶಾಂತಿಯುತ ಹೋರಾಟಕ್ಕೆ ಬೆಂಬಲಕೊಟ್ಟಿತು. ತುಂಡು ಬಟ್ಟೆ ತೊಟ್ಟು ಫಕೀರನಂತಿದ್ದ ಗಾಂಧೀಜಿಯ ಕರೆಗೆ ಭಾರತದಲ್ಲಿ ಭುಗಿಲೆದ್ದ ವಾತಾವರಣ ಸೃಷ್ಟಿಯಾಯಿತು. ಇದನ್ನು ಆಂಗ್ಲರ ಆಡಳಿತ ಗಂಭೀರವಾಗಿ ಪರಿಗಣಿಸಿತು. ಇದರ ಫಲವಾಗಿ ಗಾಂಧಿಯವರಿಗೆ ತಲೆಬಾಗಿದ ಆಂಗ್ಲರು ಭಾರತಬಿಟ್ಟು ತೊಲಗಲು ಸಿದ್ಧವಾದರು.

1947 ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯ ಪಡೆಯಿತು. ಗಾಂಧೀಜಿ ಕಂಡ ಕನಸು ಒಟ್ಟು ಭಾರತೀಯರ ಕನಸೂ ಆಗಿತ್ತು. 1950 ಜನವರಿ 26ರಂದು ಭಾರತ ಗಣರಾಜ್ಯವಾಯಿತು. ಭಾರತದ ಒಕ್ಕೂಟದಲ್ಲಿ ಸೇರಿದ್ದ ರಾಜ್ಯಗಳು ಒಂದೇ ಸ್ವರೂಪದಲ್ಲಿ ಇರಲಿಲ್ಲ. ಆಂಗ್ಲರು ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡಿದ್ದ ಸ್ವರೂಪದಲ್ಲೇ ರಾಜ್ಯಗಳು ಮುಂದುವರೆದಿದ್ದವು. ಆಂಗ್ಲರ ಆಳ್ವಿಕೆಯ ಸಂದರ್ಭದಲ್ಲೇ ಕೆಲವು ರಾಜ್ಯಗಳ ಹಾಗೂ ಸಂಸ್ಥಾನಗಳ ಮುಖಂಡರು ಭಾಷಾವಾರು ಪ್ರಾಂತ ರಚನೆಗೆ ಬೇಡಿಕೆ ಸಲ್ಲಿಸಿದ್ದರು. ಕೆಲವು ಪ್ರದೇಶಗಳು ಬೇಡಿಕೆಗೆ ತಕ್ಕಂತೆ ವಿಭಜನೆಗೊಂಡು ಕೆಲವು ಸಮಸ್ಯೆಗಳು ಬಗೆಹರಿದಿದ್ದವು. ಆದರೆ ಆಳುವ ವರ್ಗದಲ್ಲಿ ಒಂದು ಆತಂಕ ಮನೆಮಾಡಿತ್ತು – ಅದು, ಭಾಷಾವಾರು ಪ್ರಾಂತ ರಚನೆಯಿಂದ ಸಮಸ್ಯೆಗಳು ನಿವಾರಣೆ ಆಗುವ ಬದಲು ಹೆಚ್ಚುತ್ತವೆ! ಜೇನುಗೂಡಿಗೆ ಕೈಹಾಕುವ ಹುಚ್ಚು ಸಾಹಸ ಬೇಡ ಎಂಬ ತೀರ್ಮಾನ ಅವರದಾಗಿತ್ತು.

ಭಾಷಾವಾರು ತತ್ವದ ತಳಹದಿಯ ಮೇಲೆ ಭಾರತದ ರಾಜ್ಯಗಳ ಮರುವಿಂಗಡಣೆಯಾಗಬೇಕೆಂದು ಜನರ ಒಟ್ಟಭಿಪ್ರಾಯ ದೇಶದ ತುಂಬೆಲ್ಲ ವ್ಯಾಪಿಸಿತ್ತು. ಜನರ ಮನೋಭಾವನೆಯನ್ನು ಸರಿಯಾಗಿ ಅರ್ಥಮಾಡಿಕೊಂಡ ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರು ಭಾಷಾವಾರು ರಾಜ್ಯಗಳ ರಚನೆಗೆ ಸಲಹೆ ಮಾಡಲು ಫಜಲ್ ಅಲಿ ನೇತೃತ್ವದಲ್ಲಿ ಆಯೋಗವನ್ನು 1953ರಲ್ಲಿ ನೇಮಿಸಿದರು. ಆಯೋಗವು ಸಮಸ್ಯೆಗಳನ್ನು ಎರಡು ವರ್ಷ ಸಮಗ್ರವಾಗಿ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಒಪ್ಪಿಸಿತು.

ಮೊದಲನೆಯದಾಗಿ ಆಯೋಗವು ಭಾಷಾವಾರು ರಾಜ್ಯಗಳ ನಿರ್ಮಾಣಕ್ಕೆ ತನ್ನ ಸಂಪೂರ್ಣ ಬೆಂಬಲಕೊಟ್ಟಿತು. ಎರಡನೆಯದಾಗಿ ಮೂರು ವಿಧ ರಾಜ್ಯಗಳ ಬದಲಿಗೆ ಎರಡು ವಿಧ ರಾಜ್ಯಗಳ ಅಸ್ತಿತ್ವಕ್ಕೆ ಸಲಹೆ ಮಾಡಿತು. ಮೊದಲನೇ ವರ್ಗದ ರಾಜ್ಯಗಳಿಗೆ ಕೇಂದ್ರದಿಂದ ನೇಮಕವಾದ ರಾಜ್ಯಪಾಲರು ವರಿಷ್ಠರಾದರೆ; ಎರಡನೇ ವರ್ಗದ ರಾಜ್ಯಗಳನ್ನು ಕೇಂದ್ರಾಡಳಿತ ಪ್ರದೇಶಗಳೆಂದು ಕರೆದು ಕೇಂದ್ರದಿಂದ ನೇಮಕರಾದ ಲೆಫ್ಟಿನೆಂಟ್ ಗವರ್ನರ್‌ಗಳು ವರಿಷ್ಠರಾಗಿ ರಾಜ್ಯಾಡಳಿತ ಕ್ರಮ ನಡೆಸಬೇಕೆಂದು ಆಯೋಗವು ಸಲಹೆ ಮಾಡಿತು.

ಫಜಲ್ ಅಲಿ ಆಯೋಗದ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿತು. ಸಮಿತಿ ಏನೇ ಶಿಫಾರಸ್ಸು ಮಾಡಿದರೂ ಹಂಚಿಹೋಗಿದ್ದ ಇತರ ಕನ್ನಡ ಪ್ರದೇಶಗಳನ್ನು ಸೇರಿಸಿಕೊಳ್ಳುವ ಅಥವಾ ಬಿಡುವ ಅಧಿಕಾರ ಮೈಸೂರು ರಾಜ್ಯಕ್ಕೆ ಸೇರಿದುದಾಗಿತ್ತು. ಆಗ ಮೈಸೂರು ರಾಜ್ಯದಲ್ಲಿ ಹೊಸ ಪ್ರದೇಶಗಳನ್ನು ಸೇರಿಸಿಕೊಳ್ಳುವುದನ್ನು ವಿರೋಧಿಸುವ ಪ್ರಬಲ ಗುಂಪು ಇದ್ದಿತು. ಆಗಲೇ ಸಾಕಷ್ಟು ಅಭಿವೃದ್ಧಿ ಸಾಧಿಸಿರುವ ಮೈಸೂರಿಗೆ ಹಿಂದುಳಿದ ಪ್ರದೇಶಗಳು ಸೇರುವುದರಿಂದ

ಈ ಭಾಗದ ಸಂಪನ್ಮೂಲಗಳು ಸೋರಿ ಹೋಗುತ್ತವೆ ಎಂಬುದು ಅಂತಹ ಗುಂಪಿನ ಪ್ರಬಲ ವಾದ. ಆದರೆ ಆಂತರಿಕವಾಗಿ ಇದರಿಂದ ರಾಜಕೀಯ ಗುಂಪುಗಳ ಬಲಾಬಲದಲ್ಲಿ ವ್ಯತ್ಯಾಸ ಉಂಟಾಗಿ ತಮ್ಮ ಸ್ಥಾನಮಾನಗಳಿಗೆ ಧಕ್ಕೆ ಬರುತ್ತದೆ ಎಂಬ ಆತಂಕವೇ ಬಹುತೇಕ ಈ ನಿಲುವಿಗೆ ಕಾರಣವಾಗಿದ್ದಿತು. ಕಾಕತಾಳೀಯವಾಗಿ ಈ ಮೈಸೂರುವಾದಿ ಗುಂಪು ಆ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರನ್ನು ವಿರೋಧಿಸುವ ಗುಂಪು ಸಹಾ ಆಗಿತ್ತು. ಇದರಿಂದ ಹನುಮಂತಯ್ಯನವರ ಪರಿಸ್ಥಿತಿ ಅತ್ತ ದರಿ ಇತ್ತ ಪುಲಿ ಅನ್ನುವಂತಾಗಿತ್ತು.

ಇಂಥೆಲ್ಲ ಭಿನ್ನಾಭಿಪ್ರಾಂಯ, ಘರ್ಷಣೆ, ವಾದವಿವಾದಗಳು ಹನುಮಂತಯ್ಯನವರ ಆಡಳಿತದ ಬಗ್ಗೆ ಕಾಂಗ್ರೆಸ್ ಪಕ್ಷದಲ್ಲೇ ಮೂಡಿದವು. 1952ರಲ್ಲಿ ನಡೆದ ಸಂವಿಧಾನಾತ್ಮಕ ಪ್ರಜಾಪ್ರಭುತ್ವದ ಪ್ರಥಮ ಮಹಾಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು. ಕೆಂಗಲ್ ಅವರು ಪ್ರಥಮ ಮುಖ್ಯಮಂತ್ರಿಯಾದರೂ ತಮ್ಮ ಪೂರ್ಣಾವಧಿ ಅಧಿಕಾರ ನಡೆಸಲಾಗಲಿಲ್ಲ! ರಾಜ್ಯ ರಾಜಕಾರಣದಲ್ಲಿ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಹಲವು ನಾಯಕರ ಚಿತಾವಣೆ ಇದರ ಹಿಂದೆ ಕೆಲಸ ಮಾಡಿತ್ತು. ಕೆಂಗಲ್ ಅವರೂ ಅಧಿಕಾರ ಗದ್ದುಗೆಗೆ ಬರಲು ಸ್ವಾತಂತ್ರ್ಯ ನಂತರದ (1947 ಅಕ್ಟೋಬರ್) ಪ್ರಪ್ರಥಮ ಮುಖ್ಯಮಂತ್ರಿ ಕೆ. ಚೆಂಗಲರಾಯ ರೆಡ್ಡಿ ಅವರ ಆಡಳಿತದ ಮೇಲೆ ಗಧಾಪ್ರಹಾರ ನಡೆಸಿದ್ದರು. ಸರ್ಕಾರದ ತಪ್ಪುಗಳನ್ನು ಎತ್ತಿ ಹಿಡಿದಿದ್ದರು. ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನೂ ತಂದು ಸರ್ಕಾರ ಬೀಳಿಸಿದ್ದರು.

ಮೈಸೂರು ರಾಜ್ಯದ ಈ ರಾಜಕೀಯ ಬಿಕ್ಕಟ್ಟು ಬಗೆಹರಿಸಲು ಭಾರತದ ಪ್ರಧಾನಿ ಜವಹರಲಾಲ್ ನೆಹರು ಅವರೇ ಆಸಕ್ತಿ ತಳೆದರು. ಪರಿಸ್ಥಿತಿ ಅಧ್ಯಯನಕ್ಕಾಗಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರನ್ನು ರಾಜ್ಯಕ್ಕೆ ಕಳುಹಿಸಿದರು. ಇಲ್ಲಿಯ ಶಾಸಕರ ಅಭಿಪ್ರಾಯ ಪಡೆದ ಶಾಸ್ತ್ರಿಗಳು 'ಮೈಸೂರು ಕಾಂಗ್ರೆಸ್ಸಿಗರು ಹೊಸ ನಾಯಕತ್ವ ಬಯಸುತ್ತಿದ್ದಾರೆ' ಎಂದು ವರದಿ ನೀಡಿದರು. ಇದರ ಫಲವಾಗಿ ಮುಂದೆ ಕೆಂಗಲ್ ರಾಜ್ಯದ ಚುಕ್ಕಾಣಿ ಹಿಡಿದರು. ಕೇವಲ ನಲವತ್ತನಾಲ್ಕು ವರ್ಷದಲ್ಲೇ ಕೆಂಗಲ್ ಮುಖ್ಯಮಂತ್ರಿ ಆದರು. ಇಡೀ ರಾಷ್ಟ್ರವೇ ತಲೆದೂಗುವಂಥಾ ಅದ್ಭುತ ಕಟ್ಟಡ ವಿನ್ಯಾಸದ ಈಗಿನ 'ವಿಧಾನಸೌಧ'ದ ರುವಾರಿ ಅವರಾದರೂ ದುರಾದೃಷ್ಟವಶಾತ್ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಗಾದಿಯಲ್ಲಿ ಕೂತು ಆಳುವ ಅಧಿಕಾರ ಅವರು ಪಡೆದಿರಲಿಲ್ಲ. ಕರ್ನಾಟಕ ಏಕೀಕರಣದ ಪರವಾಗಿ ಹಳೆ ಮೈಸೂರು ಪ್ರಾಂತದಲ್ಲಿ ಕೆಂಗಲ್ಲರೇ ಮುಂಚೂಣಿಯಲ್ಲಿದ್ದರು. ಈ ಸಂದರ್ಭದಲ್ಲಿ ನಾನು 'ಕರ್ನಾಟಕದ ದಾಸ' ಎಂದು ಸಹ ಘೋಷಿಸಿಕೊಂಡಿದ್ದರು.

ಅಂದಿನ ವಿಧಾನಸಭಾಪತಿಯಾಗಿದ್ದ ಶ್ರೀ ಸಿದ್ದಯ್ಯನವರ ಸಹಕಾರ ಪಡೆದು ಏಕೀಕರಣಕ್ಕೆ ಶಾಸಕರ ಬೆಂಬಲ ಗಳಿಸಿಕೊಂಡಿದ್ದರು. ಈ ಮೂಲಕ ಕರ್ನಾಟಕ

ಏಕೀಕರಣ ಸಾಧಿಸುವ ಮೂಲಕ ಇತಿಹಾಸದಲ್ಲಿ ಮಹತ್ವದ ಕಾರ್ಯ ನಿರ್ವಹಿಸಿದ ಶಾಶ್ವತ ಕೀರ್ತಿ ಇವರದಾಯಿತು. ಆದರೆ ಕೆಂಗಲ್ ಹನುಮಂತಯ್ಯನವರ ಬಗ್ಗೆ ವಿರೋಧವಾಗಿದ್ದವರಿಗೆ ತಮ್ಮ ಗುರಿ ಸಾಧಿಸಿಕೊಳ್ಳುವ ಅವಕಾಶ ಒದಗಿತು. ಅವರು ಹನುಮಂತಯ್ಯನವರ ಬಿಗಿ ಆಡಳಿತದಿಂದ ಬಿಡಿಸಿಕೊಳ್ಳಲು ಅವರ ವಿರುದ್ಧ ಶಾಸನ ಸಭೆಯಲ್ಲಿ ಅವಿಶ್ವಾಸ ಗೊತ್ತುವಳಿ ಮಂಡಿಸಿದರು. ಕಾಂಗ್ರೆಸ್ ಹೈಕಮಾಂಡಿನ ಅನುಗ್ರಹ ಕೆಂಗಲ್ಲರ ಪಾಲಿಗೆ ಕ್ಷೀಣಿಸಿತ್ತು.

ಈ ಎಲ್ಲದರ ಒಟ್ಟು ಪರಿಣಾಮವಾಗಿ 1956 ಆಗಸ್ಟ್‌ನಲ್ಲಿ ಅವಿಶ್ವಾಸ ಗೊತ್ತುವಳಿ ಅಂಗೀಕಾರವಾಗಿ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದರು.

ಸ್ವಾತಂತ್ರ್ಯ ನಂತರದ ಪ್ರಥಮ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರಿಗಾದ ಗತಿಯೇ ಹನುಮಂತಯ್ಯ ಅವರಿಗೂ ಆಯಿತು. ಇತಿಹಾಸ ಪುನರಾವರ್ತನೆಯಾಯಿತು. ಐವತ್ತಾರರ ರಾಜ್ಯೋದಯ ಆಗುವ ಮೊದಲಿನ ರಾಜ್ಯ ರಾಜಕೀಯ ಪಲ್ಲಟದ ಇತಿಹಾಸ ಇದು.

* * *

ಈ ರಾಜಕೀಯ ಪಲ್ಲಟದ ಇತಿಹಾಸದಲ್ಲಿ ಸೇರಿದ ಕೆಂಗಲ್ ಹನುಮಂತಯ್ಯನವರ ಆಡಳಿತದಲ್ಲಿ ಮಹತ್ವದ ಗೃಹ, ಕೃಷಿ, ಕೈಗಾರಿಕೆ ಖಾತೆಗಳ ಸಚಿವರಾಗಿದ್ದ ಶ್ರೀ ಎಚ್. ಸಿದ್ದವೀರಪ್ಪ ಕಾನೂನು ವಿದ್ವಾಂಸರು, ಅತ್ಯುತ್ತಮ ಸಂಸದೀಯ ಪಟುಗಳೂ ಆಗಿದ್ದರು. ಮುಖ್ಯಮಂತ್ರಿ ಹನುಮಂತಯ್ಯ ಅವರನ್ನೂ ಒಳಗೊಂಡಂತೆ ಆರು ಜನ ಮಾತ್ರ ಸಂಪುಟದಲ್ಲಿ ಸಚಿವರಾಗಿದ್ದರು. ಕೆಂಗಲ್ ಅಧಿಕಾರದಲ್ಲಿರುವವರೆಗೆ ಸಿದ್ದವೀರಪ್ಪ ಅವರ ಜತೆ ಕಾರ್ಯನಿರ್ವಹಿಸಿದರು.

**ಫಜಲ್ ಆಯೋಗದ ವರದಿಯ ಫಲವಾಗಿ ನವಂಬರ್ 1, 1956ರಂದು ವಿಶಾಲ 'ಮೈಸೂರು ರಾಜ್ಯ' ಉದಯವಾಯಿತು. ಭಾರತದ ಆಗಿನ ರಾಷ್ಟ್ರಪತಿ ಶ್ರೀ ಬಾಬು ರಾಜೇಂದ್ರಪ್ರಸಾದ್ ನೂತನ ರಾಜ್ಯವನ್ನು ಉದ್ಘಾಟಿಸಿದರು. ಶ್ರೀ ಎಸ್. ನಿಜಲಿಂಗಪ್ಪ ಹೊಸ 'ಮೈಸೂರು ರಾಜ್ಯ'ದ ಪ್ರಥಮ ಮುಖ್ಯಮಂತ್ರಿಯೆಂದು ಪ್ರಮಾಣ ವಚನ ಸ್ವೀಕರಿಸಿದರು. 1973ರಲ್ಲಿ ಶ್ರೀ ಡಿ. ದೇವರಾಜ ಅರಸು ಮುಖ್ಯಮಂತ್ರಿ ಆಗಿದ್ದಾಗ ಮೈಸೂರು ರಾಜ್ಯದ ಹೆಸರನ್ನು "ಕರ್ನಾಟಕ" ಎಂದು ನಾಮಕರಣ ಮಾಡಿದರು. ಇದು ಮತ್ತೊಂದು ಇತಿಹಾಸ.**

ಪ್ರತಿ ರಾಜ್ಯಕ್ಕೂ ತನ್ನದೇ ಆದ ರಾಜ್ಯ ಸರ್ಕಾರ ಇರಬೇಕು ಎಂಬ ಹಿನ್ನೆಲೆಯಲ್ಲಿ ಅದರ ಅಧಿಕಾರ, ಕಾರ್ಯಚಟುವಟಿಕೆಗಳೇನು ಎಂಬುದನ್ನು 'ಭಾರತ ಸಂವಿಧಾನ'ದಲ್ಲಿ ಅಳವಡಿಸಲಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ನೇತೃತ್ವದ ಸಮಿತಿ ಈ ಸಂವಿಧಾನ ರೂಪಿಸಿತು.

– ಈ ದೀರ್ಘ ಪೀಠಿಕೆ – ಪ್ರಸ್ತಾವನೆ ಕನ್ನಡನಾಡು, ನುಡಿ ಹಾಗೂ ರಾಜ್ಯದ ಹಿರಿಮೆ ಗರಿಮೆ ಸಾರಿದ ದಾಖಲೆಗೆ ಕನ್ನಡಿ ಹಿಡಿದಿದೆ. ಕವಿಗಳು, ಲೇಖಕರು, ಹೋರಾಟಗಾರರು, ರಾಜಕಾಣಿಗಳು ಒಂದಿಲ್ಲೊಂದು ಸಂದರ್ಭದಲ್ಲಿ ನಾಡಿನ ಅಭ್ಯುದಯದ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ. ಹೀಗಾಗಿ 'ಮೈಸೂರು ರಾಜ್ಯ' ನಂತರ 'ಕರ್ನಾಟಕ' ಆದ ಸಂದರ್ಭದವರೆಗೆ ಇಲ್ಲಿ ತುಣುಕು ಮಾಹಿತಿಯ ಪಕ್ಷಿನೋಟ ಲಭ್ಯವಾಗಿದೆ.

**ಕರ್ನಾಟಕ ಕಂಡ ಪ್ರಾಮಾಣಿಕ ಹಾಗೂ ನಿಷ್ಠೂರ ರಾಜಕಾರಣಿ ಶ್ರೀ ಎಚ್. ಸಿದ್ದವೀರಪ್ಪ. ಅವರ ಬಾಲ್ಯ, ವಿದ್ಯಾಭ್ಯಾಸ, ಸಾಮಾಜಿಕ ಚಟುವಟಿಕೆ, ರಾಜಕಾರಣದ ಏರಿಳಿತ, ಹಲವು ಮುಖ್ಯಮಂತ್ರಿಗಳ ಜತೆ ವಿವಿಧ ಖಾತೆಗಳ ಸಚಿವ ಹುದ್ದೆ, ಅವರೊಬ್ಬ ಉತ್ತಮ ಸಂಸದೀಯ ಪಟುವಾಗಿದ್ದುದು.... ಎಲ್ಲವೂ ಮುಂದಿನ ಪುಟಗಳಲ್ಲಿ ಅನಾವರಣಗೊಂಡಿದೆ.**

* * *

**"ತಾನೊಬ್ಬ ವಿಶ್ವಮಾನವ, ಯಾವ ಮತಕ್ಕೂ ಸೇರಿದವನಲ್ಲ ಎಂಬ ಭಾವನೆ ಪ್ರತಿಯೊಬ್ಬರಲ್ಲಿಯೂ ಮೂಡಿದಾಗ ಅನೇಕ ರಾಜಕೀಯ, ಸಾಮಾಜಿಕ, ಆರ್ಥಿಕ ಜಾಡ್ಯಗಳು ಕೊನೆಗೊಳ್ಳುವುದಲ್ಲದೆ, ಮಾನಸಿಕ ಶಾಂತಿ ದೊರೆಯುತ್ತದೆ".**

**– ಕುವೆಂಪು**

* * *

"ಜನಗಳಲ್ಲಿ ಮಾನಸಿಕ ಪರಿವರ್ತನೆಯಾಗಿದೆ ಎಂಬುದನ್ನು ನಾವು ನಿಷ್ಪಕ್ಷಪಾತವಾಗಿ ಎಲ್ಲಿ ಬೇಕಾದರೂ ಹೇಳಬಹುದು. ಆದರೆ ಒಂದು ಏನಾಗಿದೆ ಎಂದರೆ, ಹರಿಜನರ ಜೊತೆ ಕುಳಿತುಕೊಂಡು ಊಟ ಮಾಡುತ್ತೇವೆ, ಅವರನ್ನು ಮುಟ್ಟುತ್ತೇವೆ, ಅವರ ಜೊತೆಯಲ್ಲಿ ಇರುತ್ತೇವೆ. ಆದರೆ ಕೊಡುವುದು, ಕೂಡಿ ಊಟ ಮಾಡುವುದು, ಕುಲ ಎಣಿಸುವುದು ಇದುಮಟ್ಟಿಗೆ ಹೋಗಿಲ್ಲ. ಎಲ್ಲಿ ನೋಡಿದರೂ ನಾವು ಅಂಥವರು, ನೀವು ಇಂಥವರು, ಈ ಜಾತಿ, ಆ ಜಾತಿ ಎಂಬುದು ಮನಸ್ಸಿನಲ್ಲಿದೆ. ನಾವೆಲ್ಲ ಒಂದಾಗಿ ಮುಂದುವರೆಯಬೇಕೆಂಬ ಭಾವನೆಯನ್ನು ನಾವು ಇನ್ನೂ ಕಾಣದೆ ಇರತಕ್ಕ ಸನ್ನಿವೇಶದಲ್ಲಿ ಇದ್ದೇವೆ. ಅದು ಆದಷ್ಟು ಜಾಗ್ರತೆಯಾಗಿ ಹೋಗಿಯೇ ತೀರಬೇಕು".

ಎಲ್ಲರೂ ವೀರರು, ಎಲ್ಲರೂ ಧೀರರು
ಎಲ್ಲರೂ ಮಹಿಮರು, ಎಲ್ಲರೂ ಪ್ರಥಮರು!
ಕಾಳಗದ ಮುಖದಲ್ಲಿ ಕಾಣಬಾರದು
ಓಡುವ ಮುಖದಲ್ಲಿ ಕಾಣಬಹುದು!
ನಮ್ಮ ಕೂಡಲಸಂಗನ ಶರಣರು ಧೀರರು....

– ಬಸವಣ್ಣ

# ಶ್ರೀ ಎಚ್. ಸಿದ್ದವೀರಪ್ಪ :
# ಹುಟ್ಟು, ಬಾಲ್ಯ, ವಿದ್ಯಾಭ್ಯಾಸ...

'ಹರಿಹರ' – ರಾಜ್ಯ ಭೂಪಟದ ಮಧ್ಯಭಾಗದಲ್ಲಿರುವ ತಾಲ್ಲೂಕು ಕೇಂದ್ರ. (ಆಗ ಅವಿಭಜಿತ ಚಿತ್ರದುರ್ಗ ಜಿಲ್ಲೆ, ಈಗ ವಿಭಜನೆ ನಂತರ ದಾವಣಗೆರೆ ಜಿಲ್ಲೆ). 'ಹನಗವಾಡಿ' ಎಂಬುದು ತಾಲ್ಲೂಕಿನ ಪುಟ್ಟ ಗ್ರಾಮ. ವ್ಯವಸಾಯ ಮುಖ್ಯ ಕಸುಬು. ಈ ಗ್ರಾಮದಲ್ಲಿ 1906 ಜೂನ್, 12ರಂದು ರಾಜ್ಯಕಂಡ ಬಹುಮುಖ ಪ್ರತಿಭೆಯ ರಾಜಕಾರಣಿಯೊಬ್ಬರ ಜನನವಾಯಿತು. ಅವರೇ ಶ್ರೀ ಎಚ್. ಸಿದ್ದವೀರಪ್ಪನವರು.

ರೈತಪರ ಹೋರಾಟಗಾರ, ಕಾನೂನುತಜ್ಞ , ಉತ್ತಮ ಆಡಳಿತಗಾರ, ಅಪರೂಪದ ಹಾಗೂ ಪ್ರಾಮಾಣಿಕ – ಗಂಭೀರ ರಾಜಕಾರಣಿ ಎಚ್. ಸಿದ್ದವೀರಪ್ಪ. ಗೃಹ, ಕೃಷಿ, ಕೈಗಾರಿಕೆ, ಆರೋಗ್ಯ ಇತ್ಯಾದಿ ಪ್ರಮುಖ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿದವರು. ಆ ಖಾತೆಗಳಿಗೆ ಗೌರವದ ಸ್ಥಾನಮಾನ ತಂದುಕೊಟ್ಟವರು. 'ಸಿದ್ದವೀರಪ್ಪ' ಎಂಬ ಹೆಸರೇ ಅಂದು ಅಧಿಕಾರಿಗಳಿಗೆ ಸಿಂಹಸ್ವಪ್ನ. ಇನ್ನೊಂದರ್ಥದಲ್ಲಿ ಭಯ. ಅವರಿಗೆ ಸಂಬಂಧಿಸಿದ ಖಾತೆಯಲ್ಲಿ ಕಾರ್ಯನಿರ್ವಸುವುದೆಂದರೆ ಅಷ್ಟು ಸುಲಭದ ಮಾತಾಗಿರಲಿಲ್ಲ. ಸಿದ್ದವೀರಪ್ಪನವರ ಖಾತೆಯಿದು ಎಂದರೆ ಸಾಕು ಅಲ್ಲಿ ಭ್ರಷ್ಟಾಚಾರ, ಸೋಮಾರಿತನ, ಬೇಜವಾಬ್ದಾರಿಗೆ ಸ್ಥಾನವೇ ಇಲ್ಲ.

ಕಾನೂನು ಹಾಗೂ ನಿಯಮಗಳಿಗೆ ಬದ್ಧವಾಗಿದ್ದರೆ ಅಲ್ಲಿ ವಿಳಂಬಕ್ಕೆ ಅವಕಾಶವೂ ಇಲ್ಲ. ಸೋಮಾರಿ ಅಧಿಕಾರಿ, ನೌಕರನ ತಪ್ಪು ಕಂಡುಬಂದರೆ ಅಂಥವನಿಗೆ ಶಿಕ್ಷೆ ಗ್ಯಾರಂಟಿ ಎಂಬ ಮಾತೂ ಪ್ರಚಲಿತದಲ್ಲಿತ್ತು. ಅವರೊಬ್ಬ ಅತ್ಯುತ್ತಮ ಕಾನೂನು ಪರಿಣಿತರು. ಕಾಲಕ್ಕೆ ಬೆಲೆ ಕೊಟ್ಟವರು. ವಿವಿಧ ಸಚಿವ ಖಾತೆಗೆ ಹೇಗ ಗೌರವದ ಸ್ಥಾನಮಾನ ತಂದುಕೊಟ್ಟರೋ ಹಾಗೆಯೇ ವಿರೋಧ ಪಕ್ಷದ ನಾಯಕರಾಗಿದ್ದಾಗಲೂ ಆಡಳಿತರೂಢ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿ, ನಡುಗಿಸಿದವರು. ಸದನದಲ್ಲಿ ಎತ್ತಿದ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸಲು ತಡಕಾಡಿ ತಬ್ಬಿಬ್ಬಾಗುವಂತೆ ಮಾಡಿದವರು. ಒಂದು ಸರ್ಕಾರವನ್ನೇ ಉರುಳಿಸಿದ ಧೈರ್ಯವಂತ ನಾಯಕರು.



WD-H-035-3

– ಇಂಥ ಪ್ರತಿಭಾನ್ವಿತ ರಾಜಕಾರಣಿ ಎಚ್. ಸಿದ್ದವೀರಪ್ಪನವರ ಹುಟ್ಟು, ಬೆಳವಣಿಗೆ, ಓದು, ಪರಿಸರ ಹಾಗೂ ಪ್ರಾದೇಶಿಕ ವಾತಾವರಣದ ಪ್ರಭಾವವೂ ನಮಗೆ ಕುತೂಹಲ ಹುಟ್ಟಿಸುತ್ತದೆ.

**ಹರಿಹರ ಹಾಗೂ ಭೌಗೋಳಿಕ ವಾತಾವರಣ:**

'ಹರಿಹರ' ವಿಧಾನಸಭಾ ಕ್ಷೇತ್ರ ಒಳಗೊಂಡ ಪುಟ್ಟ ತಾಲ್ಲೂಕು ಕೇಂದ್ರ. ದಾಖಲೆಯ ಪ್ರಕಾರ ತಾಲ್ಲೂಕಿನ ವಿಸ್ತೀರ್ಣ 486 ಚ.ಕಿ.ಮೀ. ಕುರುಚಲು ಅರಣ್ಯದಿಂದ ಕೂಡಿದ ಮೈದಾನ ಪ್ರದೇಶ ಎಂದು ಹಳೆಯ ದಾಖಲೆ ಹೇಳಿದರೂ, ಇಂದು ಆ ಪ್ರದೇಶ ಅಷ್ಟಾಗಿ ಗೋಚರಿಸುತ್ತಿಲ್ಲ. ನೀರಾವರಿಗೆ ಒಳಪಟ್ಟ ಜಮೀನು ಹೆಚ್ಚಾದದ್ದು ಹಾಗೂ ಭೂ ರಹಿತರಿಗೆ ಭೂಮಿ ಹಂಚಿಕೆಯಿಂದ ಈ ಪ್ರದೇಶ ಇಲ್ಲವಾಗಿದೆ. ಕೆಂಪು ಮಿಶ್ರಿತ ಮಣ್ಣು ಹೆಚ್ಚಿನ ಪ್ರಮಾಣದಲ್ಲಿ ಆವರಿಸಿದ್ದರೂ ಕಪ್ಪು ಇಲ್ಲವೆ ಎರೆಮಣ್ಣು ಹಲವು ಭಾಗದಲ್ಲಿ ಆವರಿಸಿದೆ. ಮಲೆಬೆನ್ನೂರು, ಬಾತಿ, ಐರಣಿ ಮೊದಲಾದ ಗುಡ್ಡಗಳಿಂದ ಆವರಿಸಿರುವ ಭಾಗವನ್ನೂ ಈ ತಾಲ್ಲೂಕು ಒಳಗೊಂಡಿದೆ. ಇತಿಹಾಸದಲ್ಲಿ ದಾಖಲಾಗಿರುವಂತೆ ಕ್ರಿ.ಶ. ಹತ್ತನೇ ಶತಮಾನದಲ್ಲಿ ಹರಿಹರಕ್ಕೆ ಕಡಲೂರು, ಕೂಡಲೂರು ಎಂದು ಹೆಸರಿತ್ತು. ಹರಿಹರೇಶ್ವರ ದೇವಾಲಯದಿಂದ ಪ್ರಖ್ಯಾತವಾಗಿ ನೂರಾರು ಮಹಾ ಜನರಿಂದ ಕೂಡಿದ ಅಗ್ರಹಾರವಾಗಿತ್ತು. ಮುಂದೆ ಹರಿಹರಸೀಮೆ ಎಂದು ದಾಖಲಾಯಿತು. 1779ರಲ್ಲಿ ಚಿತ್ರದುರ್ಗದ ಪಾಳೆಯಪಟ್ಟು ಪತನಗೊಂಡಾಗ, ಹರಿಹರವು ಹೈದರ್ – ಟಿಪ್ಪು ಅವರಿಗೂ, ನಂತರ ಮೈಸೂರು ಅರಸರಿಗೂ ಸೇರಲ್ಪಟ್ಟಿತ್ತು.

ಹರಿಹರ ಎಂದರೆ ಬಹುಮುಖ್ಯವಾಗಿ ಎಲ್ಲರ ನೆನಪಿಗೆ ಬರುವುದು ತುಂಗಭದ್ರಾ ನದಿ, ಸ್ವಾತಂತ್ರ್ಯ ಪೂರ್ವ (1941)ದಲ್ಲೇ ಆರಂಭಗೊಂಡ ಕಿರ್ಲೋಸ್ಕರ, ಪಾಲಿಫೈಬರ್ಸ್, ಎಣ್ಣೆ ಗಿರಣಿಗಳ ಕಾರಖಾನೆಗಳು...

ಜಿಲ್ಲಾ ಕೇಂದ್ರ ದಾವಣಗೆರೆಯಿಂದ ಕೇವಲ 14 ಕಿ.ಮೀ. ದೂರದಲ್ಲಿದೆ. ತುಂಗಾಭದ್ರಾ ನದಿಯ ಬಲದಂಡೆಯ ಮೇಲೆ ಹರಿಹರ ಪಟ್ಟಣ ಪ್ರದೇಶವಿದೆ. ರಾಷ್ಟ್ರೀಯ ಹೆದ್ದಾರಿ – 4, ಬೆಂಗಳೂರು – ಮೀರಜ್ ರೈಲ್ವೇ ಮಾರ್ಗ ಹಾಗೂ ಜಂಕ್ಷನ್ ಸಹಾ ಹೊಂದಿದೆ.

[ಚಿತ್ರದುರ್ಗ ಜಿಲ್ಲೆಯ ಭಾಗವಾಗಿದ್ದ ಇದು ಶ್ರೀ ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾಗಿದ್ದಾಗ 1997ರಲ್ಲಿ ಹೊಸದಾಗಿ ರಚನೆಯಾದ ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾಯಿತು.]

ಇದು ಎಚ್. ಸಿದ್ದವೀರಪ್ಪ ಅವರ ಕ್ಷೇತ್ರ ಹಾಗೂ ತಾಲ್ಲೂಕಿನ ಇತಿಹಾಸದ ಪುಟ್ಟ ಹಿನ್ನೆಲೆಯ ವಿವರ.

## ಹುಟ್ಟೂರು, ಕುಟುಂಬ ಹಿನ್ನೆಲೆ

'ಹನಗವಾಡಿ' ಗ್ರಾಮ ಹರಿಹರ – ಶಿವಮೊಗ್ಗ ರಸ್ತೆಯಿಂದ ಹರಿಹರಕ್ಕೆ 10 ಕಿ.ಮೀ. ದೂರದಲ್ಲಿದೆ. ಊರಲ್ಲಿ ಶ್ರೀ ವೀರಭದ್ರೇಶ್ವರ ದೇವಸ್ಥಾನ ಇದೆ. ಅಂದಿನ ಕಾಲಕ್ಕೆ ಇದೊಂದು ಹಂಚಿನಮನೆಯ ದೇವಸ್ಥಾನ. ಇದು ಮಕ್ಕಳಿಗೆ ಕಲಿಸುವ ಶಾಲೆಯೂ ಹೌದು. ಪ್ರಾಥಮಿಕ ಶಾಲೆಗೆ ಪ್ರತ್ಯೇಕ ಕಟ್ಟಡವೂ ಇರಲಿಲ್ಲ. ಬಹುತೇಕ ಹಳ್ಳಿಗಳಲ್ಲಿ ದೇವಸ್ಥಾನದ ಪ್ರಾಂಗಣವೇ ಶಾಲೆ. ಮೇಸ್ಟ್ರುಗಳಿಗೆ ಒಂದು ಕುರ್ಚಿ, ಬರೆಯಲು ಕಪ್ಪು ಹಲಗೆ ಇಷ್ಟೇ ಸೌಲಭ್ಯ. ಈಚಿನ ವರ್ಷಗಳಲ್ಲಿ ಹನಗವಾಡಿ ಮಂಡಲ ಪಂಚಾಯ್ತಿಯೂ ಆಗಿದೆ. ಬಸ್‌ಗಳ ಸೌಲಭ್ಯವೂ ಇದೆ. ಸಿದ್ದವೀರಪ್ಪನವರ ಹಿರೀಕರು ಪೂಜಿಸಿ ಆರಾಧಿಸುತ್ತಾ ಬಂದ ಮನೆ ದೇವರು ಆನೆಕೊಂಡದ ಬಸವಣ್ಣ.

ರಾಜ್ಯ ರಾಜಕಾರಣದಲ್ಲಿ ಗಡಸು ವ್ಯಕ್ತಿತ್ವ ಹೊಂದಿದ್ದ ಎಚ್. ಸಿದ್ದವೀರಪ್ಪ ಶಿಸ್ತಿನ ರಾಜಕಾರಣಿಯೆಂದೇ ಹೆಸರಾಗಿದ್ದರು. ಇವರ ತಂದೆ ಶ್ರೀ ಗುರುಸಿದ್ದಪ್ಪ ಸಣ್ಣ ರೈತ. ಮನೆಯಲ್ಲಿ ಕಡು ಬಡತನ. ಉತ್ತು ಬಿತ್ತಿದ ಪೈರು ಫಲಕೊಟ್ಟಿದ್ದು ಅಷ್ಟಕಷ್ಟೆ. ವ್ಯವಸಾಯಕ್ಕೆ ಸಹಾಯಕವಾಗಿ ಒಂದಷ್ಟು ಹಸು ಎಮ್ಮೆ ಸಾಕಿಕೊಂಡಿದ್ದರು. ಸಾಮಾನ್ಯವಾಗಿ ರೈತರು ತಮ್ಮ ಅಗತ್ಯಕ್ಕೆ ತಕ್ಕಷ್ಟು ಸಾಕುಪ್ರಾಣಿಗಳನ್ನು ಪ್ರೀತಿಯಿಂದ ಮಕ್ಕಳಂತೆ ಪೋಷಿಸುತ್ತಾರೆ. ಗುರುಸಿದ್ದಪ್ಪ ದಂಪತಿಗಳೂ ಅದನ್ನೇ ಮಾಡಿದ್ದರು. ಇವರ ಕುಟುಂಬವೇನೋ ಚಿಕ್ಕದು. ಹೇಳಿಕೊಳ್ಳುವಂತ ಉತ್ತಮ ಆರ್ಥಿಕ ಸ್ಥಿತಿ ಇರಲಿಲ್ಲ. ಮೂವರು ಮಕ್ಕಳು. ಎರಡು ಗಂಡು, ಒಂದು ಹೆಣ್ಣು. ಸಿದ್ದವೀರಪ್ಪ ಹಿರಿಯ ಮಗ, ಎರಡನೆಯವರು ವೀರಭದ್ರಪ್ಪ, ಅಣ್ಣನ ಓದಿಗೆ ಬೆಂಬಲವಾಗಿ ಮುಂದೆ ಅವರ ಸಾಮಾಜಿಕ – ರಾಜಕೀಯ ಚಟುವಟಿಕೆಗೆ ಸಹಾಯಕರಾದರು. ಹೀಗಾಗಿ ವ್ಯವಸಾಯ ವೃತ್ತಿಗಾಗಿ ಊರಲ್ಲೇ ಉಳಿದರು. ಮೂರನೆಯವರು ತಂಗಿ ನಾಗಮ್ಮ. ದಾವಣಗೆರೆ ತಾಲ್ಲೂಕಿನ ದೊಡ್ಡಬಾತಿ ಗ್ರಾಮದ ಚಂದ್ರಣ್ಣ ಸ್ಥಳೀಯ ಮುಖಂಡರು. ಹತ್ತಾರು ಹಳ್ಳಿಗೆ ಬೇಕಾದವರು. ಇವರ ಸಹೋದರ ಸಿದ್ದಬಸಪ್ಪಗೌಡ್ರು, ಇವರಿಗೆ ತಂಗಿ ನಾಗಮ್ಮ ಅವರನ್ನು ಕೊಟ್ಟು ಮದುವೆ ಮಾಡಿದ್ದರು.

### ಪ್ರಾಥಮಿಕ – ಪ್ರೌಢ ಶಿಕ್ಷಣ:

ಬಾಲಕ ಸಿದ್ದವೀರಪ್ಪನ ಪ್ರಾಥಮಿಕ ಶಿಕ್ಷಣ ಹುಟ್ಟೂರು ಹನಗವಾಡಿಯ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಪ್ರಾಂಗಣದಿಂದ ಆರಂಭವಾಯಿತು. ಮನೆ ಬಳಿಯ ಶಿಕ್ಷಣ, ಮಗನ ಆರಂಭಿಕ ಓದು ಇದ್ಯಾವುದರ ಬಗ್ಗೆ ಗುರುಸಿದ್ದಪ್ಪನಿಗೆ ಅಷ್ಟಾಗಿ ಅರಿವಾಗಲಿಲ್ಲ. ಹೇಗೋ ಪ್ರಾಥಮಿಕ ಶಿಕ್ಷಣದ ವರ್ಷಗಳು ಕಳೆದವು. ನಂತರದ ಓದಿನ ಪ್ರಶ್ನೆ ಕಾಡಿತು. ಆಗ ಲೋಯರ್ ಸೆಕೆಂಡರಿ ಶಾಲೆ ಕಲಿಯಲು ಹರಿಹರಕ್ಕೋ, ದಾವಣಗೆರೆಗೋ ಹೋಗಬೇಕಾಗಿತ್ತು. ದಾವಣಗೆರೆಯೇ ಅನುಕೂಲವಾದ ಪಟ್ಟಣ ಎಂದು ಭಾವಿಸಿ, ಗುರುಸಿದ್ದಪ್ಪ ಮಗನನ್ನು ಮುಂದಿನ ಓದಿಗೆ ದಾವಣಗೆರೆ ಸರ್ಕಾರಿ

ಶಾಲೆಗೆ ಸೇರಿಸಿದರು. ಆದರೆ ವಸತಿ, ಊಟ, ಇರಲು ವಾಸ್ತವ್ಯಕ್ಕೆ ಅಲ್ಲಿ ವ್ಯವಸ್ಥೆ ಇರಲಿಲ್ಲ. ಹೀಗಾಗಿ ಸಮೀಪದ ಬಾತಿ ಗ್ರಾಮದ ಸಂಬಂಧಿಕರ ಮನೆಯಲ್ಲಿದ್ದು ದಾವಣಗೆರೆಗೆ ಓಡಾಡಿ ಶಾಲೆಗೆ ಹೋಗಿ ಬರತೊಡಗಿದರು.

ಎರಡು ವರ್ಷದ ಶಿಕ್ಷಣದ ನಂತರ ಮತ್ತೆ ಓದಿಗೆ ತೊಡಕುಂಟಾಯಿತು. ಗುರುಸಿದ್ದಪ್ಪ ಮಗನನ್ನು ವಾಪಾಸು ಊರಿಗೆ ಕರೆದುಕೊಂಡು ಬಂದರು. ಬಾಲಕ ಸಿದ್ದವೀರಪ್ಪನಿಗೆ ಓದಿನಲ್ಲಿ ಆಸಕ್ತಿ ಇದ್ದರೂ ಮನೆಯ ಆರ್ಥಿಕ ಪರಿಸ್ಥಿತಿ ಅವರನ್ನು ಅಸಹಾಯಕರನ್ನಾಗಿಸಿತು. ಇದರಿಂದ ವಿದ್ಯಾಭ್ಯಾಸ ಮೊಟಕಾಯಿತು. ಬಾಲಕ ಮತ್ತೆ ಎರಡು ವರ್ಷ ತಂದೆ ಜತೆ ಸೇರಿ ಹೊಲ, ಮನೆ, ವ್ಯವಸಾಯ ಕೆಲಸಕ್ಕೆ ಸಂಬಂಧಿಸಿದಂತೆ ಕೈಲಾದ ಸಹಾಯ ಮಾಡಿದ. ಹಸು, ಎಮ್ಮೆ ಕಾಯುವ ಕಾಯಕದಲ್ಲೂ ನಿರತನಾದ. ಆಗ ಎಮ್ಮೆಗಳನ್ನು ದಷ್ಟಪುಷ್ಟವಾಗಿ ಬೆಳೆಸುವ ಸ್ಪರ್ಧೆ. ದಿನವೂ ಚೆನ್ನಾಗಿ ಮೇವು ತಿನ್ನಿಸಿ, ಅವಕ್ಕೆ ಸ್ನಾನ ಮಾಡಿಸಿ ತೆಂಗಿನನಾರು, ಕಲ್ಲಿನಿಂದ ಉಜ್ಜಿ ಕಪ್ಪಗೆ ಹೊಳೆಯುವಂತೆ ಮಾಡುವುದರಲ್ಲೇ ಆನಂದ ಕಂಡದ್ದುಂಟು.

ಶಾಲೆ ಬಿಟ್ಟು ಊರು ಸೇರಿದ್ದ ಸಿದ್ದವೀರಪ್ಪನನ್ನು ಹುಡುಕಿ ದೊಡ್ಡಬಾತಿ ಗ್ರಾಮದ ಸೋದರಮಾವ ಹನಗವಾಡಿಗೆ ಬಂದರು. ಅವರು ಗುರುಸಿದ್ದಪ್ಪನನ್ನು ಕಂಡು 'ಹುಡುಗ ಓದಿನಲ್ಲಿ ಹುಷಾರಿದ್ದಾನೆ. ಓದಿಸಲು ಕಷ್ಟ ಆದರೆ ನಾವು ನೋಡಿಕೊಳ್ಳುತ್ತೇವೆ. ಮುಂದೆ ಓದಲಿ. ಚಿಕ್ಕ ಮಕ್ಕಳು ನಮ್ಮಂತೆ ಏಕೆ ಕಷ್ಟಪಡಬೇಕು? ನಮ್ಮ ಸಿದ್ದವೀರು ಓದಿ ದೊಡ್ಡ ಮನುಷ್ಯ ಆಗಲಿ. ನಮ್ಮ ಕಷ್ಟ ನಮಗೆ ಇದ್ದೇ ಇದೆ, ಬೇಸಾಯ ಅಂದ್ರೆ ಗೊತ್ತೇ ಇದೆಯೆಲ್ಲ – 'ನೀನು ಸಾಯ, ನಿಮ್ಮಪ್ಪ ಸಾಯ, ಮನೆಮಂದಿಯೆಲ್ಲಾ ಸಾಯ!' ಅನ್ನೋ ಮಾತನ್ನು ಹಿರಿಯರು ಮೊದಲೇ ಹೇಳಿಲ್ಲವೆ? ಚಿಂತೆ ಮಾಡದೇ ಶಾಲೆಗೆ ಮತ್ತೆ ಕಳುಹಿಸು' ಎಂದು ಹೇಳಿದರು. ಗುರುಸಿದ್ದಪ್ಪನಿಗೆ ಇದು ಸರಿ ಅನ್ನಿಸಿತು,

ಮಗ ಮತ್ತೆ ಶಾಲೆಗೆ ಹೋಗುವಂತಾದ. ಆಗಿನ ಕಾಲದಲ್ಲಿ ವರ್ಷಕ್ಕೆ ಎಂಟು ಹತ್ತು ರೂಪಾಯಿ ಖರ್ಚು ಮಾಡಿ ಓದಿಸುವುದೂ ಕಷ್ಟವಿತ್ತು. ಅನೇಕ ಹಳ್ಳಿಗಳಲ್ಲಿ ಬಡತನ, ಅನಕ್ಷರತೆ. ಇದು ಸ್ವಾತಂತ್ರ್ಯಪೂರ್ವದ ಹಳ್ಳಿಗಳ ಪರಿಸ್ಥಿತಿ. ಹೀಗಾಗಿ ಬಾಲಕ ಸಿದ್ದವೀರಪ್ಪನಿಗೆ ವಾಸ್ತವದ ಅರಿವು ಮೂಡಿತ್ತು. ತನ್ನ ತಂದೆಯಾಗಲಿ ತನ್ನ ಬಗ್ಗೆ ಆಸಕ್ತಿ ತೋರಿದ ಸೋದರ ಮಾವನಾಗಲಿ ನಾನು ಓದಿ ದೊಡ್ಡವನಾಗಬೇಕೆಂದು ಕನಸು ಕಂಡಿದ್ದಾರೆ. ಅವರ ಆಸೆ ಈಡೇರಿಸಬೇಕೆಂದು ಮನಸ್ಸೊಳಗೊಂದು ದೃಢಸಂಕಲ್ಪ ಮೂಡಿತು.

ಇದರ ಫಲವಾಗಿ ಸಿದ್ದವೀರಪ್ಪ ಬಾತಿಯಿಂದಲೇ ಸಂಬಂಧಿಕರ ಮನೆಯಿಂದ ದಾವಣಗೆರೆ ಶಾಲೆಗೆ ಓಡಾಡಿ ಲೋಯರ್ ಸೆಕೆಂಡರಿ, ಹೈಯರ್ ಸೆಕೆಂಡರಿ – ಪ್ರೌಢಶಿಕ್ಷಣ ಮುಗಿಸಿದರು. ಇಲ್ಲಿಗೆ ಒಂದು ಹಂತ ತಲುಪಿದಂತಾಯಿತು. ಆಗಿನಕಾಲ

ಇಷ್ಟು ಶಿಕ್ಷಣಕ್ಕೇ ಸರ್ಕಾರಿ ನೌಕರಿಗಳು ಸಿಕ್ಕುತ್ತಿದ್ದವು. ಒಂದು ಹಂತದಲ್ಲಿ ಬಂಧು ಬಳಗ, ಸ್ನೇಹಿತರಿಂದಲೂ ಒತ್ತಡ ಬಂತು. ಯಾವುದಾದರೂ ನೌಕರಿ ಹಿಡಿಯಲು ಸಲಹೆಗಳೂ ಬಂದವು. ಸಿದ್ದವೀರಪ್ಪನವರಿಗೂ ಗೊಂದಲ. ಏನು ಮಾಡುವುದು, ಓದು, ಹೇಗೂ ಮನೆಯಲ್ಲಿ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ, ನೌಕರಿಗೆ ಸೇರಿಬಿಡಲೇ? ಎಂಬುದೊಂದು ಯೋಚನೆಯೂ ಸುಳಿದು  ಹೋಯಿತು.

ಆದರೆ ಕೆಲಸಕ್ಕೆ ಸೇರುವುದಕ್ಕಿಂತ ಮುಂದೆ ಕಷ್ಟವಾದರೂ ಪದವಿ ಶಿಕ್ಷಣ ಮುಗಿಸಲೇಬೇಕು ಎಂದು ನಿಶ್ಚಯಿಸಿದರು. ಮನೆಯಲ್ಲಿ, ಬಂಧು ಬಳಗದಲ್ಲಿ ಮತ್ತೆ ಮುಂದಿನ ಓದಿನ ಬಗ್ಗೆ ಚರ್ಚಿಸಿದರು. ಬಂಧುಗಳಿಂದಲೂ 'ಹುಡುಗ ಓದಿನಲ್ಲೂ ಹುಷಾರಿದ್ದಾನೆ. ಕಾಲೇಜು ಓದಲಿ' ಎಂಬ ಅಭಿಪ್ರಾಯ ಬಂತು. ಹಿಂದೆ ಪ್ರೌಢಶಿಕ್ಷಣಕ್ಕೆ ಸಹಾಯಮಾಡಿದ್ದ ಬಂಧುಗಳು ಮುಂದಿನ ಓದಿಗೆ ದಾರಿತೋರಿದರು. ಜತೆಗೆ ಹಿಂದಿನ ಪರೀಕ್ಷೆಯ ಅಂಕಗಳ ಆಧಾರದಮೇಲೆ ಸ್ಕಾಲರ್‌ಷಿಪ್ ಸಹಾ ದೊರೆಯುವಂತಾಯಿತು.

## ಮೈಸೂರು ಮಹಾರಾಜ ಕಾಲೇಜಿನಲ್ಲಿ ಪದವಿ:

ಮುಂದಿನ ಶಿಕ್ಷಣ ಮೈಸೂರಿನಲ್ಲಿ. ಇಂಟರ್ ಮೀಡಿಯೇಟ್ ನಂತರ ಮಹಾರಾಜಾ ಕಾಲೇಜಿನಲ್ಲಿ ಪದವಿ ಶಿಕ್ಷಣ. ಆಗ ಮಹಾರಾಜಾ ಕಾಲೇಜಿನಲ್ಲಿ ಓದುವುದೆಂದರೆ ಪ್ರತಿಷ್ಠೆಯ ಪ್ರಶ್ನೆ. ಅದೊಂದೇ ರಾಜ್ಯದ  ಪ್ರತಿಷ್ಠಿತ ಕಾಲೇಜು. ಅಲ್ಲಿ ಮಹಾನ್ ವಿದ್ವಾಂಸರು ಪಾಠಪ್ರವಚನಗಳ ಮೂಲಕ ಹೆಸರಾಗಿದ್ದರು. ಮುಂದೆ ಈ ದೇಶದ ರಾಷ್ಟ್ರಪತಿಯಾದ ತತ್ತ್ವಜ್ಞಾನಿ ಶ್ರೀ ಎಸ್. ರಾಧಾಕೃಷ್ಣನ್ ಮಹಾರಾಜ ಕಾಲೇಜಿನಲ್ಲಿ ಬೋಧಿಸುತ್ತಿದ್ದರು. ಇಂಥದ್ದೇ ಖ್ಯಾತ ಸಾಹಿತಿ  ಚಿಂತಕರ ದೊಡ್ಡ ಪಡೆಯೇ ಈ ಕಾಲೇಜಿನಿಂದ ಹೊರಬಂತು. ಬಿ.ಎಂ.ಶ್ರೀ, ತೀನಂ.ಶ್ರೀ, ಡಿ.ಎಲ್.ಎನ್, ಕುವೆಂಪು ಮೊದಲಾದ ದಿಗ್ಗಜರು ಈ ಕಾಲೇಜಿನ ಹೆಮ್ಮೆಯ ನಕ್ಷತ್ರಗಳು.

ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಲೇ ವಿದ್ವಾಂಸರ ಜತೆ ಸಮಸ್ಯೆಗಳನ್ನು ಕುರಿತು ಚರ್ಚಿಸಿದರು. ಪೊಲಿಟಿಕಲ್ ಸೈನ್ಸ್ ವಿಷಯ  ಪಠ್ಯದ ಒಂದು ಭಾಗ. ಇವರಿಗೆ ಅಲ್ಲಿಗಾಗಲೇ ರಾಜಕೀಯ ಆಸಕ್ತಿ ಚಿಗುರೊಡೆದಿತ್ತು. ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗಿಗಳಾದರು. ಪರಿಣಾಮ ಸಂಘದ ಕಾರ್ಯದರ್ಶಿ  ಸ್ಥಾನಕ್ಕೆ ಸ್ಪರ್ಧಿಸಿ ಗೆದ್ದರು. ಹೀಗಾಗಿ ಸಂಘಟನಾ ಚಾತುರ್ಯದಿಂದಲೂ ಎಲ್ಲರ ಗಮನ ಸೆಳೆದಿದ್ದರು. ಬಹುಶ: ಈ ಹೆಜ್ಜೆ  ಅವರ ಮುಂದಿನ ರಾಜಕೀಯಕ್ಕೆ 'ನಾಂದಿ' ಆಗಿರಲೂಬೇಕು. ಒಳ್ಳೆ ಮಾತುಗಾರಿಕೆ, ಆತ್ಮವಿಶ್ವಾಸದ ನುಡಿ, ಚರ್ಚಾಪಟುತ್ವದ ಗುಣ, ನೆನಪಿನ ಶಕ್ತಿಯಿಂದ ಅಧ್ಯಾಪಕರ, ಮಿತ್ರರ ಮನಸ್ಸನ್ನು ಗೆದ್ದರು.

ಮಹಾರಾಜ   ಕಾಲೇಜಿನಲ್ಲಿ  ಪದವಿ ಶಿಕ್ಷಣ ಪಡೆಯುತ್ತಿರುವಾಗಲೇ ಮುಂದೆ ವಕೀಲರಾಗುವ ಕನಸು ಕಂಡರು. ವಕೀಲರಾದರೆ ನೊಂದ ಜನಕ್ಕೆ ನಿಜವಾದ

ಸೇವೆ ಮಾಡಬಹುದು, ಬಡವರು, ರೈತರ ಬಗ್ಗೆ ಕಾಳಜಿವಹಿಸಬಹುದು ಎಂದು ಯೋಚಿಸಿದರು. ಅಂತೇ ಮಹಾರಾಜ ಕಾಲೇಜಿನಲ್ಲಿ ಪದವಿ ಶಿಕ್ಷಣ ಮುಗಿಸಿ ಊರಿಗೆ ವಾಪಾಸಾದರು.

ಮನೆಯಲ್ಲಿ ಮುಂದೇನು ಮಾಡಬೇಕೆಂದಿರುವೆ? ಎಂಬ ಪ್ರಶ್ನೆ ಇಟ್ಟಾಗಲೂ ತತ್‌ಕ್ಷಣ ಉತ್ತರಿಸದೆ ಮೌನವಾದರು. ಮತ್ತೆ, 'ಓದಿದ್ದು ಸಾಕು ಯಾವುದಾದರೂ ನೌಕರಿ ಸೇರು' ಎಂದರು. ಆದರೆ ಯುವಕ ಸಿದ್ದವೀರಪ್ಪನ ಮನಸ್ಸೆ ಬೇರೆ ಯೋಚಿಸಿತ್ತು. ಮನದೊಳಗಿದ್ದ 'ಲಾಯರ್' ಆಗುವ ಕನಸು, ಆಸೆ ತಂದೆಯಲ್ಲಿ ಹೇಳುವುದು ಹೇಗೆ? ಹೇಳಿದರೆ ಮತ್ತೆ ಅಸಹಾಯಕತೆ ತೋರಿದರೆ? ಮನೆಯ ಆರ್ಥಿಕ ಸ್ಥಿತಿ ಇನ್ನೂ ಉತ್ತಮಸ್ಥಿತಿಗೇನೂ ಬಂದಿಲ್ಲ....' ಯೋಚಿಸಿದರು. ಮನದೊಳಗೆ ಮಂಡಿಗೆ ತಿನ್ನುವ ಬದಲು ಹೇಳುವುದೇ ಉತ್ತಮ ಅನ್ನಿಸಿ, ತನ್ನ ಬಂಧುಗಳ ಮೂಲಕ ಮುಂದಿನ ಕಾನೂನು ಓದಿನ ಪ್ರಸ್ತಾಪ ಇಟ್ಟರು. ತಂದೆ ತಲೆ ಮೇಲೆ ಕೈ ಹೊತ್ತು ಕುಳಿತರು. 'ಏನು 'ಲಾ' ಓದುವುದು ಅಂದ್ರೆ ಅಷ್ಟು ಸುಲಭಾನಾ? ದುಡ್ಡು ಎಲ್ಲಿಂದ ತರಲಿ? ಖರ್ಚು ದುಬಾರಿ ಆಗುತ್ತೆ, ಅದು ಕನಸಿನ ಮಾತೇ ಸರಿ' – ಮನೆಯವರ ಈ ಮಾತು ಕಿವಿಗೆ ಬಿತ್ತು. ಜತೆಗೆ ಆಗ ಇಡೀ ರಾಜ್ಯದಲ್ಲಿ 'ಲಾ' ಓದುವ ಒಂದು ಕಾಲೇಜೂ ಇರಲಿಲ್ಲ. ಮುಂಬೈ, ಪೂನಾ ಇಲ್ಲಾ ಮದ್ರಾಸ್‌ಗೆ ಹೋಗಬೇಕಾಗಿತ್ತು. ಅಷ್ಟುದೂರ ಹೋಗುವುದೆಂದರೆ ಅದು ದುಡ್ಡಿದ್ದವರಿಗೆ ಮಾತ್ರ ಸಾಧ್ಯವಿತ್ತು.

## 'ಲಾ' ಓದಲು ಮದುವೆ!

ತರುಣ ಸಿದ್ದವೀರಪ್ಪ ಆತ್ಮವಿಶ್ವಾಸದಿಂದ 'ದೂರ ಆದರೂ ಚಿಂತೆಯಿಲ್ಲ. ಹೇಗಾದರೂ ಎರಡುವರ್ಷ ದುಡ್ಡಿಗೆ ವ್ಯವಸ್ಥೆ ಮಾಡಿ. ಸಾಲವಾದರೂ ನಾನೇ ವಕೀಲನಾಗಿ ದುಡಿದು ತೀರಿಸುವೆ, ಹೆಚ್ಚು ಖರ್ಚಿಲ್ಲದಂತೆ ಓದು ಮುಗಿಸಿ ಬರುವೆ' ಎಂದು ಹೇಳಿದ್ದು ಬಂಧುಗಳಿಗೂ ಸರಿಯೆನ್ನಿಸಿತು. ಹಿಂದೆ ಓದಿಗೆ ಸಹಾಯ ಮಾಡಿದ್ದ ಬಂಧುಗಳೇ ಕಾನೂನು ಓದಿನ ವ್ಯವಸ್ಥೆಗೂ ಮುಂದೆ ಬಂದರಾದರೂ, ಒಂದು ಸಲಹೆ ಮುಂದಿಟ್ಟರು: 'ಹುಡುಗ ಮೊದಲಿನಿಂದಲೂ ಓದಿನಲ್ಲಿ ಮುಂದಿದ್ದಾನೆ. ನಮ್ಮ ವಂಶದಲ್ಲೇ ಏಕೆ, ಸುತ್ತಮುತ್ತಲ ಊರಿನಲ್ಲೂ 'ಲಾ'ದಂಥ ದೊಡ್ಡ ಓದು ಓದಿದವರು ಇಲ್ಲ, ಹೇಗೂ ಡಿಗ್ರಿ ಮುಗಿಸಿದ್ದಾನೆ... ಮದುವೆ ವಯಸ್ಸು ಆಗಿದೆ. ಹೆಣ್ಣು ಕೊಡೋರು ಸಾಕಷ್ಟು ವಿಚಾರಿಸಿದ್ದಾರೆ, ಯಾವುದಾದರೂ ಶ್ರೀಮಂತರ ಮನೆಯಲ್ಲಿ ಮದುವೆ ಖಾಯಂ ಮಾಡಿಕೊಂಡರೆ ಹೆಣ್ಣಿನ ಕಡೆಯವರೇ 'ಲಾ' ಓದಿಸಲು ಹಣದ ಸಹಾಯ ನೀಡುತ್ತಾರೆ, ಯೋಚಿಸು' ಎಂದು ತಂದೆ ಗುರುಸಿದ್ದಪ್ಪನಿಗೆ ಹೇಳಿದರು. ಇದು ಮೇಲು ನೋಟಕ್ಕೆ ಸಲಹೆ ಅಂದುಕೊಂಡರೂ, ಹೆಣ್ಣಿನ ಕಡೆಯ ಸಂಬಂಧಿಕರೊಬ್ಬರ ದೂರಾಲೋಚನೆಯ ಬೇಡಿಕೆಯೂ ಆಗಿದ್ದಿತು. ಬಂಧುವೊಬ್ಬರು 'ಲಾ' ಓದಿಗೆ ನಿಮ್ಮ ಅಪ್ಪನಬಳಿ ಕಾಸಿಲ್ಲ. ಮದುವೆ ಮಾಡಿಕೊಂಡರೆ ಹೆಣ್ಣಿನಕಡೆಯವರೇ

ಓದಿನ ಖರ್ಚು ನೋಡಿಕೊಳ್ಳುತ್ತಾರೆ ಎಂದು ಸಿದ್ದವೀರಪ್ಪ ಅವರಲ್ಲಿ ವಿಚಾರ ಪ್ರಸ್ತಾಪಿಸಿದರು. ಮೊದಮೊದಲು ಇದು ಆಗದು ಎಂದೇ ತಲೆ ಕೊಡವಿದ್ದವರು. ನಾಲ್ಕಾರು ದಿನಗಳ ನಂತರ ತಂದೆ ಹಾಗೂ ಸ್ನೇಹಿತರ ಬಳಿ ಚರ್ಚಿಸಿ ಆಗಬಹುದು ಎಂದು ಒಪ್ಪಿಗೆ ಸೂಚಿಸಿದರು. ಇದು ಸಂದಿಗ್ಧ ಪರಿಸ್ಥಿತಿಯೂ ಆದ್ದರಿಂದ ಅನಿವಾರ್ಯವಾಗಿ ಒಪ್ಪಲೇಬೇಕಾಯಿತು.

ತಾವು ಲೋಯರ್ ಸೆಕೆಂಡರಿ ಹಾಗೂ ಹೈಯರ್ ಸೆಕೆಂಡರಿಯಲ್ಲಿ ಓದುವಾಗ ಯಾವ ಬಂಧುಗಳ ಊರಿನ ಮನೆಯಿಂದ ದಾವಣಗೆರೆಗೆ ಓಡಾಡಿದ್ದರೋ ಅದೇ ಊರಿನ, ಅದೇ ಮನೆಯ ಹೆಣ್ಣು ಇವರ ಬಾಳಸಂಗಾತಿ ಆಗಲು ಸಿದ್ಧವಿದ್ದುದು ಕಾಕತಾಳೀಯ. ಒಂದರ್ಥದಲ್ಲಿ ಆ ಹೆಣ್ಣು ಪರಿಚಿತ ಮುಖವೇ ಆಗಿದ್ದರಿಂದ ಸಂಪ್ರದಾಯದಂತೆ ಹೆಣ್ಣು ನೋಡುವ ಶಾಸ್ತ್ರವೇನು ನಡೆಯಲಿಲ್ಲ, ದೊಡ್ಡಬಾತಿಯ ಶ್ರೀ ಚಂದ್ರಣ್ಣ ಎಂಬುವರ ಸಹೋದರಿ ಮಹಾದೇವಮ್ಮ ಅವರೊಂದಿಗೆ ಮದುವೆಯೂ ಆಯಿತು. ಆಗಿನ ಕಾಲದಲ್ಲಿ ಚಿಕ್ಕವಯಸ್ಸಿಗೆ ಮದುವೆ ಆಗುತ್ತಿದ್ದುದು ಸಾಮಾನ್ಯ. ಅನಂತರ ದೂರದ ಊರಿಗೆ ಇಲ್ಲಾ ವಿದೇಶಕ್ಕೂ ಹೋಗಿ ಹೆಚ್ಚಿನ ವ್ಯಾಸಂಗ ಮಾಡುತ್ತಿದ್ದುದು ಮತ್ತೂ ಸರ್ವೇಸಾಮಾನ್ಯವಾಗಿತ್ತು. ಇದಕ್ಕೆ ಮಹಾತ್ಮ ಗಾಂಧಿಯವರು ಮದುವೆ ನಂತರ ದಕ್ಷಿಣ ಆಫ್ರಿಕಾಕ್ಕೆ ಹೋಗಿ ಕಾನೂನು ವ್ಯಾಸಂಗ ಮಾಡಿದ್ದ ಉದಾಹರಣೆಯೇ ಕಣ್ಣೆದುರಿದೆ.

## ಪೂನಾ ಫರ್ಗ್ಯೂಸನ್ ಕಾಲೇಜಿನಲ್ಲಿ 'ಲಾ'

ಬಂಧು ಬಳಗ, ಹಿರಿಯರ ಸಮ್ಮುಖದಲ್ಲಿ ಸಿದ್ದವೀರಪ್ಪನವರ ಮದುವೆ ನೆರವೇರಿತು. ಮುಂದೆ ಅವರ ಮಹತ್ವದ ಕನಸು ನನಸಾಗಬೇಕಿತ್ತು. ಅದಕ್ಕಾಗಿ ಮಹಾರಾಷ್ಟ್ರದ ಪೂನಾದಲ್ಲಿದ್ದ ಫರ್ಗ್ಯೂಸನ್ ಕಾನೂನು ಕಾಲೇಜಿಗೆ ಸೇರಲು ಅರ್ಜಿ ಹಾಕಿದರು. ಕರ್ನಾಟಕದ ಬಹುತೇಕ ವಕೀಲರು, ಹಿರಿಯ ಕಾನೂನು ಪರಿಣಿತರು ಈ ಕಾಲೇಜಿನಲ್ಲೆ ಪದವಿ ಪಡೆದು ಬಂದವರಾಗಿದ್ದರು. ಕೆಲವರು ಮದ್ರಾಸ್, ಮುಂಬೈನಲ್ಲೂ ಓದಿದವರಿದ್ದರು. ನಿರೀಕ್ಷೆಯಂತೆ ಅವರಿಗೆ ಪೂನಾ ಕಾಲೇಜಿನಲ್ಲಿ ಸೀಟು ಸಿಕ್ಕಿತು. ಬಾಳ ಸಂಗಾತಿಯನ್ನು ತವರು ಮನೆಯಲ್ಲಿ ಬಿಟ್ಟು ಹಿರಿಯರ ಆಶೀರ್ವಾದ ಪಡೆದು ಪೂನಾಕ್ಕೆ ಹೊರಟರು. ತನ್ನ ಮಾವ ಕಳುಹಿಸುತ್ತಿದ್ದ ಹಣವನ್ನು ದುಂದುವೆಚ್ಚ ಮಾಡದೆ ಅಗತ್ಯಕ್ಕೆ ತಕ್ಕಷ್ಟು ಖರ್ಚು ಮಾಡಿದರು. ಇವರ ಮಾವ ಭಾರೀ ಶ್ರೀಮಂತರೇನಾಗಿರಲಿಲ್ಲ. ಅಳಿಯ ಕಾನೂನು ಓದು ಮುಗಿಸುವರೆಗಿನ ಆರ್ಥಿಕ ಜವಾಬ್ದಾರಿ ಇವರ ಮೇಲಿತ್ತು. ನಾಲ್ಕು ಜನ ಹಿರೀಕರ ಸಮ್ಮುಖದಲ್ಲಿ ತೆಗೆದುಕೊಂಡ ತೀರ್ಮಾನಕ್ಕೆ ಬದ್ಧವಾಗಿದ್ದರು. ಮನೆಯಲ್ಲಿ ತೊಂದರೆ ಆದರೂ ಮಾತು ಕೊಟ್ಟಂತೆ ನಡೆದುಕೊಳ್ಳಬೇಕಾಗಿತ್ತು. ಕೆಲವೊಮ್ಮೆ ಅಳಿಯ ಕೇಳಿದ ಸಾಧಾರಣ ಮೊತ್ತವೂ ತತ್‌ಕ್ಷಣಕ್ಕೆ ದೊರೆಯದಾಗ ಮನೆಯಲ್ಲಿದ್ದ ಬಂಗಾರ ಒತ್ತೆ ಇಟ್ಟು ಹಣ ಕಳುಹಿಸಿದ್ದೂ ಉಂಟು

ಎಂದು ಅವರ ಕುಟುಂಬ ಬಲ್ಲ ಬಂಧುಗಳು ನೆನಪು ಮಾಡಿಕೊಳ್ಳುತ್ತಾರೆ. ಅಳಿಯ ಸಿದ್ದವೀರಪ್ಪ ವಾರಕ್ಕೊಮ್ಮೆಯಾದರೂ ಪತ್ರ ಬರೆದು ಯೋಗಕ್ಷೇಮ ವಿಚಾರಿಸುತ್ತಿದ್ದರು. ಕೆಲವೊಮ್ಮೆ ಕಾಲೇಜು ವಾತಾವರಣದ ಬಗ್ಗೆಯೂ ಪ್ರಸ್ತಾಪಿಸುತ್ತಿದ್ದರು.

ಆಂಗ್ಲರು ಭಾರತದ ಕೆಲವೇ ನಗರಗಳಲ್ಲಿ ಕಾನೂನು ಕಾಲೇಜು ಸ್ಥಾಪಿಸಿದ್ದರು. ಅದರಲ್ಲಿ ಪೂನಾ ಫರ್ಗ್ಯೂಷನ್ ಕಾಲೇಜು ಪ್ರಮುಖವಾದದ್ದು. ಈ ಕಾಲೇಜಿಗೆ ಪ್ರತಿಷ್ಠಿತ ಕಾನೂನುತಜ್ಞರು ಆಗಮಿಸಿ ವಿಶೇಷ ಉಪನ್ಯಾಸ ನೀಡುತ್ತಿದ್ದರು. ಒಮ್ಮೆ ಕಾನೂನು ತಜ್ಞ ಡಾ. ಬಿ.ಆರ್. ಅಂಬೇಡ್ಕರ್ ಆಗಮಿಸಿದ್ದರು. ಅವರೊಂದಿಗೆ ವಿದ್ಯಾರ್ಥಿಗಳು ಚರ್ಚೆಯಲ್ಲಿ ಭಾಗಿಗಳಾಗಿದ್ದರು. ಸಿದ್ದವೀರಪ್ಪನವರಿಗೆ ಅಂಬೇಡ್ಕರ್ ವಿಶೇಷ ಪ್ರಭಾವ ಬೀರಿದರು. ಅವರೊಬ್ಬ ಅದ್ಭುತ ಕಾನೂನು ಪಂಡಿತ. ಅಪಾರ ಓದಿನ ಅನುಭವದಿಂದ ತಮ್ಮದೇ ವಿಚಾರ, ಸಿದ್ಧಾಂತದಿಂದ ಕೆಳವರ್ಗಕ್ಕೆ ಆತ್ಮವಿಶ್ವಾಸ ಮೂಡಿಸಲು ಆಗಲೇ ಪ್ರಯತ್ನಿಸುತ್ತಿದ್ದರು..

## ಡಾ. ಬಿ.ಆರ್. ಅಂಬೇಡ್ಕರ್ ಪ್ರಭಾವ:

ಭಾರತದ ಸ್ವಾತಂತ್ರ್ಯಕ್ಕೆ ಗಾಂಧಿ ಅನುಸರಿಸಿದ ಮಾರ್ಗಕ್ಕೂ ಅಂಬೇಡ್ಕರ್ ಅನುಸರಿಸಿದ ಮಾರ್ಗಕ್ಕೂ ಭಿನ್ನ ಆಯಾಮಗಳಿದ್ದವು. ಗಾಂಧಿ ಒಟ್ಟು ಭಾರತೀಯರ ಕಲ್ಪನೆಯಲ್ಲಿ ಅಹಿಂಸೆ, ಅಸಹಕಾರದಿಂದ ಆಂಗ್ಲರನ್ನು ಓಡಿಸಿ ಸ್ವಾತಂತ್ರ್ಯ ಗಳಿಸಲು ಪಣತೊಟ್ಟವರು. ಆದರೆ ಅಂಬೇಡ್ಕರ್ ಗಾಂಧಿಯಂತೆ ನೇರ ಬೀದಿಗೆ ಇಳಿದು ಹೋರಾಡದೇ ಇರಲು ಕಾರಣ ಬೇರೆಯೇ ಇತ್ತು. ಶತಮಾನದಿಂದ ತಮ್ಮ ಜನಾಂಗಕ್ಕೆ 'ಹಿಂದು ಸಮಾಜ'ದಿಂದ ಆಗುತ್ತಿದ್ದ ಅವಮಾನ, ಶೋಷಣೆ ವಿರುದ್ಧ ಮೊದಲು ನ್ಯಾಯ ಸಲ್ಲಬೇಕು, 'ಅಸ್ಪೃಶ್ಯತೆ'ಯ ಕಳಂಕ ಹೋಗಲಾಡಿಸಬೇಕು. ನಂತರ ಭಾರತದ ಸ್ವಾತಂತ್ರ್ಯ. ಭಾರತದ ಜಾತಿ ಪದ್ಧತಿಯೇ ಎಲ್ಲ ಅನಿಷ್ಟಗಳಿಗೂ ಮೂಲ ಎಂದು ದನಿ ಎತ್ತಿದರು.

"ಹಿಂದೂ ಸಮಾಜ ಅಸಮಾನತೆಯ ತವರು. ಅದು ಏಣಿ ಇಲ್ಲದ, ಪ್ರವೇಶದ್ವಾರವಿಲ್ಲದ, ಅನೇಕ ಮಹಡಿಗಳುಳ್ಳ ಗೋಪುರ. ಒಂದು ಮಹಡಿಯಲ್ಲಿ ಹುಟ್ಟಿದ ಜನ ಅಲ್ಲಿಯೇ ಸತ್ತು ಕೊಳೆಯಬೇಕು. ಅಸ್ಪೃಶ್ಯರು ಶತಮಾನಗಳ ಶೋಷಣೆ, ಬಡತನದಿಂದ ಜಾಗೃತರಾಗುವತನಕ ಈ ನಾಡಿಗೆ ಮುಕ್ತಿಯಿಲ್ಲ. ಭಾರತ ಸ್ವಾತಂತ್ರ್ಯವಾದರೆ ಸಾಲದು; ಧಾರ್ಮಿಕ, ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ವಿಷಯಗಳಲ್ಲಿ ಭರತಖಂಡದಲ್ಲಿ ಹುಟ್ಟಿದವರೆಲ್ಲರೂ ಸಮಾನ ಹಕ್ಕುಳ್ಳವರಾಗಬೇಕು. ಪ್ರತಿಯೊಬ್ಬನೂ ವಿಕಾಸ ಹೊಂದಲು ಅನುಕೂಲವಾಗುವಂತೆ ಸಮಾನ ಅವಕಾಶಗಳನ್ನು ಕಲ್ಪಿಸಬೇಕು".

1920ರಲ್ಲಿ ಇಂಥ ಮಾತು ಬರೆದು ತಮ್ಮ ಚಿಂತನೆ ಯಾವ ಮಾರ್ಗದಲ್ಲಿದೆ, ತಾವು ಯಾರಪರ ಎಂಬುದನ್ನು ಸ್ಪಷ್ಟಪಡಿಸಿದರು. ಹೀಗಾಗಿ ಸ್ವಾತಂತ್ರ್ಯ ಪೂರ್ವದಲ್ಲಿ

ಯುವಕರಲ್ಲಿ ಗೊಂದಲಗಳು ಸೃಷ್ಟಿಯಾದವು. ಅದರಲ್ಲೂ ಕಾನೂನು ವಿದ್ಯಾರ್ಥಿಗಳಿಗೆ 'ಗಾಂಧಿ ಮತ್ತು ಅಂಬೇಡ್ಕರ್' – ಇಬ್ಬರ ಚಿಂತನೆ ಹೋರಾಟಗಳ ಕಲ್ಪನೆ ಅಗತ್ಯವಾಗಿತ್ತು. ಆಯ್ಕೆ ಮಾತ್ರ 'ಅವರವರ ಭಾವಕ್ಕೆ ಅವರರವರ ಭಕುತಿಗೆ ಇರುತಿಹನು ಶಿವಯೋಗಿ' ಎನ್ನುವಂತಾಯಿತು.

ಎಚ್. ಸಿದ್ದವೀರಪ್ಪನವರಿಗೆ ಗಾಂಧೀಜಿ – ಅಂಬೇಡ್ಕರ್ ಸಾರ್ವಜನಿಕ ಬದುಕಿಗೆ ಆದರ್ಶರಾದರು. ಗಾಂಧಿಯನ್ನು ಎಷ್ಟು ಪ್ರಮಾಣದಲ್ಲಿ ಅಳವಡಿಸಿಕೊಳ್ಳಬೇಕು, ಅಂಬೇಡ್ಕರ್ ಅವರನ್ನು ಕಾನೂನು ವ್ಯಾಪ್ತಿಯಲ್ಲಿ ಎಷ್ಟು ಪ್ರಸ್ತುತರನ್ನಾಗಿಸಬೇಕು ಎಂಬ ಜಿಜ್ಞಾಸೆಯಲ್ಲಿ ತೂಗಿದರು.

ಕಾನೂನು ಪರಿಣತಿ ಪಡೆದು ಬೌದ್ಧಿಕ ಆಲೋಚನೆಯಿಂದ ಪೂನಾದ ಫರ್ಗ್ಯೂಷನ್ ಕಾಲೇಜಿನಿಂದ ಊರಿಗೆ ಮರಳಿದರು. ಆಗಿನ ಕಾನೂನು ವಿದ್ಯಾಭ್ಯಾಸ 'ಎಲ್‌ಎಲ್.ಬಿ.' ಎಂದು ಕರೆಯಲ್ಪಟ್ಟಿತ್ತು. ರಜೆ ಕಳೆಯುವುದರಲ್ಲಿ ಫಲಿತಾಂಶವೂ ಹೊರಬಿತ್ತು. ನಿರೀಕ್ಷೆಯಂತೆ ಸಿದ್ದವೀರಪ್ಪನವರು ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದರು. ಹಣ ಕೊಟ್ಟು ಓದಿಸಿದ ಮಾವನಿಗೆ, ಸಾಕಿ ಸಲಹಿದ ಪೋಷಕರಿಗೆ ಸಹಜವಾಗಿ ಸಂತೋಷ ಉಂಟಾಯಿತು. ಬಂಧು ಬಳಗ ತಮ್ಮ ಕುಟುಂಬದಲ್ಲೊಬ್ಬ 'ಲಾಯರ್' ಆಗಿದ್ದಕ್ಕೆ ಖುಷಿಗೊಂಡರು. ಆಗಿನ ಕೌಟುಂಬಿಕ, ಸಾಮಾಜಿಕ ಸಂದರ್ಭವೇ ಆಗಿತ್ತು. ಊರಿಗೊಬ್ಬರು ಇಬ್ಬರು ಪದವಿ ಪಡೆದಿದ್ದರೆ ಅದೇ ಒಂದು ಹೆಮ್ಮೆಯ ಹಾಗೂ ಗೌರವದ ಸ್ಥಾನ. ಅದರಲ್ಲೂ ಡಾಕ್ಟರ್, ಎಂಜಿನಿಯರ್, ಲಾಯರ್ ಅಂದರೆ ವಿಶೇಷ ಮಾನ್ಯತೆ.

## ದಾವಣಗೆರೆಯಲ್ಲಿ ವಕೀಲ ವೃತ್ತಿ

ಮುಂದೇನು? ಇಂಥದ್ದೊಂದು ಪ್ರಶ್ನೆ ಕಾಡಿ, ಸ್ನೇಹಿತರು, ಬಂಧು ಬಳಗ ಕೇಳುವ ಮೊದಲೇ 'ಪೂರ್ವಭಾವಿ ಯೋಚನೆ/ಯೋಜನೆ'ಯಂತೆ ದಾವಣಗೆರೆಯನ್ನು ತಮ್ಮ ಬದುಕು ರೂಪಿಸುವ ಕೇಂದ್ರ ಭಾಗವನ್ನಾಗಿ ಆಯ್ಕೆ ಮಾಡಿಕೊಂಡರು. ಹರಿಹರಕ್ಕಿಂತ ಎಲ್ಲಾ ದೃಷ್ಟಿಯಲ್ಲಿ ಇದು ಬೆಳೆಯುತ್ತಿದ್ದ ತಾಲ್ಲೂಕು ಕೇಂದ್ರವಾಗಿತ್ತು. ಅವರು ಮಾಡಿದ ಮೊದಲ ಕೆಲಸ ನಿಯಮಾನುಸಾರ ವಕೀಲ ವೃತ್ತಿಗೆ ಅಡಿ ಇಡಲು ತಮ್ಮ ಹೆಸರನ್ನು ಬಾರ್ ಕೌನ್ಸಿಲ್‌ನಲ್ಲಿ ನೊಂದಾಯಿಸಿದ್ದು. ನಂತರ ದಾವಣಗೆರೆಯ ಮುಖ್ಯ ಭಾಗ ಗಡಿಯಾರ ಕಂಬದ ಬಳಿ ಕಟ್ಟಡವೊಂದನ್ನು ಬಾಡಿಗೆ ಪಡೆದು **'ಎಚ್. ಸಿದ್ದವೀರಪ್ಪ, ಬಿ.ಎ., ಎಲ್‌ಎಲ್. ಬಿ., ಅಡ್ವೊಕೇಟ್'** ಎಂದು ಬೋರ್ಡು ಹಾಕಿದರು.

ಆಗಲೇ ದಾವಣಗೆರೆ ವ್ಯಾಪಾರ ಕೇಂದ್ರವಾಗಿ ಹೆಸರು ಮಾಡಿತ್ತು. ಜತೆಗೆ ಕೈಗಾರಿಕಾ ಕೇಂದ್ರವಾಗಿ ತನ್ನ ಅಸ್ತಿತ್ವ ಸ್ಥಾಪಿಸಿತ್ತು. ನಿಧಾನಕ್ಕೆ ಶಿಕ್ಷಣ ಕೇಂದ್ರವಾಗಿಯೂ ನೆಲೆ ಕಂಡುಕೊಳ್ಳುತ್ತಿತ್ತು. ಪ್ರೌಢ ಹಾಗೂ ವಿವಿಧ ಕಾಲೇಜುಗಳ ಶಿಕ್ಷಣ – ಮುಖ್ಯವಾಗಿ ವೃತ್ತಿ ಶಿಕ್ಷಣ ಪಡೆಯಲು ದೂರದ ಊರುಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು.

ನೂರಾರು ಗ್ರಾಮಗಳ ರೈತರು ತಾವು ಬೆಳೆದ ಫಸಲನ್ನು ಇಲ್ಲಿಗೇ ತಂದು ಮಾರಾಟ ಮಾಡುತ್ತಿದ್ದರು. ಈ ವ್ಯಾಪಾರಕ್ಕೆ ಒಬ್ಬ ಮಧ್ಯವರ್ತಿ ಇರುತ್ತಿದ್ದ. ಇವರನ್ನು 'ದಲ್ಲಾಳರು' ಎಂದು ಕರೆದರು. 'ಮರ್ಚೆಂಟ್ಸ್ ಅಂಡ್ ಕಮೀಷನ್ ಏಜಂಟ್' ಎಂದೂ ಆಧುನಿಕ ರೂಪದಲ್ಲಿ ನೂರಾರು ವಹಿವಾಟುದಾರರು ಹುಟ್ಟಿದ್ದರು. ಇವರು ರಾಜ್ಯ ಅಷ್ಟೇ ಅಲ್ಲ ಅಂತಾರಾಜ್ಯ ವಹಿವಾಟನ್ನೂ ನಿಭಾಯಿಸುತ್ತಿದ್ದರು. ದಾವಣಗೆರೆಯ ನೂರಾರು ಕಿ.ಮೀ. ವ್ಯಾಪ್ತಿಯಲ್ಲಿ ರೈತರು ರಾಗಿ, ಜೋಳ, ಹತ್ತಿ, ಮೆಣಸಿನಕಾಯಿ, ಶೇಂಗಾ ಅರ್ಥಾತ್ ಕಡಲೇಕಾಯಿಯನ್ನು ಪ್ರಮುಖ ಬೆಳೆಯಾಗಿ ಬೆಳೆಯುತ್ತಿದ್ದರು.

ಈ ಮೊದಲೇ ಪ್ರಸ್ತಾಪಿಸಿದಂತೆ ದಾವಣಗೆರೆ ರಾಜ್ಯ ಭೂಪಟದ ಮಧ್ಯಭಾಗದಲ್ಲಿರುವ ಕೇಂದ್ರ. ಸಾರಿಗೆ ಮತ್ತಿತರ ಸೌಲಭ್ಯದಿಂದ ರಾಜ್ಯದ ಇತರೆ ಜಲ್ಲೆ ಹಾಗೂ ರಾಜ್ಯಗಳಿಗೂ ಕೊಂಡಿಯಾಗಿತ್ತು. ರಾಷ್ಟ್ರೀಯ ಹೆದ್ದಾರಿ – 4, ಪುಣೆ, ಬಾಂಬೆ, ಕೊಲ್ಲಾಪುರ, ಗೋವಾದ ಒಂದು ಮಾರ್ಗವಾದರೆ; ಬೆಂಗಳೂರು, ಮದ್ರಾಸ್, ಹೈದರಾಬಾದ್ ಇನ್ನೊಂದು ದಿಕ್ಕಿಗೆ ಸಂಪರ್ಕ ಸೇತುವಾಗಿತ್ತು. ಇದರ ಜತೆಗೆ ಮುಖ್ಯವಾಗಿ ಭಾರತೀಯ ರೈಲ್ವೆಯ ಮುಖ್ಯಭಾಗ ದಾವಣಗೆರೆ ನಗರದ ಮಧ್ಯಭಾಗದಲ್ಲಿ ಹಾದು ಹೋಗಿತ್ತು. ಅದೊಂದು ಪ್ರಮುಖ ನಿಲ್ದಾಣವೂ ಹೌದು. ಜಿಲ್ಲೆ, ರಾಜ್ಯಗಳನ್ನು ಸಂಪರ್ಕಿಸುವ ಕೇಂದ್ರವಾದರೂ, ಐತಿಹಾಸಿಕವಾಗಿ ಪ್ರಸಿದ್ಧವಾಗಿದ್ದ 'ಚಿತ್ರದುರ್ಗ' ಇದರ ಜಿಲ್ಲಾ ಕೇಂದ್ರವಾಗಿತ್ತು. ಸಹಜವಾಗಿ ಜಿಲ್ಲಾ ಆಡಳಿತ ಇಲ್ಲಿಂದಲೇ ನಡೆಯುತ್ತಿತ್ತು. ಜಿಲ್ಲಾಧಿಕಾರಿ ಕಛೇರಿ, ಜಿಲ್ಲಾ ಕೋರ್ಟು, ಜಿಲ್ಲಾ ಪೋಲೀಸ್ ಮುಖ್ಯರು – ಎಲ್ಲ ಚಿತ್ರದುರ್ಗದಲ್ಲಿದ್ದರೂ, ದಾವಣಗೆರೆ ಎರಡನೇ ಸ್ಥಾನ ಪಡೆದಿತ್ತು. ಆದರೆ ಒಟ್ಟು ವಹಿವಾಟಿನಲ್ಲಿ ದಾವಣಗೆರೆಯೇ ಮೊದಲ ಸ್ಥಾನದಲ್ಲಿತ್ತು.

ಹೀಗಾಗಿ ಸಹಜವಾಗಿ ದಾವಣಗೆರೆ ದುಡಿವ ವರ್ಗದ ಕೇಂದ್ರ ಅನ್ನಿಸಿತು. ರೈತರು, ಕಾರ್ಮಿಕರು, ವ್ಯಾಪಾರಿಗಳ ಪ್ರಮುಖ ತಾಣ ಹಾಗೂ ವಹಿವಾಟಿನಸ್ಥಾನ ಇದಾದ್ದರಿಂದ 'ವಕೀಲವೃತ್ತಿ'ಗೆ ಹೇಳಿ ಮಾಡಿಸಿದ ಸ್ಥಳ ಇದು ಎಂದು ಗುರ್ತಿಸಿಕೊಂಡರು. ತರುಣ ಸಿದ್ದವೀರಪ್ಪ ಉತ್ಸಾಹ ಹುಮ್ಮಸ್ಸಿನಿಂದ ವಕೀಲವೃತ್ತಿ ಆರಂಭಿಸಿದರು. ವಕೀಲ ವೃತ್ತಿಗೆ ಬೇಕಿದ್ದ ಬಂಡವಾಳ ಅವರಲ್ಲಿತ್ತು. ಒಳ್ಳೆ ಮಾತುಗಾರರು. ವಿರೋಧಿ ವ್ಯಕ್ತಿಗಳನ್ನು ಮಾತಿನ ವರಸೆಯಿಂದ ಸೋಲಿಸುವ ರೀತಿ ವೃತ್ತಿಗೆ ಹೇಳಿಮಾಡಿಸಿದಂತಿತ್ತು. ಸಂಘಟನೆಯಲ್ಲೂ ಇವರದ್ದು ಮೊದಲ ಹೆಜ್ಜೆ. ಹರಿಹರ, ದಾವಣಗೆರೆ, ಜಗಳೂರು, ಮೊಳಕಾಲ್ಮೂರು, ಹೊಳಲ್ಕೆರೆ ಹಾಗೂ ಚಿತ್ರದುರ್ಗದ ರೈತರು, ಕಾರ್ಮಿಕರು ಇತರೆ ವರ್ಗ ಇವರ ಕಕ್ಷೀದಾರರು. ಹರಿಹರ – ದಾವಣಗೆರೆಯ ಹಲವು ಜನ 'ನಮ್ ಲಾಯರ್ರು ಸಿದ್ವೀರಪ್ನೋರು' ಎಂದು ಹೆಮ್ಮೆಯಿಂದ ಹೇಳಿಕೊಳ್ಳತೊಡಗಿದರೆ, ಇನ್ನೂ ಕೆಲವರು 'ನಮ್ ಲಾಯರ್ ಸಿದ್ವೀರಪ್ಪ ಸಾಹೇಬ್ರು ಕೇಸ್ ಗೆಲ್ಲಿಸಿಕೊಟ್ಟ ಪುಣ್ಯಾತ್ಮ' ಎಂದು ಮೌಖಿಕ ಪ್ರಚಾರ ಮಾಡತೊಡಗಿದರು.

ಆದರೆ ಸೋತ ಎದುರಾಳಿ ಇವರ ಬಗ್ಗೆ, ಕೇಸು ಗೆದ್ದವನ ಬಗ್ಗೆ ಹಗೆತನ, ದ್ವೇಷ ಸಾಧಿಸಿದ್ದೂ ಉಂಟು. ಪ್ರತಿಷ್ಠೆ, ಹುಂಬತನದಿಂದಾಗಿ ಸೋಲಿನ ಕಿಡಿಯನ್ನು ಮತ್ತೆ ಮೆರೆದವರೂ ಇದ್ದರು. ಅವರುಗಳ ಹುಲ್ಲಿನ ಬಣವೆಗಳಿಗೆ ಬೆಂಕಿ ಇಟ್ಟೋ ಇಲ್ಲಾ ಊರಿನ ಶುಭಕಾರ್ಯಗಳಲ್ಲಿ ಕಾಲು ಕೆದರಿ ಜಗಳ ಕಾಯುವುದರಲ್ಲೊ ತೃಪ್ತಿ ಪಟ್ಟುಕೊಳ್ಳುತ್ತಿದ್ದರು. ಇನ್ನೂ ಕೆಲವರು ದನಕರುಗಳನ್ನು ತಮ್ಮ ಸೇಡಿಗೆ ಬಳಸಿಕೊಳ್ಳುತ್ತಿದ್ದರು.

ಸಿದ್ದವೀರಪ್ಪನವರಿಗೆ ಸಿವಿಲ್ ವ್ಯಾಜ್ಯಗಳಿಗಿಂತ 'ಕ್ರಿಮಿನಲ್ ವ್ಯಾಜ್ಯ'ದಲ್ಲೇ ಆಸಕ್ತಿ ಹೆಚ್ಚಿತ್ತು. ಅಂಥ ಪ್ರಕರಣಗಳೇ ಇವರನ್ನು ಹುಡುಕಿ ಬರುತ್ತಿದ್ದವು. ಅಪರಾಧಕ್ಕೆ ಸಂಬಂಧಿಸಿದ ಕೇಸ್‌ಗಳು ಇವರ ಬಳಿ ಬಂತೆಂದರೆ ಎದುರು ಪಾರ್ಟಿ ವಕೀಲ, ಅವನ ಕಕ್ಷೀದಾರರು ತತ್ತರಗೊಳ್ಳುತ್ತಿದ್ದರು. ಸಿದ್ದವೀರಪ್ಪನವರು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಕೋರ್ಟ್ ಹಾಲ್‌ನಲ್ಲಿ ಪ್ರತಿವಾದ ಮಂಡಿಸುತ್ತಾರೆಂದರೆ ಅಂದು ಈ ದೃಶ್ಯ ಸವಿಯಲು ಜನ ಜಮಾಯಿಸುತ್ತಿದ್ದರು. 'ಕ್ರಿಮಿನಲ್ ಲಾಯರ್' ಎಂದೇ ಅವರು ಖ್ಯಾತಿ ಗಳಿಸಿದ್ದರು ಎಂದು ದಾವಣಗೆರೆ, ಚಿತ್ರದುರ್ಗದ ಕೆಲವು ಹಿರಿಯ ವಕೀಲರು ನೆನೆಪಿಸಿಕೊಳ್ಳುತ್ತಾರೆ.

## ರೈತರ ಸಮಸ್ಯೆಗಳತ್ತ ಗಮನ

ಒಂದೆರಡು ವರ್ಷದಲ್ಲೇ ಸಿದ್ದವೀರಪ್ಪನವರು ಜನಪ್ರಿಯ ವಕೀಲರಾದರು. ತಮ್ಮ ಹಳ್ಳಿಗಳ ರೈತರು ಕಷ್ಟಪಡುವುದು, ಶೋಷಣೆಗೆ ಒಳಗಾಗುವುದನ್ನು ಕಣ್ಣಾರೆ ಕಂಡರು. ದಾವಣಗೆರೆ – ಹರಿಹರ ತಾಲ್ಲೂಕಿನ ರೈತರು ಹೆಚ್ಚಿನ ಸಂಪರ್ಕಕ್ಕೆ ಬಂದಿದ್ದರು. ರೈತರ ಪರ ಅಥವಾ ವಿರುದ್ಧ ಕೇಸು ಇರಲಿ ಇಲ್ಲದಿರಲಿ ಅವರೊಂದಿಗೆ ಸಹಜವಾಗಿ ಬೆರೆತರು. ಅವರ ಊರುಗಳ ಹಬ್ಬ ಹರಿದಿನಗಳಲ್ಲಿ ಪಾಲ್ಗೊಂಡರು. ಇವೆರಡು ತಾಲ್ಲೂಕಿನ ರೈತರು ಕಾರ್ಮಿಕರು ಎಷ್ಟು ಹತ್ತಿರವಾದರೋ ಹಾಗೇ ಜಿಲ್ಲೆಯ ಉಳಿದ ತಾಲ್ಲೂಕಿನ ರೈತರು ಇವರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದರು. ದ್ವೇಷ, ಅಸೂಯೆ ತೊರೆದು ಸಹನೆ, ಪ್ರೀತಿ, ವಿಶ್ವಾಸದಿಂದ ಹಾಗೂ ಪರಸ್ಪರ ಸಹಕಾರದಿಂದ ಬಾಳಲು ರೈತರನ್ನುದ್ದೇಶಿಸಿ ಹೇಳಿದರು. ತಾವೊಬ್ಬ ಕ್ರಿಮಿನಲ್ ಲಾಯರ್ ಎಂದು ಹೆಸರಾಗಿದ್ದರೂ ಹಳ್ಳಿಗಳು ದ್ವೇಷ, ದಳ್ಳುರಿಗೆ ಸಿಲುಕಿ ಹಾಳಾಗುವುದು ಬೇಡ ಎಂದರಿತು ನಿಜವಾದ ಕಷ್ಟಗಳೇನು? ಎಂದು ಹುಡುಕತೊಡಗಿದರು.

ರೈತ ಕಷ್ಟಪಟ್ಟು ಬೆಳೆದ ಬೆಳೆಗೆ, ದವಸ ಧಾನ್ಯಕ್ಕೆ ನ್ಯಾಯಯುತ ಬೆಲೆ ಸಿಕ್ಕದೆ ತೊಳಲಾಡುವುದು ಒಂದುಕಡೆಯಾದರೆ, ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲದ್ದು ಹಾಗೂ ಅವರನ್ನು ದಲ್ಲಾಳರು, ಮಂಡಿ ವರ್ತಕರು ಸುಲಿಯುತ್ತಿರುವ ರೀತಿ.... ಶೋಷಣೆಗೆ ಸಿಲುಕಿದ ಪರಿ.... ಎಲ್ಲವನ್ನೂ ಅನೇಕ ವರ್ಷಗಳಿಂದ ನೋಡುತ್ತಾ ಬಂದಿದ್ದರು. ಮೂಲತಃ ತಾವು ಬಂದ ಹಿನ್ನೆಲೆಯನ್ನು ನೆನೆದು ರೈತರ ಕಷ್ಟಕ್ಕೆ

ಸ್ಪಂದಿಸಲು ಇಚ್ಛಿಸಿದ್ದರು. ಮನೆಯಲ್ಲಿನ ದುಡ್ಡಿನ ತೊಂದರೆಗೆ ಸಿಲುಕಿ ಮಾಧ್ಯಮಿಕ ಶಾಲೆ ಬಿಟ್ಟು ದನಕರು ಕಾದದ್ದು, ಹೊಲದಲ್ಲಿ ಹುಲ್ಲು ಕಿತ್ತಿದ್ದು, ವ್ಯವಸಾಯ ಕೆಲಸದಲ್ಲಿ ತೊಡಗಿದ್ದು ಯಾವುದನ್ನೂ ಮರೆತಿರಲಿಲ್ಲ. ತನ್ನ ತಂದೆ ಹಿಂದೆ ಪಡುತ್ತಿದ್ದ ಕಷ್ಟ ನೆನೆದು ಖಿನ್ನರಾಗುತ್ತಿದ್ದರು.

ವಕೀಲರಾಗಿ ರೈತರ ಕಷ್ಟಸುಖ ಹತ್ತಿರದಿಂದ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಸಿದ್ದವೀರಪ್ಪನವರು ಸಾರ್ವಜನಿಕ ಕುಂದುಕೊರತೆಗಳತ್ತ ಮನಸ್ಸು ತಿರುಗಿಸಿದರು. ಪರಿಣಾಮ ಒಂದು ಚಳವಳಿಯನ್ನೇ ಕೈಗೆತ್ತಿಕೊಂಡರು. ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ರೈತರು ತಾವು ಬೆಳೆದ ದವಸಧಾನ್ಯದ ಸರಕನ್ನು ದಲ್ಲಾಳರ ಮೂಲಕ ಮಾರಾಟ ಮಾಡಬೇಕಾಗಿತ್ತು. ಹೀಗೆ ತಂದಾಗ ರೈತರಿಂದ ಧರ್ಮ, ಪಕ್ಕಿ, ತಳಗಾಯಿ ಎಂದು ಪಾಲು ಪಡೆಯುತ್ತಿದ್ದರು. ಇಂಥಹ ನ್ಯಾಯಸಮ್ಮತವಲ್ಲದ ಸಂಗತಿಗಳನ್ನು ಕಣ್ಣಾರೆ ಕಂಡರು. ಹೆಚ್ಚುವರಿ ಕಮೀಷನ್, ರೈತರಿಗೆ ಕೈಗಡ – ಮುಂಗಡವಾಗಿ ನೀಡಿದ ಹಣಕ್ಕೆ ದುಬಾರಿ ಬಡ್ಡಿಯನ್ನು ವಸೂಲಿ ಮಾಡುವುದನ್ನು ಕಂಡು ರೈತರಿಗೆ ಆಗತಕ್ಕ ಅನ್ಯಾಯವನ್ನು ತಡೆಗಟ್ಟುವ ಉದ್ದೇಶದಿಂದ ಅವರ ಹೆಸರಲ್ಲಿ **"ರೈತರ ಫಸಲುಗಳ ಮಾರಾಟದ ಸಹಕಾರ ಸಂಘ"** ಎಂಬ ಒಂದು ಸಹಕಾರ ಸಂಘವನ್ನು ಸ್ಥಾಪಿಸಿದರು. ಮಾರುಕಟ್ಟೆಯಲ್ಲಿ ಕಮೀಷನ್ ಏಜೆನ್ಸಿಯ ಒಂದು ಅಂಗಡಿಯನ್ನು ತೆರೆದು ಆ ಮೂಲಕ ರೈತರಿಂದ ಬಂದ ಮಾಲನ್ನು ಮಾರಾಟ ಮಾಡತಕ್ಕ ಕೆಲಸವನ್ನು ಕೈಗೆತ್ತಿಕೊಂಡರು.

ಅದಕ್ಕೆ 1952ರವರೆಗೂ ಅಧ್ಯಕ್ಷರಾಗುವ ಮೂಲಕ ರೈತರಿಂದ ವಸೂಲಿ ಮಾಡುತ್ತಿದ್ದ ತಳಗಾಯಿ, ಕಮೀಷನ್, ಅಧಿಕ ಬಡ್ಡಿ ಇನ್ನಿತರ ಅನ್ಯಾಯಗಳಿಗೆ ಹೋರಾಟದ ಮೂಲಕ ಪರಿಹಾರ ಕಂಡುಕೊಂಡರು. ಅನ್ಯಾಯ ಆದರೂ ಮೌನವಾಗೇ ಸಹಿಸಿಕೊಂಡಿದ್ದ ರೈತರಲ್ಲಿ ಆತ್ಮವಿಶ್ವಾಸ ತುಂಬಿದವರು ಶ್ರೀ ಎಚ್. ಸಿದ್ದವೀರಪ್ಪನವರು ಎಂದು ದಾವಣಗೆರೆಯ ಹಿರಿಯ ವಕೀಲ ಶ್ರೀ ಆರ್.ಜಿ. ಸಿದ್ದಪ್ಪನವರು ಪತ್ರದ ಮೂಲಕ ನೆನಪು ಮಾಡಿಕೊಂಡಿದ್ದಾರೆ.

[**'1952'** – ಎಚ್. ಸಿದ್ದವೀರಪ್ಪನವರು ರೈತರ ಕಷ್ಟಕ್ಕಾಗಿ ಸ್ಥಾಪಿಸಿದ ಸಹಕಾರ ಸಂಘದ ಅಧ್ಯಕ್ಷ ಸ್ಥಾನ ತೊರೆಯುವುದು ಅನಿವಾರ್ಯವಾಗಿತ್ತು. ಅದೊಂದು ಅವರ ಸಾರ್ವಜನಿಕ ಹಾಗೂ ರಾಜಕೀಯ ಬದುಕಿನಲ್ಲಿ ಮಹತ್ವದ ತಿರುವಿನ ಕಾಲ. ಭಾರತದ ಸ್ವಾತಂತ್ರ್ಯಾನಂತರದ ಪ್ರಥಮ ಸಾರ್ವಜನಿಕ ಪ್ರಜಾಸತ್ತಾತ್ಮಕ ಚುನಾವಣೆಯಲ್ಲಿ ಅವರು ಹರಿಹರ ಕ್ಷೇತ್ರದಿಂದ ಸ್ಪರ್ಧಿಸಿ ಜಯಭೇರಿ ಗಳಿಸಿದರು.]

## ಚಿತ್ರದುರ್ಗ ಜಿಲ್ಲಾ ಬೋರ್ಡ್ ಚುನಾವಣೆಯತ್ತ ಮುಖ

ಈ ನಡುವೆ 1943ರಲ್ಲಿ ಚಿತ್ರದುರ್ಗ ಜಿಲ್ಲಾ ಬೋರ್ಡ್ ಚುನಾವಣೆ ನಡೆಯಿತು. ಸಿದ್ದವೀರಪ್ಪನವರು ಒಂದು ಪ್ರಯತ್ನ ಮಾಡಬಾರದೇಕೆ ಎಂದು ಯೋಚಿಸಿ ಚುನಾವಣೆಗೆ

ಸ್ಪರ್ಧಿಸಲು ನಿರ್ಧರಿಸಿದರು. ಆಗ ಕಾಂಗ್ರೆಸ್ ಪಕ್ಷ ಹಾಗೂ ಸ್ವತಂತ್ರ ಅಭ್ಯರ್ಥಿಗಳ ನಡುವೆ ನೇರ ಸ್ಪರ್ಧೆ. ಕುಂಬಳೂರಿನ ಫಕೀರಪ್ಪ ಎಂಬುವರು ಕಾಂಗ್ರೆಸ್ ಪಕ್ಷದ ಹುರಿಯಾಳು. ಹರಿಹರ ತಾಲ್ಲೂಕಿನ ಮತ ಕ್ಷೇತ್ರದಿಂದ ಸಿದ್ದವೀರಪ್ಪನವರು ಸ್ವತಂತ್ರ ಅಭ್ಯರ್ಥಿ. ಇವರಿಗೆ ಮತ್ತೊಬ್ಬ ವಕೀಲ ಹಾಗೂ ತಮ್ಮದೇ ಕೋಮಿನ ಬಲಾಢ್ಯ ಶ್ರೀ ಕೊಂಡಜ್ಜಿ ಬಸಪ್ಪ ಪ್ರತಿಸ್ಪರ್ಧಿಯಾದರು. ಶ್ರೀ ಬಸಪ್ಪನವರಿಗೆ ಮಾವ ಕಂದಗಲ್ಲು ಗೌಡ್ರ ಚನ್ನಬಸಪ್ಪ ಗಾಡ್‌ಫಾದರ್! ಆದರೆ ಸಿದ್ದವೀರಪ್ಪ ತಮ್ಮ ಜನಪ್ರಿಯತೆಯನ್ನೆ ಮಾನದಂಡವಾಗಿಸಿ ಕಣಕ್ಕಿಳಿದಿದ್ದರು.

ಕೊಂಡಜ್ಜಿ ಬಸಪ್ಪ ಹಾಗೂ ಎಚ್. ಸಿದ್ದವೀರಪ್ಪ ಜಿಲ್ಲೆಯ ಪ್ರಬಲ ಸಾಧು ಲಿಂಗಾಯಿತ ಕೋಮಿಗೆ ಸೇರಿದ ಧುರೀಣರು. ಇಬ್ಬರ ಸ್ಪರ್ಧೆ ಅದೇ ಜಾತಿಯ ಮತದಾರರಿಗೆ ಗೊಂದಲ ಸೃಷ್ಟಿಸಿತು. ಇಬ್ಬರೂ ಸಿರಿಗೆರೆ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಶಿಷ್ಯರು ಅರ್ಥಾತ್ ಭಕ್ತರು. ಇಬ್ಬರೂ ಮಠಕ್ಕೆ ಬೇಕಾದವರೇ. ಯಾರನ್ನ ಆಶೀರ್ವದಿಸುವುದು? ಯಾರನ್ನ ತಿರಸ್ಕರಿಸುವುದು? ಸ್ವಾಮಿಗಳಿಗೂ ಗೊಂದಲ. ರಾಜಕೀಯದಿಂದ ಮಠಗಳು ದೂರ ಇರಬೇಕು ಎಂಬ ಮಾತಿಗೆ ಸಿರಿಗೆರೆ ಮಠ ಯಾವತ್ತೂ ಅಪವಾದವಾಗಿತ್ತು. ಶ್ರೀ ಶಿವಕುಮಾರ ಸ್ವಾಮಿಗಳು ರಾಜಕೀಯದ ಬಗ್ಗೆ ನೇರಾನೇರಾ. ಮುಚ್ಚುಮರೆ ಇಲ್ಲದೆ ಇಂಥವರನ್ನು ಬೆಂಬಲಿಸಿ, ಅಂಥವರನ್ನು ಸೋಲಿಸಿ ಎಂದೇ ಮಠದ ಭಕ್ತರಿಗೆ ಕರೆಕೊಡುತ್ತಿದ್ದರು. ಇದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಅವರ ಬದುಕು, ನಡೆನುಡಿ ಎಲ್ಲವೂ ತೆರೆದ ಪುಸ್ತಕ. ಪಾರದರ್ಶಕ. ನೇರ, ನಿಷ್ಠುರ ಮಾತಿನ ಅಪ್ಪಟ ಕಾಯಕಜೀವಿ. ಕೆಲವು ಸಂದಿಗ್ಧ ಸಂದರ್ಭದಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳು ತಟಸ್ಥ ಧೋರಣೆ ತಾಳಿದ್ದೂ ಉಂಟು. ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಅವರು ತಟಸ್ಥರಾದರೆ? ಈ ಪ್ರಶ್ನೆಗೆ ಮುಂದೆ ಫಲಿತಾಂಶವೆ ಉತ್ತರವಾಯಿತೆ?

ಸಿರಿಗೆರೆ ಹಿರಿಯ ಜಗದ್ಗುರುಗಳ ಆಶೀರ್ವಾದ ಇದ್ದರೆ ಚುನಾವಣೆಯಲ್ಲಿ ಗೆದ್ದೇ ಗೆಲ್ಲುತ್ತೇವೆ ಎಂಬ ಆತ್ಮವಿಶ್ವಾಸ ಕೆಲವು ಅಭ್ಯರ್ಥಿಗಳಲ್ಲಿ. ಅದು ನಿಜವಾಗಿರುವ ಉದಾಹರಣೆಗಳೂ ಇದ್ದವು.

ಆಗಿನ ಚುನಾವಣೆ ನಿಯಮಗಳೇ ವಿಚಿತ್ರವಾಗಿದ್ದವು. ಕನಿಷ್ಟ ಹದಿನೈದು ರೂಪಾಯಿಗಳಷ್ಟಾದರೂ ಭೂಕಂದಾಯ ಕೊಡುವವರು ಮಾತ್ರ ಮತದಾನದ ಹಕ್ಕುಳ್ಳವರಾಗಿದ್ದರು. ಒಬ್ಬ ಮತದಾರ ಎರಡು ಮತ ಚಲಾಯಿಸಬಹುದಾದ ಹಕ್ಕು ಇತ್ತಂತೆ!

ಸಿದ್ದವೀರಪ್ಪನವರಿಗೆ ಜಿಲ್ಲಾ ಬೋರ್ಡ್ ಚುನಾವಣೆ ಸತ್ತ್ವಪರೀಕ್ಷೆ ಒಡ್ಡಿತು. ದಾವಣಗೆರೆ, ಹರಿಹರ ತಾಲ್ಲೂಕಿನಲ್ಲೇನೋ ಇವರು ಜನಪ್ರಿಯರು. ಚಿತ್ರದುರ್ಗ

ಜಿಲ್ಲಾ ಕೋರ್ಟ್‌ನಲ್ಲಿ ಹಲವು ಮೊಕದ್ದಮೆಗಳಲ್ಲಿ ಜಯಗಳಿಸಿ ಹೆಸರು ಮಾಡಿದ್ದರು. ಇತರ ತಾಲ್ಲೂಕುಗಳಲ್ಲು ರೈತಪರ ಕೆಲಸ ಮಾಡಿದ ವಕೀಲರು ಎಂದು ಹೆಸರು ಓಡಾಡಿತು. ನೇರ ರಾಜಕೀಯಕ್ಕೆ ಇಳಿದು ಜನಸೇವೆ ಮಾಡಲು ಮನಸ್ಸು ಮಾಡಿದ್ದರ ಪರಿಣಾಮವೇ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಅಭ್ಯರ್ಥಿಯಾದದ್ದು.

ಚುನಾವಣೆ ಪ್ರಚಾರ, ಭರಾಟೆ ಎಲ್ಲಾ ಮುಗಿದು ಮತದಾನವೂ ನಡೆಯಿತು. ಫಲಿತಾಂಶ ಹೊರಬಿತ್ತು. ದಾವಣಗೆರೆ ಹಾಗೂ ಹರಿಹರ – ಎರಡೂಕಡೆ ಕಾಂಗ್ರೆಸ್ ಅಭ್ಯರ್ಥಿಗಳೇ ಗೆದ್ದರು. ಸ್ವತಂತ್ರ ಹುರಿಯಾಳು ಸಿದ್ದವೀರಪ್ಪ – ಕೊಂಡಜ್ಜಿ ಬಸಪ್ಪ ಇಬ್ಬರೂ ಸೋತರು. ಒಂದೇ ಬಲಿಷ್ಠಕೋಮಿನ ಇಬ್ಬರ ಜಗಳ ಮೂರನೆಯವರಿಗೆ ಲಾಭವಾಯಿತು. ಆದರೆ ಹೆಚ್ಚು ಚಿಂತಾಕ್ರಾಂತರಾದವರು ಕೊಂಡಜ್ಜಿ ಅವರ ಮಾವ ಚನ್ನಬಸಪ್ಪ ಅವರು! ಏಕೆಂದರೆ ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ಅವರು ತೆಗೆದುಕೊಂಡಿದ್ದರು.

ಕೊಂಡಜ್ಜಿ ಅವರ ಸೋಲಿನಿಂದ ಮಾವ ಚನ್ನಬಸಪ್ಪ ತತ್ತರಿಸಿ ಹೋದರು. ಅವರು ನಿರಾಶರಾಗಿ ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಸ್ಥಳೀಯ ಸಂಸ್ಥೆಗಳ ಕಾನೂನು ತಿರುವಿಹಾಕಿದರು. ಅದರಲ್ಲಿನ ಒಂದು ಕಲಮಿನ ಪ್ರಕಾರ ಗೆದ್ದ ಅಭ್ಯರ್ಥಿ ಯಾವುದೇ ಕಾರಣದಿಂದ ರಾಜೀನಾಮೆ ಕೊಟ್ಟಾಗ ಸೋತ ಹುರಿಯಾಳುಗಳಲ್ಲಿ ಹೆಚ್ಚು ಮತ ಪಡೆದಿರುವಾತ ಸದಸ್ಯನಾಗಲು ಅವಕಾಶ ಇತ್ತು. ಅವರಿಗೆ ಬೇಕಾಗಿದ್ದೂ ಅದೇ. ಮನದಲ್ಲಿ ಆಶಾಕಿರಣ ಮೂಡಿತು. ಕೂಡಲೇ ಅವರು ಕಾರ್ಯಪ್ರವೃತ್ತರಾದರು. ಪ್ರಮುಖ ಹಿತೈಷಿಗಳೊಂದಿಗೆ ಗೆದ್ದ ಕುಂಬಳೂರು ಫಕೀರಪ್ಪನವರನ್ನು ಭೇಟಿ ಮಾಡಿದರು. ಅಳಿಯನ ರಾಜಕೀಯ ಭವಿಷ್ಯದ ಬಗ್ಗೆ ಎಷ್ಟೆಲ್ಲ ಮನವರಿಕೆ ಮಾಡಿಕೊಟ್ಟು, ಮನ ಒಲಿಸಿ ರಾಜೀನಾಮೆ ಕೊಡಿಸುವಲ್ಲಿ ಯಶಸ್ವಿಯಾದರು. ಕಡಿಮೆ ಅಂತರದಿಂದ ಸೋತಿದ್ದ ಕೊಂಡಜ್ಜಿ ಬಸಪ್ಪ ಚಿತ್ರದುರ್ಗ ಜಿಲ್ಲಾ ಬೋರ್ಡ್ ಸದಸ್ಯರಾಗಿಬಿಟ್ಟರು!

ಆದರೆ ಕೊಂಡಜ್ಜಿ ಅವರ ಮಾವ ಇಷ್ಟಕ್ಕೆ ತೃಪ್ತರಾಗಲಿಲ್ಲ. ಜಿಲ್ಲಾ ಬೋರ್ಡ್ ಅಧ್ಯಕ್ಷರನ್ನಾಗಿ ಮಾಡಬೇಕು ಎಂದು ಪಣತೊಟ್ಟರು. ಇದು ಅಷ್ಟು ಸುಲಭದ ಕೆಲಸ ಆಗಿರಲಿಲ್ಲ. ಆಯ್ಕೆಯಾದವರಲ್ಲಿ ಕಾಂಗ್ರೆಸ್ ಹಾಗೂ ಸ್ವತಂತ್ರ ಸದಸ್ಯರೂ ಇದ್ದರು. ಅವರೆಲ್ಲರ ಮನವೊಲಿಸಿ ಅವಿರೋಧವಾಗಿ ಅಧ್ಯಕ್ಷ ಪದವಿಗೆ ಕೂರಿಸಬೇಕು ಎಂಬ ಚನ್ನಬಸಪ್ಪನವರ ಆಸೆಗೆ ಕಡುವಿರೋಧಿಯಾಗಿದ್ದ ಎಚ್. ಸಿದ್ದವೀರಪ್ಪ ಒಳಗೊಳಗೇ ಮಸಲತ್ತು ಮಾಡಿದರು. ನ್ಯಾಯವಾದಿ ಬಿ. ದುರ್ಗದ ಜೆ.ಜಿ. ಬಸಪ್ಪ ಸ್ವತಂತ್ರ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದರು. ಅವರನ್ನು ಅಧ್ಯಕ್ಷರನ್ನಾಗಿಸಲು ಎಚ್. ಸಿದ್ದವೀರಪ್ಪನವರು ಬೆಂಬಲಿಸಿದರು. ಮತ್ತೆ ಅಧಿಕಾರಕ್ಕಾಗಿ ಇಬ್ಬರು ಸಾಧು ಲಿಂಗಾಯಿತರ ನಡುವೇ ಪೈಪೋಟಿ ಏರ್ಪಟ್ಟಿತು. ಗೋಜಲು, ಗೊಂದಲದಿಂದಾಗಿ ಸಮಸ್ಯೆ ಬಿಗಡಾಯಿಸಿತು.... ಈ ವಿದ್ಯಮಾನಗಳೆಲ್ಲ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳ ಆತ್ಮಚರಿತ್ರೆ 'ದಿಟ್ಟಹೆಜ್ಜೆ ಧೀರಕ್ರಮ'

ಎಂಬ ಕೃತಿಯಲ್ಲಿ ದಾಖಲಾಗಿದೆ ಎಂದು ಖ್ಯಾತ ಜಾನಪದತಜ್ಞ, ನಾಡೋಜ ಶ್ರೀ ಮುದೇನೂರು ಸಂಗಣ್ಣನವರು 'ಕೊಂಡಜ್ಜಿ ಬಸಪ್ಪ' ಎಂಬ ಕೃತಿಯಲ್ಲಿ ತಿಳಿಸಿದ್ದಾರೆ. (ಪ್ರ: ವೀರಶೈವ ಅಧ್ಯಯನ ಸಂಸ್ಥೆ, ಗದಗ, ಪುಟ 18 – 20, ದ್ವಿ. ಮು. 2007).

ಕೊಂಡಜ್ಜಿ ಅವರ ಮಾವ ಚುನಾಯಿತ ಜಿಲ್ಲಾ ಬೋರ್ಡ್ ಸದಸ್ಯರನ್ನು ಭೆಟ್ಟಿಯಾಗಲು ಊರೂರು ಅಲೆಯಲು ಹೋಗಿದ್ದರು. ಹೊತ್ತು ಸಾಧಿಸಿ ಜೆ.ಜಿ. ಬಸಪ್ಪನವರ ಪರವಾಗಿ ಎಚ್. ಸಿದ್ದವೀರಪ್ಪರಂಥ ಹಿರಿಯರು ಒಂದು ಮಸಲತ್ತು ಮಾಡಿದರೆಂದು ಹಿರಿಯರು ಹೇಳುತ್ತಾರೆ. ಕೊಂಡಜ್ಜಿಯವರು ತೀರಾ ಬೋಳೇ ಸ್ವಭಾವಿ. ಮಂದಿಯ ಅನುನಯದ ಮಾತುಗಳಿಗೆ ಕಿವಿ ಜೋಲುವ ದೌರ್ಬಲ್ಯ ಅವರಲ್ಲಿತ್ತು. ಇದನ್ನು ಅರಿತಿದ್ದ ಸಿದ್ದವೀರಪ್ಪ ಹಾಗೂ ಅನುಯಾಯಿಗಳು ಕೊಂಡಜ್ಜಿ ಅವರನ್ನು ಉಪಾಯದಿಂದ ಕರೆತಂದು ಸ್ಪರ್ಧೆಯಿಂದ ಹಿಂದೆಗೆಯುವಂತೆ ಮುಸಲಾಯಿಸಿದ್ದೊಂದೇ ಅಲ್ಲ, ತಮ್ಮ ಎದುರಾಳಿಯ ಪರವಾಗಿ ಪ್ರಚಾರಕ್ಕೂ ಕರೆದೊಯ್ದರು!

ಊರಿಗೆ ಹಿಂದಿರುಗಿದ ಚನ್ನಬಸಪ್ಪನವರಿಗೆ ವಿಷಯ ತಿಳಿಸಿದಾಗ ಕಿಡಿಕಿಡಿಯಾದರು. ತಮ್ಮ ಅಳಿಯನನ್ನು ಹಿಡಿತರಿಸಿ ಕೂಡಲೇ ನಾಮಪತ್ರ ಸಲ್ಲಿಸುವಂತೆ ಮಾಡಿದರು. ಕೆಲವು ಅಧಿಕಾರಗಳೂ ಆಗ ಮತ ಚಲಾಯಿಸುವ ಹಕ್ಕುಳ್ಳವರಾಗಿದ್ದರು. ಹೀಗಾಗಿ ಇಬ್ಬರು ಅಧಿಕಾರಗಳು ಕೊಂಡಜ್ಜಿ ಬಸಪ್ಪನವರ ಪರವಾಗಿ ಮತ ಚಲಾಯಿಸಿದ್ದರಿಂದ ಬಹುಮತದಿಂದಲೇ ವಿಜಯಿಗಳಾದರು. ಒಳ ರಾಜಕೀಯ, ತಂತ್ರಗಾರಿಕೆಯಿಂದ ಜಿಲ್ಲಾ ಬೋರ್ಡ್ ಅಧ್ಯಕ್ಷ ಪದವಿ ದಕ್ಕಿದ್ದು ಅಧಿಕಾರದ ಒಂದು ಮಜಲನ್ನು ಕಣ್ಣೆದುರು ಸೆಳೆದು ನಿಲ್ಲಿಸುತ್ತದೆ. ಈ ಸಂದರ್ಭದಲ್ಲೇ ಕೊಂಡಜ್ಜಿಯವರು ಕಾಂಗ್ರೆಸ್ ಸೇರಿ ಎಸ್. ನಿಜಲಿಂಗಪ್ಪನವರ ಸಮೀಪ್ಯರಾದರು ಎಂದು ಶ್ರೀ ತರಳಬಾಳು ಜಗದ್ಗುರು ಶಿವಕುಮಾರ ಶಿವಾಚಾರ್ಯರು ತಮ್ಮ ಆತ್ಮ ಚರಿತ್ರೆಯಲ್ಲಿ ದಾಖಲಿಸಿದ್ದಾರೆ.

ಈ ಘಟನೆಯಿಂದ ವಿರೋಧಿ ಚಟುವಟಿಕೆ ನಡೆಸಿದ್ದ ಮುಂದಾಳು ಎಚ್. ಸಿದ್ದವೀರಪ್ಪನವರಿಗೆ ತಾತ್ಕಾಲಿಕ ಹಿನ್ನಡೆ ಆಗಿದ್ದಲ್ಲದೆ ಮುಖಭಂಗ ಅನುಭವಿಸುವಂತಾಯಿತು. ರಾಜಕಾರಣದಲ್ಲಿ ಸೋಲು ಗೆಲುವು ಹೇಗೋ ಅಧಿಕಾರ ಗದ್ದುಗೆ ಹಿಡಿಯಲು ಬೇಕಾದ ಒಳ ರಾಜಕೀಯ, ಚಾಣಾಕ್ಷತೆಯೂ ಬೇಕು. ಇಲ್ಲಿ ಎಲ್ಲಾ ತಂತ್ರಮಂತ್ರ, ಮರ್ಮಗಳೂ ಅಗತ್ಯ. ಬಹುಶ: ಸಿದ್ದವೀರಪ್ಪನವರು ಇಂಥ ವಿದ್ಯೆಯ ಬೆನ್ನುಹತ್ತಿದ್ದರು ಎಂಬುದನ್ನು ಈ ಘಟನೆ ಸಾಬೀತುಪಡಿಸುತ್ತದೆ. ಸಿದ್ದವೀರಪ್ಪನವರ ರಾಜಕೀಯ ನೈಪುಣ್ಯತೆಯನ್ನು ವಿರೋಧಿಗಳೂ ಮೆಚ್ಚುತ್ತಾರೆ.

ಜಿಲ್ಲಾ ಬೋರ್ಡಿನ ಸದಸ್ಯರಾಗುವ ಮೊದಲ ಪ್ರಯತ್ನ ಯಶಸ್ವಿ ಆಗದಿದ್ದರೂ ಮುಂದಿನ ರಾಜಕಾರಣದ ಅಖಾಡಕ್ಕೆ ಪೂರ್ವಭಾವಿ ತಯಾರಿಯನ್ನಂತೂ ಅವರು ನಡೆಸಿದ್ದರು ಅನ್ನುವುದು ಇದರಿಂದ ತಿಳಿಯುತ್ತದೆ.

## ರೈತರ ಪರಿಕರಗಳತ್ತ ಗಮನ

ಜಿಲ್ಲಾ ಬೋರ್ಡ್ ಚುನಾವಣೆ ಫಲಿತಾಂಶದ ಬಗ್ಗೆ ತಲೆಕೆಡಿಸಿಕೊಳ್ಳದೆ ಮತ್ತೆ ರೈತರ ಸಮಸ್ಯೆಗಳತ್ತ ಗಮನ ಹರಿಸಿದರು. ಅದು 1947ರ ಸಂದರ್ಭ– ದೇಶಕ್ಕೆ ಸ್ವಾತಂತ್ರ್ಯ ಬಂದ ಸಂಭ್ರಮ. ಇನ್ನೂರು ವರ್ಷಗಳಿಗೂ ಹೆಚ್ಚುಕಾಲ ಬ್ರಿಟೀಷರ ದಬ್ಬಾಳಿಕೆಯನ್ನು ಸಹಿಸಿಕೊಂಡಿದ್ದ ಜನಕ್ಕೆ ಸ್ವಾತಂತ್ರ್ಯದ ಹಿತವಾದ ಗಾಳಿ ಸ್ವಚ್ಛಂದತೆ ತಂದಿತು. ಆದರೆ ರೈತರ ಸ್ಥಿತಿ ಮಾತ್ರ ಬದಲಾವಣೆಯ ಗಾಳಿಗೆ ತೆರೆದುಕೊಳ್ಳಲೇ ಇಲ್ಲ. ಸಮಸ್ಯೆಗಳು ಹಾಗೇ ಇದ್ದವು. ಹೀಗಾಗಿ 1947 ರಿಂದ 1960ರವರೆಗೆ ರೈತರಿಗೆ ಅವರ ಕಸುಬಿಗೆ ಬೇಕಾದ ನೇಗಿಲು, ಕುಳದಪಟ್ಟಿ, ಕುಡ, ಹಳಿಪಟ್ಟಿ, ಹಾರೆ, ಗುದ್ದಲಿ ಮುಂತಾದ ಪರಿಕರಗಳ ಸರಬರಾಜು ಕಡಿಮೆ ಇತ್ತು. ಈ ಪರಿಕರಗಳನ್ನು ನೇರವಾಗಿ 'ಭದ್ರಾವತಿ ಐರನ್ ಅಂಡ್ ಸ್ಟೀಲ್ ಕಂಪನಿ'ಗೆ ಸಂಪರ್ಕಿಸಿ, ಅವರೊಂದಿಗೆ ಮಾತುಕತೆ ನಡೆಸಿ ಪತ್ರವ್ಯವಹಾರದ ದಾಖಲೆಗಳ ಮೂಲಕ ತಾವು ಹುಟ್ಟು ಹಾಕಿದ ಸಹಕಾರ ಸಂಘಕ್ಕೆ ತರಿಸಿಕೊಂಡರು. ಮುಂದೆ ಅವು ರೈತರಿಗೆ ನಿಗದಿತ ಕಂಟ್ರೋಲ್ ಬೆಲೆಗೆ ಸುಲಭವಾಗಿ ಸಿಕ್ಕುವಂತೆ ವ್ಯವಸ್ಥೆ ಮಾಡಿದರು. ಬಹುಶ: ಇಂಥ ಸಹಕಾರ ತತ್ವದ ಕೆಲಸ ಬೇರೆಲ್ಲೂ ನಡೆದ ಬಗ್ಗೆ ಮಾಹಿತಿ ಇಲ್ಲ ಎಂದು ಹಿರಿಯ ರೈತರೇ ಅವರ ರೈತಪರ ನಿಲುವು ಹಾಗೂ ಕಾಳಜಿ ಬಗ್ಗೆ ನೆನೆಯುತ್ತಾರೆ.

ಇದರ ಜತೆಗೆ ರೈತರ ದೈನಂದಿನ ಉಪಯೋಗಕ್ಕೆ ಬೇಕಾದ ಪಂಚೆ ಮತ್ತು ಬಿಳಿ ಬಟ್ಟೆಗಳಿಗೂ ಆಗ ಅಭಾವ ಇದ್ದುದನ್ನು ಕಂಡು ಆ ವಸ್ತುಗಳನ್ನೂ ಸಹಾ ಮಿಲ್‌ಗಳಿಂದ ನೇರವಾಗಿ ತರಿಸಿ ಮಾರಾಟ ಮಾಡುತ್ತಿದ್ದರು. ಈ ಅವಧಿಯಲ್ಲಿ ಬೆಲ್ಲ, ಬೇಳೆ, ಗೋಧಿ, ಅಕ್ಕಿ – ದಿನಸೀ ಸಾಮಾನುಗಳಿಗೂ ಅಭಾವವಿದ್ದು ಸಾರ್ವಜನಿಕರಿಗೆ ನಿಗದಿತ ಬೆಲೆಗೆ ಸಿಕ್ಕುತ್ತಿರಲಿಲ್ಲ. ಈ ಅಗತ್ಯ ಪದಾರ್ಥಗಳನ್ನು ತಾವೇ ಹುಟ್ಟುಹಾಕಿದ ರೈತಸಂಘದಿಂದಲೇ ಮಾರಾಟಮಾಡುವ ವ್ಯವಸ್ಥೆ ಮಾಡಿದರು. ಅಲ್ಲದೆ ಇದೇ ವೇಳೆಯಲ್ಲಿ ರೈತರು ಬೆಳೆದ ವಿವಿಧ ಬೆಳೆ – ದವಸ, ಧಾನ್ಯಗಳಿಗೆ ನ್ಯಾಯಯುತ ಬೆಲೆ ಸಿಗಬೇಕೆಂಬ ಉದ್ದೇಶದಿಂದ ವ್ಯವಸಾಯೋತ್ಪನ್ನ ಬೆಳೆಗಳ ಸಂಸ್ಕರಣಕ್ಕಾಗಿ ಎಕ್ಸ್‌ಪೆಲ್ಲರ್‌ಗಳು, ಹತ್ತಿ ರಾಟೆಗಳು ಮತ್ತು ಶೇಂಗಾಬೀಜ ಬೇರ್ಪಡಿಸುವ ಯಂತ್ರೋಪಕರಣಗಳನ್ನು ತಮ್ಮ ಸಂಘದವತಿಯಿಂದ ನಡೆಸುವಂತೆ ಮಾಡಿದರು.

**"ರೈತರ ಫಸಲುಗಳ ಮಾರಾಟದ ಸಹಕಾರ ಸಂಘ"**ವು ಚಿತ್ರದುರ್ಗ ಜಿಲ್ಲೆಯಲ್ಲೇ ಒಂದು ಮಾದರಿಯಾದ ಆದರ್ಶ ಸಂಘವಾಗಿ ಬೆಳೆಯಿತು.

## ಮತ್ತೆ ಜಿಲ್ಲಾ ಬೋರ್ಡ್ ಚುನಾವಣೆಯತ್ತ....

1943 – 44ರ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲು ಕಂಡ ನಂತರ ಎರಡು ವರ್ಷ ವಕೀಲ ವೃತ್ತಿ ಜತೆಗೆ ರೈತರ ಸಮಸ್ಯೆಗಳತ್ತ ಹೆಚ್ಚಿನ ಗಮನ ಹರಿಸಿದರು. ಸಾಧ್ಯವಾದಷ್ಟು ಹಳ್ಳಿಗಳಲ್ಲಿ ಪ್ರವಾಸ

ಕೈಗೊಂಡು ಅವರ ನೈಜ ಸಮಸ್ಯೆಗಳಿಗೆ ಸ್ಪಂದಿಸಿ ಆದ್ಯತೆ ಮೇಲೆ ಕೆಲಸ ಮಾಡಿಕೊಟ್ಟರು. 1946ರಲ್ಲಿ ಮತ್ತೆ ಚಿತ್ರದುರ್ಗ ಜಿಲ್ಲಾ ಬೋರ್ಡ್ ಚುನಾವಣೆ ಬಂತು. ಸಿದ್ದವೀರಪ್ಪನವರು ಪುನ: ಸ್ಪರ್ಧಿಸಿದರು. ಹಿಂದಿನ ಸೋಲಿನ ಪಾಠದ ಅರಿವಿತ್ತು. ಈ ಸಾರಿ ಗ್ರೌಂಡ್‌ವರ್ಕ್ ಸಾಕಷ್ಟು ಆಗಿತ್ತು. ತಾಲ್ಲೂಕು, ಊರುಗಳ ಮುಖಂಡರೇ ಮುಂದೆ ನಿಂತು ಈ ಸಾರಿ ಗೆಲ್ಲಿಸಲೇಬೇಕು ಎಂದು ಪಣತೊಟ್ಟರು. ಪರಿಣಾಮ ಸಿದ್ದವೀರಪ್ಪನವರು ಅನಾಯಾಸವಾಗಿ ಗೆದ್ದರು. ಈ ಅವಧಿಯಲ್ಲಿ ಜಿಲ್ಲಾ ಬೋರ್ಡ್ ಸದಸ್ಯರಾದಾಗಲೇ ಕೊಡಗನೂರು ಹೈಸ್ಕೂಲ್ ಪ್ರಾರಂಭಕ್ಕೆ ಮನಸ್ಸು ಮಾಡಿದ್ದು.

## ಕೊಡಗನೂರು ಹೈಸ್ಕೂಲ್ ಸ್ಥಾಪನೆ:

ಕೊಡಗನೂರು - ಆರುನೂರಕ್ಕೂ ಹೆಚ್ಚು ಮನೆಗಳ ದೊಡ್ಡ ಊರು. ಐತಿಹಾಸಿಕ ಹಿನ್ನೆಲೆಯೂ ಈ ಊರಿನ ಬೆನ್ನಿಗಿದೆ. ಹಿಂದೆ ಇದು ಮಹಾ ಅಗ್ರಹಾರವಾಗಿತ್ತು. ಬಾದಾಮಿ ಚಾಲುಕ್ಯರಿಗೆ ಹಾಗೂ ನೊಳಂಬರಿಗೆ ಸೇರಿತ್ತೆಂದು, ಇಲ್ಲಿ ಅನೇಕ ದೇವಾಲಯಗಳಿದ್ದವೆಂದು ಶಾಸನಗಳಿಂದ ತಿಳಿದುಬಂದಿದೆ. ಪುರಾತನ ಕಲ್ಲೇಶ್ವರ ದೇವಸ್ಥಾನ, 12ನೇ ಶತಮಾನದಲ್ಲಿ ಇತ್ತು ಎಂದು ಹೇಳಲಾದ ವಿಷ್ಣು ದೇವಾಲಯ ಈಗಿಲ್ಲದಿದ್ದರೂ ಮುಕ್ಕಾದ 'ವಿಷ್ಣು' ಮೂರ್ತಿ ಈಗಲೂ ಇದೆ. ಊರಿನ ಒಂದು ಭಾಗದಲ್ಲಿ ನೀರಿನ ಹೊಂಡ ಇದ್ದು, ಸಮೀಪದಲ್ಲೇ ಹನುಮಂತನ ದೇವಸ್ಥಾನ. ಪುರಾತನ ಛತ್ರ, ಕಲ್ಯಾಣಿ ಇತ್ಯಾದಿ ಐತಿಹಾಸಿಕ ಕುರುಹು ಇವೆ. ಹೀಗಾಗಿ ಈ ಊರು ಸಂಶೋಧಕರಿಗೆ ಸಾಮಗ್ರಿ ಒದಗಿಸುತ್ತದೆ.

ಈ ಊರಿನ ಮಣ್ಣು ವಿಶೇಷ ಫಲವತ್ತತೆಯಿಂದ ಕೂಡಿದೆ. ಯಾವುದೇ ಬೆಳೆಗೂ ಸೂಕ್ತವಾದ ನೆಲ. ಖುಷ್ಕಿ, ಏತ ನೀರಾವರಿ, ಊರಿನ ದೊಡ್ಡಕೆರೆಯ ನೀರುಣ್ಣುವ ನೂರಾರು ಎಕರೆ ಜಮೀನು - ತರಕಾರಿ, ಹೈನುಗಾರಿಕೆಗೆ ಬಹುಕಾಲದಿಂದಲೂ ಈ ಊರು ಹೆಸರುವಾಸಿ.

ಇಷ್ಟೆಲ್ಲಾ ಹಿನ್ನೆಲೆಯಿಂದ 1946 ರಿಂದ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕುವವರೆಗಿನ ಸಂದರ್ಭದಲ್ಲಿ ದಾವಣಗೆರೆ ತಾಲ್ಲೂಕಿನ ಈ 'ಕೊಡಗನೂರು' ಗ್ರಾಮದಲ್ಲಿ ಎಚ್. ಸಿದ್ದವೀರಪ್ಪನವರು ಹೈಸ್ಕೂಲು ಸ್ಥಾಪಿಸಿದರು. ಇವರ ಜೊತೆ ಕಾಂಗ್ರೆಸ್ ಧುರೀಣ, ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯ ಆನೆಕೊಂಡ ಚನ್ನಬಸಪ್ಪ ಯಾನೆ ಸಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಈ ಶಾಲೆ ಆರಂಭಿಸಿದರು. ಆರಂಭದಲ್ಲಿ ಇದು ಜಿಲ್ಲಾ ಬೋರ್ಡು ಹೈಸ್ಕೂಲು. [ನಂತರ ತಾಲ್ಲೂಕು ಬೋರ್ಡು ಹೈಸ್ಕೂಲು. ಈಗ ಸರ್ಕಾರಿ ಪ್ರೌಢಶಾಲೆ ಹಾಗೂ ಸಂಯುಕ್ತ ಪದವಿಪೂರ್ವ ಕಾಲೇಜು.] ಆಗ ಅವರು ಚಿತ್ರದುರ್ಗ ಜಿಲ್ಲಾ ಬೋರ್ಡಿನ ಸದಸ್ಯರಾಗಿದ್ದರು. ಇಡೀ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಇದ್ದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಜಿಲ್ಲಾ ಮಂಡಳಿ ಇದು. ಆಗ ಇನ್ನೂ ಸ್ವಾತಂತ್ರ್ಯ ಲಭಿಸಿರಲಿಲ್ಲವಾದ್ದರಿಂದ ಸಾರ್ವಜನಿಕ ಚುನಾವಣೆ ಇರಲಿಲ್ಲ. ಶಾಸಕರು, ಮಂತ್ರಿಗಳು



WD-H-035-4

ಇರಲಿಲ್ಲ. ಶಾಸನಬದ್ಧ ನಿಯಮಗಳ ರಚನೆ ಆಗಿರಲಿಲ್ಲ. ಮಹಾರಾಜರ ಸಮ್ಮುಖದ ಪ್ರಜಾಪ್ರತಿನಿಧಿ ಸಭೆ ಜೀವಂತವಾಗಿತ್ತು. ಸ್ಥಳೀಯ ಸಮಸ್ಯೆಗಳಿಗೆ ಇಂಥಾ ಬೋರ್ಡುಗಳು ಸಾಕಷ್ಟು ಜನಪರವಾಗಿ ಕಾರ್ಯನಿರ್ವಹಿಸಬಹುದಾಗಿತ್ತು. ಹೀಗಾಗಿ ಸಿದ್ದವೀರಪ್ಪನವರು ತಮಗೆ ಸಿಕ್ಕಿದ ಅವಕಾಶವನ್ನು ಸರಿಯಾಗಿ ಸದುಪಯೋಗಪಡಿಸಿಕೊಂಡರು.

ಗ್ರಾಮೀಣ ಹಿನ್ನೆಲೆಯ ಸಿದ್ದವೀರಪ್ಪನವರಿಗೆ ರೈತರ ಹಾಗೂ ಅವರ ಮಕ್ಕಳ ಓದಿನ ಕಷ್ಟ ಏನು ಅನ್ನುವುದು ಚೆನ್ನಾಗಿ ಗೊತ್ತಿತ್ತು. ಮನೆಗೊಬ್ಬನಾದರೂ ವಿದ್ಯಾವಂತನಿರಬೇಕು ಎಂಬುದು ಅವರ ಆಶಯವಾಗಿತ್ತು. ಗ್ರಾಮಾಂತರಗಳಿಂದ ರೈತರ ಮಕ್ಕಳು ಪಟ್ಟಣಗಳಿಗೆ ಬಂದು ವಿದ್ಯಾಭ್ಯಾಸ ಮಾಡುವುದು ಸಾಧ್ಯವಾಗದು ಎಂಬುದನ್ನು ಮನಗಂಡು ಕೊಡಗನೂರು ಗ್ರಾಮದ ಸುತ್ತಮುತ್ತಲ ಹತ್ತಾರು ಗ್ರಾಮಗಳ ಮಕ್ಕಳ ಉಪಯೋಗಕ್ಕಾಗಿಯೇ ಈ ಹೈಸ್ಕೂಲು ಸ್ಥಾಪಿಸಿದರು. ಅದೊಂದು ಸಹಕಾರ ತತ್ತ್ವದಿಂದ ಆರಂಭಿಸಿದ ಶಾಲೆ. ಅದರ ಯಶೋಗಾಥೆ ಕುತೂಹಲ.

ಕೊಡಗನೂರು ಸ್ವಾತಂತ್ರ್ಯಪೂರ್ವದಲ್ಲೇ ಭಾರತೀಯ (ದಕ್ಷಿಣ) ರೈಲ್ವೇ ನಿಲ್ದಾಣ ಕಂಡ ಗ್ರಾಮ. ಸುತ್ತಮುತ್ತಲ ಹತ್ತಿಪ್ಪತ್ತು ಮೈಲು ದೂರದ ಹಳ್ಳಿಗಳ ರೈತಾಪಿವರ್ಗ, ಸಣ್ಣಪುಟ್ಟ ವ್ಯಾಪಾರಿಗಳು, ವಿದ್ಯಾರ್ಥಿಗಳು ಹೋಗಿಬರಲು ಅನುಕೂಲವಾಗಿತ್ತು. ಈ ರೈಲ್ವೇ ನಿಲ್ದಾಣದ ಸಮೀಪದಲ್ಲೇ ಊರವರು ನೀಡಿದ ಹತ್ತಾರು ಎಕರೆ ವಿಶಾಲ ಪ್ರದೇಶದಲ್ಲಿ ಹೈಸ್ಕೂಲು ಆರಂಭವಾಯಿತು. ಶಾಲೆ ಸುತ್ತಲು ಹಸಿರು ವನ ನಿರ್ಮಿಸುವುದು ಅವರ ಬಯಕೆ. ಅದಕ್ಕಾಗಿ ಮೊದಲು ಮಾಡಿದ ಕೆಲಸ ಅಲ್ಲಿ ಬೇವು, ಹೊಂಗೆ, ಮಾವು ಮತ್ತಿತರ ಮರಗಳನ್ನು ಬೆಳೆಸಿದರು.

ಈ ಹೈಸ್ಕೂಲು ಕಮಿಟಿಯ ಕಾರ್ಯದರ್ಶಿಯಾಗಿ 1948 ರಿಂದ 5 ವರ್ಷಗಳ ಕಾಲ ದಾವಣಗೆರೆಯ ಹಿರಿಯ ವಕೀಲ ಶ್ರೀ ಆರ್.ಜಿ. ಸಿದ್ದಪ್ಪನವರು ಕಾರ್ಯನಿರ್ವಹಿಸಿದರು. ಎಚ್. ಸಿದ್ದವೀರಪ್ಪನವರ ಆತ್ಮೀಯ ಮಿತ್ರರೂ ಆದ ಇವರು ಆ ದಿನಗಳನ್ನು ಸ್ಮರಿಸಿದ್ದು ಹೀಗೆ:

"ಹೈಸ್ಕೂಲಿಗೆ ಬಡ – ಮಧ್ಯಮ ರೈತರ ಮಕ್ಕಳು 6 – 8 ಮೈಲುಗಳಿಂದ ದಿನವೂ ನಡೆದು ಬರುತ್ತಿದ್ದರು. ಮುಖದಲ್ಲಿ ಬಳಲಿಕೆ ಕಾಣುತ್ತಿತ್ತು. ಇವರ ಕಷ್ಟ ನೋಡಲು ಆಗುತ್ತಿರಲಿಲ್ಲ. ದಿನದ ಬಹುಭಾಗ ಓಡಾಟದಲ್ಲೇ ಕಳೆದರೆ ಓದು, ಬರವಣಿಗೆ ಯಾವಾಗ ಮಾಡ್ತಾರೆ? ಇದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯಬೇಕು ಎಂದು ಯೋಚಿಸಿದ ಸಿದ್ದವೀರಪ್ಪನವರು 'ಸಾರ್ವಜನಿಕ ವಿದ್ಯಾರ್ಥಿ ನಿಲಯ' ತೆರೆಯಲು ಮನಸ್ಸು ಮಾಡಿದರು. ಅದರಂತೆ ಒಂದು ಸಭೆಯನ್ನೂ ಕರೆದರು. ಸಭೆಯಲ್ಲಿ ಮಕ್ಕಳು ದೂರದಿಂದ ಶಾಲೆಗೆ ಬಂದು ಹೋಗುವ ತೊಂದರೆ ಬಗ್ಗೆ ತಿಳಿಹೇಳಿ, ಅವರೆಲ್ಲ 'ಇಲ್ಲೇ ಹಾಸ್ಟಲ್‌ನಲ್ಲಿದ್ದು ಓದಲಿ. ನಿಮ್ಮ ಸಹಕಾರ ಅಗತ್ಯ' ಎಂದು ಪೋಷಕರಿಗೆ ಮನವರಿಕೆ ಮಾಡಿದರು. ಅವರದ್ದು ಯಾವಾಗಲೂ ದೂರದೃಷ್ಟಿ. ನಾಳಿನ ದಿನಗಳು

ಭವಿಷ್ಯದ ದಿನಗಳು ಎಂದು ಭಾವಿಸಿ, ಈ ಹೈಸ್ಕೂಲು ಸ್ಥಾಪನೆಗಾಗಿ ಗ್ರಾಮಾಂತರಗಳಿಂದ ಆ ಕಾಲಕ್ಕೆ ಮೂವತ್ತು ಸಾವಿರ ರೂಪಾಯಿಗಳನ್ನು ದಾನರೂಪವಾಗಿ ಸಂಗ್ರಹಿಸಿ ಜಿಲ್ಲಾ ಬೋರ್ಡಿಗೆ ಜಮಾ ಮಾಡಿದ್ದರು. ನಂತರ ಹೈಸ್ಕೂಲಿನ ಹಾಸ್ಟಲ್‌ಗಾಗಿ ಮತ್ತೆ ಜೋಳಿಗೆ ಹಿಡಿದು ರೈತರಷ್ಟೇ ಅಲ್ಲ ನಗರದ ವರ್ತಕರಿಂದಲೂ ದವಸಧಾನ್ಯ, ಹಣ ಸಂಗ್ರಹಿಸಿದರು. ಅಲ್ಲೊಂದು ಅವರ ಕನಸಿನ ಪುಟ್ಟ ಹಾಸ್ಟಲ್ ಅಸ್ತಿತ್ವಕ್ಕೆ ಬಂತು. ಇದು ಕೆಲವು ವರ್ಷ ಸುಗಮವಾಗಿ ನಡೆದು ಗ್ರಾಮೀಣ ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅನುಕೂಲವಾಯಿತು."

* * *

ಈ ನಡುವೆ ದೇಶ ಸ್ವಾತಂತ್ರ್ಯ ಪಡೆದ ಸಂಭ್ರಮದಲ್ಲಿತ್ತು. ಸ್ವಾತಂತ್ರ್ಯಾ ನಂತರ "ಒಕ್ಕೂಟ ವ್ಯವಸ್ಥೆ" ಅಳವಡಿಸಿಕೊಂಡ ಭಾರತ, ರಾಜ್ಯಗಳಲ್ಲಿಯ ರಾಜಕೀಯ ವ್ಯವಸ್ಥೆಯ ಸ್ವರೂಪವನ್ನು ಸಂವಿಧಾನದಲ್ಲಿಯೇ ನಿರ್ದಿಷ್ಟಪಡಿಸಿತ್ತು. ಅದರಂತೆ ಮೈಸೂರು ಸಂಸ್ಥಾನದಲ್ಲಿಯೂ ಸಹ ಇತರೆ ರಾಜ್ಯಗಳಂತೆಯೇ ಸಂವಿಧಾನಿಕ ವ್ಯವಸ್ಥೆ ಅಸ್ತಿತ್ವಕ್ಕೆ ಬಂತು.

## ರಾಜ್ಯ ರಾಜಕಾರಣಕ್ಕೆ :

ವಕೀಲ ವೃತ್ತಿ ನಡುವೆ ಶಿಕ್ಷಣ, ಸಾಮಾಜಿಕ ಚಟುವಟಿಕೆ, ರೈತಪರ ಹೋರಾಟದಲ್ಲಿ ಭಾಗಿಯಾದ ಎಚ್. ಸಿದ್ದವೀರಪ್ಪನವರು ಜಿಲ್ಲಾ ಬೋರ್ಡ್ ಚುನಾವಣೆಗೆ ಸ್ಪರ್ಧಿಸಿ ಮೊದಲ ಸೋಲು ಕಂಡರು, ನಿರಾಶರಾಗದೆ ಮುಂದಿನ ಚುನಾವಣೆಯಲ್ಲಿ ಗೆದ್ದು ಜನಪರ ಕೆಲಸ ಮಾಡಿ ಜನಾನುರಾನಿಯಾದರು. ಬೆನ್ನಲ್ಲೇ ದೇಶದಲ್ಲಿ ಪ್ರಥಮ ಸಾರ್ವಜನಿಕ ಚುನಾವಣೆ ಸನಿಹವಾಯಿತು. ಆಗಲೇ ಸಾರ್ವಜನಿಕ ಬದುಕಿನಲ್ಲಿ ತಮ್ಮ ಹೆಜ್ಜೆಗುರುತು ಮೂಡಿಸಿದ್ದರ ಫಲವಾಗಿ ಚುನಾವಣೆಗೆ ನಿಲ್ಲಬೇಕೆಂಬ ಬೆಂಬಲಿಗರ ಒತ್ತಡವೂ ಬಂತು. ದಾವಣಗೆರೆಯನ್ನು ತಮ್ಮ ವಕೀಲ ವೃತ್ತಿಯ ಕಛೇರಿ ಹಾಗೂ ಸಾರ್ವಜನಿಕ ಸಂಪರ್ಕ ಕೇಂದ್ರ ಮಾಡಿಕೊಂಡಿದ್ದರಿಂದ ಸಹಜವಾಗಿ ದಾವಣಗೆರೆ ತಾಲ್ಲೂಕು ಕೇಂದ್ರದಿಂದಲೇ ಸ್ಪರ್ಧಿಸಿ ಎಂಬ ಬೇಡಿಕೆಯೂ ಬಂತು. ಆದರೆ 'ಹರಿಹರ'ವೂ ಇವರ ಆಯ್ಕೆಯಲ್ಲಿ ಸೇರಿತ್ತು. ಎರಡು ಕ್ಷೇತ್ರಗಳೂ ಅನುಕೂಲ ಸಿಂಧು ಆಗಿದ್ದರೂ; ದಾವಣಗೆರೆಯಿಂದ ಸ್ಪರ್ಧೆ ಬೇಡ ಎಂದು ನಿರ್ಧರಿಸಿದರು. ಅದಕ್ಕೆ ಕಾರಣವೂ ಇತ್ತು. ತಮ್ಮ ಹುಟ್ಟೂರು ಹನಗವಾಡಿ, ಹರಿಹರ ತಾಲ್ಲೂಕಿನಲ್ಲಿದ್ದುದರಿಂದ ಅಲ್ಲಿನ ರೈತರು, ಕಾರ್ಮಿಕರು, ಜನಸಾಮಾನ್ಯರ ಒತ್ತಡ 'ಹರಿಹರ ತಾಲ್ಲೂಕಿನಿಂದಲೇ ಸ್ಪರ್ಧಿಸಬೇಕು' ಎಂಬುದಾಗಿತ್ತು. ಅಪಾರ ಪ್ರೀತಿ, ಗೌರವದಿಂದ ಜನಕೂಡ ಅವರನ್ನು ಅಪೇಕ್ಷಿಸಿದ್ದರು. ಅಂತೇ ಅಲ್ಲಿಂದಲೇ ರಾಜ್ಯ ಪ್ರಥಮ ಮಹಾಚುನಾವಣೆಗೆ ನಿಲ್ಲುವುದೆಂದು ನಿರ್ಧರಿಸಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿದ್ದರು. ಕೆ.ಸಿ.ರೆಡ್ಡಿ ಮುಖ್ಯಮಂತ್ರಿಯಾಗಿದ್ದಾಗ ಮೈಸೂರು ರಾಜ್ಯಾಂಗ ರಚನಾ ಸಭೆಯ ಸದಸ್ಯರಾಗಿದ್ದರು.

ಬಹಳ ಮುಖ್ಯವಾಗಿ ದಾಖಲಿಸಲೇಬೇಕಾದ ಒಂದು ವಿಚಾರ – ಡಾ. ಬಿ.ಆರ್. ಅಂಬೇಡ್ಕರ್ ನೇತೃತ್ವದಲ್ಲಿ ಇವರು ಭಾರತ ಸಂವಿಧಾನ ರಚನೆಯ ಕರಡು ಸಮಿತಿಯ ಸದಸ್ಯರಾಗಿದ್ದರೆಂಬುದು.

1952 – ದೇಶದ ಪ್ರಥಮ ಮಹಾಚುನಾವಣೆ ಘೋಷಿತವಾಯಿತು. ಜನರಲ್ಲಿ ಏನೋ ಹೊಸ ಪುಳಕ. ಸ್ವಾತಂತ್ರ್ಯಾನಂತರ ಮತ ಚಲಾಯಿಸುವ ಪ್ರಥಮ ಕ್ಷಣಕ್ಕಾಗಿ ಕಾತುರವಾಗಿದ್ದ ದಿನಗಳು ಅವು. ಹರಿಹರ ತಾಲ್ಲೂಕಿನಿಂದ 'ಮೈಸೂರು ರಾಜ್ಯ ವಿಧಾನಸಭೆ' ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಅವರ ಬೆಂಬಲಿಗರೇ ಹಳ್ಳಿ ಹಳ್ಳಿಗಳಿಗೆ ಓಡಾಡಿ 'ಸಿದ್ದವೀರಪ್ಪನವರನ್ನು ಗೆಲ್ಲಿಸಿ, ಅವರು ತರುಣ ವಕೀಲರು, ರೈತರಪರ ಕೆಲಸ ಮಾಡುತ್ತಾರೆ, ಉತ್ಸಾಹಿಗಳು' ಎಂದೆಲ್ಲ ಪ್ರಚಾರ ಶುರುಮಾಡಿದರು. ತಮ್ಮ ಕೈಲಿಂದಲೇ ಹಣ ಖರ್ಚುಮಾಡಿಕೊಂಡು ಚುನಾವಣೆ ಪ್ರಚಾರವನ್ನೂ ನಡೆಸಿದ ಜನ ಅವರ ಕೈ ಬಿಡಲಿಲ್ಲ. ಫಲಿತಾಂಶ ಪ್ರಕಟವಾದಾಗ ಸಿದ್ದವೀರಪ್ಪನವರು ಬಹುಮತದಿಂದ ಚುನಾಯಿತರಾಗಿದ್ದರು.

ಆಗ ಚಿತ್ರದುರ್ಗ ಜಿಲ್ಲೆಯ ಇನ್ನುಳಿದ ಕ್ಷೇತ್ರಗಳ ತಾಲ್ಲೂಕುಗಳಲ್ಲಿ ಗೆದ್ದ ಅಭ್ಯರ್ಥಿಗಳು: ದಾವಣಗೆರೆ : ಶ್ರೀಮತಿ ಬಳ್ಳಾರಿ ಸಿದ್ದಮ್ಮ, ಚಿತ್ರದುರ್ಗ: ಶ್ರೀ ಮುಲ್ಕ ಗೋವಿಂದರೆಡ್ಡಿ, ಜಗಳೂರು : ಶ್ರೀ ಇಮಾಂ ಸಾಬ್, ಹೊಳಲ್ಕೆರೆ : ಶ್ರೀ ಜಿ. ದುಗ್ಗಪ್ಪ, ಹೊಸದುರ್ಗ : ಜಿ. ಬಸಪ್ಪ.

## ಕೆಂಗಲ್ ಸಂಪುಟದಲ್ಲಿ ಗೃಹಖಾತೆ:

ರಾಜ್ಯದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಅಧಿಕ ಸಂಖ್ಯೆಯಲ್ಲಿ ಗೆಲುವು ಸಾಧಿಸಿದ್ದರು. ಪ್ರಜಾಪ್ರತಿನಿಧಿ ಸಭೆ ಹಾಗೂ ಸ್ವಾತಂತ್ರ್ಯ ನಂತರ (ಅಕ್ಟೋಬರ್ 1947) ಅಧಿಕಾರಕ್ಕೆ ಬಂದ ಪ್ರಥಮ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರ ಆಡಳಿತವನ್ನು ಕಂಡಿದ್ದ ರಾಜ್ಯದ ಜನತೆ ಪ್ರಜಾಪ್ರಭುತ್ವ ವ್ಯವಸ್ಥೆಯ ರಾಜ್ಯಾಡಳಿತದ ಹೊಸ ಅನುಭವಕ್ಕೆ ಸಿದ್ಧರಾದರು. ಖ್ಯಾತ ವಕೀಲರು, ಪ್ರಜಾಪ್ರತಿನಿಧಿ ಸಭೆಯ ಸದಸ್ಯರು, ಕೆ.ಸಿ. ರೆಡ್ಡಿಯವರ ಅಧಿಕಾರ ಅವಧಿಯಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದವರು ಶ್ರೀ ಕೆಂಗಲ್ ಹನುಮಂತಯ್ಯನವರು. ಚುನಾವಣೆ ಘೋಷಣೆಯಾದ ನಂತರ ರಾಜ್ಯ ಸುತ್ತಿ ಕಾಂಗ್ರೆಸ್ ಅಭ್ಯರ್ಥಿಗಳು ಅಧಿಕ ಸಂಖ್ಯೆಯಲ್ಲಿ ಗೆಲ್ಲಲು ಕಾರಣರಾಗಿದ್ದರು. ಇವರ ಜತೆ ಸಾಥ್ ನೀಡಿದವರು ಮೈಸೂರು ಕಾಂಗ್ರೆಸ್‌ನ ಸಂಸ್ಥಾಪಕರು, ಪ್ರಥಮ ಅಧ್ಯಕ್ಷರು, ಗಾಂಧಿವಾದಿಯೂ ಆದ ಶ್ರೀ ಟಿ. ಸಿದ್ದಲಿಂಗಯ್ಯನವರು. ಸ್ವತಃ ಕೆಂಗೇರೆ ಅವರೇ ಬೆಂಗಳೂರು ಜಿಲ್ಲೆ ರಾಮನಗರ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ನಂತರ ಸರ್ವಾನುಮತದಿಂದ ಶಾಸಕಾಂಗ

ಪಕ್ಷದ ನಾಯಕರಾಗಿ ಆಯ್ಕೆಯಾದರು. ಸಹಜವಾಗಿ ಅವರೇ ಮುಖ್ಯಮಂತ್ರಿಯಾಗಿಯೂ ಆದರು.

ಕೆಂಗಲ್ಲರು ತಮ್ಮ ಸಚಿವ ಸಂಪುಟಕ್ಕೆ ಕೇವಲ ಐವರನ್ನು ಮಾತ್ರ ಆಯ್ಕೆ ಮಾಡಿಕೊಂಡರು. ಹರಿಹರ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀ ಎಚ್. ಸಿದ್ದವೀರಪ್ಪ ಈ ಟೀಮ್‌ನಲ್ಲಿ ಒಬ್ಬರು! ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದ ಬೆನ್ನಲ್ಲೇ ಅವರಿಗೆ ಸಿಕ್ಕ ಖಾತೆ ಅಂತಿಂಥದ್ದಲ್ಲ, ಅದು ಮಹತ್ವದ "ಗೃಹಖಾತೆ". ಜತೆಗೆ ಕೃಷಿ, ತೋಟಗಾರಿಕೆ, ಸಾರಿಗೆ ಇಲಾಖೆ ನಂತರ ಕೈಗಾರಿಕೆ ಖಾತೆಯೂ ಹಂಚಿಕೆಯಾಯಿತು. ಹಾಗೆ ನೋಡಿದರೆ ಮುಖ್ಯಮಂತ್ರಿ ನಂತರದ ಪ್ರಮುಖ ಖಾತೆಗಳೇ ಇವರ ಕೈಗೆ ಬಂದವು. ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಇವರ ಮೇಲೆ ಇಟ್ಟಿದ್ದ ವಿಶ್ವಾಸ ಎಂತಾದ್ದು ಎಂಬುದನ್ನು ಇದರಿಂದಲೇ ತಿಳಿಯಬಹುದು.

ಕೆಂಗಲ್ಲರ ಕ್ಯಾಬಿನೆಟ್ ಟೀಮಿನ ಇನ್ನುಳಿದ ನಾಲ್ವರು ಈ ರಾಜ್ಯ ಕಂಡ ಪ್ರಾಮಾಣಿಕ ಜನಸೇವಕರು. ಶ್ರೀ ಟಿ. ಸಿದ್ದಲಿಂಗಯ್ಯ – ಕೈಗಾರಿಕೆ, ವಾಣಿಜ್ಯ ; ಶ್ರೀ ಎ.ಜಿ. ರಾಮಚಂದ್ರರಾವ್ – ಕಾನೂನು, ಶಿಕ್ಷಣ; ಶ್ರೀ ಚೆನ್ನಯ್ಯ – ಆರೋಗ್ಯ; ಶ್ರೀ ಕಡಿದಾಳ್ ಮಂಜಪ್ಪ – ಕಂದಾಯ, ಲೋಕೋಪಯೋಗಿ. ಕೆಲ ಕಾಲಾನಂತರ ಶ್ರೀ ಟಿ. ಸಿದ್ದಲಿಂಗಯ್ಯನವರು ರಾಜೀನಾಮೆ ನೀಡಿದರು. ತೆರವಾದ ಕೈಗಾರಿಕಾ ಖಾತೆಯನ್ನು ಎಚ್. ಸಿದ್ದವೀರಪ್ಪನವರಿಗೆ ವಹಿಸಲಾಯಿತು.

1953ರಲ್ಲಿ ರೋಮ್ ನಗರಲ್ಲಿ ನಡೆದ ಎಫ್‌ಎಓ ಸಮಾವೇಶದಲ್ಲಿ ಭಾರತದ ಪರವಾಗಿ ಭಾಗವಹಿಸಿ ನಿಯೋಗದ ನೇತೃತ್ವ ವಹಿಸಿದ್ದಲ್ಲದೆ ಹಲವೆಡೆ ಉಪನ್ಯಾಸ ನೀಡಿದರು. ಆಗ ಯೂರೋಪ್‌ನಲ್ಲಿ ಕೈಗಾರಿಕೆಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದರು. 1954ರಲ್ಲಿ ಬೆಂಗಳೂರಿನಲ್ಲಿ ನಡೆದ ಇಸಿಎಫ್‌ಇ ಸಮಾವೇಶದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

ಸಿದ್ದವೀರಪ್ಪನವರು ಕಾನೂನಿನಲ್ಲಿ ಅಪಾರ ಪರಿಣತಿ ಪಡೆದಿದ್ದು ಗೃಹಖಾತೆಯಂಥ ಜವಾಬ್ದಾರಿ ಸ್ಥಾನಕ್ಕೆ ಗೌರವ ತಂದುಕೊಡಲು ಸಾಧ್ಯವಾಯಿತು. ಕಾನೂನು ಸುವ್ಯವಸ್ಥೆ, ಶಾಂತಿಪಾಲನೆ, ಜನಕ್ಕೆ ನೆಮ್ಮದಿಯ ಬದುಕು, ಪೊಲೀಸ್ ಇಲಾಖೆಗೆ ಕಾನೂನು ತಿದ್ದುಪಡಿ, ಹೊಸ ವಿಧೇಯಕಗಳ ಸೇರ್ಪಡೆ, ಪೊಲೀಸ್ ವಸತಿ ವ್ಯವಸ್ಥೆ, ತರಬೇತು ಕೇಂದ್ರಗಳು, ಠಾಣೆಗಳ ನಿರ್ಮಾಣಕ್ಕೆ ಆಧ್ಯತೆ, ಇಲಾಖೆ ಸೇರ್ಪಡೆಗೆ ಗ್ರಾಮೀಣ ಮಕ್ಕಳಿಗೆ ಬೇಕಾದ ರಿಯಾಯ್ತಿ – ಒಟ್ಟಾರೆ ಆಡಳಿತದ ಮೇಲೆ ಹಿಡಿತದಿಂದ ಇಲಾಖೆಯಲ್ಲಿ ಇವರ ಹೆಸರು ಕೇಳಿದರೆ ಭಯಪಡುವಂತಾಗಿತ್ತು.

ಒಮ್ಮೆ ಐಜಿಪಿ ಹುದ್ದೆಯ ಅಧಿಕಾರಿಯೊಬ್ಬರ ಉದ್ಧಟತನದಿಂದಾಗಿ ಏನೋ ತಪ್ಪು ಘಟಿಸಿದೆ ಎಂಬುದು ಗೃಹ ಸಚಿವರ ಗಮನಕ್ಕೆ ಬಂತು. ಕೂಲಂಕಷ ಪರಿಶೀಲಿಸಿದರು. ಹೌದು, ರಾಜ್ಯ ಪೊಲೀಸ್‌ನ ಮುಖ್ಯ ಹುದ್ದೆಯ – ಐ.ಜಿ.ಪಿ.

ತಪ್ಪೆಸಗಿದ್ದರು. ಸಚಿವರು ರಜೆಯಮೇಲೆ ತೆರಳಲು ಆದೇಶಿಸಿದರು. ಆತ ಕೇರ್ ಮಾಡಲಿಲ್ಲ. ಇವರಿಗೆ ಅವಮಾನದ ಸಂದರ್ಭ ಅದು. ಕೋಪ ಬಂತು. ಸರ್ಕಾರಕ್ಕೆ ಬೇಕಿದ್ದ ನಿಷ್ಠಾವಂತ, ಪ್ರಾಮಾಣಿಕನ್ನು ಹೊರರಾಜ್ಯದಿಂದ 24 ಗಂಟೆ ಒಳಗೆ ಹುಡುಕಿ ಕರೆಸಿದರು! ಒಂದೇ ದಿನದಲ್ಲಿ ತಪ್ಪು ಮಾಡಿದ ಅಧಿಕಾರಿ ಮನೆಗೆ ತೆರಳಿದ. ಇದು ಅವರ ತಾಖತ್ತು ಅನ್ನುತ್ತಾರೆ ಅವರ ಕಾಲದ ಆಡಳಿತ ನೆನೆದ ಹಿರಿಯರು.

ಕಾನೂನು, ನಿಯಮಾವಳಿಗಳ ಅನ್ವಯ ಶ್ರೀಸಾಮಾನ್ಯನಿಗೆ, ರೈತರಿಗೆ, ಕಾರ್ಮಿಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪನಿ, ಕೆ.ಜಿ.ಎಫ್ ಗೋಲ್ಡ್ ಮೈನ್ಸ್ ರಾಷ್ಟ್ರೀಕರಣ ಮಾಡಿದ್ದು ಇವರ ಹೆಗ್ಗುರುತು. ದೇಶಕ್ಕೆ ಸ್ವಾತಂತ್ರ್ಯ ಬಂದರೂ ವಿದೇಶಿಯರ ಹಸ್ತಕ್ಷೇಪ, ಕಾರ್ಖಾನೆ ಮೇಲೆ ಇದ್ದ ಹಿಡಿತ ಕಡಿಮೆ ಆಗಿರಲಿಲ್ಲ. ಸ್ಥಳೀಯ ಕಾರ್ಮಿಕರನ್ನು ಶೋಷಿಸುತ್ತಿದ್ದರು. ನೂರಾರು ವರ್ಷಗಳ ಗಣಿಗಾರಿಕೆಯಿಂದ ರಾಜ್ಯದ ಚಿನ್ನದ ಸಂಪತ್ತು ಲೂಟಿ ಆಗಿತ್ತು. ಇದನ್ನು ಕೈಗಾರಿಕಾ ಸಚಿವರಾಗಿ ಅವರು ಸಹಿಸಿಕೊಳ್ಳಲಾಗಲಿಲ್ಲ. ಮುಖ್ಯಮಂತ್ರಿ ಕೆಂಗಲ್ ಹಾಗೂ ಸಚಿವ ಸಂಪುಟದ ಸಹೋದ್ಯೋಗಿಗಳ ಜತೆ ಚರ್ಚಿಸಿಯೇ ರಾಷ್ಟ್ರೀಕರಣದಂಥ ಮಹತ್ವದ ಕೆಲಸಕ್ಕೆ ಕೈ ಹಾಕಿದರು. ಕೆ.ಜಿ.ಎಫ್ ವಿಚಾರದಲ್ಲಿ ಜವಾಹರಲಾಲ್ ನೆಹರೂ ಅಸಮಾಧಾನ ಹೊಂದಿದ್ದರು. ಮೌಂಟ್‌ಬ್ಯಾಟನ್‌ರಿಗೆ ಆತ್ಮೀಯರಾಗಿದ್ದ ಜಾನ್ ಟೇಲರ್ ಅಂಡ್ ಕಂಪನಿ ವಿರುದ್ಧ ಯುದ್ಧ ಸಾರಿದ್ದರು. ಕೆಂಗಲ್‌ರ ಮೂಲಕ ಪ್ರಧಾನಿ ನೆಹರು ಅವರೂ ಅತೃಪ್ತಿಯನ್ನೂ ವ್ಯಕ್ತಪಡಿಸಿದ್ದರು.

ಕೈಗಾರಿಕಾ ಸಚಿವರಾಗಿದ್ದಾಗ ಈ ಕ್ಷೇತ್ರದಲ್ಲಿ ಕುಂಠಿತವಾಗಿದ್ದ ಕೆಲಸಗಳಿಗೆ ಪ್ರಾಧಾನ್ಯ ಕೊಟ್ಟರು. ವಿಧಾನಸಭೆಯಲ್ಲಿ ಸದಸ್ಯರು ಎತ್ತಿದ ಮೌಲಿಕ ಪ್ರಶ್ನೆಗಳು, ಸಚಿವರು ಕೊಟ್ಟ ಉತ್ತರ ಗಮನಿಸಿದರೆ; 1954ರಲ್ಲಿ ಇದ್ದ ಪರಿಸ್ಥಿತಿ ಈಗಲೂ ಇದೆ ಅನ್ನಿಸುತ್ತದೆ. ಬೆಂಗಳೂರು ಜನಸಂಖ್ಯೆ ಹೆಚ್ಚಳದ ಬಗ್ಗೆ, ಕೈಗಾರಿಕೆಗಳು ಬೆಂಗಳೂರಿನಲ್ಲೇ ಏಕೆ ಸ್ಥಾಪನೆ ಆಗಬೇಕು ಎಂಬಿತ್ಯಾದಿ ಪ್ರಶ್ನೆಗಳಿಗೆ ಈಗಲೂ ಉತ್ತರದ ತಡಕಾಟ ನಡೆದಿದೆ. ಕನ್ನಡಿಗರು ಆಲಸಿಗಳು. ತಮ್ಮ ಕೆಲಸಕ್ಕೂ ಮತ್ತೊಬ್ಬರ ಸಹಾಯ ಸಹಕಾರ ಅಪೇಕ್ಷಿಸುತ್ತಾರೆ, ಶ್ರಮದಾನ ಕಡಿಮೆಯೇ.... ಇಂಥ ಮಾತು ಇಂದಿನದಲ್ಲ. ಅದಕ್ಕೆ ಒಂದು ಪರಂಪರೆಯೇ ಇದೆ. ಕನ್ನಡಿಗರು, "ಕುರಿತೋತದೆಯಿಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್" ಎಂದು ಹತ್ತನೆ ಶತಮಾನದಲ್ಲೇ 'ಕವಿರಾಜಮಾರ್ಗ'ದಲ್ಲಿ ಉಲ್ಲೇಖಿಸಲಾಗಿದೆ.

ಸರ್ ಎಂ. ವಿಶ್ವೇಶ್ವರಯ್ಯನವರೊಡನೆ ಇವರ ಸಂಬಂಧ ಆತ್ಮೀಯವಾಗಿತ್ತು. ಅವರ ಪ್ರೀತಿವಿಶ್ವಾಸದಿಂದಾಗಿ ಕೈಗಾರಿಕಾ ಸಚಿವರಾಗಿದ್ದಾಗ ಹಲವಾರು ಬಾರಿ ಸಲಹೆ ಮಾರ್ಗದರ್ಶನ ಪಡೆಯುತ್ತಿದ್ದರು. ಅವರ ಸಲಹೆಯಂತೆ ಗ್ರಾಮೀಣ ಕೈಗಾರಿಕಾ ಅಭಿವೃದ್ಧಿಯೋಜನೆ ಜಾರಿಗೆ ತಂದರು. ಮುಂದೆ ಇದು ಖಾದಿ ಗ್ರಾಮೋದ್ಯೋಗ ಮಂಡಳಿ ಎಂದು ಆಯಿತು.

ರಾಜ್ಯದಲ್ಲಿ ಕೈಗಾರಿಕೆ ಸ್ಥಾಪನೆ ವಿಚಾರದಲ್ಲಿ ವಿಧಾನಸಭೆಯಲ್ಲಿ ಸಾಕಷ್ಟು ಚರ್ಚೆಗಳಾದವು. ಸದಸ್ಯರ ಮೌಲಿಕ ಪ್ರಶ್ನೆಗಳಿಗೆ ಸಚಿವ ಸಿದ್ದವೀರಪ್ಪನವರು ಸಮರ್ಥ ಉತ್ತರ ಕೊಟ್ಟಿದ್ದಾರೆ. ಕೈಗಾರಿಕೆಗಳಲ್ಲಿ ಶ್ರಮದಾನದ ಮೂಲಕ ಬೆವರಿಳಿಸುವ ಕಠಿಣ ಕೆಲಸಕ್ಕೆ ಕನ್ನಡಿಗರು ಯಾವತ್ತೂ ಹಿಂದೆ ಎಂಬ ಮಾತು ಶತಮಾನಗಳ ಅನುಭವದಿಂದಲೇ ತಿಳಿಯುತ್ತದೆ. ಹೀಗಾಗಿ ಪರಭಾಷಿಕರು ಕನ್ನಡಿಗರ ಮೇಲೆ ಸವಾರಿ ಮಾಡುತ್ತಾರೆ ಎಂಬ ಮಾತು ಚರ್ಚೆಯ ವಿಷಯವೂ ಔದು. ಅವರು ಹೇಳಿದ ಮಾತು ವಿಧಾನಸಭೆಯ ಚರ್ಚೆಯಲ್ಲಿ ದಾಖಲಾಗಿದೆ:

**"ನಮ್ಮ ರಾಜ್ಯದ ಜನಗಳಿಗೆ ದೈಹಿಕ ಶ್ರಮದ ಕೆಲಸಗಳೆಂದರೆ ಉತ್ಸಾಹ ಕಡಿಮೆ. ಇಲ್ಲಿ ದೈಹಿಕ ಶ್ರಮದ ಕೆಲಸಗಳಲ್ಲೆಲ್ಲಾ ಸಾಮಾನ್ಯವಾಗಿ ಬೇರೆ ಕಡೆಯಿಂದ ಬಂದವರು ತೊಡಗಿ ಜೀವನ ನಿರ್ವಹಿಸುತ್ತಿರುವುದನ್ನು ನಾವು ಕಾಣುತ್ತೇವೆ. ಎಲ್ಲೆಲ್ಲಿ ವ್ಯವಸಾಯದ ಕೂಲಿಯೇ ಇರಲಿ, ಕೈಗಾರಿಕೆಯ ಕೂಲಿಯೇ ಇರಲಿ, ನಮ್ಮ ರಾಜ್ಯದ ಬಾಂಧವರು ಅದರಲ್ಲಿ ತೊಡಗದೆ, ದೈಹಿಕ ಶ್ರಮದಲ್ಲಿ ಭಾಗವಹಿಸದೆ ಆಲಸ್ಯ ಮನೋಭಾವ ಏಕೆ ತೋರಿಸುತ್ತಿದ್ದಾರೆಂಬುದೇ ನನಗೆ ಗೊತ್ತಾಗುವುದಿಲ್ಲ. ಇದನ್ನು ಹೇಗೆ ಪರಿಹರಿಸಬೇಕೆಂದು ಯೋಚಿಸುವ ಕಾಲ ಬಂದಿದೆ. ಈ ಹೊತ್ತಿನ ದಿವಸ ಯಾವ ಮೂಲೆಯ ಹಳ್ಳಿಯನ್ನೇ ನೋಡಲಿ, ಇಲ್ಲಿ ನೆರೆಹೊರೆಯ ಸಂಸ್ಥಾನದ ಬಾಂಧವರು ಬಂದು ಕೆಲಸ ಮಾಡುತ್ತಿರುವುದನ್ನು ನೋಡಬಹುದು. ನಮ್ಮ ರಾಜ್ಯದವರು ಬೇರೆಡೆ ಇದ್ದರೂ ಕೆಲಸ ಮಾಡುವುದಿಲ್ಲ".**

ಇಲ್ಲಿಗಾಗಲೇ ಕೆಂಗಲ್ ನೇತೃತ್ವದ ಸರ್ಕಾರ ನಾಲ್ಕು ವರ್ಷ ಐದು ತಿಂಗಳು ಪೂರೈಸಿತ್ತು. ಆಗಲೇ ಆಂತರಿಕ ಸಮಸ್ಯೆ ತಲೆದೋರಿತ್ತು. ನಾಯಕತ್ವದ ವಿರುದ್ಧ ಭ್ರಷ್ಟಾಚಾರದ ಆರೋಪ ಕೇಳಿಬಂತು. ಪಕ್ಷದಲ್ಲಿ ಭಿನ್ನಾಭಿಪ್ರಾಯ, ಕಾಲೆಳೆಯುವಿಕೆ ಶುರುವಾಯಿತು. ಸಿದ್ದವೀರಪ್ಪನವರು ಮುಖ್ಯಮಂತ್ರಿಗಳ ಬೆಂಬಲಕ್ಕೆ ಇದ್ದರಾದರೂ, 1956 ಆಗಸ್ಟ್‌ನಲ್ಲಿ ಕೆಂಗಲ್ ಅವರು ಅನಿವಾರ್ಯವಾಗಿ ರಾಜೀನಾಮೆ ಕೊಡಬೇಕಾಯಿತು.

ಮುಂದೆ ಶ್ರೀ ಕಡಿದಾಳ್ ಮಂಜಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಗೃಹ, ಹಣಕಾಸು ಖಾತೆ, ಕೈಗಾರಿಕೆ, ಕೃಷಿ ಇಲಾಖೆ ಹಿಡಿತದಲ್ಲಿಟ್ಟುಕೊಂಡು ಅಧಿಕಾರ ನಡೆಸಿದ ಎಚ್. ಸಿದ್ದವೀರಪ್ಪನವರು ದಕ್ಷ, ಪ್ರಾಮಾಣಿಕ, ನಿಷ್ಠುರವಾದಿಯೆಂದೇ ಹೆಸರಾಗಿದ. ಇದ್ದುದ್ದನ್ನು ಇದ್ದಂತೆ ಹೇಳುವ ನೇರ ಮಾತುಗಾರರು. ಹೊರಗೆ ನೋಡಲು ಸ್ವಲ್ಪ ಗಡುಸು ವ್ಯಕ್ತಿಯ ಹಾಗೆ ಕಂಡರೂ, ಮೃದು ಹೃದಯಿ. ಜನಪರ ಚಿಂತನೆ ರೂಢಿಸಿಕೊಂಡಿದ್ದರು. ವಕೀಲ ವೃತ್ತಿಯ ತರುಣ ದಿನಗಳಿಂದಲೂ ರೈತರ ನೋವು, ದು:ಖಗಳಿಗೆ ಸ್ಪಂದಿಸುತ್ತಾ ಬಂದವರು ಅವರ ಅಗತ್ಯಗಳನ್ನು ಪೂರೈಸಿದವರು.

ಪೂನಾದಲ್ಲಿ ಕಾನೂನು ವ್ಯಾಸಂಗ ಮಾಡುವಾಗ ಶ್ರೀ ಕಡಿದಾಳ್ ಮಂಜಪ್ಪ, ಶ್ರೀ ಎಚ್.ಎಸ್. ರುದ್ರಪ್ಪ ಹಾಗೂ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಎಚ್. ಹೊಂಬೇಗೌಡ ಸಹಪಾಠಿಗಳಾಗಿದ್ದರು.

## ನಿಷ್ಠುರವಾದಿಗೆ ಬಂದ ತೊಡಕು : ಸೋಲಿನ ಕಹಿ

ಸದಾ ನ್ಯಾಯದ ಪರವಾಗಿದ್ದ ಸಿದ್ದವೀರಪ್ಪನವರಿಗೆ ಯಡವಟ್ಟು ಆಗಿದ್ದೇ ಇಲ್ಲಿ. ನೇರ ನುಡಿಯ ಇವರು ಅನೇಕರ ವಿರೋಧವನ್ನೂ ಕಟ್ಟಿಕೊಳ್ಳಬೇಕಾಯಿತು. ಬೆನ್ನಹಿಂದೆ ಶತ್ರುಗಳ ಪಡೆ ಸೃಷ್ಟಿಯಾಯಿತು. ಅದರಲ್ಲೂ ತಮ್ಮ ಕ್ಷೇತ್ರ ಹಾಗೂ ದಾವಣಗೆರೆಯ ಪ್ರತಿಷ್ಠಿತ ವರ್ತಕ ವೃಂದದಿಂದ ಭಾರೀ ವಿರೋಧ ಕಟ್ಟಿಕೊಂಡರು. ವರ್ತಕರೆಲ್ಲಾ ಒಂದಾದರು. ಬಡಪಾಯಿ ರೈತರಿಗೆ ಚಿಕ್ಕಮುಟ್ಟ ಕೈಸಾಲ ಕೊಟ್ಟು ತಮ್ಮ ಹಿಡಿತದಲ್ಲಿಟ್ಟುಕೊಂಡರು.

ಐದು ವರ್ಷದ ಅಧಿಕಾರಾವಧಿಯ ರಾಜ್ಯಾಡಳಿತ ಮುಗಿಯಿತು. 1957 ಹೆಜ್ಜೆ ಇರಿಸಿತು. ಇದು ರಾಜ್ಯದ ರಾಜಕೀಯ ಭವಿಷ್ಯದ ಎರಡನೇಘಟ್ಟ. ಅಂತೆ ಎರಡನೇ ಮಹಾ ಚುನಾವಣೆಗೆ ಸಿದ್ಧತೆ ನಡೆಯಿತು. ರಾಜಕೀಯ ಪಕ್ಷಗಳು, ಪಕ್ಷೇತರರು ಚುರುಕಾದರು. ಒಳಗೊಳಗೇ ಸಭೆ, ಚರ್ಚೆ ನಡೆದವು. ಜಾತಿ ಲೆಕ್ಕಾಚಾರವೂ ಶುರುವಾಯಿತು. ಚಿತ್ರದುರ್ಗ ಜಿಲ್ಲೆಯ ಬಲಿಷ್ಟ ಸಾಧು ಲಿಂಗಾಯಿತ ವರ್ಗಕ್ಕೆ ಸೇರಿದ ಸಿದ್ದವೀರಪ್ಪನವರನ್ನು ಸೋಲಿಸಲು ಉಪಜಾತಿ, ಪಂಗಡಗಳ 'ವರ್ತಕರು' ಒಗ್ಗಟ್ಟಾದರು. ಗೃಹಖಾತೆಯಂಥ ಪ್ರತಿಷ್ಠಿತ ಇಲಾಖೆಯನ್ನು ಸಮರ್ಥವಾಗಿ ನಿರ್ವಹಿಸಿದ್ದಂಥ ವ್ಯಕ್ತಿಗೇ ಜೀವ ಬೆದರಿಕೆಗಳು ಬಂದವು! ಕೆಳಜಾತಿ, ವರ್ಗಗಳನ್ನು ಎತ್ತಿಕಟ್ಟಿ ತಮ್ಮ ಹಿಡಿತದಲ್ಲಿಟ್ಟುಕೊಂಡರು. ಚುನಾವಣೆ ಘೋಷಣೆಯಾಯಿತು. ಹರಿಹರದಿಂದಲೇ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಸಿದ್ಧರಾದರು.

"ರಾಜ್ಯ ಆಡಳಿತದಲ್ಲಿ ಎಷ್ಟೇ ಬಿಗುವು ತೋರಿ ನೇರ ವ್ಯಕ್ತಿತ್ವ ಪ್ರದರ್ಶಿಸಿದ್ದರೂ ಕ್ಷೇತ್ರದಲ್ಲಿ ಅಪಪ್ರಚಾರ ನಡೆದಿತ್ತು. ಹಣದ ಪ್ರಭಾವ ಮತದಾರರ ಮೇಲೆ ಕರಾಳ ಹಸ್ತ ಚಾಚಿತ್ತು. ಆಗಿನ ಕಾಲದಲ್ಲಿ 'ಒಂದು ರೂಪಾಯಿಗೆ (ನೋಟಿಗೆ) ಒಂದು ಓಟು' ಎಂದು ಹಳ್ಳಿಗಳಲ್ಲೆಲ್ಲ ಮುಗ್ಧ ಜನರ ಮನಸು ಕೆಡಿಸಿದ್ದರು. ವರ್ತಕರ ದುಡ್ಡು ಕ್ಷೇತ್ರದಲ್ಲಿ ಓಡಾಡಿತು. ಆದರೂ ರೈತರ ಪರವಾಗಿ ಮಾಡಿದ್ದ ಕೆಲಸ ಗೆಲುವಿಗೆ ಸಹಾಯಕ ಆಗಬಹುದು ಎಂಬ ಆಶಾಕಿರಣ ಇತ್ತು. ಆದರೆ ಚುನಾವಣೆ ಫಲಿತಾಂಶ 'ಸಾಹೇಬರಿಗೆ' ವಿರುದ್ಧವಾಯಿತು. ಮಳಲ್ಕೆರೆ ರಾಮಣ್ಣ ಎಂಬ ಸಾಧಾರಣ ವ್ಯಕ್ತಿಯಿಂದ ಒಂದು ಸಾವಿರ ಮತಗಳ ಅಂತರದಿಂದ ಸೋಲಿನ ಕಹಿ ಅನುಭವಿಸಿದರು. ಇದು ಈ ರಾಜ್ಯದ ದುರಂತ. ನೇರ, ನಿಷ್ಠುರವಾದಿಗೆ ಜನ ಕೊಟ್ಟ ಬಳುವಳಿ." – ಎಂದು ಹುಡುಗರಾಗಿದ್ದಾಗ ಕಂಡ ಚುನಾವಣೆಯ ನೆನಪು ಮಾಡಿಕೊಂಡವರು ದಾವಣಗೆರೆ ಜಿಲ್ಲಾ ಪರಿಷತ್ತಿನ ಮಾಜಿ ಸದಸ್ಯ ಹನಗವಾಡಿ (ಬಣಕಾರ) ವಿರೂಪಾಕ್ಷಪ್ಪನವರು.

"ವರ್ತಕರಿಂದ ರೈತರಿಗೆ ಆಗುತ್ತಿದ್ದ ಅನ್ಯಾಯ ಸರಿಪಡಿಸಲು ಅವರನ್ನು ಸಂಘಟಿಸಿ, ರೆಗ್ಯುಲೇಟೆಡ್ ಮಾರ್ಕೆಟ್, ಸಹಕಾರ ಸಂಘ ಸ್ಥಾಪಿಸಿ, ಅವರಿಗೆ ನೈತಿಕ ಬೆಂಬಲ ಕೊಟ್ಟವರು ನನ್ನ ತಂದೆ. ರೈತರನ್ನು ಸಂಘಟಿಸಿದ್ದರ ಫಲವಾಗಿ ಅವರಿಗೆ ವರ್ತಕರಿಂದ ಬೆದರಿಕೆಗಳು ಬಂದವು. ಮುಗ್ಧ ರೈತರನ್ನು ಆಮಿಷಕ್ಕೆ ಒಳಗಾಗುವಂತೆ ತಂತ್ರ ರೂಪಿಸಿದ್ದ ವರ್ತಕರು, ಮುಂದೆ 1957ರ ವಿಧಾನಸಭಾ ಚುನಾವಣೆಯಲ್ಲಿ ಸೋಲು ಅನುಭವಿಸುವಂತೆ ಮಾಡಿದರು. ಯಾವುದನ್ನೇ ಆಗಲಿ ಇದ್ದಂತೆ ಹೇಳುವ ನೇರ ಮಾತುಗಾರರು. ಶುದ್ಧಹಸ್ತರು. ನಿಸ್ಪೃಹ ರಾಜಕಾರಣಿ. ಹೊರಗೆ ನೋಡಲು ಸ್ವಲ್ಪ ಗಡುಸು ವ್ಯಕ್ತಿಯ ಹಾಗೆ ಕಂಡರೂ, ಮೃದು ಹೃದಯಿ ಆಗಿದ್ದರು ನನ್ನ ತಂದೆ." – ಹೀಗೆ ನೆನಪು ಬಿಚ್ಚಿದವರು ಕಳೆದ ಐದು ದಶಕಗಳಿಂದ ಅಮೇರಿಕಾ ದೇಶದಲ್ಲಿ ನೆಲೆಸಿರುವ ಅವರ ಪುತ್ರ, ಡಾಕ್ಟರ್ ಹಾಲಸ್ವಾಮಿ.

* * *

## ಸೋಲಿನ ನಂತರ ನೇಗಿಲು ಹಿಡಿದು ಉಳುಮೆ!

ಚುನಾವಣೆಯ ಸೋಲು ಸಿದ್ದವೀರಪ್ಪನವರನ್ನು ಧೃತಿಗೆಡಲಿಲ್ಲ. ಮುಂದಿನ ಚುನಾವಣೆವರೆಗೆ ಸುಮ್ಮನೆ ಕೂರುವಂತಿರಲಿಲ್ಲ. ಯಾವ ಮತದಾರರು, ರೈತರು ಕೈ ಬಿಟ್ಟರೋ ಅಂಥವರ ನಡುವೆ ಇದ್ದು ಮತ್ತೆ ಚುನಾವಣೆ ಎದುರಿಸಬೇಕೆಂದು ನಿರ್ಧರಿಸಿದರು. ಹುಟ್ಟೂರು ಹರಿಹರ ತಾಲ್ಲೂಕಿನ ಹನಗವಾಡಿಗೆ ವಾಪಾಸಾದರು! ಪಿತ್ರಾರ್ಜಿತವಾಗಿ ಬಂದಿದ್ದ ಸಣ್ಣ ಜಮೀನಿನಲ್ಲಿ ದುಡಿಯಲು ಸಿದ್ದರಾದರು. ರಾಜ್ಯದ ಪ್ರತಿಷ್ಠಿತ ಖಾತೆಗಳ ನಿರ್ವಹಿಸಿದ್ದ ವ್ಯಕ್ತಿ ನೇಗಿಲು ಹಿಡಿದು ಉಳುಮೆ ಮಾಡುವುದೆಂದರೆ ಅದು ಸಾಮಾನ್ಯದ ಮಾತಾಗಿರಲಿಲ್ಲ. ಬಂಧು ಬಳಗ, ಊರಿನ ಜನತೆ ಹಾಗೂ ಕ್ಷೇತ್ರದ ಅವರ ಬೆಂಬಲಿಗರಿಗೆ ಈ ನಿರ್ಧಾರದಿಂದ ಆಶ್ಚರ್ಯದ ಜತೆ ನಂಬಲಾರದ ಸುದ್ದಿಯೂ ಆಯಿತು. ಶೇಂಗಾ, ಹತ್ತಿ, ಜೋಳ ಮೊದಲಾದ ಬೆಳೆಗಳನ್ನು ಬೆಳೆದರು. ಈ ಸಂದರ್ಭದಲ್ಲಿ ಅವರು ಕಷ್ಟಪಟ್ಟ ಕ್ಷಣಗಳನ್ನು ಕಣ್ಣಾರೆ ಕಂಡವರು (ಈಗ ವಯೋವೃದ್ಧರಾಗಿರುವವರು) ಊರಲ್ಲಿ ಹಲವರಿದ್ದಾರೆ. ಆ ದಿನಗಳಲ್ಲಿ ಕಂಡ ದುಡಿಮೆಯ ದಿನಗಳನ್ನು ಅವರ ಸಹೋದರ ಸಂಬಂಧಿ ಜಿಲ್ಲಾ ಪರಿಷತ್ ಮಾಜಿ ಸದಸ್ಯ ಹನಗವಾಡಿ ವಿರೂಪಾಕ್ಷಪ್ಪನವರು ತಮ್ಮ ನೆನಪಿನ ಜೋಳಿಗೆಯಿಂದ ಬಿಚ್ಚಿದ್ದು ಹೀಗೆ: "ಒಮ್ಮೆ ಶೇಂಗಾ ಬೆಳೆದು, ಗಿಡಗಳನ್ನು ಕಿತ್ತು ಹಾಕಿದ ಸಂದರ್ಭದಲ್ಲಿ ಹೊಲದ ತುಂಬಾ ಕಾಗೆ, ಗುಬ್ಬಿ, ಗೊರವಂಕ ಮೊದಲಾದ ಹಕ್ಕಿ, ಪಕ್ಷಿಗಳು ಸಾಕಷ್ಟು ತೊಂದರೆ ಕೊಟ್ಟವು. ಕೈಯಲ್ಲಿ ಕವಣೇ ಕಲ್ಲು ಹಿಡಿದು ಅವುಗಳನ್ನು ಬೆನ್ನತ್ತಿ ಹೋಗಿ ಓಡಿಸಲು ಹರಸಾಹಸ ಮಾಡುತ್ತಿದ್ದರು. ಕುಳ್ಳನೆಯ ಸ್ವಲ್ಪ ದಢೂತಿ ದೇಹ ಅವರದ್ದು. 'ಸಾಹೇಬರು' ಓಡಲು ತೊಡಕಾಗಿ ಒಂದೆರಡುಬಾರಿ ಎಡವಿ ಬಿದ್ದರು. (ನಾವೆಲ್ಲಾ

ಅವರನ್ನು 'ಸಾಹೇಬರು' ಅಂತಲೇ ಕರೆಯುತ್ತಿದ್ದೆವು.) ಹತ್ತಿರ ಹೋಗಿ, ಏಕೆ ಸಾಹೇಬರೆ ಇದೆಲ್ಲ ಕಷ್ಟ? ವಾಪಾಸು ಪೇಟೆಗೆ ಹೋಗಿ. ನಿಮ್ಮ ಲಾಯರ್ ಕೆಲಸ ಮುಂದುವರೆಸಿ, ನಾವು ಈ ಹೊಲ ನೋಡಿಕೊಂಡು ಬೆಳೆದದ್ದು ತಂದುಕೊಡ್ತೇವೆ ಎಂದು ಹೇಳಿದೆವು. ನಮ್ಮ ಮಾತು ಅವರಿಗೆ ಸರಿ ಅನ್ನಿಸಿರಬೇಕು. ವಾಪಾಸು ಹೋಗಿ ಲಾಯರ್‌ಗಿರಿ ಮಾಡಿದರು...."

ಸಿದ್ದವೀರಪ್ಪನವರು ವಾಸ್ತವವಾದಿ. ಮಾತು – ಕೃತಿ ಬೇರೆಬೇರೆ ಎಂದು ಭಾವಿಸಲೇ ಇಲ್ಲ. ತಾವು ಶ್ರಮಜೀವಿಯೂ ಆಗಬಲ್ಲರು, ರೈತನ ಕಷ್ಟವನ್ನು ಅರಿಯಲು ನೇಗಿಲೂ ಹಿಡಿಯಬಲ್ಲರು ಎಂಬುದಕ್ಕೆ ಮೇಲಿನ ಉದಾಹರಣೆಯೇ ಸಾಕ್ಷಿ. ತಮ್ಮ ರಾಜಕೀಯ ಏರುಪೇರಿಗೆ ಕಾರಣರಾದ ವರ್ತಕ ವೃಂದವನ್ನು ಎಂದೂ ಅವರು ಕ್ಷಮಿಸಲಿಲ್ಲ. ಹೀಗಾಗಿ ಸೋಲಿನ ಕಹಿ ಮರೆಯದೆ ಒಮ್ಮೆ ರೈತರ ಶೋಷಣೆಗೆ ಕಾರಣರಾದ ವ್ಯಾಪಾರಸ್ಥರ ಬಗ್ಗೆ ಅವರು ವಿಧಾನಸಭೆಯಲ್ಲಿ ಹೇಳಿದ್ದು ದಾಖಲಾಗಿದೆ. ತಮ್ಮ ಮನದಾಳದ ನೋವು ಅಲ್ಲಿ ವ್ಯಕ್ತವಾಗಿದ್ದು ಹೀಗೆ :

**"ಇವತ್ತಿನ ದಿವಸ ಈ ರಾಜ್ಯ ನೇಗಿಲಯೋಗಿಯ ಕೈಯಲ್ಲಿಲ್ಲ. ಈ ರಾಜ್ಯ ಇರುವುದು ತಕ್ಕಡಿ ಹಿಡಿಯುವ ವ್ಯಾಪಾರಸ್ಥರ ಕೈಯಲ್ಲಿ ಇದೆ. ಈ ರಾಜ್ಯದಲ್ಲಿ ಉಳಿದವರನ್ನು ಬಿಟ್ಟು ಇವರ ಹೊಟ್ಟೆತುಂಬಾ ತುಪ್ಪ ದೊರೆಯುವ ಹಾಗೆ ಅನುಕೂಲ ಮಾಡಿಕೊಳ್ಳಲು ಇವರು ಹೊರಟಿದ್ದಾರೆ. ಕರೆಯುವ ಎಮ್ಮೆಯ ಕೆಚ್ಚಲು ಕೊಯ್ದರೂ ಚಿಂತೆ ಇಲ್ಲ ಇವರ ಹೊಟ್ಟೆಗೆ ತುಂಬಾ ಹಾಲು ಬೇಕು. ಇದು ನಮ್ಮ ರಾಜ್ಯದ ದುರ್ದೈವ."**

**ಹತ್ತು ವರ್ಷ ಕಾಂಗ್ರೆಸ್ ಟಿಕೆಟ್ ಆಟ?**

ಮುಂದೆ ದಾಣಗೆರೆಯಲ್ಲಿ ತಮ್ಮ ಲಾಯರ್ ವೃತ್ತಿ ಮುಂದುವರೆಸುತ್ತಲೇ ಜನಸಂಪರ್ಕದಲ್ಲಿ ಇರತೊಡಗಿದರು. ಅಲ್ಲಿಗಾಗಲೇ ಒಮ್ಮೆ ಸೋಲಿಸಿದ್ದ 'ವರ್ತಕ ಗುಂಪು' ಪುನಃ ಇವರು ರಾಜಕಾರಣದಲ್ಲಿ ಮೇಲೆ ಬರಬಾರದು ಎಂದು ಹಣ ಖರ್ಚುಮಾಡಿ ಒಳ ರಾಜಕೀಯ ಶುರು ಮಾಡಿದರು. ಸ್ಥಳೀಯ ರಾಜಕಾರಣವನ್ನು ಗೋಜಲು ಮಾಡಿಟ್ಟು ಹರಿಹರ ಹಾಗೂ ದಾವಣಗೆರೆ – ಎರಡರಲ್ಲೂ ತಮ್ಮ ಪ್ರಾಬಲ್ಯ ಮೆರೆದರು. ಅವರ ಮೇಲಿನ ದ್ವೇಶದಿಂದಾಗಿ ಒಂದೇ ಜಾತಿ/ಪಂಗಡ ಹಾಗೂ ಉಪ ಪಂಗಡಗಳ ಪ್ರಮುಖರನ್ನು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬಳಸಿಕೊಂಡರು.

ಆಗಲೇ ಸ್ವಾತಂತ್ರ್ಯ ಪೂರ್ವದಲ್ಲೇ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಎದುರಾಳಿಯಾಗಿದ್ದ ತಮ್ಮದೇ ಜಾತಿಯ ಶ್ರೀ ಕೊಂಡಜ್ಜಿ ಬಸಪ್ಪ ಹಾಗೂ ಹರಿಹರದ ಗಾಂಜೀವೀರಪ್ಪ ಮೊದಲಾದ ಧುರೀಣರನ್ನು ಇವರ ವಿರೋಧಿಗಳನ್ನಾಗಿ ಗುರ್ತಿಸಿದರು. ವರ್ತಕವೃಂದ ಈ ಇಬ್ಬರನ್ನು ಬೆಂಬಲಿಸಿತು. ಹರಿಹರದಿಂದ ಗಾಂಜೀವೀರಪ್ಪ ಅವರನ್ನು ಸಿದ್ದವೀರಪ್ಪನವರ ವಿರುದ್ಧ ಎತ್ತಿಕಟ್ಟಿದರು. ಸೌಮ್ಯ ಹಾಗೂ ಸಾಧು ಸ್ವಭಾವದ

ಕೊಂಡಜ್ಜಿ ಬಸಪ್ಪ ಅವರು ದಾವಣಗೆರೆಯನ್ನು ತಮ್ಮ ರಾಜಕೀಯ ಚಟುವಟಿಕೆಯ ಸ್ಥಾನ ಮಾಡಿಕೊಂಡರು. ಇದೇ ಸಮಯದಲ್ಲಿ ಸಿದ್ದವೀರಪ್ಪ ಕರ್ನಾಟಕ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಬೇರೆಬೇರೆ ಹಂತಗಳಲ್ಲಿ ಬೆಳೆದ ರಾಜಕಾರಣದ ಕರಾಮತ್ತು 'ಸಿದ್ದವೀರಪ್ಪನನ್ನು ಮೇಲೆ ಬರಲು ಬಿಡಬಾರದು' ಎಂಬ ಶಪಥವನ್ನು ತೊಟ್ಟಂತಿತ್ತು. ಪರಿಣಾಮ ಮುಂದಿನ "ಹತ್ತು ವರ್ಷ" ಇವರಿಗೆ ಕಾಂಗ್ರೆಸ್ ಟಿಕೆಟ್ ಇಲ್ಲದಂಥಾ ವಾತಾವರಣವನ್ನು ಸ್ಥಳೀಯ ಈ ವರ್ತಕ ರಾಜಕಾರಣ ನಿರ್ಮಾಣ ಮಾಡಿತು!

ಈ ಸಮಯದಲ್ಲಿ ಶ್ರೀ ನಿಜಲಿಂಗಪ್ಪನವರ ಕೈಯಲ್ಲಿ ಅಧಿಕಾರ ಕೇಂದ್ರೀಕೃತವಾಗಿತ್ತು. ಒಂದೇ ಜಿಲ್ಲೆಯವರಾಗಿದ್ದ ಅವರಲ್ಲಿ ರಾಜಕೀಯ ವಿರೋಧ ಮನೆಮಾಡಿತ್ತು. ಹೀಗಾಗಿ ಅವರಿಗೆ ಯಾವುದೇ ಅವಕಾಶ ದೊರೆಯಲಿಲ್ಲ. ಮುಂದೆ ಕಾಂಗ್ರೆಸ್ ಪಕ್ಷ ತ್ಯಜಿಸಿ ಜನತಾಪಕ್ಷದ ಹುಟ್ಟಿಗೆ ಕಾರಣರಾದವರಲ್ಲಿ ಪ್ರಮುಖರು.

## ಜನತಾಪಕ್ಷದ ಉದಯ

ಸ್ಥಳೀಯ ರಾಜಕಾರಣದಿಂದ ಬೇಸತ್ತು ರಾಜಕೀಯ ಸನ್ಯಾಸವನ್ನೇನು ಇವರು ಸ್ವೀಕರಿಸಲಿಲ್ಲ. ರಾಜ್ಯದಾದ್ಯಂತ ಕಾಂಗ್ರೆಸ್ ಒಳಗೊಂಡಂತೆ ಬೇರೆಬೇರೆ ಪಕ್ಷಗಳ ಧುರೀಣರು, ದೊಡ್ಡ ದೊಡ್ಡವ್ಯಕ್ತಿಗಳ ಸಂಪರ್ಕ ನಿರಂತರವಾಗಿ ಇರಿಸಿಕೊಂಡಿದ್ದರು. 'ಕಾಂಗ್ರೆಸ್ ಪಕ್ಷ' ಆಗಲೇ ಕವಲು ದಾರಿಯಲ್ಲಿತ್ತು. ಹಲವು ಹಿರಿಯ ರಾಜಕಾರಣಿಗಳು ಗೊಂದಲದಲ್ಲಿದ್ದರು. ಒಳ ರಾಜಕೀಯ, ಕಾಲೆಳೆಯುವಿಕೆಯಿಂದ ಬೇಸತ್ತಿದ್ದ ಹಲವರು ಈ ಪಕ್ಷದಿಂದ ದೂರವೇ ಉಳಿದರು. ಇಂಥ ಏರುಪೇರಿನ ಸಂದರ್ಭದಲ್ಲಿ ಸಮಾನ ಮನಸ್ಕರ ಸಭೆಯೊಂದು ನಡೆಯಿತು. ಹಲವು ಸಲಹೆ ಸೂಚನೆ ಚರ್ಚೆಯ ಮಗ್ಗಲಾದವು. ಒಂದು ಪ್ರಾದೇಶಿಕ ಪಕ್ಷದ ಹೆಸರಿನಡಿ ರಾಜ್ಯದ ಹಲವು ಕ್ಷೇತ್ರಗಳಲ್ಲಾದರೂ ಸ್ಪರ್ಧಿಸಲು ತೀರ್ಮಾನಿಸಲಾಯಿತು. ಅದರಂತೆ 'ಜನತಾಪಕ್ಷ' ಎಂಬ ಪ್ರಾದೇಶಿಕ ಪಕ್ಷವನ್ನು ಅಸ್ತಿತ್ವಕ್ಕೆ ತಂದರು. 'ತಕ್ಕಡಿ' ಹೊಸಪಕ್ಷದ ಚಿನ್ಹೆಯಾಯಿತು.

ರಾಜ್ಯದ ಪ್ರಮುಖರೇ ಈ ಪಕ್ಷವನ್ನು ಮುನ್ನಡೆಸಲು ಮುಂದೆ ಬಂದರು. ಶ್ರೀ ಸಾಹುಕಾರ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಎಚ್. ಸಿದ್ದವೀರಪ್ಪ ಅವರನ್ನೂ ಒಳಗೊಂಡಂತೆ ಶ್ರೀ ಟಿ. ಸುಬ್ರಹ್ಮಣ್ಯಂ, ಶ್ರೀ ಎಚ್.ಎಂ. ಚನ್ನಬಸಪ್ಪ, ಶ್ರೀ ಎ.ಜಿ. ರಾಮಚಂದ್ರರಾಯ ಮುಂತಾದವರು ರಾಜ್ಯದಾದ್ಯಂತ ಪ್ರವಾಸ ಮಾಡಿದರು. ಆದಷ್ಟು ಸಂಘಟನೆ ಮಾಡಿ 1967ರ 'ಮೈಸೂರು ರಾಜ್ಯ ವಿಧಾನಸಭೆ' ಚುನಾವಣೆಗೆ ಸಿದ್ದರಾದರು. ಅದರಂತೆ ರಾಜ್ಯದಾದ್ಯಂತ ಕಾಂಗ್ರೆಸ್ ಪಕ್ಷಕ್ಕೆ ವಿರುದ್ಧವಾಗಿ 'ಜನತಾಪಕ್ಷ' ಜನತಾ ನ್ಯಾಯಾಲಯದಲ್ಲಿ ನಿಂತು ಜನಬೆಂಬಲ ಅಪೇಕ್ಷಿಸಿತು. ಅಲ್ಪ ಕಾಲದಲ್ಲೇ ಪಕ್ಷಕ್ಕೆ ಒಲವು ಮೂಡುವ ವಾತಾವರಣ ಕಾಣಬಂತು. ಫಲವಾಗಿ ಪಕ್ಷದಲ್ಲಿದ್ದ ಎಲ್ಲಾ ಧುರೀಣರು ಚುನಾವಣೆಯಲ್ಲಿ ಗೆದ್ದರು.

ಜನತಾಪಕ್ಷದ ಸಂಸ್ಥಾಪಕರಲ್ಲೊಬ್ಬರಾದ ಸಿದ್ದವೀರಪ್ಪನವರಿಗೆ ಹರಿಹರ ವಿಧಾನಸಭೆ ಕ್ಷೇತ್ರ 10 ವರ್ಷಗಳ ನಂತರ ಧಕ್ಕಿತು. ಹೊಸಪಕ್ಷವನ್ನು ಜನ ಸ್ವೀಕರಿಸಿದರಾದರೂ ಅವರ ಗೆಲುವಿನ ಅಂತರ ಕೇವಲ 504 ಮತಗಳು. ಜನ ನ್ಯಾಯದ ತಕ್ಕಡಿಯಲ್ಲಿ ಗೆಲುವಿಟ್ಟು ಅವರ ಕೈಗೆ ಇಟ್ಟರು. ಚಿತ್ರದುರ್ಗ ಜಿಲ್ಲೆಯಲ್ಲಿ ಸಿದ್ದವೀರಪ್ಪ ಅವರನ್ನು ಒಳಗೊಂಡಂತೆ ಮೂರು ಸ್ಥಾನಗಳಲ್ಲಿ ಗೆಲುವಿನ ನಗೆ ಬೀರಿದರು. ಭರಮಸಾಗರದಿಂದ ಶ್ರೀ ಜಿ. ದುಗ್ಗಪ್ಪ, ಹೊಳಲ್ಕೆರೆಯಿಂದ ಬಿ. ಪರಮೇಶ್ವರಪ್ಪ ಅವರುಗಳು ಸಿದ್ದವೀರಪ್ಪನವರು ಹಿಡಿದ ತಕ್ಕಡಿಯನ್ನು ಸಮದೂಗಿದರು. ಇದೇ ಚುನಾವಣೆಯಲ್ಲಿ ದಾವಣಗೆರೆಯಿಂದ ಶ್ರೀ ಕೊಂಡಜ್ಜಿ ಬಸಪ್ಪ, ಚಿತ್ರದುರ್ಗದಿಂದ ಶ್ರೀ ಎಚ್. ಬೋರಯ್ಯ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದರು.

## ಒಲಿದ ವಿರೋಧ ಪಕ್ಷದ ಸ್ಥಾನ

ಈ ಚುನಾವಣೆಯಲ್ಲಿ ಕಾಂಗ್ರೆಸ್‌ನ ಧುರೀಣ ಶ್ರೀ ಎಸ್. ನಿಜಲಿಂಗಪ್ಪ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಹೊಸದಾಗಿ ಹುಟ್ಟಿದ್ದ ಪ್ರಾದೇಶಿಕ ಪಕ್ಷ ಜನತಾಪಕ್ಷ ಎರಡನೇ ಅಧಿಕ ಶಾಸಕರನ್ನು ಪಡೆದ ಪಕ್ಷವಾಗಿತ್ತು. ಹೀಗಾಗಿ ವಿರೋಧ ಪಕ್ಷದ ಸ್ಥಾನ ಸಹಜವಾಗಿ ಆ ಪಕ್ಷದ ಬಾಗಿಲು ತಟ್ಟಿತು. 'ಜನತಾಪಕ್ಷ'ದಿಂದ ಆಯ್ಕೆಯಾದವರಲ್ಲಿ ಅನೇಕ ಪ್ರಮುಖರು ರಾಜಕಾರಣ ಹಾಗೂ ಆಡಳಿತದಲ್ಲಿ ಅನುಭವ ಪಡೆದವರೇ ಆಗಿದ್ದರು. ಉತ್ತಮ ವಾಕ್ಪಟು, ನಿಷ್ಠುರ ರಾಜಕಾರಣಿ ಎಂದೇ ಹೆಸರಾಗಿದ್ದ ಶ್ರೀ ಎಚ್. ಸಿದ್ದವೀರಪ್ಪ ಅವರನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿದರು. ಇದರಿಂದಾಗಿ ಅವರ ಜವಾಬ್ದಾರಿ ಮತ್ತಷ್ಟು ಹೆಚ್ಚಿತು. ಸರ್ಕಾರದ ಕಾರ್ಯ ವೈಖರಿಗೆ ವಿರೋಧ ಪಕ್ಷ ಹೇಗೆ ಪ್ರತಿಕ್ರಿಯಿಸುತ್ತದೆ? ಎಂಬುದು ಜನತೆಯಲ್ಲಿ ಕುತೂಹಲ ಹುಟ್ಟಿಸಿತು.

ಆಡಳಿತರೂಢ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಅನೇಕ ಸಂಗತಿಗಳು ಘಟಿಸಿದವು. ನಿಜಲಿಂಗಪ್ಪನವರ ಹಾದಿ ತಪ್ಪಿದ ಆಡಳಿತಕ್ಕೆ ಕಡಿವಾಣ ಹಾಕುವ ಮಾರ್ಗಗಳನ್ನು ಹುಡುಕಿದ್ದರು. ಹಿಂದಿನ ತಮ್ಮ ಒಂದು ಅವಧಿಯ ಅಧಿಕಾರವಧಿಯ ವಿವಿಧ ಸಚಿವ ಹುದ್ದೆಯ ಅನುಭವ ಹೇಗೆ? ಏನು? ಎಂಬ ಬಗ್ಗೆ ಮಾಹಿತಿ ಇತ್ತು. ಯಾವುದೇ ವಿಷಯದ ಪ್ರಸ್ತಾಪ ಬಂದರೂ ಅದಕ್ಕೆ ಅಧ್ಯಯನಪೂರ್ಣ ವಿಷಯ ಸಂಗ್ರಹ ಇದ್ದೇ ಇರುತ್ತಿತ್ತು. ಸರ್ಕಾರದ ಮುನ್ನಡೆಗೆ ಆರ್ಥಿಕ ವಿಚಾರಗಳು ಮುಖ್ಯವಾಗುತ್ತವೆ, ಇಲ್ಲಿ ಯಾವುದೂ ಗೌಣವಲ್ಲ. ಜನರ ತೆರಿಗೆ ಹಣ ಪೋಲಾಗದಂತೆ ಸರ್ಕಾರ ಎಚ್ಚರ ವಹಿಸಬೇಕು. ಜತೆಗೆ ಜನೋಪಯೋಗಿ ಯೋಜನೆ ರೂಪಿಸಬೇಕು. ಇಂಥವುಗಳಲ್ಲಿ ಆಡಳಿತರೂಢ ಪಕ್ಷ ಎಡವಿದ್ದನ್ನು ಎತ್ತಿ ತೋರಿದರು. ಉದಾ: ನೂರಾರು ವರ್ಷಗಳ ಇತಿಹಾಸವಿದ್ದ ಎಂ.ಎಸ್.ಕೆ. ಮಿಲ್ ಸಾಕಷ್ಟು ನಷ್ಟದಲ್ಲಿದ್ದು

ತನ್ನ ಕಾರ್ಯಚಟುವಟಿಕೆ ಸ್ಥಬ್ದಗೊಳಿಸಿ, ರೋಗಗ್ರಸ್ಥವಾದಾಗ ಅದರ ಪುನರುತ್ಥಾನಕ್ಕೆ ಸರ್ಕಾರ ಬೊಕ್ಕಸದಿಂದ ಕೊಡಮಾಡಿದ ಹಣ ಕೋಟಿಗಟ್ಟಲೆ. ಅಲ್ಲಿ ಕೂತ ಅಧಿಕಾರಶಾಹಿಯ ದುಂದುವೆಚ್ಚ, ಉತ್ಪಾದನೆಯಲ್ಲಿನ ಏರಿಳಿತ, ಮಾರುಕಟ್ಟೆಯ ವೈಫಲ್ಯತೆಗಳಿಂದ ಮಿಲ್ ಅಧೋಗತಿಗೆ ತಲುಪಿತು. ಅಂಕಿಅಂಶಗಳ ಸಮೇತ ಎಲ್ಲಿ ತಪ್ಪಿದೆ ಲೆಕ್ಕಾಚಾರ ಎಂಬುದನ್ನು ಎಳೆಎಳೆಯಾಗಿ ಬಿಚ್ಚಿಟ್ಟು ಸರ್ಕಾರಕ್ಕೆ ಇರಸು ಮುರಸು ತರಿಸಿದ್ದೂ ಉಂಟು. ಇದರ ಜತೆ ರಾಜ್ಯ ನ್ಯಾಷನಲ್ ಪೇಪರ್ ಮಿಲ್, ಕೃಷ್ಣರಾಜೇಂದ್ರ ಮಿಲ್ – ಎಲ್ಲವೂ ದಿವಾಳಿ ಆದ ಸಂಸ್ಥೆಗಳೇ. ಇಂಥವಕ್ಕೆ ಏಕೆ ಹಣ ಸುರಿಯುತ್ತೀರಿ? ಇದರಿಂದ ಮಣ್ಣಿನ ಮಕ್ಕಳಿಗೇನು ಉಪಯೋಗ ಬಂತು? ಎಂದು ಪ್ರಶ್ನಿಸಿದರು.

ಇಲ್ಲೂ ಕೂಡ ಕೈಗಾರಿಕೆಗಳೆಂಬ ಬಕಾಸುರರೇ ಹೆಚ್ಚಿನ ಪ್ರಮಾಣದಲ್ಲಿ ಹಣ ನುಂಗಿಹಾಕಿದ್ದನ್ನು ಗಮನಿಸಿ ಹೇಳುತ್ತಾರೆ: "ಈ ದುಡ್ಡನ್ನು ಅನ್ಯಾಕ್ರಾಂತವಾಗಿ ಹಂಚಿದ್ದೀರಿ. ಯಾರಿಗೆ ಹಂಚಿದಿರಿ? ರೈತರಿಗಂತೂ ಹಂಚಲಿಲ್ಲ. ಯಾರು ನಿಮ್ಮ ಹಿಂದೆ ಇದ್ದುಕೊಂಡು ಬಾಲಬಡುಕರಾಗಿದ್ದಾರೋ, ನಿಮಗೆ ಸಲಾಮು ಹೊಡೆಯುತ್ತಾರೋ, ಸಹಕಾರ ಸಂಘ ಮಾಡುತ್ತೇವೆ ಎಂದು ಯಾರು ಹೇಳಿಕೊಂಡು ಓಡಾಡಿದರೋ ಅಂಥವರು ರಾಜ್ಯ ಬೊಕ್ಕಸಕ್ಕೇ ಕೈ ಹಾಕಿದರು. ನೀವು ಸುಮ್ಮನಿದ್ದಿರಿ...." ಹೀಗೆ ಸರ್ಕಾರವನ್ನು ಹಲವು ರೀತಿ ತರಾಟೆಗೆ ತೆಗೆದುಕೊಂಡರು.

ಮುಖ್ಯಮಂತ್ರಿಯಾಗಿದ್ದ ಎಸ್. ನಿಜಲಿಂಗಪ್ಪನವರು ಕೆಲ ಕಾಲಾ ನಂತರ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು. ರಾಜ್ಯದ ಒಬ್ಬರು ರಾಷ್ಟ್ರೀಯ ಪಕ್ಷದ ದೊಡ್ಡ ಹುದ್ದೆಗೆ ಹೋಗಿದ್ದೇ ಅಪರೂಪದ ಸಂಗತಿ. ರಾಜ್ಯದಲ್ಲಿ ಖಾಲಿಯಾದ ಮುಖ್ಯಮಂತ್ರಿ ಸ್ಥಾನದ ಅದೃಷ್ಟ ನಿಜಲಿಂಗಪ್ಪನವರ ಶಿಷ್ಯ/ಸ್ನೇಹಿತ ಶ್ರೀ ವೀರೇಂದ್ರ ಪಾಟೀಲರನ್ನು ಹುಡುಕಿಬಂತು.

## ವೀರೇಂದ್ರ ಪಾಟೀಲರ ಸರ್ಕಾರ ಪತನ:

ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದವೀರಪ್ಪನವರು ವೀರೇಂದ್ರ ಪಾಟೀಲರ ಆಡಳಿತಕ್ಕಂತೂ ಸಿಂಹಸ್ವಪ್ನವಾದವರು. ಹೆಜ್ಜೆಹೆಜ್ಜೆಗೂ ಪಾಟೀಲರ ಆಡಳಿತದ ತಪ್ಪನ್ನು ಎತ್ತಿ ಹಿಡಿದು ವಿಧಾನಸಭೆಯಲ್ಲಿ ಸಮರ್ಥವಾಗಿ ವಾಸ್ತವವನ್ನು ಬಿಚ್ಚಿಟ್ಟರು. 'ಬಿಜಾಪುರ, ಗುಲಬರ್ಗಾ ಮೊದಲಾದ ಕಡೆ ಜನಸಾಮಾನ್ಯನಿಗೆ ರಕ್ಷಣೆ ಇರಲಿ, ಅಲ್ಲಿನ ಶಾಸಕರಿಗೇ ರಕ್ಷಣೆ ಇಲ್ಲವಾಗಿದೆ. ಒಂದು ಕುಟುಂಬದ 19 ಜನರನ್ನು ಬರ್ಬರವಾಗಿ ಕೊಲೆ ಮಾಡಲಾಗಿದ್ದು; ಅಲ್ಲಿನ ಜನ ಮೈಮೇಲೆ ತೊಡಲು ಒಂದು ಹೊಸ ಅಂಗಿ ಹೊಲಿಸಿಕೊಟ್ಟರೆ ಸಾಕು, ಒಬ್ಬ ವ್ಯಕ್ತಿಯನ್ನು ಖೂನಿ ಮಾಡುವ ಹಂತಕ್ಕೂ ಹೋಗುತ್ತಾರೆ. ಅಲ್ಲಿನ ಮುಗ್ಧ ಜನರನ್ನು ಇಂಥ ಕೃತ್ಯಕ್ಕೆ ಬಳಸುವ ಕೈಗಳು ಇವೆ. ಅಧಿಕಾರಗಳೇ ಇಂಥಲ್ಲಿ ಶಾಮೀಲಾಗಿ ಕೂತಿದ್ದಾರೆ. ಕಾನೂನು ಅಲ್ಲಿ

ಮುದುಡಿ ಕೂತಿದೆ. ಚುನಾವಣೆ ಸಂದರ್ಭದಲ್ಲಂತೂ ಕೇಳುವವರೇ ಇಲ್ಲವಾಗಿದೆ. ಸರ್ಕಾರ ಇದೆಯೋ ಇಲ್ಲವೋ ಎಂಬ ಅನುಮಾನ ಕಾಡುತ್ತಿದೆ. ಸುರಪುರದ ಶಾಸಕರಿಗೇ ಪ್ರಾಣ ಬೆದರಿಕೆ ಇರುವುದರಿಂದ ತತ್‌ಕ್ಷಣ ಅವರಿಗೆ ಪೊಲೀಸ್ ರಕ್ಷಣೆ ನೀಡಿ'.

– ಹೀಗೆ ಏಪ್ರಿಲ್ 4, 1968ರಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ಸರ್ಕಾರದ ನಿಷ್ಕ್ರಿಯತೆ ಬಗ್ಗೆ ಬೆಳಕು ಚೆಲ್ಲಿದರು.

ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿ ನೆಮ್ಮದಿಯಾಗಿಯಂತೂ ಅಧಿಕಾರ ನಡೆಸಲಿಲ್ಲ. ವಿದ್ಯಾರ್ಥಿ ಮುಷ್ಕರ, 'ಎಕ್ಸ್‌ಪೋ 70' ಗಲಾಟೆಗಳು ರಾಜ್ಯದಾದ್ಯಂತ ಹಬ್ಬಿದವು. ಸರ್ಕಾರದ ವೈಫಲ್ಯದಿಂದಾಗಿ ಆಡಳಿತದಲ್ಲಿ ಬಿಗಿಕಳೆದುಕೊಂಡರು. ವಿರೋಧ ಪಕ್ಷದ ಸ್ಥಾನದಲ್ಲಿದ್ದ ಸಿದ್ದವೀರಪ್ಪನವರು ಇದನ್ನು ಸರ್ಕಾರದ ವಿರುದ್ಧ ತಿರುಗಿಸಿದ್ದಷ್ಟೆ ಅಲ್ಲ ತಮ್ಮ ಸ್ಥಾನಕ್ಕೆ ತಕ್ಕದಾಗಿ ನಡೆದುಕೊಂಡರು. ಸರ್ಕಾರದ ವಿರುದ್ಧ ತೆಗೆದುಕೊಂಡ ಅವಿಶ್ವಾಸ ನಿರ್ಣಯದಲ್ಲಿ ಇವರ ಪಾತ್ರ ಪ್ರಮುಖವಾಗಿತ್ತು. ಸರ್ಕಾರ ಮನ್ನಡೆಸಲು ಬಹುಮತ ಸಾಬೀತಿನಲ್ಲಿ ಪಾಟೀಲ್ ಸೋತರು. ಸರ್ಕಾರ ಪತವಾಯಿತು. ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಪದವಿ ತ್ಯಜಿಸಿದರು.

ಒಂದು ಸರ್ಕಾರವನ್ನೇ ಉರುಳಿಸುವಷ್ಟು ಶಕ್ತಿಶಾಲಿಗಳಾಗಿ ಎಚ್. ಸಿದ್ದವೀರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಮಿಂಚಿದರು. ಕಾಂಗ್ರೆಸ್ ಪಾಲಿಗೆ ಇವರು ಖಳರಾದರು. ಆದರೆ ಮುಂದಿನ ರಾಜ್ಯ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಿಗೆ ಆಸೆಗಳು, ಕನಸುಗಳು ಚಿಗುರಲು ದಾರಿಯಂತೂ ಸುಗಮವಾಯಿತು.

ಶ್ರೀ ವೀರೇಂದ್ರಪಾಟೀಲರ ಪ್ರಬಲ ಸರ್ಕಾರ ಉರುಳಿಬಿದ್ದಾಗ ವಿರೋಧ ಪಕ್ಷದ ನಾಯಕರಾದ ಸಿದ್ದವೀರಪ್ಪನವರು ಮುಖ್ಯಮಂತ್ರಿಯಾಗಲು ಸಂಪೂರ್ಣ ಬೆಂಬಲವಿತ್ತು. ಆದರೆ ದೆಹಲಿಯಿಂದ ಶ್ರೀಮತಿ ಇಂದಿರಾಗಾಂಧಿಯವರು ಆದೇಶಿಸಿದಂತೆ. ಶ್ರೀ ದೇವರಾಜ ಅರಸರು ಮುಖ್ಯಮಂತ್ರಿಯಾದರು.

**'ಹರಿಹರ' : ಹುಲಿ – ಸಿಂಹಗಳ ಕಾದಾಟ!**

ನಾಲ್ಕನೇ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಎಚ್. ಸಿದ್ದವೀರಪ್ಪನವರು ತಾವು ಹಾಗೂ ತಮ್ಮ ಸ್ನೇಹಿತರು ಹುಟ್ಟುಹಾಕಿದ್ದ 'ಜನತಾಪಕ್ಷ'ದಿಂದ ಸ್ಪರ್ಧಿಸಿ ಗೆದ್ದಿದ್ದರು. ಆದರೆ ಮುಂದಿನ 1972ರ ಐದನೇ ವಿಧಾನಸಭೆ ಚುನಾವಣೆಗೆ 'ಕಾಂಗ್ರೆಸ್ ಅಭ್ಯರ್ಥಿಯಾಗಿ' ತಮ್ಮ ಕ್ಷೇತ್ರದಿಂದಲೇ ಸ್ಪರ್ಧಿಸಿದರು. ಅಲ್ಲಿಗಾಗಲೇ (ಹಿಂದಿನ ಚುನಾವಣೆಯಲ್ಲೂ) ತಮ್ಮ ಪ್ರತಿಸ್ಪರ್ಧಿಯಾಗಿದ್ದ ರಾಜಕೀಯ

ಕಡು ವಿರೋಧಿಯೆಂದೇ ಬಿಂಬಿತರಾಗಿದ್ದ ಶ್ರೀ ಗಾಂಜಿವೀರಪ್ಪ ಇವರ ಎದುರಾಳಿಯಾದರು. ಒಂದೇ ಜಾತಿಯೆಂದು ಮೇಲು ನೋಟಕ್ಕೆ ಅನ್ನಿಸಿದರೂ; ಉಪಜಾತಿ, ಪಂಗಡ ಎಂದು – ಇಬ್ಬರು ಅಭ್ಯರ್ಥಿಗಳ ಬೆಂಬಲಿಗರು ತೊಡೆತಟ್ಟಿ ನಿಂತರು. ಅನ್ಯ ಜಾತಿಯ ಮತದಾರರಿಗೆ ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯವಾಗಿತ್ತು. ಚುನಾವಣೆಗೆ ಭಾರೀ ಬಿರುಸಿನ ಪ್ರಚಾರ ನಡೆಯಿತು. ಪ್ರಮುಖ ರಾಜಕೀಯ ಧುರೀಣರು ಕ್ಷೇತ್ರಕ್ಕೆ ಕಾಲಿಟ್ಟರು. ಹರಿಹರ ಕ್ಷೇತ್ರ ರಾಜ್ಯದ ಗಮನ ಸೆಳೆದಿತ್ತು. ಹಿಂದೆ ಎರಡು – ಮೂರನೇ ವಿಧಾನಸಭೆ ಚುನಾವಣೆಯಲ್ಲಿ ಸೋಲಿಸಿದ್ದ ಮತದಾರರು ವರ್ತಕರ ಆಮಿಷಗಳಿಗೆ ಬಲಿಯಾಗಿದ್ದರು. ವಿರೋಧ ಪಕ್ಷದ ನಾಯಕರಾಗಿ ವಿರೇಂದ್ರ ಪಾಟೀಲರ ಸರ್ಕಾರ ಪತನವಾಗಲು ಕಾರಣರಾಗಿದ್ದ ಸಿದ್ದವೀರಪ್ಪನವರನ್ನು ಈ ಚುನಾವಣೆಯಲ್ಲಿ ಶತಾಯಗತಾಯ – ಹೇಗಾದರೂ ಸರಿ, ಸೋಲಿಸಬೇಕು ಎಂದು ಶಪಥ ಮಾಡಿದವರೂ ಇದ್ದರು.

ಹರಹರ ಕ್ಷೇತ್ರ ಅಂದರೆ ಅದು "ಹುಲಿ – ಸಿಂಹಗಳ ಕಾದಾಟ" ಎಂದೇ ಬಿಂಬಿತವಾಯಿತು! ಈ ಕ್ಷೇತ್ರ ಜಿದ್ದಾಜಿದ್ದಿಯ ಕ್ಷೇತ್ರ ಆಯಿತು. ಪತ್ರಿಕೆಗಳೂ ಇದನ್ನು ಪ್ರಧಾನವಾಗಿ ಎತ್ತಿಕೊಂಡು ಸಮೀಕ್ಷೆ ನಡೆಸಿದವು. ಇಬ್ಬರ ಬೆಂಬಲಿಗರು ಪರಸ್ಪರ ಕೈಕೈ ಮಿಲಾಯಿಸುವ ಮಟ್ಟಕ್ಕೂ ಹೋದರು. ಕೆಲವು ಊರುಗಳಲ್ಲಿ ಗೆರೆ ಕೊರೆದು ನಿಂತುಬಿಟ್ಟರು. 'ನಿಮ್ಮ ಓಟನ್ನು ....ಇಂಥವರಿಗೇ ಹಾಕಿ' ಎಂದು ತಾಕೀತು ಮಾಡಿದರು. ಕೆಲವು ಹಳ್ಳಿಗಳಲ್ಲಂತೂ ಸಿದ್ದವೀರಪ್ಪನವರು ಕಾಲಿಡದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದರೆ; ಇಂಥದ್ದೇ ಅನುಭವ ಗಾಂಜೀ ವೀರಪ್ಪನವರಿಗೂ ಆಯಿತು.

ಆ ದಿನಗಳ ಸಂದರ್ಭವನ್ನು ಯುವಕರಾಗಿ ಗಮನಿಸುತ್ತಿದ್ದವರು ಏನು ಹೇಳಬಹುದು? ಈ ಬಗ್ಗೆ ಅನುಭವಿಗಳು, ಹರಿಹರ ಕ್ಷೇತ್ರದಿಂದ ಸ್ಪರ್ಧಿಸಿ, ಗೆದ್ದು ಸಚಿವರೂ ಆಗಿದ್ದ ಶ್ರೀ ಎಚ್. ಶಿವಪ್ಪನವರು ನೆನೆಪಿಸಿಕೊಂಡದ್ದು ಹೀಗೆ:

"ರಾಜಕೀಯವಾಗಿ ನಾವು ಎಚ್. ಸಿದ್ದವೀರಪ್ಪನವರ ವಿರುದ್ಧ ಪಕ್ಷದವರು. ಇನ್ನೊಂದು ಕ್ಯಾಂಪ್‌ನಲ್ಲಿದ್ದು ಹೋರಾಟ ಮಾಡಿದ್ದೇವೆ. ಅನೇಕ ಭಿನ್ನಾಭಿಪ್ರಾಯ ಇದ್ದರೂ ವೈಯಕ್ತಿಕ ನೆಲೆಯಲ್ಲಿ ಅವರ ಹೋರಾಟ, ಛಲ, ಹಠಮಾರಿತನದಿಂದ ಕಲಿಯುವುದು ಬಹಳಷ್ಟಿದೆ ಅನ್ನಿಸಿತ್ತು. ನಾವು ಅವರ ರಾಜಕೀಯ ಬದ್ಧವೈರಿ ಆಗಿದ್ದ ಗಾಂಜೀವೀರಪ್ಪನವರ ಬೆಂಬಲಿಗರಾಗಿದ್ದೆವು. ಅವತ್ತು ಚುನಾವಣೆ ಸಂದರ್ಭದಲ್ಲಿ ರಾಜ್ಯದ ಗಮನವೆಲ್ಲಾ ಹರಿಹರದತ್ತಲೇ ಇರುತ್ತಿತ್ತು. ರಾಜ್ಯದ ಚುನಾವಣೆಯ ಮಹತ್ವ – ಬಿರುಸುಗಳನ್ನು ನೋಡಬೇಕು ಅಂದ್ರೆ ಹರಿಹರಕ್ಕೆ ಬರಬೇಕು ಅನ್ನುವಂಥಾ ವಾತಾವರಣ ನಿರ್ಮಾಣವಾಗಿತ್ತು. ಆ ದಿನಗಳ ಚುನಾವಣೆ ಸಂದರ್ಭವನ್ನು "ಗಾಂಜೀವೀರಪ್ಪ – ಸಿದ್ದವೀರಪ್ಪ ಕುಸ್ತಿ", "ಎರಡು ಸಿಂಹಗಳ ಸೆಣಸಾಟ" ಅಂತಲೇ ಜನ ಭಾವಿಸಿದ್ದರು. ಪತ್ರಿಕೆಗಳವರೂ ಹಾಗೇ ಬರೆಯುತ್ತಿದ್ದರು".

ಪೈಪೋಟಿಯ ನಡುವೆ ಚುನಾವಣೆ ಫಲಿತಾಂಶದಲ್ಲಿ ವಿಜಯಲಕ್ಷ್ಮಿ ಯಾರಿಗೆ ಒಲಿಯಬಹುದು ಎಂಬುದು ಚರ್ಚೆ ಅಷ್ಟೇ ಅಲ್ಲಾ ಬೆಟ್ಟಿಂಗ್‌ಗಳೂ ಶುರುವಾದವು. ಫಲಿತಾಂಶ ಏನಾದರೂ ಆಗಲಿ, ಚುನಾವಣೆ ಸ್ಪರ್ಧಿಗಳು ತಮ್ಮಪಾಡಿಗೆ ತಾವು ಮೌನವಾಗಿದ್ದರೂ ಇಬ್ಬರ ಬೆಂಬಲಿಗರು ಸುಮ್ಮನಿರಬೇಕಲ್ಲ? ಪರಸ್ಪರ ಕಾದಾಟಗಳೂ ನಡೆದವು. ಕೆಲವು ಹಳ್ಳಿಗಳಲ್ಲಿ ದ್ವೇಷದ ಕಿಡಿಯೂ ಹತ್ತಿತು.

ಕುತೂಹಲದ ಐದನೇ ವಿಧಾನಸಭೆಯ ಫಲಿತಾಂಶ ಪ್ರಕಟವಾಯಿತು. ಎಷ್ಟೇ ಪೈಪೋಟಿ ನಡೆದರೂ ಎಚ್. ಸಿದ್ದವೀರಪ್ಪನವರಿಗೆ ವಿಜಯಲಕ್ಷ್ಮಿ ಸುಲಭವಾಗೇ ಒಲಿದಿದ್ದಳು. 35,620 ಮತಗಳನ್ನು ಗೆದ್ದ ಸಿದ್ದವೀರಪ್ಪನವರು ಗಳಿಸಿದರೆ: ಸೋತ ಗಾಂಜಿವೀರಪ್ಪನವರು 26,704 ಮತಗಳನ್ನಷ್ಟೇ ಗಳಿಸಲು ಸಾಧ್ಯವಾಯಿತು. 8,916 ಮತಗಳ ಅಂತರದಿಂದ ಗಾಂಜೀವೀರಪ್ಪ ಸೋತಿದ್ದರು. ಅಲ್ಲಿಗೆ ಚುನಾವಣೆಯೆಂಬ ಮಹಾಪರ್ವ ಮುಗಿದಿತ್ತು.

## ತಪ್ಪಿದ ಮುಖ್ಯಮಂತ್ರಿ ಸ್ಥಾನ

1972ರ ರಾಜ್ಯ ವಿಧಾನಸಭೆ ಚುನಾನಣೆಯಲ್ಲಿ ಕಾಂಗ್ರೆಸ್ ಬಹುಮತದಿಂದ ಆಯ್ಕೆಯಾಗಿತ್ತು. ಹರಿಹರದಿಂದ ಆಯ್ಕೆಯಾದ ಸಿದ್ದವೀರಪ್ಪನವರು ಮುಖ್ಯಮಂತ್ರಿ ಸ್ಥಾನದಮೇಲೆ ಕಣ್ಣಿಟ್ಟಿದ್ದರು. ಇದಕ್ಕೆ ಪುಷ್ಠಿಕೊಡಲೆಂಬಂತೆ ಅಂದಿನ ಭಾರತದ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ಅವರು ದಾವಣಗೆರೆ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಡೆದ ಬೃಹತ್ ಸಾರ್ವಜನಿಕ ಚುನಾವಣೆ ಪ್ರಚಾರ ಸಭೆಯಲ್ಲಿ 'ಸಿದ್ದವೀರಪ್ಪನವರನ್ನು ಗೆಲ್ಲಿಸಿ, ಅವರು ರಾಜ್ಯದ ಮುಂದಿನ ನಾಯಕರು' – ಎಂದು ಹೇಳಿದ್ದು ಆಸೆ ಚಿಗುರಲು ಕಾರಣವಾಗಿತ್ತು. ಅಂತೇ ಫಲಿತಾಂಶದ ನಂತರ ಯಾರು ಮುಖ್ಯಮಂತ್ರಿ? ಎಂಬ ಪ್ರಶ್ನೆಯನ್ನು ಪತ್ರಿಕೆಗಳೂ ಎತ್ತಿದ್ದವು. ಶ್ರೀ ಡಿ. ದೇವರಾಜ ಅರಸು ಅವರ ಜತೆ ಎಚ್. ಸಿದ್ದವೀರಪ್ಪನವರೂ ಒಬ್ಬ ಸ್ಪರ್ಧಿ ಎಂಬುದನ್ನು ಅವು ಬಿಂಬಿಸಿದವು. ಜತೆಗೆ ಬಹುಸಂಖ್ಯೆಯ ಶಾಸಕರ ಬೆಂಬಲವೂ ಸಿದ್ದವೀರಪ್ಪ ಅವರಿಗೇ ಇತ್ತು.

ಇದೆಲ್ಲದರ ಪರಿಣಾಮವಾಗಿ ಮುಖ್ಯಮಂತ್ರಿ ಎಂಬ ಚೆಂಡು ದೆಹಲಿ ಎಂಬ ಮೈದಾನ ಸೇರಿತು. ಅಲ್ಲಿ ಹೈಕಮಾಂಡ್ ಆಗಿದ್ದ ಶ್ರೀಮತಿ ಇಂದಿರಾಗಾಂಧಿ ಗೋಲ್ ಹೊಡೆಯಬೇಕಿತ್ತು. ಎಲ್ಲರ ಕಾತರ, ನಿರೀಕ್ಷೆ ಅತ್ತಲೇ ಕೇಂದ್ರೀಕೃತವಾಯಿತು. ಕೊನೆಗೆ ತೂಗಿ, ತೊನಗಿ, ಚರ್ಚಿಸಿ 'ಅರಸು' ಜನಾಂಗದ ಡಿ. ದೇವರಾಜ ಅರಸು ಅವರನ್ನು ರಾಜ್ಯದ ಮುಖ್ಯಮಂತ್ರಿಯೆಂದು ಗೋಲ್ ಹೊಡೆದು ಘೋಷಿಸಿದರು.

ಮುಖ್ಯಮಂತ್ರಿ ಗಾದಿಯ ಬಗ್ಗೆ ಹರಿಹರಕ್ಷೇತ್ರದ ಜನತೆಯಲ್ಲಿ ಆಶಾಕಿರಣ ಮೂಡಿಸಿತ್ತು. ಹೀಗಾಗಿ ನೂರಾರು ಸಂಖ್ಯೆಯಲ್ಲಿ ಯುವಕರು, ಬೆಂಬಲಿಗರು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಜಮಾಯಿಸಿದ್ದರು. ಯಾವಾಗ ದೆಹಲಿಯಿಂದ

'ಅರಸು ಮುಖ್ಯಮಂತ್ರಿ'ಯೆಂದು ಆದೇಶ ಬಂತು, ಯುವಕರಿಗೆ, ಬೆಂಬಲಿಗರಿಗೆ ಸಹಜವಾಗಿ ಸಿಟ್ಟು ಬಂತು. ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಲು ವಿಮಾನ ನಿಲ್ದಾಣದಲ್ಲೇ ಕೂಗಾಡತೊಡಗಿದರು. ಗಲಾಟೆ ಶುರುವಾಯಿತು. ಇಂದಿರಾ ಗಾಂಧಿಗೆ ಧಿಕ್ಕಾರ ಹಾಕಿದರು. ಅಧಿಕ ಸಂಖ್ಯೆಯಲ್ಲಿದ್ದ ಪೊಲೀಸರ ಪ್ರವೇಶವಾಯಿತು. ಲಾಟಿ ಚಾರ್ಜ್ ಮಾಡಿ ಅಲ್ಲಿದ್ದ ಕೆಲವು ಯುವಕರನ್ನು ಬಂಧಿಸಿ ವ್ಯಾನ್‌ಗಳಲ್ಲಿ ಕರೆದೊಯ್ದರು. ಕೆಲವರು ತಪ್ಪಿಸಿಕೊಂಡು ಪರಾರಿಯಾಗಿದ್ದರು. ಅಂದು ವಿಮಾನ ನಿಲ್ದಾಣದಲ್ಲಿ ಬಂಧಿತರಾದವರಲ್ಲಿ ಒಬ್ಬರಾಗಿದ್ದ ಹನಗವಾಡಿಯವರೇ ಆದ ಶ್ರೀ ವಿರೂಪಾಕ್ಷಪ್ಪನವರು ಈ ಎಲ್ಲಾ ಘಟನೆಗಳನ್ನು ನೆನಪಿಸಿಕೊಂಡರು.

ಹೈಕಮಾಂಡ್ ತೀರ್ಮಾನದಿಂದ ಸಿದ್ದವೀರಪ್ಪನವರಿಗೆ, ಅವರ ಬೆಂಬಲಿಗ ಶಾಸಕರಿಗೆ, ಅಭಿಮಾನಿಗಳಿಗೆ ಬೇಸರವಾಯಿತು. ಮುಖ್ಯಮಂತ್ರಿ ದೇವರಾಜ ಅರಸು ಅವರು ರಚಿಸಿದ ಕ್ಯಾಬಿನೆಟ್‌ನಲ್ಲಿ ಇವರು ಸೇರಲಿಲ್ಲ. 'ಅರಸು ಮಂತ್ರಿಮಂಡಲಕ್ಕೆ ಸೇರುವುದಿಲ್ಲ' ಎಂಬ ಸಂದೇಶ ರವಾನಿಸಿದರು.

ಆದರೆ ಸಿದ್ದವೀರಪ್ಪನವರ ಬಗ್ಗೆ ಹೈಕಮಾಂಡ್‌ಗೇ ಭಯ ಇತ್ತು. ಹಿಂದಿನ ಅವಧಿಯ ವಿರೋಧಪಕ್ಷದ ನಾಯಕನಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿ ವೀರೇಂದ್ರ ಪಾಟೀಲರ ಸರ್ಕಾರ ಪತನವಾಗಲು ಕಾರಣರಾಗಿದ್ದ ಅವರ ಬಗ್ಗೆ ಒಳಗೊಳಗೇ ಆತಂಕ ಇತ್ತು. ಅವರನ್ನು ಹೊರಗೆ ಸುಮ್ಮನೆ ಬಿಡಬಾರದು ಎಂದು ಹಿರಿಯ ಅನುಭವಿ ರಾಜಕಾರಣಿರೊಬ್ಬರು ಸಲಹೆ ನೀಡಿದರು. ಹೀಗಾಗಿ ಹೈಕಮಾಂಡ್ ದೆಹಲಿಗೆ ಕರೆಸಿಕೊಂಡು "ನೀವು ಅರಸು ಕ್ಯಾಬಿನೆಟ್‌ನಲ್ಲಿ ಸಚಿವರಾಗಿ" ಎಂದು ಆದೇಶಿಸಿತು. ಬೆಂಗಳೂರಿಗೆ ಹೋಗಿ ತಮ್ಮ ಬೆಂಬಲಿಗರನ್ನು ಕೇಳಿ ಹೇಳುವೆ ಎಂದು ವಾಪಾಸು ಬಂದರು.

ಈ ನಡುವೆ ಸಿರಿಗೆರೆ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳೂ ಕರೆದು ಸಿದ್ದವೀರಪ್ಪ ಅವರಲ್ಲಿ ಚರ್ಚಿಸಿದರು. ಮುಖ್ಯಮಂತ್ರಿ ದೇವರಾಜ ಅರಸರನ್ನೂ ಕರೆದು ಮಾತಾಡಿದರು. ಇಬ್ಬರ ನಡುವೆ ಸ್ವಾಮೀಜಿ ಕೊಂಡಿಯಾದರು. ಅರಸು ಸಂಪುಟದಲ್ಲಿ ಸಚಿವರಾಗಿ ಎಂದೂ ಸ್ವಾಮೀಜಿ ಹೇಳಿದರು. ರಾಜಕೀಯದ ಬಗ್ಗೆ ಮೊದಲಿನಿಂದಲೂ ಆಸಕ್ತರಾಗಿದ್ದ ಸಿರಿಗೆರೆ ಸ್ವಾಮಿಗಳು ತಮ್ಮ ಮಠದ ಶಿಷ್ಯ ಹೊರಗೆ ಉಳಿಯುವುದು ಇಷ್ಟವಾಗಿರಲಿಲ್ಲ.

ಒತ್ತಡಕ್ಕೆ ಮಣಿದು ಎಚ್. ಸಿದ್ದವೀರಪ್ಪನವರು ದೇವರಾಜ ಅರಸು ಸಂಪುಟದಲ್ಲಿ ಆರೋಗ್ಯ ಸಚಿವರಾದರು. ತಮ್ಮ ಅಧಿಕಾರಾವಧಿಯಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಆಗಬೇಕಾದ ಅನೇಕ ಕೆಲಸಗಳನ್ನು ಮಾಡಿದರು. ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಕೇಂದ್ರ, ಹಾಗೂ ಆರೋಗ್ಯ ಘಟಕಗಳನ್ನು ತೆರೆದರು. ಸರ್ಕಾರಿ ಆಸ್ಪತ್ರೆಗಳ ವೈದ್ಯರು ಭ್ರಷ್ಟರಾಗಿ ಸರ್ಕಾರ ನೀಡಿದ ಔಷಧಿ ಮಾರಾಟ ಮಾಡಿಕೊಳ್ಳುತ್ತಿರುವುದನ್ನು


WD-H-035-5

ಗಮನಿಸಿ, ಅಂಥವರಿಗೆ ಎಚ್ಚರಿಕೆ ನೀಡಿ, ವರ್ಗಾವಣೆ ಮಾಡಿದರು. ವೈದ್ಯರು ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುವುದನ್ನು ನಿಯಮ ಮಾಡಿದರು.

ಶ್ರೀ ಸಿದ್ದವೀರಪ್ಪನವರು ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ಸಚಿವರಾಗಿದ್ದಾಗ ಅದೇ ಇಲಾಖೆಯಲ್ಲಿ ವಿಶ್ವಬ್ಯಾಂಕ್ ನೆರವಿನ ಭಾರತ ಜನಸಂಖ್ಯಾ ಯೋಜನೆಯ ಪ್ರಕಟಣಾ ವಿಭಾಗದ ಸಂಪಾದಕರಾಗಿದ್ದವರು ಇಂದು ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿರುವ ಶ್ರೀ ಗೊ.ರು. ಚನ್ನಬಸಪ್ಪನವರು. 'ಕುಟುಂಬ' ಎಂಬ ವಿಶಿಷ್ಟ ಭಿತ್ತಿಪತ್ರವನ್ನು ಪ್ರಕಟಿಸಿ ಸಚಿವರಿಂದ ಮೆಚ್ಚುಗೆ ಪಡೆದಿದ್ದರು. ಸಚಿವರ ಜಾತ್ಯತೀತ ನಿಲುವಿನ ಬಗ್ಗೆ ಒಂದು ಘಟನೆಯನ್ನು ಅವರು ನೆನಪಿಸಿದ್ದಾರೆ

"ದಲಿತ ವರ್ಗದ ವೈದ್ಯನೊಬ್ಬನಿಗೆ ಸ್ನಾತಕೋತ್ತರ ಶಿಕ್ಷಣ ಪಡೆಯುವ ಅವಕಾಶ ದೊರಕಿತು. ಅಧಿಕಾರವರ್ಗ ಏನೆಲ್ಲಾ ಸಬೂಬು ಹೇಳಿ, ನಿಯಮಗಳನ್ನು ನೆಪ ಮಾಡಿಕೊಂಡು ಅವರಿಗೆ ಸ್ನಾತಕ ಶಿಕ್ಷಣದಿಂದ ವಂಚನೆ ಆಗುವಂತೆ ನೋಡಿಕೊಂಡರು. ಇದು ಸಚಿವರ ಗಮನಕ್ಕೆ ಬಂತು. ಸಚಿವ ಸ್ಥಾನದ ವಿವೇಚನೆಯನ್ನು ಬಳಸಿ ಆ ದಲಿತ ವೈದ್ಯರಿಗೆ ನ್ಯಾಯ ಒದಗಿಸಿದರು. ಪ್ರಜಾಸತ್ತೆಯ ಒಬ್ಬ ಪ್ರತಿನಿಧಿಯಾಗಿ, ಸರ್ಕಾರದ ಹೊಣೆಯ ಒಬ್ಬ ಸಚಿವರಾಗಿ ಸಿದ್ದವೀರಪ್ಪನವರು ತಾಳಿದ ನಿಲುವು ನಿಜಕ್ಕೂ ಮಾನವೀಯ; ಸ್ಮರಣೀಯ. ಈ ಸಂದರ್ಭ ಸಾಮಾಜಿಕ ನ್ಯಾಯದ ಬಗೆಗೆ ಅವರಿಗಿದ್ದ ಕಳಕಳಿಗೆ ಸಾಕ್ಷಿಯಾಗಿದೆ... ಅವರು ನನ್ನ ದೃಷ್ಟಿಯಲ್ಲಿ ಹೂವಿಗೆ ಹೂವು. ಉಕ್ಕಿಗೆ ಉಕ್ಕು".

ತಮ್ಮ ಅಧಿಕಾರಾವಧಿಯಲ್ಲೇ ರಾಜ್ಯದಲ್ಲಿ ವೈದ್ಯಕೀಯ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವ ಕನಸು ಕಂಡರು. ಇದು ಆಗ ಅಷ್ಟೊಂದು ಶಾಸಕರ ಗಂಭೀರ ಚಿಂತನೆಗೆ ಕಾರಣವಾಗಲಿಲ್ಲ. ಆದರೆ ಸಿದ್ದವೀರಪ್ಪನವರು ಆಲೋಚಿಸಿದ ಇಂಥ ಮಹತ್ವದ ಕೆಲಸ 35 ವರ್ಷಗಳ ನಂತರ ರಾಜ್ಯದಲ್ಲಿ ಕಾರ್ಯಗತಕ್ಕೆ ಬಂತು.

ಶ್ರೀ ದೇವರಾಜ ಅರಸು ಹಾಗೂ ಸಿದ್ದವೀರಪ್ಪ ಅವರ ನಡುವೆ ಹಾಕಿದ ಬೆಸುಗೆ ಹೆಚ್ಚು ಕಾಲ ಬಂಧಿಸಲಿಲ್ಲ. ಭಿನ್ನಾಭಿಪ್ರಾಯ ತಲೆದೋರಿತು. ಸಮರ್ಥ ಆಡಳಿತಗಾರ, ಪ್ರಾಮಾಣಿಕ ಸೇವಕರಾಗಿದ್ದ ಸಿದ್ದವೀರಪ್ಪನವರು ಅರಸು ಸಂಪುಟದಲ್ಲಿ ಇರಲಾರೆ ಎಂದು ಹೇಳಿ ರಾಜೀನಾಮೆ ನೀಡಿ ಹೊರಬಂದರು. ಈ ಸಂದರ್ಭವನ್ನು ದಾವಣಗೆರೆ ಬಾಪೂಜಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷ ಮುದೇಗೌಡ್ರು ರೇವಣಸಿದ್ದಪ್ಪ ನೆನಪಿಸಿಕೊಂಡದ್ದು ಹೀಗೆ :

**"ಸಿದ್ದವೀರಪ್ಪನವರು ರಾಜ್ಯಕ್ಕೆ, ದೇಶಕ್ಕೆ ದುಡಿದರೇ ವಿನ: ಸ್ವಂತಕ್ಕೆ ಏನೂ ಮಾಡಿಕೊಳ್ಳಲಿಲ್ಲ. ದೇವರಾಜ ಅರಸು ಸಂಪುಟದಲ್ಲಿ ಸಚಿವರಾಗಿದ್ದರೂ ಅದು ತೇಪೆ ಕೆಲಸವಾಗಿತ್ತು. ಅರಸು ಅಧಿಕಾರಾವಧಿ ಕಾಲದಲ್ಲಿ ಕೆಲವು ಅಹಿತಕರ ಘಟನೆಗಳು ನಡೆದವು.**

**ಯುವ ಕಾಂಗ್ರೆಸ್‌ನ ಧೋರಣೆ ಇಷ್ಟವಾಗುತ್ತಿರಲಿಲ್ಲ. ಜತೆಗೆ ಭ್ರಷ್ಟಾಚಾರವೂ ನುಸುಳಿದ್ದು ಇವರನ್ನು ಇರಸುಮುರಸಿಗೆ ಸಿಲುಕಿಸಿತ್ತು. ತಮಗಿದ್ದ ಅನುಭವ, ಸಂಪರ್ಕ ಹಾಗೂ ಸಚಿವ ಹುದ್ದೆಯಿಂದ ಹಣ, ಆಸ್ತಿ ಮಾಡುವ ಅವಕಾಶ ಇದ್ದರೂ ಸ್ವಂತಕ್ಕೇನೂ ಮಾಡಿಕೊಳ್ಳಲಿಲ್ಲ. 'ಪಾಪದ ಹಣ ಬೇಕಿಲ್ಲ, ಇಂಥ ಹಣದಿಂದ ಮಕ್ಕಳು ಕೆಟ್ಟುಹೋಗುತ್ತಾರೆ, ಸಮಾಜ ಕಂಠಕರಾಗುತ್ತಾರೆ' – ಎಂದು ಖಡಕ್ ಆಗಿ ಹೇಳಿ ಬೆಚ್ಚಿ ಬೀಳಿಸುತ್ತಿದ್ದರು. ಪ್ರಾಮಾಣಿಕರಾಗಿದ್ದರು. ನ್ಯಾಯದ ಪರವಾಗಿದ್ದರು".**

ಅರಸು ಮುಖ್ಯಮಂತ್ರಿ ಅವಧಿಯ ಕಾಲಕ್ಕೆ ಶ್ರೀ ಎಚ್. ಸಿದ್ದವೀರಪ್ಪನವರ ಬದುಕಿನ, ರಾಜಕಾರಣದ ಯುಗ ಮುಗಿಯಿತು. ಅವರು ರಾಜೀನಾಮೆ ಕೊಟ್ಟಾಗಲೇ ಹೇಳಿದ್ದರು: ಸಾಕಿನ್ನು ರಾಜಕೀಯ. ನನಗೆ ವಿಶ್ರಾಂತಿ ಬೇಕಿದೆ. ರಾಜಕೀಯದಿಂದ ನಿವೃತ್ತನಾಗಿರುವೆ ಎಂದು. ಇದಕ್ಕೆ ಅವರ ವಯಸ್ಸಿನ ಕಾರಣಕ್ಕಿಂತ ಆತ್ಮೀಯರಲ್ಲಿ ಆರೋಗ್ಯದ ಕಾರಣ ನೀಡಿ ಸಾರ್ವಜನಿಕ ಬದುಕಿನಿಂದ ದೂರ ಉಳಿದರು. ಈ ಸಮಯದಲ್ಲಿ ಅವರು ಕೆಲವು ತಿಂಗಳು ಅಮೇರಿಕಾ ಪ್ರವಾಸ ಹೊರಟರು. ಅಲ್ಲಿ ಅವರ ಪುತ್ರ ಡಾ. ಹಾಲಸ್ವಾಮಿ, ಸೊಸೆ ರತ್ನ, ಮೊಮ್ಮಗ ರವಿ, ಮೊಮ್ಮಗಳು ನಂದಾ ಜೊತೆ ಕಾಲಕಳೆದು, ಚಳಿ ಹೆಚ್ಚಾದ್ದರಿಂದ ಭಾರತಕ್ಕೆ ವಾಪಸ್ಸಾದರು. ಸಚಿವರಾಗಿ, ವಿರೋಧ ಪಕ್ಷದ ನಾಯಕರಾಗಿ ಸಲ್ಲಿಸಿದ ಸೇವೆ ಅಮೋಘವಾದದ್ದು. ದಾವಣಗೆರೆಯ ಪಿ.ಜೆ. ಬಡಾವಣೆಯ ಮನೆಯಲ್ಲಿ ಕೆಲವರ್ಷ ವಿಶ್ರಾಂತ ಜೀವನ ಕಳೆದರು. ಸಕ್ರಿಯ ರಾಜಕಾರಣದಿಂದ ನಿವೃತ್ತರಾಗಿ ದೂರ ಉಳಿದಿದ್ದ ಅವರು ಮುಂದೆ ಐದಾರು ವರ್ಷ ಬದುಕಿದ್ದರು. ಬೆಂಗಳೂರಿನ ಜಯನಗರದ ಮನೆಯಲ್ಲೂ ಅನಾರೋಗ್ಯದ ದಿನಗಳು ಕಾಡಿದವು. ಅವರ ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸುತ್ತಾ ಬಂತು. ಕೊನೆಯ ದಿನಗಳು ಆಶಾದಾಯಕವಾಗಿರಲಿಲ್ಲ. ದು:ಖದ ದಿನಗಳಾಗಿದ್ದವು ಎಂಬುದನ್ನು ಅವರ ಬಂಧುಗಳು, ಊರಿನ ಹಿರಿಯರು, ಅವರನ್ನು ಬಲ್ಲ ಹಿರಿಯ ರಾಜಕಾರಣಿಗಳು, ಪತ್ರಕರ್ತರು – ಎಲ್ಲರೂ ಏಕಾಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಸಿದ್ದವೀರಪ್ಪನವರು ಹುಲಿಯಂತೆ ಘರ್ಜಿಸುತ್ತ, ನಿಷ್ಪಕ್ಷಪಾತವಾಗಿ ಅಧಿಕಾರ ಮಾಡಿದವರು. ಸಚಿವ ಖಾತೆಗೆ ಸಂಬಂಧಿಸಿದ ಇಲಾಖೆಗಳ ಸೋಮಾರಿ ನೌಕರರಿಗೆ ಸಿಂಹಸ್ವಪ್ನವಾಗಿ ಕಾಡಿದ 'ಸಾಹೇಬರು' ಇವರು. ಇಂಥ ಪ್ರಾಮಾಣಿಕ ಜನಸೇವಕನಿಗೆ ಬದುಕಿನ ಇಳಿಹೊತ್ತಿನ ದಿನಗಳು ನೆಮ್ಮದಿ ಉಂಟುಮಾಡಲಿಲ್ಲ ಎಂಬುದು ವಿಪರ್ಯಾಸ. ಅವರನ್ನು ಬಲ್ಲ ಅನೇಕರು ಹೇಳಿದ ಒಂದೇ ಮಾತು: 'ಅವರ ಸಾವು ದು:ಖದ ಸಾವಾಯಿತು. ಹೀಗಾಗಬಾರದಿತ್ತು.'

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿದ್ದ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ದಿನಾಂಕ: **28. 4. 1981**ರಂದು ಎಚ್. ಸಿದ್ದವೀರಪ್ಪನವರು ಕೊನೆ ಉಸಿರೆಳೆದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಆಶಾ ತನ್ನ ಪ್ರೀತಿಯ ತಾತನಿಗೆ

ಮಾಡಿದ ಸೇವೆ ಕಂಡವರು ಮಗಳೆಂದೇ ಭಾವಿಸಿದ್ದರಂತೆ. ಆಕೆಯ ಇಂಥ ಸೇವೆ ನೆನೆದು ಅನೇಕ ಹಿರಿಯರು ಮೆಚ್ಚುಗೆ ವ್ಯಕ್ತಪಡಿಸಿದರು.

ಒಟ್ಟು ಅವರ ಅಂತ್ಯದ ದಿನಗಳನ್ನು ಮಾಜಿ ಸಚಿವ ಎಚ್. ಶಿವಪ್ಪನವರು ಮೆಲುಕು ಹಾಕಿದ್ದು ಹೀಗೆ : 'ಶ್ರೀ ಎಚ್. ಸಿದ್ದವೀರಪ್ಪನವರು ಈ ರಾಜ್ಯದ ಉನ್ನತ ಸಚಿವ ಹುದ್ದೆ ಅಲಂಕರಿಸಿದ್ದವರು, ಸಾಮಾಜಿಕ ಸ್ಥಾನಮಾನ ಹೊಂದಿದ್ದವರು. ಸಿದ್ದವೀರಪ್ಪ ಅವರ ಮೊಮ್ಮಗಳು ಆಶಾ ಅಂತ ಸುಶ್ರೂಷೆ ಮಾಡಿದಳು. ಜನ ಆಕೆಯನ್ನೇ ಮಗಳೆಂದು ಭಾವಿಸಿದ್ದರು. .....ಅಂತ್ಯದ ದಿನಗಳು 'ಟ್ರಾಜಿಡಿ!', ಘೋರ. ಕೊನೆಗೆ ಸಂಬಂಧಿಗಳೂ ಇಲ್ಲವಾದಂತಾಯಿತು. ಮೇಧಾವಿಯ ಸಾವು ಹೀಗೆ ಅಂತ್ಯವಾಯಿತು'.

* * *

ಶ್ರೀ ಎಚ್. ಸಿದ್ದವೀರಪ್ಪನವರು ಬದುಕಿನಲ್ಲಿ, ರಾಜಕೀಯ ಜೀವನದಲ್ಲಿ ಏರುಪೇರು ಕಂಡವರು. ಬಾಲ್ಯದ ದಿನಗಳನ್ನು ಬಡತನದಲ್ಲಿ ಕಳೆದು, ವಿವಿಧ ಹಂತದ ಶಿಕ್ಷಣವನ್ನು ಬಂಧುಗಳ ಸಹಾಯದಿಂದ ಪಡೆದು, ಪೂನಾದಲ್ಲಿ ಕಾನೂನು ವ್ಯಾಸಂಗಮಾಡಿ ಹೆಸರಾಂತ 'ಕ್ರಿಮಿನಲ್' ವಕೀಲರಾಗಿ ಜನಾನುರಾದವರು. ರೈತರ ಸೇವೆ ಮಾಡುತ್ತಲೇ ಜಿಲ್ಲಾ ಬೋರ್ಡ್‌ಗೂ ಆಯ್ಕೆಯಾಗಿ ರಾಜ್ಯ ರಾಜಕಾರಣಕ್ಕೆ ಧುಮುಕಿದವರು. 'ಗಾಡ್ ಫಾದರ್' ಇಲ್ಲದೆ, ಯಾರ ಆರ್ಥಿಕ ಸಹಾಯವೂ ಇಲ್ಲದೆ ಮೇಲೇರಿದ ಛಲಗಾರರು. ಶಾಸಕರಾಗಿ ಆಯ್ಕೆಯಾದ ಮೊದಲ ಬಾರಿಗೇ ಶ್ರೀ ಕೆಂಗಲ್ ಹನುಮಂತಯ್ಯನವರ ಕ್ಯಾಬಿನೆಟ್‌ನಲ್ಲಿ ಗೃಹ, ಕೈಗಾರಿಕೆ, ಕೃಷಿಯಂಥ ಪ್ರಮುಖ ಖಾತೆಗಳ ಸಚಿವರಾಗಿ ಸಮರ್ಥ ಆಡಳಿತಗಾರರು ಎಂದು ಹೆಸರಾದವರು. ಆದರೆ ದುರದೃಷ್ಟ ಸಂಗತಿ ಏನೆಂದರೆ ಮುಂದಿನ ಚುನಾವಣೆಯಲ್ಲಿ ಸೋಲು ಕಂಡವರು. ಇವು ಅವರ ಬದುಕಿನ ದು:ಖದ, ನಿರಾಶೆಯ ದಿನಗಳು.

ಛಲದಿಂದ ಮೇಲೆದ್ದು ಮುಂದಿನ ಚುನಾವಣೆಯಲ್ಲಿ ಸ್ವತಂತ್ರ 'ಜನತಾಪಕ್ಷ'ದಿಂದ ಗೆದ್ದು ವಿರೋಧಪಕ್ಷದ ನಾಯಕರಾದವರು. ಅಂದಿನ ಮೈಸೂರು ರಾಜ್ಯದ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಪತನವಾಗಲು ಕಾರಣರಾದವರು. ನಂತರದ ಚುನಾವಣೆಯಲ್ಲಿ ಗೆದ್ದು ಮುಖ್ಯಮಂತ್ರಿ ಸ್ಥಾನಕ್ಕೆ ಶ್ರೀ ದೇವರಾಜ ಅರಸು ಜತೆಗೆ ಪೈಪೋಟಿ ನಡೆಸಿದವರು. ಒಲ್ಲದ ಮನಸ್ಸಿನಿಂದ ಅರಸು ಕ್ಯಾಬಿನೆಟ್‌ನಲ್ಲಿ 'ಆರೋಗ್ಯ ಸಚಿವ'ರಾದವರು. ಬೇಡವಾದಾಗ ರಾಜೀನಾಮೆ ಕೊಟ್ಟು ಹೊರನಡೆದವರು. ರಾಜಕೀಯ ಜೀವನದ ಕೊನೆಯ ಘಟ್ಟದಲ್ಲಿ ಆರೋಗ್ಯ ಸಚಿವರಾಗಿದ್ದ ಸಿದ್ದವೀರಪ್ಪನವರು 'ಅನಾರೋಗ್ಯದಿಂದ' ಸರ್ಕಾರಿ ಆಸ್ಪತ್ರೆ ಸೇರಿ ಅಲ್ಲೆ ಕೊನೆ ಉಸಿರೆಳೆದಿದ್ದು ಬದುಕಿನ ವಿಪರ್ಯಾಸವೇ ಸರಿ.

* * *

ಜನಬಿಂಬಿತ ಅಭಿಪ್ರಾಯದಂತೆ ಎಚ್. ಸಿದ್ದವೀರಪ್ಪನವರು ನಿಷ್ಠುರ, ನಿರ್ಧಾಕ್ಷ್ಯಣ್ಯದ ವ್ಯಕ್ತಿ. ಸಾರ್ವಜನಿಕ ಜೀವನದಲ್ಲಿ ಶುದ್ಧಹಸ್ತರು. ತಮಗಾಗಿ ಏನೂ ಮಾಡಿಕೊಳ್ಳದಿದ್ದರೂ ನಾಡಿಗೆ, ರೈತರಿಗೆ ಕಾಳಜಿಯಿಂದ ದುಡಿದರು. ಸರ್ಕಾರಿ ಅಧಿಕಾರಿಗಳು ಸಮರ್ಥವಾಗಿ ಕಾರ್ಯನಿರ್ವಹಿಸದಿದ್ದಾಗ ಉಗ್ರರಾಗುತ್ತಿದ್ದರು. ಅಂಥಾ ಸಂದರ್ಭದಲ್ಲಿ ಕಠೋರವಾಗಿ ನಡೆದುಕೊಂಡ ಉದಾಹರಣೆಗಳೂ ಇವೆ. ಅವರ ವ್ಯಕ್ತಿತ್ವದ ಬಗ್ಗೆ ಹಿರಿಯರಾದ ಗೊ.ರು. ಚನ್ನಬಸಪ್ಪ ಅವರು ದಾಖಲಿರಿಸಿರುವುದು ಹೀಗೆ: "ಸಾಮಾಜಿಕ ಕಳಕಳಿಯ, ಜಾತ್ಯತೀತ ನಿಲುವಿನ ಸಚಿವರಾಗಿದ್ದರು. ಅವರು ಗಂಭೀರ ಸ್ವಭಾವದವರು. ನಗುತ್ತಿದ್ದುದು ಅಪರೂಪ. ಆದರೆ ಅವರು ನಕ್ಕಾಗಲೇ ನಿಜವಾದ ಸಿದ್ದವೀರಪ್ಪನವರನ್ನು ಕಾಣಬಹುದಾಗಿತ್ತು. **ಅವರು ನನ್ನ ದೃಷ್ಟಿಯಲ್ಲಿ ಹೂವಿಗೆ ಹೂವು. ಉಕ್ಕಿಗೆ ಉಕ್ಕು."**

## ಜನೋಪಯೋಗಿ ಕೆಲಸಗಳ ಮೂಲಕ ಸ್ಮರಣೆ:

ಶ್ರೀ ಎಚ್. ಸಿದ್ದವೀರಪ್ಪನವರು ನಿಧನರಾದ ನಂತರ ಕಣ್ಣುಮುಂದೆ ಬರುವ ಕೆಲಸಕಾರ್ಯಗಳಾವುವು? ಈ ಪ್ರಶ್ನೆಗೆ ಹರಿಹರ – ದಾವಣಗೆರೆ ಜನತೆ ಅನೇಕ ಪುರಾವೆ ನೀಡುತ್ತಾರೆ. ಗ್ರಾಮೀಣ ಹಿನ್ನೆಲೆಯಿಂದ ಬಂದವರಾದ್ದರಿಂದ ಮುಖ್ಯವಾಗಿ ರೈತರ ಕಷ್ಟಸುಖದ ಬಗ್ಗೆ ಅರಿತವರಾಗಿದ್ದರು. ಹೀಗಾಗಿ ಅವರ ಪ್ರಥಮ ಪ್ರಾಶಸ್ತ್ಯ ರೈತರ ಏಳಿಗೆಗಾಗಿಯೇ ಇತ್ತು. ಈಗಾಗಲೇ ಪ್ರಸ್ತಾಪಿಸಿರುವಂತೆ ಚಿತ್ರದುರ್ಗ ಜಿಲ್ಲೆಯ ರೈತರಿಗೆ ವರ್ತಕರಿಂದ ಆಗುತ್ತಿದ್ದ ಶೋಷಣೆ ಮನಗಂಡು ರೈತರನ್ನು ಸಂಘಟಿಸಿ, ಅವರ ದವಸಧಾನ್ಯ ಮಾರಾಟಕ್ಕೆ ವ್ಯಾಪಾರ ಕೇಂದ್ರ ದಾವಣಗೆರೆಯಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ನಿರ್ಮಾಣ ಮಾಡಿದರು. ರೈತರ ವ್ಯವಸಾಯಕ್ಕೆ ಬೇಕಾದ ಪರಿಕರಗಳನ್ನು ನೇರವಾಗಿ ಕಾರ್ಖಾನೆಗಳಿಂದಲೇ ತರಿಸಿ ಸಹಕಾರ ಸಂಘಗಳ ಮೂಲಕ ವಿತರಿಸಿದರು.

ರೈತರು ತಮ್ಮ ಜಮೀನುಗಳಲ್ಲಿ ವೈವಿಧ್ಯಮಯ ಬೆಳೆ ಬೆಳೆದು ನಾಲ್ಕು ಕಾಸು ನೋಡಬೇಕು ಎಂದು ಯೋಚಿಸಿ, ಹುಟ್ಟೂರು ಹನಗವಾಡಿ ಹಾಗೂ ಸುತ್ತಮುತ್ತಲ ಹಳ್ಳಿಗಳಿಗೆ ನೀರಾವರಿ ಮಾಡುವ ಆಲೋಚನೆ ಮೊದಲು ಬಂದಿತಾದರೂ ನಂತರ ಇಡೀ ಹರಿಹರ ತಾಲ್ಲೂಕು, ಕೋಳಿಕೂಗಿದ ಹಳ್ಳಿ ಸಹಿತ ನೀರಾವರಿ ಆಗಬೇಕು ಎಂದು ಹಂಬಲಿಸಿದರು. ಈ ಕನಸನ್ನು ನನಸಾಗಿಸಲು ಹೊಸ ಯೋಜನೆ ರೂಪಿಸಿದರು. ಎಲ್ಲಿ ರೈತರು ನೀರಾವರಿಯಿಂದ ವಂಚಿತರಾಗಿದ್ದಾರೆ ಅಂಥ ಪ್ರದೇಶಗಳನ್ನು ಗುರ್ತಿಸಿ 10 ಲಿಫ್ಟ್ ಇರಿಗೇಷನ್ (ಏತ ನೀರಾವರಿ) ಸೌಲಭ್ಯ ಮಾಡಿಸಿದರು. ಚಿಕ್ಕಬಿದರಿ, ರಾಜನಹಳ್ಳಿ, ತಿಮ್ಲಾಪುರ, ಹನಗವಾಡಿ, ಹರವಿನಹಳ್ಳಿ, ಹಲಸಪಾಳ್ಯ, ಬೈರಂಪಾ, ಉಕ್ಕಡಗಾತ್ರಿ, ಎಕ್ಕೇಗುಂದಿ ಗ್ರಾಮಗಳಲ್ಲಿನ ಹೊಲಗಳು ನೀರುಂಡು ಹಸಿರು ಕಾಣುವಂತಾಯಿತು.

## ದೇವರಬೆಳಕೆರೆ ಪಿಕಪ್ ಡ್ಯಾಮ್

ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ದೇವರಬೆಳಕೆರೆ ಬಳಿ ಬೃಹತ್ ಡ್ಯಾಮ್ ನಿರ್ಮಾಣಕ್ಕೆ ಕನಸು ಕಂಡರು. ಅನಾವಶ್ಯಕವಾಗಿ ಹರಿದು ಹಳ್ಳಕೊಳ್ಳ ಸೇರುತ್ತಿದ್ದ ನೀರನ್ನು ಒಂದೆಡೆ ಸಂಗ್ರಹಿಸಬೇಕು ಎಂದು ಯೋಚಿಸಿದರು. ಇವರಿಗೆ ಪ್ರಖ್ಯಾತ ಎಂಜಿನಿಯರ್ ಸರ್ ಎಂ. ವಿಶ್ವೇಶ್ವರಯ್ಯ ಆದರ್ಶರಾಗಿದ್ದರು. ಸಾವಿರಾರು ಎಕರೆ ಜಮೀನು ನೀರಾವರಿ ಆಗುವುದು ಅವರ ಇಚ್ಛೆಯಾಗಿತ್ತು. ಅದಕ್ಕಾಗಿ ಹಲವುಬಾರಿ ಅಲ್ಲಿನ ರೈತರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಡ್ಯಾಂ ನಿರ್ಮಾಣದ ಸ್ಥಳಕ್ಕೆ ಅಧಿಕಾರಿಗಳನ್ನು ಕರೆದುಕೊಂಡು ಬಂದು ಸರ್ವೆ ಮಾಡಿಸಿದರು. ಸರ್ಕಾರಕ್ಕೆ ಒತ್ತಡತಂದು ಯೋಜನೆಗೆ ಹಸಿರು ನಿಶಾನೆ ಪಡೆದರು. 1968ರಲ್ಲಿ ಅಡಿಗಲ್ಲು ಹಾಕಿದಾಗ ಆರಂಭದಲ್ಲಿ ಒಂದು ಕೋಟಿ ರೂಪಾಯಿ ಯೋಜನೆ ಸಿದ್ಧವಾಯಿತು. ಅದು ಮುಗಿವ ಕಾಲಕ್ಕೆ ತಗುಲಿದವೆಚ್ಚ 15 ಕೋಟಿ! ಇದು ಪೂರ್ಣವಾಗಲು ತೆಗೆದುಕೊಂಡ ಕಾಲ ಒಂದು ದಶಕಗಳಿಗೂ ಹೆಚ್ಚು. ಇಲ್ಲಿ ದೊಡ್ಡ ಪ್ರಮಾಣದಲ್ಲಿ ನೀರು ಸಂಗ್ರಹವಾದಾಗ ಸಿದ್ಧವೀರಪ್ಪನವರು ಸಂತೋಷಪಟ್ಟರು.

ಮುಂದೆ ಕಾಲುವೆ (ಚಾನಲ್)ಗಳ ಮೂಲಕ ಹರಿದ ನೀರು ಸಾವಿರಾರು ರೈತರ ಬೆಳೆಗಳಿಗೆ ಸಂಜೀವಿನಿಯಾಯಿತು. ಇಂದು ದೇವರಬೆಳಕೆರೆ ಸುತ್ತಮುತ್ತಲ ಹಲವು ಹಳ್ಳಿಗಳ ಬೋರ್‌ವೆಲ್‌ಗಳಲ್ಲಿ ಸಾಕಷ್ಟು ನೀರು ಕಾಣುವಂತಾಗಿದೆ ಅನ್ನುತ್ತಾರೆ ಅಲ್ಲಿನ ರೈತರು. ಅಂದು ಸಿದ್ಧವೀರಪ್ಪನವರು ದೂರಾಲೋಚನೆಯಿಂದ ಮಾಡಿದ ಈ ಕೆಲಸ ಶಾಶ್ವತವಾಗಿ ಕಾಣುತ್ತಿದೆ. ಮುಂದಿನ ಜನಾಂಗಕ್ಕೂ ನೀರುಣ್ಣುವ ಭೂಮಿಗಳು 'ಆಸ್ತಿ'ಗಳಾಗಿ ಉಳಿದಿವೆ.

ಭದ್ರಾ ಡ್ಯಾಂನಿಂದ ಹೊರಬಿದ್ದ ನೀರು ಎಡದಂಡೆ ಚಾನಲ್‌ಗಳಲ್ಲಿ ಹರಿಯಿತು. ನೀರಾವರಿ ಪ್ರದೇಶಗಳು ಹಲವು ಜಿಲ್ಲೆಗಳಿಗೆ ವ್ಯಾಪಿಸಿದ್ದರೂ ಹರಿಹರ ತಾಲ್ಲೂಕಿಗೆ ಕೊನೆಯಾಯಿತು. ಈ ನೀರು ದಾವಣಗೆರೆ – ಹರಿಹರ ತಾಲ್ಲೂಕಿಗೆ ಬರಲು ಹೋರಾಟವನ್ನೇ ಮಾಡಿದರು. ಮಲೆಬೆನ್ನೂರು, ಮಲೆಬೆನ್ನೂರು ಹೋಬಳಿ ಮತ್ತು ಅದರ ಹತ್ತಿರದ ಹಳ್ಳಿಗಳಿಗೆ ಆ ನೀರು ಕೊನೆ ಆಗಿದ್ದರಿಂದಾಗಿ ಕಸಬಾ ಹೋಬಳಿ ಹೊಲಗಳಿಗೆ ನೀರು ಇಲ್ಲವಾಯಿತು. ಹೀಗಾಗಿ ದೇವರಬೆಳಕೆರೆ ಡ್ಯಾಂ ಯೋಜನೆ ಕೈಗೆತ್ತಿಕೊಳ್ಳಬೇಕಾಯಿತು. ಹನಗವಾಡಿ, ಬೇವಿನಹಳ್ಳಿ, ಕೊಂಡಜ್ಜಿ, ಅಮರಾವತಿ, ಕೋಡಿಹಳ್ಳಿ ಮೊದಲಾದವು ಈ ಡ್ಯಾಂನಿಂದ ನೀರು ಕಾಣುವಂತಾದವು. ರೈತರು ಸಮೃದ್ಧಿ ಹೊಂದಬೇಕು, ಎಲ್ಲರ ಮನೆಗಳಲ್ಲೂ ಕಬ್ಬಿಣದ ಟ್ರಜರಿ ಇರೋದನ್ನ ಕಾಣಬೇಕು ಆಗಲೇ ನನಗೆ ತೃಪ್ತಿ ಎಂದು ಭಾವಿಸಿದ್ದರು. ರೈತರ ಬಗ್ಗೆ ಅವರಿಗಿದ್ದ ಪ್ರೀತಿ ಹಾಗೂ ಕಾಳಜಿಗೆ ಇದು ದ್ಯೋತಕ.

## ಸಕ್ಕರೆ ಕಾರ್ಖಾನೆ ಕನಸು:

ಹರಿಹರ – ದಾವಣಗೆರೆ ತಾಲ್ಲೂಕುಗಳ ಬಹುತೇಕ ಗ್ರಾಮಗಳ ಜಮೀನುಗಳು ನೀರಾವರಿ ಆದ ನಂತರ ರೈತರಿಗೆ ಹೊಸ ಉತ್ಸಾಹ ಮೂಡಿತು. ವಾಣಿಜ್ಯ ಹಾಗೂ ಆರ್ಥಿಕ ಬೆಳೆಗಳನ್ನು ಬೆಳೆದಾಗ ಮಾತ್ರ ರೈತನ ಬದುಕು ಹಸನಾಗುತ್ತದೆ ಎಂದು ಭಾವಿಸಿ, ಕಬ್ಬು ಬೆಳೆಯಲು ಹುರಿದುಂಬಿಸಿದರು. ಇದಕ್ಕೆ ಉದಾಹರಣೆಯಾಗಿ ಮೈಸೂರು, ಮಂಡ್ಯ ಕಡೆ ರೈತರು ಕಬ್ಬು ಬೆಳೆದು ಆರ್ಥಿಕವಾಗಿ ಅನುಕೂಲಸ್ಥರಾಗಿದ್ದನ್ನು ಪ್ರಸ್ತಾಪಿಸುತ್ತಿದ್ದರು.

ಸಕ್ಕರೆ ಕಾರ್ಖಾನೆಯ ಕನಸು ಕಂಡು ರೈತರು ಕಬ್ಬು ಬೆಳೆದರೆ ಉದ್ಧಾರ ಆಗುತ್ತಾರೆ ಎಂಬ ಆಶಯದೊಂದಿಗೆ ಕೃಷಿತಜ್ಞರನ್ನು ಕರೆತಂದು ಸಮೀಕ್ಷೆ ನಡೆಸಿದರು. ವಿಜ್ಞಾನಿ, ತಜ್ಞ ದೇಶದಲ್ಲೇ ಪ್ರಖ್ಯಾತಿ ಹೊಂದಿದ್ದ ಕುರಿಯನ್ ಒಮ್ಮೆ ಬಂದು ಹೋಗಿದ್ದರು. ನಂತರ ಸಕ್ಕರೆ ಕಾರ್ಖಾನೆ ಸ್ಥಾಪಿಸಿಯೇ ತೀರಬೇಕು ಎಂದು ದೃಢ ಸಂಕಲ್ಪ ಮಾಡಿದರು.

ಆದರೆ ತಮ್ಮ ರಾಜಕೀಯ ಎದುರಾಳಿ ಗಾಂಜೀವೀರಪ್ಪನವರೂ ಹರಿಹರ – ದಾವಣಗೆರೆ ನಡುವಿನ ಬಾತಿ ಬಳಿ ಸಕ್ಕರೆ ಕಾರ್ಖಾನೆ ಸ್ಥಾಪಿಸಬೇಕು ಎಂದು ತೀರ್ಮಾನಿಸಿದ್ದರು. ಆದರೆ ಆ ಆಸೆ ಕೈಗೂಡುವಂತಿರಲಿಲ್ಲ. ಹಠವಾದಿ ಹಾಗೂ ಛಲವಾದಿಯೂ ಆಗಿದ್ದ ಸಿದ್ದವೀರಪ್ಪನವರು ತಮ್ಮ ಆಲೋಚನೆಯನ್ನು ಪ್ರತಿಷ್ಠೆಯ ವಿಷಯವನ್ನಾಗಿಸಿದರು. ಗಾಂಜೀವೀರಪ್ಪನವರ ಕೈ ಮೇಲಾಗದಂತೆ ನೋಡಿಕೊಳ್ಳಲು ಯಶಸ್ವಿಯೂ ಆದರು. ಕಾರ್ಖಾನೆಗಾಗಿ ಒಂದೆರಡುಕಡೆ ಸ್ಥಳ ಪರಶೀಲನೆ ನಡೆಸಿದರು. ಕೊನೆಗೆ ದಾವಣಗೆರೆ ತಾಲ್ಲೂಕಿನ 'ಕುಕ್ಕುವಾಡ' ಎಂಬ ಗ್ರಾಮದ ಸಮೀಪ ಕಾರ್ಖಾನೆ ಸ್ಥಾಪಿಸುವುದೆಂದು ತೀರ್ಮಾನಿಸಿದರು. ಈ ಗ್ರಾಮ ಹಲವು ಹಳ್ಳಿಗಳಿಗೆ ಸಂಪರ್ಕ ಸೇತುವಾಗಿತ್ತು. ದಾವಣಗೆರೆಯಿಂದ ಇದೇ ಮಾರ್ಗವಾಗಿ ಸಿಕ್ಕುವ ಹದಡಿ, ಶಿರಮಗೊಂಡನಹಳ್ಳಿ ಹಾಗೂ ಸುತ್ತಮುತ್ತಲ ಹತ್ತೆಂಟು ಹಳ್ಳಿಗಳು ನೀರಾವರಿ ಆದ ಪ್ರದೇಶಗಳೇ ಆಗಿದ್ದವು. ಅವುಗಳಲ್ಲಿ ಬೆಳವನೂರು, ತುರ್ಚಘಟ್ಟ, ಲೋಕೀಕೆರೆ, ಶ್ಯಾಗಲೆ, ಕಂದಗಲ್ಲು, ಮಳಲ್ಕೆರೆ, ಬಾಡ, ರಾಮಗೊಂಡನಹಳ್ಳಿ, ಅತ್ತಿಗೆರೆ, ಕಾಶೀಪುರ, ಗೋಪನಹಾಲ್, ಕುರ್ಕಿ ಇನ್ನೂ ಮೊದಲಾದ ನೂರಾರು ಎಕರೆಗಳಲ್ಲಿ ಕಬ್ಬು ಬೆಳೆವ ಫಲವತ್ತಾದ ಭೂಮಿಗಳೆಂದು ಗುರ್ತಿಸಿದ್ದರು. ಹಾಗೆಯೇ ಹರಿಹರ ತಾಲ್ಲೂಕಿನ ಹಳ್ಳಿಗಳಿಗೂ ಅನುಕೂಲವಾಗಿತ್ತು. ಜತೆಗೆ ಆಗಿನ ಶಿವಮೊಗ್ಗ ಜಿಲ್ಲೆಯ ನ್ಯಾಮತಿ, ಕಾರಿಗನೂರು, ಕತ್ತಲಗೆರೆ, ಕೂಲಂಬಿ, ಕುಂದೂರು, ಯರೇಚಿಕ್ಕನಹಳ್ಳಿ ಬನ್ನಿಕೋಡು ಮೊದಲಾದ ನೀರಾವರಿ ಪ್ರದೇಶಗಳಿಗೂ ಹತ್ತಿರದ ಪ್ರದೇಶವಾಗಿತ್ತು. ಜತೆಗೆ ಚನ್ನಗಿರಿ ತಾಲ್ಲೂಕು ಕೇಂದ್ರದ ಮುಖ್ಯರಸ್ತೆಯಲ್ಲೇ ಇದ್ದದ್ದು ಮತ್ತಷ್ಟು ಅನುಕೂಲವಾಗಿತ್ತು.

ಆಗ ಸಿದ್ದವೀರಪ್ಪನವರು ಡಿ. ದೇವರಾಜ ಅರಸು ಸಚಿವ ಸಂಪುಟದಲ್ಲಿ ಆರೋಗ್ಯ ಸಚಿವರಾಗಿದ್ದರು. ಕೈಯಲ್ಲಿ ಅಧಿಕಾರ ಇತ್ತು. ಜನಸಂಪರ್ಕದಿಂದ ದಾವಣಗೆರೆ – ಹರಿಹರ ತಾಲ್ಲೂಕಿನ ಜನತೆಗೆ ಹತ್ತಿರವಾಗಿದ್ದರು. ಕಾರ್ಖಾನೆಗೆ ಭಾರೀ ಬಂಡವಾಳವೇ ಬೇಕಿತ್ತು. ಹೀಗಾಗಿ ರೈತರ ಸಭೆ, ವರ್ತಕರ ಸಭೆಯನ್ನು ಬೇರೆಬೇರೆ ಸಂದರ್ಭದಲ್ಲಿ ಕರೆದು ಚರ್ಚಿಸಿದರು. "ಲಿಮಿಟೆಡ್ ಕಂಪನಿ" ಮಾಡಿ ರೈತರಿಂದ, ವರ್ತಕರಿಂದ ಷೇರು ಸಂಗ್ರಹಿಸುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಡುವೆ ಒಂದಷ್ಟು ರೈತರು, ವರ್ತಕರನ್ನು ಹರಿಯಾಣ ರಾಜ್ಯದ ಸಕ್ಕರೆ ಕಾರ್ಖಾನೆಗಳನ್ನು ನೋಡಿಬರಲು ಕರೆದೊಯ್ದರು. ವಾಪಾಸು ಬಂದ ನಂತರ ಷೇರು ಸಂಗ್ರಹವನ್ನು ಗಂಭೀರವಾಗಿ ಪರಿಗಣಿಸಿ, ಜೋಳಿಗೆ ಹಿಡಿದು ಹೊರಟರು. ಸಿದ್ದವೀರಪ್ಪನವರ ನೇತೃತ್ವದಲ್ಲಿ ಜನ ವಿಶ್ವಾಸ ಇರಿಸಿ ಷೇರು ಹಣ ಕೊಡಲು ಮುಂದೆ ಬಂದರು.

ಎರಡು ಎರಡೂವರೆ ವರ್ಷ ಸತತ ಷೇರುಗಳ ಹಣ ಸಂಗ್ರಹ ಕಾರ್ಯ ನಡೆಯಿತು. ಕಾರ್ಖಾನೆ ಕೆಲಸವೂ ಶುರುವಾಗಿತ್ತು. ಕೆಲಸ ಮುಗಿದಾಗ ಕೈಗೆತ್ತಿಕೊಂಡಿದ್ದ ಕೆಲಸ ಮೂರು ವರ್ಷಗಳಿಗೂ ಹೆಚ್ಚುಕಾಲ ಹಿಡಿದಿತ್ತು. "ದಿ ದಾವಣಗೆರೆ ಷುಗರ್ ಕಂಪನಿ ಲಿ.," ಉದ್ಘಾಟನೆಗೆ ಸಿದ್ಧವಾಯಿತು. ರೈತರು ಆಗಲೇ ನೂರಾರು ಎಕರೆಗಳಲ್ಲಿ ಕಬ್ಬು ಬೆಳೆದಿದ್ದರು. 1974ರಲ್ಲಿ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಕಾರ್ಖಾನೆ ಉದ್ಘಾಟಿಸಿದರು. ರೈತರು ಕಟಾವು ಮಾಡಿದ ಕಬ್ಬನ್ನು ಎತ್ತಿನ ಗಾಡಿಗಳಲ್ಲಿ, ಟ್ರಾಕ್ಟರ್‌ಗಳಲ್ಲಿ, ಲಾರಿಗಳಲ್ಲಿ ಕಾರ್ಖಾನೆಯತ್ತ ಸಾಗಿಸಿದರು. ಎತ್ತೆತ್ತ ನೋಡಿದರೂ ಕಬ್ಬಿನದೇ ಸಾಮ್ರಾಜ್ಯ. ಕಾರ್ಖಾನೆ ಕಬ್ಬು ಅರೆಯುವ ಕೆಲಸ ಶುರುಮಾಡಿತು. ಸಕ್ಕರೆ ಉತ್ಪಾದನೆ ಆಗಿ ಪ್ರಥಮ ಮೂಟೆಗಳು ಹೊರಬಂದಾಗ ಸಿದ್ದವೀರಪ್ಪ ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಅವರ ಛಲ, ಹಠಮಾರಿತನ, ಪ್ರಾಮಾಣಿಕತೆ, ರೈತಪರ ಕಾಳಜಿಯಿಂದ ಇಂಥ ದೊಡ್ಡ ಕೆಲಸ 'ಸಹಕಾರ ತತ್ತ್ವ'ದಿಂದ ಸುಲಭವಾಗಿ ಕೈಗೂಡಿತು. ಸಾವಿರಾರು ರೈತರ ಆರ್ಥಿಕ ಚೇತನಕ್ಕೆ ಕಾರಣರಾದ ಸಿದ್ದವೀರಪ್ಪನವರ ಕಾರ್ಯ ಸಾಧನೆಯನ್ನು ಅವರ ಶತ್ರು ವಲಯವೂ ಮೆಚ್ಚಿ ತಲೆದೂಗಿತು. ಹುಟ್ಟೂರು ಹನಗವಾಡಿ ಹಾಗೂ ಎರಡೂ ತಾಲ್ಲೂಕಿನ ಜನ ಸಿದ್ದವೀರಪ್ಪನವರ ಬಗ್ಗೆ ಅಪಾರ ಪ್ರೀತಿ, ಅಭಿಮಾನ ಹೊಂದಿದ್ದರು. ಅವರೆಲ್ಲಾ 'ಸಾಹೇಬರು ಬಂದರು' ಅಂತಲೇ ಗೌರವದಿಂದ ಎದುರುಗೊಳ್ಳುತ್ತಿದ್ದರು

## ಇಂಗ್ಲಿಷ್ ವ್ಯಾಮೋಹ:

ಗ್ರಾಮೀಣ ಪ್ರದೇಶದ ತೀರಾ ಬಡತನ ಕುಟುಂಬದಲ್ಲಿ ಹುಟ್ಟಿ, ಬಂಧು ಬಳಗದ ಧನ ಸಹಾಯದಿಂದ ವಿದ್ಯಾಭ್ಯಾಸ ಪೂರೈಸಿದ್ದ ಸಿದ್ದವೀರಪ್ಪನವರು ಕನ್ನಡದಲ್ಲೇ ಪ್ರಾಥಶಾಲೆವರೆಗೆ ಕಲಿತರೂ ಆರಂಭದ ಕಾಲೇಜು ಶಿಕ್ಷಣ, ಪದವಿ, ಕಾನೂನು

ಶಿಕ್ಷಣ ಇಂಗ್ಲಿಷಿನಲ್ಲಿ ಕಲಿತರು. ಅವರೊಬ್ಬ ಹೆಸರಾಂತ ಕ್ರಿಮಿನಲ್ ವಕೀಲರಾಗಿ ರೈತರ ಜತೆ ಒಡನಾಡಿ ಕನ್ನಡದಲ್ಲೇ ವ್ಯವಹರಿಸಿದರೂ, ಕೋರ್ಟ್‌ನಲ್ಲಿ ನಂತರ ಶಾಸಕರಾಗಿ, ಸಚಿವರಾಗಿ ಸದನದಲ್ಲಿ ವ್ಯವಹರಿಸಿದ್ದೆಲ್ಲ ಹೆಚ್ಚು ಇಂಗ್ಲಿಷ್‌ನಲ್ಲೇ! ಇದಕ್ಕೆ ಸಾಕಷ್ಟು ಪುರಾವೆ ಸದನ ದಾಖಲೆಯಲ್ಲೆ ಸಿಕ್ಕುತ್ತವೆ.

ಸಚಿವರಾಗಿದ್ದಾಗಲಂತೂ ಶಾಸಕರು ಕನ್ನಡದಲ್ಲಿ ಪ್ರಶ್ನೆ ಕೇಳಿದರೆ ಅರ್ಧಗಂಟೆ ಇಲ್ಲಾ ಗಂಟೆಗಟ್ಟಲೇ ನಿರರ್ಗಳವಾಗಿ, ಸ್ಪಷ್ಟವಾಗಿ ಇಂಗ್ಲಿಷಿನಲ್ಲೇ ಉತ್ತರ ಕೊಟ್ಟಿದ್ದಾರೆ. ಆಗ ಕೆಲವು ಸದಸ್ಯರು ಬೆಚ್ಚಿಬಿದ್ದು ಆಕ್ಷೇಪಣೆಗಳನ್ನೂ ಎತ್ತಿದ್ದಾರೆ. ಇಂಗ್ಲಿಷ್ ಭಾಷೆ ಮೇಲೆ ಅವರಿಗೆ ಅಂಥ ಪ್ರಬುದ್ಧತೆ ಇತ್ತು. ಅದರಲ್ಲೂ 1952ರಲ್ಲಿ ಪ್ರಥಮ ಬಾರಿಗೆ ಆಯ್ಕೆಯಾಗಿ ಪ್ರತಿಷ್ಠಿತ ಗೃಹಖಾತೆ ವಹಿಸಿಕೊಂಡ ಸಂದರ್ಭದಲ್ಲಂತೂ ಇಂಗ್ಲಿಷಿನಲ್ಲೇ ವ್ಯವಹರಿಸಿದ್ದಾರೆ. ದಾವಣಗೆರೆಯಿಂದ ಶಾಸಕರಾಗಿ ಆಯ್ಕೆಯಾಗಿದ್ದ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು 'ಕನ್ನಡದಲ್ಲಿ ಮಾತನಾಡಿ. ಇಂಗ್ಲಿಷು ನಮಗೆ ಅರ್ಥ ಆಗುವುದಿಲ್ಲ' ಎಂದು ಹಲವು ಬಾರಿ ಹೇಳಿದ್ದಾರೆ.

1970 ಫೆ. 25ರ ಸದನದಲ್ಲಿ ಮಹಾಜನ್ ವರದಿ ಬಗ್ಗೆ ವಿರೋಧ ಪಕ್ಷದ ನಾಯಕರಾಗಿ ಸಿದ್ದವೀರಪ್ಪ ಇಂಗ್ಲಿಷಿನಲ್ಲಿ ಚರ್ಚೆ ಶುರು ಮಾಡಿದರು. ಆಗ ಕಾಗವಾಡ ಕ್ಷೇತ್ರದ ಶಾಸಕಿ ಶ್ರೀಮತಿ ಚಂಪಾಬಾಯಿ ಧೋಗಲೆ ಅವರು "**ಇದು ಮಹಾಜನ್ ಕಮೀಷನ್ ರಿಪೋರ್ಟ್‌ಗೆ ಸಂಬಂಧಪಟ್ಟ ಚರ್ಚೆಯಾಗಿರುವುದರಿಂದ ಮಾನ್ಯ ಶ್ರೀ ಸಿದ್ದವೀರಪ್ಪನವರು ದಯವಿಟ್ಟು ಕನ್ನಡದಲ್ಲಿ ಮಾತನಾಡಬೇಕು**" ಎಂದು ಒತ್ತಾಯಿಸಿದ ನಂತರ ದೀರ್ಘ ಚರ್ಚೆಯನ್ನು ಕನ್ನಡದಲ್ಲೇ ಮುಂದುವರೆಸಿದ್ದಾರೆ. ಆದರೂ ಮಹಾಜನ್ ವರದಿಯ ಗಂಭೀರ ಚರ್ಚೆಯಲ್ಲಿ ಕನ್ನಡ ಕಳೆದು ಹೋದೀತೆಂಬ ಆತಂಕ ಇದ್ದಂತೆ ಕಾಣುತ್ತದೆ. ಮಾತಿನ ನಡುವೆ ಹೇಳುತ್ತಾರೆ: "**ಇಂಗ್ಲಿಷ್ ಭಾಷೆಯಲ್ಲಿ ಆಗಿದ್ದರೆ ನಾನು ಚೆನ್ನಾಗಿ ಹೇಳುತ್ತಿದ್ದೆ!**" ಎಂಬ ಅನಿಸಿಕೆಯನ್ನೂ ವ್ಯಕ್ತಪಡಿಸಿದ್ದಾರೆ. ಸದನ ಚರ್ಚೆಯ ದಾಖಲೆಯಲ್ಲಿ ಇದೆಲ್ಲ ಪುರಾವೆ ಇದೆ.

ಮತ್ತೆ ಇದೇ 1970 ಅಕ್ಟೋಬರ್ 15ರಂದು ಸದಸ್ಯ ಶ್ರೀ ಚಿಕ್ಕೇಗೌಡ ಪಾಟೀಲ್ ಅವರು – "**ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಇಲ್ಲಿ ಭಾಷಣ ಮಾಡುವಾಗ ಎಲ್ಲವನ್ನೂ ಇಂಗ್ಲಿಷಿನಲ್ಲೇ ಹೇಳಿದರು. ಆದರೆ ನಮ್ಮಂತಹವರಿಗೆ ಇಂಗ್ಲಿಷು ಬರುವುದಿಲ್ಲ. ನಮ್ಮ ರಾಜ್ಯ ಕನ್ನಡ ರಾಜ್ಯ ಎಂದು ಬಾಯಲ್ಲಿ ಹೇಳುತ್ತಾರೆ. ಆದರೆ ಎಲ್ಲಾ ವಿಚಾರಗಳೂ ಇಲ್ಲಿ ಇಂಗ್ಲಿಷಿನಲ್ಲೇ ನಡೆಯುತ್ತಿವೆ. ಮಾನ್ಯ ಅಧ್ಯಕ್ಷರು ಇನ್ನು ಮುಂದೆ ಎಲ್ಲ ವ್ಯವಹಾರಗಳನ್ನೂ ಇಲ್ಲಿ ಕನ್ನಡದಲ್ಲೇ ನಡೆಸಲು ಸಹಾಯ ಮಾಡಬೇಕು**" ಎಂದು ಸಭಾಧ್ಯಕ್ಷರಲ್ಲಿ ಮನವಿ ಮಾಡಿದರು. ವಾಟಾಳ್ ನಾಗರಾಜ್, ಶಾಂತವೇರಿ ಗೋಪಾಲಗೌಡ ಮೊದಲಾದ ಕಟ್ಟಾ ಕನ್ನಡಾಭಿಮಾನಿ ಶಾಸಕರ ದನಿಯೂ ಅದೇ ಆಗಿತ್ತು.

– ಶ್ರೀ ಎಚ್. ಸಿದ್ದವೀರಪ್ಪನವರು ಸದನದಲ್ಲಿ ಇಂಗ್ಲಿಷ್ ಬಳಸುತ್ತಿದ್ದ ಬಗ್ಗೆ ಇಂಥ ಹಲವು ದಾಖಲೆಗಳು ಸಿಕ್ಕುತ್ತವೆ.

ರಾಜ್ಯ ರಾಜಕಾರಣದಲ್ಲಿ ದೊಡ್ಡ ಹೆಸರು ಮಾಡಿದ್ದ ಶ್ರೀ ಎಚ್. ಸಿದ್ದವೀರಪ್ಪನವರು ಬಳಸುತ್ತಿದ್ದ ಇಂಗ್ಲಿಷ್ ಬಗ್ಗೆ ಎಷ್ಟೇ ಆಕ್ಷೇಪಣೆಗಳಿದ್ದರೂ ಅವರಿಗೆ ಕನ್ನಡವೆಂದರೂ ಅಷ್ಟೇ ಪ್ರಾಂಚಪ್ರಾಣ. ಅವರೊಬ್ಬ ಅದ್ಭುತ ಕ್ರಿಯಾಶೀಲ ಹಾಗೂ ಸ್ವತಂತ್ರ ವ್ಯಕ್ತಿತ್ವದ ವ್ಯಕ್ತಿತ್ವದವರು. ಸಾಕಷ್ಟು ಪುಸ್ತಕ, ಹತ್ತಾರು ದೈನಿಕಗಳನ್ನು ಓದುತ್ತಿದ್ದರು. – ಅದರಲ್ಲಿ ವಿದೇಶಿ ಪತ್ರಿಕೆಗಳೂ ಸೇರಿರುತ್ತಿದ್ದುದು ವಿಶೇಷ. ಹೀಗಾಗಿ ಅವರೊಬ್ಬ ನಿರಂತರ ಅಭ್ಯಾಸಿ. ಕನ್ನಡದ ಸಾಹಿತ್ಯದ ಓದಿನ ಅರಿವಿತ್ತು. ಸರ್ವಜ್ಞ, ಬಸವಣ್ಣ, ಡಿವಿಜಿ, ಕುವೆಂಪು ಮುಂತಾದವರ ಆಲೋಚನೆಗಳನ್ನು ಅಲ್ಲಲ್ಲಿ ಉದ್ಧರಿಸಿದ್ದಾರೆ ಕೂಡ.

* * *

## ಶ್ರೀ ಎಚ್. ಸಿದ್ದವೀರಪ್ಪನವರ ಹೆಸರು ಉಳಿಸುವಲ್ಲಿ...

ರಾಜ್ಯ ಕಂಡ ಬಹುಮುಖ ಪ್ರತಿಭೆಯ ವಕೀಲರು ಹಾಗೂ ವಿಶಿಷ್ಟ ರಾಜಕಾರಣಿ ಶ್ರೀ ಎಚ್. ಸಿದ್ದವೀರಪ್ಪ. ಮುಖ್ಯಮಂತ್ರಿ ಸ್ಥಾನದವರೆಗೂ ಅವರ ಹೆಸರು ಹರಿದಾಡಿತ್ತು. ಗೃಹ, ಆರೋಗ್ಯ, ಕೈಗಾರಿಕೆ, ಕೃಷಿಯಂಥ ಪ್ರಮುಖ ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿ ಆ ಖಾತೆಗಳಿಗೆ ಘನತೆ ಗೌರವ ತಂದು ಕೊಟ್ಟವರು. ವಿರೋಧ ಪಕ್ಷದ ನಾಯಕರೂ ಆಗಿದ್ದವರು. 1952 – 1976ರವರೆವಿಗೂ (24 ವರ್ಷ) ರಾಜ್ಯ ರಾಜಕಾರಣದಲ್ಲಿ ಏರಿಳಿತ (ಸೋಲು – ಗೆಲುವು) ಕಂಡು ಒಂದಿಲ್ಲೊಂದು ಸುದ್ದಿಯಲ್ಲಿದ್ದವರು.

ಇಂಥ ಸಾಧಕನ ಬಗ್ಗೆ ಕುಟುಂಬದವರಿಂದ ಅವರ ಹೆಸರು ಉಳಿಸುವ ಒಂದೇ ಒಂದು ಸಣ್ಣ ಕೆಲಸವೂ ನಡೆದಿಲ್ಲ! ಸ್ಮಾರಕವಾಗಲಿ, ಹುಟ್ಟುಹಬ್ಬ, ಶತಮಾನೋತ್ಸವ ಸಮಾರಂಭವಾಗಲಿ, ಅವರ ಹೆಸರಿನ ಪ್ರಶಸ್ತಿಯಾಗಲಿ ಯಾವುದನ್ನೂ ಮಾಡಲಿಲ್ಲ! ಆದರೆ ಸಾರ್ವಜನಿಕವಾಗಿ ಸದಾ ಸ್ಮರಿಸಹುದಾದ ಅನೇಕ ಕೆಲಸಗಳನ್ನು ಜನರೇ ಮಾಡಿದ್ದಾರೆ.

**ಮೊದಲನೆಯದು** ತಾವೇ ನಿರ್ಮಿಸಿದ ದೇವರಬೆಳಕೆರೆ ಡ್ಯಾಂ ಸಂಗ್ರಹದಿಂದ ಹರಿಯುವ ಚಾನಲ್ (ಕಾಲುವೆ) ಒಂದು ಭಾಗಕ್ಕೆ 'ಎಚ್. ಸಿದ್ದವೀರಪ್ಪ ನಾಲೆ' ಎಂದು ನಾಮಕರಣ ಮಾಡಲಾಗಿದೆ. ಹರಿಹರ ತಾಲ್ಲೂಕಿನ ಸಾವಿರಾರು ಎಕರೆಗಳಿಗೆ ಈ ನಾಲೆಯಿಂದ ನೀರು ಹರಿಯುತ್ತದೆ. ಭತ್ತ, ಕಬ್ಬು, ಶೇಂಗಾ, ತೆಂಗು, ಅಡಕೆ ಮೊದಲಾದ ಆರ್ಥಿಕ ಬೆಳೆ ಬೆಳೆಯಲಾಗುತ್ತಿದೆ.

**ಎರಡನೆಯದು** ಸಿರಿಗೆರೆ ತರಳಬಾಳು ಬೃಹನ್ಮಠದ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ದಾವಣಗೆರೆ ತಾಲ್ಲೂಕಿನ ಕಂದಗಲ್ಲು ಗ್ರಾಮದಲ್ಲಿ 'ಎಚ್. ಸಿದ್ದವೀರಪ್ಪ ಪ್ರೌಢಶಾಲೆ' ಸ್ಥಾಪಿಸಲಾಗಿದೆ. ತರಳಬಾಳು ಮಠದ ಶಿಷ್ಯರಾದ ಅವರು ಹಿರಿಯ ಜಗದ್ಗುರುಗಳ ಜತೆ ಪ್ರೀತಿ, ಜಗಳ, ಮುನಿಸು ಎಲ್ಲವನ್ನೂ ಹೊಂದಿದ್ದರು. ಆದರೂ ಅವರ ಮೇಲಿನ ಅಭಿಮಾನ, ಸಮಾಜದ ಹಿತದೃಷ್ಟಿಯಿಂದ ಆ ಹೆಸರನ್ನು ಇಡಲಾಗಿದೆ.

**ಮೂರನೆಯದು** ವ್ಯಾಪಾರ, ಶಿಕ್ಷಣದ ಪ್ರಮುಖ ಕೇಂದ್ರ ದಾವಣಗೆರೆಯ ರಿಂಗ್ ರಸ್ತೆ ಪಕ್ಕದ ಹೊಸ ಬಡಾವಣೆಗೆ 'ಎಚ್. ಸಿದ್ದವೀರಪ್ಪ ಬಡಾವಣೆ' ಎಂದು ನಾಮಕರಣ ಮಾಡಲಾಗಿದೆ.

**ನಾಲ್ಕನೆಯದು** ರೈತರ ಪರವಾಗಿ ಕಾಳಜಿ ವಹಿಸಿ, 'ದಿ ದಾವಣಗೆರೆ ಷುಗರ್ ಕಂಪನಿ' ಆರಂಭವಾಗಲು ಕಾರಣರಾದ ಸಿದ್ದವೀರಪ್ಪನವರ ಆಳೆತ್ತರದ ಪ್ರತಿಮೆಯನ್ನು ಕುಕ್ಕವಾಡ ಫ್ಯಾಕ್ಟರಿಯ ಆವರಣದಲ್ಲಿ ನಿರ್ಮಿಸಲಾಗಿದೆ.

'ರಾಷ್ಟ್ರೀಯ ಹೆದ್ದಾರಿ – 4' ಹರಿಹರದ ಮೂಲಕವೇ ಹಾಯ್ದು ಹೋಗುತ್ತದೆ. ಹೆದ್ದಾರಿಗೆ ಆತುಕೊಂಡಂತೆ ಹರಿಹರ ಸಮೀಪವೇ ದೊಡ್ಡಬಾತಿ ಎಂಬ ಗ್ರಾಮವೂ ಇದೆ. ಇದು ಸಿದ್ದವೀರಪ್ಪನವರು ಬಾಲ್ಯದಲ್ಲಿ ಓದಿದ, ಮಹಾದೇವಮ್ಮನವರನ್ನು ಧರ್ಮಪತ್ನಿಯಾಗಿ ಸ್ವೀಕರಿಸಿದ ಊರು. ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದ ಸಿದ್ದವೀರಪ್ಪನವರ ದೇಹವನ್ನು ಈ ಊರಿಗೇ ತಂದು ಹೆದ್ದಾರಿ ಪಕ್ಕದ ಹೊಲದಲ್ಲಿ ಅಂತ್ಯಸಂಸ್ಕಾರ ಮಾಡಲಾಗಿದೆ.

ಅದಕ್ಕೂ ಮುನ್ನ ಹುಟ್ಟೂರು ಹನಗವಾಡಿಯ ಅವರ ಬೆಂಬಲಿಗರು, ಬಂಧುವರ್ಗ ಹುಟ್ಟೂರಲ್ಲೇ ಅವರ ದೇಹ ಮಣ್ಣು ಮಾಡಲು ಹಠ ಹಿಡಿದಿದ್ದರು. ಆದರೆ ಪತ್ನಿ ಮಹಾದೇವಮ್ಮ ತಮ್ಮ ತೌರುಮನೆ ಜಮೀನಿನಲ್ಲೇ ಅಂತಿಮ ವಿಧಿ ವಿಧಾನ ನಡೆಯಲಿ ಎಂದು ಹೇಳಿದ್ದರ ಪರಿಣಾಮ ದೊಡ್ಡಬಾತಿಯಲ್ಲೆ ಅಂತ್ಯ ಸಂಸ್ಕಾರವಾಯಿತು. ಒಂದು ವರ್ಷದ ನಂತರ ಮಹಾದೇವಮ್ಮನವರೂ ದೇಹತ್ಯಾಗ ಮಾಡಿದಾಗ ಪತಿಯ ಪಕ್ಕದಲ್ಲೇ ಸಮಾಧಿ ಮಾಡಲಾಗಿದೆ.

* * *

"ಕನ್ನಡಕ್ಕೆ – ಭಾರತೀಯತೆ, ವಿಶ್ವಮಾನವತೆ – ಇವು ಪದರಿನ ಮೇಲಿನ ಪದರು ಇಲ್ಲವೆ ಸ್ತರದ ಮೇಲಿನ ಸ್ತರವಲ್ಲ. ದೇಹದಲ್ಲಿಯೇ ಪ್ರಾಣಮಯವಿದೆ; ಪ್ರಾಣಮಯದಲ್ಲಿಯೇ ಮನೋಮಯವಿದೆ. ಮನೋಮಯದಲ್ಲಿಯೇ ವಿಜ್ಞಾನಮಯವಿದೆ. ಹೀಗೆ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಮೇಲೆ ಹೇಳಿದ ಮೂರು ಮೌಲ್ಯಗಳೂ ಒಂದರೊಳಗೊಂದು ಬೆರೆತುಕೊಂಡಿವೆ. ಭಾರತೀಯ ಸಮಸ್ಯೆ ಮುಂದೆ ಬಂದಾಗ ಉಳಿದೆರಡು ಮೌಲ್ಯಗಳೂ ಬದಿಗೆ ಸರಿಯುತ್ತವೆ. ವ್ಯಕ್ತಿಯ ಭಾರತೀಯ ಪ್ರಜ್ಞೆ, ಸಮಸ್ಯೆಯನ್ನು ಎದುರಿಸುತ್ತದೆ. ವಿಶ್ವದ ಪ್ರಶ್ನೆ ಎದುರಾದಾಗ ವ್ಯಕ್ತಿಯ ವಿಶ್ವಮಾನವತೆ ಮಾತ್ರ ಜಾಗೃತವಾಗುತ್ತದೆ.

– ***ವಿ .ಕೃ. ಗೋಕಾಕ್***

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು

# ಸದನದಲ್ಲಿ ಎಚ್. ಸಿದ್ದವೀರಪ್ಪ

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ!
ತನುವಿನಲಿ ಹುಸಿ ತುಂಬಿ, ಮನದಲ್ಲಿ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ!
ಕೂಡಲ ಸಂಗಮದೇವ.

– ಬಸವಣ್ಣ

# ಆಹಾರ ಸಮಸ್ಯೆ ಹಾಗೂ ಬೆಲೆಯ ಸುತ್ತ....

## 18, ಜನವರಿ 1954.

**ಶ್ರೀ ಎಚ್. ಸಿದ್ದವೀರಪ್ಪ : (ಗೃಹ ಹಾಗೂ ಕೈಗಾರಿಕಾ ಸಚಿವರು) :** ಮಾನ್ಯ ಅಧ್ಯಕ್ಷರೇ, ರಾಜ ಪ್ರಮುಖರ ಭಾಷಣ ಮೇಲೆ ಸಭೆಯಲ್ಲಿ 14 ಜನ ಮಾನ್ಯ ಸದಸ್ಯರು ಮಾತನಾಡಿ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ; ಮತ್ತು ಉಪಯುಕ್ತ ಸಲಹೆಗಳನ್ನೂ ಕೊಟ್ಟಿರುತ್ತಾರೆ. ರಚನಾತ್ಮಕ ಟೀಕೆಗಳನ್ನೂ ಕೆಲವರು ಮಾಡಿರುತ್ತಾರೆ. ಈ ಸಲಹೆಗಳಿಗೆ ವಂದಿಸುತ್ತೇನೆ. ನಾನು ಈಗ ಮುಖ್ಯವಾಗಿ ಆಹಾರ ಪ್ರಶ್ನೆಯ ವಿಚಾರ ಮಾತ್ರ ಹೇಳಿ ಬಾಕಿ ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿಸುವುದರಿಂದ ಸ್ವಲ್ಪ ಸಮಯದಲ್ಲಿಯೇ ನನ್ನ ಭಾಷಣ ಮುಗಿಸುತ್ತೇನೆ. ಕೆಲವು ಮಾನ್ಯ ಸದಸ್ಯರು ಆಹಾರ ಸಮಸ್ಯೆಯ ವಿಚಾರದಲ್ಲಿ ಸರ್ಕಾರದ ನೀತಿಯನ್ನು ಹೊಗಳಿದ್ದಾರೆ, ಅಥವಾ ಪುಷ್ಠೀಕರಿಸಿದ್ದಾರೆ. ಇದಕ್ಕಾಗಿ ಅವರನ್ನು ವಂದಿಸುತ್ತೇನೆ.

ಶ್ರೀ ಪಟ್ಟಾಭಿರಾಮನ್‌ರವರು ಹೇಳಿದಹಾಗೆ ಈಗ ಸಂಸ್ಥಾನದಲ್ಲಿ ಎಲ್ಲಾಕಡೆ ಮಳೆ ಆಗಿದೆ. ಎಲ್ಲಾ ಕಡೆ ಹೆಚ್ಚಿಗೆ ಕಾಣುತ್ತಿದೆ. ಆದರೂ ಎಲ್ಲಾ ಸರಿಯಾಗಿದೆ ಎಂಬ ಮನೋಭಾವ ತಾಳಿ ನಿದ್ರೆ ಮಾಡುವ ಕಾಲ ಇನ್ನೂ ಬಂದಿಲ್ಲ ಎಂಬುದನ್ನು ನಾನೂ ಸಹ ಒಪ್ಪುತ್ತೇನೆ. ಏಕೆಂದರೆ, ಅನೇಕ ವರ್ಷಗಳ ಕಾಲ ಕಂಟ್ರೋಲಿನ ಆಡಳಿತದಿಂದ ದೇಶದ ಮೇಲೆ ಆಗಿರತಕ್ಕ ಪರಿಣಾಮ ಒಂದು ವರ್ಷದ ಸುಭಿಕ್ಷೆಯಿಂದಲೇ ಬಗೆಹರಿಯುತ್ತದೆಂಬುದನ್ನು ನಾನು ಒಪ್ಪುವುದಿಲ್ಲ. ಸರ್ಕಾರದವರೂ ಸಹಾ ಕಣ್ಣಲ್ಲಿ ಕಣ್ಣಿಟ್ಟು ಪರಿಸ್ಥಿತಿ ಹೇಗಿದೆ, ಇದನ್ನು ಯಾವ ರೀತಿ ಜನಹಿತ ದೃಷ್ಟಿಯಿಂದ ನೋಡಿದರೆ ಆಹಾರ ಇಲಾಖೆಯ ಕೆಲಸ ಮುಗಿಯಿತು ಎಂಬುದನ್ನು ಗಮನಿಸುತ್ತಿದ್ದಾರೆ.

ಇನ್ನೇನೂ ಮಾಡಬೇಕಾಗಿಲ್ಲ ಎಂದು ನಾನು ತಿಳಿದುಕೊಂಡಿಲ್ಲ. ನಮ್ಮ ಕರ್ತವ್ಯವೇನಿದೆಯೋ ಅದನ್ನರಿತು, ಈಗಿರತಕ್ಕಂಥ ಮಧ್ಯವರ್ತಿ ಕಾಲದಲ್ಲಿ (transitional period), ಕಂಟ್ರೋಲ್ ತೆಗೆದಿರುವ ಈ ಕಾಲದಲ್ಲಿ, ದೇಶದಲ್ಲಿ ಶಾಂತಿ, ನೆಮ್ಮದಿ ಮತ್ತು ಸುವ್ಯವಸ್ಥೆ ನೆಲಸತಕ್ಕ ಯೋಜನೆ ಕೈಗೊಳ್ಳುವುದು ಈಗ ಸರ್ಕಾರದ ಆದ್ಯ ಕರ್ತವ್ಯ. ಈ ಬಗ್ಗೆ ಕೆಲವು ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿರುವುದಕ್ಕಾಗಿ ವಂದಿಸುತ್ತೇನೆ. ಒಂದು ಅಂಶವನ್ನು ಗಮನದಲ್ಲಿಟ್ಟುಕೊಂಡಿದ್ದೇನೆ;

ನನಗೆ ತಿಳಿದ ಮಟ್ಟಿಗೆ ಅತಿವೃಷ್ಟಿಯಿಂದ ಕೆಲವು ಕಡೆ ಅದರಲ್ಲೂ ಜೋಳದ ಬೆಳೆಗೆ ಹಾನಿ ಉಂಟಾಗಿದೆ ಎಂಬುದನ್ನು ಆಲಿಸಿ ಕೇಳಿದ್ದೇನೆ. ಇದರ ವಿಚಾರವನ್ನು ಈಗಾಗಲೇ ಆಹಾರ ಇಲಾಖೆಯವರಿಗೆ ತಿಳಿಸಿದ್ದೇನೆ. ಈಗಾಗಲೇ ಅವರು ಮುಂಜಾಗ್ರತೆ ಕ್ರಮವಹಿಸಿ ಇದರ ಪರಿಸ್ಥಿತಿ ಹೇಗಿದೆ ಎಂಬುದನ್ನು ತಿಳಿದುಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೆ ನಮ್ಮ ದವಸ ಇನ್ನೆಷ್ಟು ದಿನಕ್ಕೆ ಆಗಬಹುದು, ಇನ್ನೂ ದವಸದ ಅವಶ್ಯಕತೆ ಇದೆಯೇ ಎಂಬುದನ್ನು ನೋಡುತ್ತಿದ್ದಾರೆ.

ಈಗಿರುವ ದವಸ ಹೊರಗೆ ಹೋಗದೇ ಇದ್ದರೆ, ಎಲ್ಲೋ ಕೆಲವು ಕಡೆ ವ್ಯಾಪಾರಸ್ಥರು ಲಾಭದೃಷ್ಟಿಯಿಂದ ಹೊರಗೆ ಕಳುಹಿಸುತ್ತಿದ್ದರೂ, ಇಲ್ಲಿರತಕ್ಕಂಥ ದವಸ ಸಾಕಾಗಬಹುದೆಂಬ ನಿರೀಕ್ಷಣೆ ಇದೆ. ಈ ವಿಚಾರವನ್ನು ಸರ್ಕಾರ ದಿನವಹಿ ಆಲೋಚಿಸುತ್ತಿದೆ. ಈಗ ತಮಗೆ ತಿಳಿದಿರುವಹಾಗೆ, ರಾಗಿ ಮತ್ತು ಜೋಳವನ್ನು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಕಳುಹಿಸಬಹುದೆಂದು ಕೇಂದ್ರ ಸರ್ಕಾರದ ಒಂದು ಆಜ್ಞೆಯಾಗಿದೆ. ಅವರ ಉದ್ದೇಶ gradual de-control.

ಯುದ್ಧದ ಆರಂಭಕ್ಕೆ ಮುಂಚೆ ಯಾವ ಪರಿಸ್ಥಿತಿ ಇತ್ತೋ ಆ ಪರಿಸ್ಥಿತಿ ಬರಬೇಕೆಂಬ ಘನ ಉದ್ದೇಶದಿಂದ ಈ ರೀತಿ ಒಂದು ಆಜ್ಞೆಯನ್ನು ಇಂಡಿಯಾ ಸರ್ಕಾರದವರು ಮಾಡಿರುತ್ತಾರೆ. ಈ ಸಮಯದಲ್ಲಿ ನಾನು ಒಂದು ಅಂಶವನ್ನು ಪ್ರಸ್ತಾಪಿಸಿದರೆ ತಪ್ಪಾಗಲಾರದು. ಈ ದಿನ ಹಿಂದೂಸ್ಥಾನದಲ್ಲಿ ಈ ರೀತಿ ಆಹಾರ ಪ್ರಶ್ನೆಯನ್ನು ಸುಲಭವಾಗಿ ಬಿಡಿಸಿದ ಮಹಾಕೀರ್ತಿ ಕೇಂದ್ರ ಆಹಾರ ಸಚಿವರಿಗೆ ಸೇರತಕ್ಕದ್ದು. ಅವರು ಈ ವಿಚಾರದಲ್ಲಿ ಸರಿಯಾದ ತಿಳುವಳಿಕೆ ಕೊಟ್ಟು ಪ್ರತಿಯೊಂದನ್ನೂ ಈ ರೀತಿ ಮಾಡಿದರೆ ಅನುಕೂಲವಾಗುತ್ತದೆ ಎಂಬ ಮಾರ್ಗದರ್ಶಿತ್ವ ತೋರಿಸಿದ್ದರಿಂದ ಸುಲಭವಾಗಿ ಈ ಸಮಸ್ಯೆ ಬಗೆಹರಿಯಿತು. ಇಡೀ ಪ್ರಾಂತ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ರೀತಿ ಆಜ್ಞೆಯನ್ನು ಅವರು ಮಾಡಿರುತ್ತಾರೆ.

ಇದೇ ಸಂದರ್ಭದಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲಿರುವಂಥ ರೈತರ ಮತ್ತು ವರ್ತಕ ವೃಂದದವರ ವಿಚಾರವಾಗಿ ಒಂದೆರಡು ಮಾತುಗಳನ್ನಾಡಿದರೆ ಅಪ್ರಸ್ತುತವಾಗಲಾರದು. ಹೋದವರ್ಷ ಅನೇಕ ತಾಲ್ಲೂಕುಗಳಲ್ಲಿ ಬೆಳೆ ಇಲ್ಲದೇ ಇದ್ದುದರಿಂದ ಆಹಾರ ಮಳಿಗೆಗಳನ್ನು ತೆಗೆಯುವ ಅವಶ್ಯಕತೆ ಇದ್ದುದರಿಂದ ತೆಗೆದುದಾಯಿತು. ನನಗೆ ಈಗ ಬಂದಿರುವ ವರ್ತಮಾನದಲ್ಲಿ ಹೆಚ್ಚಿನ ಬೆಲೆಯಲ್ಲಿ ಸಕ್ಕರೆ ಮಾರಾಟ ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಈ ವಿಚಾರದಲ್ಲಿ ರೈತರು ಮತ್ತು ವ್ಯಾಪಾರಸ್ಥರು ತಮ್ಮ ಕರ್ತವ್ಯವನ್ನು ತಿಳಿದುಕೊಂಡು ದೇಶದ ಹಿತದೃಷ್ಟಿಯಿಂದ ಮುಂದುವರೆಯಬೇಕೆಂದು ತಿಳಿಸಲಿಚ್ಛಿಸುತ್ತೇನೆ.

ಎಲ್ಲಾ ಕಾಲದಲ್ಲೂ ರೈತರು ತಮ್ಮ ಬಳಿ ಇರುವ ದವಸವನ್ನು ಮಾರಾಟಮಾಡಿ ಕೊನೆಗೆ ನಮ್ಮ ಡಿಪೋವಿಗೆ ಬಂದು ಕಾಳುಕೊಡಿ ಎಂದು ಕೇಳಬಾರದು. ವ್ಯಾಪಾರಸ್ಥರೂ

ಸಹಾ ಈ ವಿಚಾರದಲ್ಲಿ ತಮ್ಮ ಕರ್ತವ್ಯದೃಷ್ಟಿಯನ್ನು ಅರಿತು ನಡೆಯಬೇಕೆಂದು ಸೂಚಿಸುತ್ತೇನೆ.

ಇನ್ನೊಂದು ಅಂಶ. ಎಲ್ಲ ಮಾನ್ಯ ಸ್ನೇಹಿತರೂ ರಾಗಿ ಮತ್ತು ಜೋಳಕ್ಕೂ ಸಹ ಮಿನಿಮಂ ಬೆಲೆಯನ್ನು ಗೊತ್ತುಮಾಡಬೇಕೆಂಬ ಅಂಶವನ್ನು ಹೇಳಿದ್ದಾರೆ. ಸ್ವಾಮಿ ಈ ಬತ್ತಕ್ಕೆ ಮಿನಿಮಂ ಬೆಲೆ ಕೊಟ್ಟದ್ದು ಮೈಸೂರು ದೇಶದ ಆಡಳಿತದಲ್ಲಿ ಇದೇ ಮೊದಲನೆಯಸಾರಿ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಇದನ್ನು ಮಾಡಿರುವ ಉದ್ದೇಶವಾದರೂ ಇಷ್ಟೆ: ಬತ್ತಕ್ಕೆ ಮಿನಿಮಂ ಬೆಲೆ ಸರ್ಕಾರ ಗ್ಯಾರಂಟಿ ಕೊಟ್ಟಿದೆ. ಸಮಯ ಬಂದಾಗ ಮಿಲೆಟ್ಸ್‌ಗೂ ಕೊಡಬೇಕಾದ್ದು ಅತಿಮುಖ್ಯ ಎಂಬುದನ್ನೂ ಸಹ ಸರ್ಕಾರ ತಿಳಿದುಕೊಂಡಿದೆ. ಈ ವಿಚಾರದಲ್ಲಿ ಆ ರೀತಿ ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಸದಸ್ಯರಿಗೂ ಸರ್ಕಾರದವರಿಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂಬುದನ್ನು ಈ ಸಮಯದಲ್ಲಿ ಹೇಳುತ್ತೇನೆ. ಇನ್ನು ಬಾಕಿ ಅಂಶಗಳನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುವವರಿರುವುದರಿಂದ ಇಷ್ಟು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

* * *

# ಜಾಹೀರಾತು ಉದ್ದೇಶ

## 22, ಜನವರಿ 1954

(ಸರ್ಕಾರ ಸ್ಥಳೀಯ ಪತ್ರಿಕೆಗಳಿಗೆ ಜಾಹೀರಾತು ನೀಡುವ ಬದಲು, ಆಂಗ್ಲ ವಾರಪತ್ರಿಕೆ 'ಬ್ಲಿಟ್ಜ್'ಗೆ ಹೆಚ್ಚಿನ ದರದಲ್ಲಿ ಜಾಹೀರಾತು ನೀಡಿದ್ದರ ಬಗ್ಗೆ ಮಾನ್ಯ ಸದಸ್ಯ ಶ್ರೀ ನಾಗಯ್ಯ ರೆಡ್ಡಿಯವರು ಸದನದಲ್ಲಿ ಆಕ್ಷೇಪ ಎತ್ತಿದರು. ಆಂಗ್ಲ ಪತ್ರಿಕೆಗೆ ಜಾಹೀರಾತು ಕೊಟ್ಟಿದ್ದನ್ನು ಸಮರ್ಥಿಸಿಕೊಂಡ ಸಚಿವ ಶ್ರೀ ಸಿದ್ದವೀರಪ್ಪ ಅವರ ಉತ್ತರ ಇಲ್ಲಿದೆ.)

**ಶ್ರೀ ಎಚ್. ಸಿದ್ದವೀರಪ್ಪ (ಗೃಹ ಹಾಗೂ ಕೈಗಾರಿಕೆ ಸಚಿವರು)** : ಕಳೆದ ಅಧಿವೇಶನದಲ್ಲಿ 238, 283ನೇ ಪ್ರಶ್ನೆಗಳು ಬಂದಿವೆ. ಆಗ ಸರ್ಕಾರ ಈ ವಿಷಯದಲ್ಲಿ ಯಾವ ಕಾರ್ಯಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಿದೆ. ನಮ್ಮ ಮಾನ್ಯ ಸ್ನೇಹಿತರಾದ ವಿದ್ಯಾಮಂತ್ರಿಗಳು ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಮಾಡಿದ ಜ್ಞಾಪಕ. ಈಗ ಶ್ರೀ ನಾಗಯ್ಯ ರೆಡ್ಡಿಯವರು ಎತ್ತಿರುವ ಪ್ರಶ್ನೆಗೆ ಸಂಬಂಧಿಸಿದಂತೆ ಈ ಸಭೆಗೆ ತಿಳಿಸುತ್ತೇನೆ: ಶ್ರೀಯುತರು ಏಕೆ ಪತ್ರಿಕೆಯ ಮೇಲೆ ಈ ಸರ್ಕಾರದವರಿಗೆ ಇಷ್ಟು ಮಮತೆ? ಎಂದು ಪ್ರಶ್ನಿಸಿದ್ದಾರೆ. ಅವರು ಹೆಸರಿಸಿದ ಪತ್ರಿಕೆಗೆ ಈ ಸರ್ಕಾರ ಮೊದಲು ಜಾಹೀರಾತು ಕೊಡಲಿಕ್ಕೆ ಶುರುಮಾಡಲಿಲ್ಲ. ನನ್ನಲ್ಲಿರತಕ್ಕ ಅಂಕಿ ಅಂಶಗಳ ಪ್ರಕಾರ 1949ನೇ ಇಸವಿಯಿಂದಲೂ ಸಹ ಈ ಪತ್ರಿಕೆಗೆ ಜಾಹೀರಾತು ದೊರೆಯುತ್ತಾ ಇತ್ತು ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದನ್ನು ಈ ಮಂತ್ರಿಗಳ ಕೈಯಲ್ಲಿ ರಾಜ್ಯ ಸುಲಲಿತವಾಗಿ ನಡೆಯುತ್ತದೆಯೇ ಇಲ್ಲವೇ ಎಂಬ ಶಂಕೆಗೆ ಜವಾಬಿನ ರೂಪದಲ್ಲಿ ಹೇಳಿದ್ದೇನೆ. ದಯವಿಟ್ಟು ಶೀಘ್ರವಾಗಿ ಯೋಚಿಸಬೇಕೆಂದು ಹೇಳುತ್ತೇನೆ.

1949ನೇ ಇಸವಿಯಿಂದ 1953ನೇ ಇಸವಿಯವರೆಗೆ 3,526 ರೂಪಾಯಿ 12 ಆಣೆಗಳು ಈ ಪತ್ರಿಕೆಗೆ ಜಾಹೀರಾತು ರೂಪದಲ್ಲಿ ತಲುಪಿದೆ. ಮತ್ತು ಸ್ಪೆಷಲ್ ಮೈಸೂರು ಸಪ್ಲಿಮೆಂಟ್‌ನಲ್ಲಿ ಇರತಕ್ಕಂಥ ಜಾಹೀರಾತಿಗೆ ರೂ. 2,725 ತಲುಪಿಸಬೇಕಾಗಿತ್ತು. ಆದರೆ ಅವರು ಪ್ರಕಟಿಸಿರುವ ಜಾಹೀರಾತಿನ ಸ್ಥಳ



WD-H-035-6

ಸೂಕ್ತವಾಗಿರಲಿಲ್ಲದ ಕಾರಣ ನಿರ್ದಿಷ್ಟವಾದ ದರ ಹಾಕಿ ಕೊಡಲಾಗಿದೆ. ಸರಿಯಾಗಿ 2,625 ರೂಪಾಯಿ ಮಾತ್ರ ತಲುಪಿದೆ. ಇದು ಖಚಿತವಾದ ಅಂಕಿಅಂಶ.

ಶ್ರೀ ನಾಗಯ್ಯ ರೆಡ್ಡಿಯವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿದ ಹಾಗೆ ಚೆಕ್ ಯಾವುದನ್ನೂ ಕೊಟ್ಟಿಲ್ಲ ಎಂಬುದನ್ನು ಈಗಲಾದರೂ ದಯವಿಟ್ಟು ಖಚಿತಪಡಿಸಿಕೊಳ್ಳಬೇಕೆಂದು ಸವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಯಾವರೀತಿಯಾಗಿಯೂ ಈ ಪತ್ರಿಕೆಗೆ ಸ್ಪೆಷಲ್ ಟ್ರೀಟ್‌ಮೆಂಟ್ ಕೊಟ್ಟಿಲ್ಲವೆಂಬುದನ್ನು ತಿಳಿಸಬಯಸುತ್ತೇನೆ. ಜಾಹೀರಾತು ರೀತಿನೀತಿಯ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸರ್ಕಾರ ತಾನು ಕೊಡತಕ್ಕ ಜಾಹೀರಾತುಗಳನ್ನು ಎರಡು ಭಾಗ ವಿಂಗಡಿಸಿದೆ. ಒಂದನೆಯದು ಮೈಸೂರು ಸರ್ಕಾರ ನೇರವಾಗಿ ನಡೆಸತಕ್ಕ ಕಾರ್ಖಾನೆಗಳಲ್ಲಿನ ಉತ್ಪನ್ನಕ್ಕೆ ತಕ್ಕ ಮಾರುಕಟ್ಟೆ ಹಾಗೂ ವ್ಯಾಪಾರಕ್ಕೆ ಅನುಕೂಲವಾಗುವ ಹಾಗೆ ಜಾಹೀರಾತು ಕೊಡತಕ್ಕದ್ದು. ಇದು ಕೇವಲ ಕಮರ್ಷಿಯಲ್ ಇಂಟರೆಸ್ಟ್ ಎಂದರೆ ನಮ್ಮ ಕಾರ್ಖಾನೆಗಳಲ್ಲಿ ಉತ್ಪತ್ತಿಯಾದ ಮಾಲುಗಳು ಜನರ ತಿಳುವಳಿಕೆಗೆ ಬರಲಿ ಎಂಬ ಉದ್ದೇಶವೂ ಅಡಗಿರುತ್ತದೆ. ಇದರಿಂದ ಹೆಚ್ಚಿನ ಗ್ರಾಹಕರನ್ನು ಒದಗಿಸಿಕೊಳ್ಳುವುದಕ್ಕೂ ಅನುಕೂಲವಾಗುತ್ತದೆ.

ಸ್ವಾಮಿ, ಜಾಹೀರಾತು ವಿಚಾರದಲ್ಲಿ ಹೇಳಬೇಕಾದರೆ, ಅನೇಕ ದೇಶಗಳಲ್ಲಿ ಜಾಹೀರಾತು ಎಂಬುದು ಒಂದು ಕಲೆ. ಜಾಹೀರಾತು ಕೈಗಾರಿಕೆ ಬೆಳವಣಿಗೆಗೆ ಮುಖ್ಯವಾಗಿ ಬೇಕಾಗಿದೆ. ಕಾರ್ಖಾನೆಗಳಲ್ಲಿ ಪದಾರ್ಥಗಳನ್ನು ಉತ್ಪನ್ನ ಮಾಡುವುದು ಎಷ್ಟು ಮುಖ್ಯವೋ ಮಾರಾಟ ಮಾಡುವುದೂ ಅಷ್ಟೇ ಮುಖ್ಯ ಅಂಶ ಎಂಬುದನ್ನು ನಾನು ಈಗ ಒತ್ತಿ ಹೇಳಬೇಕಾಗಿಲ್ಲ. ಅನೇಕ ಪಾಶ್ಚಾತ್ಯ ದೇಶಗಳಲ್ಲಿ ಇದಕ್ಕೇ ಒಂದು ಕಾಲೇಜಿದೆ. ಅಲ್ಲಿ ಓದಿದವರಿಗೆ ಡಿಗ್ರಿ ಸಹ ಕೊಡುತ್ತಾರೆ. ಅಲ್ಲಿ ಶಿಕ್ಷಣ ಪಡೆದವರಿಗೆ ಯಾವರೀತಿಯಲ್ಲಿ ಜಾಹೀರಾತು ಮಾಡಬೇಕೆಂದು ಗೊತ್ತಾಗುತ್ತದೆ. ಆದ್ದರಿಂದ ಜಾಹೀರಾತು ಕೊಡುವುದು ಕೈಗಾರಿಕೆಗಳ ಬೆಳವಣಿಗೆಗೆ ಅತಿ ಮುಖ್ಯವಾದುದೆಂಬುದನ್ನು ನಾನು ಹೇಳಿದರೆ ಅದು ತಪ್ಪಾಗಲಾರದು. ಇಷ್ಟೇ ಅಲ್ಲ, ಗಂಧದ ಎಣ್ಣೆಗೆ ನಾವು ಜಾಹೀರಾತು ಕೊಡುವುದಿಲ್ಲ; ಆ ಸಂಬಂಧದಲ್ಲಿ ಟ್ರೇಡ್ ಏಜಂಟರಿಗೆ ಅಧಿಕಾರ ಕೊಟ್ಟಿದೆ. ಆದ್ದರಿಂದ ಅವರು ಪಾಶ್ಚಾತ್ಯ ದೇಶಗಳಲ್ಲಿ ಯಾವರೀತಿ ವ್ಯವಹಾರ ನಡೆಸಬೇಕೋ ಆ ರೀತಿಯಾಗಿ ಮಾಡುತ್ತಾರೆ. ಒಂದೇ ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳಿದರೆ ಯಾರೂ ಭಿನ್ನಾಭಿಪ್ರಾಯಪಡಲಾರರು.

ಅವನ್ನೂ ಸಹ ಸರ್ಕಾರದವರು ಆಲೋಚಿಸಬೇಕಾಗುತ್ತದೆ. ಯಾವ ಒಂದು ಪೊಲಿಟಿಕಲ್ ಫಿಲಿಂಗ್‌ನಿಂದಾಗಲಿ, ಬಿಟ್ಟರ್‌ನೆಸ್ ಯಾವ ರೀತಿಯಲ್ಲಾದರೂ ಉಂಟುಮಾಡಬೇಕೆಂದಾಗಲಿ ಅಥವಾ ಪಾರ್ಷಿಯಾಲಿಟಿ ತೋರಿಸುವುದಕ್ಕಾಗಲಿ

ನಾವು ಇಂಥ ಜಾಹೀರಾತು ಮಾಡಲಿಲ್ಲ. ಆ ಪತ್ರಿಕೆಗೆ ನಾವು ಯಾವ ವಿಧದಲ್ಲೂ ಮಹತ್ವ ನೀಡಿಲ್ಲ. ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಆಮೇಲೆ ಬೇಕಾದರೆ ಆಲೋಚನೆ ಮಾಡಬಹುದು. ಒಟ್ಟಿನಲ್ಲಿ ಸರ್ಕಾರದ ಆದೇಶದ ಪ್ರಕಾರ ಮಂಜೂರಾದ ಹಣದಲ್ಲಿ ಕೇವಲ ಕೈಗಾರಿಕೆಯ ಬೆಳವಣಿಗೆ ದೃಷ್ಟಿಯಿಂದ ಜಾಹೀರಾತು ಕೊಟ್ಟಿರುವುದರಿಂದ ಇದನ್ನು ಅನೀತಿಯೆಂದು ಭಾವಿಸುವುದಕ್ಕೆ ಯಾವರೀತಿಯಲ್ಲೂ ಅವಕಾಶವಿಲ್ಲ. ಆದ್ದರಿಂದ ಆ ರೀತಿಯಾಗಿ ಭಾವಿಸಬಾರದೆಂದು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

* * *

# ಕೈಗಾರಿಕೆಗಳ ಸ್ಥಾಪನೆ ಹಾಗೂ ವಿಕೇಂದ್ರೀಕರಣ ಚರ್ಚೆ

## 13 ಏಪ್ರಿಲ್, 1954

*[ಕೈಗಾರಿಕೆಗಳ ಸ್ಥಾಪನೆ ಬರೀ ಬೆಂಗಳೂರು ಕೇಂದ್ರವಾಗದೆ ವಿಕೇಂದ್ರೀಕರಣಗೊಳ್ಳಬೇಕು. ವಿದ್ಯುತ್ ಇಲ್ಲದಕಡೆ ವಿದ್ಯುತ್, ರೈಲು ಇಲ್ಲದಕಡೆ ರೈಲು ಇತ್ಯಾದಿ ತುರ್ತು ಅಗತ್ಯ ಕೈಗೊಳ್ಳಬೇಕು. ಕೈಗಾರಿಕೆ ವಿಕೇಂದ್ರೀಕರಣದ ನಿರ್ಣಯದ ಮೇಲಿನ ಚರ್ಚೆಯಲ್ಲಿ ಶಾಸಕರಾದ ಡಿ. ದೇವರಾಜ ಅರಸು, ಶ್ರೀನಿವಾಸಯ್ಯಂಗಾರ್ಯ, ಜೆ. ಮಹಮದ್ ಇಸಾಮ್, ಡಿ. ವೆಂಕಟೇಶ್, ಭೀಮಪ್ಪ ನಾಯಕರು ಮೊದಲಾದ ಶಾಸಕರು ಚರ್ಚಿಸಿದ ನಂತರ ಕೈಗಾರಿಕಾ ಸಚಿವ ಎಚ್. ಸಿದ್ದವೀರಪ್ಪ ಉತ್ತರಿಸಿದರು.]*

**ಶ್ರೀ ಎಚ್. ಸಿದ್ದವೀರಪ್ಪ : (ಗೃಹ ಹಾಗೂ ಕೈಗಾರಿಕಾ ಸಚಿವರು) :** ಸ್ವಾಮಿ, ಈ ನಿರ್ಣಯದಲ್ಲಿ ಅಡಕವಾಗಿರುವ ಅಂಶಗಳ ವಿಚಾರದಲ್ಲಿ ಬಹಳ ಕೂಲಂಕುಷವಾಗಿ ಎರಡುಕಡೆಯ ಅಭಿಪ್ರಾಯಗಳೂ ಈ ಸಭೆಯ ಗಮನಕ್ಕೆ ಬಂದಿವೆ. ಈ ನಿರ್ಣಯವನ್ನು ಕಳುಹಿಸಿರುವ ನಮ್ಮ ಮಾನ್ಯ ಸ್ನೇಹಿತರ ಅಭಿಪ್ರಾಯವಾದರೂ ಹೀಗಿರಬಹುದೆಂದು ನಾನು ಊಹಿಸುತ್ತೇನೆ. ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆಯುತ್ತಿದೆ. ಇಷ್ಟು ಹೆಚ್ಚಾಗಿ ಈ ನಗರ ಬೆಳೆಯುವುದು ಆಡಳಿತ ದೃಷ್ಟಿಯಿಂದ, ನಗರ ನೈರ್ಮಲ್ಯದ ದೃಷ್ಟಿಯಿಂದ ಮತ್ತು ಇತರ ಅನೇಕ ದೃಷ್ಟಿಗಳಿಂದ ಸರಿಯಲ್ಲ. ವಿಕೇಂದ್ರೀಕೃತವಾಗಿರುವ ಕೈಗಾರಿಕೆಗಳನ್ನು ಇನ್ನೂ ಇದೇ ರೀತಿಯಲ್ಲಿ ಬೆಳೆಯುವುದಕ್ಕೆ ಬಿಡದೆ ಆದಷ್ಟು ವಿಕೇಂದ್ರೀಕೃತವಾಗುವಂತೆ ಮಾಡಬೇಕು ಎಂಬ ಅಭಿಪ್ರಾಯ ಈ ವಿಷಯದಲ್ಲಿ ಮಾತನಾಡಿರುವ ಎಲ್ಲಾ ಮಾನ್ಯ ಸದಸ್ಯರಿಗೂ ಇರಬಹುದೆಂದು ತಿಳಿದಿದ್ದೇನೆ. ಇದೇರೀತಿಯಾಗಿ ಇಮಾಂರವರೂ ಸಹ ಈ ನಗರದ ಬೆಳವಣಿಗೆ ವಿಚಾರದಲ್ಲಿ ಸರ್ಕಾರ ಅನೇಕ ವರ್ಷಗಳಿಂದ ಯೋಚನೆ ಮಾಡುತ್ತಿದೆ ಎಂಬ ಅಂಶವನ್ನು ಅವರ ಅನುಭವದಿಂದ ಹೊರಗೆಡವಿದ್ದಾರೆ.

ಬೆಂಗಳೂರು ನಗರದಲ್ಲಿ ಹೆಚ್ಚಿಗೆ ಜನಸಂಖ್ಯೆ ಬೆಳೆದಿರುವುದು ಈಗಾಗಲೇ ಮಾನ್ಯ ಸದಸ್ಯರಾದ ಡಿ. ವೆಂಕಟೇಶ್ ಅವರು ತಿಳಿಸಿರುವ ಹಾಗೆ ಕೇವಲ ಈ ಕಾರಖಾನೆಯಿಂದ ಮಾತ್ರವೇ ಅಲ್ಲ; ಈ ನಗರ ನಮ್ಮ ದೇಶದ ಕ್ಯಾಪಿಟಲ್ ಎಂದರೆ

ನಮ್ಮ ಸಂಸ್ಥಾನದಲ್ಲೊಂದು ಮುಖ್ಯ ಪಟ್ಟಣ. ಇಲ್ಲಿ ಅನೇಕ ಸರ್ಕಾರಿ ಕಛೇರಿಗಳಿರುವುದರಿಂದಲೂ ಈ ನಗರ ಇಷ್ಟೊಂದು ದೊಡ್ಡದಾಗಿ ಬೆಳೆಯಲು ಇದೂ ಕೂಡ ಒಂದು ಮುಖ್ಯ ಕಾರಣವಾಗಿದೆ. ಇಷ್ಟೇ ಅಲ್ಲದೆ ಇಲ್ಲಿ ದೊಡ್ಡದೊಡ್ಡ ವಿದ್ಯಾಸಂಸ್ಥೆಗಳಿವೆ, ಆಸ್ಪತ್ರೆಗಳಿವೆ. ಮೇಲಾಗಿ ಇದು ದೊಡ್ಡ ವ್ಯಾಪಾರ ಕೇಂದ್ರವಾಗಿದೆ ಎಂಬುದನ್ನು ಯಾರೂ ಮರೆಯಬಾರದು. ಇದನ್ನು ಮಾನ್ಯ ಸದಸ್ಯರು ಗಮನದಲ್ಲಿರಿಸಿಕೊಳ್ಳಬೇಕು. ನಾವು ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭಮಾಡುವ ಮುನ್ನ ಇಂಥಾ ದೊಡ್ಡ ಕಾರಖಾನೆಗಳನ್ನು ಸ್ಥಾಪಿಸುವ ಬಗ್ಗೆ ಯೋಜನಾ ಸಮಿತಿಯವರು ಏನು ಹೇಳುತ್ತಾರೆ ಎಂಬುದನ್ನು ಗಮನಹರಿಸಬೇಕಾಗಿದೆ. ಯೋಜನಾ ಸಮಿತಿಯವರು ತಮ್ಮ ವರದಿಯಲ್ಲಿ ಈ ರೀತಿ ಸೂಚನೆ ಮಾಡಿದ್ದಾರೆ:

"Industrial development in INDIA has so far been on an unplanned basis and it has been concentrated in a few select areas. Although there has been a trend towords wide dispersion of some industries like cotton textiles and cement industrial development in some parts of the country has lagged behind seriously.The excessive concentration of industries brings in train certain economic and social disadvantages and a wide diffusion of industry is desirable from this larger point of view. Further, if industrial development in the country is to proceed rapidly and in a balanced manner, increasingly greater attention will have to be paid to the development of those states and regions which have so far remained backward. under the industries (development and regulation) Act, the Government has powers to regulate locations.

The extent to which the pattern of industrial location in the country can be changed within a short period is undoubtedly limited. For any industrial Undertaking to operate profitably, it must have easy access to raw materials to labour, to power and to markets. The tendency for industries to concentrate around certain areas where industrial development has already taken place is explained by the availability in those areas of a large number of **"external"** economies on account of the prior development

of ancillary services and facilities, like banking, transport and communications. It is difficult.

Therefore, in the initial stages to induce private industry to choose a new location where such facilities are inadequate. A considerable portion of the industrial development envisaged in this five-year period is by way of expansions of existing industrial units. The question of the location of the new iron and steel plant is at present under consideration.

The generation of the electrical power by the major multipurpose projects envisaged under the Plan will open out large possibilites of industrial development in Punjab, Bihar and Orissa. There are large potentialities of industrial development in several other states, and it is desirable in order to secure a balanced regional development in the country, to give increasing preference to such areas in the matter of location of new industrial undertakings."

ಈ ರೀತಿಯ ಅಭಿಪ್ರಾಯಗಳನ್ನು ಅವರು ವ್ಯಕ್ತಪಡಿಸಿರುವುದರಿಂದ ಈ ಕಾರಖಾನೆಗಳನ್ನು ಸ್ಥಾಪಿಸಿರತಕ್ಕ ವಿಚಾರದಲ್ಲಿ ಸಂಬಂಧಪಟ್ಟ ಎಲ್ಲಾ ಅಂಶಗಳೂ ಕೇಂದ್ರ ಸರ್ಕಾರದೊಂದಿಗೆ ಚರ್ಚೆಯಾಗಿ ಅವುಗಳೆಲ್ಲಾ ಈಗ ತೀರ್ಮಾನವಾಗಿರುತ್ತವೆ.

ನಮ್ಮ ದೇಶದ ಕೈಗಾರಿಕೆಗಳು ಚೆನ್ನಾಗಿ ಬೆಳೆದು ಅಭಿವೃದ್ಧಿಗೆ ಬರಬೇಕಾದರೆ ನಾವು ಮುಖ್ಯವಾಗಿ ಗಮನದಲ್ಲಿಡಬೇಕಾದ ಅಂಶಗಳು ಎರಡು. ಅವುಗಳಲ್ಲಿ ಬಹಳ ಮಹತ್ತರವಾದ ಮೊದಲನೆಯ ಅಂಶವೆಂದರೆ ಆಯಾ ಕೈಗಾರಿಕೆಗಳಿಗೆ ಅತ್ಯಗತ್ಯವಾದಂಥ ಹವಾಮಾನ ಮತ್ತು ಅವುಗಳಿಗೆ ಬೇಕಾಗಿರುವ ಕಚ್ಚಾವಾಲುಗಳು ಹೆಚ್ಚಿಗೆ ದೊರೆಯುವಂಥ ನೈಸರ್ಗಿಕ ಸಂಪತ್ತು ಇರುವಕಡೆಯೇ ಈ ಕೈಗಾರಿಕೆಗಳನ್ನು ಬೆಳೆಸಿಕೊಂಡು ಬರತಕ್ಕದ್ದು ಅವಶ್ಯಕ. ಎರಡನೆಯದಾಗಿ ತಯಾರಾದ ಸಾಮಾನುಗಳು ಹೊರಗಡೆಗೆ ಸಾಗಿ ಹೋಗಲು ಇರಬೇಕಾದಂಥ ಅನುಕೂಲತೆ. ಇಂಥ ಅನುಕೂಲಗಳಿರುವ ಸ್ಥಳಗಳಲ್ಲಿಯೇ ಇಂಥಹ ಕಾರಖಾನೆಗಳನ್ನು ಸ್ಥಾಪಿಸಬೇಕೆಂದು ಪಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟ ನಿಯಮದಲ್ಲಿ ಅಳವಡಿಸಲಾಗಿದೆ. ಇದು ಸರಿಯಾದ ಕ್ರಮವೆಂದು ನಾನು ಭಾವಿಸಿದ್ದೇನೆ. ಈ ಯೋಜನಾ ಸಮಿತಿಯರು ಹೇಳಿರುವ ಹಾಗೆಯೇ ಈಗಿನ ಹತ್ತು ವರ್ಷಗಳ ಅವಧಿಯಲ್ಲಿ ನಮ್ಮ ಸರ್ಕಾರ ಯಾವ ಒಂದು ಹೊಸ ಕಾರಖಾನೆಯನ್ನೂ ಹಾಗೆ ಬೆಳೆಸುವುದಕ್ಕೆ ಪ್ರೋತ್ಸಾಹ

ಕೊಡುತ್ತಿಲ್ಲ. ಆದರೆ ಮುಖ್ಯವಾಗಿ ಇಲ್ಲಿಯವರೆಗೂ ಬೆಳೆದುಕೊಂಡು ಬಂದಿರುವ ಕೈಗಾರಿಕೆಗಳೆಲ್ಲವೂ ಕೇವಲ ಆ ಕೇಂದ್ರ ಸರ್ಕಾರದವರು ಹಾಕಿರುವಂಥ ಬಂಡವಾಳದ ಮೇಲೆ ಸ್ಥಾಪಿಸಿದವುಗಳಾಗಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಹಿಂದೂಸ್ಥಾನ್ ಏರ್‌ಕ್ರಾಫ್ಟ್, ಇಂಡಿಯನ್ ಟೆಲಿಫೋನ್ ಕಾರ್ಖಾನೆ, ಡಿಫೆನ್ಸ್ ಇಲಾಖೆಗೆ ಸೇರಿದ ಎಲೆಕ್ಟ್ರಾನಿಕ್ ಕಾರ್ಖಾನೆ – ಬಹಳ ಮುಖ್ಯವಾದವುಗಳು. ಇವುಗಳ ಜೊತೆಗೆ ಈಗ ಹೊಸದಾಗಿ ಒಂದು ಟೂಲ್ಸ್ ಫ್ಯಾಕ್ಟರಿ ಬೇರೆ ಹಾಕುತ್ತಿದ್ದಾರೆ.

ಒಂದು ಅಂಶವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಈ ಹಿಂದೆಯೇ ಈ ಅಂಶವನ್ನು ಸಭೆಯ ಗಮನಕ್ಕೆ ತಂದಿದ್ದೇನೆಂದು ಕಾಣುತ್ತದೆ. ತಮಗೆಲ್ಲಾ ಗೊತ್ತಿರುವ ಹಾಗೆ ಕೋಲಾರದ ಚಿನ್ನದ ಗಣಿಗಳ ಪೈಕಿ ಒಂದು ಗಣಿಯನ್ನು ಅಲ್ಲಿ ಸಾಕಷ್ಟು ಚಿನ್ನ ಸಿಕ್ಕುತ್ತಿಲ್ಲವೆಂಬ ಕಾರಣದ ಮೇಲೆ ಅದನ್ನು ಮುಚ್ಚಬೇಕು ಎಂದು ತೀರ್ಮಾನವಾಗಿತ್ತು. ಹಾಗೇ ಅದನ್ನು ಮುಚ್ಚಿಯೂ ಹಾಕಲಾಯಿತು. ಆಮೇಲೆ ರಕ್ಷಣಾ ಇಲಾಖೆಯವರು ಎಲೆಕ್ಟ್ರಾನಿಕ್ ಕಾರ್ಖಾನೆಯನ್ನು ಸ್ಥಾಪಿಸುತ್ತೇವೆಂದು ತಿಳಿಸಿದಾಗಲೂ ನಾವು ಕೇಂದ್ರ ಸರ್ಕಾರಕ್ಕೆ ತಿಳಿಸಿದೆವು – ಅಲ್ಲಿ ಕಾರ್ಖಾನೆ ಸ್ಥಾಪನೆಗೆ ಬೇಕಾದ ಸೌಕರ್ಯಗಳೆಲ್ಲವೂ ಇವೆ. ತರಬೇತು ಪಡೆದ ಕೆಲಸಗಾರರೂ ಇದ್ದಾರೆ. ಈ ಫ್ಯಾಕ್ಟರಿಯನ್ನು ಅಲ್ಲಿ ಸ್ಥಾಪಿಸಬಹುದೆಂದು ಅವರಿಗೆ ಹೇಳಿದೆವು. ಅದಕ್ಕೆ ಅವರು, ಅನೇಕ ಕಾರಣಗಳಿಂದ ಬೆಂಗಳೂರು ಅನುಕೂಲಕರವಾಗಿದೆ. ಮುಖ್ಯವಾಗಿ ನಮ್ಮ ಸಂಶೋಧನಾ ವಿಭಾಗಕ್ಕೆ ಬೇಕಾದ ಟಾಟಾ ಇನ್‌ಸ್ಟಿಟ್ಯೂಟ್‌ನ ಸಹಾಯ ಸಿಕ್ಕುತ್ತದೆ, ಆದ್ದರಿಂದ ಇದು ಬೆಂಗಳೂರಿನಲ್ಲಿ ಇರಬೇಕಾದ್ದು ಅವಶ್ಯಕ. ನಮಗೆ ಈ ಅನುಕೂಲತೆ ಒದಗಿಸಿ ಕೊಡುವ ಇಷ್ಟವಿಲ್ಲದಿದ್ದರೆ ಬೇರೆಕಡೆಗೆ ಹೋಗುತ್ತೇವೆ ಎಂದು ತಮ್ಮ ವಾದವನ್ನು ನಮ್ಮ ಮುಂದಿಟ್ಟರು. ಈ ಕಾರಣದಿಂದ ಇದು ಇಲ್ಲೇ ಬರಬೇಕು, ಇದರಿಂದ ನಮಗೆ ಅನುಕೂಲವಾಗುತ್ತದೆಂದು ರಾಜ್ಯ ಸರ್ಕಾರದವರು ಮನಗಂಡು ಇಲ್ಲಿಯೇ ಸ್ಥಾಪಿಸಲು ತಮ್ಮ ಅಡ್ಡಿಯೇನಿಲ್ಲವೆಂದು ಅವರಿಗೆ ತಿಳಿಸಿದರು. ಅವರಿಗೆ ಇಷ್ಟವಾದ ಜಾಗದಲ್ಲೇ ಫ್ಯಾಕ್ಟರಿಯನ್ನೂ ಹಾಕಿದರು.

ಇನ್ನೊಂದು ವಿಷಯ ಹೇಳುವುದಾರೆ; ನಿಜ, ಬೆಂಗಳೂರು ನಗರದಲ್ಲಿಯೇ ಕೆಲವು ಬಂಡವಾಳಗಾರರು, ಕೈಗಾರಿಕೆಯ ನಿಪುಣರು ಹೊಸಹೊಸ ಕೈಗಾರಿಕೆಗಳನ್ನು ಹಾಕಿದ್ದಾರೆ. ಆದರೆ ಇವೆಲ್ಲವೂ ಪ್ರೈವೇಟ್ ಸೆಕ್ಟರ್‌ನಲ್ಲಿ, ಖಾಸಗಿ ಜನರು ಹಾಕಿರುವಂಥವುಗಳು. ಹೀಗೆ ಖಾಸಗೀ ಜನರು ಹಾಕಿರುವುದನ್ನು ಸರ್ಕಾರವಾದರೂ ನೀವು ಇಲ್ಲಿ ಕೈಗಾರಿಕೆಗಳನ್ನು ಹಾಕಬೇಡಿ ಎಂದು ಹೇಳುವ ವಾದವನ್ನು ಯಾವ ಕಾನೂನು ಪ್ರಕಾರ ಹೇಳಬೇಕೋ, ಯಾವ ದೃಷ್ಟಿಯಿಂದ ಹೇಳಬೇಕೋ ಎಂಬುದನ್ನು ನಾವಂತೂ ಇನ್ನು ಯೋಚಿಸಬೇಕಾಗಿದೆ. ಅವರು ಪ್ರೈವೇಟ್ ಸೆಕ್ಟರ್‌ನಲ್ಲಿದ್ದು, ಸಾಮಾನ್ಯವಾಗಿ ತಮ್ಮ ಕೈಗಾರಿಕೆಯನ್ನು ಖಾಸಗೀ ಬಂಡವಾಳದಿಂದ ನಡೆಸುತ್ತಿರಬೇಕಾದರೆ ಅವರನ್ನು ಬೇಡವೆಂದು ಯಾವರೀತಿ ಹೇಳಬೇಕೆಂಬುದೂ ಕೂಡ ನಾವು ಯೋಚನೆ ಮಾಡಬೇಕಾದ್ದೇ.

ಇನ್ನು ಮಾನ್ಯ ಸ್ನೇಹಿತರು, ಮಾನ್ಯ ಸದಸ್ಯರಾದ ಶ್ರೀಮಾನ್ ನಾಗರಾಜಮೂರ್ತಿಯವರು ಇನ್ನೊಂದು ಕಾರಣವನ್ನು ಕೊಟ್ಟರು. ಸ್ಲಂ ಪ್ರದೇಶಗಳು ಹೆಚ್ಚಲು ಅದೂ ಕಾರಣ ಎಂದು ಹೇಳಿದರು. ಬೆಂಗಳೂರಿನ Geographical Boundary ಜಾಸ್ತಿಯಾಗುತ್ತಿದೆ. ಕೆಂಪೇಗೌಡರು ಹಾಕಿದ್ದ ನಾಲ್ಕು ದಿಕ್ಕಿನ ಕಲ್ಲಿನ ಮಂಟಪದಾಚೆ ಹೋಗಕೂಡದೆಂದು ಹೇಳಿದ್ದರು. ಬೆಂಗಳೂರಿನ ವಿಷಯವಲ್ಲದೆ ಮೈಸೂರು ರಾಜ್ಯದ ಯಾವ ಗ್ರಾಮವನ್ನು ನೋಡಲಿ ಸಾಮಾನ್ಯವಾಗಿ ಬಹುಭಾಗದ ಹಳ್ಳಿಗಳು ಮೊದಲಿದ್ದ ಊರಿನ ಎಲ್ಲೆಕಟ್ಟಿನಾಚೆ ಹೋಗಿರುವುದನ್ನು ಕಾಣಬಹುದು. ಎಲ್ಲೆಲ್ಲೂ ಊರ ಹೊರಗಡೆ ಹೊಸಹೊಸ ಮನೆಗಳನ್ನು ಕಟ್ಟಿರುವುದನ್ನು ಕಾಣುತ್ತೇವೆ. ಇದಕ್ಕೆ ಕಾರಣವೇನೆಂದರೆ, ಈಗ ಕಳೆದ 50 ವರ್ಷಗಳಿಂದ ಪ್ರತಿ 10 ವರ್ಷಗಳಲ್ಲೂ ಆಗತಕ್ಕ ಜನಗಣತಿಯನ್ನು ನೋಡಿದರೆ ನಮ್ಮ ದೇಶದ ಜನ ದೇಶದ ಜನಸಂಖ್ಯೆ ಭೀತಿ ಬರತಕ್ಕರೀತಿಯಲ್ಲಿ ಹೆಚ್ಚಾಗುತ್ತಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ವೆಂಕಟೇಶ್ ಅವರು ಹೇಳಿದ ಹಾಗೆ ಇದಕ್ಕೆ ಒಂದು ಕಾನೂನುಮಾಡಿ ತಡೆಗಟ್ಟುವ ಉಪಾಯ ಮಾಡದೇ ಹೋದರೆ ನಮ್ಮ ದೇಶದ ಪ್ರತಿಯೊಂದು ಊರೂ ಬೆಂಗಳೂರು ನಗರದ ಹಾಗೆ ಆಗುತ್ತದೆಂದು ಹೇಳಿದ್ದಾರೆ.

ಇನ್ನೊಂದು ಭಯವನ್ನು ಮಾನ್ಯ ಮಿತ್ರರು ವ್ಯಕ್ತಪಡಿಸಿದರು. ಈಗ ಪ್ರಪಂಚದಲ್ಲಿ ಯುದ್ಧದ ಅಪಾಯವಿದೆ. ಏನಾದರೂ ಯುದ್ಧ ತಲೆದೋರಿದರೆ ನಮ್ಮ ಫ್ಯಾಕ್ಟರಿಗಳೆಲ್ಲಾ ಒಂದೇ ಊರಿನಲ್ಲಿದ್ದರೆ ಜನರಿಗೆ ಬಹಳ ಅಪಾಯ ಎಂಬ ಅಂಶವನ್ನೂ ಅವರು ತಿಳಿಸಿದರು. ಅವರಿಗೆ ಒಂದು ವಿಷಯವನ್ನು ನಾನು ಹೇಳುವುದಾದರೆ, ಮಾನವನನ್ನು ಪರಮಾತ್ಮನು ಸೃಷ್ಟಿಸಿದಂದಿನಿಂದ ಲೆಕ್ಕಹಾಕಿ ನೋಡಿದ್ದರಲ್ಲಿ ಇನ್ನೂ 4 ಲಕ್ಷದ 26 ಸಾವಿರದ 926 ವರ್ಷಗಳ ಆಯಸ್ಸಿದೆಯೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ನಾವೆಲ್ಲರೂ ಮುಳುಗಿ ಹೋಗುತ್ತೇವೆ, ನಮ್ಮ ನಗರಗಳೆಲ್ಲಾ ಹಾಳಾಗಿ ಹೋಗುತ್ತವೆ ಎಂಬ ಭೀತಿಯನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳಬೇಕಾಗಿಲ್ಲ. ಆಟಂಬಾಂಬಲ್ಲ, ಹೈಡ್ರೋಜನ್ ಬಾಂಬಲ್ಲ ಕೋಬಾಲ್ಟ್ ಬಾಂಬು ಹಾಕಿದರೂ, ಮನುಷ್ಯ ಜನಾಂಗ ಇದ್ದೇ ಇರುತ್ತದೆಂಬ ಅಂಶವನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ. ಇದು ಲೆಕ್ಕಾಚಾರದ ಮೇಲೆ ಹೇಳಿರತಕ್ಕದ್ದೆಂದು ವಿಜ್ಞಾನದ ಪುಸ್ತಕದಿಂದ ತೆಗೆದು ಹೇಳುತ್ತಿದ್ದೇನೆ.

ಮಾನ್ಯ ಸ್ನೇಹಿತರು ವ್ಯವಸಾಯಕ್ಕೆ ಕಷ್ಟ ಬರುತ್ತದೆ ಎಂದು ಒಂದು ವಾದವನ್ನು ನಮ್ಮ ಮುಂದಿಟ್ಟರು.

ನಮ್ಮ ರಾಜ್ಯದ ಜನಗಳಿಗೆ ದೈಹಿಕ ಶ್ರಮದ ಕೆಲಸಗಳೆಂದರೆ ಉತ್ಸಾಹ ಕಡಿಮೆ. ಇಲ್ಲಿ ದೈಹಿಕ ಶ್ರಮದ ಕೆಲಸಗಳಲ್ಲೆಲ್ಲಾ ಸಾಮಾನ್ಯವಾಗಿ ಬೇರೆಕಡೆಯಿಂದ ಬಂದವರು ತೊಡಗಿ ಜೀವನ ನಿರ್ವಹಿಸುತ್ತಿರುವುದನ್ನು ನಾವು ಕಾಣುತ್ತೇವೆ. ಎಲ್ಲೆಲ್ಲಿ ವ್ಯವಸಾಯದ ಕೂಲಿಯೇ ಇರಲಿ, ಕೈಗಾರಿಕೆಯ ಕೂಲಿಯೇ ಇರಲಿ, ನಮ್ಮ ರಾಜ್ಯದ

ಬಾಂಧವರು ಅದರಲ್ಲಿ ತೊಡಗದೆ, ದೈಹಿಕ ಶ್ರಮದಲ್ಲಿ ಭಾಗವಹಿಸದೆ ಆಲಸ್ಯ ಮನೋಭಾವ ಏಕೆ ತೋರಿಸುತ್ತಿದ್ದಾರೆಂಬುದೇ ನನಗೆ ಗೊತ್ತಾಗುವುದಿಲ್ಲ. ಇದನ್ನು ಹೇಗೆ ಪರಿಹರಿಸಬೇಕೆಂದು ಯೋಚಿಸುವ ಕಾಲ ಬಂದಿದೆ. ಈ ಹೊತ್ತಿನ ದಿವಸ ಯಾವ ಮೂಲೆಯ ಹಳ್ಳಿಯನ್ನೇ ನೋಡಲಿ, ಇಲ್ಲಿ ನೆರೆಹೊರೆಯ ಸಂಸ್ಥಾನದ ಬಾಂಧವರು ಬಂದು ಕೆಲಸ ಮಾಡುತ್ತಿರುವುದನ್ನು ನೋಡಬಹುದು. ನಮ್ಮ ರಾಜ್ಯದವರು ಬೇರೆಡೆ ಇದ್ದರೂ ಕೆಲಸ ಮಾಡುವುದಿಲ್ಲ. ಇದಕ್ಕೇನು ಕಾರಣವೋ ನೋಡಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದ ವಿಷಯಕ್ಕೆ ಉತ್ತರವಾಗಿ ಇಷ್ಟನ್ನು ಹೇಳಿದರೆ ಸಾಕೆಂದು ಕಾಣುತ್ತದೆ. ಆಮೇಲೆ ನಗರಗಳ ಕಡೆಗೆ ಗಮನ ಹೆಚ್ಚಾಗಿದೆ ಎಂಬ ವಾದವನ್ನು ಮಾನ್ಯ ಸ್ನೇಹಿತರು ಹೇಳಿದರು. ಈ ವಿಚಾರದಲ್ಲಿ ಒಂದೇ ಮಾತಿನಲ್ಲಿ ಹೇಳುವುದಾದರೆ, ಇದು ವಾಸ್ತವಾಂಶಕ್ಕೆ ಸರಿಯಾಗಿಲ್ಲ. ಸರ್ಕಾರಗಳ ಗಮನ ಗ್ರಾಮಾಂತರಗಳ ಕಡೆಗೆ ಇದ್ದೇ ಇದೆ.

ಈ ಹೊತ್ತು ಬಜೆಟ್ಟಿನಲ್ಲಿ ಗ್ರಾಮಾಂತರಗಳ ಬೆಳವಣಿಗೆಗೆ ಪ್ರೋತ್ಸಾಹ ಕೊಡಲು ಎಷ್ಟೆಷ್ಟು ಹಣವನ್ನೊದಗಿಸಿದ್ದಾರೆಂಬುದನ್ನು ನೋಡಿದರೆ ಈ ವಾದದಲ್ಲಿ ತಿರುಳಿಲ್ಲ ಎಂಬುದು ಗೊತ್ತಾಗುತ್ತದೆ. ಕೇವಲ ವ್ಯವಸಾಯದಿಂದಲೇ ಗ್ರಾಮಾಂತರ ಪ್ರದೇಶಗಳು ನಿಲ್ಲಲಾರವು, ಅಭಿವೃದ್ಧಿಯಾಗಲಾರವು ಎಂದು ವಿಶ್ವೇಶ್ವರಯ್ಯನವರೂ ಭಾಷಿಸಿ, ಗೃಹಕೈಗಾರಿಕೆ ಯೋಜನೆ ಇಡೀ ಸಂಸ್ಥಾನಕ್ಕೆ ಅನ್ವಯಿಸಬೇಕೆಂದು ಅಪೇಕ್ಷಿಸಿದರು. ಈ ಹಿನ್ನೆಲೆಯಲ್ಲಿ ಬಜೆಟ್‌ನಲ್ಲಿ ಅದಕ್ಕಾಗಿ ಸರ್ಕಾರ ಹಣ ಮುಡುಪಾಗಿಟ್ಟು ಗ್ರಾಮಗಳ ಅಭಿವೃದ್ಧಿಯಾಗಬೇಕೆಂದು ಅಪೇಕ್ಷಿಸುತ್ತಿರುವುದು ಸಹಜವಾಗಿದೆ. ಜತೆಗೆ ಕೈಗಾರಿಕೆಗಳೂ ಬೆಳೆಯಬೇಕೆಂಬ ಕಾತುರತೆ ಸರ್ಕಾರಕ್ಕಿರುವುದನ್ನು ತೋರಿಸುತ್ತದೆ.

ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಯ್ಯಂಗಾರ‍್ಯರು ಹೊಸ ಕೈಗಾರಿಕೆಗಳನ್ನು ಆರಂಭ ಮಾಡುವುದಕ್ಕೆ ಯಾರಾದರೂ ಬಂದಾಗ ಇಂಥಾಕಡೆಯೇ ಸ್ಥಾಪಿಸಬೇಕೆಂದು ಸರ್ಕಾರದವರು ಹೇಳುವುದಕ್ಕೆ ಸಾಧ್ಯವಿಲ್ಲವೆ? ಎಂದು ಕೇಳಿದರು. ಕಾನೂನು ದೃಷ್ಟಿಯಿಂದ ಸರ್ಕಾರಕ್ಕೆ ಈ ಅಧಿಕಾರವಿದೆ. ಉದಾಹರಣೆಗೆ Raw Film Industry ಗೆ ಸಂಬಂಧಪಟ್ಟ ಕಂಪನಿಯವರು ಬಂದಾಗ, ಅವರಿಗೆ ನಮ್ಮ ಸಂಸ್ಥಾನದಲ್ಲಿ ಆ ಕೈಗಾರಿಕೆ ಸ್ಥಾಪನೆ ಮಾಡಬೇಕಾದರೆ ಇರುವ ಅನುಕೂಲವಾದ ಜಾಗ ಕನ್ನಂಬಾಡಿ ಕಟ್ಟೆಯ ಹತ್ತಿರ ಎನ್ನುವುದನ್ನು ತೋರಿಸಿದ್ದೇವೆ. ಇದೇರೀತಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಬಂದಾಗ ಮಲೆನಾಡು, ಅದರಲ್ಲು ಕಚ್ಚಾಮಾಲು ಇರುವ ಶಿವಮೊಗ್ಗ ಜಿಲ್ಲೆಯಲ್ಲಿ ಅದನ್ನು ಸ್ಥಾಪಿಸಬೇಕೆಂಬ ದೃಷ್ಟಿಯಿಂದ ಪ್ರಯತ್ನ ಮಾಡಿದೆವು. ಈ ಕೈಗಾರಿಕೆ ಅಲ್ಲಿ ಸ್ಥಾಪನೆಯಾಗುವ ಸನ್ನಿವೇಶ ಬಂದಿದೆ.

ಇನ್ನು ಮನೆ ಮನೆಯಲ್ಲಿಯೂ ಒಂದು ಕೈಗಾರಿಕೆಯನ್ನು ಹಾಕಬೇಕೆಂಬ ವಾದವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಸರ್ಕಾರದ ಅಭಿಪ್ರಾಯದಲ್ಲಿ ಯಾರು ಯಾವ ಪ್ರದೇಶದಲ್ಲಿ ಯಾವ ಕೈಗಾರಿಕೆಯನ್ನಾದರೂ ಸಹ ಸಾರ್ವಜನಿಕ

ಹಿತದೃಷ್ಟಿಯಿಂದ ಸ್ಥಾಪನೆ ಮಾಡುತ್ತೇವೆ ಎಂದು ಮುಂದೆ ಬಂದರೆ ಅದಕ್ಕೆ ಸಹಾಯಮಾಡಬೇಕಾದುದು ಸರ್ಕಾರದ ಆದ್ಯಕರ್ತವ್ಯ. ಸರ್ಕಾರದವರೇ ಪೂರ್ಣ ಬಂಡವಾಳ ಹಾಕಿಕೊಂಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಈಗ ಸರ್ಕಾರಕ್ಕೆ ಈರೀತಿ ಅವಕಾಶವಿಲ್ಲ. ಹಾಗೆ ಮಾಡಬೇಕಾದ ಅಗತ್ಯವಿಲ್ಲ. ಆದುದರಿಂದ ಈ ವಿಚಾರದಲ್ಲಿ ಪ್ರೈವೇಟ್ ಸೆಕ್ಟರ್ ಏರ್ಪಟ್ಟು ಖಾಸಗೀ ಬಂಡವಾಳ ಹಾಕಿಕೊಂಡು ಕೈಗಾರಿಕೆಯ ಸ್ಥಾಪನೆಗೆ ಪ್ರಯತ್ನಪಟ್ಟರೆ ಪಂಚವಾರ್ಷಿಕ ಯೋಜನೆಯ ಪ್ರಕಾರ ಸರ್ಕಾರ ಸಹಾಯಮಾಡಲು ಸಿದ್ಧವಿದೆ.

ಮಾನ್ಯ ಸದಸ್ಯರಾದ ಶ್ರೀ ಬೋರಣ್ಣಗೌಡರು ಕೈಗಾರಿಕೆಗಳ ಅಭಿವೃದ್ಧಿ ವಿಚಾರದಲ್ಲಿ ಕೆಲವು ಸಲಹೆಗಳನ್ನು ಕೊಟ್ಟರು. ನಮ್ಮ ದೇಶದಲ್ಲಿ ಕುಶಲ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂಬ ಅವರ ವಾದವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ಭೀಮಪ್ಪ ನಾಯಕರು ಸಂಸ್ಥಾನದ ಕೈಗಾರಿಕಾಭಿವೃದ್ಧಿಯ ವಿಚಾರದಲ್ಲಿ ಸರ್ಕಾರದ ವಿಚಾರವಾದರೂ, Natural facilities ಎಲ್ಲೆವೆಯೋ ಅಲ್ಲಿ ಅವುಗಳ ಸ್ಥಾಪನೆಗೆ ಉತ್ತೇಜನ ಕೊಡಬೇಕೆಂಬುದು, ಈಗಾಗಲೇ ನಮ್ಮ ಸಂಸ್ಥಾನದಲ್ಲಿ – ಭದ್ರಾವತಿ, ಹಾಸನ, ಶಿವಮೊಗ್ಗ, ಕನಕಪುರ, ಟಿ. ನರಸೀಪುರ, ಕೋಲಾರ – ಈ ಪ್ರದೇಶಗಳಲ್ಲಿ ಕೈಗಾರಿಕಾ ಪ್ರಗತಿ ಸಾಕಷ್ಟು ಆಗುತ್ತಿದೆ. ಈ ಕೈಗಾರಿಕೆಯ ಪ್ರಗತಿಯ ವಿಚಾರದಲ್ಲಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಸರ್ಕಾರಕ್ಕೂ ಮತ್ತು ಮಾನ್ಯ ಸದಸ್ಯರಿಗೂ ಹೆಚ್ಚಿನ ಭಿನ್ನಾಭಿಪ್ರಾಯ ಬರಲಾರದು.

ಮಾನ್ಯ ಸದಸ್ಯರಾದ ಶ್ರೀಮತಿ ಸುಬ್ಬಮ್ಮನವರು ಕೈಗಾರಿಕೆಗಳೆಲ್ಲಾ ಬೆಂಗಳೂರಿನಲ್ಲೇ ಸ್ಥಾಪನೆಯಾಗಿ ಹಳ್ಳಿಗಳೆಲ್ಲಾ ಹಾಳಾಗಿಹೋಗಿವೆ ಎಂಬ ವಾದವನ್ನು ಸಭೆಯ ಮುಂದಿಟ್ಟರು. ಗ್ರಾಮಾಂತರದಿಂದ ಪಟ್ಟಣಕ್ಕೆ ಜನರು ವಲಸೆ ಬರಲು ಉತ್ತೇಜನ ಕೊಡಬೇಕೆಂಬ ಯಾವ ಉದ್ದೇಶವೂ ಸರ್ಕಾರಕ್ಕೆ ಇಲ್ಲ. ಆದರೆ ಅನೇಕರಿಗೆ ಅನೇಕ ಕೈಗಾರಿಕೆಗಳಿಂದ ಬೆಂಗಳೂರು ನಗರ ಮನರಂಜಕವಾಗಿರುವುದರಿಂದ ಯಾವ ಕೈಗಾರಿಕೆ ಸ್ಥಾಪನೆ ಮಾಡಬೇಕಾದರೂ ಈ ನಗರದ ಕಡೆಗೆ ಜನರಿಗೆ ಮೊದಲು ಗಮನ ಹೋಗುತ್ತದೆ. ಇದು ಸ್ವಾಭಾವಿಕವಾದುದೇ ಆಗಿದೆ.

ಶ್ರೀ ಡಿ. ದೇವರಾಜ ಅರಸರಿಗೆ ಗೊತ್ತಿರುವ ಹಾಗೆ ಹುಣಸೂರು ತಾಲ್ಲೂಕಿನಲ್ಲಿ ಕೈಗಾರಿಕಾ ಪ್ರಮುಖರೊಬ್ಬರಿಗೆ ಕೈಗಾರಕೆ ಸ್ಥಾಪನೆಗಾಗಿ ಸುಮಾರು 18 ಸಾವಿರ ಎಕರೆಗಳಷ್ಟು ಜಮೀನು ಕೊಟ್ಟಿದ್ದೂ, ಅದು ಅಧೋಗತಿಯಲ್ಲಿಯೇ ಇರುವುದು ಕಂಡುಬಂದಿದೆ. ಆದುದರಿಂದ ಯಾವ ಒಂದು ಕೈಗಾರಿಕೆಯೇ ಆಗಲಿ ಅದು ತಲೆ ಎತ್ತಬೇಕಾದರೆ ಅದಕ್ಕೆ Natural facilities ಎಲ್ಲಿ ದೊರೆಯುತ್ತದೆಯೋ ಅಲ್ಲಿ ಅವರ ಸ್ಥಾಪನೆಗೆ ಅವಕಾಶ ಕೊಡಬೇಕಾದುದು ಯುಕ್ತವಾದುದು.

ಮಾನ್ಯ ಶ್ರೀ ಇಮಾಂ ಸಾಹೇಬರವರಿಗೆ ಗೊತ್ತಿರುವಂತೆ ಹರಿಹರದಲ್ಲಿ ಕೈಗಾರಿಕಾ ಪ್ರದೇಶಮಾಡಿ, ಕಾಲೋನಿ ಮಾಡಿ, 300 ಎಕರೆ ಪ್ರದೇಶವನ್ನು ಕೈಗಾರಿಕೆ ಸ್ಥಾಪನೆಗೆ ತೆಗೆದು ಪ್ರತ್ಯೇಕವಾಗಿಟ್ಟರೂ, ಇದುವರೆವಿಗೂ ಅಲ್ಲಿ ಒಂದು ಕೈಗಾರಿಕೆಯೂ ಊರ್ಜಿತಸ್ಥಿತಿಗೆ ಬಂದಿಲ್ಲ. ಹರಿಹರದಲ್ಲಿ ಯಾರಾದರೂ ಕೈಗಾರಿಕೆ ಸ್ಥಾಪನೆ ಮಾಡಲು ಮುಂದೆ ಬಂದರೆ ಸರ್ಕಾರದವರು ಅವರಿಗೆ ಆದಷ್ಟು ಮಟ್ಟಿಗೆ ಸಹಾಯ, ಸಹಕಾರ ನೀಡುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಇಮಾಂರವರು ಪಾಶ್ಚಿಮಾತ್ಯ ದೇಶಗಳಲ್ಲಿ localise ಆಗಿರತಕ್ಕ ವಿಷಯವನ್ನು ಹೇಳಿದರು. ಎಲ್ಲೆಲ್ಲಿ ಯಾವಯಾವ ಕೈಗಾರಿಕೆಗಳು ಇವೆ ಎಂಬ ಅಂಶವನ್ನು ಈ ಸಭೆಯ ಮುಂದೆ ಇಟ್ಟರು. ಅವರಿಗೂ ಗೊತ್ತಿದೆ ಪಾಶ್ಚಿಮಾತ್ಯ ದೇಶಗಳಲ್ಲಿ ಕೈಗಾರಿಕೆ ಬೆಳೆಯಬೇಕಾದರೆ ಮುಖ್ಯವಾಗಿ ಸಾರಿಗೆ ಅನುಕೂಲತೆ ಎಲ್ಲೆಲ್ಲಿ ಇದೆಯೋ ಆ ಭಾಗದಲ್ಲಿ ಮಟ್ಟಿಗೆ ಕೈಗಾರಿಕೆ ಬೆಳೆದಿದೆ. ಅದನ್ನು ಜರ್ಮನಿಯಲ್ಲಿ ನೋಡಬಹುದು. ರೈನ್ ನದಿಯ ಎರಡು ದಂಡೆಯ ಪಕ್ಕದಲ್ಲೂ ರಸ್ತೆ ಮತ್ತು ರೈಲು ಮಾರ್ಗ 106 ಮೈಲು ಹೋಗುತ್ತದೆ. ಅಲ್ಲೇ ಕೈಗಾರಿಕೆಗಳು concentrate ಆಗಿರುವುದನ್ನು ತಾವೆಲ್ಲಾ ಓದಿದ್ದೀರಿ. Natural facilities, Raw Materials, transport fecilities – ಇವೆಲ್ಲಾ ಎಲ್ಲಿವೇ ಅಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗುವುದು ಸಹಜ.

ಈ ಎಲ್ಲಾ ದೃಷ್ಟಿಯಿಂದ ನೋಡುವುದಾದರೆ ಬೆಂಗಳೂರು ನಗರದಲ್ಲಿ ಸರ್ಕಾರದ ವಿಶೇಷ ಪ್ರೋತ್ಸಾಹದಿಂದೇನೂ ಈ ಕೈಗಾರಿಕೆಗಳು ಬೆಳೆದಿಲ್ಲ. ಆದರೆ ಅವಕ್ಕೆ ಬೇಕಾದ Natural facilities ಇರುವುದರ ದೆಸೆಯಿಂದ ಬೆಳೆದಿವೆ ಎಂದು ಹೇಳಬಹುದಾಗಿದೆ.

ಬೆಂಗಳೂರು ನಗರದ ಜನಸಂಖ್ಯೆ ಮಿತಿಮೀರಿ ಹೋಗಬಾರದು ಎಂಬ ವಾದವನ್ನು ಕೆಲವರು ಎತ್ತಿದರು. ಅದನ್ನು ಒಪ್ಪಬಹುದು. ಏಕೆಂದರೆ ಒಂದು ನಗರದಲ್ಲಿ Optimum size of population ಇದ್ದರೆ, Health, Sanitation, Law and order – ಇವನ್ನೆಲ್ಲಾ ಸರಿಯಾಗಿ maintain ಮಾಡುವುದಕ್ಕೆ ಆಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಈ ನಿರ್ಣಯದಲ್ಲಿರತಕ್ಕ ಮೂಲ ತತ್ವದ ಅಂಶವನ್ನು ಒಪ್ಪಿಕೊಂಡರೂ, ಈ ನಿರ್ಣಯ ಇರತಕ್ಕ ರೀತಿಯಲ್ಲಿ ಬಹುಶ: ಪ್ರತಿಪಾದಿಸುವುದಕ್ಕೆ ಕಷ್ಟವಾಗಿರುವುದು. ಮಾನ್ಯ ಸ್ನೇಹಿತರು ನಾನು ಹೇಳಿರತಕ್ಕ ಸಮಜಾಯಿಷಿಯನ್ನು ಗಮನಿಸಿ ಈ ನಿರ್ಣಯವನ್ನು ವಾಪಾಸು ತೆಗೆದುಕೊಳ್ಳಬೇಕೆಂದು ಹೇಳಿ ಸವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

* * *

# ಕೈಮಗ್ಗ ನೇಯ್ಗೆಯವರ ಆರ್ಥಿಕ ಸ್ಥಿತಿ ನಿರ್ಣಯದ ಮೇಲಿನ ಚರ್ಚೆ

## 14, ಏಪ್ರಿಲ್ 1954

[ಚಾಮರಾಜನಗರದ ಶಾಸಕ ಶ್ರೀ ಯು.ಎಂ. ಮಾದಪ್ಪ ಅವರು "ಕೈಮಗ್ಗದ ನೇಯ್ಗೆಯವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಸರ್ಕಾರದವರು ಕೈಮಗ್ಗದವರಿಗೆ ಹಣ ಮತ್ತು ನವೀನ ಯಂತ್ರಗಳನ್ನು ಸಾಲದ ರೂಪದಲ್ಲಿ ಒದಗಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ." – ಎಂದು ರಾಜ್ಯದಲ್ಲಿನ "ಕೈಮಗ್ಗದ ನೇಕಾರರ ಆರ್ಥಿಕ ಸ್ಥಿತಿ" ಬಗ್ಗೆ ಸರ್ಕಾರದ ಗಮನ ಸೆಳೆವ ನಿರ್ಣಯ ಮಂಡಿಸಿದರು. ಇದಕ್ಕೆ ಪೂರಕವಾಗಿ ಗಾಂಧಿನಗರದ ಶಾಸಕ ಶ್ರೀ ಡಿ. ವೆಂಕಟೇಶ್, ಶಿವಮೊಗ್ಗದ ಶ್ರೀ ಎಸ್.ಆರ್. ನಾಗಪ್ಪಶೆಟ್ಟಿ ಅವರೂ ಮಾತನಾಡಿ, ಕೈಗಾರಿಕಾ ಸಚಿವರಿಂದ ವಿವರ ಬಯಸಿದರು. ಸಚಿವ ಶ್ರೀ ಸಿದ್ದವೀರಪ್ಪ ವಿವರಣೆ ಕೊಟ್ಟರು.]

**ಶ್ರೀ ಎಚ್. ಸಿದ್ದವೀರಪ್ಪ ( ಗೃಹ ಹಾಗೂ ಕೈಗಾರಿಕಾ ಸಚಿವರು):** ಸ್ವಾಮಿ, ಈ ಕೈಮಗ್ಗದ ಕೈಗಾರಿಕಾ ವಿಚಾರದಲ್ಲಿ – ಇದು ಇಡೀ ನಮ್ಮ ಭಾರತದ ಒಂದು ಕೈಗಾರಿಕೆಗೆ ಸಂಬಂಧಪಟ್ಟ ವಿಷಯವಾಗಿದೆ. ಜತೆಗೆ ಲಕ್ಷಾಂತರ ಜನರ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಕೇಂದ್ರ ಸರ್ಕಾರದವರು ಮತ್ತು ಯೋಜನಾ ಆಯೋಗದವರೂ ಸಹಾ ಈ ಕೈಗಾರಿಕೆ ಉಳಿಯಬೇಕಾದರೆ ಯಾವಯಾವ ಕಾರ್ಯಕ್ರಮ ಕೈಗೊಳ್ಳಬೇಕೆಂಬ ವಿಚಾರದಲ್ಲಿ ಈಗಾಗಲೇ ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಂಡಿರುವುದು ಈ ಮಾನ್ಯ ಸಭೆಯ ಗಮನಕ್ಕೆ ಬಂದಿದೆಯೆಂದು ನಾನು ಭಾವಿಸಿದ್ದೇನೆ.

ಈ ದೃಷ್ಟಿಯಿಂದ ಇಂಡಿಯಾ ಸರ್ಕಾರದವರು ಮಿಲ್ ಬಟ್ಟೆ ಮೇಲೆ ಸೆಸ್ ಹಾಕಿ ನಮ್ಮ ಸಂಸ್ಥಾನಕ್ಕೆ ಬರಬೇಕಾದ ಹಣ ಕಳೆದ ಸಾಲಿನಲ್ಲಿ 7, 60, 900 ರೂಪಾಯಿಗಳನ್ನು ಒಂದು ಸಾರಿ, ಬಳ್ಳಾರಿ ನಮ್ಮ ಸಂಸ್ಥಾನಕ್ಕೆ ಬಂದಮೇಲೆ 2, 52, 655 ರೂಪಾಯಿಗಳನ್ನು ಇನ್ನೊಂದು ಸಾರಿ ಕೊಟ್ಟರು. ಇದನ್ನು ಈಗಾಗಲೇ ಸರ್ಕಾರ ಮಂಜೂರು ಮಾಡಿದೆ. ಎರಡು ಸಾವಿರ ಜನ ನೇಯ್ಗೆಯವರಿಗೆ ದಾಮಾಷಾ ಪ್ರಕಾರ

ತಲೆಗೆ ರೂ. 7–8–0ನಂತೆ ಷೇರು ಹಾಕುವುದಕ್ಕೆ ಮಂಜೂರು ಮಾಡಿದೆ. ವರ್ಕಿಂಗ್ ಕ್ಯಾಪಿಟಲ್ 2, 500 ಕೆಲಸಗಾರರಿಗೆ ಒಬ್ಬರಿಗೆ 50 ರೂಪಾಯಿಗಳಂತೆ 1, 75, 000ರೂಪಾಯಿಗಳನ್ನು ಮಂಜೂರು ಮಾಡಿದೆ. ಅಲ್ಲದೆ ಒಂದು ಸಾವಿರ ತ್ರೋಷಟ್ಲ್ ಲೂಮ್ಸ್, ಫ್ಲೈಷಟ್ಲ್ ಲೂಮ್ಸ್ ಮಾಡುವುದಕ್ಕೆ ಒಂದು ಲೂಮಿಗೆ 25 ರೂಪಾಯಿಗಳಂತೆ ಮತ್ತು ಆಟೋ ಮೋಷನ್ ಅಟ್ಯಾಚ್‌ಮೆಂಟ್ ಅಂಡ್ ಮೆಕ್ಯಾನಿಕಲ್ ಡಿವೈಸ್‌ಗೆ ಒಂದು ಲೂಮಿಗೆ 50 ರೂಪಾಯಿಗಳಂತೆ 30 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಈಗ 75 ಸಾವಿರ ರೂಪಾಯಿಗಳ ಫರ್ದರ್ ಲೋನ್ ಇಂಡಿಯಾ ಸರ್ಕಾರದವರು ಕೊಟ್ಟಿರುವುದನ್ನು ಯಾವ ರೀತಿಯಲ್ಲಿ ಖರ್ಚು ಮಾಡಬೇಕೆಂದು ಆದೇಶಿಸಲಾಗಿದೆ.

ಇಷ್ಟೇ ಅಲ್ಲದೆ ಮಾನ್ಯ ಸದಸ್ಯ ಶ್ರೀ ಮಾದಪ್ಪನವರು ಹೇಳಿದಹಾಗೆ ಸಹಕಾರ ಸಂಘಗಳಿವೆ. ಅದಕ್ಕೆ ಸರ್ಕಾರದವರು ಏನೇನು ಸೌಲಭ್ಯ ಕೊಡಬೇಕೋ ಎಲ್ಲವನ್ನೂ ಕೊಟ್ಟು ಎಲ್ಲಾ ರೈತರಿಗೂ ಹಣಕಾಸಿನ ಸಹಾಯವನ್ನು ನೀಡಿದ್ದಾರೆ. ಈಗ ಬಂದಿರುವ ಹಣ ಸಾಕಾದಷ್ಟಿದೆ. ಇದನ್ನು ವಿಚಕ್ಷಣೆಯಿಂದ ಖರ್ಚುಮಾಡಬೇಕು. ಯಾವರೀತಿ ಮಾಡಿದರೆ ಬಹುಭಾಗದ ಈ ಕೆಲಸಗಾರರಿಗೆ ನೇರವಾಗಿ ಸಹಾಯ ದೊರೆಯುತ್ತದೆ ಎಂಬ ವಿಷಯವನ್ನು ಯೋಚನೆಮಾಡಿ ಮುಂದುವರೆಯಬೇಕಾಗಿದೆ. ಈ ವಿಚಾರದಲ್ಲಿ ಶ್ರೀ ಮಾದಪ್ಪನವರು ಹೇಳಿರುವ ವಿಚಾರಕ್ಕೆ ಭಿನ್ನಾಭಿಪ್ರಾಯ ಬಹುಶ: ಬರಲಾರದು. ಈ ದೃಷ್ಟಿಯಿಂದಲೇ ಸರ್ಕಾರದವರು ಕೈಮಗ್ಗದ ಕೈಗಾರಿಕೆಯಲ್ಲಿ ಯಾರಿಗೆ ಹೆಚ್ಚು ಮಾಹಿತಿ ಇದೆ ಅಂಥ ಮಾನ್ಯ ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನು ದಿನಾಂಕ 11–2–1954ರಲ್ಲಿ ಹೊಸದಾಗಿ ರಚಿಸಿದ್ದಾರೆ. ಈ ಸಮಿತಿಯ ಸಲಹೆ ಪಡೆದು ಪ್ರಕೃತ ಸಾಲಿನಲ್ಲಿ ಯಾವರೀತಿಯ ಕಾರ್ಯಕ್ರಮ ಕೈಗೊಳ್ಳಬೇಕೆಂಬುದನ್ನು ಆದಷ್ಟು ಜಾಗ್ರತೆ ತೀರ್ಮಾನ ಮಾಡುತ್ತಾರೆ.

ಮಾನ್ಯ ಸದಸ್ಯರಾದ ಶ್ರೀ ವೆಂಕಟೇಶ್ ಅವರು ಸೂಕ್ತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಂದು ಸಮಾವೇಶ ಕರೆದು ಈ ಕೈಗಾರಿಕೆ ಉಳಿಯಬೇಕಾದರೆ ಯಾವಯಾವ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸಲಹೆ ಕೇಳಬೇಕೆಂದು ಉಪಯುಕ್ತ ಸಲಹೆ ಕೊಟ್ಟಿದ್ದಾರೆ. ಇದನ್ನು ಆದಷ್ಟು ಜಾಗ್ರತೆ ಯೋಚನೆ ಮಾಡಿ ನಾವೂ ಒಂದು ತೀರ್ಮಾನಕ್ಕೆ ಬರಲು ಪ್ರಯತ್ನಮಾಡುತ್ತೇವೆ. ಈ ಕೈಮಗ್ಗದ ಕೈಗಾರಿಕೆ ಉಳಿಯಬೇಕು. ನಮ್ಮ ಜನಗಳಿಗೆ, ಇದನ್ನು ನಂಬಿದವರಿಗೆ ಸಹಾಯವಾಗಬೇಕು ಎಂಬ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇದೇ ದೃಷ್ಟಿಯಿಂದ ಸರ್ಕಾರದವರು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಕೈಮಗ್ಗದ ಕೈಗಾರಿಕೆಯಿಂದ ತಯಾರಾಗುವಂಥ ಸಾಮಾನುಗಳನ್ನೇ ತೆಗೆದುಕೊಳ್ಳಬೇಕೆಂದು ಈಗಾಗಲೇ ಆದೇಶ ಮಾಡಿದ್ದಾರೆ. ಇದನ್ನು ಮಾನ್ಯ ಸದಸ್ಯರಾದ ಶ್ರೀ ಮಾದಪ್ಪನವರು ನೋಡಬಹುದು.

ಸರ್ಕಾರದ ನೌಕರರ ಪೈಕಿ ಯಾರು ಯಾರಿಗೆ ಬಟ್ಟೆ ಒದಗಿಸಬೇಕೋ, ಆಸ್ಪತ್ರೆ ಮುಂತಾದ ಸ್ಥಳಗಳಿಗೆ ಬಟ್ಟೆ ಸರಬರಾಜು ಮಾಡಬೇಕೋ ಅಲ್ಲಿಗೆಲ್ಲಾ ಕೈಮಗ್ಗದ ಬಟ್ಟೆಗಳನ್ನೇ ಒದಗಿಸಬೇಕೆಂದು ಈಗಾಗಲೇ ಒಂದು ಆಜ್ಞೆ – ಸರ್ಕಾರಿ ಆದೇಶ ಮಾಡಲಾಗಿದೆ. ಇಷ್ಟೇ ಸಾಲದು, ಸಾರ್ವಜನಿಕರ ಸಹಾನುಭೂತಿ ಸಹಾ ಇದಕ್ಕೆ ಹೆಚ್ಚಾಗಿಬೇಕು. ಈ ಸಹಾನುಭೂತಿ ಸಾರ್ವಜನಿಕರಿಂದ ಬಂದಷ್ಟೂ ಒಳ್ಳೆಯದು. ಇದೆಲ್ಲಾ ಈ ಕೈಗಾರಿಕೆ ಉಳಿಯುವುದಕ್ಕೆ ಅನುಕೂಲವಾಗುತ್ತದೆ ಎಂಬುದನ್ನು ಮರೆಯಬಾರದು. ಮುಖ್ಯವಾಗಿ ಈ ಕೈಗಾರಿಕೆಯಲ್ಲಿರುವ ತೊಂದರೆ, ನಾವೇನು ಬಟ್ಟೆ ಮಾಡುತ್ತೇವೆಯೋ ಆ ಬಟ್ಟೆಗೆ ಸರಿಯಾಗಿ ಮಾರ್ಕೆಟ್ ಇಲ್ಲದಿರುವುದು. ಈ ಬಟ್ಟೆ ಖರ್ಚಾಗಲು ಮಾರ್ಕೆಟ್ ಹಿಡಿಯುವುದು ಬಹಳ ಮುಖ್ಯವಾದುದು. ಈ ದೃಷ್ಟಿಯಿಂದ ಇಂಡಿಯಾ ಸರ್ಕಾರದವರು ಒಂದು ಸಮಿತಿಯನ್ನು ಮಾಡಬೇಕು, ಈ ಬಟ್ಟೆ ಇಂಡಿಯಾದಲ್ಲೇ ಅಲ್ಲ, ಹೊರದೇಶದಲ್ಲೂ ಸಹ ಮಾರಾಟವಾಗುವ ಹಾಗೆ ಮಾಡಬೇಕೆಂದು ಕಾರ್ಯಕ್ರಮ ಕೈಗೊಂಡಿದ್ದಾರೆ. ಇದನ್ನು ತಾವು ಪತ್ರಿಕೆಗಳಲ್ಲಿ ಓದಿರಬಹುದು. ಈ ಕೈಗಾರಿಕೆ ಅಭಿವೃದ್ಧಿಗೆ ಬರುವುದಕ್ಕೆ ಬೇಕಾದ ಎಲ್ಲಾ ಕಾರ್ಯಕ್ರಮವನ್ನೂ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಇಚ್ಛೆ ಇದೆ......

**ಶ್ರೀ ಬಿ.ಎಂ. ಶಿನಪ್ಪ (ಕಬ್ಬನ್‌ಪೇಟೆ):** ಹ್ಯಾಂಡ್‌ಲೂಮ್ ಸಿಲ್ಕ್ ವಿಚಾರದಲ್ಲಿ ಒಂದು ಮನವಿ ಸಲ್ಲಿಸಿದ್ದೆ. ಆ ವಿಚಾರದಲ್ಲಿ ಏನು ಮಾಡಿದ್ದಾರೆಂಬುದನ್ನು ಹೇಳಬೇಕು.

**ಶ್ರೀ ಎಚ್. ಸಿದ್ದವೀರಪ್ಪ :** ಮಾನ್ಯ ಸದಸ್ಯರು ಇದಕ್ಕೆ ಸಂಬಂಧಪಟ್ಟ ಸಮಿತಿಯಲ್ಲಿ ಒಬ್ಬರು ಸದಸ್ಯರಾಗಿರುವುದರಿಂದ ಈ ವಿಚಾರದಲ್ಲಿ ಆದಷ್ಟು ಜಾಗ್ರತೆ ಕಾರ್ಯಕ್ರಮ ಕೈಗೊಳ್ಳಲು ತಕ್ಕ ಸಲಹೆ ನೀಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

**Mr. SPEAKER** - TO - day there was a question - no:690. The central Government have given assistance for Sericulture Industry.

**ಶ್ರೀ ಎಚ್. ಸಿದ್ದವೀರಪ್ಪ :** ರೇಷ್ಮೆಗೆ ಸಹ ಕೇಂದ್ರ ಸರ್ಕಾರದಿಂದ ಅನೇಕ ಸಹಾಯ ಬಂದಿದೆ. ಈ ವಿಚಾರದಲ್ಲಿ ಸಿಲ್ಕ್ ಇಂಡಸ್ಟ್ರಿ ಸಹ ಕೈಮಗ್ಗದಲ್ಲಿ ಸೇರಬೇಕೆಂಬ ವಾದವಿದೆ. ಇದನ್ನೂ ಸಹ ಕೂಲಂಕಷವಾಗಿ ಯೋಚನೆಮಾಡಬೇಕಾಗಿದೆ. ಈಗಾಗಲೇ ಹ್ಯಾಂಡ್‌ಲೂಮಿನ ಅರ್ಥವ್ಯಾಪ್ತಿಯಲ್ಲಿ "ಸಿಲ್ಕ್" ಸೇರಿರುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆಂದು ತಿಳಿದಿದ್ದೇನೆ. ಇದನ್ನೂ ಸಹ ಯೋಚನೆ ಮಾಡಬೇಕು. ನಮ್ಮ ದೇಶದಲ್ಲಿ ಸಿಲ್ಕ್ ಇಂಡಸ್ಟ್ರಿ, ಹ್ಯಾಂಡ್‌ಲೂಮ್ ಇಂಡಸ್ಟ್ರಿಯಷ್ಟೇ ಪ್ರಾಮುಖ್ಯವಾದುದೆಂಬುದನ್ನು ಮರೆಯುವ ಹಾಗಿಲ್ಲ.

**ಶ್ರೀ ಬಿ.ಎಂ.ಶೀನಪ್ಪ:** ನನ್ನ ಮನವಿಯ ವಿಚಾರ ಏನಾಗಿದೆಯೆಂದು ಹೇಳಬೇಕು.

**Mr. SPEAKER** - He has said that you are a committee member.

**ಶ್ರೀ ಎಚ್. ಸಿದ್ದವೀರಪ್ಪ :** ಸಮಿತಿಯ ಮುಂದೆ ಆದಷ್ಟು ಜಾಗ್ರತೆ ಇದನ್ನು ತಂದು ಸಲಹೆ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಯು.ಎಂ. ಮಾದಪ್ಪ :** ಈ ಕೈಗಾರಿಕೆಗೆ ಸಂಬಂಧಪಟ್ಟ ಜನರು ಯಾವ ಯಾವ ಸ್ಥಳದಲ್ಲಿದ್ದಾರೆಂದು ಸರ್ವೇ ಮಾಡುತ್ತೀರಾ?

**ಶ್ರೀ ಎಚ್. ಸಿದ್ದವೀರಪ್ಪ :** ಈ ವಿಷಯದಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿಯ ಸಲಹೆ ಪಡೆದು, ವರ್ಷದ ಅಖೈರಲ್ಲಿ ಸರ್ಕಾರದವರು ನಿರ್ದಿಷ್ಟ ಕಾರ್ಯಕ್ರಮ ಕೈಗೊಳ್ಳಬೇಕೆಂದಿದ್ದಾರೆ. ಈಗಾಗಲೇ ಸರ್ವೇಯಾಗಿದೆ. ಎಲ್ಲೆಲ್ಲಿ ಎಷ್ಟೆಷ್ಟು ಕೈಮಗ್ಗಗಳಿವೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ಹೆಚ್ಚಿನ ಮಾಹಿತಿ, ಅಂಕೆ, ಅಂಶ ಬೇಕಾದರೆ ಸಂಗ್ರಹಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಒಂದು ನನ್ನ ಜವಾಬು ಬಂದಮೇಲೆ ತಾವು ಬಹುಶಃ ತೃಪ್ತರಾಗಿ ಈ ನಿರ್ಣಯವನ್ನು ವಾಪಾಸು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

# ರಿವಾಲ್ವರ್ ಪ್ರಕರಣದ ಚರ್ಚೆ

## 20, ಏಪ್ರಿಲ್ 1954.

[ಪೊಲೀಸ್ ಇಲಾಖೆಯಿಂದ ಅನೇಕ ವರ್ಷಗಳಿಂದ "ರಿವಾಲ್ವರ್"ವೊಂದು ಕಾಣೆಯಾಗಿ, ಒಬ್ಬ ನಿವೃತ್ತ ಅಧಿಕಾರಿ ಮೇಲೆ ಸರ್ಕಾರದ ವಿಚಾರಣೆ ಆಗಿ ಆ ಕುರಿತು ವಿಧಾನಸಭೆಯಲ್ಲಿ ದೀರ್ಘವಾದ ಚರ್ಚೆ, ವಾದ – ವಿವಾದ ಆಯಿತು. ಈ ಚರ್ಚೆಯಲ್ಲಿ ಮಾನ್ಯ ಶಾಸಕರಾದ ಶ್ರೀ ಎನ್.ಸಿ. ನಾಗಯ್ಯರೆಡ್ಡಿ, ಶ್ರೀ ಟಿ. ಮರಿಯಪ್ಪ, ಶ್ರೀ ಡಿ. ದೇವರಾಜ ಅರಸು. ಶ್ರೀ ಮಾದಪ್ಪ, ಶ್ರೀ ಹುಚ್ಚೇಗೌಡ ಮೊದಲಾದವರು ಭಾಗವಹಿಸಿದ್ದರು. ಮಾನ್ಯ ಗೃಹ ಸಚಿವ ಶ್ರೀ ಸಿದ್ದವೀರಪ್ಪ ಅವರು ಸರ್ಕಾರದ ಕ್ರಮದ ಬಗ್ಗೆ ಸದಸ್ಯರಿಗೆ ನೀಡಿದ ವಿವರಣಾತ್ಮಕ ದಾಖಲೆ ಇಲ್ಲಿದೆ....]

**ಶ್ರೀ ಎಚ್. ಸಿದ್ದವೀರಪ್ಪ (ಗೃಹ ಹಾಗೂ ಕೈಗಾರಿಕಾ ಸಚಿವರು):** ಸ್ವಾಮಿ, ರೂಲ್ಸ್‌ನಲ್ಲಿರುವುದು, Any member may put a question ಎಂದು. ಈಗ ಸದಸ್ಯರು ಕೇಳಿರುವ ಪ್ರಶ್ನೆಗಳು ಒಂದಲ್ಲ, ನೂರು ಆಗಬಹುದು. ಈ ಪ್ರಶ್ನೆಗಳನ್ನೆಲ್ಲಾ ನೆನಪಿನಲ್ಲಿಟ್ಟುಕೊಂಡು ಅವುಗಳಿಗೆ ಸೂಕ್ತವಾದ ಉತ್ತರ ಕೊಡುವಷ್ಟು ಜ್ಞಾಪಕಶಕ್ತಿ ನನಗಿಲ್ಲ. ಆದುದರಿಂದ ಪ್ರತಿಯೊಂದು ಪ್ರಶ್ನೆಗೂ ಜವಾಬು ಕೊಡುವುದು ಸದ್ಯಕ್ಕೆ ಶಕ್ಯವಿಲ್ಲ ಎಂದು ಹೇಳುತ್ತೇನೆ. ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಬಾರದೆಂದೇನೂ ಇಲ್ಲ. ಒಂದೊಂದೇ ಪ್ರಶ್ನೆ ಕೇಳಿದ್ದರೆ ಆಗ ಉತ್ತರ ಕೊಡಬಹುದಾಗಿತ್ತು. ಆದರೆ ಒಂದು ವಿಷಯವನ್ನು ಮಟ್ಟಿಗೆ ಹೇಳುತ್ತೇನೆ: ಈ Amount recovery ಆಗಿಲ್ಲ. ಯಾವ ರೀತಿ ಸರ್ಕಾರದ ಆದೇಶ ಆಗಿದೆಯೋ ಅದರ ಪ್ರಕಾರ ಶ್ರೀಮಾನ್ ಸೋಮಪ್ಪನವರಿಂದ ಹಣ ವಸೂಲಾಗಿಲ್ಲ. ಇದೊಂದು ಮುಖ್ಯವಾದ ಅಂಶವಾದ್ದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ತಿಳಿಸಿರುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ಎನ್.ಸಿ. ನಾಗಯ್ಯರೆಡ್ಡಿಯವರು ಕೇಳಿರುವ ಪ್ರಶ್ನೆಗಳಲ್ಲಿ ಕೆಲವು ಭಾಗವನ್ನು Proceedings ನಿಂದ ತೆಗೆದುಹಾಕಲ್ಪಡುವುದಾಗಿ ಅಧ್ಯಕ್ಷರು ಅಪ್ಪಣೆ ಕೊಡಿಸಿದರು. ಯಾವುದನ್ನು ತೆಗೆದುಹಾಕುತ್ತಾರೋ, ಯಾವುದನ್ನು ಇಟ್ಟುಕೊಳ್ಳುತ್ತಾರೋ ಎಂಬುದು ಗೊತ್ತಾಗಿದ್ದರೆ ಅದಕ್ಕೆ ಸೂಕ್ತವಾದ ಜವಾಬು ಕೊಡಬಹುದಾಗಿತ್ತು. ಅದು ಗೊತ್ತಾಗದೇ ಇರುವುದರಿಂದ ಜವಾಬು ಕೊಡುವುದಕ್ಕೆ

ಆಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಟಿ. ಮರಿಯಪ್ಪನವರು, ಈ ವಿಚಾರದಲ್ಲಿ ಎಂ. ಎ. ಆರ್. ಪಿ. ರಿಪೋರ್ಟ್ ಬಂದಿಲ್ಲವೆ? ಅಥವಾ ಸರ್ಕಾರದವರೇ ಪ್ರಾರಂಭಿಸಿದರೇ? ಎಂದು ಕೇಳಿದರು. ಎಂ. ಎ. ಆರ್. ಪಿ. ರಿಪೋರ್ಟ್ ಬಂದ ಮೇಲೆಯೇ ಸರ್ಕಾರದವರು ಪ್ರಾರಂಭಿಸಿದ್ದು. ಎಂ. ಎ. ಆರ್. ಪಿ., ಡಿ. ಎಸ್. ಪಿ. ಯಿಂದ ರೆಕಾರ್ಡ್ ಪ್ರಾರಂಭವಾಯಿತು. ಆಗ್ಗೆ ಶ್ರೀಮಾನ್ ಚಾಂಡಿಯವರು ಡಿ.ಎಸ್.ಪಿ. ಆಗಿದ್ದರು. ರಿಕಾರ್ಡ್ ಅವರಿಂದ ಪ್ರಾರಂಭವಾಗಿ ಸರ್ಕಾರಕ್ಕೆ ಬಂದದ್ದರಿಂದ, ಆ ರಿಕಾರ್ಡಿನಮೇಲೆ ಸೂಕ್ತಕಂಡ ರೀತಿಯಲ್ಲಿ ಸರ್ಕಾರದವರು ಆರ್ಡರ್ ಮಾಡಿರುತ್ತಾರೆ; ಇದು 14-3-1951ರಲ್ಲಿ. ಅಲ್ಲಿ ಆಗಿದ್ದ ಡಿ.ಎಸ್.ಪಿ. ರಿಪೋರ್ಟ್ ಕಳುಹಿಸಿದರು. ಆದರಲ್ಲಿ ಈ ರೀತಿ ಇದೆ:

"ಒಂದು ರಿವಾಲ್ವರ್ ಹೋಗಿದೆ. ನಮ್ಮ ರಿಕಾರ್ಡಿನಲ್ಲಿ ಅದನ್ನು ಶ್ರೀಮಾನ್ ಸೋಮಪ್ಪನವರಿಗೆ ಕೊಟ್ಟಿದ್ದು ಎಂದು ಇದೆ" ಎಂದು ಅವರು ರಿಪೋರ್ಟಿನಲ್ಲಿ ತಿಳಿಸಿದ್ದರು. ಈ ಬಗ್ಗೆ ರಿಕಾರ್ಡು ಬೆಳೆದು, ಕೊನೆಗೆ ಅದು ಶ್ರೀಮಾನ್ ಸೋಮಪ್ಪನವರಿಗೆ ಕೊಟ್ಟಿದ್ದುದು ನಿಜವೆಂದು ಸರ್ಕಾರದವರು ತೀರ್ಮಾನಿಸಿದ್ದಾರೆ. ಅಲ್ಲದೆ ಆ ಬಗ್ಗೆ ಹಣವನ್ನು ಅವರಿಂದ ವಸೂಲಿ ಮಾಡಬೇಕೆಂದು ಆದೇಶ ಮಾಡಿರುತ್ತಾರೆ. ಇದರ ಬಗ್ಗೆ ಬಾಕಿ ಅಂಶಗಳೇನು, ಯಾವ ಯಾವ ರೀತಿ ನಡೆಯಿತು ಎಂಬುದನ್ನು ಹೇಳುವುದು ಕಷ್ಟ. ಒಟ್ಟಿನಲ್ಲಿ ಯಾವ ಆಫೀಸರನ್ನೂ ಉದ್ದೇಶಪೂರ್ವಕವಾಗಿ ಗಮನದಲ್ಲಿಟ್ಟುಕೊಂಡು ಇದನ್ನು ಹೇಳತಕ್ಕಂಥ ಅಂಶವಲ್ಲ. ಈಗಲೇ ಇದಕ್ಕೆ ಯಾರು ಜವಾಬ್ದಾರರು ಎಂದು ಹೇಳುವುದಕ್ಕಾಗುವುದಿಲ್ಲ. ಇದರ ವಿಚಾರ ಹೀಗೆ, ಇಂಥವರೇ ಜವಾಬ್ದಾರರು ಎಂದು ಹೇಳುವುದಕ್ಕೆ ಸಂಬಂಧಪಟ್ಟ ರಿಕಾರ್ಡುಗಳನ್ನು ಪೂರ್ತಿಯಾಗಿ ಓದಿ ಅದರ ಮೇಲೆ ಅರ್ಥಮಾಡಿಕೊಳ್ಳಬೇಕೇ ಹೊರತು ಹಾಗೆಯೇ ಹೇಳುವುದು ಕಷ್ಟ.

ಈ ಬಗ್ಗೆ ಎರಡು ಅಂಶಗಳು ಮಾತ್ರ ನಿಜ. ಈ ರಿವಾಲ್ವರ್ ಶ್ರೀಮಾನ್ ಸೋಮಪ್ಪನವರು ತೆಗೆದುಕೊಂಡು ಹೋಗಿ ಅದನ್ನು ವಾಪಾಸು ಮಾಡಲಿಲ್ಲವಾದುದರಿಂದ ಅವರಿಂದ ಈ ಬಗ್ಗೆ ಹಣ ವಸೂಲಿ ಮಾಡಬೇಕೆಂದು 1951ರಲ್ಲಿ ಸರ್ಕಾರದ ಆದೇಶ ಆಗಿದೆ. ಇನ್ನೊಂದು ಇದೇ ರಿವಾಲ್ವರ್ 19-1-1954ರಲ್ಲಿ ಮೈಸೂರು ಸರ್ಕಾರದ ಪೋಲಿಸು ಅಧಿಕಾರಿಗಳಲ್ಲೊಬ್ಬರಾದ ಶ್ರೀಮಾನ್ ನರಸಿಂಹಾಚಾರ್ ಎಂಬುವರು ಇದರ ಬಗ್ಗೆ 13 ರೌಂಡ್ ಅಮ್ಯೂನಿಷನ್ನೂ ನನ್ನಲ್ಲಿತ್ತು ಎಂದು ಅವುಗಳನ್ನು ಹಾಜರ್ ಮಾಡಿದ್ದಾರೆ. ಈ ಪ್ರಕರಣ ಹೇಗೆ ನಡೆಯಿತು, ಇದು ಯಾವರೀತಿ ಇವರ ಬಳಿ ಬಂತು ಎಂಬುದು ಗೊತ್ತಿಲ್ಲ. ಇದನ್ನೆಲ್ಲ ಕೂಲಂಕಷವಾಗಿ ಪರೀಕ್ಷಿಸಬೇಕಾಗಿದೆ. ಮುಖ್ಯವಾಗಿ ಈಗ ಇದನ್ನು ಯಾರು ಸರ್ಕಾರಕ್ಕೆ ಹಾಜರು ಮಾಡಿದ್ದಾರೆಯೋ ಅವರು ಸಮರ್ಪಕವಾದ ಜವಾಬನ್ನು ಕೊಡಬೇಕು.



WD-H-035-7

ಶ್ರೀಮಾನ್ ಟಿ. ಮರಿಯಪ್ಪನವರು ಹೇಳಿದರು, ಅವರು ಮನಸ್ಸು ಮಾಡಿದ್ದರೆ ಇದನ್ನು ಮುಚ್ಚುವುದಕ್ಕೆ ಆಗುತ್ತಿರಲಿಲ್ಲವೆ? ಏತಕ್ಕಾಗಿ ಹಾಜರು ಮಾಡಿದರು ಎಂದು. ಈ Circumstancial Evidenceಗೆ ಏನೇ ಕಾರಣಗಳಿದ್ದರೂ, ಅವರ ವರ್ತನೆ Bonafide ಆಗಿತ್ತೆಂಬುದನ್ನು ತೋರಿಸುತ್ತದೆಂದು ನಾವು ಊಹಿಸಬಹುದಾಗಿದೆ. ಆದರೆ ಬಾಕಿ ಅಂಶಗಳ ಜತೆಗೆ ಇದು ಹೇಗೆ ಬಂತು ಎಂಬುದನ್ನು ನೋಡಬೇಕು. ನಾನು ಈ ಬಗ್ಗೆ ರಿಪೋರ್ಟ್ ಓದಿದ್ದೇನೆ. ಅದರಲ್ಲಿರುವ ಅಂಶಗಳ ಮೇಲೆ ಸರ್ಕಾರದವರು ಈ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕಾಗಿರುವುದರಿಂದ ಅದರಲ್ಲಿ ಅಡಗಿರತಕ್ಕ ಅಂಶಗಳನ್ನು ಹೊರಗಿಡುವುದಕ್ಕೆ In the interest of Public Service ಸೂಕ್ತವಲ್ಲ.

ಆದುದರಿಂದ ಹೇಳಲು ಇಷ್ಟಪಡುವುದಿಲ್ಲ. ಇದರ ಬಗ್ಗೆ ಪೂರ್ಣವಿವರಗಳನ್ನು ಗಣನೆಗೆ ತೆಗೆದುಕೊಂಡು, ಪೂರ್ವಾಪರ ಯೋಚಿಸಿ ಸರ್ಕಾರದವರು ಅದರಮೇಲೆ ತೀರ್ಮಾನ ಕೊಡಬೇಕಾಗುತ್ತದೆ. ಶ್ರೀಮಾನ್ ದೇವರಾಜ ಅರಸು ಅವರು ಈ ಬಗ್ಗೆ Judicial Enquiry ಮಾಡುತ್ತೀರಾ ಎಂದು ಕೇಳಿದರು. ನನ್ನ ಅಭಿಪ್ರಾಯದಲ್ಲಿ ಇದರಲ್ಲಿ Judicial Enquiry ಮಾಡತಕ್ಕಂಥ ಅಂಶ ಯಾವುದೂ ಇಲ್ಲ. ಅಲ್ಲದೆ Judicial Enquiry ಯಾವ Point ಮೇಲೆ ಮಾಡಬೇಕೆಂಬುದಕ್ಕೆ ಆಧಾರವಿಲ್ಲ. ಆದಕಾರಣ ಇದನ್ನೇನಿದ್ದರೂ ಪರಿಗಣಿಸಿ ಈ ಬಗ್ಗೆ ತೀರ್ಮಾನಕ್ಕೆ ಬರಬೇಕಾದುದು ಸೂಕ್ತ ಎಂದು ತಿಳಿಸಿದರೆ ಸಾಕಾಗಿದೆ. Department Enquiryಯಾಗಿ ಇನ್ನು ಶ್ರೀಮಾನ್ ನಾಗರಾಜಮೂರ್ತಿಯವರು ಅವರಿಗೆ ಬಂದಿರುವ ಬೆದರಿಕೆ ಪತ್ರದ ವಿಚಾರ ತಿಳಿಸಿದರು. ಈಗಾಗಲೇ ಅವರನ್ನು ನಿನ್ನೆಯ ದಿನ ಕರೆಸಿಕೊಂಡು, ಕೇಳಿ, ಅವರಿಗೆ ಯಾವರೀತಿ ಸೂಕ್ತವಾದ Protection ಕೊಡಬೇಕೆಂಬ ವಿಚಾರದಲ್ಲಿ ಈಗಾಗಲೇ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಂಡಿರುತ್ತಾರೆ. ಈ ವಿಚಾರವಾಗಿ ಇದಕ್ಕಿಂತಲೂ ಹೆಚ್ಚಾಗಿ ಇನ್ನೇನೂ ಹೇಳಲು ಸಾಧ್ಯವಿಲ್ಲ. ಅವರು ಈ ದಿನ ವ್ಯಕ್ತಪಡಿಸಿರುವ ಹಲವಾರು ಅಂಶಗಳ ಬಗ್ಗೆ ಸರ್ಕಾರದವರು ಸಂಬಂಧಪಟ್ಟ ರಿಕಾರ್ಡುಗಳೆಲ್ಲವನ್ನೂ ಪೂರ್ಣವಾಗಿ ನೋಡಿ, ನಿರ್ಧಾರಕ್ಕೆ ಬರಬೇಕಾಗಿದೆ. ಈ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಾರೆಂದು ಮಾತ್ರ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

"ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ
ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ
ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ
ಶಾಸ್ತ್ರಿತನದಿಂದಲ್ಲ – ಮಂಕುತಿಮ್ಮ"

–ಡಿ.ವಿ.ಜಿ

## ಕವಿ ಡಿ.ವಿ.ಜಿ. ಅವರ ತತ್ವ ಹಾಗೂ ಸುಖೀರಾಜ್ಯ ಕಲ್ಪನೆ

### 5, ಮಾರ್ಚ್ 1968

**ಶ್ರೀ ಎಚ್. ಸಿದ್ದವೀರಪ್ಪ – (ಹರಿಹರ) :** ಮೈಸೂರು ರಾಜ್ಯ "ರಾಮರಾಜ್ಯ" ಎಂದು ಹೆಸರು ಪಡೆದಿತ್ತು. ಪೂಜ್ಯ ಮಹಾತ್ಮ ಗಾಂಧೀಜಿಯವರೂ ಕೂಡ ಒಮ್ಮೆ ಹಿಂದೆ ಹಾಗೆ ಹೇಳಿದ್ದರು. ಅವರು ಒಂದು ಸಾರಿ ದುಂಡುಮೇಜು ಪರಿಷತ್ತಿನ ಸಭೆಯಲ್ಲಿ ಭಾಗವಹಿಸಲು ಹೋಗಿದ್ದಾಗ ಮೈಸೂರು ದೇಶದಲ್ಲಿ ರಾಮರಾಜ್ಯ ಇದೆ ಎಂದು ಅಲ್ಲಿ ಹೇಳಿದ್ದರು. ಅಂತಹ ಮೈಸೂರಿನಲ್ಲಿ ರಾಮರಾಜ್ಯವಿದೆ ಎಂದು ಹೇಳುವುದಕ್ಕೆ ನಾವು ಅದೇ ನೀತಿಗಳನ್ನು ಅನುಸರಿಸಿಕೊಂಡು ಮಂತ್ರಿಗಳಾಗಿ ಅಧಿಕಾರಕ್ಕೆ ಬರುವ ಮುನ್ನ ಮತ್ತು ನಾವುಗಳು ಅಧಿಕಾರದಲ್ಲಿದ್ದಾಗ ಈ ದೇಶದ ಹೆಸರನ್ನು ಉಳಿಸುವುದಕ್ಕಾಗಿ ತಕ್ಕ ಕೆಲಸಗಳನ್ನು ಮಾಡುತ್ತಿದ್ದೆವು. ಆದರೆ ಇಂದು ನೀವು ಅನುಸರಿಸುತ್ತಿರುವ ನೀತಿಗಳಿಂದಾಗಿ ಬೇರೆ ರೀತಿಯಾಗಿದೆ. ನಾನು ಮಾನ್ಯ ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರಿಗೆ "ನೀವು ಒಂದುಸಾರಿ ಈ ರಾಜ್ಯದ ಮುಖ್ಯಮಂತ್ರಿಯಾಗುತ್ತೀರಿ, ಅದರಲ್ಲಿ ಸಂಶಯವಿಲ್ಲ ಎಂದು ಹಿಂದೆ ಹೇಳಿದ್ದೆ". ಅದಕ್ಕಾಗಿ ನೀವು ಇಲ್ಲಿ ಹೇಗೆ ಕೆಲಸ ಮಾಡಬೇಕಾಗುತ್ತದೆ ಎನ್ನುವುದಕ್ಕಾಗಿ ಈ ವಿಧಿಯನ್ನು ಹೇಳಿ ಪ್ರಶ್ನೆ ಮಾಡುತ್ತಿದ್ದೇನೆ. ಈ ವಿಧಿಯಲ್ಲಿ ಹೇಗಿದೆ ಎಂದರೆ:

"Subject to the provisions of this article the executive power of a state extends to borrowing within the territory of India upon the security of the Consolidated fund of the state within such limits, if any, as may from time to time be fixed by the legislature of such state by law and to the giving of guarantees within such limits if any, as may be.... ತೀರಿಸಬೇಕಾದರೆ ಮುಂದೆ ನಮ್ಮ ಮಕ್ಕಳು ಹಾಗೂ ನಿಮ್ಮ ಮಕ್ಕಳು ಮೊಮ್ಮಕ್ಕಳೂ ಕೂಡ ಹೊಣೆಗಾರರಾಗಿರಬೇಕಾಗಿ ಬಂದಿದೆ. ನೀವು ಸೃಷ್ಟಿ ಮಾಡಿರುವ ಪಾಪ ಕೂಪಗಳಿಂದಾಗಿ ಇವನ್ನು ತೀರಿಸಲು ನಿಮ್ಮಿಂದ ಸಾಧ್ಯವಿಲ್ಲ ಎನ್ನುವುದು ನನ್ನ

ಖಚಿತವಾದ ಅಭಿಪ್ರಾಯ. ದೇಶಕ್ಕಾಗಿ ಎಷ್ಟು ಸಾಲ ದೊರೆಯಬೇಕೆಂಬುದು ನಿಗದಿಯಾಗಿರುತ್ತದೆಯೋ ಅದಕ್ಕೆ ಮೇಲ್ಪಟ್ಟು ಸಾಲ ಮಾಡಬಾರದು ಎಂದು ನೀವು ನೋಡಿಕೊಂಡಿದ್ದರೆ ಈಗ ಮಾಡಿರುವ ಹಾಗೆ ಇಷ್ಟೊಂದು ಸಾಲದಹೊರೆ ನಮ್ಮ ದೇಶದಮೇಲೆ ಬೀಳುತ್ತಿರಲಿಲ್ಲ. ಇದರಲ್ಲಿ ನೀವು ದುಂದುಗಾರಿಕೆ ಹಾಗೂ ನೀವು ದುಂದುವೆಚ್ಚ ಮಾಡುವುದಕ್ಕೆ ಅಧಿಕಾರ ನಿಮ್ಮ ಕೈಯಲ್ಲೇ ಇದೆ ಎಂದು ಮಾಡುತ್ತಿದ್ದೀರಿ. ಇದರಿಂದ ನೀವು ಹೋಗುತ್ತಿರುವ ದಾರಿ ಸರಿಯಾದ ದಾರಿ ಅಲ್ಲ ಎಂದು ಹೇಳಲೇಬೇಕಾಗಿದೆ. ಈಗ ಈ ರೀತಿಯಾಗಿ ಇಷ್ಟೊಂದು ಸಾಲದ ಹೊರೆ ಏರಲು ನಿಮಗೆ ಮಿತಿ ಇಲ್ಲದ ಅಧಿಕಾರ ಇರುವುದರಿಂದ ಇಂದು ದೇಶದ ಜನರ ಮೇಲೆ ಹೊರಿಸಿರುವ ಸಾಲದ ಹೊರೆ ಇಲ್ಲಿಯವರೆಗೆ ಇಷ್ಟು ಹೆಚ್ಚಾಗುತ್ತಾ ಬಂದಿದೆ.

ರಿಸರ್ವ್ ಬ್ಯಾಂಕಿನವರೇನಾದದರೂ ಕೇಂದ್ರದ ಆದೇಶದಂತೆ ನಿಮಗೆ ಓವರ್‌ಡ್ರಾಫ್ಟ್ ಕೊಡುವುದನ್ನೇನಾದರೂ ನಿಲ್ಲಿಸಿದರೆ ಅವತ್ತೇ ನಿಮ್ಮ ಹಾರ್ಟ್‌ಫೇಲ್ಯೂರ್ (ಹೃದಯಾಘಾತ) ಆಗುತ್ತದೆ. ರಿಸರ್ವ್ ಬ್ಯಾಂಕಿನವರು ಒಂದೇ ಒಂದು ತಿಂಗಳು ನಿಮಗೆ ಕೊಡುವ ಓವರ್‌ಡ್ರಾಫ್ಟನ್ನು ನಿಲ್ಲಿಸಿದರೆ ನಿಮ್ಮ ಪುಂಗಿ ಬಂದಾಗುತ್ತದೆ. ಇಂದು ನಿಮಗೆ ಓವರ್‌ಡ್ರಾಫ್ಟ್‌ಗಳನ್ನು ನಿಲ್ಲಿಸದೇ ಇರುವುದರಿಂದಾಗಿ ನೀವು ಬೇಕಾದಷ್ಟು ಖರ್ಚುಮಾಡಲು ಹಣ ಸಿಗುತ್ತದೆ ಎಂದು ಖರ್ಚು ಮಾಡುತ್ತಿದ್ದೀರಿ. ನಿಮ್ಮ ಕೈಯಲ್ಲಿ ಯಾವ ರೀತಿಯಾಗಿ ಖರ್ಚು ಮಾಡಬೇಕು, ಹೇಗೆ ಖರ್ಚು ಮಾಡಬೇಕು ಎನ್ನುವುದಕ್ಕೇನು ಪರಿಮಿತಿಯೇ ಇಲ್ಲ ಎನ್ನುವುದು ಕಾಣುತ್ತದೆ. ಅಧಿಕಾರ ನಿಮ್ಮಲ್ಲಿರುವಾಗ ಹೇಗೆ ಖರ್ಚು ಮಾಡಬೇಕು ಎನ್ನುವುದಕ್ಕೆ ಮಾನ್ಯ ಕವಿ **ಶ್ರೀ ಡಿ. ವಿ. ಗುಂಡಪ್ಪನವರು** "ರಾಜ್ಯಶಾಸ್ತ್ರ" ಎನ್ನುವ ಪುಸ್ತಕದಲ್ಲಿ ಒಂದು ಕಡೆ ಬಹಳ ಚನ್ನಾಗಿ ನಮ್ಮ ರಾಜ್ಯದ ಪರಿಸ್ಥಿತಿಯನ್ನು ಬಹಳ ಸೂಕ್ಷ್ಮವಾಗಿರುವ ಒಂದು ವಾಕ್ಯ ಹೇಳಿದ್ದಾರೆ. ಅದನ್ನು ಮಾತ್ರ ಇಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇದರಲ್ಲಿ ಎಷ್ಟು ಚೆನ್ನಾಗಿ ತಿಳಿಸಿದ್ದಾರೆ ಎಂದರೆ; ಮಂತ್ರಿಗಳಾಗಿರುವವರು ದೇಶಕ್ಕಾಗಿ ಸಾಲ ಮಾಡುವಾಗ ಯಾವರೀತಿ ತಾವು ಮಾಡಬೇಕು ಎನ್ನುವ ವಿಷಯದಲ್ಲಿ ಹೇಳಿದ್ದಾರೆ. ಅದು ಹೀಗಿದೆ:

**"ಬಹುದಿನ ಊಟವಿಲ್ಲದೆ ಹಸಿದಿರುವವನು ಔತಣದೆಲೆಯ ಮುಂದೆ ಕುಳಿತಾಗ ಹೇಗೆ ಆತುರದಿಂದ ಪಕ ಪಕನೆ ಬುಕ್ಕುತ್ತಾನೆಯೋ, ನಮ್ಮ ಸಾರ್ವಜನಿಕರೂ ಹಾಗೆ ಅಧಿಕಾರಾವಕಾಶದ ದರ್ಶನವಾದೊಡನೆ ಬಾಯಿಬಿಟ್ಟು ಬುಕ್ಕಲಾರಂಭಿಸಿದರೆ ಆಶ್ಚರ್ಯವಲ್ಲ..."**

**ಶ್ರೀ ಕೊಟ್ರಬಸವಯ್ಯ ಸೋಗಿ :** ಈ ಪುಸ್ತಕವನ್ನು ಅವರು ಯಾವಾಗ ಬರೆದದ್ದು ಎನ್ನುವುದು ಗೊತ್ತಿದೆಯೇ? ಆಗ ತಾವೂ ಕೂಡ ಅಧಿಕಾರದಲ್ಲಿದ್ದು ಆಡಳಿತ ಮಾಡುತ್ತಿದ್ದಿರಿ.

**ಶ್ರೀ ಎಚ್. ಸಿದ್ದವೀರಪ್ಪ** : ನಾನು ಹಿಂದೆ ಅಧಿಕಾರದಲ್ಲಿದ್ದಾಗ ಈಗ ನೀವು ಮಾಡುತ್ತಿರುವ ಅನ್ಯಾಯಗಳಂತೆ ನಾವೇನೂ ಮಾಡಿಲ್ಲ ಎನ್ನುವುದರಲ್ಲಿ ನೀವೇನೂ ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ. ಶ್ರೀಮಾನ್ ಡಿ.ವಿ. ಗುಂಡಪ್ಪನವರು ಅಧಿಕಾರಕ್ಕೆ ಬರುವ ಜನರಿಗಾಗಿ ಈ ಮಾತನ್ನು ಇಲ್ಲಿ ಹೇಳಿದ್ದಾರೆ. ಶ್ರೀಮಾನ್ ಡಿ.ವಿ.ಜಿ. ಅವರು ಬರೆದಿರುವ ಪುಸ್ತಕದಲ್ಲಿ ಬಹಳ ತತ್ವಗಳು ಇವೆ. ಅವುಗಳನ್ನು ಅರಿತುಕೊಂಡು ರಾಜ್ಯಭಾರ ಮಾಡುವವರು ಅಧಿಕಾರ ನಡೆಸಬೇಕು.

ನಾನು ಅಧಿಕಾರದಲ್ಲಿ ಇದ್ದಾಗ ಇದರಂತೆಯೇ ಕಾರ್ಯಗಳನ್ನು ಮಾಡಿದ್ದೇನೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ನಿಮಗೆ ಉದಾಹರಣೆ ಕೊಡಬೇಕಾದರೆ, ಇವೊತ್ತು ನಿಮ್ಮ ಸ್ಥಿತಿ ಏನಾಗಿದೆ ಅನ್ನುವುದಕ್ಕೆ ನಿಮ್ಮ ಹಣಕಾಸಿನ ಪರಿಸ್ಥಿತಿಯನ್ನೇ ನೋಡಿ. 550 ಕೋಟಿ 12 ಲಕ್ಷ ರೂಪಾಯಿಗಳಷ್ಟನ್ನು ಮೊದಲನೇ ಪಂಚವಾರ್ಷಿಕ ಯೋಜನೆಯಿಂದ ಇಲ್ಲಿಯವರೆಗೆ ಖರ್ಚುಮಾಡಬೇಕೆಂದು ಇತ್ತು. ಮೊದಲನೆ ಯೋಜನೆಯಾದಾಗ ನಾನು ಮಂತ್ರಿಯಾಗಿದ್ದುದ್ದು. ಆಗ ಕೇವಲ 40 ಕೋಟಿ 50 ಲಕ್ಷದಷ್ಟು ಹಣವನ್ನು ಮಾತ್ರ ಖರ್ಚು ಮಾಡಿದ್ದೇವೆ. ಈಗ 533 ಕೋಟಿ 67 ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡತಕ್ಕ ಅವಕಾಶವನ್ನು ಪ್ಲಾನಿಂಗ್ ಕಮಿಷನ್‌ನವರು ನಿಮಗೆ ಒದಗಿಸಿ ಕೊಟ್ಟಿದ್ದಾರೆ. ನಾಲ್ಕು ಪಂಚವಾರ್ಷಿಕ ಯೋಜನೆಗಳಲ್ಲಿಯೂ ಇಷ್ಟು ಹಣ ಖರ್ಚುಮಾಡಿ ಇನ್ನೂ ಏನೂ ಉಳಿದಿಲ್ಲ ಎನ್ನುವುದನ್ನು ನೀವು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ಹಣ ಖರ್ಚು ಮಾಡುವುದು ಅಷ್ಟೇ ಅಲ್ಲ, ಪಂಚವಾರ್ಷಿಕ ಯೋಜನೆಯಲ್ಲಿ ಯಾವುದಕ್ಕೆ ಹಣ ಇಲ್ಲ ಅಂದರೆ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಎಲ್ಲ ಸೇರಿ ಒಟ್ಟು 754 ಕೋಟಿ 35 ಲಕ್ಷದಷ್ಟು ಹಣವನ್ನು ಈ ದೇಶದಲ್ಲಿ ಸುಮಾರು ಇಪ್ಪತ್ತು ವರ್ಷಗಳ ಅವಧಿಯಲ್ಲಿ ಖರ್ಚು ಮಾಡಿದ್ದೀರಿ. ಇದಕ್ಕೆ ನಮ್ಮ ಮಾನ್ಯ ಹಣಕಾಸಿನ ಸಚಿವರು ಹೇಳುತ್ತಿರುವುದು ನಾವು ದೇಶಕ್ಕೆ ಆಸ್ತಿ ಮಾಡಿದ್ದೇವೆ ಮತ್ತು ಆ ಆಸ್ತಿಗಳ ಪಟ್ಟಿಯನ್ನೂ ಕೊಟ್ಟಿದ್ದೇವೆ ಎಂದು ಸುಮಾರು 450 ಕೋಟಿಯವರೆಗನ ಒಂದು ಪಟ್ಟಿಯನ್ನು ನಮ್ಮ ಎದುರಿಗೆ ಇಟ್ಟಿದ್ದಾರೆ. ಇಂಥಹ ಆಸ್ತಿಗಳನ್ನು ನಮ್ಮ ಮುಂದಿಟ್ಟರೆ ಬಹುಶ: ದೇಶಕ್ಕೆ ಬಹಳ ಅಧಿಕವಾಗಿ ಹಣವನ್ನು ಖರ್ಚುಮಾಡಿ ಜನಕ್ಕೆ ಉಪಕಾರ ಮಾಡಿದ ಹಾಗಾಯಿತು ಎಂದು ಅವರು ಭಾವಿಸಿರಬಹುದು. ಏನೇನು ಆಸ್ತಿಗಳಿವೆ ಅವು ಯಾವಯಾವ ಮಟ್ಟದಲ್ಲಿವೆ, ಅವನ್ನು ದೇಶದ ಜನತೆಯ ಮುಂದೆ ಇಟ್ಟಿಲ್ಲ. ತಾವು ಯೋಜನೆ ಮಾಡಿದ್ದೀರಿ, ನನಗೆ ಗೊತ್ತಿರುವ ಹಾಗೆ ನೀವು ಮಾಡಿರುವ ಆಸ್ತಿಗಳಲ್ಲಿ ಅದರ ಡಿಪ್ರಿಸಿಯೇಷನ್ ಹೋಗಿ ಅದರ ಬೆಲೆ ಎಷ್ಟು ಹಾಗೂ ನೀವು ಬುಕ್ಕುಗಳಲ್ಲಿ ತೋರಿಸಿರುವ ಲೆಕ್ಕಗಳೆಷ್ಟು ಇವನ್ನೆಲ್ಲಾ ಲೆಕ್ಕಹಾಕಿ ನೋಡಬಹುದು. ಇದನ್ನೆಲ್ಲ ತೋರಿಸಲು ಸರಿಯಾದ ಅಂಕಿ ಅಂಶಗಳನ್ನು ನಮ್ಮ ಮುಂದಿಟ್ಟರೆ ಆಗ ಇದನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿತ್ತು. ನೀವು ಮಾಡಿರತಕ್ಕ ಸಾಲದ ಹೊರೆಯನ್ನು ನೋಡಿ...

ಶ್ರೀಮಾನ್ ರಾಚಯ್ಯನವರಿಗೆ ಒಂದು ಸಾರಿ ನೀವು ಮುಖ್ಯಮಂತ್ರಿಗಳು ಆಗಬೇಕು ಎಂದು ನಾನು ಹೇಳಿದ್ದೆ, ಅದರಿಂದ ಅವರೂ ಲೋನ್‌ಗಳನ್ನು ಮಾಡುತ್ತಿರುವ ವಿಧವನ್ನು ನೋಡುವುದಕ್ಕಾಗಿ ನಾನು ಇಲ್ಲಿ ಹೇಳುತ್ತಿದ್ದೇನೆ. 1956ನೇ ಇಸ್ವಿ ಅಕ್ಟೋಬರ್ 31ನೇ ತಾರೀಖು ನಿಮಗೆ ಪಬ್ಲಿಕ್ ಡೆಟ್ಸ್ ಎಷ್ಟು ಇತ್ತು ಎಂದರೆ ರೂ. 2,51,18,000. ಈಗ ಇದೇ ಪಬ್ಲಿಕ್ ಡೆಟ್ಸ್ ಎಷ್ಟಿದೆ ಎಂದರೆ 61,81,63,000 ರೂಪಾಯಿ ಇದೆ. ನೀವು ಮೊದಲು ಸಾಲ ಕೇಂದ್ರದಿಂದ ತೆಗೆದುಕೊಂಡಿದ್ದು ರೂ. 39,60,000 ಇತ್ತು. ಈಗ ಕೇಂದ್ರ ಸರ್ಕಾರದಿಂದ ತೆಗೆದುಕೊಂಡಿರುವುದು ಇಲ್ಲಿಯವರೆಗೆ ರೂ. 42,8,37,000 ಹೊಸರಾಜ್ಯ ಆಗುವುದಕ್ಕೆ ಮುನ್ನ ಇಷ್ಟು ಇತ್ತು. ಆಮೇಲೆ ಈಗ ನೀವು ಎಷ್ಟು ಮಾಡಿದ್ದೀರಿ ಎಂದರೆ 257,23,72,999 ರೂಪಾಯಿ ಕೇಂದ್ರದವರು ಕೊಡುತ್ತಾರೆಂದು ಮಾಡಿದ್ದೀರಿ. ಇದರಲ್ಲಿ ಓವರ್‌ಡ್ರಾಫ್ಟ್ ಎಷ್ಟಿದೆ ಅಂದರೆ ರೂ. 14,57,84,000 ಇದ್ದದ್ದು ಇಂದು ನಿಮ್ಮ ಕಾಲದಲ್ಲಿ 23,35,42000 ರೂಪಾಯಿ ಎಂದರೆ ಒಟ್ಟು ಈಗ 63,77,29,000 ರೂಪಾಯಿ ಸಾಲ ಇದ್ದರೆ ಇಲ್ಲಿ ನೀವು ತೋರಿಸಿರುವುದು ಪಟ್ಟಿಯಂತೆ ರೂ. 342,80,38,000 ಸಾಲ ಇದೆ.

ಇದರ ಬಗ್ಗೆ ಏರಿಯಾವೈಸು ಫಿಗರ್ಸ್ ಕೊಡಬೇಕೆಂದು ಕೇಳಿದುದಕ್ಕೆ ಮಾನ್ಯ ಹಣಕಾಸು ಸಚಿವರು ನಮಗೆ ಒದಗಿಸಿ ಕೊಟ್ಟಿದ್ದಾರೆ. ಇದಕ್ಕಾಗಿ ಅವರನ್ನು ವಂದಿಸುತ್ತೇನೆ. ಪಬ್ಲಿಕ್ ಡೆಟ್ ಪರ್ ಕ್ಯಾಪಿಟ ಅಂದರೆ ಒಂದು ತಲೆಗೆ ಆಗ ಸಾಲ 68.6 ರೂಪಾಯಿ ಸಾಲ ಇತ್ತು. ಇದು ಈಗ ಎಷ್ಟು ಆಗಿದೆ ಅಂದರೆ ಒಂದು ತಲೆಗೆ 138.1 ರೂ. ಮೈಸೂರು ರಾಜ್ಯದ ಪ್ರತಿಯೊಬ್ಬ ಪ್ರಜೆಯ ತಲೆಯ ಮೇಲೆ ಇಷ್ಟು ಸಾಲ ಹೊರಿಸಿದ್ದೀರಿ. ಪರ್ ಕ್ಯಾಪಿಟ 200 ಪರ್ಸೆಂಟಿಗೆ ಹೆಚ್ಚಾಗಿ ಈ ಸಾಲ ಈ ಕಾಲದಲ್ಲಿ ಮಾಡಿದ್ದೀರಿ. ನಮ್ಮ ಮುಂದೆ ಯಾವರೀತಿ ಹಣಕಾಸಿನ ಪರಿಸ್ಥಿತಿ ಇಟ್ಟಿದೀರಿ ಈಗ ಅದನ್ನು ನೋಡೋಣ. ನಮ್ಮ ಉತ್ಪತ್ತಿಯಲ್ಲಿ ಆರನೇ ಒಂದು ಭಾಗದಷ್ಟು ಬಡ್ಡಿ ಕೊಡುತ್ತಿದ್ದೀರಿ. ಇದು ಶೇ. 16 ಪರ್ಸೆಂಟ್ ಆಗುತ್ತದೆ. ಇದಲ್ಲದೆ ಕೇಂದ್ರ ಸರ್ಕಾರದಿಂದ ಬಂದಿರುವ ಗ್ರಾಂಟ್ ಸಬ್ಸಿಡಿ ವಗೈರೆ ವಗೈರೆ ಬಿಟ್ಟು ಇದು ಆಗಿರುವುದು. ಇದು ವರ್ಷೇ ವರ್ಷೇ ಇನ್ನೂ ಹೆಚ್ಚಾಗುತ್ತಿದೆ.

ಸರ್ಕಾರಕ್ಕೆ ನಾನು ಒಂದು ಪ್ರಶ್ನೆ ಕೇಳುತ್ತೇನೆ. ಇಷ್ಟೊಂದು ಹಣ ಇದು ಯಾರ್‍ಯಾರಿಗೆ ಸೇರುತ್ತದೆ ಎಂದು ಕೇಳುತ್ತೇನೆ. ಮೈಸೂರು ರಾಜ್ಯದಲ್ಲಿ ನೂರಕ್ಕೆ 80ರಷ್ಟು ಜನ ವ್ಯವಸಾಯ ಮಾಡತಕ್ಕಂಥವರು. ಉಳಿದವರು ಬಾಕಿ ಕಸುಬಿನವರು ಇದ್ದಾರೆ. ಕೇವಲ ಒಂದು ಪರ್ಸೆಂಟ್ ಮಾತ್ರ ಸರ್ಕಾರಿ ನೌಕರರಿದ್ದಾರೆ. ಈ ಹಣದ ಲೆಕ್ಕಹಾಕಿ ನೋಡಿದರೆ ಒಂದು ಪರ್ಸೆಂಟ್ ಇರತಕ್ಕಂಥ ಸರಕಾರಿ ನೌಕರರಿಗೆ ನೀವು ಉತ್ಪತ್ತಿಯಲ್ಲಿ 30 ಪರ್ಸೆಂಟ್ ಖರ್ಚು ಮಾಡುತ್ತಿದ್ದೀರಿ. ನಿಮ್ಮ ಉತ್ಪತ್ತಿಯಲ್ಲಿ ಒಂದು ಪರ್ಸೆಂಟ್ ಇರತಕ್ಕಂಥ ಈ ಜನರಿಗಾಗಿ 30 ಪರ್ಸೆಂಟ್ ಹಣ ಹೋದರೆ ಉಳಿದ

ಹಣವನ್ನು 99 ಪರ್ಸೆಂಟ್ ಜನ ಹಂಚಿಕೊಳ್ಳುತ್ತಾರೆ. 100ಕ್ಕೆ 80 ಭಾಗ ಇರುವ ರೈತರು ಉಳಿದ ಉತ್ಪತ್ತಿಯಿಂದ ಬರುವಂಥ ಹಣದಿಂದ ಸಂತೋಷಪಟ್ಟುಕೊಂಡು ನಮ್ಮ ಕೆಲಸ ಮುಂದುವರೆಸಬೇಕಾಗಿದೆ. ಇದು ನಿಮ್ಮ ಸುಖೀರಾಜ್ಯದ ಕಲ್ಪನೆಯೆ? ನಿಜವಾದ ಸುಖೀರಾಜ್ಯ ಅಂದರೆ ನೆತ್ತಿ ಇದ್ದವನು ಓದಬೇಕು, ಹೊಟ್ಟೆ ಇದ್ದವನು ಉಣಬೇಕು, ರಟ್ಟೆ ಇದ್ದವನು ದುಡಿಯುವ ಅವಕಾಶ ಇರಬೇಕು ಅದು ನನ್ನ ಸುಖೀರಾಜ್ಯದ ಕಲ್ಪನೆ.

ನಿಮ್ಮ ರಾಜ್ಯದಲ್ಲಿ ರಟ್ಟೆ ಇದ್ದವರಿಗೆ ಕೆಲಸ ಕೊಡುವುದು ಸಾಧ್ಯವಿದೆಯೆ? ಹೊಟ್ಟೆತುಂಬಾ ಊಟ ಕೊಡುವುದಕ್ಕೆ ಸಾಧ್ಯವಿದೆಯೆ? ನೂರಕ್ಕೆ ನೂರು ಜನರಿಗೆ ಪ್ರಾಥಮಿಕ ವಿದ್ಯಾಭ್ಯಾಸ ಕೊಡುವ ದಾರಿ ಮಾಡಿಕೊಂಡಿದ್ದೀರಿ, ಆದರೆ ಅಂಕಿಅಂಶಗಳ ಪ್ರಕಾರ 1961ರ ಜನಗಣತಿಗೂ 1971ರ ಜನಗಣತಿಗೂ ಹೋಲಿಸಿ ನೋಡಿದರೆ ಪ್ರಾಥಮಿಕ ಶಿಕ್ಷಣ ಓದುತ್ತಿರುವವರು ಮೊದಲಿಗಿಂತಲೂ ಕಡಿಮೆಯಾಗುತ್ತಿದ್ದಾರೆ ಎಂದು ಸ್ಪಷ್ಟವಾಗಿ ಒಂದು ರಿಪೋರ್ಟ್‌ನಲ್ಲಿ ತಿಳಿಸಿದ್ದಾರೆ. ಇಷ್ಟೇ ಅಲ್ಲದೆ ಬಂದಿರುವ ದುಡ್ಡು ಎಲ್ಲಿ ಹೋಯಿತು ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಇದು ಬಹಳ ಮುಖ್ಯವಾದ ಪ್ರಶ್ನೆ ಈ ದುಡ್ಡನ್ನು ಅನ್ಯಾಕ್ರಾಂತವಾಗಿ ಹಂಚಿದ್ದೀರಿ. ಯಾರಿಗೆ ಹಂಚಿದ್ದೀರಿ? ರೈತರಿಗಂತೂ ಹಂಚಲಿಲ್ಲ. ಯಾರು ನಿಮ್ಮ ಹಿಂದೆ ಇದ್ದುಕೊಂಡು ಬಾಲಬಡುಕಾಗಿದ್ದಾರೋ, ನಮಗೆ ಸಲಾಮು ಹೊಡೆಯುವಂಥ ಜನರಿಗೆ ಮತ್ತು ಕೆಲವರು ಸಹಕಾರ ಸಂಘ ಮಾಡಿಕೊಂಡಿದ್ದೇವೆ ಎಂದು ಯಾರು ಹೇಳಿಕೊಂಡಿದ್ದಾರೋ ಅಂಥಾ ಸಂಸ್ಥೆಗಳಿಗೆ ಹಣ ಹಂಚಿದ್ದೀರಿ.

**"ಅಲಿಬಾಬಾ ಮತ್ತು 40 ಕಳ್ಳರು"** ಎಂಬಂಥ ಸಹಕಾರಿ ಸಂಘಗಳು ಹೋಗಬೇಕು. ಅಲ್ಲದೆ ಕೆಲವು ಕೈಗಾರಿಕೆಗಳೂ ಇವೆ. ನಾನು ಈ ಹಿಂದೆ ಅನೇಕ ಸಲ ಕೇಳಿದ ಹಾಗೆ ಇವತ್ತಿನ ದಿವಸ **ಈ ರಾಜ್ಯ ನೇಗಿಲಯೋಗಿಯ ಕೈಯಲ್ಲಿಲ್ಲ**. ಈ ರಾಜ್ಯ ಇರುವುದು ತಕ್ಕಡಿ ಹಿಡಿಯುವ ವ್ಯಾಪಾರಸ್ಥರ ಕೈಯಲ್ಲಿ ಇದೆ. ಈ ರಾಜ್ಯದಲ್ಲಿ ಉಳಿದವರನ್ನು ಬಿಟ್ಟು ಇವರ ಹೊಟ್ಟೆತುಂಬಾ ತುಪ್ಪ ದೊರೆಯುವ ಹಾಗೆ ಅನುಕೂಲ ಮಾಡಿಕೊಳ್ಳಲು ಇವರು ಹೊರಟಿದ್ದಾರೆ. ಕರೆಯುವ ಎಮ್ಮೆಯ ಕೆಚ್ಚಲು ಕೊಯ್ದರೂ ಚಿಂತೆ ಇಲ್ಲ ಇವರ ಹೊಟ್ಟೆಗೆ ತುಂಬಾ ಹಾಲು ಬೇಕು. ಇದು ನಮ್ಮ ರಾಜ್ಯದ ದುರ್ದೈವ. ನಮ್ಮ ರಾಜ್ಯದ ಮಂತ್ರಿಗಳು ಇದಕ್ಕೆ ಸಂಪೂರ್ಣವಾಗಿ ಜವಾಬ್ದಾರರು. ಇದರಲ್ಲಿ ಯಾವ ಅನುಮಾನವೂ ಇಲ್ಲ.

ರಾಜ್ಯದ ದುಡ್ಡನ್ನು 100ಕ್ಕೆ 80 ಭಾಗ ಇರತಕ್ಕ ಜನರಿಗೆ ಕೊಡದೆ ಈ ರೀತಿ ಅನ್ಯಾಕ್ರಾಂತವಾಗಿದೆ. ಈ ರೀತಿ ಹಣ ಪೋಲಾಗಿದೆ. ಬಡ ಜನರನ್ನು ಬೀದಿ ಭಿಕಾರಿಗಳನ್ನಾಗಿ ಮಾಡಿ ತಮಗೆ ಬೇಕಾಗಿರುವ ಕೆಲವರನ್ನು ಲಕ್ಷಾಧೀಶರನ್ನಾಗಿ ಮಾಡುವ ಅವಕಾಶ ಮಾಡಿಕೊಟ್ಟಿದ್ದೀರಿ.

**ಶ್ರೀ ಎಸ್. ಡಿ. ಕೋತಾವಳೆ (ಸಂಕೇಶ್ವರ) :** ಮಾನ್ಯ ಸದಸ್ಯರು ಇಷ್ಟೊಂದು ಧೀರ್ಘವಾಗಿ ಹೇಳುವುದನ್ನು ಕೇಳಿದರೆ ಒಂದು ಸ್ಪಷ್ಟೀಕರಣ, ವಿವರ ಬೇಕು ಅನ್ನಿಸುತ್ತದೆ. ಸಹಕಾರಿ ಸಂಘಗಳು ಹಾಗೂ ಕೈಗಾರಿಕೆಗಳಿಗೆ ಎಷ್ಟು ಮೊತ್ತ ಮುಂಗಡವಾಗಿ ನೀಡಿದ್ದಾರೆ ಎಂಬುದನ್ನು ಹೇಳಲು ಸಾಧ್ಯವೆ? ಏಕೆಂದರೆ ಇವೆಡರ ಬಗ್ಗೆಯೇ ವಿವರಣೆ ಇದೆ.

**ಶ್ರೀ ಎಚ್. ಸಿದ್ದವೀರಪ್ಪ** :ಮಾನ್ಯ ಸದಸ್ಯರುಗಳು ನಮಗೆ ವಿತರಿಸಿರುವ ಪುಸ್ತಕದಕಡೆ ಗಮನ ಹರಿಸಬೇಕೆಂದು ವಿನಂತಿಸುತ್ತೇನೆ. ಈ ಸರ್ಕಾರ ವಿತರಿಸಿರುವ 45 ಪುಟಗಳ ಬಜೆಟ್ ಪುಸ್ತಕದಲ್ಲಿ ಅನೇಕ ಸಹಕಾರಿ ಸಂಘಗಳು ಹಾಗೂ ಕೈಗಾರಿಕೆಗಳಿಗೆ ನೀಡಿರುವ ಮುಂಗಡದ ವಿವರಗಳಿವೆ.

**ಶ್ರೀ ಎಸ್. ಡಿ. ಕೋತಾವಳೆ :** ಮಾನ್ಯ ಸದಸ್ಯರ ಬಳಿ ಇದರ ಬಗ್ಗೆ ಮಾಹಿತಿ ಇದ್ದರೆ ಎಷ್ಟು ಸಹಕಾರ ಸಂಘಗಳಿಗೆ ಮುಂಗಡವಾಗಿ ಹಣ ಕೊಟ್ಟಿದ್ದಾರೆ ಎಂಬುದನ್ನು ಹೇಳಲು ಸಾಧ್ಯವೆ?

**ಶ್ರೀ ಎಚ್. ಸಿದ್ದವೀರಪ್ಪ** : ದುರದೃಷ್ಟವಶಾತ್ ನಾನು ಯಾವುದೇ ಅಂಕಿ ಸಂಖ್ಯೆಯನ್ನೂ ಕಡಿತ ಮಾಡಿಲ್ಲ, ನನ್ನ ಬಳಿ ಸಂಪೂರ್ಣ ಅಂಕೆಅಂಶ ಇದೆ.

**ಸಿ.ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ) :** ಮಾನ್ಯ ಸದಸ್ಯರುಗಳಿಗೆ ಅಗತ್ಯವಾಗಿ ಬೇಕಾದ ಅಂಕಿ ಅಂಶಗಳ ವಿವರಗಳನ್ನು ನೀಡಬೇಕಾದ್ದು ಸರ್ಕಾರದ ಜವಾಬ್ದಾರಿ.

* * *

# ಸೊಂಟ ಮುರಿದ ಕೈಗಾರಿಕೆಗಳಿಗೆ ಹಣ

## 1968

**ಶ್ರೀ ಎಚ್. ಸಿದ್ದವೀರಪ್ಪ** : ಈ ಸಮಯದಲ್ಲಿ ಪ್ರಸ್ತಾವಿಕವಾಗಿ ಹೇಳಬೇಕಾದುದು ಅಂದರೆ, ಮಾನ್ಯ ಸದಸ್ಯರಾದ ಕೋತಾವಳೆಯವರು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಸದಸ್ಯರೂ ಹಾಗೂ ಅದರ ಅಧ್ಯಕ್ಷರಾಗಿ ಸರಕಾರದ ಆಡಳಿತದಲ್ಲಿ ನಡೆಯುವ ಅನ್ಯಾಯಗಳನ್ನು ಒಂದೊಂದೇ ಎತ್ತಿ ತೋರಿಸಿದ್ದಾರೆ. ಆದುದರಿಂದ ಅವರಿಗೆ ಈ ಸಭೆಯಲ್ಲಿ ವಂದನೆಗಳನ್ನು ಹೇಳಿದರೆ ಅದು ತಪ್ಪಗಲಾರದು. ಅಲ್ಲಿ ಇರತಕ್ಕಂಥ ಅಂಶಗಳನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅವರ ರಿಪೋರ್ಟ್ ನಾನು ಓದಿದ್ದೇನೆ. ಸರಕಾರದವರು ಈ ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ಚರ್ಚೆ ಮಾಡಲು ಒಂದು ದಿವಸ ಕೊಡಬೇಕು. ಅದರಲ್ಲಿ ಅನೇಕ ಅಂಶಗಳು ಬಂದಿವೆ. ಅವುಗಳನ್ನು ನೋಡಿ ಹೇಳಬೇಕಾಗಿದೆ.

ಇನ್ನೊಂದು ಅಂಶ ಹೇಳದೇ ವಿಧಿ ಇಲ್ಲ. ಸರಕಾರದ ಹಣ ಎಲ್ಲ ವ್ಯಾಪಾರಗಾರರು, ಕೈಗಾರಿಕೆಯವರು ತಿಂದು ಹಾಕಿ ಬಿಟ್ಟರು ಎಂದು ಹೇಳಲಾಗುತ್ತಿದೆ. ಒಂದುಕಡೆ ಕಂಟ್ರಾಕ್ಟರುಗಳ ಕೂಟ, ಇನ್ನೊಂದುಕಡೆ ಕೈಗಾರಿಕೆಗಳವರ ಕಾಟ, ನಿನ್ನೆಯ ದಿವಸ ಎಂ.ಎಸ್.ಕೆ ಮಿಲ್ಸ್ ವಿಚಾರ ಬಂದಾಗ್ಗೆ ನನ್ನ ಮಾನ್ಯ ಸ್ನೇಹಿತರು ಕೈಗಾರಿಕೆ ಮಂತ್ರಿಗಳಿಗೆ ಒಂದು ಮಾತು ಹೇಳಿದರು. 1967 ಜುಲೈ 21ನೇ ತಾರೀಖಿನ ದಿನ ಶಾರ್ಟ್ ನೋಟೀಸ್ ಪ್ರಶ್ನೆ ಬಂದಾಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚುಮಾಡಿದರೂ ಏನೇನೂ ಮಾಡುವುದಕ್ಕಾಗುವುದಿಲ್ಲ. ಇದನ್ನು ತೆಗೆದುಕೊಳ್ಳುವುದಿಲ್ಲ ಎಂದು ಬಹು ಸ್ಪಷ್ಟವಾಗಿ ಹೇಳಿಬಿಟ್ಟರು. ಈಗ ಏನು ಮಾಡಿದ್ದಾರೆ? ಅದು ಭೀತಿ ಉಂಟು ಮಾಡುತ್ತಿದೆ. ಇದು ಒಂದು ಸ್ಯಾಂಪಲ್ ಅಷ್ಟೆ.

ಮಂಡ್ಯ ಪೇಪರ್ ಮಿಲ್ಸ್ ವಿಚಾರ ಇನ್ನೂ ನಿಗೂಢವಾಗಿದೆ. ಹಿಂದೆ ಕೈಗಾರಿಕೆಗಳಿಗೆ ಕೊಟ್ಟಿರುವಂಥ ಹಣದಿಂದ ಯಾವ ರೀತಿಯಿಂದಲೂ ಉದ್ಧಾರವಾಗಲಿಕ್ಕೆ ಅವಕಾಶವಿಲ್ಲ. ಸೊಂಟ ಮುರಿದಂಥ ಕೈಗಾರಿಕೆಗಳಿಗೆ ಹಣ ಕೊಟ್ಟಿದ್ದಾರೆ.

ಚೇತರಿಸಿಕೊಳ್ಳದಂಥ ಕೈಗಾರಿಕೆಗಳಿಗೆ ಹಣ ಕೊಟ್ಟಿದ್ದಾರೆ. ಚೇತರಿಸಿಕೊಳ್ಳುವಂಥಾ ಕೈಗಾರಿಕೆಗಳಿಗೆ ಚೈತನ್ಯ ಕೊಟ್ಟಿಲ್ಲ, ಹಣ ಕೊಟ್ಟಿಲ್ಲ. ಐವತ್ತು ಲಕ್ಷದಿಂದ ಹಿಡಿದು ಒಂದು ಕೋಟಿ, ಎರಡು ಕೋಟಿ, ಮೂರು ಕೋಟಿ ಹಣವನ್ನು ಇವುಗಳಿಗೆ ಸುರಿದಿದ್ದಾರೆ. ಲಕ್ಷ ರೂಪಾಯಿ ಎಂದರೆ ಇವರಿಗೆ ಅಲಕ್ಷ್ಯವಾಗಿದೆ. ಲಕ್ಷಕ್ಕೆ ಬೆಲೆ ಇಲ್ಲ. ಎಂ.ಎಸ್.ಕೆ. ಮಿಲ್ ಒಂದು ಉದಾಹರಣೆ ಸಾಕು ಇವರನ್ನು ಇಂಪೀಚ್ ಮಾಡುವುದಕ್ಕೆ. ಇಂಥಾ ಅವ್ಯವಹಾರದ ದುರ್ನೀತಿ ನೋಡಿದರೆ ಇವರು ಮಂತ್ರಿ ಮಂಡಲದ ಈ ಜಾಗದಲ್ಲಿ ಕುಳಿತುಕೊಳ್ಳಲು ಲಾಯಕ್ ಇಲ್ಲ. ಮತ್ತು ದೇಶ ಇವರನ್ನು ನಂಬಲಿಕ್ಕೆ ಆಗುವುದಿಲ್ಲ. ಇವರ ಕೈಯಲ್ಲಿ ದೇಶದ ಅಧಿಕಾರವನ್ನು ಕೊಡುವುದಕ್ಕೆ ನಾವು ನಂಬಲಿಕ್ಕಾಗುವುದಿಲ್ಲ. ಆದುದರಿಂದ ನಾವು ಹೇಳಬೇಕಾಗುತ್ತದೆ, ಪ್ರಜೆಗಳು ಯಾರು ಇವರಿಗೆ ತೆರಿಗೆಗಳನ್ನು ಕೊಡಕೂಡದು ಎಂದು, ಒಂದುಕಡೆ ನೋಡಿದರೆ ಇವರ ಆಡಳಿತದಲ್ಲಿ ತೆರಿಗೆಯು ಯಾವತ್ತೂ ಕಡಿಮೆಯಾಗಿಲ್ಲ. ಪ್ರತ್ಯಕ್ಷ ತೆರಿಗೆ ಮತ್ತು ಅಪ್ರತ್ಯಕ್ಷ ತೆರಿಗೆ ವರ್ಷೇ ವರ್ಷೇ ಹೆಚ್ಚುತ್ತಿದೆ. ಅನೆಕ್ಷರ(ಎ) ನೋಡಿದರೆ ಪ್ರತಿಯೊಂದು ತೆರಿಗೆಯ ಬಾಬಿನಲ್ಲಿಯೂ 1962 – 63ನೇ ಇಸವಿಯಿಂದ 1968–69ರವರೆಗೂ ಪ್ರೋಗ್ರೇಸಿವ್ ಇನ್‌ಕ್ರೀಸ್ ಇದೆಯೇ ಹೊರತು ಯಾವ ತೆರಿಗೆಯನ್ನೂ ಜನ ಕಡಿಮೆ ಕೊಟ್ಟಿಲ್ಲ. ಆದ್ದರಿಂದ ಇಂಥವರ ಕೈಯಲ್ಲಿ ಯಾರು ಹಣವನ್ನು ಸರಿಯಾಗಿ ಇಡತಕ್ಕ ಯೋಗ್ಯತೆ ಹೊಂದಿಲ್ಲ. ಇಂಥವರಿಗೆ ಜನ ತೆರಿಗೆಗಳನ್ನು ಕೊಡಬಾರದು ಎಂದು ನಾವು ಹೇಳಬೇಕಾಗುತ್ತದೆ.

ಮಾನ್ಯ ಮಂತ್ರಿಗಳು ಹೇಳಿದರು, ರೈತರ ಬಳಿ ಬಹಳ ದುಡ್ಡಿದೆ, ಅದರ ಪ್ರತಿಫಲವನ್ನು ನಾವು ಪಡೆಯುತ್ತೇವೆ, ಅವರಿಂದ ಸಾಲ ಪಡೆಯುತ್ತೇವೆಂದು ಹೇಳಿದರು. ಅಷ್ಟು ದಡ್ಡತನಕ್ಕೆ ರೈತರು ಯಾರೂ ಹೋಗುವುದಿಲ್ಲ. ಇವರಿಗೆ ದುಡ್ಡು ಕೊಡಕೂಡದು ಎಂದು ನಾವು ರೈತರಿಗೆ ಹೇಳುತ್ತೇವೆ. ಇವರಿಗೆ ಕೊಟ್ಟರೆ ಯಾವ ದೃಷ್ಟಿಯಿಂದಲೂ ಒಳ್ಳೆಯದಾಗುವುದಿಲ್ಲ. ಹಣ ಕೊಡಬೇಡಿ ಎಂದು ನಿರ್ದೇಶನಗಳನ್ನಿಟ್ಟು ನಾವು ಹೇಳಬೇಕಾಗುತ್ತದೆ. ಅವರು ಏನಾದರೂ ಅರ್ಥ ಮಾಡಿಕೊಳ್ಳಲಿ, ನಾವು ಹೇಳುವುದನ್ನು ಹೇಳಲೇಬೇಕು. ಕಾರಣ ಏನೆಂದರೆ ನಾಳೆ ದಿವಸ – ಬಹಳ ಹಿಂದೆಯೇ ಹೇಳಿದ್ದೇನೆ – ಇಂದಲ್ಲ ನಾಳೆ, ನಾಳೆಯಲ್ಲ ನಾಡಿದ್ದು, 10 ವರ್ಷಗಳಾಗಲಿ, 20 ವರ್ಷಗಳಾಗಲೀ ಈ ಆಡಳಿತದ ಕಾಲದಲ್ಲಿ ಆಗಿರುವ ದುರಾಡಳಿತದ ವಿಚಾರಣೆ ಈ ದೇಶದಲ್ಲಿ ಆಗಿಯೇ ಆಗುತ್ತದೆ; ಯಾರೂ ಅನುಮಾನಪಡಬೇಕಾಗಿಲ್ಲ, ನಾವು ಈ ಭೂಲೋಕದಲ್ಲಿರಲಿ, ಮರ್ತ್ಯಲೋಕದಲ್ಲಿರಲಿ. ಎಲ್ಲೇ ಇರಲಿ ಈ ವಿಚಾರಣೆ ನಡೆಯುತ್ತದೆ. ಅದಕ್ಕೇ ನಾನು ಮುಖ್ಯಮಂತ್ರಿಗಳಿಗೆ ಹೇಳಿದೆ, ಯಾರು ಯಾರು ಈ ದೇಶದಲ್ಲಿ ಮಂತ್ರಿಗಳಾಗಿದ್ದಾರೆ ಅವರ ಮೇಲೂ ನೀವು ವಿಚಾರಣೆ ಪ್ರಾರಂಭಮಾಡಿ. ನಾನು ಮಂತ್ರಿಯಾಗಿದ್ದ ಮೊದಲ ಮಂತ್ರಿಮಂಡಲದಿಂದಲೇ ಈ ಕೆಲಸ ಪ್ರಾರಂಭವಾಗಲಿ ಎಂದು ಹೇಳಿದ್ದೆ.

**ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು):** ಮಾಡಬೇಕು.

**ಶ್ರೀ ಎಚ್. ಸಿದ್ದವೀರಪ್ಪ :** ಮಾಡುತ್ತೇವೆಂದು ಹೇಳಿ. ನಾನೂ ವಿಚಾರಣೆ ಮಾಡಿಸಿಕೊಳ್ಳುತ್ತೇನೆಂದು ಹೇಳಿದ್ದೇನೆ.

**ಶ್ರೀ ಎಸ್. ನಿಜಲಿಂಗಪ್ಪ :** ನೀವು ಮಾಡಿಸಿಕೊಳ್ಳುವುದಾದರೆ ಆಗಬಹುದು.

**ಶ್ರೀ ಎಚ್. ಸಿದ್ದವೀರಪ್ಪ :** ನನ್ನಿಂದಲೇ ಮೊದಲು ಮಾಡಿ, ನೀವು ನಂತರ ಮಾಡಿಸಿಕೊಳ್ಳಿ.

**ಶ್ರೀ ಡಿ.ಎಸ್. ಗೌಡ (ದೇವನಹಳ್ಳಿ) :** ಮರ್ತ್ಯಲೋಕದೊಳಗೆ ಇದ್ದೀರಲ್ಲ.

**ಶ್ರೀ ಎಚ್. ಸಿದ್ದವೀರಪ್ಪ :** ಎಲ್ಲಿ ಹೋದರೂ ವಿಚಾರಣೆ ಆಗಲೇಬೇಕು. ಬ್ರಿಟೀಷ್ ಚರಿತ್ರೆಯಲ್ಲಿ **"ಫೇಮಸ್ ಟ್ರಯಲ್ಸ್ ಆಫ್ ಇಂಗ್ಲೆಂಡ್"** (FAMOUS TRAILS OF ENGLAND) ಎನ್ನುವ ಗ್ರಂಥ ಇದೆ. ಒಬ್ಬ ಮನುಷ್ಯ ಸತ್ತು 40 – 50 ವರ್ಷಗಳ ಮೇಲೆ ಆದರೂ ವಿಚಾರಣೆ ಆದ ಉದಾಹರಣೆಗಳಿವೆ. ಆ ರೀತಿ ವಿಚಾರಣೆ ನಡೆದು "ಗಿಲ್ಟಿ ಆರ್ ನಾಟ್ ಗಿಲ್ಟಿ" ಎಂದು ಫೈಂಡಿಂಗ್ಸ್ ಕೊಟ್ಟಿರುವುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ಬೇಕಾದರೆ ಆ ಪುಸ್ತಕ ಕೊಡುತ್ತೇನೆ ಓದಿ ನೋಡಲಿ.

ಆದುದರಿಂದ ನಾನು ಹೇಳುತ್ತೇನೆ, ಒಂದಲ್ಲ ಒಂದು ದಿವಸ ಇವರು ಮಾಡಿರುವುದೆಲ್ಲ ಬಯಲಿಗೆ ಬಂದೇ ಬರುತ್ತದೆ. ಅದನ್ನು ಮುಚ್ಚಿಡುವುದಕ್ಕಾಗುವುದಿಲ್ಲ. ಇಂದಲ್ಲ ನಾಳೆಯಲ್ಲ ನಾಡಿದ್ದು ಬಯಲಿಗೆ ಬಂದೇ ಬರುತ್ತದೆ. ಈಗ ಇವರು ಏನೋ ತಿಳಿದಿರಬಹುದು, ಕಾಂಗ್ರೆಸ್‌ನ್ನು ಮತ್ತೆ ಎಲ್ಲಾ ಕಡೆಗೂ ತರುತ್ತೇವೆಂದು ಹೊರಟಿದ್ದೀರಲ್ಲ, ನೀವು ಎಲ್ಲಾ ಕಡೆಗೂ ತನ್ನಿ ಬೇಡವೆನ್ನುವುದಿಲ್ಲ – ಆದರೆ ನೀವು ಎಲ್ಲಾಕಡೆಗೂ ತರುವುದರೊಳಗಾಗಿ ಎಲ್ಲಿರುತ್ತೀರಿ ಎನ್ನುವುದನ್ನು ಸ್ವಲ್ಪ ಅರ್ಥ ಮಾಡಿಕೊಂಡರೆ ಬಹುಶ: ಆ ಮಾತನ್ನು ಹೇಳುವುದು ಕಡಿಮೆಯಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ನಿಮಗೆ ಎಷ್ಟು ಹಕ್ಕು ಇದೆಯೋ ಬಾಳಿ ಬದುಕಲಿಕ್ಕೆ ಎಲ್ಲರಿಗೂ ಅಷ್ಟೇ ಹಕ್ಕು ಇದೆ.

**ಶ್ರೀ ಎಸ್. ನಿಜಲಿಂಗಪ್ಪ :** ಸಾಯುವುದು ಬಿಡುವುದು ನಮ್ಮ ಕೈಯಲ್ಲಿಲ್ಲ.

**ಶ್ರೀ ಎಚ್. ಸಿದ್ದವೀರಪ್ಪ :** "ಮರಣವೇ ಮಹಾನವಮಿ" ಎಂದು ನಾವು ತಿಳಿದುಕೊಂಡಿದ್ದೇವೆ. ನಿಮ್ಮ ಕೈಯಲ್ಲಿ ಬದುಕುವುದಕ್ಕಿಂತ ಸತ್ತರೇ ಅದು ಮೋಕ್ಷ ಎನ್ನತಕ್ಕ ಒಂದು ಸ್ಥಿತಿಗೆ ನಾವೇ ಬಂದಿದ್ದೇವೆ.

**ಶ್ರೀ ಎಸ್. ನಿಜಲಿಂಗಪ್ಪ :** ಸಾಯಬೇಡಿ, ಇರಿ.

* * *

# ಎಂ. ಎಸ್. ಕೆ ಮಿಲ್ ಕರ್ಮಕಾಂಡ

**ಶ್ರೀ ಎಚ್. ಸಿದ್ದವೀರಪ್ಪ :** ಎಂ. ಎಸ್. ಕೆ ಮಿಲ್ ವಿಚಾರ ........ ಇದು 1884ರಲ್ಲಿ ಪ್ರಾರಂಭವಾದ ಮಿಲ್. ಅನೇಕ ಸಾರಿ ಮುಚ್ಚಿ ಅನೇಕ ಸಾರಿ ತೆರೆದ ಮಿಲ್. ನಮ್ಮ ಸರಕಾರದವರು ಇದರಲ್ಲಿ ಕೈ ಹಾಕಿದ್ದು ಮೊದಲ ತಪ್ಪು. ಈ ಬಗ್ಗೆ ನಾವು ಇವರಿಗೆ ಚಾರ್ಜ್ ಮಾಡುತ್ತೇವೆ. ಕೇಂದ್ರದಲ್ಲಾಗಲಿ, ಬೇರೆ ರಾಜ್ಯಗಳಲ್ಲಾಗಲೀ, ಇಂಥ ಮಿಲ್ಲುಗಳನ್ನು ವಹಿಸಿಕೊಳ್ಳುವುದಕ್ಕಾಗಿ ಇಂದು ಕೇಂದ್ರ ಸರ್ಕಾರದವರು ಕಾನೂನನ್ನು ಮಾಡಿದ್ದಾರೆ, ಅದು ತಮಗೂ ಗೊತ್ತಿರಬಹುದು, ಅಂಥ ಕಾನೂನಿದ್ದರೂ ನೀವು ಏಕೆ ಹುತ್ತದಲ್ಲಿ ಕೈ ಇಟ್ಟು ಹಾವಿನಿಂದ ಕಚ್ಚಿಸಿಕೊಳ್ಳುವುದಕ್ಕೆ ಹೋದಿರಿ? ಅಂಥಾದ್ದು ಏನಿತ್ತು?

ಇವರು ಹೀಗೆ ಮಾಡಿರುವ ಉದ್ದೇಶವಾದರೂ ಇಷ್ಟೆ: ಅಧ್ಯಕ್ಷರೇ, ಆ ಮಿಲ್ ಆಗಲೇ ಕೊನೆ ಉಸಿರು ಎಳೆದುಬಿಟ್ಟಿತ್ತು. ಇನ್ನು ಉಸಿರೇ ಇರಲಿಲ್ಲ. ಇವರಿಗೆ ಬೇಕಾದ ಯಾರೋ ಕೆಲವರು ಷೇರು ಹೋಲ್ಡರುಗಳೋ, ಕೆಲವರು ರಾಜಕಾರಣಿಗಳೋ ಎಂದು ಕಾಣುತ್ತದೆ, ಅವರಿಗೆ ಹಣ ಕೊಟ್ಟರು. ಆ ಷೇರು ಹೋಲ್ಡರುಗಳ ದುಡ್ಡು ಭರ್ತಿ ಮಾಡಿದರು. ಇದು ಎಷ್ಟೊಂದು ಶೋಚನೀಯವಾಗಿದೆ ಎಂದರೆ ಇವರು ಕಾಲಕಾಲಕ್ಕೆ ಒಂದೊಂದು ನಿಲುವನ್ನು ತೆಗೆದುಕೊಂಡಿದ್ದಾರೆ. ಆಮೇಲೆ ಅದನ್ನು ತೆಗೆದುಕೊಳ್ಳಬೇಕಾದರೂ ಬಹಳ ಜನ ಹೇಳಿದ್ದಾರೆ, ಕೇಂದ್ರ ಸರ್ಕಾರದ ಸಚಿವರೂ ಹೇಳಿದ್ದಾರೆ, ಟೆಕ್ಸ್‌ಟೈಲ್ ಕಮೀಷನರ್ ಒಂದು ವರದಿ ಕೊಟ್ಟಿದ್ದಾರೆ, ನ್ಯಾಷನಲ್ ಇಮ್ಪ್ರೂವ್‌ಮೆಂಟ್ ಡೆವೆಲಪ್‌ಮೆಂಟ್ ಕೌನ್ಸಿಲ್ ಎಂಬ ಕೇಂದ್ರ ಸರ್ಕಾರದ ಒಂದು ಹಣಕಾಸಿನ ಸಂಸ್ಥೆ ಇದೆ. ಅವರೂ ಸಹ ಇದು ಎಂದೂ ಉದ್ಧಾರವಾಗುವ ಮಿಲ್ ಅಲ್ಲ; ಎಂದೂ ಉದ್ಧಾರವಾಗಲಿಕ್ಕೆ ಅವಕಾಶ ಇಲ್ಲ, ಆದ್ದರಿಂದ ಇದಕ್ಕೆ ಯಾರೂ ಕೂಡ ಹಣ ಕೊಡಕೂಡದು ಎನ್ನುವ ದೃಷ್ಟಿಯಿಂದ ಒಂದು ತೀರ್ಮಾನ ತೆಗೆದುಕೊಂಡರು. ಆದರೂ ಕೂಡ ನೀವು ಅದನ್ನು ಹೇಗೆ ತೆಗೆದುಕೊಂಡಿರೋ ಏನು ಮಾಡಿದಿರೋ ಪರಮಾತ್ಮನೇ ಬಲ್ಲ.

ಮೊದಲು ಇದಕ್ಕೆ 11 ಲಕ್ಷ ರೂಪಾಯಿಗಳನ್ನು ಕೊಟ್ಟಿರಿ, ಆವಾಗಲೇ ಅದನ್ನು ಲಿಕ್ವಿಡೇಷನ್‌ಗೆ ತಂದಿದ್ದರೆ ಒಂದು ಯೋಚನೆಯೂ ಇರಲಿಲ್ಲ, ಇದ್ದಕ್ಕಿದ್ದ ಹಾಗೆ ಏನು ಫಿಟ್ಸ್ ಬಂತೋ 60 ಲಕ್ಷ ರೂಪಾಯಿಗಳನ್ನು ಒಂದೇ ಗಂಟಿನಲ್ಲಿ ಕೊಟ್ಟಿರಿ. ಇವರು ತೆಗೆದುಕೊಂಡಮೇಲೆ 65 ಲಕ್ಷ ರೂಪಾಯಿ ಆಸ್ತಿ ಆ ಮಿಲ್‌ನಲ್ಲಿತ್ತು. ಆದರೂ ಇವರು ಒಂದು ಸೋಗು ಹಾಕಿಕೊಂಡು ಹಿಂದುಳಿದ ಪ್ರದೇಶ, ಎರಡು ಸಾವಿರ ಜನರಿಗೆ ಕೆಲಸವಿಲ್ಲದೆ ನೌಕರಿ ಬಿಡಬೇಕಾಗುತ್ತದೆ ಎನ್ನುತ್ತ ಆ ಮಿಲ್ ತೆಗೆದುಕೊಂಡರು. ಆದರೆ ಇವರ ಕೈಲಿ ಅದನ್ನು ನಡೆಸುವುದಕ್ಕಾಗಲಿಲ್ಲ. ಕೊನೆಗೆ ಕೆಲಸಗಾರರಿಗೆ 21 ಲಕ್ಷ ರೂಪಾಯಿಗಳನ್ನು ಕೊಟ್ಟು ಅವರನ್ನೆಲ್ಲ ಮನೆಗೆ ಕಳುಹಿಸಿ ಮಿಲ್ಲನ್ನು ಮುಚ್ಚಿದರು.

ಇಂಥ ಮಿಲ್ಲುಗಳನ್ನು ತೆಗೆದುಕೊಳ್ಳುವುದಕ್ಕಾಗಿಲ್ಲ. ಈ ದೇಶದಲ್ಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಲಿ ಸುಮಾರು ನೂರಾರು ಮಿಲ್ಲುಗಳನ್ನು ಎಲ್ಲಿ ರೋಗ ಬಂದಿದೆ ಅವುಗಳನ್ನು ತೆಗೆದುಕೊಳ್ಳಲು ಕೇಂದ್ರ ಸರ್ಕಾರದವರು ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಅಲ್ಲಿ ಒಂದು ಆಕ್ಟ್ ಇದೆ. ಆದರೂ ಕೂಡ ಈ ಭೂಪರು ಈ ಮಿಲ್ಲನ್ನು ತೆಗೆದುಕೊಂಡ ಮೇಲೆ ಇದ್ದಕ್ಕಿದ್ದ ಹಾಗೆ ಏನು ಬಂತೋ ಏನೋ ಮತ್ತೊಬ್ಬ ಡೈರೆಕ್ಟರನ್ನು ಅವರ ಆಡಳಿತಕ್ಕೆ ನೇಮಿಸಿದರು. ಶ್ರೀ ಸುಬ್ರಮಣ್ಯಂ ಎನ್ನುವವರನ್ನು ಚೇರ್‌ಮನ್ ಆಗಿ ನೇಮಕ ಮಾಡಿದರು. ಅವರು ನಮ್ಮಲ್ಲಿರುವ ಒಬ್ಬ ಅತ್ಯಂತ ಒಳ್ಳೆಯ ಅಧಿಕಾರಿಗಳು. ಅವರನ್ನು ತೆಗೆದುಕೊಂಡು ಹೋಗಿ ನ್ಯಾಷನಲ್ ಪೇಪರ್ ಮಿಲ್‌ಗೆ ಹಾಕಿದ್ದಾರೆ. ಅದೂ ಒಂದು ದಿವಾಳಿ ಸಂಸ್ಥೆ. ಒಂದುಕಡೆ ಅದು, ಇನ್ನೊಂದುಕಡೆ ಈ ಮಿಲ್ಲು ಅವರಿಗೆ ಕೊಟ್ಟು ಎರಡು ಕಡೆಯಿಂದಲೂ ಅವರ ಕುತ್ತಿಗೆ ಉರುಲು ಬೀಳಲಿ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಮಲಬಾರ್ ಫರ್ಟಿಲೈಸರ್ಸ್ ಇನ್ನೂ ಏನೇನೋ ಸಂಸ್ಥೆಗಳಿವೆ. ವಾಣಿಜ್ಯ ಕಾರ್ಯದರ್ಶಿ ಹಾಗೂ ಹಣಕಾಸು ಕಾರ್ಯದರ್ಶಿ ಅವರು ಇದರಲ್ಲಿ ಇದ್ದಾರೆ. ಇದರ ಜೊತೆಗೆ ಇನ್ನಿಬ್ಬರು ಮಹನೀಯರನ್ನು ಇದರಲ್ಲಿ ತಾಂತ್ರಿಕ ಡೈರೆಕ್ಟರುಗಳೆಂದು ಹಾಕಿದ್ದಾರೆ. ಶ್ರೀ ಸಿ.ಕೆ. ಕೇಸರಿವಾಲ ಮತ್ತು ಎಂ.ಕೆ. ಕೇಸರಿವಾಲ ಇವರೇ ಆ ಇಬ್ಬರು ಡೈರೆಕ್ಟರುಗಳು. ಮೈಸೂರಿನಲ್ಲಿರುವ, ಕೃಷ್ಣರಾಜೇಂದ್ರ ಮಿಲ್‌ನ ಸೋಲ್ ಪ್ರೊಪ್ರೈಟರ್ ಆಗಿದ್ದಾರೆ ಈ ಇಬ್ಬರು ಮಹಾನೀಯರು. ಇವರಿಗೆ ಈ ಮಿಲ್ಲಿನ ಆಡಳಿತವನ್ನು ಕೊಟ್ಟಿದ್ದಾರೆ. ಇವರಿಗೆ ಹಣಕಾಸಿನ ಜವಾಬ್ದಾರಿ ಏನೂ ಇಲ್ಲ. ಮ್ಯಾನೇಜ್ ಮಾಡುವುದಕ್ಕೆ ಕೂತಿದ್ದಾರೆ.

ಬಂಡವಾಳವಿಲ್ಲದ ಬಡಾಯಿ, ಏನು ಬೇಕಾದರೂ ಮಾಡಬಹುದು. ಬಾರಾಖೂನ್ ಮಾಫ್ ಎನ್ನುವಂತೆ ಏನು ಬೇಕಾದರೂ ಮಾಡಬಹುದು. ಈ ಮಿಲ್ಲು ನಡೆಸುವುದಕ್ಕೆ ಮತ್ತೆ 50 ಲಕ್ಷ ರೂಪಾಯಿ ಬೇರೆ ಕೊಡುತ್ತಾರಂತೆ. ನಮಗೆ ನಾರ್ಮಲ್ ರೆವಿನ್ಯೂನಲ್ಲಿ ಬಂದ ಹಣದಲ್ಲಿ ಇವರಿಗೆ ಕೊಟ್ಟಿದ್ದರೆ ಹಾಳಾಗಿಹೋಗಲಿ. ಮನೆಯಲ್ಲಿದ್ದ ದುಡ್ಡನ್ನು ಕೊಟ್ಟಿದ್ದಾರೆ ಎನ್ನಬಹುದಾಗಿತ್ತು. ಆದರೆ ಸಾಲ ಮಾಡಿ

ಕೊಟ್ಟಿದ್ದಾರೆ. ಮತ್ತು ಸಿಂಡಿಕೇಟ್ ಬ್ಯಾಂಕ್‌ನಲ್ಲಿ 40 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಸಾಲ ಮಾಡಿ ಕೊಟ್ಟಿದ್ದಾರೆ.

ಈ ಸಾಲದ ಬಡ್ಡಿಯನ್ನು ನಾವು ನಮ್ಮ ವಂಶೀಕರು, ನಮ್ಮ ಮಕ್ಕಳು ನಮ್ಮ ಮುಂದಿನ ಪೀಳಿಗೆಗಳು ತೀರಿಸಬೇಕು. ಇದಕ್ಕೆ ನಿಮಗೆ ಆತ್ಮವಿದ್ದರೆ, ಇಂಗ್ಲೀಷಿನಲ್ಲಿ ಹೇಳುವ ಹಾಗೆ ಕಾನ್ಸಿಯೆಸ್ ಎನ್ನತಕ್ಕದ್ದು ಇದ್ದರೆ, ನಿಮ್ಮ ಹೃದಯವನ್ನು ಮುಟ್ಟಿ ನೋಡಿಕೊಳ್ಳಿ. ಇಂಥವನ್ನು ಮಾಡಿದ್ದಾರೆ. ನಿನ್ನೆ ದಿವಸ ಒಂದು ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಹಣಕಾಸಿನ ಸಚಿವರು .... " ಐ ರೆಪ್ಯುಡಿಯೇಟ್ ದಿ ಇನ್ನೂನಿಯೇಷನ್ ಆಫ್ ದಿ ಮೆಂಬರ್" ಎಂದು ಹೇಳಿದರು. ಏನು ಕಾರಣವಿತ್ತು ಇಂಥ ಕೆಲಸವನ್ನು ಮಾಡಲಿಕ್ಕೆ? ಇದೇರೀತಿ ಮಂಡ್ಯ ಪೇಪರ್ ಮಿಲ್ ಇದೆ. ಬಾಕಿ ಕಡೆಯೂ ಇದೆ. ಇಂಥಾದ್ದು ಬೇಕಾದಷ್ಟು ಇದೆ. ಒಂದುಕಡೆಗೆ ನೌಕರದಾರು ಸಂಖ್ಯೆಯನ್ನು ಹೆಚ್ಚಿಗೆ ಮಾಡುತ್ತ ಹೋಗಿ ಹಣ ಖರ್ಚು ಮಾಡುತ್ತಾ, ಇನ್ನೊಂದು ಕಡೆಗೆ ಇಂಥ ದುರ್ವ್ಯವಹಾರ ಮಾಡುತ್ತಿದ್ದೀರಿ.

ಸೂಕ್ಷ್ಮವಾಗಿ ಹೇಗೋ ಕೆಲಸ ಮಾಡಿಕೊಂಡು ಹೋಗೋಣ ಎಂದರೆ ಇನ್ನು ಮುಂದೆ ಹಾಗೆ ಮಾಡಲು ಜನರು ಬಿಡುವುದಿಲ್ಲ. ಹೂವಿನ ಹಾಸಿಗೆಯಂತಿಲ್ಲ ದೇಶದ ರಾಜ್ಯಭಾರ. ಇಂದು ದೇಶದಲ್ಲಿ ಹೊಸ ವಾತಾವರಣ ಸೃಷ್ಟಿಯಾಗಿದೆ. ಅದಕ್ಕೆ ತಕ್ಕಂತೆ ರಾಜ್ಯಭಾರದ ವಿಧಾನದಲ್ಲಿ ಬದಲಾವಣೆ ಮಾಡದಿದ್ದರೆ ಕಷ್ಟವಾಗುತ್ತದೆ. ಜನರಿಗೆ ಬಹಳ ಜಿಗುಪ್ಸೆಯಾಗಿದೆ. ಬೇಜಾರಾಗಿದೆ. ನಿಮಗಿರುವುದು ಸಂಖ್ಯಾಬಲ, ಆದ್ದರಿಂದ ಯಾರುತಾನೆ ನಮ್ಮನ್ನೇನು ಮಾಡಬಲ್ಲರು ಎಂದು ನೀವು ಭಾವಿಸಿರಬಹುದು. ಆದರೆ ನೀವು ಕಾಲಕ್ಕೆ ತಕ್ಕಂತೆ ನಿಮ್ಮ ನೀತಿಯನ್ನು ಬದಲಾವಣೆ ಮಾಡಿಕೊಳ್ಳದೇ ಹೋದರೆ ನಿಮಗೆ ತೊಂದರೆ ತಪ್ಪಿದ್ದಲ್ಲ. ಇಂದು ಹುಚ್ಚುರಾಜ್ಯ ಹುಚ್ಚು ರೀತಿಯಿಂದ ನಡೆಯುತ್ತಿದೆ. ಅದು ಎಲ್ಲಿಗೆ ಹೋಗುತ್ತದೆ, ಎಲ್ಲಿಗೆ ನಿಲ್ಲುತ್ತದೆ ಎಂಬುದನ್ನು ನೋಡಬೇಕು.

ಈ ಸಂದರ್ಭದಲ್ಲಿ ಪ್ಲೇಟೋ ಮಹಾಶಯ ಶತಶತಮಾನಗಳ ಹಿಂದೆ ಹೇಳಿದ ಮಾತುಗಳನ್ನು ಸಭೆಯ ಗಮನಕ್ಕೆ ತರುತ್ತೇನೆ :

"ಪ್ರಭುತ್ವ ನಡೆಸುವವರು ವಿರಕ್ತರೂ, ತತ್ವದರ್ಶಿಗಳೂ ಆಗಿರಬೇಕು. ಅದರಲ್ಲಿ ವೈರಾಗ್ಯವೂ ತತ್ವ ವಿವೇಕವೂ ಇರದಿದ್ದಲ್ಲಿ ಅವರು ಆಳುವ ರಾಜ್ಯದ ಪಾಡು ಸಮುದ್ರದ ನಡುವೆ ಬಿರುಗಾಳಿಯಲ್ಲಿ ಹೆಂಡ ಕುಡುಕನ ಕೈಗೆ ಸಿಕ್ಕಿದ ಹಡಗಿನ ಪಾಡಾದೀತು" ಎಂದು ಆತ ಎಚ್ಚರಿಕೆ ನೀಡಿದ್ದಾನೆ. ಈ ದಿವಸ ರಾಜ್ಯದ ಆಡಳಿತದ ವಿಚಾರ ಬೀದಿಗೆ ಬರುತ್ತಿದೆ. ಒಂದು ವಿಚಾರ ನಿರ್ಭಯವಾಗಿ ಹೇಳಬಹುದು, ಮೈಸೂರಿನ ಜನರು ಒಳ್ಳೆಯವರು. ಅವರು ಒಳ್ಳೆಯವರಲ್ಲದಿದ್ದರೆ ಎಂಟು ದಿವಸ ಕೂಡ ನಿಮ್ಮನ್ನು ಕುರ್ಚಿಯಮೇಲೆ ಕುಳಿತುಕೊಳ್ಳುವುದಕ್ಕೆ ಬಿಡುತ್ತಿರಲಿಲ್ಲ. ನಮ್ಮ ದೇಶದ ಜನರು

ದೇವರು ಧರ್ಮದಲ್ಲಿ ನಂಬಿಕೆ ಉಳ್ಳವರು. ಅವರ ಮುಂದೆ ನೀವು ಮಾಡುವ ಅನ್ಯಾಯವನ್ನು ಬಿಚ್ಚಿಟ್ಟರೆ ರಸ್ತೆಯಲ್ಲಿ ಹೋಗುವುದಕ್ಕೆ ಸಹ ನಿಮ್ಮನ್ನು ಬಿಡುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲರು ಬಹಳ ಗಟ್ಟಿಗರು. ಅವರ ಕೆಪಾಸಿಟಿ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಅವರು ಯಾವಾಗ ಕೇಳಿದರೂ ಒಂದು ವಿಚಾರ ಹೇಳುತ್ತಾರೆ: "ಹಣವಿಲ್ಲದೆ ಏನೂ ಮಾಡಲಾಗುವುದಿಲ್ಲ'. ಮಾನ್ಯ ಹಣಕಾಸಿನ ಮಂತ್ರಿಗಳು ಅನೆಕ್ಷರ್(ಡಿ)ನಲ್ಲಿ ಒಂದು ವಿಚಾರ ತಿಳಿಸಿದ್ದಾರೆ. ಅದರಲ್ಲಿ ಹೇಳಿರುವುದನ್ನು ಲೆಕ್ಕಾಹಾಕಿ ನೋಡಬೇಕು. **"ಪ್ರಾವಿಸನ್ ಇನ್ ರೆಸ್ಪೆಕ್ಟ್ ಆಫ್ ಇರಿಗೇಷನ್ ವರ್ಕ್ಸ್"** ಏನಿದೆ ಎಂದು ತಿಳಿಸಿದ್ದಾರೆ. ಅದರ ಪ್ರಕಾರ 37 ಪ್ರಾಜೆಕ್ಟುಗಳಿಗೆ 1966 – 67ರಲ್ಲಿ 6ಕೋಟಿ 39 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ ಇದನ್ನು ಲೆಕ್ಕಹಾಕಿ. ಉದಾಹರಣೆಗೆ ಕೃಷ್ಣ ಮೇಲ್ದಂಡೆ ಯೋಜನೆಗೆ 19 ಲಕ್ಷ 51 ಸಾವಿರ ರುಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅವರು ಈಗ ಕೆಲಸ ಮಾಡುತ್ತಿರುವ ವೇಗದಲ್ಲಿ ಮುಂದುವರೆದರೆ ಕೆಲವು ಪ್ರಾಜೆಕ್ಟುಗಳು 150 ವರ್ಷಗಳಾದರೂ ಕೂಡ ಸಂಪೂರ್ಣವಾಗಿ ಮುಗಿಯುವುದಿಲ್ಲ. ಇದನ್ನು ನೋಡಿದರೆ ಇವರಿಂದ ಈ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ಕಂಡು ಬರುತ್ತದೆ. ಬಹುಶಃ ಕನ್ನಂಬಾಡಿ ಕಟ್ಟೆ ಕಟ್ಟಲು ಟಿಪ್ಪು ಸುಲ್ತಾನ್ ತಳಪಾಯ ಹಾಕಿದ. ಆದರೆ ಕಟ್ಟೆಯ ಕೆಲಸ ಎಂದಿಗೆ ಪೂರೈಸಬೇಕೆಂಬುದನ್ನು ಅಲ್ಲಾನಿಗೆ ಬಿಟ್ಟಿದ್ದೇನೆ ಎಂದು ಆತ ಹೇಳಿದ್ದಾನೆ. ಹಾಗೆ ನೀವು ಮಾಡುವ ಕೆಲಸಗಳನ್ನು ಕೃಷ್ಣ ಪರಮಾತ್ಮನಿಗೆ ಅಥವಾ ಭಗವಾನ್ ಬಸವೇಶ್ವರನಿಗೆ ಬಿಟ್ಟರೆ ನೀವು ಅದನ್ನು ಯಾವಾಗ ಬೇಕಾದರೂ ಪೂರೈಸಬಹುದು. ಹಾಗೆ ಮಾಡಿ ಪೂರೈಸುವುದು ಮಂತ್ರಿಗಳ ಕೆಲಸವಲ್ಲ ಎಂದು ಹೇಳುವಂತಿದೆ ನೀವು ಮಾಡುತ್ತಿರುವುದು, ಇನ್ನೊಂದು ಉದಾಹರಣೆ ಹೇಳುವುದಾದರೆ ವಿದ್ಯುಚ್ಛಕ್ತಿ ನಮ್ಮ ದೇಶದಲ್ಲಿ ಬೇಕಾದಷ್ಟಿದೆ, ಧಂಡಿಯಾಗಿದೆ. ಸರಿಯಾದ ಮಂತ್ರಿವರ್ಗವಿದ್ದರೆ ಹೆಚ್ಚಿನ ಕಳಕಳಿಯಿಂದ ಎಲ್ಲ ಹಳ್ಳಿಗಳಿಗೂ ಕೂಡ ಇದುವರೆವಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬಹುದಾಗಿತ್ತು. ಎಲ್ಲವೂ ಕೂಡ ಜನರ ಹಣ.

ಆದರೆ ನಮ್ಮಲ್ಲಿನ ವಿದ್ಯುಚ್ಛಕ್ತಿಯ ಸುಖ ಮದ್ರಾಸಿನವರು ಅನುಭವಿಸುತ್ತಿದ್ದಾರೆ. ಹಡೆದ ಮಕ್ಕಳು ದುಡಿದ ಬಂಗಾರ ಅವರಿಗೆ ಸಿಕ್ಕಿದೆ. ನಮ್ಮ ದೇಶದಲ್ಲಿ ಜನರ ಹಣ ಖರ್ಚುಮಾಡಿ ಉತ್ಪತ್ತಿ ಮಾಡಿದ ವಿದ್ಯುಚ್ಛಕ್ತಿಯನ್ನು ಮೈಸೂರು ರಾಜ್ಯದ ಜನರಿಗೆ ಕೊಡದೆ ಮದ್ರಾಸಿನವರಿಗೆ ಕೊಡುತ್ತಿದ್ದಾರೆ. ಇದು ಒಬ್ಬರು ಹೇಳಿದಹಾಗೆ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎಂಮ ಹೇಳಿದಂತಿದೆ. ಒಂದೊಂದು ಜಿಲ್ಲೆಗೆ ಎರಡು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕಾಗಿ ಹೋದ ಸಾರಿ ವಿದ್ಯುಚ್ಛಕ್ತಿ ಬೋರ್ಡಿಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿರಿ.

ಕಾಮರಾಜರು ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಮದ್ರಾಸಿನಲ್ಲಿ ಪ್ರತಿಯೊಂದು ಹಳ್ಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿದರು.

ಆದರೆ ನಮ್ಮಲ್ಲಿ ಕೇಳಿದರೆ ಹಾಗೆ ಮಾಡುವುದಕ್ಕೆ ಬರುವುದಿಲ್ಲ, ಹಣವಿಲ್ಲ ಎಂದು ಹೇಳುತ್ತಾರೆ. ಜನರಿಗೆ ಹಣ ಕೊಡಲು ಸರಕಾರದಲ್ಲಿ ನಂಬಿಕೆಯಿಲ್ಲ. ನಮ್ಮಲ್ಲಿರುವ ವಿದ್ಯುಚ್ಛಕ್ತಿ ಮದ್ರಾಸು, ಬೊಂಬಾಯಿ ಮುಂತಾದ ರಾಜ್ಯಗಳಿಗೆ ಕೊಡಲ್ಪಡುತ್ತಿದೆ. ಹೊರ ದೇಶಗಳಿಗೆ, ಬೇರೆ ರಾಜ್ಯಗಳಿಗೆ ಹೋಗುತ್ತೀರಿ, ಅಲ್ಲಿಗೆ ಹೋಗಿ ಏನು ಮಾಡಿದ್ದೀರಿ? ನಾವು ಹುಡುಗರಾಗಿರುವಾಗ ನಡೆಯುತ್ತಿದ್ದುದು ಅಧ್ಯಕ್ಷರಿಗೆ ಗೊತ್ತಿರಬಹುದು, ಮದ್ರಾಸು ನೋಡಿ, ಡೆಲ್ಲಿ ನೋಡಿ, ಬೊಂಬಾಯಿ ನೋಡಿ ಎಂದು ಕೆಲವರು ಪಿಕ್ಚರ್ ತೋರಿಸುತ್ತಿದ್ದರು. ಹಾಗೆ ನಮ್ಮ ಕಾಂಗ್ರೆಸ್‌ನವರು ತೋರಿಸುತ್ತಿದ್ದಾರೆ. ಇದನ್ನು ಹೇಳುವುದಕ್ಕೆ ಬಹಳ ವ್ಯಸನವಾಗುತ್ತದೆ. ಇದೊಂದುಕಡೆ ಆದರೆ ಇನ್ನೊಂದುಕಡೆ ಕಂಟ್ರಾಕ್ಟರುಗಳ ವಿಚಾರವಿದೆ, ಅದನ್ನು ಹಿಂದೆ ಹೇಳಿದ್ದೇನೆ, ಮುಂದೆ ಸಹಾ ಹೇಳುತ್ತೇನೆ. ಕಂಟ್ರಾಕ್ಟರುಗಳಿಗೆ ಹಣ ಇಲ್ಲದಿದ್ದರೆ ಕೊಡುತ್ತಾರೆ.

ಒಂದು ಉದಾಹರಣೆ ಹೇಳುತ್ತೇನೆ : ಭದ್ರಾವತಿ ಕಬ್ಬಿಣದ ಕಾರ್ಖಾನೆ ವಿಚಾರವನ್ನು ವ್ಯಸನದಿಂದ ಹೇಳುತ್ತೇನೆ. ಆ ಕಾರ್ಖಾನೆ ನಮಗೆ ಕಾಮಧೇನು ಕಲ್ಪವೃಕ್ಷ ಇದ್ದಹಾಗಿದೆ. ಸರಿಯಾದ ರೀತಿಯಲ್ಲಿ ಅದನ್ನು ನಡೆಸಿದ್ದರೆ ವರ್ಷಕ್ಕೆ 10 ಕೋಟಿ ರೂಪಾಯಿಗಳ ಉತ್ಪತ್ತಿ ಬರುತ್ತಿತ್ತು. ಅದಕ್ಕೆ ಅವಕಾಶವಿತ್ತು. ಅಲ್ಲಿ ಸ್ಪೆಷಲ್ ಸ್ಟೀಲ್ ತಯಾರು ಮಾಡುತ್ತಾರೆ. ಅದನ್ನು ಇಂಡಿಯಾದಲ್ಲಿ "ಹಿಂದೂಸ್ತಾನ್ ಸ್ಟೀಲ್ಸ್ ಭದ್ರಾವತಿ ಕಬ್ಬಿಣದ ಕಾರಖಾನೆ ಮತ್ತು ಖಾಸಗಿ ಒಡೆತನದಲ್ಲಿರುವ ಮಹೇಂದ್ರ – ಮಹೇಂದ್ರ ಎಂಬುವರು ಮಾತ್ರ ತಯಾರು ಮಾಡುತ್ತಾರೆ. ಬೇರೆ ಯಾರೂ ಇದನ್ನು ತಯಾರು ಮಾಡುವುದಿಲ್ಲ. ಇದಕ್ಕೆ ಒಳ್ಳೆಯ ಮಾರ್ಕೆಟ್ ಇದೆ. ಜನರು ಮುತ್ತಿಗೆ ಹಾಕಿ ಇದನ್ನು ತೆಗೆದುಕೊಂಡು ಹೋಗುತ್ತಾರೆ. ಒಂದೇ ಫರ್ಮ್‌ಗೆ ಇದನ್ನು ಮಾರಾಟ ಮಾಡಲಾಗುತ್ತಿದೆ. ಮುಂಬಯಿನ ಕಿಲಿಕ್ಸ್ ಇಂಡಸ್ಟ್ರೀಸ್‌ಗೆ ಇದನ್ನು ಸೋಲ್ ಏಜನ್ಸಿ ಕೊಡಲು ಯೋಚಿಸಿದ್ದಾರೆ. ಇಡೀ ಇಂಡಿಯಾದಲ್ಲಿ ಅವರೊಬ್ಬರಿಗೆ ಮಾತ್ರ ಇದನ್ನು ಮಾರಲು ಏಜೆನ್ಸಿ ಕೊಡಲಿಚ್ಛಿಸಿದ್ದಾರೆ. ಇದರಿಂದ ವರ್ಷಕ್ಕೆ ಅವರಿಗೆ ಒಂದು ಕೋಟಿ ರೂಪಾಯಿ ಕಮೀಷನ್ ಬರುವುದು. ಇದನ್ನು ಒಬ್ಬರ ಕೈಗೆ ಕೊಡುವುದಕ್ಕೆ ಕಾರಣವೇನು? ಲೆಕ್ಕಾಹಾಕಿ ತೋರಿಸುತ್ತೇನೆ:

ಹಣಕಾಸಿನ ಸಚಿವರು ಹುಸಿನಗೆ ನಗುತ್ತಿದ್ದಾರೆ. ಇದೇಕೆ ಹೀಗೆ ಮಾಡಿದ್ದಾರೆ? ಕೆಲವರು ಕಂಟ್ರಾಕ್ಟರುಗಳು ಕಮೀಷನ್ ಏಜಂಟರು. ಇನ್ನೊಬ್ಬರು ಕಾಂಗ್ರೆಸ್‌ಗೆ ಸಂಬಂಧಪಟ್ಟವರಿಗೆ ಸ್ಪನ್ ಪೈಪ್ಸ್, ಫೌಂಡರಿ ಪೈಪ್ಸ್‌ಗೆ ಸಂಬಂಧಪಟ್ಟ ಕೆಲಸ ವಹಿಸಿದ್ದಾರೆ. ಕೆಲವುಕಡೆ ಮುಟ್ಟ ಏಜೆನ್ಸಿ ಕೊಟ್ಟಿದ್ದಾರೆ. ಇನ್ನು ಕೆಲವುಕಡೆ ಮುಖ್ಯಮಂತ್ರಿಗಳ ಸ್ನೇಹಿತರಿಗೆ ಕೊಟ್ಟಿದ್ದಾರೆ. ಅವರು ಜಗದ್ಗುರುಗಳ ಹಾಗೆ ಕೊಡುತ್ತಾರೆ. ಒಂದು ಉದಾಹರಣೆ ಹೇಳುತ್ತೇನೆ. ನನ್ನ ಬಳಿ ಒಂದು ಕಾಗದ ಇದೆ. ಅದನ್ನು ಓದಿ ಹೇಳಬೇಕೆಂಬ ಆಸೆ. ಮುಖ್ಯಮಂತ್ರಿಗಳಿಗೆ ಬರೆದುದು ಅದು. ಅದು ಈ ರೀತಿ ಇದೆ:

"ಶ್ರೀ ಮಾನ್ಯ ಹಿರಿಯರಿಗೆ ನಮಸ್ಕಾರಗಳು.

ತರುವಾಯ ಇಲ್ಲಿಗೆ ಬಂದಮೇಲೆ ಭದ್ರಾವತಿಯಲ್ಲಿ ವಿಚಾರಿಸಲಾಗಿ ಯಾವ ಸಮಾಚಾರವೂ ಬಂದಿಲ್ಲವೆಂದು ವಿಷಯ ತಿಳಿಯಿತು. ಆದರೆ ತಾವು ಅನೇಕ ಕೆಲಸ ಕಾರ್ಯಗಳಲ್ಲಿ ನಿರತರಾಗಿರುವುದರಿಂದ ಸಾಧ್ಯವಾಗಿಲ್ಲ, ಯತ್ನವಿಲ್ಲ. ಆದರೆ 4 ತಿಂಗಳಿಂದ ಭದ್ರಾವತಿಯಿಂದ ನಮಗೆ ಸಪ್ಲೈ ಆಗಿಲ್ಲ. ಇಲ್ಲಿ ಬೇರೆಯವರಿಗೆ ತಲಾ 6 ವಾಗೀನು ಬಂದು ನಮ್ಮ ಅಕ್ಕಪಕ್ಕದಲ್ಲಿ ಅವರು ಮಾರಾಟ ಮಾಡುವುದನ್ನು ನೋಡುತ್ತಾ ನಿಸ್ಸಾಹಯಕರಾಗಿ ಬಹಳ ಮನ ನೊಂದುಕೊಂಡು ನಿಮ್ಮ ಕಡೆ ಆಶಾದಾಯಕವಾಗಿ ನೋಡುತ್ತಾ ಸುಮ್ಮನೆ ಕುಳಿತುಕೊಂಡಿದ್ದೇವೆ. ಇದಕ್ಕೆ ನಿಮ್ಮಿಂದ ಜಾಗ್ರತೆಯಾಗಿ ಪರಿಹಾರ ಆಗಬಹುದೆಂದು ಬಹಳವಾಗಿ ಇರುತ್ತೇವಾದಾಗ್ಯು ನಮ್ಮ ಶ್ರೀ ಯಜಮಾನರು ಬಹಳವಾಗಿ ಮನಸ್ಸಿಗೆ ವ್ಯಥೆ ಹಚ್ಚಿಕೊಂಡು ಕೊರಗುತ್ತಿದ್ದಾರೆ. ಈ ಬಗ್ಗೆ ಶ್ರೀ ಗಾಂಜಿ ವೀರಪ್ಪನವರು ಬಹಳವಾಗಿ ಸಮಾಧಾನವನ್ನು ಹೇಳಿದ್ದಾರೆ. ಆದರೂ ಯತ್ನವಿಲ್ಲ".

ಇಂತಿ ನಮಸ್ಕಾರ

(ಸಹಿ)

ಅದರ ಮೇಲೆ ಮುಖ್ಯಮಂತ್ರಿಗಳು "I WILL SPEAK TO SRI SHIVANANJAPPA, M. P." ಎಂದು ಹೇಳಿ ದಿನಾಂಕ 30. 3. 1967ರಲ್ಲಿ ಬರೆದಿದ್ದಾರೆ. ಅಂದಮೇಲೆ ಅವತ್ತಿನಿಂದ ಇವತ್ತಿನವರೆಗೂ ಒಂದು ವರ್ಷದಲ್ಲಿ 2ಲಕ್ಷ ರೂಪಾಯಿ ಮಾಡಿದ್ದಾರೆ. ಇದು ಒಂದೇ ಅಲ್ಲದೆ ಮುಖ್ಯಮಂತ್ರಿಗಳ ಭಾವ ಮೈದುನರಿಗೆ ಸ್ಟೈನ್‌ಲೆಸ್ ಸ್ಟೀಲ್ ಕೋಟಾ ಕೊಟ್ಟಿದ್ದಾರೆ. ಕೈಗಾರಿಕಾ ಇಲಾಖೆಯವರು ಬಂದಿದ್ದಾರೆ. ಫ್ಯಾಕ್ಟರಿ ಇಲ್ಲ ಎಂಥಾದ್ದೂ ಇಲ್ಲ, ಇವರ ಕೇಸನ್ನು ಹೇಗೆ ಶಿಫಾರಸ್ಸು ಮಾಡಲಿ ಎಂದು ಹೇಳಿದರೂ ಕೊಟ್ಟಿದ್ದಾರೆ.

* * *

WD-H-035-8

# ಸವರ್ಣೀಯ ಹಿಂದುಗಳ ಬಗ್ಗೆ ಡಾ. ಅಂಬೇಡ್ಕರ್

4ನೇ ಏಪ್ರಿಲ್, 1968

[“ವಿದ್ಯಾರ್ಹತೆಯನ್ನು ಗಮನಕ್ಕೆ ತೆಗೆದುಕೊಂಡು ಜಾತಿಯ ಆಧಾರವಾಗಿಟ್ಟುಕೊಂಡು ಹರಿಜನರ ಬಾಳನ್ನು ಹಾಳು ಮಾಡಿದರೆ ದೇಶ ಉದ್ಧಾರವಾಗುವುದಿಲ್ಲ......... ಇರುವುದಕ್ಕೊಂದು ಮನೆ, ಹೊದೆಯುವುದಕ್ಕೆ ಬಟ್ಟೆ, ತಿನ್ನುವುದಕ್ಕೆ ಅನ್ನ – ನಾವು ಕೇಳುವುದಿಷ್ಟೆ. ಇದಕ್ಕೆ ತಕ್ಕ ವ್ಯವಸ್ಥೆ ಮಾಡದೆ ಸುಮ್ಮನೆ ಸಮಾಜ ಕಲ್ಯಾಣ ಮಾಡಿರುವುದಾಗಿ ಹೇಳಿದರೆ ಸಹಾಯವಾಗುವುದಿಲ್ಲ............ ಹರಿಜನ ಮತ್ತು ಹಿಂದುಳಿದವರ ಉದ್ಧಾರಕ್ಕೆ ಸರಿಯಾದ ವ್ಯವಸ್ಥೆಮಾಡಿ, ತಮ್ಮ ಸಹಕಾರ ಕೊಟ್ಟು ಸಮಾಜ ಕಲ್ಯಾಣವನ್ನು ಸಾಧಿಸಬೇಕು” – ಎಂದು **ಶಾಸಕ ಎ. ಮುನಿಯಪ್ಪ** ಅವರು ಸದನದಲ್ಲಿ ಸರ್ಕಾರದ ಗಮನ ಸೆಳೆದರು. ಅದಕ್ಕೆ ಸಂಬಂಧಿಸಿದಂತೆ ಬೆಂಬಲವಾಗಿ ವಿರೋಧಪಕ್ಷದ ಶಾಸಕ ಎಚ್. ಸಿದ್ದವೀರಪ್ಪ ಅವರು ವಿವರವಾಗಿ ಮಾತಾಡಿದರು.]

ಶ್ರೀ **ಎಚ್. ಸಿದ್ದವೀರಪ್ಪ** : ಸನ್ಮಾನ್ಯ ಉಪಾಧ್ಯಕ್ಷರೇ, ಈ ಡಿಮ್ಯಾಂಡ್ ನಮ್ಮ ಮಾನ್ಯ ಸ್ನೇಹಿತರು ಹೇಳಿದಹಾಗೆ ಬಹಳ ಪ್ರಾಮುಖ್ಯವಾದುದು. ಇದರ ವಿಚಾರದಲ್ಲಿ ನಮ್ಮ ಹರಿಜನ ಬಂಧುಗಳು ಕೆಲವರು ಒಂದು ಶಂಕೆಯನ್ನು ವ್ಯಕ್ತಪಡಿಸಿದರು: ಹರಿಜನರಲ್ಲದ ಯಾರೂ ಈ ವಿಷಯದಲ್ಲಿ ಆಸಕ್ತಿ ವಹಿಸಿದ ಹಾಗೆ ಕಾಣುವುದಿಲ್ಲ ಎಂದು ಹೇಳಿದರು. ನಾನಾದರೂ ಹೇಳುತ್ತೇನೆ. ಯಾರೂ ಆಸಕ್ತಿ ತೋರಿಸದಿದ್ದರೆ ಈ ಪ್ರಶ್ನೆ ಹಿಂದೂಸ್ತಾನವನ್ನು ಎಲ್ಲಿಗೆ ತೆಗೆದುಕೊಂಡುಹೋಗಿ ಬಿಡುವುದು ಎಂಬುದನ್ನು ಬೇರೆ ಕಡೆಯ ಉಪಮಾನಗಳಿಂದ ತಿಳಿಯಬಹುದಾಗಿದೆ. ಇಂದು ಅಮೇರಿಕಾ ನೋಡಬಹುದು. ಅಲ್ಲಿ ನೀಗ್ರೋಗಳದ್ದು ದೊಡ್ಡ ಪ್ರಶ್ನೆಯಾಗಿ ಉಳಿದಿದೆ. ಅಲ್ಲಿಯ ಬಿಳಿ ಜನರು ಅದನ್ನು ಬಿಡಿಸಲೇಬೇಕು, ಇಲ್ಲದಿದ್ದರೆ ಉಳಿಗಾಲವಿಲ್ಲ ಎಂಬುವನ್ನು ಮನಗಂಡಿದ್ದಾರೆ. ಅದೇ ಪರಿಸ್ಥಿತಿ ಇಲ್ಲಿ ನಮ್ಮ ದೇಶದಲ್ಲೂ ಒಂದಲ್ಲ ಒಂದು ದಿವಸ ಬರಬಹುದು. ಆದುದರಿಂದ ಉಳಿಗಾಲಕ್ಕಾದರೂ ಅದಷ್ಟು ಜಾಗ್ರತೆ ಈ ಪ್ರಶ್ನೆಯನ್ನು ಬಿಡಿಸುವುದಕ್ಕೆ ಎಲ್ಲರ ಪ್ರಯತ್ನ ಮಾಡೇತೀರಬೇಕು. ಹಾಗೆ ಮಾಡದಿದ್ದರೆ ಈ ಪ್ರಶ್ನೆ ಬಗೆಹರಿಯುವುದಿಲ್ಲ. ಕೆಲವರು ಏನೂ ಆಗಿಲ್ಲ ಎಂದು ಹೇಳಿದರು. ಆದರೆ ನಿಷ್ಪಕ್ಷಪಾತವಾಗಿ ಹೇಳುತ್ತೇನೆ. 1918ನೇಯ ಇಸವಿಯಲ್ಲಿ ಇಂಗ್ಲಿಷ್ ಒಂದನೆಯ ತರಗತಿಯಲ್ಲಿ ನಾನು ಓದುತ್ತಿದ್ದೆ. 50 ವರ್ಷವಾಯ್ತು, ಆಗ ಡಾ. ಸಿ. ಆರ್.

ರೆಡ್ಡಿಯವರು ಮೊದಲು ನಮ್ಮಲ್ಲಿ ಹರಿಜನರು ಶಾಲೆಗಳಲ್ಲಿ ಸವರ್ಣೀಯರ ಜೊತೆ ಸೇರಬಹುದು ಎಂದು ಒಳ್ಳೆಯ ಅವಕಾಶವನ್ನು ಕಲ್ಪಿಸಿದರು. ಈಗ "ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್' ಎಂದು ಹೇಳುವಹಾಗೆ "ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜುಕೇಷನ್" ಎಂದು ಆಗ ಹೇಳುತ್ತಿದ್ದರು. ಮಾನ್ಯ ಶ್ರೀ ರಂಗನಾಥರ ಪೂಜ್ಯ ತಂದೆಯವರು ನನ್ನ ಜೊತೆಯಲ್ಲಿ ಓದುತ್ತಿದ್ದರು. ನನಗೆ ಜ್ಞಾಪಕವಿದೆ, ಮೊದಲು ಹರಿಜನರು ಶಾಲೆಗೆ ಬಂದಾಗ ಅವರು ಒಂದು ಬಾಗಿಲಲ್ಲಿ ಬಂದರೆ ಸವರ್ಣೀಯ ಹಿಂದುಗಳು ಇನ್ನೊಂದು ಬಾಗಿಲ್ಲಿ ಹೊರ ಹೋಗುತ್ತಿದ್ದರು. ಹರಿಜನರ ಜೊತೆ ಓದುವುದು ಎಲ್ಲಿಯಾರೂ ಉಂಟೆ? ಎಂದು ಅವರು ಹೊರಟು ಹೋದರು.....

ತಾವು, ಸರ್ಕಾರ ಮಾಡಿದರೆ ಒಳ್ಳೆಯದಲ್ಲ. ಇದನ್ನು ಮುಂದುವರೆಸಿಕೊಂಡು ಹೋಗದೆ, ಬರುಬರುತ್ತಾ ಸ್ಕೂಲುಗಳಿಗೆ ಬರುವುದಕ್ಕೆ ಬೇರೆ ಬಟ್ಟೆ, ಮನೆಗೆ ಹೋದಾಗ ಬೇರೆ ಬಟ್ಟೆ ಎಂದು ಶುರು ಆಗಿತ್ತು. ಈಗ ಅದೆಲ್ಲ ಹೋಗಿದೆ. ಈಗೊಂದು ಮಟ್ಟವನ್ನು ನೋಡುತ್ತಾ ಇದ್ದೇವೆ. ಎಲ್ಲಿ ನೋಡಿದರೂ ಕೂಡ ಜನಗಳಲ್ಲಿ ಮಾನಸಿಕ ಪರಿವರ್ತನೆಯಾಗಿದೆ ಎಂಬುದನ್ನು ನಾವು ನಿಷ್ಪಕ್ಷಪಾತವಾಗಿ ಎಲ್ಲಿಬೇಕಾದರೂ ಹೇಳಬಹುದು. ಆದರೆ ಒಂದು ಏನಾಗಿದೆ ಎಂದರೆ, ಹರಿಜನರ ಜೊತೆ ಕುಳಿತುಕೊಂಡು ಊಟ ಮಾಡುತ್ತೇವೆ, ಅವರನ್ನು ಮುಟ್ಟುತ್ತೇವೆ, ಅವರ ಜೊತೆಯಲ್ಲಿ ಇರುತ್ತೇವೆ. ಆದರೆ ಕೊಡುವುದು, ಕೂಡಿ ಊಟ ಮಾಡುವುದು, ಕುಲ ಎಣಿಸುವುದು ಇದುಮಟ್ಟಿಗೆ ಹೋಗಿಲ್ಲ. ಎಲ್ಲಿ ನೋಡಿದರೂ ನಾವು ಅಂಥವರು, ನೀವು ಇಂಥವರು, ಈ ಜಾತಿ, ಆ ಜಾತಿ ಎಂಬುದು ಮನಸ್ಸಿನಲ್ಲಿದೆ. ನಾವೆಲ್ಲ ಒಂದಾಗಿ ಮುಂದುವರೆಯಬೇಕೆಂಬ ಭಾವನೆಯನ್ನು ನಾವು ಇನ್ನೂ ಕಾಣದೆ ಇರತಕ್ಕ ಸನ್ನಿವೇಶದಲ್ಲಿ ಇದ್ದೇವೆ. ಅದು ಆದಷ್ಟು ಜಾಗ್ರತೆಯಾಗಿ ಹೋಗಿಯೇ ತೀರಬೇಕು.

ಒಂದು ಅಂಶವನ್ನು ಮಾತ್ರ ಈಗ ನಾನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ನಮ್ಮ ರಾಜ್ಯಾಂಗವನ್ನು ಬರೆದಂತಹ ಡಾಕ್ಟರ್ ಬಿ. ಆರ್. ಅಂಬೇಡ್ಕರ್ ಅವರು ಬಹಳ ಗಣ್ಯ ವ್ಯಕ್ತಿಗಳು. ನಾನು ಕೆಲವು ವರ್ಷಗಳ ಕಾಲ ಅವರ ಜೊತೆಯಲ್ಲಿ ಇದ್ದು ನಿಕಟ ಸಂಪರ್ಕದಲ್ಲಿದ್ದೆ. ಅವರು ಯಾವ ರೀತಿ ಇಂಥ ಪ್ರಶ್ನೆಯನ್ನು ಬಿಡಿಸಬೇಕೆಂದು ಸದಾ ಯೋಚನೆ ಮಾಡುತ್ತಿದ್ದರು, ಅವರು ಏನು ಹೇಳುತ್ತಿದ್ದರು ಅಂದರೆ ಸವರ್ಣ ಹಿಂದೂಗಳ ಮನಸ್ಸು ಪರಿವರ್ತನೆ, ಆದರೆ ಮಾತ್ರ ಈ ಪ್ರಶ್ನೆ ಬಗೆಹರಿಯುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರು. ಆದರೆ ಕೊನೆಕೊನೆಗೆ ಅವರು ನಿರುತ್ಸಾಹಿಗಳಾದರು. ಅವರು ತಮ್ಮ ಹಸಿವನ್ನು ನೀಗಿಸುವುದಕ್ಕೆ ಒಂದು ನಿರ್ಧಾರಕ್ಕೆ ಬಂದರು. ಸವರ್ಣೀಯ ಹಿಂದೂಗಳಿಂದ 'ನಮಗೆ ಮೋಕ್ಷ ಇಲ್ಲ' ಎಂದು ತಿಳಿದುಕೊಂಡು ಬಹಳ ಜಿಗುಪ್ಸೆಯಿಂದ ಬೌದ್ಧಮತಕ್ಕೆ ತಮ್ಮ ಅನುಯಾಯಿಗಳನ್ನು ಕರೆದುಕೊಂಡು ಹೋದರು. ಇದನ್ನು ನಾನು ನೋಡಿದ್ದೇನೆ.

ಅಂಬೇಡ್ಕರರ ಆಸೆ ಈ ಜನ ಮುಂದೆ ಬರಬೇಕು ಎಂಬುದಾಗಿತ್ತು. ಅವರು ಬರೆದಿರುವಂತಹ ಪುಸ್ತಕಗಳನ್ನು ನೋಡಿದರೆ, ಎಷ್ಟು ಕಳಕಳಿಯಿಂದ ಯೋಚನೆ ಮಾಡುತ್ತಿದ್ದರು ಎಂಬುದನ್ನು ನೋಡಬಹುದಾಗಿದೆ. ರಾಜ್ಯಾಂಗ ಬರೆಯುವಾಗ

ಸ್ಪಷ್ಟವಾಗಿ ಹೇಳಿದರು, ಕೆಲವರು ಹತ್ತು ವರ್ಷದ ರಿಸರ್ವೇಷನ್ – ಮೀಸಲಾತಿ ಇರಬಾರದು, ಏಕೆ ಇರಬೇಕು ಎಂದು ವಾದ ಮಾಡಿದರು – ಆಗ ಅವರು ಬಹಳ ದಿಟ್ಟತನದಿಂದ ಹತ್ತು ವರ್ಷ ಹರಿಜನರು ಮತ್ತು ಗಿರಿಜನರಿಗೆ ರಿಸರ್ವೇಷನ್ ಇರಬೇಕು ಎಂದು ಸಮರ್ಥಿಸಿದರು. ಏಕೆಂದರೆ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಅದು ಅಗತ್ಯ ಎಂದರು.

ಮತ್ತು ವಿದ್ಯಾಭ್ಯಾಸದ ದೃಷ್ಟಿಯಿಂದಲೂ ಅವರು ಎಲ್ಲರ ಜತೆಯಲ್ಲಿಯೂ ಸರಿ ಸಮಾನತೆಗೆ ಬರುವವರೆಗೂ ಇದು ಇರಬೇಕಾದ್ದು ಅವಶ್ಯಕ ಎಂದು ಹೇಳಿದರು. ಅದರಂತೆ ಆರ್ಟಿಕಲ್ 334 ಈ ದಿವಸ ನಮ್ಮ ರಾಜ್ಯಾಂಗದ ಕಡತದಲ್ಲಿ ಸೇರಿದೆ. ಆದರೆ ಪರಿಸ್ಥಿತಿ ಏನಾಯಿತು? ಹತ್ತು ವರ್ಷದಲ್ಲಿ ಈ ಸಮಸ್ಯೆ ಬಗೆಹರಿಯಲಿಲ್ಲ. ಆಮೇಲೆ ಮತ್ತೆ ಪುನ: 8ನೇ ಅಮೆಂಡ್‌ಮೆಂಟ್ ಪ್ರಕಾರ 1959ರಲ್ಲಿ ಇನ್ನೂ 10 ವರ್ಷಗಳ ಕಾಲ ಹೆಚ್ಚು ಮಾಡಲಾಯಿತು. ಈಗ ನಾಲ್ಕನೇ ಚುನಾವಣೆಯಲ್ಲಿ ಇದು ಹೊರಟು ಹೋಯಿತು. 20 ವರ್ಷದಲ್ಲಿ ಈ ಮೀಸಲಾತಿ ಇಲ್ಲವಾಯಿತು. ಬಹಳ ದೀರ್ಘವಾಗಿ ಯೋಚನೆ ಮಾಡಬೇಕು. ನಾನು ಹೇಳುತ್ತೇನೆ – ಈಗ 20 ವರ್ಷ ಆದಮೇಲೆ ನಮ್ಮ ಹರಿಜನ ಮತ್ತು ಗಿರಿಜನ ಬಂಧುಗಳು ಯಾರು ಸಮಾಜದಲ್ಲಿ ಆರ್ಥಿಕವಾಗಿ ವಿದ್ಯಾಭ್ಯಾಸದಲ್ಲಿ ಮುಂದೆ ಇದ್ದಾರೆ, ಅವರ ಜೊತೆಯಲ್ಲಿ ನಿಂತುಕೊಂಡು ಚುನಾವಣೆಯಲ್ಲಿ ಸ್ಪರ್ಧಿಸತಕ್ಕ ಶಕ್ತಿಯನ್ನು ಗಳಿಸಿದ್ದಾರೆಯೇ? ನಾವು ಬಹಳ ದೀರ್ಘವಾಗಿ ನಿಷ್ಪಕ್ಷಪಾತವಾದ ಮನಸ್ಸಿನಿಂದ ಯೋಚನೆ ಮಾಡಬೇಕು. ನನಗಾದರೂ ಅನಿಸುತ್ತದೆ, ಈ ಸರ್ಕಾರ ಹೋಗತಕ್ಕ ರೀತಿಯಲ್ಲಿ ಹೋದರೆ ಒಂದು ನೂರು ವರ್ಷಗಳಾದರೂ ಖಾಯಂ ಆಗಿ ಶಾಸನ ಕಡತದಲ್ಲಿ ಇರಬೇಕಾದ ಪರಿಸ್ಥಿತಿ ಬಂದರೂ ಬರಬಹುದು. ಕಾನೂನು ಪ್ರಕಾರ ಅಸ್ಪೃಶ್ಯತೆ ಹೋಗಬೇಕೆಂಬ ಒಂದು ನಿಬಂಧನೆಯನ್ನು ಹಾಕಿದ್ದೇವೆ. ಅದನ್ನು ಏಕೆ ಮುಂದುವರೆಸಲಿಲ್ಲ? ಕಾರಣವೇನು? ಅದಕ್ಕೆ ಕಾರಣ ಇಷ್ಟೆ. ನೀವು ಈ ಕಡತದಲ್ಲಿ ತೋರಿಸಿದ್ದೀರಲ್ಲ, ಈ ಮಿಸ್‌ಲೇನಿಯಸ್ – ಚೌ ಚೌ – ನಾವೇನಾದರೂ ಹೋಟೆಲ್‌ಗೆ ಹೋದರೆ ಚೌ ಚೌ ಕೊಡು ಅನ್ನುವಹಾಗೆ – 3 ಕೋಟಿ 10 ಲಕ್ಷ ರೂಪಾಯಿ ತೋರಿಸಿದ್ದೀರಿ, ಅದರಲ್ಲಿ ಇಂಗ್ಲೆಂಡ್ ಎಕ್ಸ್‌ಪೆನ್‌ಷನ್ ಸೇರಿದೆ, ಫಿಲಂಸ್ ಸೇರಿದೆ, ಟೂರಿಸಂ ಸೇರಿದೆ – ಇವೆಲ್ಲಾ ಸೇರಿ ಅದರ ಜೊತೆಗೆ ಎಲ್ಲೋ ಮೂಲೆಯಲ್ಲಿ 90 ಲಕ್ಷ ರೂಪಾಯಿ ತೋರಿಸಿದ್ದೀರಿ, ನಾಚಿಕೆಯಾಗುವುದಿಲ್ಲವೆ? 90 ಲಕ್ಷ ರೂಪಾಯಿಗಳಿಂದ ಈ ಸಮಸ್ಯೆ ಬಗೆಹರಿಯುತ್ತದೆಯೇ?

ಎಂ.ಎಸ್.ಕೆ ಮಿಲ್ಲನ್ನು ಬರಿದು ಮಾಡಿ ಜನಗಳ ದುಡ್ಡು ಎರಡು ಕೋಟಿ ರೂಪಾಯಿಗಳನ್ನು ಅದರಲ್ಲಿ ಹಾಕಿದಿರಲ್ಲಾ, ಅದನ್ನು ಹರಿಜನರಿಗೆ ಕೊಟ್ಟಿದ್ದರೆ ನಿಜವಾಗಿಯೂ ಮುಂದುವರೆಯುತ್ತಿದ್ದರು. ಇಂತಹ ಅನ್ಯಾಯ, ಅಸಡ್ಡೆಗಳಿಗೆ ನಿಮ್ಮ ಸರಕಾರ ಕೋಟಿ ಕೋಟಿ ರೂಪಾಯಿಗಳನ್ನು ಕೊಟ್ಟು ದುಡ್ಡು ಹಾಳು ಮಾಡುತ್ತಿದೆ. ಅದರ ಬದಲು ಕನಿಷ್ಟ ನಿಮಗೇನಾದರೂ ಅವರ ವಿಚಾರದಲ್ಲಿ ಒಂದು ಕಲ್ಪನೆ ಇದ್ದರೆ 5 ಕೋಟಿ ರೂಪಾಯಿಗಳನ್ನಾದರೂ ಇದಕ್ಕೆ ಇಡಬೇಕಾಗಿತ್ತು. ಇದಕ್ಕಿಂತ ಕಡಿಮೆ ಇಟ್ಟರೆ ಆಡುವ ಹುಡುಗರಿಗೆ ಮಂಡಕ್ಕಿ ಕೊಡುತ್ತೇವಲ್ಲ, 3 ಕಾಸಿನ ಪುರಿ

ಕೊಡುತ್ತೇವೆಯಲ್ಲಾ ಹಾಗೆ ಕೊಟ್ಟರೆ ಅದರಿಂದ ಏನಾಗುತ್ತದೆ? ನಾವು ಏನೇ ಮಾತನಾಡಲಿ ಮುಖ್ಯವಾಗಿ ಅವರ ಆರ್ಥಿಕ ಸ್ಥಿತಿ ಸುಧಾರಿಸಿಲ್ಲ.

ಸಮಾಜ ಕಲ್ಯಾಣದ ಮಂತ್ರಿಗಳನ್ನು ಒಂದು ವಿಷಯ ಕೇಳುತ್ತೇನೆ, ಒಂದು ವರ್ಷದ ರೆಕಾರ್ಡು ಕೊಡಲಿ - ಏನೂ ಬೇಕಾಗಿಲ್ಲ. ಅವರು ಸಾಮಾನ್ಯವಾಗಿ ಕಾಡಿನಲ್ಲಿ ಕೆಲಸ ಮಾಡತಕ್ಕ ಜನರು, ತಂಗಡಿ ಬಾರ್ಕ್ ಹರಾಜಿಗೆ ಬರುತ್ತದೆ - ಈ ತಂಗಡಿ ಚಕ್ಕೆ ಇದೆಯೆಲ್ಲಾ ಇದು ಚರ್ಮ ಹದ ಮಾಡಲಿಕ್ಕೆ ಬಹಳವಾಗಿ ಬೇಕು - ನಾನು ಮಂತ್ರಿಯಾಗಿದ್ದಾಗ ಸುಮಾರು ಒಂದು ಲಕ್ಷ ರೂಪಾಯಿ ಕೊಟ್ಟು ಒಂದು ಸಹಕಾರ ಸಂಘವನ್ನು ಸ್ಥಾಪಿಸಿದ್ದೆ. ಯಾರೋ ಕಾಂಗ್ರೆಸ್ ಪುಡಾರಿಗಳೇ ಈಗ ದೊಡ್ಡವರಾಗಿದ್ದಾರೆ - ಬಡ ಜನರಿಗೆ ಸಿಕ್ಕದಹಾಗೆ ಮಾಡಿದ್ದಾರೆ. ಆದ್ದರಿಂದ ಈ ತಂಗಡಿ ಬಾರ್ಕ್‌ನ್ನು ಹರಾಜಿಗೆ ಹಾಕಬೇಡಿ. ಜೊತೆಗೆ ಕಾಡಿನಲ್ಲಿ ಸಿಕ್ಕತಕ್ಕ ಇನ್ನೂ ಅನೇಕ ಪದಾರ್ಥಗಳಿವೆ. ಉದಾಹರಣೆಗೆ ಅಂಟು ಇದೆ... ಮತ್ತು ಇತರ ಪದಾರ್ಥಗಳನ್ನು ಇವರ ಉಪಯೋಗಕ್ಕಾಗಿ ಇಡಿ. ಅವರು ಅದನ್ನು ಉಪಯೋಗಿಸಿಕೊಂಡು ಜೀವನ ಮಾಡಲಿ. ಅದನ್ನೆಲ್ಲಾ ಬಿಟ್ಟುಬಿಟ್ಟು ಆರ್ಥಿಕ ಸಮಾನತೆ ಬರಬೇಕು, ವಿದ್ಯಾಭ್ಯಾಸ ಕೊಡಿಸಬೇಕು - ಎಂದು ಹೇಳುತ್ತಿರುವುದನ್ನೆಲ್ಲಾ ಒಪ್ಪಿಕೊಳ್ಳೋಣ.

ಆದರೆ ಮುಖ್ಯವಾಗಿ ಈಗ ಅವರಿಗೆ ಬೇಕಾಗಿರುವುದು ಇಷ್ಟೆ, ಅವರ ಆರ್ಥಿಕ ಪ್ರಗತಿ ಆಗಬೇಕು. ವಿದ್ಯಾಭ್ಯಾಸದಲ್ಲಿ ಅವರು ಮುಂದೆ ಬರಬೇಕು - ನೌಕರಿ ಸಿಕ್ಕಲಿ ಬಿಡಲಿ ಆ ಮಾತು ಬೇರೆ - ಕೊನೇ ಪಕ್ಷ ಎಸ್.ಎಸ್.ಎಲ್.ಸಿ. ವರೆಗಾದರೂ ಕಡ್ಡಾಯವಾಗಿ ಅವರಿಗೆ ವಿದ್ಯಾಭ್ಯಾಸ ಮಾಡಿಸಿದರೆ ಅವರ ಸ್ಥಿತಿ ಉತ್ತಮವಾದೀತು. ನೀವೇನೂ ಸುಧಾರಿಸಲಿಕ್ಕೆ ಹೋಗಬೇಡಿ, ಅದು ತಪ್ಪು ತಿಳುವಳಿಕೆ - ನಾವು ಸುಧಾರಿಸುತ್ತೇವೆ. ಯಾರನ್ನು ಯಾರೂ ಸುಧಾರಿಸುವ ಸ್ಥಿತಿಯಲ್ಲಿ ಇಲ್ಲ. ಅವರನ್ನು ಅವರೇ ಸುಧಾರಿಸಿಕೊಳ್ಳುತ್ತಾ ಇದ್ದಾರೆ. ಅದೂ ತೆವಳಿಕೊಂಡು, ದಬ್ಬಿಸಿಕೊಂಡು, ಅನ್ನಿಸಿಕೊಂಡು, ಗುದ್ದಿಸಿಕೊಂಡು ಎಲ್ಲಾ ಕಷ್ಟಗಳನ್ನು ಅನುಭವಿಸಿ, ಅಂತಹವರನ್ನು ಸುಧಾರಿಸುವುದಕ್ಕೆ ಉಳಿದವರು ತಲೆಹಾಕುತ್ತಾರೆ ಅಂದರೆ ಅದು ತಪ್ಪಾಗುತ್ತದೆ.

**'ಜಾತಿ ಮನುಷ್ಯನನ್ನು ನಿರ್ವೀರ್ಯಗೊಳಿಸುತ್ತದೆ. ಅನರ್ಹಗೊಳಿಸುವ ಪ್ರಕ್ರಿಯೆಯೂ ಆಗಿದೆ. ಸ್ವತಂತ್ರ ಹಾಗೂ ಪೂರ್ಣವಾದ ಮನುಷ್ಯತ್ವವನ್ನು ಒಬ್ಬ ವ್ಯಕ್ತಿ ಸಾಧಿಸಲು ಅವನಿಗೆ ಶಿಕ್ಷಣ, ಸಂಪತ್ತು ಮತ್ತು ದುಡಿಮೆ - ಇವೆಲ್ಲವುಗಳ ಅಗತ್ಯವೂ ಇದೆ. ಐಶ್ವರ್ಯ ಮತ್ತು ಉದ್ಯೋಗ ತಂದುಕೊಡದ ಕೇವಲ ಶಿಕ್ಷಣದಿಂದಲೂ ಪ್ರಯೋಜನವಿಲ್ಲ. ಶಿಕ್ಷಣರಹಿತ ಐಶ್ವರ್ಯ ಪಶು ಸಮಾನವಾದುದು. ಪ್ರತಿಯೊಂದೂ ಉಳಿದವುಗಳಿಗೆ ಅಗತ್ಯವಾಗಿವೆ. ಮಾನವನ ಪ್ರಗತಿಗೆ ಅವುಗಳ ಅಗತ್ಯವಿದೆ'.**

***- ಡಾ. ಬಿ.ಆರ್. ಅಂಬೇಡ್ಕರ್***

* * *

# ಹರಿಜನರಿಗೆ ಶೇ. 18 ಹುದ್ದೆ ಮೀಸಲು

## ಪಾಲನೆ ಕುರಿತು....

1936ರಲ್ಲಿ ಒಂದು ಕಾನ್‌ಫರೆನ್ಸ್ ಆಗುತ್ತಾ ಇತ್ತು.... ಶ್ರೀಮಾನ್ ಅನಂತರಾಮನ್ ಅವರು ಇದ್ದರು. ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರ್ ಆಗಿದ್ದಾಗ ಈ ಹರಿಜನರ ಉದ್ಧಾರ ಮಾಡಬೇಕಾದರೆ ಹೇಗೆ ಮಾಡಬೇಕು ಅನ್ನುವ ಪ್ರಶ್ನೆ ಬಂದಾಗ ಅವರಿಗೆ ಭೂಮಿಕೊಡಿ, ಒಂದು ಜೊತೆ ಎತ್ತುಕೊಡಿ ಅಂದಾಗ ನಮ್ಮಲ್ಲಿ ಒಬ್ಬ ಗೌಡರು ಇದ್ದರು ಒಳ್ಳೆಯ ವರ್ಚಸ್ವಿಗಳು, ಅವರು ಹೇಳಿದರು – ಇದೆಲ್ಲಾ ಮಾಡುವುದಕ್ಕೆ ಸಾಧ್ಯವಾದರೆ ಹೊಲ ಹೊಡೆಯುವುದಕ್ಕೆ ಒಂದು ಆಳನ್ನು ಕೊಡಬೇಕೆಂಬುದು ನನ್ನ ವಾದ ಎಂದು ಹೇಳಿದರು.ಅವರಿಗೆ ಎಲ್ಲಾ ಅನುಕೂಲಗಳನ್ನೂ ಮಾಡಿಕೊಟ್ಟು , ಅವರಾಗಿ ಅವರೇ ಮುಂದೆ ಬರುವುದಕ್ಕೆ ಪ್ರಯತ್ನಮಾಡಬೇಕೇ ಹೊರತು, ಅದು ಮಾಡುತ್ತೇವೆ, ಇದು ಮಾಡುತ್ತೇವೆ ಎಂದರೆ ಅದೆಲ್ಲಾ ಆಗದ ಮಾತು ಸುಳ್ಳು ಎಂದು ನಾನಾದರೂ ಹೇಳುತ್ತೇನೆ.

ಎತ್ತಿ ಕಟ್ಟುವುದಕ್ಕೆ ಹೀಗೆ ಹೇಳುತ್ತಿದ್ದೇನೆ ಎಂದು ಯಾರೂ ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು. ಹರಿಜನರು ನಮ್ಮ ಸ್ನೇಹಿತರು ಇವತ್ತಿನ ದಿವಸ ಆರಿಸಿ ಬಂದಿದ್ದಾರಲ್ಲಾ – ನನಗಿಂತಲೂ ಎರಡರಷ್ಟು ಅವರಿಗೆ ಜವಾಬ್ದಾರಿ ಜಾಸ್ತಿ ಇದೆ. ಆಡಳಿತ ಯಾವರೀತಿ ನಡೆಯುತ್ತಿದೆ ಎಂಬುದನ್ನು ತಾವೆಲ್ಲಾ ತಿಳಿದಿರತಕ್ಕವರು. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಹಿತರಕ್ಷಣೆಯನ್ನು ಕೊಟ್ಟಿಲ್ಲ ಎಂದರೆ ಅದರ ಅರ್ಥ ಅವರವರ ಹಿತರಕ್ಷಣೆಯನ್ನು ಅವರವರೇ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಲೇಬೇಕು.

ರೆವಿನ್ಯೂ ಮಂತ್ರಿಗಳಿಗೆ ಒಂದು ಮಾತು ಹೇಳುತ್ತೇನೆ – ಏನೆಂದರೆ, ಇವತ್ತು ಅವರು ಒಂದು ಲೆಕ್ಕ ತರಲಿ. ಹರಿಜನರಿಗೆ ಕೊಟ್ಟ ಹೊಲ ಎಷ್ಟು? ಎಷ್ಟು ಜನರಿಗೆ ಜಮೀನನ್ನು ಕೊಟ್ಟಿದ್ದೀರೋ ಅವರು ಇವತ್ತು ಅಷ್ಟನ್ನೂ ಇಟ್ಟುಕೊಂಡಿದ್ದಾರೆಯೇ? ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್ ಇದೆ ಎಂದು ಹೇಳುತ್ತೀರಿ 3X3 = 9 ಅಂತ ಅವರು ಏನೋ ಒಂದು ಲೆಕ್ಕವನ್ನು ಅವರು ತೋರಿಸುತ್ತಾರೆ. ಎಷ್ಟು ಜನ ಹರಿಜನರಿಗೆ

ದರಕಾಸ್ತು ಮೂಲಕ ಜಮೀನು ಕೊಟ್ಟಿದ್ದೀರಿ? ಈ 20 ವರ್ಷಗಳಲ್ಲಿ ಎಷ್ಟು ಜನ ವ್ಯವಸಾಯ ಮಾಡುತ್ತಿದ್ದಾರೆ? ಎಷ್ಟು ಜಮೀನು ಬೇರೆಯವರ ಕೈಗೆ ಸೇರಿದೆ? ಅನ್ನುವಂತಹ ಒಂದು ಲೆಕ್ಕವನ್ನು ಕೊಟ್ಟರೆ ಆಗ ಗೊತ್ತಾಗುತ್ತದೆ, ನಿಮ್ಮ ನೀತಿ ಸರಿಯಾಗಿಲ್ಲ, ಇದಕ್ಕೆ ಏನೋ ಬೇರೆ ದಾರಿ ಇರಬೇಕು ಎಂಬುದು.

ನಮಗೆಲ್ಲಾ ಗೊತ್ತು, ಶ್ರೀಮಾನ್ ಟಿ. ಮರಿಯಪ್ಪನವರು ಇದ್ದಾಗ ಒಂದು ರಿಪೋರ್ಟ್ ಕೊಟ್ಟಿದ್ದರು, ದುರ್ದೈವವಶಾತ್ ಆ ರಿಪೋರ್ಟ್ ಜಾರಿಗೆ ಬರಲಿಲ್ಲ. ಅದು ಏನಾಯಿತೋ ಗೊತ್ತಿಲ್ಲ. ಅದಕ್ಕೆ ನಾನು ಅರಿಕೆ ಮಾಡಿಕೊಳ್ಳುವುದು ಏನೆಂದರೆ ಅವರೂ ಕೂಡ ನಮ್ಮ ಅಣ್ಣ ತಮ್ಮಂದಿರು, ಶೇ. 20 ಭಾಗ ಇದ್ದಾರೆ. ಇವತ್ತಿನ ದಿವಸ ಅವರನ್ನು ಬಿಟ್ಟರೆ ನಮ್ಮ ಕೆಲಸ ಏನೂ ಆಗುವುದಿಲ್ಲ. ಹೊಲ ಹೊಡೆಯತಕ್ಕ ಜನರಿಗೆ ಅದು ಚೆನ್ನಾಗಿ ಗೊತ್ತು. ಅವರು ಬಾರುಕೋಲು ಮಾಡಿಕೊಡಬೇಕು, ಅದನ್ನು ನಾವು ಹೆಗಲಮೇಲೆ ಹಾಕಿಕೊಳ್ಳಬೇಕು. ರಾಮಾನುಜಾಚಾರ್ಯರು, ಬಸವಣ್ಣನವರು ಹೇಳಿರುವಂತಹ ಮಾನವ ಜೀವನದಲ್ಲಿ ಎಲ್ಲರೂ ಒಂದೇ. ಅನೇಕ ಕೆಡುಕುಗಳನ್ನು ಅನುಭವಿಸಿಕೊಂಡು, ಅನೇಕ ತೊಂದರೆಗಳನ್ನು ಅನುಭವಿಸುತ್ತಾ ಇದ್ದರೂ ಕೂಡ ಬರೀ ತತ್ವಗಳನ್ನು ಪ್ರಚಾರ ಮಾಡಿದರೆ ಆಗುವುದಿಲ್ಲ. ಹೇಳಿದ ತತ್ವವನ್ನು ಒಂದು ರೂಪಾಯಿಯಲ್ಲಿ ಒಂದಾಣೆಯಷ್ಟನ್ನಾದರೂ ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡಬೇಕು ಎಂದು ತಮ್ಮಲ್ಲಿ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ಈ ಸರ್ಕಾರ ಇದನ್ನು ಬೇರೆ ರೀತಿಯಿಂದ ನೋಡಬೇಕು, reorientation of the policy, as it were. ಶ್ರೀಮಾನ್ ನಾರಾಯಣಗೌಡರನ್ನು ಟೀಕೆ ಮಾಡುತ್ತಾ ಇದ್ದೇನೆ ಅಂತ ತಿಳಿದುಕೊಳ್ಳಬಾರದು. ಅವರು ಯಾರಿಗೂ ಕಡಿಮೆ ಇಲ್ಲ. ಯಾರಿದ್ದರೂ ಕೂಡ ಪರಿಸ್ಥಿತಿಯೇ ಹೀಗೆ ಇದೆ. ಸರ್ಕಾರ, ಮಂತ್ರಿಗಳು ಯಾರೇ ಇರಲಿ ಇದು ಒಂದು ದೊಡ್ಡ ನ್ಯಾಷನಲ್ ಪ್ರಾಬ್ಲಂ, ಸ್ಟೇಟ್ ಪ್ರಾಬ್ಲಂ. ಇದನ್ನು ಹೇಗೆ ಬಗೆಹರಿಸಬೇಕು ಎಂಬುದನ್ನು ನಮ್ಮ ಮಾನ್ಯ ಸ್ನೇಹಿತರು ಹೇಳಿದರು.

ನಮ್ಮ ಸ್ನೇಹಿತರು ಹೇಳಿದರು ; ಅದು ಸೋಷಿಯಾಲಿಸಮ್ ಎಂದು. ಒಬ್ಬ ಕುರುಡ ಕತ್ತಲೆ ಕೋಣೆಯಲ್ಲಿ ಒಂದು ಕರಿ ಬೆಕ್ಕನ್ನು ಹುಡುಕಿದಹಾಗೆ. ಸೋಷಿಯಾಲಿಸಮ್ ಹೀಗೆ ಹೋಗುತ್ತಾ ಇದ್ದರೆ ಹೇಗೆ ಇದನ್ನು ಆಚರಣೆಗೆ ತರಬೇಕು? ಇದನ್ನು ಹೀಗೆ ಮಾಡಬಾರದು. ಶ್ರೀಮಾನ್ ರಾಚಯ್ಯನವರ ಮೇಲೆ ಒಂದು ದೊಡ್ಡ ಜವಾಬ್ದಾರಿ ಇದೆ. ಅವರಿಗೆ ಇನ್ನು ಹೆಚ್ಚು ಜವಾಬ್ದಾರಿಯನ್ನು ಕೊಡೋಣ. ಯಾವುದು ಏನೇ ಇರಲಿ, ಇದನ್ನು ಮರೆಯಕೂಡದು.

ಇವರಿಗೆ ಎರಡು ಜವಾಬ್ದಾರಿ ಸೇರಿದೆ. ಒಂದು ವ್ಯಕ್ತಿಗತವಾಗಿ ಕೆಲಸ ಮಾಡತಕ್ಕಂಥಾದ್ದು. ಇನ್ನೊಂದು ದಾರಿದ್ರ್ಯ ಸಮಾಜದ ಪ್ರತಿನಿಧಿಯಾಗಿ ಕೆಲಸ ಮಾಡಬೇಕು ಎನ್ನುವುದನ್ನು ಮರೆಯಬಾರದು. ಅವರ ಕಣ್ಣ ಎದುರಿಗೆ ಎಷ್ಟೊಂದು

ನೌಕರಿಗಳಿಗೆ ಅನ್ಯಾಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಅವರು ಸುಮ್ಮನೆ ಇದ್ದಾರೆ. ನಮ್ಮ ಸರ್ಕಾರ ಇದ್ದಾಗ ಪ್ರಮೋಷನ್ ಮತ್ತು ಡೈರೆಕ್ಟ್ ರಿಕ್ರೂಟ್‌ಮೆಂಟ್ ಯಾವರೀತಿ ಕೊಟ್ಟಿದ್ದೇವೆ ಎನ್ನುವುದನ್ನು ನೋಡಬೇಕು.

**ಯಾವ ಇಲಾಖೆಯಲ್ಲೇ ಆಗಲಿ 18 ಪರ್ಸೆಂಟು ಹರಿಜನರು ಕಡಿಮೆ ಇದ್ದರೆ ಬೇರೆಯವರಿಗೆ ನೌಕರಿ ಕೊಡುವುದನ್ನು ನಿಲ್ಲಿಸಿ, ಹರಿಜನರಿಗೇ ಕೊಡಬೇಕು ಎಂದು ಒಂದು ಸರ್ಕಾರಿ ಆಜ್ಞೆ ಮಾಡಿದ್ದೆವು.** ನೀವು ಕರ್ತವ್ಯಪಾಲನೆ ಸರಿಯಾಗಿ ಮಾಡಬೇಕಾದರೆ, ಅಂದರೆ ಬರೀ ಶ್ರೀಮಾನ್ ರಾಚಯ್ಯನವರು, ಸೋಷಿಯಲ್ ವೆಲ್‌ಫೇರ್ ಮಂತ್ರಿಗಳು ಇವರುಗಳೇ ಅಲ್ಲ ಬಾಕಿ ಮಂತ್ರಿಗಳು ಎಲ್ಲರೂ ಸೇರಿ ಈ ಪ್ರಶ್ನೆಯನ್ನು ಒಂದು ಮಾನವೀಯ ದೃಷ್ಟಿಯಿಂದ ನೋಡಿ ಸರಿಪಡಿಸಬೇಕು ಎಂದು ತಮ್ಮಲ್ಲಿ ಅರಿಕೆ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ

* * *

# ಸಹಕಾರ ಸಚಿವರ ವಿರುದ್ಧ ಕ್ರಿಯಾಲೋಪ

13, ಏಪ್ರಿಲ್ 1968

**ಶ್ರೀ ಎಚ್. ಸಿದ್ದವೀರಪ್ಪ** : ಸ್ವಾಮಿ, ಈಗ ವಿರೋಧಪಕ್ಷದ ನಾಯಕರು ಏನು ಹೇಳಿದರು ಅದನ್ನು ಪುಷ್ಟೀಕರಿಸಿ ನನ್ನ ಎರಡು ಅಂಶಗಳನ್ನು ತಮ್ಮ ಮುಂದೆ ಇಡಬೇಕೆಂದಿದ್ದೇನೆ. ಶ್ರೀಮಾನ್ ನಾಡಗೌಡರ ವೈಯಕ್ತಿಕ ವಿಚಾರದಲ್ಲಿ ನಾವು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ನಮಗೆ ಅದು ಸಂಬಂಧವೂ ಇಲ್ಲ. ಶ್ರೀಮಾನ್ ನಾಡಗೌಡರನ್ನು ನೋಡಿದರೆ ಬಹಳ ಸರಳರಂತಿದ್ದಾರೆ. ಅವರನ್ನು ನೋಡಿದರೆ ಈ ಪ್ರಶ್ನೆ ಎತ್ತಲಿಕ್ಕೆ ಮನಸ್ಸು ಹಿಂದೇಟು ಹಾಕುತ್ತಿದೆ. ಈ ವಿಷಯನ್ನು ಎತ್ತದಿದ್ದರೆ ಕರ್ತವ್ಯಲೋಪ ಆಗುತ್ತದೆಂದು ತಿಳಿದು ಈ ಪ್ರಶ್ನೆಯನ್ನು ಎತ್ತಬೇಕಾಗಿದೆ.

ಏನು ಕಾರಣವೋ ಶ್ರೀಮಾನ್ ನಾಡಗೌಡರು ಆ ಸಭೆಯಲ್ಲಿ ಈ ಸಭೆಯ ಸದಸ್ಯರುಗಳು ತುಂಬಾ ಗಲಾಟೆ ಮಾಡುತ್ತಾರೆ. ತುಂಬಾ ಗದ್ದಲ ಮಾಡುವ ಜನ, ನಮಗೆ ಯಾವ ಕೆಲಸವನ್ನೂ ನಡೆಯದಂತೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಈ ರೀತಿಯ ಆಕ್ರೋಶವನ್ನು ವ್ಯಕ್ತಪಡಿಸದೆ ಸದಸ್ಯರಿಗೆ ಗೌರವ ಕೊಡಬೇಕು, ಗೌರವ ತೆಗೆದುಕೊಳ್ಳಬೇಕು. ನಾವು ಒಂದು ಲಕ್ಷ ಜನರಿಂದ ಆರಿಸಿ ಬಂದಿದ್ದೇವೆ. ನಾವುಗಳು ಗಲಾಟೆ ಮಾಡುವುದಕ್ಕಾಗಿಯಾಗಲಿ, ದರೋಡೆ ಮಾಡುವುದಕ್ಕಾಗಿಯಾಗಲಿ ಇಲ್ಲಿಗೆ ಬಂದಿಲ್ಲ. ನಾವು ನಮ್ಮ ಕರ್ತವ್ಯವನ್ನು ಮಾಡುವುದಕ್ಕೆ ಇಲ್ಲಿಗೆ ಬಂದಿದ್ದೇವೆ. ಈ ಸಭೆಗೆ ಬಿಸಿರಕ್ತ ಇರುವವರು, ತರುಣರು ಮತ್ತು ನವ ಚೈತನ್ಯ ಇರುವವರು ಬಂದಿದ್ದಾರೆ, ಇವರು ಮಾಡತಕ್ಕ ಭಾಷಣದಿಂದಲೇ ಇವರುಗಳ ಧೋರಣೆ ಏನು ಎಂಬುದು ಗೊತ್ತಾಗುತ್ತದೆ. ನಮಗೆ ಅಗೌರವ ಮಾಡಿದ್ದಾರೆ ಎಂಬುದು ಖಚಿತವಾದ ಅಭಿಪ್ರಾಯವಾಗಿದೆ. ಆದ್ದರಿಂದ ಶ್ರಿಮಾನ್ ನಾಡಗೌಡರಿಗೆ ಹೇಳುತ್ತೇನೆ : ಆಂಗ್ಲ ಭಾಷೆಯೆಂಬುದು ಬಹಳ ಸುಲಭವಾದ ಭಾಷೆ. ಆಂಗ್ಲ ಭಾಷೆಯಲ್ಲಿ "ಐ ಆ್ಯಮ್ ಸಾರಿ" [I am sorry] ಎಂದು ಹೇಳಿದರೆ ಕ್ಷಮಾಪಣೆ ಕೇಳಿದಂತಾಗುತ್ತದೆ. ಆದ್ದರಿಂದ ತಾವು ಪ್ರತಿಷ್ಠೆಗೆ ನಿಂತುಕೊಳ್ಳದೆ ನಿಮ್ಮ ಮನಸ್ಸು ಬದಲಾಯಿಸಿ ಕ್ಷಮಾಪಣೆ ಕೇಳಿ. ಆ ರೀತಿ ಕೇಳಿಬಿಟ್ಟರೆ ನಿಮ್ಮ ಡಿಮ್ಯಾಂಡನ್ನು ಮಂಡಿಸಲು ಗೇಟ್‌ಪಾಸ್ ಸಿಕ್ಕಿದಂತೆ ಎಂದು ಹೇಳಿ ಮಾನ್ಯ ಅಧ್ಯಕ್ಷರ ಮೂಲಕ ಅವರಿಗೆ ಸಲಹೆ ಮಾಡುತ್ತೇನೆ.

* * *

# ಆಸ್ಪತ್ರೆಗಳ ಪರಿಸ್ಥಿತಿ ಮೇಲಿನ ಚರ್ಚೆ

1973 – 74

[ಶಾಸಕ ಶ್ರೀ ವೈ. ರಾಮಚಂದ್ರ ಅವರು ಸದನದಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಸಚಿವ ಶ್ರೀ ಎಚ್. ಸಿದ್ದವೀರಪ್ಪ ಅವರಿಗೆ, "......ಈಗ ಆಸ್ಪತ್ರೆಯಲ್ಲಿ ಇರತಕ್ಕ ಔಷಧವನ್ನು ಚೆಕ್ ಮಾಡುವುದಕ್ಕೆ ವ್ಯವಸ್ಥೆ ಇಲ್ಲದಿರುವುದಿಂದ ದುರುಪಯೋಗ ಆಗುತ್ತಿದೆ. ಇದರ ಜೊತೆಗೆ ಡಾಕ್ಟರುಗಳು ದುಡ್ಡು ತೆಗೆದುಕೊಂಡು ಚಿಕಿತ್ಸೆ ಕೊಡುತ್ತಿದ್ದಾರೆ. ಇದನ್ನು ತಪ್ಪಿಸಬೇಕು. ಈಗ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಒಂದು ಸ್ಪೆಷಲ್ ಸೆಲ್‌ನಲ್ಲಿ ಮಂತ್ರಿಗಳ ಕಂಟ್ರೋಲ್‌ನಲ್ಲಿ ಇರುವಂತೆ ರಚನೆ ಮಾಡಿದ್ದಾರೆ, ಆ ಸೆಲ್‌ನವರು ಸರ್ಪ್ರೈಜ್ ರ್‍ಯಾಂಡಮ್ ಚೆಕ್‌ಗೆ ಹೋಗಿ ಫಿಸಿಕಲ್ ವೆರಿಫಿಕೇಷನ್ ಮಾಡುತ್ತಾರೆ. ಅದೇ ರೀತಿ ಇಲ್ಲಿಯೂ ಮಾಡುತ್ತೀರಾ?" ಎಂದು ಕೇಳಲಾದ ಪ್ರಶ್ನೆಗೆ ಸಂಬಂಧಿಸಿದ ಉತ್ತರ ಇಲ್ಲಿದೆ.]

**ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು):** ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಯಾವ ಪದ್ಧತಿ ಇದೆ ಎಂಬುದು ನನಗೆ ಗೊತ್ತಿಲ್ಲ. ಔಷಧಿಗಳು ಸರಿಯಾಗಿ ಸಪ್ಲೈ ಆಗುತ್ತಿಲ್ಲ. ಅದರಲ್ಲಿ ಸಾಕಷ್ಟು ದುರುಪಯೋಗ ಆಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ಬಂದ ಮೇಲೆ ಒಂದು ಹೈಪವರ್ ಕಮಿಟಿಯನ್ನು ನೇಮಕ ಮಾಡಿದ್ದೇವೆ. ಮೊದಲು ಇದ್ದಂತಹ ಪದ್ಧತಿಯ ಪ್ರಕಾರ ಅನೇಕ ಆಸ್ಪತ್ರೆಗಳಿಗೆ 1972 – 73ರಲ್ಲಿ ಸ್ವಲ್ಪಕೂಡ ಔಷಧಗಳು ಸರಬರಾಜು ಆಗದೆ ತೊಂದರೆ ಆದದ್ದು ನಿಜ. ಮಾನ್ಯ ಸಭೆ ಗಮನಿಸಿದಂತೆ ಈ ವರ್ಷದ ಬಜೆಟ್‌ನಲ್ಲಿ ಮೂರು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಅಲಾಟ್ ಮಾಡಿದ್ದೇವೆ. ಪ್ರತಿಯೊಂದು ಆಸ್ಪತ್ರೆಗೂ ಸಹ ಮಿನಿಮಮ್ 10, 000 ರೂಪಾಯಿಗಳ ಔಷಧವಾದರೂ ಸಪ್ಲೈ ಆಗಬೇಕೆಂದು ಆರ್ಡರ್ ಸಹ ಮಾಡಿದ್ದೇವೆ. ಜತೆಗೆ ಅವರು ಪ್ರತಿಯೊಂದಕ್ಕೂ ರೆಕಾರ್ಡ್ ಇಟ್ಟು ಡಿ.ಎಚ್.ಓ.ಗಳಿಗೆ ತಿಳಿಸಬೇಕು. ಡಿ.ಎಚ್.ಓ. ಅವರು ಸರ್ಕಾರಕ್ಕೆ ತಿಳಿಸಬೇಕು. ಇದಕ್ಕಾಗಿ ಜಾಯಿಂಟ್ ಡೈರೆಕ್ಟರ್ ಆದ ಶ್ರೀ ರುದ್ರಪ್ಪನವರನ್ನು ಇನ್‌ಚಾರ್ಜ್

ಮೆಡಿಕಲ್ ಸ್ಟೋರ್ಸ್ ಆಗಿ ನೇಮಕ ಮಾಡಲಾಗಿದೆ. ಅವರು ನಿಷ್ಠಾಪ್ರಮಾಣಿಕರಾದ ಅಧಿಕಾರಿ ಆಗಿದ್ದಾರೆ. ಈ ಹೈಪವರ್ ಕಮಿಟಿಯಲ್ಲಿ ಡೈರೆಕ್ಟರ್ ಹಾಗೂ ಸೀನಿಯರ್ ಸೆಕ್ರೇಟರಿ ಅವರೂ ಇದ್ದಾರೆ. ಇವರೆಲ್ಲರೂ ಸೇರಿ ಟೆಕ್ನಿಕಲ್ ರಿಪೋರ್ಟ್ ಪ್ರಕಾರ ಯಾವ ಯಾವ ಔಷಧಿಗಳನ್ನು ತೆಗೆದು ಸ್ಟಾಕ್ ಇಡಬೇಕೆಂದು ತೀರ್ಮಾನ ಮಾಡುತ್ತಾರೆ. ಈ ಮೊದಲು ಮಾರ್ಚ್ ತಿಂಗಳಲ್ಲಿ ತೆಗೆದಿಡಲಾಗುತ್ತಿತ್ತು. ಈಗ ಇದನ್ನು ತಪ್ಪಿಸಿ ಮೊದಲ ಕ್ವಾರ್ಟರ್‌ನಲ್ಲಿಯೇ ಎಷ್ಟೆಷ್ಟು ಔಷಧಿ ಬೇಕು, ಯಾವ ಕಂಪನಿಯಿಂದ ತರಿಸಬೇಕು ಎಂಬುದನ್ನೆಲ್ಲ ಸರಿಯಾದ ರೀತಿಯಲ್ಲಿ ಲೆಕ್ಕಾಚಾರ ಮಾಡಿ ನಂತರ ಔಷಧಿಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದ್ದೇವೆ. ಇದೇ ರೀತಿಯಲ್ಲಿ ಅವರು ಮಾಡುತ್ತಿದ್ದಾರೆ ಮತ್ತು ಈಗ ಇರುವ ತೊಂದರೆಯನ್ನು ತಪ್ಪಿಸಿ ಸರಿಯಾದ ರೀತಿಯಲ್ಲಿ ಎಲ್ಲಾ ಕಡೆಗೂ ಔಷಧಿಗಳನ್ನು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದರಂತೆ ಸಪ್ಲೈ ಆಗಬಹುದೆಂದು ನಿರೀಕ್ಷೆ ಮಾಡಿದ್ದೇವೆ. ಮಂತ್ರಿಯವರು ಇದರಲ್ಲಿ ಬರಬೇಕಾದ ಅವಶ್ಯಕತೆಯಿಲ್ಲ. ಈ ಕೆಲಸವನ್ನು ಡೈರೆಕ್ಟರ್ ಅವರು, ಸಂಬಂಧಪಟ್ಟ ಸೆಕ್ರೇಟರಿ ಅವರು ಮಾಡಬೇಕು.

**ಶ್ರೀ ವೈ. ರಾಮಚಂದ್ರ** : ನಾವು ರ್‍ಯಾಡಿಕಲ್ ಚೇಂಜಸ್ ಮಾಡುತ್ತೇವೆ ಎಂದು ಹೇಳುತ್ತೇವೆ. ಈ ಕಾರಣದಿಂದ ಯಾವುದೇ ಆದರೂ ಮಂತ್ರಿಗಳ ಹತೋಟಿಯಲ್ಲಿರಬೇಕೇ ಹೊರತು, ಡೈರೆಕ್ಟರ್ ಅವರ ಹತೋಟಿಯಲ್ಲಿದ್ದರೆ, ಏನೇ ತಪ್ಪುಗಳು ಬಂದರೂ ಸಹ ಅವರು ಬಿಟ್ಟುಕೊಡುವುದಿಲ್ಲ. ಬಡವರಿಗೆ ಉದ್ಧಾರ ಮಾಡುತ್ತೇವೆಂದು ನಾವು ಹೇಳುತ್ತಿರುವುದರಿಂದ ಈಗಿನ ರೆಡ್ ಟೇಪಿಜಂ ಪದ್ಧತಿಯನ್ನು ಬದಲಾವಣೆ ಮಾಡಬೇಕಾಗುತ್ತದೆ. ಈ ಕಾರಣದಿಂದ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿರುವಂತಹ ಪದ್ಧತಿಯನ್ನು ಇಲ್ಲಿಯೂ ಜಾರಿಗೆ ತರಬೇಕು. ನಾನೇ ಅಲ್ಲಿಗೆ ಹೋಗಿ ನೋಡಿ ವಿಚಾರಿಸಿಕೊಂಡು ಬಂದು ಇಲ್ಲಿ ಹೇಳುತ್ತಿದ್ದೇನೆ. ಆದ್ದರಿಂದ ಅಲ್ಲಿಯ ಪದ್ಧತಿಯನ್ನು ಇಲ್ಲಿಯೂ ಜಾರಿಗೆತಂದು ಇಬ್ಬರು ಡಾಕ್ಟರುಗಳನ್ನು, ಇಬ್ಬರು ಕಾಂಪೌಂಡರುಗಳನ್ನು ಚೆಕ್ ಮಾಡಿದರೆ ಬೇರೆಯವರಿಗೂ ಸಹ ಒಂದು ರೀತಿಯ ಗಾಬರಿ ಇರುತ್ತದೆ. ಮತ್ತು ಸೆಲ್‌ನವರು ಒಳ್ಳೆಯ ವರದಿಯನ್ನೂ ಸಹ ನಮಗೆ ಕೊಡುತ್ತಾರೆ. ಆದ್ದರಿಂದ ರ್‍ಯಾಡಿಕಲ್ ಚೇಂಜಸ್ ಮಾಡುತ್ತೀರಾ?

**ಶ್ರೀ ಎಚ್. ಸಿದ್ದವೀರಪ್ಪ** : ಈಗ ಹೈಪವರ್ ಕಮಿಟಿಗೆ ಇಲಾಖೆಯವರು ಆರಿಸಿ ಬರುತ್ತಾರೆ, ಮತ್ತು ಈಗ ಇರತಕ್ಕ ಪದ್ಧತಿಯಲ್ಲಿ ನ್ಯೂನ್ಯತೆಗಳು ಏನಿವೆ, ಯಾವರೀತಿಯ ತೊಂದರೆಗಳು ಇವೆ ಅವುಗಳನ್ನು ಜನರು ನೇರವಾಗಿ ಬರೆಯುತ್ತಾರೆ. ಜನಗಳೇ ಇಂತಿಂಥ ಊರಿನಲ್ಲಿ ಔಷಧಿಯಿಲ್ಲ ತೊಂದರೆಯಾಗಿದೆ, ಇಂತಿಂಥವರು ಮಾರಿಕೊಳ್ಳುತ್ತಾರೆ, ಇಂತಿಂಥ ಅನ್ಯಾಯಗಳು ಆಗುತ್ತಿವೆ ಎಂದು ಬರೆದಾಗ ಅಂತಹವುಗಳನ್ನು ವಿಜಿಲೆನ್ಸ್ ಕಮಿಷನ್ನಿಗೆ ಕಳುಹಿಸಿ ಎನ್‌ಕ್ವಯರಿ ಮಾಡುವುದಕ್ಕೆ

ಏರ್ಪಾಡು ಮಾಡುತ್ತಿದ್ದೇವೆ. ನನಗೆ ಮಧ್ಯಪ್ರದೇಶದಲ್ಲಿ ಯಾವ ಪದ್ಧತಿ ಅನುಸರಿಸಿದ್ದಾರೆ ಎಂಬುದು ತಿಳಿಯದು. ಆದ್ದರಿಂದ ನಾನು ಮಹಾರಾಷ್ಟ್ರ ಸರ್ಕಾರಕ್ಕೆ ಬರೆಯುತ್ತೇನೆ, ಮತ್ತು ಅಲ್ಲಿ ಯಾವ ಪದ್ಧತಿಯನ್ನು, ಕ್ರಮವನ್ನು ಅನುಸರಿಸಿದ್ದಾರೆಂದು ತಿಳಿದುಕೊಳ್ಳಬಯಸುತ್ತೇನೆ. ಅದರ ಮೇಲೆ ವಿಚಾರ ಮಾಡೋಣ.

**ಶ್ರೀ ವೈ. ರಾಮಚಂದ್ರ** : ಆಫೀಸರ್ಸ್ ರಿಪೋರ್ಟ್ ತರಿಸುವುದು ಸರಿಯಲ್ಲ.

**ಶ್ರೀ ಎಚ್. ಸಿದ್ದವೀರಪ್ಪ** : ಆಫೀಸರ್ಸ್‌ಗಳನ್ನು ಬಿಟ್ಟು ಮೂವ್ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀವೈ. ರಾಮಚಂದ್ರ** : ಈಗ ಇರತಕ್ಕಂತಹ ಸಿಸ್ಟಂ ಅನ್ನು ಬದಲಾವಣೆ ಮಾಡಿ ಡೈರೆಕ್ಟರ್ ಮೂಲಕ ತಾವು ವರದಿಯನ್ನು ತರಿಸಿಕೊಳ್ಳುವುದರಿಂದ ಅಷ್ಟು ಪ್ರಯೋಜನವಾಗುವುದಿಲ್ಲ. ಯಾವುದೇ ಒಂದು ರೋಗಿಗೆ ಆಪರೇಷನ್ ಮಾಡಬೇಕಾದರೆ ಸರಿಯಾಗಿ ದುಡ್ಡುಕೊಟ್ಟರೆ ಮಾತ್ರ ಕೆಲಸ, ಇಲ್ಲದಿದ್ದರೆ ಸಂಬಂಧಿಸಿದ ಡಾಕ್ಟರು ಗಮನವನ್ನೆ ಕೊಡುವುದಿಲ್ಲ. ಆದ್ದರಿಂದ ತಾವು ಬಡವರಿಗೆ ಅನುಕೂಲ ಮಾಡುಕೊಡುವ ದೃಷ್ಟಿಯಿಂದ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿರುವಂತೆ ಒಂದು ಸೆಲ್‌ನ್ನು ರಚನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

**ಶ್ರೀ ಎಚ್. ಸಿದ್ದವೀರಪ್ಪ** : ಈ ಸಲಹೆಯನ್ನು ನಾವು ಪರಿಗಣಿಸುತ್ತೇವೆ.

**ಶ್ರೀ ಕೆ. ಚೆನ್ನಬಸವನಗೌಡ** : ತಾಲ್ಲೂಕು ಅಭಿವೃದ್ಧಿಯವರ ಅಧೀನದಲ್ಲಿ ಹೆಲ್ತ್ ಯೂನಿಟ್ ಮತ್ತು ರೂಲ್ಸ್ ಡಿಸ್ಪೆನ್ಸರಿ ಎಂದು ಎರಡು ತರಹ ಆಸ್ಪತ್ರೆಗಳು ಇವೆ. ಇವುಗಳನ್ನು ಹೇಗೆ ವಹಿಸಿಕೊಳ್ಳುತ್ತೀರಿ.

**ಶ್ರೀ ಎಚ್. ಸಿದ್ದವೀರಪ್ಪ** : ಹಂತ ಹಂತವಾಗಿ ವಹಿಸಿಕೊಳ್ಳಲಾಗುವುದು. ಒಂದೇ ದಿನದಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಬೈಫೋರ್ಸಸ್ ಯಾವ ನಮೂನೆಯ ಆಸ್ಪತ್ರೆಯೇ ಆಗಿರಲಿ ಅದನ್ನು ಸರ್ಕಾರದವರು ವಹಿಸಿಕೊಳ್ಳಬೇಕು ಎಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಈ ವರ್ಷದ ಬಜೆಟ್‌ನಲ್ಲಿ ಹಣವನ್ನು ಮುಂಗಡವಾಗಿ ತೆಗೆದಿರಿಸಲಾಗಿದೆ. ತಾಲ್ಲೂಕು ಅಭಿವೃದ್ಧಿ ಮಂಡಳಿಯ ಆ ಆಸ್ಪತ್ರೆಗಳಲ್ಲಿ ಸಿಬ್ಬಂದಿಯವರಿಗೆ ಸರಿಯಾಗಿ ಸಂಬಳ ಸಿಕ್ಕುತ್ತಿಲ್ಲ. ಅವರಿಗೆ ತೊಂದರೆಯಾಗುತ್ತಿದೆ ಎಂದು ರೆಕರಿಂಗ್ ಎಕ್ಸ್‌ಪೆಂಡಿಚರ್‌ನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಪಾಲಿಸಿ ಡಿಸಿಷನ್ ತೆಗೆದುಕೊಂಡಿದ್ದೇವೆ. ಅವುಗಳನ್ನು ಹಂತಹಂತವಾಗಿ ತೆಗೆದುಕೊಳ್ಳುವುದು ಎಂದರೆ ವರ್ಷಬಿಟ್ಟು ವರ್ಷ ಅಲ್ಲ. ಸಾಧ್ಯವಾದಷ್ಟು ಈ ವರ್ಷದ ಅವಧಿಯಲ್ಲೇ ನಮ್ಮ ವಶಕ್ಕೆ ತೆಗೆದುಕೊಳ್ಳುತ್ತೇವೆ. ಮುಂಬರುವ ಖರ್ಚಿಗೆ ತಾಲ್ಲೂಕು ಬೋರ್ಡು ಸಹಾಯ ನಿಧಿಯ ಮೇಲೆ ಅವಲಂಬಿಸಬಾರದೆಂದು ನಾನು ಅವರಿಗೆ ಆದೇಶಿಸಿದ್ದೇನೆ.

ತುಮಕೂರಿನಲ್ಲಿ ಹೊರರೋಗಿಗಳ ವಾರ್ಡು ಅತ್ಯಾವಶ್ಯವಾಗಿ ಬೇಕಾಗಿದೆ. ಅದು ಸರ್ಕಾರದ ಗಮನಕ್ಕೂ ಬಂದಿದೆ. ಆದಷ್ಟು ಜಾಗ್ರತೆಯಾಗಿ ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ....

**ಶ್ರೀ ವೈ. ರಾಮಚಂದ್ರ :** ಜನಸಂಖ್ಯೆ ಹೆಚ್ಚಾಗುತ್ತಾ ಇದೆ. ಖಾಸಗಿ ಆಸ್ಪತ್ರೆಗಳ ಸಂಖ್ಯೆಯೂ ಬೆಳೆಯುತ್ತಿದೆ. ಅವುಗಳೂ ತುಂಬಿ ತುಳುಕುತ್ತಿವೆ. ಅಲ್ಲಿ ಬಡಬಗ್ಗರಿಗೆ ಅನುಕೂಲ ಇಲ್ಲ. ಆದ್ದರಿಂದ ಉಚಿತ ವಾರ್ಡು, ಉಚಿತ ಚಿಕಿತ್ಸೆ ಕೊಡಬೇಕು. ಸೇಂಟ್ ಜಾನ್ ಮೆಡಿಕಲ್ ಕಾಲೇಜು ಆಸ್ಪತ್ರೆ ಮೇಲೆ ನಿಮಗೆ ಹಿಡಿತ ಇದೆ. ಆದರೆ ಮಣಿಪಾಲ ಆಸ್ಪತ್ರೆಯಲ್ಲಿ ಬಡವರಿಗೆ ಚಿಕಿತ್ಸೆ ಇಲ್ಲ, ಔಷಧಿಯನ್ನು ಕೊಡುತ್ತಿಲ್ಲ. ಅಲ್ಲಿ 50 – 100 ರೂಪಾಯಿ ಚಾರ್ಜು ಮಾಡುತ್ತಾರೆ. ಬಡವರಿಗೆ ಯಾವ ರೀತಿಯ ಸೌಲಭ್ಯವೂ ಇಲ್ಲ. ಇಂಥಲ್ಲಿ ಬಡವರ ಅನುಕೂಲಕ್ಕಾಗಿ ಉಚಿತ ವಾರ್ಡುಗಳನ್ನು ಏಕೆ ತೆಗೆಯಬಾರದು?

ಶ್ರೀ **ಎಚ್. ಸಿದ್ದವೀರಪ್ಪ :** ಈ ವಿಚಾರವನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಬೇಕಾಗಿದೆ. ಏಕೆಂದರೆ ನಾವು ಹೋಗಿ ಸುಮ್ಮನೆ ಕೈ ಹಾಕುವುದಕ್ಕಿಂತ ಅದು ಫಲಕಾರಿ ಆಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಸರ್ಕಾರಕ್ಕೆ ಅಧಿಕಾರವಿದೆ. ಅದನ್ನು ವಿಚಾರ ಮಾಡಬೇಕು. ಆ ರೀತಿಯ ಅಧಿಕಾರವಿದ್ದರೆ ಖಂಡಿತಾ ಮಾಡುತ್ತೇವೆ. ಸೇಂಟ್ ಜಾನ್ ಆಸ್ಪತ್ರೆಯಲ್ಲಿಯೂ ದುಡ್ಡು ಕೊಡುವವರಿಗೂ ಸರಿಯಾಗಿ ಟ್ರೀಟ್‌ಮೆಂಟು ಸಿಕ್ಕುತ್ತಿಲ್ಲ. ಈ ಆಸ್ಪತ್ರೆಗಳಲ್ಲಿ ಏತಕ್ಕೋಸ್ಕರ ಫ್ರೀಯಾಗಿ ಸರ್ವೀಸ್ ಮಾಡಬಾರದೆಂದು ಕೇಳತಕ್ಕ ಪ್ರಶ್ನೆಯನ್ನು ನಾವು ವಿಚಾರ ಮಾಡೋಣ.

* * *

# ನಿಷ್ಪಕ್ಷಪಾತ ಚುನಾವಣೆ ಕುರಿತು...

19, ಜುಲೈ 1967

**ಶ್ರೀ ಎಚ್. ಸಿದ್ದವೀರಪ್ಪ :** ಸ್ವಾಮಿ, ಈಗ ಮೊದಲು ನ್ಯಾಯಾಂಗ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನಮ್ಮ ರಾಜ್ಯದ ಸುದೈವ, ಈ ರಾಜ್ಯದಲ್ಲಿ ಸುವ್ಯವಸ್ಥಿತವಾಗಿ ನಿಷ್ಪಕ್ಷಪಾತದಿಂದ ವರ್ತಿಸುತ್ತಿರುವ ನ್ಯಾಯಾಂಗ ಪದ್ಧತಿಯನ್ನು ಪಡೆದಿದ್ದೇವೆ. ಅನೇಕಸಾರಿ ನಮಗಾದರೂ ಅನ್ನಿಸುತ್ತದೆ; ಈ ದೇಶದಲ್ಲಿ ನ್ಯಾಯ ಏನಾದರೂ ದೊರೆಯಬೇಕಾದರೆ ಧರ್ಮದಿಂದ ಯಾವ ತೀರ್ಪುಗಳು ದೊರೆಯಬೇಕಾದರೂ ನಿಮ್ಮಿಂದ ದೊರೆಯುವುದಿಲ್ಲ. ನಮಗೆ ಏನು ಬೇಕಾದರೂ ಕೆಂಪು ಬಿಲ್ಡಿಂಗ್‌ಗೆ ಹೋಗಿ ನ್ಯಾಯ ದೊರೆಕಿಸಿಕೊಳ್ಳಬೇಕಾಗಿದೆಯೇ ಹೊರತು ನಿಮ್ಮಿಂದ ನ್ಯಾಯ ಸಿಕ್ಕಿಲ್ಲ. 3–4 ವರ್ಷಗಳಿಂದ ಪರಂಪರೆಯಾಗಿ ಬರುತ್ತಿರುವ ರಿಟ್ ಪಿಟಿಷನ್ಸ್ ನೋಡಿದರೆ ಸಾಕು ನೀವು ಹೇಳುತ್ತಾ ಇರುವುದು, ಮಾಡುತ್ತಾ ಇರುವುದು ಅನೇಕಸಾರಿ ಜನಗಳಿಗೆ ನ್ಯಾಯ ದೊರೆಕಿಸಿರುವುದು ನೋಡಿದ್ದೇವೆ. ನ್ಯಾಯಾಂಗ ಸುವ್ಯಸ್ಥಿತ ರೀತಿಯಿಂದ ಕೆಲಸ ಮಾಡುತ್ತಿರುವುದಕ್ಕೆ ಅವರಿಗೆ ಧನ್ಯವಾದ ಅರ್ಪಿಸಬೇಕಾಗಿದೆ.

ಸರ್ಕಾರಕ್ಕೆ ಅನೇಕಸಾರಿ ನ್ಯಾಯಾಂಗಕ್ಕೂ ಕೂಡ ವಿರುದ್ಧವಾಗಿ ಹೋಗತಕ್ಕ ಛೀಮಾರಿತನ, ಹಠಮಾರಿತನ, ದಡ್ಡತನ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಅನೇಕಸಾರಿ ನಿಮ್ಮಮೇಲೆ ಕಂಟೆಪ್ಟ್ ಆಫ್ ಕೋರ್ಟ್ ಕೇಸು ಹಾಕಿದ್ದಾರೆ. ಇದು ಒಂದೇ ಸಾಕು, ನಿಮ್ಮ ಆಡಳಿತ ನ್ಯಾಯಸಮ್ಮತವಾಗಿಲ್ಲ. ಇದು ಧರ್ಮದ ಆಡಳಿತ ಅಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು. ಮೊನ್ನೆ 23 ಜನ ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕವರಿಗೆ ಏನೇನೋ ಸನ್ನಿವೇಶದಿಂದ ನೌಕರಿ ಕೊಟ್ಟುಬಿಟ್ಟಿರಿ. ಆಗ ನ್ಯಾಯಾಲಯಕ್ಕೆ ಹೋಗಿ ಕಂಟೆಪ್ಟ್ ಆಫ್ ಕೋರ್ಟ್ ನೋಟೀಸು ಕೊಟ್ಟರು. ಮುಖ್ಯ ಕಾರ್ಯದರ್ಶಿ ಇತ್ಯಾದಿ ಇತ್ಯಾದಿ ಎಲ್ಲರೂ ಕೋರ್ಟಿನಮುಂದೆ ನಿಲ್ಲಬೇಕಾದ ಸಂದರ್ಭ ಬಂತು. ಯಾರೋ ಮಾಡಿದ ಪಾಪ ಸನ್ಯಾಸಿಯ ತಲೆಮೇಲೆ ಎನ್ನುವುದನ್ನು ತೋರಿಸಿಕೊಟ್ಟಿರಿ.

ಇವೊತ್ತಿನ ದಿವಸ ಏನಾಗಿದೆ ಎಂದರೆ ನಮ್ಮ ನ್ಯಾಯಾಂಗ ನಮ್ಮನ್ನು ರಕ್ಷಣೆ ಮಾಡುತ್ತಾ ಇದೆ. ಅದಕ್ಕಾಗಿ ನ್ಯಾಯಾಂಗಕ್ಕೆ ತುಂಬಾ ಆಭಾರಿಯಾಗಿದ್ದೇವೆ. ಇನ್ನೊಂದು ವಿಷಯ ಹೇಳುತ್ತೇನೆ: ಚುನಾವಣೆ ವಿಷಯದಲ್ಲಿ ಈ ಬಾರಿ ಲಕ್ಷಾಂತರ ಗಟ್ಟಲೆ ಹಣವನ್ನು ಕೊಟ್ಟಿದ್ದೀರಿ. ನೀವು ಚುನಾವಣೆ ಸಂದರ್ಭದಲ್ಲಿ ಆಡಿದ ಆಟ ಎಷ್ಟು ಪುಸ್ತಕ ಬರೆದರೂ ಸಾಲದು ಎಂದು ಮನಸಾರೆ ಹೇಳುತ್ತೇನೆ. ಚುನಾವಣೆ ಕಮೀಷನ್ನಿನವರು ಡೆಲ್ಲಿಯಲ್ಲಿ ಕೂತುಕೊಂಡು ಹುಕುಂ ಸಾದರು ಮಾಡಿದರು. ಚುನಾವಣೆ ನಡೆಯುವುದಕ್ಕೆ ಮುನ್ನ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್‌ನಿಂದಾ ಯಾರನ್ನೂ ಇಲ್ಲಿಂದ ವರ್ಗಾವಣೆ ಮಾಡಕೂಡದು, ನಿಮ್ಮ ಹಸ್ತಕ್ಷೇಪ ಇರಕೂಡದು ಎಂಬ ಆದೇಶ ಸ್ಪಷ್ಟವಾಗಿತ್ತು. ಆದರೆ ಏನು ಮಾಡಿದಿರಿ? ಚುನಾವಣೆ ನಡೆಯುವುದಕ್ಕೆ 15 ದಿವಸ, ಒಂದು ತಿಂಗಳು ಮುಂಚೆಯೂ ಸಹಾ ನಿಮಗೆ ಬೇಕುಬೇಕಾದ ಅಧಿಕಾರಿಗಳನ್ನು ತೆಗೆಯುವುದು ಹಾಕುವುದು ಮಾಡಿ ಆ ಪಾಪ ನಿಮ್ಮ ತಲೆಯಮೇಲೆ ಕಟ್ಟಿಕೊಂಡಿದ್ದೀರಿ.

ಪ್ರಜಾಪ್ರಭುತ್ವದಲ್ಲಿ ಎರಡು ಸುವ್ಯವಸ್ಥಿತವಾದ ಪಕ್ಷಗಳು ಇರಲೇಬೇಕು. ಎರಡು ಸುವ್ಯಸ್ಥಿತ ಪಕ್ಷಗಳು ಇಲ್ಲದೇ ಹೋದರೆ ರಾಜ್ಯಭಾರ ನಡೆಯುವುದಿಲ್ಲ. ಇವೊತ್ತಿನ ದಿವಸ ನೀವು ಅಲ್ಲಿ ಇರಬಹುದು ಸಂತೋಷ. ಎಷ್ಟು ವರ್ಷವಾದರೂ ಇರಿ ಬೇಡ ಎಂದು ಹೇಳುವುದಿಲ್ಲ. ಸರಿಯಾದ ರೀತಿಯಿಂದ ಆಡಳಿತವನ್ನು ನಡೆಸಿಕೊಂಡು ಸುವ್ಯವಸ್ಥೆಯನ್ನು ತರಬೇಕಾದರೆ ಪ್ರಜಾಪ್ರಭುತ್ವದಲ್ಲಿ ನಿಷ್ಪಕ್ಷಪಾತದಿಂದ ಚುನಾವಣೆ ನಡೆಯಲಿಕ್ಕೆ ಅವಕಾಶ ಕೊಡಬೇಕು. ನೀವು ಹಸ್ತಕ್ಷೇಪವಮಾಡಿ, ಮಾಡಬಾರದ್ದನ್ನು ಮಾಡಿ ಯಾವರೀತಿಯಾಗಿ ಅನ್ಯಾಯಗಳನ್ನು ಮಾಡಿದ್ದೀರಿ ಎನ್ನುವುದನ್ನು ಹೇಳುತ್ತಾ ಹೋದರೆ ಗಂಟೆಗಳಾದರೂ ಸಾಲದು. ಈ ಸಮಯದಲ್ಲಿ ಅನ್ಯಾಯ ಮಾಡಿದ್ದೀರಿ. ಅದು ಅಕ್ಷಮ್ಯ ಅಪರಾಧ. ಅದು ಜಾತಿವಾದ, ದುಡ್ಡಿನವಾದ ಎನ್ನುವುದನ್ನು ನಿರ್ವಿವಾದವಾಗಿ ಹೇಳಬಹುದು. ನಮ್ಮನ್ನೆಲ್ಲಾ ಹತ್ತಿಕ್ಕಲಿಕ್ಕೆ ಪ್ರಯತ್ನಮಾಡಿದಿರಿ. ನಮ್ಮ ಪೈಕಿ ಯಾರಾದರೂ ಗೆದ್ದು ಬಂದಿದ್ದರೆ ಅದು ನಿಮ್ಮಿಂದ ತುಳಿಸಿಕೊಂಡೂ ಸಾಧಿಸಿದ ಗೆಲುವು ಅದು. ಇದು ನಾಲ್ವರಿಗೆ ಸರಿಸಮಾನವಾಗಿ ಇದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಇಡಿ ಸರ್ಕಾರದ ಮೆಷಿನರಿಯನ್ನು ಹಿಂದೆ ಇಟ್ಟುಕೊಂಡು ಚುನಾವಣೆ ನಡೆಸಿದಿರಿ. ಆದುದರಿಂದ ವಿರೋಧ ಪಕ್ಷ ಸಂಖ್ಯೆಯಲ್ಲಿ ಕಡಿಮೆ ಇದ್ದರೂ ತೂಕದಲ್ಲಿ ಕಡಿಮೆ ಇಲ್ಲ ಎನ್ನುವುದನ್ನು ಮರೆಯಬಾರದು.

## ರಸ್ತೆಗಳ ರಾಷ್ಟ್ರೀಕರಣದ ಪ್ರಸ್ತಾಪ:

ಇನ್ನೊಂದು ಸಾರಿಗೆ ಮಂತ್ರಿಗಳ ಖಾತೆಗೆ ಸಂಬಂಧಿಸಿದ ವಿಚಾರವನ್ನು ಹೇಳುತ್ತೇನೆ. ಮೊದಲು ನಮ್ಮಲ್ಲಿ ಖಾಸಗಿ ಬಸ್ಸುಗಳಿದ್ದವು. ಈ ದಿವಸ ಏನಾಗಿದೆಯೆಂದರೆ

ಒಂಬತ್ತು ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡಿದ್ದೀರಿ. ಸಾಮಾನ್ಯವಾಗಿ ಅಲ್ಲಿಗೆ ಎಷ್ಟು ಬಸ್ಸುಗಳನ್ನು ಹಾಕಿದ್ದೀರಿ ಎಂದರೆ ಸುಮಾರು 2,041. 1966 ಇಸವಿಯ ಅಖೈರುವರೆಗೆ ನಿಮ್ಮ ಸಿಬ್ಬಂದಿ ಇರುವುದು 15,512. ಬಂಡವಾಳ ಸರಿದೂಗಿಸುವುದಕ್ಕೆ 15 ಕೋಟಿ 20 ಲಕ್ಷ ರೂಪಾಯಿ. ಇಷ್ಟು ಖರ್ಚು ಮಾಡಿರಬೇಕಾದರೆ ಯಾವರೀತಿ ನಡೆಯುತ್ತಿದೆ ಎಂಬುದನ್ನು ನೋಡೋಣ.

ಮುಂಬೈ ಕರ್ನಾಟಕದಲ್ಲಿ ಮೊದಲೇ ರಾಷ್ಟ್ರೀಕರಣವಾಗಿತ್ತು. ಬಹಳ ಸುವ್ಯವಸ್ಥಿತವಾಗಿ ಅಲ್ಲಿ ನಡೆಯುತ್ತಿತ್ತೆಂದು ನಾನು ಕೇಳಿದ್ದೇನೆ. ಹೈದರಾಬಾದು ಪ್ರದೇಶದಲ್ಲಿ ಕೂಡಾ ರಾಷ್ಟ್ರೀಕರಣವಾಗಿತ್ತು. ಹಳೇ ಮೈಸೂರು ಪ್ರದೇಶದಲ್ಲಿ 1952ರಿಂದ ಪ್ರಾರಂಭವಾಯ್ತು. ಇಲ್ಲಿ ಒಂದು ಹೆಲ್ತಿ ಪ್ರಿನ್ಸಿಪಲ್ ಪ್ರಕಾರ ರಾಷ್ಟ್ರೀಕರಣ ಮಾಡಿದೆವು. ಮೊದಲು ಹೆದ್ದಾರಿಗಳನ್ನು ತೆಗೆದುಕೊಳ್ಳಬೇಕು ಮತ್ತು ಎಲ್ಲಿ ಜನಸಂಖ್ಯೆ, ಸಾರಿಗೆ ಹೆಚ್ಚು ಇದೆ ಅಂಥ ಭಾಗದಲ್ಲಿ ರಾಷ್ಟ್ರೀಕರಣ ಮೊದಲು ಮಾಡಬೇಕೆಂದು ತೀರ್ಮಾನ ಮಾಡಿದೆವು. ಕೆಲವುಕಡೆ ಖಾಸಗಿಯವರಿಗೆ ಬಿಟ್ಟು ನಾವು ಬಹುಶಃ ಒಳ್ಳೆಯ ಭಾಗವನ್ನು ತೆಗೆದುಕೊಂಡೆವು. ಖಾಸಗಿಯವರೂ ಕೂಡ ಕೆಲವರು ಇತರ ಭಾಗಗಳಲ್ಲಿ ಬಸ್ಸುಗಳನ್ನು ಇಟ್ಟು ಅವುಗಳಿಂದ ಜೀವನ ಮಾಡುತ್ತಿದ್ದರು.

ಮೈಸೂರು ರಾಜ್ಯದಲ್ಲಿ ಮೂರನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ಎಲ್ಲಾಭಾಗಗಳಲ್ಲೂ ರಾಷ್ಟ್ರೀಕರಣ ಮಾಡುವುದಾಗಿ ಸರಕಾರದವರು ಹೇಳಿದ್ದರು. ಆದರೆ ಈ ಯೋಜನೆ ಮುಗಿಯುವುದರೊಳಗಾಗಿ ಹೇಳಿದಂತೆ ಮಾಡುವುದಕ್ಕೆ ಸರಕಾರದ ಕೈಲಾಗಲಿಲ್ಲ. ಕೆಲವು ಕಾಲವಾದರೂ ಜನರ ಬೇಡಿಕೆ ಇರಬೇಕು, ಆಮೇಲೆ ತೆಗೆದುಕೊಳ್ಳುವುದು ಉತ್ತಮ ಎಂದು ಹಾಗೆ ಮಾಡಿರಬಹುದು. ದೊಡ್ಡದೊಡ್ಡ ನಗರಗಳಲ್ಲಿ ಹೇಗೆ ರಾಷ್ಟ್ರೀಕರಣ ಮಾಡಿದಿರೋ ಹಾಗೆಯೇ ಇತರ ಕಡೆಗಳಲ್ಲೂ ಮಾಡಿದ್ದರೆ ಆಕಾಶ ಭೂಮಿಯೇನು ತಲೆಕೆಳಗಾಗುತ್ತಿರಲಿಲ್ಲ. ಇದೇನು ತೋರಿಸುತ್ತದೆಯೆಂದರೆ ಯಾವ ಕೆಲಸವನ್ನೂ ಸರಕಾರ ಹೇಳಿದಂತೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದು. ಇದನ್ನು ಮಾಡುವಾಗ ದಿಟ್ಟ ಹೆಜ್ಜೆಯನ್ನು ಭದ್ರವಾಗಿ ಇಟ್ಟರೆ ದೇಶಕ್ಕೆ ಕ್ಷೇಮ. ಇದರಿಂದ ನಷ್ಟ ತಪ್ಪಿಸಬಹುದು.

ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳುತ್ತೇನೆ: 1947ನೇ ಇಸವಿಯಿಂದ ರಾಷ್ಟ್ರೀಕರಣ ಮೊದಲು ಮಾಡಲಾಯಿತು. 1948ರಲ್ಲಿ ದಿವಂಗತ ಶ್ರೀ ಟಿ. ಮರಿಯಪ್ಪನವರು ಹಳೆಯ ಮೈಸೂರಿನಲ್ಲಿ ಮೊದಲು ರಾಷ್ಟ್ರೀಕರಣ ಶುರುಮಾಡಿದರು. ಆಗ ನಾನೂ ಸಹ ಐದು ವರ್ಷ ನಮ್ಮ ರಸ್ತೆ ಸಾರಿಗೆ ಇಲಾಖೆ ನೋಡಿಕೊಳ್ಳುತ್ತಿದ್ದೆ. ಆಗ ಎಲ್ಲರಿಗೂ ಬಹಳ ಮೆಚ್ಚಿಗೆಯಾಗುವಂತೆ ಕೆಲಸ ನಡೆಯಿತು. ಸುಮಾರು 320 ಮೈಲಿಗಳ ರಾಷ್ಟ್ರೀಕರಣ ಮಾಡಿ ಅದರಿಂದ ಶೇ. 34 ನಿವ್ವಳ ಲಾಭ ಬರುತ್ತಿತ್ತು. 130 ಬಸ್ಸುಗಳಿದ್ದವು. ನಿಮ್ಮಹಾಗೆ ಡಿಪ್ರೀಷಿಯೇಷನ್, ಓವರ್

ಡಿಪ್ರೀಷಿಯೇಷನ್ ಎಲ್ಲಾ ತೆಗೆದು ಕೆಲಸಗಾರರಿಗೆ ಹೊಟ್ಟೆ ತುಂಬುವಷ್ಟು ಕೈ ತುಂಬಾ ಸಂಬಳಕೊಟ್ಟು ಸಂತೋಷದಿಂದ ಇರುವಂತೆ ನೋಡಿಕೊಳ್ಳಲಾಗುತ್ತಿತ್ತು. ಹೀಗಾಗಿ ಒಂದು ವರ್ಷಕ್ಕೆ ನೆಟ್ 31.6 ಪರ್ಸಂಟೇಜ್ ಉಳಿಯಿತು. ಆಗಿನ ಜನರಲ್ ಮೇನೇಜರ್ ಇನ್ನೂ ಸರ್ವಿಸ್ಸಿನಲ್ಲಿದ್ದು ಉನ್ನತ ಹುದ್ದೆಯಲ್ಲಿದ್ದಾರೆ. ಅವರನ್ನು ಈ ಬಗ್ಗೆ ಕೇಳಬಹುದು.

## ಚಿತ್ರದುರ್ಗದಿಂದ ಹರಿಹರದವರೆಗೆ ರಾಷ್ಟ್ರೀಕರಣ ಏಕಿಲ್ಲ?

ಅದೇ ಈ ದಿವಸ ಪರಿಸ್ಥಿತಿ ಏನಾಗಿದೆ? ಇಷ್ಟು ಹಣಹಾಕಿ ಮಾಡಿರುವುದೇನು? ಸ್ಥಿಮಿತವಾಗಿಯಾದರೂ ಮುಂದುವರೆಯುತ್ತೀರಾ ಅಂದರೆ ಅದೂ ಇಲ್ಲ. ಇದಕ್ಕೆ ಒಂದು ಉದಾಹರಣೆ ಹೇಳಬಹುದು. ಬೆಂಗಳೂರಿನಿಂದ ಬೆಳಗಾಂವರೆಗೆ ರಾಷ್ಟ್ರೀಕರಣವಾಗಿದೆ. ಆದರೆ ಚಿತ್ರದುರ್ಗದಿಂದ ಹರಿಹರದವರೆಗೆ ರಾಷ್ಟ್ರೀಕರಣದ ಬಸ್ಸುಗಳಿಲ್ಲ. ನಾನು ಸಚಿವನಾಗಿದ್ದಾಗ ಮೂರು ತಿಂಗಳು ಕಾಲಾವಕಾಶಕೊಡಿ ಬೇರೆ ರಸ್ತೆಗಳನ್ನು ನೋಡಿಕೊಳ್ಳುತ್ತೇವೆ ಎಂದು ಹೇಳಿದರು. ಆಗ ಬೇರೆಕಡೆ 10 ಮೈಲು ರಸ್ತೆ ಕೇಳಿದರೆ 20 ಮೈಲು ರಸ್ತೆ ಕೊಡುತ್ತಿದ್ದೆವು. 1956 ಡಿಸಂಬರ್ ಅಖೈರುವರೆಗೆ ಮಾಡುವುದನ್ನು ಮೂರು ತಿಂಗಳಕಾಲ ತಡೆಹಿಡಿಯಲಾಯಿತು. ಆದರೆ ಈಗ 1967ನೆಯ ಜೂನ್ ಅಖೈರಾದರೂ ಕೇವಲ 48 ಮೈಲಿ ರಾಷ್ಟ್ರೀಕರಣವಾಗದಿರುವುದು ಆಶ್ಚರ್ಯಕರವಾಗಿದೆ. ಹೊಸದಾಗಿ ಈಗ ನಾಲ್ಕು ರಸ್ತೆ ತೆಗೆದುಕೊಂಡಿದ್ದಾರೆ. 1961ರಲ್ಲಿ ಹಾಸನ, ಮೈಸೂರು, ಆನೇಕಲ್ ತಗೆದುಕೊಂಡರು. ಬಳ್ಳಾರಿ ತೆಗೆದುಕೊಂಡಾಗ ಆ ವಿಚಾರ ಸುಪ್ರೀಂಕೋರ್ಟ್‌ಗೆ ಹೋಯಿತು. ಅಲ್ಲಿ ತೀರ್ಮಾನವಾದಮೇಲೆ ಅದನ್ನೂ ತೆಗೆದುಕೊಂಡರು. ಇಷ್ಟೆಲ್ಲಾ ಆದರೂ, ಇಷ್ಟುಕಾಲವಾದರೂ ಕೂಡ ಚಿತ್ರದುರ್ಗವನ್ನೇಕೆ ರಾಷ್ಟ್ರೀಕರಣಕ್ಕೆ ತೆಗೆದುಕೊಳ್ಳಲಿಲ್ಲ? ಇದು ಧರ್ಮವೇ? ನಿಮಗೆ ಬೇಕಾದಕಡೆ ತೆಗೆದುಕೊಳ್ಳುವುದು, ಬೇಡವಾದಕಡೆ ಬಿಡುವುದು ಸರಿಯೇ? ಚಿತ್ರದುರ್ಗದಲ್ಲಿ ನಿಮಗೆ ಬೇಕಾದವರು ಇರುವುದರಿಂದ ಅದನ್ನು ತೆಗೆದುಕೊಳ್ಳಲಿಲ್ಲವೇ? ಇದು ಯಾವ ಧರ್ಮ? ಈರೀತಿ ಮಾಡುವುದಕ್ಕೆ ನಿಮಗೆ ನಾಚಿಕೆ ಆಗುವುದಿಲ್ಲವೆ? ಇದರಿಂದ ನಿಮ್ಮ ಭಟ್ಟಂಗಿಗಳಿಗೆ ಅನುಕೂಲ ಮಾಡಿಕೊಟ್ಟಂತಾಗುವುದಿಲ್ಲವೆ?

**ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ** (ಮಳವಳ್ಳಿ): ಭಟ್ಟಂಗಿಗಳೆಂದರೇನು?

**ಶ್ರೀ ಎಚ್. ಸಿದ್ದವೀರಪ್ಪ:** ಬಹುಪರಾಕು ಹೇಳುವವರು. ಹೊಗಳು ಭಟ್ಟರು.

**ಶ್ರೀ ಅಲ್ಲಂ ಕರಿಬಸಪ್ಪ** (ಕುರುಗೋಡು): ಈಗ ಮಹಾರಾಜರೇ ಇಲ್ಲ. ಮಾನ್ಯ ಸದಸ್ಯರು ಹೇಳುವುದಕ್ಕೆ ನನ್ನ ಆಕ್ಷೇಪವಿದೆ.

**ಶ್ರೀ ಸಿದ್ದವೀರಪ್ಪ:** ಈಗಿರುವ ವಿಧಾನದಲ್ಲಿ ನಾಲ್ಕು ರಸ್ತೆಗಳನ್ನು ರಾಷ್ಟ್ರೀಕರಣ ಮಾಡಿ ಚಿತ್ರದುರ್ಗ ಒಂದನ್ನು ಮಾಡದೆ ಇರುವುದನ್ನು ನೋಡಿದರೆ ಈ ವಿಚಾರದಲ್ಲಿ ಎಷ್ಟು ಮಟ್ಟಿಗೆ ಅನ್ಯಾಯ ಮಾಡುತ್ತಿದ್ದೀರಿ ಎಂಬುದು ವ್ಯಕ್ತವಾಗುತ್ತದೆ. ರಸ್ತೆ ಸಾರಿಗೆ

ಇಲಾಖೆಯವರು ಮುದ್ರಿಸಿರುವ ಒಂದು ಪುಸ್ತಕವಿದೆ. ಇನ್ನುಮುಂದೆ ರಾಷ್ಟ್ರೀಕರಣವನ್ನು ಹೆಚ್ಚಾಗಿ ಮಾಡುವುದಕ್ಕಿಂತ ಈಗ ಮಾಡುವುದನ್ನು ಸರಿಯಾದ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಿ. ಅಲ್ಲಲ್ಲಿ ತೊಂದರೆ, ನ್ಯೂನ್ಯತೆ ಇರುವುದನ್ನು ಸರಿಪಡಿಸಿ. ಯಾವ ರಸ್ತೆಯಲ್ಲಿ ಹೆಚ್ಚು ಬಸ್ಸುಗಳನ್ನು ಓಡಿಸಬೇಕು ಅದನ್ನು ಗಮನಿಸಿ ಅದಕ್ಕೆ ಸರಿಯಾದ ಏರ್ಪಾಡು ಮುಂತಾದ್ದನ್ನು ಮಾಡಿ. ನಾವಾಗಲೇ ಚಿತ್ರದುರ್ಗ – ಹರಿಹರದ ವಿಷಯ ಹೇಳಿದ್ದೇನೆ. ಧರ್ಮದ ದೃಷ್ಟಿಯಿಟ್ಟು – ಜೂನ್ ಅಖೈರೊಳಗಾದರೂ ರಾಷ್ಟ್ರೀಕರಣ ಮಾಡಿ.

ಇನ್ನೊಂದು ಇದು Public Utility Undertaking. ಅನೇಕ ಸಾರಿಗೆ ಬಸ್ಸುಗಳು ಈಗ ಓಡುತ್ತಿವೆ. ನನಗೆ ಸ್ವಂತ ವಾಹನವಿಲ್ಲ.

**ಶ್ರೀ ಕೆ.ಎಚ್. ಪಾಟೀಲ್:** ನೀವು ವಾಹನ ಕೇಳಲಿಲ್ಲವೆ?

**ಶ್ರೀ ಎಚ್. ಸಿದ್ದವೀರಪ್ಪ:** ಕೇಳಿದ್ದೆ. ಕೊಡುವುದಕ್ಕಾಗುವುದಿಲ್ಲ ಎಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ.

Since you are not a Member of the Legislature, Since you are not a Government Officer, you are not entitled to a vehicle.

ಎಂದು ತಿಳಿಸಿದ್ದಾರೆ. ಅದನ್ನಿಟ್ಟುಕೊಂಡಿದ್ದೇನೆ. ಅದು ಸ್ವಂತ ವಿಚಾರವಾದುದರಿಂದ ಅದನ್ನು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಅವರು ಕೊಡದಿದ್ದರೆ ಸಂಕಟವಿಲ್ಲ. ನಾನು ಅನೇಕ ಸಾರಿ ಸರಕಾರಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತೇನೆ. ಒಂದುಸಾರಿ ಇಲ್ಲಿಂದ ದಾವಣಗೆರೆಗೆ ಹೋಗುವಾಗ ಲಕ್ಷುರಿ ಬಸ್‌ನಲ್ಲಿ ಪ್ರಯಾಣ ಹೊರಟೆ. ನಾನಿದ್ದ ಬಸ್ ಎದುರು ಒಂದು ಲಾರಿ ಬರುತ್ತಿತ್ತು. ಬಸ್ ಗಂಟೆಗೆ 40 ಮೈಲಿ ವೇಗವಾಗಿ ಹೋಗುತ್ತಿತ್ತು. ಸುಮಾರು ಎಂಟು ಅಡಿ ದೂರದಲ್ಲಿ ಲಾರಿ ಇದ್ದಾಗ ಇನ್ನೇನು ಲಾರಿಗೂ ಬಸ್ಸಿಗೂ ಡಿಕ್ಕಿ ಹೊಡೆಯುವ ಸಂಭವವಿದ್ದಾಗ ಡ್ರೈವರ್ ಧೈರ್ಯಮಾಡಿ ಬಸ್ಸನ್ನು ಪಕ್ಕದ ಹೊಲದಲ್ಲಿ ತಿರುಗಿಸಿದನು.

ಏಕಪ್ಪಾ, ಏಕೆ ಹೀಗೆ ಮಾಡಿದೆ ಎಂದು ಕೇಳಿದರೆ, ಅವನು ಸ್ವಾಮಿ, ಸಾಯಬೇಕೆಂದು ಯಾರಿಗಾದರೂ ಇಷ್ಟವಿದ್ದರೆ, ಸರ್ಕಾರಿ ಸಾರಿಗೆ ಬಸ್‌ಗಳಲ್ಲಿ ಬರಬೇಕು. ಯಾರಾದರೂ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಇಚ್ಚಿಸಿದರೆ ಈ ಬಸ್ಸಲ್ಲಿ ಸುಲಭವಾಗಿ ಪ್ರಾಯಾಣಿಸಬಹುದು ಎಂದು ಹೇಳಿದ. ಏನಯ್ಯಾ ಇದು ಹೀಗೆ ಹೇಳುತ್ತೀ ಎಂದು ಕೇಳಿದರೆ, ಅವನು – "ಸ್ವಾಮಿ, ನಾನು ಹೊರಡುವ ಮುಂಚೆಯೇ ಹೇಳಿದೆ, ಈ ಬಸ್ಸು ಕೊಡಬೇಡಿ. ಇದರ ಬ್ರೇಕ್ ಸರಿಯಾಗಿಲ್ಲ" ಎಂದರೂ, "ಇದನ್ನೇ ನೀನು ತೆಗೆದುಕೊಂಡು ಹೋಗು, ಇಲ್ಲದಿದ್ದರೆ ನಿನ್ನನ್ನು ಸಸ್ಪೆಂಡ್ ಮಾಡುತ್ತೇವೆ –

ಎಂದು ಹೆದರಿಸಿದರು. ಅನಿವಾರ್ಯವಾಗಿ ಇದನ್ನೇ ತೆಗೆದುಕೊಂಡು ಬರಬೇಕಾಯ್ತು" ಎಂದನು.

ನಾನು ಈ ಘಟನೆಯ ನಂತರ ಈ ಇಲಾಖೆಗೆ ಸಂಬಂಧಿಸಿದ ಸಚಿವ ಶ್ರೀ ದೇವರಾಜ ಅರಸು ಅವರಿಗೆ ಕಾಗದ ಬರೆದಿದ್ದೇನೆ. ಇವತ್ತು ಏನಾದರೂ ನೀವು ಸರ್ಕಾರಿ ಕಾರುಗಳಲ್ಲಿ ಓಡಾಡಬಹುದು, ನಾಳೆ ಮಂತ್ರಿ ಪದವಿಯಿಂದ ಕೆಳಗಿಳಿದಮೇಲೆ ನನ್ನಹಾಗೆ ಬಸ್‌ನಲ್ಲಿ ಓಡಾಡುವ ಸಂದರ್ಭ, ಪರಿಸ್ಥಿತಿ ನಿಮಗೂ ಬರುತ್ತದೆ. ಆದ್ದರಿಂದ ಇಂಥ ಕಷ್ಟವನ್ನು ಕೊಡಬೇಡಿ ಎಂದು ಹೇಳಿದ್ದೇನೆ. ಇದು ಏನು ತೋರಿಸುತ್ತದೆ ಎಂದರೆ, ಎಲ್ಲಿ ಏನು ತೊಂದರೆ ಇದೆ ಅದು ಜನಗಳ ಜೀವನಕ್ಕೆ ಸೇರಿದ್ದು; ಅದರಲ್ಲಿ ಇವರ ಜವಾಬ್ದಾರಿಯೇನೂ ಇಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. ಇಡೀ ರಾಷ್ಟ್ರದಲ್ಲಿ ನಮ್ಮಷ್ಟು ತೆರಿಗೆ ಯಾರೂ ಕೊಡುತ್ತಿಲ್ಲ. ಇದೇರೀತಿ ಬೆಲೆಗಳೂ ಹೆಚ್ಚಾಗುತ್ತಿವೆ. ಆದರೆ ಸರ್ವಿಸ್ ಕಂಡೀಷನ್ಸ್ ಏಕೆ ಸರಿಯಾಗಿ ಇಟ್ಟುಕೊಳ್ಳುವುದಿಲ್ಲ? ಇದಕ್ಕೆ ಇವರು ಪ್ರತಿದಿನವೂ ಒಂದು ರಿಪೋರ್ಟ್ ತರಿಸಿಕೊಂಡು ಒಂದೊಂದು ಲೈನಿನಲ್ಲಿ ಎಷ್ಟೆಷ್ಟು ಬಸ್ಸುಗಳು ಮುಂದಿವೆ, ಎಷ್ಟು ನಿಂತು ಹೋಗಿವೆ, ಎಷ್ಟು ಕೆಟ್ಟು ಹೋಗಿವೆ ಎಂಬುದನ್ನು ನೋಡಬೇಕು.

ಈಗ ಒಟ್ಟು ಎರಡು ಸಾವಿರ ಬಸ್ಸುಗಳು ಓಡಾಡುತ್ತಿವೆ. ಅದಕ್ಕೆ ಬೇಕಾದ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ಸರ್ವಿಸ್ ಕಂಡಿಷನ್ಸ್ ಸರಿಯಾಗಿ ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ಎಷ್ಟೋಸಾರಿ ಹೆಣ್ಣುಮಕ್ಕಳು ಸಣ್ಣಸಣ್ಣ ಮಕ್ಕಳನ್ನು ಎತ್ತಿಕೊಂಡು ರಸ್ತೆಯಲ್ಲಿ ನಿಂತಿರುವ ದೃಶ್ಯವನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಸರ್ವಿಸ್ ಕಂಡಿಷನ್ ಸರಿಯಾಗಿ ಮಾಡಿ. ನಿಮಗೆ ಸರಿಯಾಗಿ ಮಾಡಲು ಆಗದಿದ್ದರೆ ಸರಿಯಾಗಿ ಮಾಡುವವರಿಗಾದರೂ ಅವಕಾಶ ಮಾಡಿಕೊಡಿ. ಅದನ್ನು ಬಿಟ್ಟು ನೀವು ಮಾಡುವುದಿಲ್ಲ, ಇನ್ನೊಬ್ಬರಿಗೂ ಕೊಡುವುದೂ ಇಲ್ಲ.

ಹಳೆಯ ಬಾಂಬೆ ಕರ್ನಾಟಕದೊಳಗೆ ಬಹಳ ಹಳೆಯ ಬಸ್ಸುಗಳಿವೆ. ಅವಕ್ಕೆ 'ಲಟಾರಿ ಬಸ್ಸುಗಳು' ಎಂದು ಹೇಳುತ್ತಾರೆ. ಬಹುಶಃ ಹೊಸ ಬಸ್ಸುಗಳನ್ನು ಕೊಟ್ಟರೆ ಅವರಿಗೆ ಹತ್ತಲಿಕ್ಕೆ ಆಗುತ್ತದೆಯೋ ಇಲ್ಲವೋ ಏನೋ; ಆ ಹಳೆಯ ಬಸ್ಸುಗಳನ್ನು ತೆಗೆದು ಅಲ್ಲಿ ಎಲ್ಲಾ ಹೊಸ ಬಸ್ಸುಗಳನ್ನು ಹಾಕಿ ಎಂದು ಹೇಳುತ್ತೇನೆ. ಇದಕ್ಕೆ ನೀವು ಸಬೂಬು ಆಪರೇಷನ್‌ಕಾಸ್ಟ್ ಜಾಸ್ತಿಯಾಗುತ್ತದೆ ಎಂದು ಹೇಳಬಹುದು. ಅದರಲ್ಲೂ ಕಡಿಮೆ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನೀವು ಸ್ವಲ್ಪ ನೋಡಬೇಕು. ಜತೆಗೆ ನಿಮ್ಮ ಸರ್ವಿಸ್‌ನಲ್ಲಿ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕು.

ಮೊನ್ನೆತಾನೇ ಪ್ರಶ್ನೆ ಕೇಳಿದೆ – ದಾವಣಗೆರೆಯಲ್ಲಿ ಏನು ಮಾಡುತ್ತಿದ್ದೀರಿ? ಸುಮ್ಮನೆ ನಿಷ್ಕಾರಣವಾಗಿ, ಅಲ್ಲಿ ಸರ್ವಿಸ್ ಸ್ಟೇಷನ್ ಮಾಡಬೇಡಿ; ದಾವಣಗೆರೆಯಲ್ಲಿ

ಅದರ ಅಗತ್ಯವೇ ಇಲ್ಲ, ಹರಿಹರದಲ್ಲಾದರೆ ಒಂದು ಜಂಕ್ಷನ್ ಆಗುತ್ತದೆ; ಮತ್ತು ಚಿತ್ರದುರ್ಗದಲ್ಲಿ ಬಹಳ ದಿವಸದಿಂದ ಒಂದು ವರ್ಕ್‌ಶಾಪ್ ನಡೆಯುತ್ತಾ ಇದೆ. ಈಗ ದಾವಣಗೆರೆಯಲ್ಲಿ ಇದಕ್ಕೆ ಸುಮ್ಮನೆ 25 – 30 ಲಕ್ಷ ಖರ್ಚುಮಾಡಿ ಸರ್ಕಾರದ ದುಡ್ಡನ್ನು ವ್ಯಯ ಮಾಡುವುದು ಏಕೆ? ಇದನ್ನು ಈ ರೀತಿ ಮಾಡಬಾರದು ಎಂಬುದು ನನ್ನ ಆಶಯ.

ಇನ್ನೊಂದು ವಿಷಯ: ಪ್ರೈವೇಟ್ ಆಪರೇಟರ್ಸ್ ಇದ್ದಾರೆ. ಇವರು ಈಗ ಒಂದು ಹೊಸ ನಮೂನೆಯ ರಾಜರು. ಮಾನ್ಯ ಮಿತ್ರರಾದ ಅಲ್ಲಂ ಕರಿಬಸಪ್ಪನವರಿಗೆ ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ. ಮತ್ತು ತಪ್ಪು ತಿಳಿದುಕೊಂಡು ಹೇಳುತ್ತಾ ಇಲ್ಲ. ಈಗ ಏನೆಂದರೆ ಕೆಲವರು ಇದ್ದಾರೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಬ್ಬ ಮಹಾನೀಯ ಇದ್ದಾನೆ. ಅವನಿಗೆ 10 ಬಸ್ ರೂಟ್ಸ್ ಇವೆ. ಹತ್ತು ರೂಟ್ಸ್‌ಗಳಲ್ಲಿ ಪ್ರತಿದಿನ 1820 ಮೈಲುಗಳಷ್ಟು ಬಸ್‌ಗಳು ಓಡಾಡುತ್ತಿವೆ. ಚಿತ್ರದುರ್ಗದಿಂದ ಅಜ್ಜಂಪುರಕ್ಕೆ ಮಾರ್ಗ ಭದ್ರಾವತಿ 250 ಮೈಲು. ಇಲ್ಲಿ ಎರಡು ಬಸ್ಸುಗಳು ಓಡಾಡುತ್ತಿವೆ. ಚಿತ್ರದುರ್ಗದಿಂದ ಧರ್ಮಪುರ 250 ಮೈಲು; ಹೋಗುವುದು ಬರುವುದು. ಚಿತ್ರದುರ್ಗದಿಂದ ತಿರುಪತಿಗೆ 250 ಮೈಲು ಎರಡು ಬಸ್ಸುಗಳು. ಮಧುಗಿರಿಯಿಂದ ದಾವಣಗೆರೆ 160 ಮೈಲು ಹೋಗುವುದು ಮತ್ತು ಬರುವುದು 320 ಮೈಲುಗಳು. ಚಿತ್ರದುರ್ಗದಿಂದ ಮಂಗಳೂರಿಗೆ 200 ಮೈಲುಗಳು ಹೋಗುವುದು ಮತ್ತು ಬರುವುದು 400 ಮೈಲುಗಳು..... ಹೀಗೆ ಒಟ್ಟು 1920 ಮೈಲು ಓಡಾಡುತ್ತಿವೆ. ಅವರಿಗೆ ಟೈಮಿಂಗ್ಸ್ ಹೇಗೆ ಇದೆ ಅಂದರೆ – ಹೈದರಾಬಾದ್ ನಿಜಾಮರು ಹೊರಟರೆ ಹೇಗೆ ಇರುತ್ತದೋ ಆರೀತಿ ಈ ಮಹನೀಯರ ಬಸ್ಸು ಹೋಗುವ ಕಾಲದಲ್ಲಿ ಯಾವ ಬಸ್ಸಿಗೂ ಪ್ರಾಶಸ್ತ್ಯ ಇಲ್ಲ. ಇವರಿಗೆ ಒಂದು ದಿನಕ್ಕೆ ನೆಟ್ ಪ್ರಾಫಿಟ್ ಒಂದೂವರೆ ಸಾವಿರ ರೂಪಾಯಿ.

ಹೀಗೆ ನಾನು ಒಂದು ದಿನ ಮಂಗಳೂರು ಮಾರ್ಗದ ಬಸ್ಸಿನಲ್ಲಿ ಬರುತ್ತಿದ್ದೆ. ಈ ಬಸ್ಸಿನಲ್ಲಿ ಪ್ರಯಾಣ ಮಾಡುವುದರಿಂದಲೂ ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದು. ಒಬ್ಬರು ಹೇಳಿದರು: ನಾವು 34 ಜನ ಅಬ್ಜೆಕ್ಷನ್ ಹಾಕಿದ್ದೆವು. ಆದರೆ ಒಬ್ಬರ ತಕರಾರೂ ಕೇಳಲಿಲ್ಲ. ಪ್ರಭಾವ ಇದ್ದ ಅವರಿಗೇ ಕೊಟ್ಟರು ಎಂದರು. ನಾನು, 'ಏನ್ರಿ ಮಾನ್ಯ ಮುಖ್ಯಮಂತ್ರಿಯವರು ನಮ್ಮ ಜಿಲ್ಲೆಯವರೇ, ಅವರಿಗೆ ಹೇಳಿ' ಅಂದೆ. ಅಬ್ಜೆಕ್ಷನ್ ಹಾಕಿದವರು ಯಾರು ಎಂಬುವರ ಹೆಸರನ್ನು ನಾನು ಇಲ್ಲಿ ಹೇಳುವುದಿಲ್ಲ.

**ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು):** ನನ್ನ ಹತ್ತಿರ ಯಾರೂ ಹೇಳಿಲ್ಲ.

**ಶ್ರೀ ಎಚ್. ಸಿದ್ದವೀರಪ್ಪ:** ಬೇಕಾದರೆ ಹೆಸರನ್ನು ತಿಳಿಸುತ್ತೇನೆ.

**ಶ್ರೀ ಎಸ್. ನಿಜಲಿಂಗಪ್ಪ:** ಹೇಳಿ.

**ಶ್ರೀ ಎಚ್. ಸಿದ್ದವೀರಪ್ಪ:** ಈಗ ಏನಾಗಿದೆ ಎಂದರೆ....ಬಿಡಿ, ನಿಮ್ಮದು ಏನು ತೋರಿಸುತ್ತದೆ ಎಂದರೆ... ಕೆಲವರನ್ನು ಹೊಸದಾಗಿ ಸಾಹುಕಾರರನ್ನಾಗಿ ಮಾಡುವುದಕ್ಕೆ ಹೊರಟಿದ್ದೀರಿ.

**ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:** ಮಾನವ ಚರಿತ್ರೆಯಾಗಿ 5,500 ವರ್ಷವಾಯ್ತು. ಸ್ವಾತಂತ್ರ್ಯ ಬಂದು 20 ವರ್ಷ ಆಯಿತು. ಈ ಕಾಲದಲ್ಲಿ ಹುಟ್ಟಿಕೊಂಡಿರುವಷ್ಟು ಶ್ರೀಮಂತರು ಯಾವ ಕಾಲದಲ್ಲೂ ಆಗಿಲ್ಲವೆಂದು ಹೇಳುತ್ತೇನೆ.

**ಶ್ರೀ ಎಚ್. ಸಿದ್ದವೀರಪ್ಪ:** ಈಗ ತಮ್ಮದು ಯಾವ ನೀತಿ ಯಾವ ಧರ್ಮವೆಂಬುದನ್ನು ನೋಡಿ, ಈಗ ಅನೇಕ ಜನರು ಇದರಿಂದ ಪಾಪರ್ ಆಗಿದ್ದಾರೆ. ಒಂದೆರಡು ಬಸ್ ಇಟ್ಟು ದಿವಾಳಿಯಾಗಿದ್ದಾರೆ. ಇಂಥ ಅನ್ಯಾಯ ಮಾಡುವುದು ಒಳ್ಳೆಯದಲ್ಲ. ಒಂದು ನ್ಯಾಯ ದೃಷ್ಟಿಯಿಂದ, ಇನ್ನೊಂದು ಧರ್ಮದೃಷ್ಟಿಯಿಂದ ಹೋಗಿ. ಈ ಇಲಾಖೆಯ ಮಂತ್ರಿಗಳು ಬಹಳ ಒಳ್ಳೆಯವರು ಎಂದು ನಾನು ಕೇಳಿದ್ದೇನೆ. ಇಂಥಾ ಅನ್ಯಾಯಗಳನ್ನು ತಡೆಯುವುದಕ್ಕೆ ಪ್ರಯತ್ನ ನೀವು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* * *

# ಗೋಹತ್ಯೆ ಹಾಗೂ ಗೋಮಾಂಸ ಕುರಿತು ಚರ್ಚೆ:

## 7 ಜುಲೈ, 1952

(ಗೋಹತ್ಯೆ ನಿಷೇಧ ಕಾನೂನು 1948ರಲ್ಲಿ ಅಸ್ತಿತ್ವಕ್ಕೆ ಬಂತು. ಈ ಪ್ರಕಾರ ರಾಜ್ಯದಲ್ಲಿ 1948 ಜುಲೈ 24ರಂದು ಜಾರಿಗೆ ತರಲಾಯಿತು. ಇದರ ಪ್ರತಿಧ್ವನಿ ವಿಧಾನಸಭೆಯಲ್ಲಿ ಮೊಳಗಿತು. ಶಾಸಕ ಶ್ರೀ ಡಿ.ಎಂ. ಗೋವಿಂದರಾಜು, ಬಿ. ರಾಚಯ್ಯ, ಅನಂತರಾಮನ್, ಎಸ್. ಸಿದ್ದಪ್ಪ, ಟಿ. ಹನುಮಯ್ಯ, ಕೆ. ಪ್ರಭಾಕರ್ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದರು. 2010ರಲ್ಲಿ ರಾಜ್ಯ ಸರ್ಕಾರ ಮತ್ತೆ ಹಳೆಯ ಗೋಹತ್ಯೆ ನಿಷೇಧಕ್ಕೆ ಜೀವಕೊಟ್ಟು ಚರ್ಚೆಗೆ ಗ್ರಾಸವಾಯಿತು. 1952ರಲ್ಲೇ ಈ ಬಗ್ಗೆ ಗಂಭೀರ ಚರ್ಚೆಯೂ ನಡೆದ ದಾಖಲೆಯ ಒಂದು ವಿವರ ಇಲ್ಲಿದೆ.)

**ಶ್ರೀ ಡಿ.ಎಂ. ಗೋವಿಂದರಾಜು (ನೆಲಮಂಗಲ):** ರಾಜ್ಯದಲ್ಲಿ ಗೋಹತ್ಯೆ ನಿಷೇಧ ಎಂದು ಹೇಳುವ ಸರ್ಕಾರ ಗೋಮಾಂಸವನ್ನು ಹೊರ ರಾಜ್ಯಗಳಿಂದ ತರಿಸಿಕೊಳ್ಳುವುದು ಎಷ್ಟು ಸರಿ? ಹೊರರಾಜ್ಯದಲ್ಲಿ ಗೋವುಗಳನ್ನು ಕೊಲ್ಲುವುದಕ್ಕೆ ಅವಕಾಶಮಾಡಿಕೊಟ್ಟಂತಾಗುವುದಿಲ್ಲವೆ?

**ಶ್ರೀ ಎಚ್. ಸಿದ್ದವೀರಪ್ಪ:** (ರಾಜ್ಯ ಗೃಹ ಹಾಗೂ ಕೃಷಿ ಸಚಿವ) ನಮ್ಮ ದೇಶ (ರಾಜ್ಯ)ದಲ್ಲಿ ಗೋಹತ್ಯೆ ಮಾಡುವುದಕ್ಕೆ ಅವಕಾಶ ಇಲ್ಲ, ಹೀಗಾಗಿ ಮದ್ರಾಸ್ ರಾಜ್ಯದಿಂದ ಮೈಸೂರು ಮೃಗಾಲಯದ ಪ್ರಾಣಿಗಳಿಗೆ ಗೋಮಾಂಸ ತರಿಸಿಕೊಳ್ಳುತ್ತಿರುವುದು ನಿಜ.

**ಶ್ರೀ ಡಿ.ಎಂ. ಗೋವಿಂದರಾಜು:** ಗೋಮಾಂಸ ಹೊರಗಡೆಯಿಂದ ಬರುತ್ತಿರುವುದರಿಂದ, ನಮ್ಮ ದೇಶ (ರಾಜ್ಯ)ದಲ್ಲೂ ಗೋವುಗಳನ್ನು ಕೊಲ್ಲುತ್ತಿರುವ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

**ಶ್ರೀ ಎಚ್. ಸಿದ್ದವೀರಪ್ಪ:** ಅಲ್ಲಲ್ಲೆ ಕೆಲವು ಕೇಸುಗಳು ಹಾಗೆ ನಡೆದು ಸಿಕ್ಕಿಯೂ ಇವೆ. ಅವುಗಳ ಮೇಲೆ ಆಗಿಂದಾಗ್ಗೆ ಕೇಸುಗಳನ್ನೂ ಸಹಾ ಹಾಕಲಾಗಿದೆ.

**ಶ್ರೀ ಡಿ.ಎಂ. ಗೋವಿಂದರಾಜು:** ಹಾಗೆ ಎಷ್ಟು ಕೇಸುಗಳನ್ನು ಹಾಕಲಾಗಿದೆ?

**ಶ್ರೀ ಎಚ್. ಸಿದ್ದವೀರಪ್ಪ:** ನೋಟೀಸ್!

**ಶ್ರೀ ಡಿ.ಎಂ. ಗೋವಿಂದರಾಜು:** ಈ ಗೋಮಾಂಸವನ್ನು ದೇಶದೊಳಕ್ಕೆ ತರಿಸಬಾರದೆಂದು ಸರ್ಕಾರಕ್ಕೆ ಅನೇಕರು ಮನವಿ ಮಾಡಿಕೊಂಡಿರುವುದು ತಮಗೆ ಗೊತ್ತಿಲ್ಲವೆ?

**ಶ್ರೀ ಎಚ್. ಸಿದ್ದವೀರಪ್ಪ:** ಆ ಸಂಬಂಧಪಟ್ಟ ವಿಚಾರಗಳಿಗೆಲ್ಲ ಒಂದು ಕಾನೂನನ್ನೇ ಮಾಡಿದ್ದೇವೆ. ಆ ಕಾನೂನು ಈಗ ಜಾರಿಯಲ್ಲಿದೆ.

**ಶ್ರೀ ಡಿ.ಎಂ. ಗೋವಿಂದರಾಜು:** ಈ ಬಗ್ಗೆ ನಿಗಾ ಇಡಲು ತಾವೇನಾದರೂ ಇಟ್ಟಿದ್ದೀರಾ?

**ಶ್ರೀ ಎಚ್. ಸಿದ್ದವೀರಪ್ಪ:** ಹೌದು, ಇಟ್ಟಿದ್ದೇವೆ.

**ಶ್ರೀ ಬಿ. ರಾಚಯ್ಯ (ಯಳಂದೂರು):** ಗೋಮಾಂಸದ ಸರಬರಾಜು ಬಗ್ಗೆ ನಮ್ಮ ರಾಜ್ಯದ ಗೋವುಗಳನ್ನೇ ನಮ್ಮ ಸಂಸ್ಥಾನದ ಗಡಿ ಸರಹದ್ದಿಗೆ ಹೊಡೆದುಕೊಂಡು ಹೋಗಿ ಅವುಗಳನ್ನೇ ಅಲ್ಲಿ ಕತ್ತರಿಸಿ ಮಾಂಸವನ್ನು ಇಲ್ಲಿಗೆ ಸರಬರಾಜು ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಎಚ್. ಸಿದ್ದವೀರಪ್ಪ :** ಇಲ್ಲ.

**ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ):** ನಮ್ಮ ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾನೂನು ತಂದಿರುವುದು ಸೂಕ್ತವಲ್ಲ. ಕಾನೂನು ಇದ್ದರೂ ಇಂಥ ಅವ್ಯವಹಾರ ನಡೆಯುತ್ತಲೇ ಇರುತ್ತವೆ.

**ಶ್ರೀ ಎಚ್. ಸಿದ್ದವೀರಪ್ಪ:** ಈ ಪ್ರಶ್ನೆಯನ್ನಿಟ್ಟುಕೊಂಡು ಸರ್ಕಾರ ಪರಿಶೀಲಿಸುತ್ತಿದೆ. ಮಾಂಸ ಆಹಾರ ಕೆಲವರ ಅಗತ್ಯ ಹಾಗೂ ಸಾರ್ವಜನಿಕರ ಅನಿವಾರ್ಯವಾದ ಆಹಾರ ಎಂಬುದನ್ನು ಒಪ್ಪಿಕೊಳ್ಳುತ್ತೇವೆ.

**ಶ್ರೀ ಎಸ್. ಸಿದ್ದಪ್ಪ (ಮಾಗಡಿ):** ಈ ವೆಟರಿನರಿ ಡಾಕ್ಟರುಗಳೇನಾದರೂ ಹೀಗೆ ದನಗಳನ್ನು ಕತ್ತರಿಸಲು ಒಂದು ಅವಕಾಶ ಮಾಡಿ ಕೊಟ್ಟಿದ್ದಾರಾ?

**ಶ್ರೀ ಎಚ್. ಸಿದ್ದವೀರಪ್ಪ:** ನಮ್ಮ ಸೀಮೆಯಲ್ಲೇ ಗೋವುಗಳನ್ನು ಕತ್ತರಿಸಲು ಅಂಥ ಅವಕಾಶ ನಾವು ಯಾರಿಗೂ ಮಾಡಿಕೊಟ್ಟಿಲ್ಲ.

**ಶ್ರೀ ಎಸ್. ಸಿದ್ದಪ್ಪ:** ಆ ರೀತಿ ಕತ್ತರಿಸುತ್ತಿರುವ ಸಂದರ್ಭ ಕಂಡುಬಂದಿಲ್ಲವೇ?

**ಶ್ರೀ ಎಚ್. ಸಿದ್ದವೀರಪ್ಪ:** ಇಲ್ಲ.

**ಶ್ರೀ ಎಸ್. ಸಿದ್ದಪ್ಪ:** ಹಾಗೆ ನಡೆದಿರುವ ಸಂದರ್ಭದಲ್ಲಿ ತಾವೇನಾದರೂ ಕೇಸುಗಳನ್ನು ಹಾಕಿದ್ದೀರಾ?

**ಶ್ರೀ ಎಚ್. ಸಿದ್ದವೀರಪ್ಪ** : ನೋಟೀಸ್!

**ಶ್ರೀ ಪಿ.ಎಂ. ಸ್ವಾಮಿದೊರೈ** (ಕೋಲಾರ ಗೋಲ್ಡ್ ಫೀಲ್ಡ್): ರಾಜ್ಯ ಸರ್ಕಾರವೇ ಈ ರೀತಿ ಮದ್ರಾಸ್‌ನಿಂದ ಬೆಂಗಳೂರಿಗೆ ಗೋಮಾಂಸ ತರಿಸಿಕೊಳ್ಳುತ್ತಿರುವುದು ಎಷ್ಟು ಸರಿ? ಇದು ಜನಗಳ ಮನಸ್ಸು ಹಾಗೂ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀಳುವುದಿಲ್ಲವೆ?

**ಶ್ರೀ ಎಚ್. ಸಿದ್ದವೀರಪ್ಪ**: ಸರ್ಕಾರ ಇದರ ಬಗ್ಗೆ ಗಮನಹರಿಸಿಲ್ಲ. ಈಗ ಇದರ ಬಗ್ಗೆ ನಾನೇ ಖುದ್ದು ಪರಿಶೀಲಿಸಲಾಗುವುದು.

**ಶ್ರೀ ಬಿ. ಚಿಕ್ಕಣ್ಣ** (ಜಾವಗಲ್): ಆಗಲೇ ತಾವು ಈ ಬಗ್ಗೆ ಸಿಬ್ಬಂದಿಯನ್ನಿಡಲಾಗಿದೆಯೆಂದು ತಿಳಿಸೋಣವಾಯಿತು. ಪ್ರತಿ ತಾಲ್ಲೂಕಿನಲ್ಲಿಯೂ ತಾವು ಇದಕ್ಕಾಗಿಯೇ ಒಂದು ಸಿಬ್ಬಂದಿಯನ್ನಿಟ್ಟುಕೊಂಡಿದ್ದೀರಾ?

**ಶ್ರೀ ಎಚ್. ಸಿದ್ದವೀರಪ್ಪ**: ಪೊಲೀಸ್ ಇಲಾಖೆಯವರೇ ಅವರ ಕೆಲಸದ ಜೊತೆಯಲ್ಲಿ ಈ ಕೆಲಸವನ್ನೂ ನೋಡಿಕೊಳ್ಳುತ್ತಿದ್ದಾರೆ.

**ಶ್ರೀ ಹನುಮಯ್ಯ** (ಹಿರಿಯೂರು): ಈಗ ಈ ಗೋಮಾಂಸ ಬರುತ್ತಿರುವುದು ಕಂಟೋನ್ಮೆಂಟ್ ಏರಿಯಾಕ್ಕೆ ತಾನೆ?

**ಶ್ರೀ ಎಚ್. ಸಿದ್ದವೀರಪ್ಪ**: ಹೌದು.

**ಶ್ರೀ ಟಿ. ಹನುಮಯ್ಯ**: ಕಂಟೋನ್ಮೆಂಟ್ ಪಕ್ಕದಲ್ಲೇ ಈಗ ಗೋಹತ್ಯೆ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆ?

**ಶ್ರೀ ಎಚ್. ಸಿದ್ದವೀರಪ್ಪ**: ನಾನು ಈಗಾಗಲೇ ಅದನ್ನು ಒಪ್ಪಿಕೊಂಡಾಗಿದೆ ಮತ್ತೆ ಉತ್ತರ ಕೊಡಲಾರೆ.

**ಶ್ರೀ ಟಿ. ಹನುಮಯ್ಯ**: ದನದ ಮಾಂಸವನ್ನು ತಿನ್ನತಕ್ಕವರಿಗೆ, ದನದ ಮಾಂಸಕ್ಕೆ ಬದಲಾಗಿ ಅಷ್ಟೇ ಅಗ್ಗವಾಗಿ ಮತ್ತು ಪುಷ್ಟಿಕರವಾಗಿ ಇತರ ಆಹಾರ ಪದಾರ್ಥಗಳಿಲ್ಲ ಎಂದು ಹೇಳಿದ್ದೀರಿ; ಹಾಗಾದರೆ ಬೇರೆ ಯಾವುದೂ ಅಷ್ಟು ಪುಷ್ಟಿಕರವಾದ ಆಹಾರ ಇಲ್ಲವೆ?

**ಶ್ರೀ ಎಚ್. ಸಿದ್ದವೀರಪ್ಪ**: ಅಗ್ಗವಾಗಿ ಎಂದು ನಾನು ಹೇಳಿದೆ; ಆದರೆ ಆ ರೀತಿ ನಾನು ಹೇಳಿಲ್ಲ.

**ಶ್ರೀ ಟಿ ಹನುಮಯ್ಯ**: ಹೀಗೆ ಗೋವುಗಳನ್ನು ಕೊಲ್ಲುತ್ತಿರುವುದರಿಂದ ಈಗ ಹಾಲು ಮೊಸರಿಗೆ ತುಂಬಾ ಅಭಾವವಾಗಿರುತ್ತಿದೆ ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

**ಸ್ಪೀಕರ್**: ಈ ಉಪ ಪ್ರಶ್ನೆಗೆ ಅವಕಾಶ ಇಲ್ಲ.

**ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ** (ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ) ಕಡಿಯುವುದಕ್ಕೋ ಸಾಕುವುದಕ್ಕೋ ದನಗಳನ್ನು ನಮ್ಮ ಸೀಮೆಯಿಂದ ವಿಪರೀತವಾಗಿ ಹೊರಗಡೆಗೆ ಸಾಗಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೋ?

**ಶ್ರೀ ಎಚ್. ಸಿದ್ದವೀರಪ್ಪ:** ಬಂದಿಲ್ಲ.

**ಶ್ರೀ ಪಿ.ಆರ್. ರಾಮಯ್ಯ** (ಬಸವನಗುಡಿ): ತಾವು ಕೊಟ್ಟಿರತಕ್ಕ ಉತ್ತರವನ್ನು ನೋಡಿದರೆ, ತಮ್ಮ ಉದ್ದೇಶಕ್ಕೆ ಭಂಗ ಉಂಟಾಗುವುದಿಲ್ಲವೆ?

**ಶ್ರೀ ಎಚ್. ಸಿದ್ದವೀರಪ್ಪ:** ಇಲ್ಲ, ಸರ್ಕಾರ ಹೊರ ರಾಜ್ಯದಿಂದ ಏತಕ್ಕೆ ದನದ ಮಾಂಸ ತರಿಸಿಕೊಳ್ಳುತ್ತಿದೆ ಅನ್ನುವುದರ ಬಗ್ಗೆ ಈಗಾಗಲೆ ತಿಳಿಯ ಹೇಳಿದೆ.

**ಶ್ರೀ ಪಿ.ಆರ್. ರಾಮಯ್ಯ:** ತಾವು ಈಗ ಯಾವುದನ್ನು ಮಾಡಬಾರದು ಎಂದು ಮಾಡಿದ್ದೀರೋ, ಆ ಉದ್ದೇಶಕ್ಕೆ ಪ್ರಶ್ನೆಯು ಉತ್ತರ ಭಂಗ ತಂದಂತಾಗುವುದಿಲ್ಲವೆ?

**ಸ್ಪೀಕರ್:** ಇದಕ್ಕೆ ಈಗಾಗಲೇ ಉತ್ತರಿಸಲಾಗಿದೆ.

**ಶ್ರೀ ಪಿ.ಆರ್. ರಾಮಯ್ಯ:** ಅಲ್ಲಿಗೆ ತಮ್ಮ ಉದ್ದೇಶ ಸಫಲವಾದ ಹಾಗೆ ಆಯಿತೆ?

**ಸ್ಪೀಕರ್:** ಗೋಹತ್ಯೆ ಮಾಡಬಾರದು ಎಂಬುದೇ ಶಾಸನದ ಉದ್ದೇಶ.

**ಶ್ರೀ ಕೆ. ಪ್ರಭಾಕರ್** (ನೆಲಮಂಗಲ): 'ಗೋಮಾಂಸವನ್ನು ತಿನ್ನತಕ್ಕವರಿಗೆ' ಎಂದು ಹೇಳಿದ್ದೀರಿ; ಯಾರು ಗೋಮಾಂಸವನ್ನು ತಿನ್ನತಕ್ಕವರು?

**ಸ್ಪೀಕರ್:** ಈಗಾಗಲೇ ಇದಕ್ಕೆ ಉತ್ತರ ನೀಡಲಾಗಿದೆ.

**ಶ್ರೀ ಕೆ. ಪ್ರಭಾಕರ್:** ಮೈಸೂರು ಸಿಟಿಯಲ್ಲಿ ಗೋವಧೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

**ಶ್ರೀ ಎಚ್. ಸಿದ್ದವೀರಪ್ಪ:** ಇಲ್ಲ.

* * *

# ಅಮ್ಮಸಂದ್ರ ಸಿಮೆಂಟ್ ಕಾರಖಾನೆ

## 31, ಮಾರ್ಚ್ 1973.

(ತುಮಕೂರು ಜಿಲ್ಲೆ ಅಮ್ಮಸಂದ್ರದ ಸಿಮೆಂಟ್ ಕಾರಖಾನೆಯಿಂದ ಹೊರಬರುವ ಧೂಳು ಅಲ್ಲಿನ ಜನಜೀವನವನ್ನು ಅಸ್ತವ್ಯಸ್ತಮಾಡಿದೆ. ಜನರ ಆರೋಗ್ಯದ ಮೇಲೆ ಈ ಧೂಳು ದುಷ್ಪರಿಣಾಮ ಬೀರಿದೆ. ಅಲ್ಲಿನ ತೆಂಗಿನತೋಟಗಳು ಹಾಳಾಗುತ್ತಿವೆ. ಕಾರಖಾನೆ ನಿಯಮದ ಪ್ರಕಾರ ನಡೆದುಕೊಳ್ಳುತ್ತಿಲ್ಲ. ಸರ್ಕಾರ ಈ ಬಗ್ಗೆ ಏನು ಕ್ರಮತೆಗೆದುಕೊಂಡಿದೆ? ಕಾರಖಾನೆ ಮಾಲೀಕರಿಗೆ ನೋಟೀಸು ನೀಡಿದ್ದೀರಾ? – ಈ ಮೊದಲಾದ ಪ್ರಶ್ನೆಗಳನ್ನು ತುರುವೇಕೆರೆ ಶಾಸಕ ಶ್ರೀ ಬಿ. ಬೈರಪ್ಪಾಜಿ ಅವರು ಕೈಗಾರಿಕಾ ಮಂತ್ರಿಗಳಿಗೆ ವಿಧಾನಸಭೆಯಲ್ಲಿ ಪ್ರಶ್ನಿಸಿದರು. ನಂತರ ಶಾಸಕರಾದ ಶ್ರೀ ಎಚ್.ಎಸ್. ಸಿದ್ದಪ್ಪ, ಶ್ರೀ ಟಿ.ಎಂ. ಮಂಜುನಾಥ್, ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್ ಮೊದಲಾದವರು ದನಿಗೂಡಿಸಿದರು. ಕೈಗಾರಿಕಾ ಸಚಿವರ ಗೈರು ಹಾಜರಿಯಲ್ಲಿ ಆರೋಗ್ಯ ಸಚಿವ ಶ್ರೀ ಎಚ್. ಸಿದ್ದವೀರಪ್ಪ ಉತ್ತರಿಸಿದರು.)

**ಶ್ರೀ ಎಚ್. ಸಿದ್ದವೀರಪ್ಪ:** ಮಾನ್ಯ ಸದಸ್ಯರು ಹೇಳಿದಂತೆ ಕೆಲವಾರು ವರ್ಷಗಳಿಂದ ಅಮ್ಮಸಂದ್ರ ಭಾಗದ ರೈತರಿಗೆ ಮತ್ತು ಆರೋಗ್ಯಕ್ಕೆ ತೊಂದರೆಯಾಗುತ್ತಿದೆ ಎಂಬ ದೂರುಗಳು ಬಂದಿವೆ. ದೂರುಗಳು ಸಕಾರಣವಾಗಿವೆ ಎಂದು ಕೆಲವರ ಅಭಿಪ್ರಾಯ. ಇದೆಲ್ಲಾ ಆದಮೇಲೆ ಸರ್ಕಾರದವರು ಕಂಪನಿಯಮೇಲೆ ಒತ್ತಡತಂದು ಕೇಂದ್ರ ಸರ್ಕಾರದ ಒಬ್ಬ ಸಲಹೆಗಾರರನ್ನು ಕರೆದು ವಿಚಾರಮಾಡಿದೆ. ಈ ಪ್ರಕಾರ ಕಂಪನಿಯವರು ಈಗಾಗಲೇ ಅದಕ್ಕೆ ಬೇಕಾದಂತಹ ತಾಂತ್ರಿಕ ಸಲಹೆ ಪಡೆದು ಯಾವ ಮಿಷನರಿ ತರಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ಹೊರಗಡೆಯಿಂದ ತರಿಸಬೇಕಾಗಿರುವುದರಿಂದ ಅದಕ್ಕೆ ಬೇಕಾದಂತಹ ಫಾರಿನ್ ಎಕ್ಸ್‌ಚೇಂಜ್ ರಿಲೀಸ್ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದಾರೆ. ಇದಕ್ಕೆ ನಾಲ್ಕು ಲಕ್ಷದ ಐವತ್ತು ಸಾವಿರ ರೂಪಾಯಿ ಬೆಲೆಯಾಗುತ್ತದೆ. ಅದಲ್ಲದೆ ಇದಕ್ಕೋಸ್ಕರ ಕಂಪನಿಯವರು ಒಬ್ಬ ಮೆಕ್ಯಾನಿಕ್ ಎಂಜಿನಿಯರನ್ನು ವೆಸ್ಟ್ ಜರ್ಮನಿಗೆ 1972ನೇ ಇಸವಿಯಲ್ಲಿ

ಇದರ ಬಗ್ಗೆ ಸ್ಟಡಿ ಮಾಡುವುದಕ್ಕೆ ಕಳುಹಿಸಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ನಾವು ಇದರ ಬಗ್ಗೆ ಕಣ್ಣು ಮುಚ್ಚಿಕೊಂಡು ಕುಳಿತಿಲ್ಲವೆಂದು ಗೊತ್ತಾಗುತ್ತದೆ. ಇಲ್ಲಿ ನಮ್ಮ ಜನರಿಗೆ ಆಗಿರತಕ್ಕ ತೊಂದರೆಗಳನ್ನು ಈಗ ತಪ್ಪಿಸಬೇಕು. ಈ ಕಂಪನಿಯ ಮೇಲೆ ಒತ್ತಡ ತೆಗೆದುಕೊಂಡುಬಂದು ಅಲ್ಲಿ ಕೆಲಸ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ಕಂಪನಿಯವರು ಮೊದಲೇ ನೋಡಿ ಮಾಡಬೇಕಾಗಿತ್ತು. ಅದನ್ನು ಮಾಡಲಿಲ್ಲ. ಈಗ ಮಾಡುತ್ತಾರೆಂದು ನಿರೀಕ್ಷಣೆ ಮಾಡುತ್ತೇವೆ. ಈ ವಿಚಾರದಲ್ಲಿ ಈಗಾಗಲೇ ಸೂಕ್ತ ಕ್ರಮವನ್ನು ಅವರು ಕೈಗೊಂಡಿದ್ದಾರೆ.

**ಶ್ರೀ ಬಿ. ಬೈರಪ್ಪಾಜಿ:** ದಿನಾಂಕ 4.2.1972ರಲ್ಲಿ ಕೇಂದ್ರ ಸರ್ಕಾರದ ಒಬ್ಬ ಅಡ್ವೈಸರ್ ಬಂದು ಅವರಿಗೆ ತಿಳುವಳಿಕೆ ಕೊಟ್ಟು ಹೋಗಿದ್ದಾರೆ. ಸರ್ಕಾರಕ್ಕೆ ಬೇರೆ ಬರೆದಿದ್ದಾರೆ. ಐದು ಮೈಲಿ ಪಾಸಲೆಯಲ್ಲಿ ಧೂಳು ಹೋಗುತ್ತಿದೆ. ಸಾವಿರಾರು ರೂಪಾಯಿಯಷ್ಟು ದಿನವೂ ನಷ್ಟವಾಗುತ್ತದೆ. ತೆಂಗಿನತೋಟ, ಅಡಕೆ ತೋಟಗಳಿಗೆ ಧಕ್ಕೆಯಾಗಿದೆ. ದನಕರುಗಳು ಹುಲ್ಲು ಮೇಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಜನರ ಆರೋಗ್ಯವೂ ಸಹ ಕಟ್ಟು ಹೋಗುತ್ತಿದೆ. ಜನ ಹುಟ್ಟಿದ ಊರನ್ನೇ ತೊರೆದು ಹೋಗಲು ಸಿದ್ಧರಾಗಿದ್ದಾರೆ. ಇಷ್ಟಾದರೂ ಕೂಡ ತಾವು ಅವರಿಗೆ ನಿರ್ದೇಶನ ಕೊಡುವುದಕ್ಕೆ ಸಾಧ್ಯವಾಗಿಲ್ಲವೇ?

**ಶ್ರೀ ಎಚ್. ಸಿದ್ದವೀರಪ್ಪ:** ಅದು ಬೇರೆ ಪ್ರಶ್ನೆಯಾಗುತ್ತದೆ. ಇದರಲ್ಲಿ ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಮಾನ್ಯ ಸಚಿವರಿಗೆ ಇದರ ತೀವ್ರತೆ ಏನೆಂಬುದು ಮನವರಿಕೆಯಾಗಿದೆ. ನಮ್ಮ ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದ ರೀತಿಯಲ್ಲಿ ಏನೇನು ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳೋಬೇಕೋ ಅದಕ್ಕೆ ಹಿಂಜರಿಯುವುದಿಲ್ಲ.

**ಶ್ರೀ ಎಚ್.ಎಸ್. ಸಿದ್ದಪ್ಪ:** ಈ ಕಾರ್ಖಾನೆಯ ಮೇಲೆ ಬಹುತೇಕ ರಾಜಕೀಯ ಒತ್ತಡ ಇರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಕಾರ್ಖಾನೆಯನ್ನು ಅಲ್ಲಿಂದ ಷಿಫ್ಟ್ ಮಾಡಿ ಬೇರೆಕಡೆಗೆ ವರ್ಗಾಯಿಸುತ್ತೀರಾ?

**ಶ್ರೀ ಸಿದ್ದವೀರಪ್ಪ:** ನನಗೆ ರಾಜಕೀಯ ಒತ್ತಡ ವಿಷಯ ಗೊತ್ತಿಲ್ಲ. ಕಾರ್ಖಾನೆ ತೆಗೆದುಕೊಳ್ಳಬೇಕೆಂಬುದಕ್ಕೆ ಏನೂ ಕಾರಣ ಕೊಟ್ಟಿಲ್ಲ. ಆದರೂ ಈ ಕಾರ್ಖಾನೆಯನ್ನು ನಮ್ಮ ರಾಜ್ಯದಲ್ಲಿಟ್ಟುಕೊಂಡಿದ್ದೇವೆ. ಅಲ್ಲಿ ಡಸ್ಟ್ ನ್ಯೂಸೆನ್ಸ್ ಇದೆ. ಅದನ್ನು ನೋಡಬೇಕು. ಅದರಲ್ಲಿ ಟೆಕ್ನಿಕಲ್ ಡಿಫಿಕಲ್ಟೀಸ್ ಇವೆ. ಅವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಟಿ.ಎಂ. ಮಂಜುನಾಥ್:** ಈ ಕಾರ್ಖಾನೆ ಬಿರ್ಲಾ ಸಂಸ್ಥೆಗೆ ಸಂಬಂಧಪಟ್ಟಿರುವುದರಿಂದ ಬಿರ್ಲಾ ಸಂಸ್ಥೆಯವರು ಸಂಬಂಧಪಟ್ಟ ಮಂತ್ರಿಯವರ ಮೇಲೆ ಹಾಗೂ ಅಧಿಕಾರಿಗಳ ಮೇಲೆ ಒತ್ತಡ ತೆಗೆದುಕೊಂಡು ಬಂದು ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆ?

**ಶ್ರೀ ಎಚ್. ಸಿದ್ದವೀರಪ್ಪ:** ಬಿರ್ಲಾ ಕಂಪನಿಯವರ ಒತ್ತಡ ಅವರ ಪಕ್ಷದ ಮೇಲೆ ಜಾಸ್ತಿ ಇದೆ. ನಮ್ಮ ಪಕ್ಷದ ಮೇಲೆ ಅಷ್ಟು ಇಲ್ಲ.

**ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್:** ಆ ಸ್ಥಳ ಪರೀಕ್ಷೆಗೆ ಹೋಗಿದ್ದ ಶಾಸಕರು ಹಾಗೂ ಲೋಕಸಭಾ ಸದಸ್ಯರ ಪಟ್ಟಿಯಲ್ಲಿ ನಾನೂ ಒಬ್ಬನಿದ್ದೆ. ಆ ಕಾರ್ಖಾನೆ ಇರುವುದು ಮೂರು ಮೈಲು ಸುತ್ತಳತೆ. ಆದ್ರೂ ಜನಗಳ ಪರಿಸ್ಥಿತಿ ಅಧೋಗತಿಗೆ ಇಳಿದಿದೆ. ಕಂಪನಿಯಮೇಲೆ ಏನು ಕ್ರಮ ತೆಗೆದುಕೊಂಡಿರಿ? ತಾಂತ್ರಿಕ ದೋಷಗಳು ಯಾವುವು? ಇದು ನಿಧಾನವಾದರೆ ಅಲ್ಲಿನ ಜನ ಸಾಯುತ್ತಾರೆ? ಸರ್ಕಾರ ಏನಾದರೂ ಕಮಿಟಿ ರಚನೆ ಮಾಡಿ ಅದರಿಂದ ಒಂದು ವರದಿ ತರಿಸಿಕೊಳ್ಳುತ್ತೀರಾ?

**ಶ್ರೀ ಎಚ್. ಸಿದ್ದವೀರಪ್ಪ:** ಆ ರಿಪೋರ್ಟ್‌ನಿಂದ ಪರಿಹಾರ ಏನೂ ಇಲ್ಲ. ಆ ಕಮಿಟಿಯನ್ನು ನೇಮಿಸುವುದರಿಂದ ಅಲ್ಲಿನ ಜನರ ಕಷ್ಟ ಪರಿಹಾರ ಆಗುತ್ತದೆಂದು ನಾನು ತಿಳಿದಿಲ್ಲ. ಮಾನ್ಯ ಸದಸ್ಯರ ತೀವ್ರತೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಾನು ಈಗಾಗಲೇ ಹೇಳಿದ ಹಾಗೆ ಇದಕ್ಕೆ ಸಂಬಂಧಪಟ್ಟ ಮಿಷನರಿ ಬೇಕು. ಮೂರು ಆಕ್ಸಿಜನ್ ಪ್ಲಾಂಟ್ಸ್‌ಗಳು ಬೇಕೆಂದು ಹೇಳುತ್ತಾರೆ. ಎಲೆಕ್ಟ್ರೋಸ್ಟ್ಯಾಟಿಕ್ ಪ್ರೆಸಿಪಿಟೇಟರ್ಸ್ ಬೇಕಾಗಿದೆ. ಇದರಿಂದ ಡ್ರೈ ಪ್ರೋಸೆಸ್‌ನಲ್ಲಿ ಸಿಮೆಂಟ್ ಮಾಡುತ್ತಾರೆ. ಭದ್ರಾವತಿಯಲ್ಲಿರುವ ಪ್ರೋಸೆಸ್ಸೇ ಬೇರೆ. ಇಲ್ಲಿರ ತಕ್ಕ ಪ್ರೋಸೆಸ್ಸೇ ಬೇರೆ. ಇವತ್ತು ಅದು ಅವರಿಗೇ ಗೊತ್ತಾಗುತ್ತಿದೆ. ಆದರೆ ಕಂಪನಿಯವರು ಜನತೆಯನ್ನು ಎದುರಾಗಿ ಹಾಕಿಕೊಂಡು ಈ ಖಾರ್ಖಾನೆಯನ್ನು ಬಹಳ ವರ್ಷಗಳವರೆಗೆ ನಡೆಸುವುದಕ್ಕಾಗುವುದಿಲ್ಲ. ಆದರೂ ಸಹ ಜನರಿಗೆ ಈಗ ಆಗಿರುವ ತೊಂದರೆಗಳನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಕೇಂದ್ರ ಸರ್ಕಾರದ ಸಲಹೆಗಾರರು ಯಾವ ಸಲಹೆ ಮಾಡಿದ್ದಾರೋ ಆ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾದರೆ ಹೆಚ್ಚು ಹಣ ಖರ್ಚಾಗುತ್ತದೆ. ವಿದೇಶದಿಂದ ಮೆಷಿನ್ ತರಿಸುವುದಕ್ಕೆ ಈಗಿರತಕ್ಕ ಅಂದಾಜು ಪ್ರಕಾರ ನಾಲ್ಕುವರೆ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಅದನ್ನೂ ಸಹ ತರಿಸಿಕೊಳ್ಳಲು ಪ್ರಯತ್ನ ಮಾಡಿದ್ದೇವೆ. ಈ ಕಾರಖಾನೆಯವರಲ್ಲಿ ನಾವು ಈಗಾಗಲೇ ಅರಿಕೆ ಮಾಡಿಕೊಂಡಿರುವ ಹಾಗೆ ಒಬ್ಬ ಮೆಕ್ಯಾನಿಕ್ ಎಂಜಿನಿಯರ್‌ನ್ನು ಅಲ್ಲಿಗೆ ಕಳುಹಿಸಿದ್ದೇವೆ. ಅವರು ಆದಷ್ಟು ಜಾಗ್ರತೆಯಾಗಿ ಸೂಕ್ತ ಕ್ರಮವನ್ನು ಕೈಗೊಂಡು ಅದರಲ್ಲಿರುವ ತೊಂದರೆಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

**ಶ್ರೀ ಜಿ. ರಾಮೇಗೌಡ:** ಈ ಪ್ರಶ್ನೆ ಈ ಸಭೆಯಲ್ಲಿ ಮೂರು ವರ್ಷಗಳ ಹಿಂದೆ ಒಂದು ಸಾರಿ ಬಂದಿತ್ತು. ಹಿಂದಿನ ಸರ್ಕಾರದವರು ಸಹ ಇದೇರೀತಿಯಲ್ಲಿ ಇದರ ಬಗ್ಗೆ ಭರವಸೆ ಕೊಟ್ಟಿದ್ದರು. ಹಿಂದೆ ಖರ್ಚು 4 ಲಕ್ಷ ಆಗುತ್ತದೆ ಎಂದು ಹೇಳಿತ್ತು. ಈಗ ಇರತಕ್ಕ ಯಂತ್ರಗಳನ್ನು ತರಬೇಕಾದರೆ ಮೂರುವರ್ಷಗಳು ಬೇಕೆ?

ಇದರಿಂದ ಈ ಕಾರ್ಖಾನೆಯ ಬಗ್ಗೆ ಸರ್ಕಾರ ಹೆಚ್ಚಿಗೆ ಆಸಕ್ತಿಯನ್ನು ವಹಿಸಿಲ್ಲವೆಂಬುದು ಅರ್ಥವಾಗುವುದಿಲ್ಲವೇ?

**ಶ್ರೀ ಸಿದ್ದವೀರಪ್ಪ:** ಮೊಟ್ಟಮೊದಲನೆಯ ಸಾರಿ ಕಾರ್ಖಾನೆ ವರ್ಕಿಂಗ್ ವಿಷಯ ತಾಂತ್ರಿಕ ಸಲಹೆಗಾರ ಮಾನ್ಯ ಶ್ರೀ ವರ್ಮರವರು ಬಂದು ದಿನಾಂಕ 21.10.1971ರಂದು ಸ್ಥಳ ಪರಿಶೀಲನೆ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ. ಅಲ್ಲಿಂದ ಮತ್ತೆ ಬೇರೆ ರಿಪೋರ್ಟ್‌ಗಳೂ ಬಂದಿವೆ. ಈಗ ಅವರು ಆ ಒಂದು ಕಾರ್ಯಕ್ರಮದಲ್ಲಿ ತೊಡಗಿದ್ದಾರೆ. ಮಿಷನರಿಗಳನ್ನು ತರಿಸಲಿಕ್ಕೆ ಈಗ ತೊಡಗಿದ್ದಾರೆ. ಅದರ ಬಗ್ಗೆ ಕಂಪನಿಯವರೂ ಸಹ ವರದಿ ಮಾಡಿದ್ದಾರೆ. ಅದರ ಪ್ರಕಾರ ಕೆಲಸಗಳು ನಡೆಯುತ್ತಾ ಇವೆ. ಆದ್ದರಿಂದ ಸರ್ಕಾರದವರು ಏನು ಸೂಕ್ತ ಕ್ರಮವನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತಿದ್ದಾರೆ. ಸರ್ಕಾರದ ದೃಷ್ಟಿಯಿಂದ ಈಗ ಬರೀ ಫ್ಯಾಕ್ಟರಿಯ ಇಂಟರೆಸ್ಟ್ ಒಂದೇ ಅಲ್ಲ, ಜನರ ಬಗ್ಗೆಯೂ ಕಾಳಜಿ ಮುಖ್ಯವೆಂದು ಸರ್ಕಾರ ಮನಗಂಡಿದೆ.

**ಶ್ರೀ ಕೆ.ಎಂ. ನಾಗಣ್ಣ:** ಈ ಕಾರ್ಖಾನೆಯನ್ನು ಈ ಸ್ಥಳದಲ್ಲಿ ಸ್ಥಾಪಿಸಲು ಸರ್ಕಾರದವರು ಪರವಾನಗಿ ಮುಂಜೂರು ಮಾಡುವ ಮುನ್ನ ಮುಂದೆ ಈ ತರಹ ಸಂದರ್ಭಗಳು ಉದ್ಭವಿಸಬಹುದೆಂದು ಮೊದಲೇ ಯೋಚನೆ ಮಾಡಲಿಲ್ಲವೆ?

**ಶ್ರೀ ಎಚ್. ಸಿದ್ದವೀರಪ್ಪ:** ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಿರುವವರು ಬಿರ್ಲಾ ಅವರಲ್ಲ. ನಾನು ಕೈಗಾರಿಕೆಯ ಮಂತ್ರಿಯಾಗಿದ್ದಾಗ ಇದಕ್ಕೆ ಲೈಸೆನ್ಸ್ ಕೊಟ್ಟಿತ್ತು. ಅದನ್ನು ಸ್ಥಾಪನೆ ಮಾಡಿರುವವರು ಇಲ್ಲಿಯವರೇ. ಹಿಂದೆ ಫ್ಯಾಕ್ಟರಿ ಇರುವ ಸ್ಥಳದಲ್ಲಿ ಅಷ್ಟು ತೊಂದರೆಗಳಿದ್ದಿಲ್ಲ. ಈಗ ಪ್ರೊಸೆಸ್ಸಿನಲ್ಲಿ ಮ್ಯಾನುಫ್ಯಾಕ್ಚರ್ ಮಾಡುವುದರಿಂದ ಆ ಡಸ್ಟ್ ಹೆಚ್ಚಿಗೆ ಹೊರಗೆ ಬರುತ್ತಿದೆ. ಹೀಗೆ ಬಾರದಂತೆ, ಹೊರಗಡೆಯಿಂದ ಬಂದಿರುವವರಿಗೆ ತೊಂದರೆಯಾಗದಂತೆ ನೋಡಿಕೊಂಡು ಆ ತೊಂದರೆಯನ್ನು ಬಗೆಹರಿಸಬೇಕು.

**ಶ್ರೀ ಬೈರಪ್ಪಾಜಿ:** 1964ನೇ ಇಸವಿಯಲ್ಲಿಯೇ ನಾನು ಶಾಸನ ಸಭೆಯ ಸದಸ್ಯನಾಗಿ ಈ ಪ್ರಶ್ನೆಯನ್ನು ಎತ್ತುತ್ತಿದ್ದೇನೆ. ಇದರ ಪ್ರಯತ್ನದಿಂದಾಗಿ ಎಲೆಕ್ಟ್ರೋಸ್ಟ್ಯಾಟಿಕ್ ಪ್ರೆಸಿಪಿಟೇಟರ್ಸ್‌ನ್ನು 1965ರಲ್ಲಿ ಹಾಕಿದ್ದಾರೆ. ಆಗ ಅದು ಕೆಲಸ ಮಾಡಲಿಲ್ಲ. ಅದರ ದೋಷ ಏನೆಂದು ಕಂಡು ಹಿಡಿದು ಸರಿಪಡಿಸಲು ಇಷ್ಟು ವರ್ಷ ಬೇಕೆ? ಇದು ಸರ್ಕಾರದ ಉದಾಸೀನ ಮನೋಭಾವವಲ್ಲವೆ? ಈಚೆಗೆ ಬಿರ್ಲಾರವರು ಈ ಕಾರ್ಖಾನೆ ತೆಗೆದುಕೊಂಡಿರುವುದರಿಂದ ಅವರು ಒಂದು ನೀತಿಗನುಗುಣವಾಗಿ ಹೋಗಬೇಕು. ಇಷ್ಟು ವರ್ಷವಾದರೂ ಸರ್ಕಾರ ಸುಮ್ಮನಿರುವುದು ಉಚಿತವಲ್ಲ.

**ಶ್ರೀ ಎಚ್. ಸಿದ್ದವೀರಪ್ಪ:** ಇದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ಈಗ ಆ ಮಿಷನರಿಗಳು ಬಂದಿರುವುದರಿಂದ ನೂರಕ್ಕೆ ನೂರು ಎಫಿಸಿಯೆನ್ಸಿಯಿಂದ ಆ ಕೆಲಸ ಆಗುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಗೊಳ್ಳಬೇಕೋ ಅವನ್ನು

ಕೈಗೊಳ್ಳಬೇಕೆಂದು ನಿರ್ದಿಷ್ಟವಾಗಿ ಕಂಪನಿಗೆ ತಿಳಿಸಲಾಗಿದೆ. ಆದಷ್ಟು ಜಾಗ್ರತೆಯಾಗಿ ಈ ಸಭೆಯ ಮತ್ತು ಜನತೆಯ ತೀವ್ರತೆಯನ್ನು ಅರಿತುಕೊಂಡು ಕಂಪನಿಯವರು ನಡೆಯುತ್ತಾರೆಂದು ನಾನು ಆಶಿಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:** ಈ ಪ್ರಶ್ನೆ 1965ನೇ ಇಸವಿಯಿಂದಲೂ ಈ ಸಭೆಯಲ್ಲಿ ಚರ್ಚೆಯಾಗುತ್ತಲೇ ಇದೆಯೆಂದು ಹೇಳುತ್ತಿರುವುದರಿಂದ ಇದನ್ನು ಎಷ್ಟು ದಿನಗಳಲ್ಲಿ ಪೂರೈಸುತ್ತೀರೆಂದು ಭರವಸೆ ಕೊಡುತ್ತೀರಿ?

**ಶ್ರೀ ಎಚ್. ಸಿದ್ದವೀರಪ್ಪ:** ಆದಷ್ಟು ಜಾಗ್ರತೆಯಾಗಿ.

* * *

# ಗೃಹಖಾತೆ : ಪೊಲೀಸರ ಸ್ಥಿತಿಗತಿ

## 16, ಏಪ್ರಿಲ್ 1968

ಶ್ರೀ ಎಚ್. ಸಿದ್ದವೀರಪ್ಪ (ವಿರೋಧ ಪಕ್ಷದ ನಾಯಕರು): ಸ್ವಾಮಿ, ಗೃಹಮಂತ್ರಿಗಳು ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತ ಈ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಈ ಸಭೆಯ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿನ ಬೇಡಿಕೆಗಳ ಬಗ್ಗೆ ಸಾಕಷ್ಟು ಚರ್ಚೆ ನಡೆಸುವುದಕ್ಕೆ ಕಾಲಾವಕಾಶವನ್ನು ಒದಗಿಸಿಕೊಟ್ಟಿಲ್ಲ. ಅನೇಕ ಮಾನ್ಯ ಸದಸ್ಯರು ಅಭಿಪ್ರಾಯಪಡುತ್ತಿರುವಂತೆ ಈ ದಿವಸ ಸಭೆಯ ಮುಂದಿರತಕ್ಕ ಡಿಮ್ಯಾಂಡುಗಳನ್ನು ಚರ್ಚೆ ಮಾಡುವುದಕ್ಕೆ ಮೂರು ದಿನಗಳ ಕಾಲಾವಕಾಶ ಕೊಟ್ಟರೂ ಸಾಕಾಗುತ್ತಿರಲಿಲ್ಲ. ಆದರೆ ಬಹಳ ಬುದ್ಧಿವಂತಿಕೆಯಿಂದ ಮಾನ್ಯ ಗೃಹ ಸಚಿವರು ತಮ್ಮ ಬೇಡಿಕೆಗಳನ್ನೆಲ್ಲಾ ನಾವುಗಳೆಲ್ಲಾ ಸುಸ್ತಾಗಿರುವ ಹಾಗೂ ಬೇಸರವಾಗಿರುವ ಸಂದರ್ಭದಲ್ಲಿ ಮುಂದಿಟ್ಟಿದ್ದಾರೆ. ಆದರೆ ಸಮಯದ ಅಭಾವದಿಂದಾಗಿ ನಾನು ಪೊಲೀಸ್ ಡಿಮ್ಯಾಂಡ್ ಮೇಲಿನ ಬೇಡಿಕೆಯ ಚರ್ಚೆಯನ್ನಷ್ಟೇ ಮಂಡಿಸಿ ಅವುಗಳನ್ನು ಮಾನ್ಯ ಸದಸ್ಯರಿಗೇ ಬಿಡುತ್ತೇನೆ.

### 'ಆರಕ್ಷಕ' ಬದಲು 'ಪೊಲೀಸ್' ಇರಲಿ

ಇಲ್ಲಿ ಈಗ 'ಪೊಲೀಸ್ ದಳ' ಅನ್ನುವುದಕ್ಕೆ "ಆರಕ್ಷಕ ದಳ" ಎಂದು ತರ್ಜುಮೆ ಮಾಡಿದ್ದಾರೆ. ಇಂಥಾ ಒಂದು ಕನ್ನಡವನ್ನು ನಾವು ಕಲಿಯಲು ಮತ್ತೆ ಶಾಲೆಗಳಿಗೆ ಸೇರಬೇಕಾಗುವುದೋ ಏನೋ ಗೊತ್ತಾಗುವುದಿಲ್ಲ. ಇಂಥ ಕನ್ನಡ ಪದವನ್ನು ತರ್ಜುಮೆ ಮಾಡುವುದರ ಬದಲು ಸುಮ್ಮನೆ ಪೊಲೀಸ್ ದಳ ಎಂತಲೇ ಹಾಕಿದ್ದರೆ ಚನ್ನಾಗಿತ್ತು.

ಈ ದಿವಸ ನಮ್ಮ ಪೊಲೀಸ್ ದಳ ಒಂದಕ್ಕೆ ಸಭೆಯ ಮುಂದಿಟ್ಟಿರುವ ಬೇಡಿಕೆ ಎಷ್ಟು ಎಂದರೆ 8 ಕೋಟಿ, 15 ಲಕ್ಷ. ಇದು ವರ್ಷೇ ವರ್ಷ ಹೆಚ್ಚಾಗುತ್ತಲೇ ಬರುತ್ತಿದೆ. ಈ ಬೇಡಿಕೆಯ ವಿಚಾರವನ್ನು ಯೋಚಿಸಿ ನೋಡುವುದಾದರೆ ನಾವು ಈ ಒಂದು ಬಾಬಿಗೆ ಎಷ್ಟು ಹಣವನ್ನು ಕೊಡುತ್ತಿದ್ದೇವೆ ಎಂಬುದನ್ನು ಇಲ್ಲಿ ಕೊಟ್ಟಿರುವ

ಅಂಕಿಅಂಶಗಳಿಂದ ತಿಳಿಯಬಹುದು. ನಾನು 1964ರಿಂದಲೂ ಇದಕ್ಕೆ ಸಂಬಂಧಪಟ್ಟ ಎಲ್ಲಾ ಅಂಕೆ ಅಂಶಗಳನ್ನೂ ಶೇಖರಣೆ ಮಾಡಿದ್ದೇನೆ. 1964ರಿಂದಲೂ ಪೋಲೀಸ್ ಶಕ್ತಿ/ಬಲ ಹೆಚ್ಚುತ್ತಲೇ ಬರುತ್ತಿದೆ. ಆದರೆ ಈ ಸಿಬ್ಬಂದಿವರ್ಗ ಹೆಚ್ಚಾಯಿತು ಎಂದು ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನೂ ಹೆಚ್ಚಿನ ಬಲ ಬೇಕಾದರೂ ಆಗಬಹುದು. ಆದರೆ ಈ ಸಿಬ್ಬಂದಿ 1964ರಲ್ಲಿ ಎಷ್ಟಿತ್ತು ಎಂದರೆ – 27. 577 ಇತ್ತು. ಇದರಲ್ಲಿ ಪೋಲೀಸ್ ಕಾನ್‌ಸ್ಟೇಬಲ್‌ಗಳ ಸಂಖ್ಯೆ 21, 379 ಇತ್ತು. ಇದು 1967ಕ್ಕೆ 28, 334ಕ್ಕೆ ಏರಿತು. ಆದರೆ ಇದು ಇನ್ನೂ ಮುಂದೆ ಹೆಚ್ಚಾಗಬಹುದು. ರಾಜ್ಯದಲ್ಲಿರತಕ್ಕ 1964ರಲ್ಲಿ ಪ್ರತಿಯೊಬ್ಬ ಕಾನ್‌ಸ್ಟೇಬಲ್‌ಗೆ 1, 603 ರೂಪಾಯಿ ಮತ್ತು 4 ಪೈಸೆ ಪರ್‌ಕ್ಯಾಪಿಟಾ ಖರ್ಚು ಮಾಡುತ್ತಿದ್ದೇವೆ.

ಈ ದಿವಸ ನಾವು ಇದೇ ಸಿಬ್ಬಂದಿಗೆ ತಲಾ ಒಂದಕ್ಕೆ ರೂ.2,339.89 ಪೈಸೆಗಳನ್ನು ಖರ್ಚು ಮಾಡುತ್ತಿದ್ದೇವೆ. 1964ರಲ್ಲಿ ಈ ಬಾಬಿಗೆ ಒದಗಿಸಿದ್ದ ಬಜೆಟ್ ಎಷ್ಟಿತ್ತು ಎಂದರೆ ಅದು 6 ಕೋಟಿ 72 ಲಕ್ಷ ಚಿಲ್ಲರೆ. ಈ ದಿವಸ ಇದಕ್ಕೆ ಒದಗಿಸಿರುವ ಬಜೆಟ್ ರೂ. 8 ಕೋಟಿ. ಅಂದರೆ 2 ಕೋಟಿ ರೂಪಾಯಿಗಳು ಆ ದಿವಸಕ್ಕೂ ಇಂದಿಗೂ ಹೆಚ್ಚಾದಂತಾಯಿತು. ಆದುದರಿಂದ ಸಾಕಷ್ಟು ಒದಗಿಸಿದ್ದೇವೆಂದು ಭಾವಿಸುವೆ. ಈ ಬಾಬಿಗೆ ಒದಗಿಸಿರುವ ಹಣ ಸಾಲದು ಎಂದು ಮಾನ್ಯ ಮಿತ್ರರೂ ಭಾವಿಸಬೇಕಿಲ್ಲ. ಆದರೆ ಈ ಸಂದರ್ಭದಲ್ಲಿ ನಾನು ಪೋಲೀಸ್ ವಿಚಾರದಲ್ಲಿ ಮಾತನಾಡಬೇಕು ಎಂದರೆ ದ್ವಂದ್ವವಾಗುತ್ತಿದೆ. ಪೋಲೀಸ್ ಇಲಾಖೆಯ ವಿಚಾರಗಳನ್ನೆಲ್ಲಾ ನಾನು ಹಿಂದೆ 5 ವರ್ಷಗಳ ಕಾಲ ಗೃಹಮಂತ್ರಿಯಾಗಿದ್ದುದರಿಂದ ಸಾಕಷ್ಟು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಪ್ರತಿಯೊಂದು ವಿಷಯಗಳೂ ಚೆನ್ನಾಗಿ ಮನವರಿಕೆಯಾಗಿವೆ. ಆದರೆ ಈ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರೆಲ್ಲ ಕೆಟ್ಟವರೆಂದು ನಾನು ಹೇಳಲಾರೆ ಅದು ಸತ್ಯಕ್ಕೆ ದೂರವಾದ ಮಾತಾಗುತ್ತದೆ.

**ರಾಜಕಾರಣಿಗಳಿಂದ ಪೋಲೀಸರ ದುರ್ಬಳಕೆ:**

ಆದರೆ, ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ಈ ಪೋಲೀಸರಿಗೆ ಏಕೆ ಕೆಟ್ಟ ಹೆಸರು ಬರುತ್ತಿದೆ? ಇದನ್ನು ಕೂಲಂಕಷವಾಗಿ ಪರಿಶೀಲಿಸಿದರೆ ತಿಳಿಯುತ್ತದೆ; ಇವರನ್ನು ಸೂತ್ರದ ಗೊಂಬೆಗಳಂತೆ ಆಡಿಸುವ ಆಡಳಿತ ಪಕ್ಷದ ರಾಜಕಾರಣಿಗಳು ಮೊದಲು ಮಾಡಿದ ತಪ್ಪು. ನಮ್ಮ ರಾಜಕಾರಣಿಗಳೆಲ್ಲ ಪೋಲೀಸರನ್ನು ದುರ್ಬಳಕೆ ಮಾಡಿಕೊಂಡು ಅವರಿಗೆ ಕೆಟ್ಟ ಹೆಸರು ತರಲು ಯತ್ನಿಸಿದ್ದಾರೆ. ರಾಜಕಾರಣಿಗಳು ಎಲ್ಲೆಲ್ಲಿ ಪಾಪ ಕಾರ್ಯಗಳನ್ನು ಮಾಡಿದ್ದಾರೆ ಅದಕ್ಕೆಲ್ಲ ಈ ಕಾಕಿಧಾರಿ ಪೋಲೀಸರು ಜನಸಾಮಾನ್ಯರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ, ಬೈಸಿಕೊಳ್ಳಬೇಕಾಗುತ್ತದೆ, ಕಲ್ಲಿನಿಂದ ಹೊಡಸಿಕೊಳ್ಳಬೇಕಾಗಿದೆ. ಮೈಮುರಿಸಿಕೊಳ್ಳಬೇಕಾಗಿದೆ.

ಆದರೆ ಈ ಹಿಂದೆ ನಮ್ಮ ರಾಜ್ಯದಲ್ಲಿ 1964, 1965, 1966 ಮತ್ತು 1967ರಲ್ಲಿ ಎಲ್ಲೆಲ್ಲಿ ಯಾವಾಗ ಎಷ್ಟೆಷ್ಟು ಪೋಲೀಸ್ ಫೈರಿಂಗ್ ಆಗಿದೆ ಎಂಬುದನ್ನೆಲ್ಲಾ

ಶೇಖರಣೆ ಮಾಡಿದ್ದೇನೆ. ಅವು ಯಾವಯಾವ ಕಾರಣಕ್ಕಾಗಿ ಆದವು ಎಂಬುದನ್ನೂ ಸಹಾ ನೋಟ್ ಮಾಡಿಕೊಂಡಿದ್ದೇನೆ. ಆದರೆ ಆ ವಿವರಗಳನ್ನೆಲ್ಲಾ ಈಗ ಇಲ್ಲಿ ತಿಳಿಸುವುದಕ್ಕೆ ಕಾಲಾವಕಾಶವಿಲ್ಲ. ಕಳೆದ 5 ವರ್ಷಗಳಲ್ಲಿ ಹಿಂದೆ ಎಲ್ಲಿಯಾದರೂ ಫೈರಿಂಗ್ ಆಗಿದ್ದರೆ ಅವು ವರ್ಷಕ್ಕೆ 2–3ಕ್ಕೆ ಜಾಸ್ತಿಯಾಗಿಲ್ಲ. ಆದರೆ ಕಳೆದ ಮಾರ್ಚ್ ತಿಂಗಳು ಒಂದರಲ್ಲೇ ರಾಜ್ಯದ ನಾನಾ ಭಾಗಗಳಲ್ಲಿ ಸುಮಾರು 8–9 ಪೋಲೀಸ್ ಫೈರಿಂಗ್‌ಗಳಾದವು. ಅವುಗಳಲ್ಲಿ ಅನೇಕ ನಿರಪರಾಧಿಗಳಾದ ಜನರು ಸಾವನ್ನಪ್ಪಿದರು. ಅನೇಕರು ಕಷ್ಟನಷ್ಟಗಳಿಗೆ ತುತ್ತಾದರು. ಆದರೆ ಆ ಫೈರಿಂಗುಗಳೆಲ್ಲಾ ಆದದ್ದು ಯಾವ ಕಾರಣಕ್ಕಾಗಿ? ಆ ಭಾಷಾ ಪ್ರಶ್ನೆಯನ್ನು ಎತ್ತಿದವರು ಪೋಲೀಸರಲ್ಲ, ಅದನ್ನು ದೇಶದ ಮುಂದಿಟ್ಟವರು ಪೋಲೀಸರಲ್ಲ, ಈ ಪ್ರಶ್ನೆಯನ್ನು ಎತ್ತಿದವರು ರಾಜಕಾರಣಿಗಳು. ಆದ್ದರಿಂದ ಜನರ ಮನಸ್ಸು ಕಲುಷಿತವಾಯಿತು. ಜನರು ಉದ್ರಿಕ್ತರಾದರು. ಇಷ್ಟೆಲ್ಲಾ ಆದನಂತರ ಅಲ್ಲಿಗೆ ಪೋಲೀಸಿನವರು ಇನ್ನು ಬಾರದಿದ್ದರೆ ಆಗುತ್ತದೆಯೇ? ಅವರೂ ಬರಲೇಬೇಕಾಯಿತು. ಅಂಥ ಪ್ರಸಂಗಗಳಲ್ಲಿ ಅವರ ರಕ್ತವೂ ಕಾಯುತ್ತದೆ. ಅನೇಕಸಾರಿ ಬರಬಾರದ ಕಷ್ಟಗಳು ಬಂದೇ ಬರುತ್ತವೆ.

ಆದರೆ ಈ ವಿಚಾರದಲ್ಲಿ ಆ ರಾಯಲ್ ಕಮೀಷನ್ನಿನವರು ಒಂದು ರಿಪೋರ್ಟನ್ನು 1962ರಲ್ಲಿ ಕೊಟ್ಟರು. ಅದರಲ್ಲಿ ಅವರು ಏನು ಹೇಳಿದ್ದಾರೆ ಅಂದರೆ – ಪೋಲೀಸರಿಗೆ ಎಷ್ಟೇ ಕಷ್ಟಗಳು – ಸಂಕಟಗಳು ಬಂದಾಗ್ಯು ಅವರು ನಗುವುದನ್ನು ಕಲಿಯಬೇಕು. ಮತ್ತು ಪ್ರಸಂಗ ಎಷ್ಟೇ ಬಿಗುಡಾಯಿಸಿದ್ದರೂ ಜನರ ಮೇಲೆ ದುಷ್ಪರಿಣಾಮ ಉಂಟುಮಾಡುವಂಥಾ ಕಾರ್ಯಗಳನ್ನು ಅವರು ಮಾಡಬಾರದು – ಎಂಬುದಾಗಿ ಅದರಲ್ಲಿ ತಿಳಿಸಿದ್ದಾರೆ. ಆದರೆ ಅಂಥಾ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿದ್ದ ಹಾಗೆ ಕಂಡುಬರುವುದಿಲ್ಲ.

ಇದಕ್ಕೆ ಕಾರಣ ಇಷ್ಟೆ: ಅವರಿಗೆ ನಾವು ಏನು ಮಾಡಿದರೂ ಅಷ್ಟೆ, ಒಳ್ಳೆಯ ಕೆಲಸ ಮಾಡಿದರೂ ಅಷ್ಟೆ. ನಾವು ಒಳ್ಳೆಯ ಕೆಲಸ ಮಾಡಿದರೂ ನಮ್ಮನ್ನು ಯಾರೂ ನೋಡುವುದಿಲ್ಲ. ಪೋಲೀಸ್ ಇಲಾಖೆಯಲ್ಲಿ ಕುದುರೆಯೂ ಒಂದೇ. ಕತ್ತೆಯೂ ಒಂದೇ, ಹೇಸರಗತ್ತೆಯೂ ಒಂದೇ ಎನ್ನುವ ಭಾವನೆ ಬಂದಿದೆ. ಯಾರೇ ಆಗಲಿ ತಪ್ಪು ಮಾಡಿದವರನ್ನು ಹಿಡಿದು ಶಿಕ್ಷೆ ಮಾಡಿ ಒಳ್ಳೆ ಕೆಲಸ ಮಾಡಿದಂಥ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿದರೆ ಆಗ ಅವರಿಗೆ ಉತ್ಸಾಹ ಬರುತ್ತದೆ. ಅವರಿಗೆ ಒಳ್ಳೆಯ ಕೆಲಸ ಮಾಡಿದರೆ ಸರ್ಕಾರದವರು ರಕ್ಷಣೆ ಕೊಡುತ್ತಾರೆ ಎನ್ನುವಂಥಾ ಭಾವನೆ ಇರುತ್ತದೆ. ಇವನ್ನು ರಾಯಲ್ ಕಮೀಷನ್ನಿನ ವರದಿಯಲ್ಲಿ ಬಹಳ ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

ಈಗ ಪೋಲೀಸಿನವರು ಎಂದರೆ ಒಟ್ಟಿಗೆ ಎಲ್ಲರನ್ನೂ ಬಯ್ಯುತ್ತಾರೆ ಎನ್ನುವ ಒಂದು ಭಾವನೆ ಬರುತ್ತಿದೆ. ಒಳ್ಳೆಯ ಕೆಲಸವನ್ನು ಮಾಡಿದರೂ ಬೈಯ್ಯುತ್ತಾರೆ ಎನ್ನುವ ಭಾವನೆ ಪೋಲೀಸಿನವರಿಗೆ ಬರುತ್ತಿದೆ. ಇದನ್ನು ತಪ್ಪಿಸಬೇಕಾದರೆ



WD-H-035-10

ಸರ್ಕಾರದವರು ಮೊದಲು ತಮ್ಮ ಕರ್ತವ್ಯವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಯಾರು ಒಳ್ಳೆಯ ಕೆಲಸ ಮಾಡುತ್ತಾರೆ, ಯಾರು ಸರಿಯಾಗಿ ನಡೆದುಕೊಳ್ಳುತ್ತಾರೆ, ಯಾರು ಸತ್ಯವಂತರಾಗಿರುತ್ತಾರೆ ಅಂಥವರ ಸಂಖ್ಯೆ ದಿನದಿನವೂ ಕಡಿಮೆ ಆಗುತ್ತಿದೆ. ಇದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ಲಂಚಾತಿಂದು ಮಾಡಬಾರದ್ದನ್ನು ಮಾಡಿದವರಿಗೆ ಈ ಸರ್ಕಾರದವರು ಮರ್ಯಾದೆಯನ್ನು ಏನು ಕಡಿಮೆ ಮಾಡುವುದಿಲ್ಲ. ಸತ್ಯವಂತರಾಗಿದ್ದರೆ ಅದು ಒಂದು ಡಿಸ್‌ಕ್ವಾಲೀಫಿಕೇಷನ್ ಆಗಿದೆ ಈ ಸರ್ಕಾರದಲ್ಲಿ.

ನನ್ನ ಒಂದು ಅನುಭವವನ್ನು ಹೇಳಬೇಕು ಎಂದರೆ ನಾನು ಗೃಹ ಖಾತೆಯ ಮಂತ್ರಿಯಾಗಿದ್ದಾಗ ಒಬ್ಬರು ಸಬ್‌ಇನ್‌ಸ್ಪೆಕ್ಟರ್ ಇದ್ದರು. ಇಲ್ಲಿ ಅವರ ಹೆಸರು ಹೇಳುವುದು ಅಪ್ರಕೃತ. ಅವರಿಗೆ ಒಂದು ವಿಶೇಷ ಶಿಫಾರಸ್ಸು ಮಾಡಿ ಕೂಡಲೇ ಅವರಿಗೆ ಪ್ರಮೋಷನ್ ಕೊಡಬೇಕು ಎಂದು ಹೇಳಿದ್ದೇನೆ. ಮನೆಯಲ್ಲಿ ಅವರ ಹೆಂಡತಿ ಅಡುಗೆ ಮಾಡಬೇಕಾಗಿದ್ದರೆ ಬೇರೆ ಒಂದು ಸೊಪ್ಪನ್ನು ತಂದು ಅಡುಗೆ ಮಾಡಿದರು. ಆ ಸಬ್‌ಇನ್‌ಸ್ಪೆಕ್ಟರ್ ಮನೆಗೆ ಊಟಕ್ಕೆ ಬಂದಾಗ ಹೆಂಡತಿಯನ್ನು ಕೇಳಿದರು: ಈ ಸೊಪ್ಪನ್ನು ಪೇಟೆಯಲ್ಲಿ ತಂದು ಸಾರು ಮಾಡಿದೆಯಾ ಹೇಗೆ? ಎಲ್ಲಿಂದ ಇದನ್ನು ತರಿಸಿದೆ? ಎಂದು. ಆಗ ಆಕೆ ಹೇಳಿದಳು: ಪಕ್ಕದ ಮನೆಯ ಹಿತ್ತಲಲ್ಲಿ ಇತ್ತು. ಬಹಳ ಚೆನ್ನಾಗಿ ಬೆಳೆದಿತ್ತಲ್ಲ ಅದಕ್ಕೋಸ್ಕರ ಆ ಸೊಪ್ಪನ್ನು ತಂದು ಸಾರು ಮಾಡಿದ್ದೇನೆ ಬಹಳ ಚೆನ್ನಾಗಿದೆ – ಎಂದು ಹೇಳಿದಳು. ಆಗ ಆ ಸಬ್‌ಇನ್‌ಸ್ಪೆಕ್ಟರ್ ಹೀಗೆ ಮಾಡುವುದರಿಂದ ಇನ್ನೊಬ್ಬರ ದಾಕ್ಷಿಣ್ಯಕ್ಕೆ ಒಳಗಾದಹಾಗೆ ಆಗುತ್ತದೆ. ಈ ರೀತಿ ನೀನು ಮಾಡಿದ್ದು ಶುದ್ಧ ತಪ್ಪು ಎಂದು ಹೇಳಿ, ತನ್ನ ಮನೆಯ ಹಿಂದೆ ಇದ್ದ ಸ್ವಲ್ಪ ಭಾಗವನ್ನು ತನ್ನ ಹೆಂಡತಿಯಿಂದಲೇ ಅಗಿಸಿ, ನೀರು ಹಾಕಿಸಿ, ಸೊಪ್ಪು ಬೆಳೆದು ಯಾವ ಪಕ್ಕದ ಮನೆಯಿಂದ ಸೊಪ್ಪು ತಂದಿದ್ದರೋ ಅವರಿಗೆ ವಾಪಾಸು ಕೊಡುವವರೆಗೂ ಬಿಡಲಿಲ್ಲ! ಇದು ಒಬ್ಬ ಸೂಕ್ಷ್ಮ ಹಾಗೂ ಪ್ರಾಮಾಣಿಕನ ಕತೆ. ಇದಕ್ಕೇನು ಹೇಳುವುದು?

ಈ ಘಟನೆ ಬಹಳ ದೂರ ಹೋಯಿತು ಎಂದು ತಾವು ಹೇಳಬಹುದು, ಆದರೂ ಕೂಡ ಇದರ ಹಿಂದೆ ಇರತಕ್ಕ ತತ್ವವನ್ನು ಗಮನದಲ್ಲಿಟ್ಟುಕೊಂಡು ಆ ರೀತಿ ಮಾಡದೇ ಹೋದರೆ ಇವತ್ತು ದೇಶದೊಳಗೆ ಉಳಿಗಾಲವಿಲ್ಲ. ಲಂಚ ಹಿಂದೂಸ್ಥಾನದಲ್ಲೇ ಬಂದಿರುವ ಪ್ರಶ್ನೆ ಅಲ್ಲ. ಈ ಪ್ರಶ್ನೆ ಎಲ್ಲಾ ಕಡೆಗಳಲ್ಲಿದ್ದರೂ ಕೂಡ ನಮ್ಮಲ್ಲಿ ಅದು ಬಹಳ ದೊಡ್ಡದಾಗಿ ಬೆಳೆಯುತ್ತಿದೆ. ಆದ್ದರಿಂದ ನಾನಾದರೂ ಹೇಳುತ್ತೇನೆ ಈ ಪ್ರಶ್ನೆಯನ್ನು ಬಿಡಿಸಲೇಬೇಕು. ಈ ಪ್ರಶ್ನೆಯನ್ನು ಬಿಡಿಸಬೇಕಾದರೆ ಮುಖ್ಯವಾಗಿ ಬೇಕಾಗಿರುವುದು ಒಂದು ಕಮೀಷನ್ ನೇಮಿಸಬೇಕು. ಪೋಲೀಸ್ ಆಡಳಿತ ಸರಿಯಾಗಿ ಇದೆಯೇ ಇಲ್ಲವೆ? ಅದು ಸರಿಯಾಗಿಲ್ಲದಿದ್ದರೆ ಏಕೆ ಸರಿಯಾಗಿಲ್ಲ? ಅದಕ್ಕೆ ಕಾರಣವೇನು? ಎಂದು ಅದರ ಮೂಲವನ್ನು ತಿಳಿದುಕೊಂಡು ಅದನ್ನು ಸರಿಪಡಿಸಬೇಕು.

ಪಂಜಾಬಿನ ಪೊಲೀಸ್ ಆಡಳಿತದ ಬಗ್ಗೆ ಹಿಂದೆ ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೆ. ಹಿಂದೆ ಪಂಜಾಬಿನಲ್ಲಿ ಒಬ್ಬರು ಮಹನೀಯರು ಶ್ರೀ ಮಹಾಜನ್ ಅವರ ಅಧ್ಯಕ್ಷತೆಯಲ್ಲಿ ಪೊಲೀಸ್ ಆಡಳಿತ ಏತಕ್ಕೆ ಕೆಟ್ಟು ಹೋಗಿದೆ, ಅದನ್ನು ಯಾವರೀತಿ ಸರಿಪಡಿಸಬೇಕು ಎನ್ನುವ ದೃಷ್ಟಿಯಿಂದ 1961ನೇ ಇಸವಿಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದರು. ಆ ಸಮಿತಿಯಲ್ಲಿ 15 ಜನಗಳು ಇದ್ದರು. ಆ ಸಮಿತಿಯವರು 1962ನೇ ಇಸವಿಯಲ್ಲಿ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಅದರಿಂದ ಕಾಂಗ್ರೆಸ್ ಸರ್ಕಾರದ ಮೇಲೆ ಆಕ್ಷೇಪಣೆಗಳು ಬರುತ್ತವೆ ಅನ್ನುವ ದೃಷ್ಟಿಯಿಂದ ಆ ವರದಿಯನ್ನು ಅವರು ಪಬ್ಲಿಕ್ ಮಾಡಿಲ್ಲ. ಇತ್ತೀಚೆಗೆ ಅದು 1967ನೇ ಡಿಶಂಬರ್ ತಿಂಗಳಿನಲ್ಲಿ ಪಬ್ಲಿಕ್ ಆಗಿದೆ. ಮಾನ್ಯ ಮಂತ್ರಿಗಳು ಅದರ ಪ್ರತಿಯನ್ನು ತರಿಸಿ, ಅದನ್ನು ಮನನ ಮಾಡಬೇಕು. ನನಗೂ ಸಹ ಒಂದು ಪ್ರತಿಯ ಅಗತ್ಯ ಇದ್ದು ಆ ಪ್ರತಿಯನ್ನು ಕಳುಹಿಸಿಕೊಡಿ ಎಂದು ನನ್ನ ಸ್ನೇಹಿತರಿಗೆ ಬರೆದಿದ್ದೇನೆ. ಇನ್ನೂ ನನಗೆ ಆ ಪ್ರತಿ ತಲುಪಿಲ್ಲ. ಆ ವರದಿಯಲ್ಲಿ ಒಂದು ಅಂಶವನ್ನು ಹೇಳಿದ್ದಾರೆ. ಅದು ಡಿಶಂಬರ್ ತಿಂಗಳು 20ನೇ ತಾರೀಖಿನ ಪತ್ರಿಕೆಯಲ್ಲಿ ಬಂದಿದೆ. ಅದರಲ್ಲಿ ಈ ರೀತಿ ಹೇಳಿದ್ದಾರೆ:

the report said: the evidence led before the commission has disclosed that members of political parties, particularly of the ruling party whether in the treasury or outside interfere considerably in the working of the police for unlawful ends.

ಇವೊತ್ತಿನ ದಿವಸ ನಮ್ಮ ದೇಶಕ್ಕೆ ಬಂದಿರತಕ್ಕ ಕುತ್ತು ಏನು ಎಂಬುದನ್ನು ನಾನು ಹೇಳುತ್ತೇನೆ. ಇದು ಬಹಳ ಮುಖ್ಯವಾದದ್ದು.

"Screening of the police force from top to bottom by a committee of top honest men has been recommended by the commission as a member one measure for purifying the existing cadre and eliminating from it the inefficient, dishonest and corrupt elements".

ಅತಿ ಮುಖ್ಯವಾಗಿ ಇದನ್ನು ಮಾಡಬೇಕು. ಇದು ಕಷ್ಟಇದೆ ಎಂಬುದು ನನಗೆ ಗೊತ್ತು. ಈ ಬಗ್ಗೆ ಯಾವರೀತಿ ಮಾಡಬೇಕು ಎಂದು ನಾವು ಸಲಹೆ ಕೊಡುತ್ತೇವೆ. ಈ ರೀತಿ ಮಾಡುವುದಾದರೆ ಒಂದು ಸ್ಟ್ಯಾಂಡರ್ಡ್ ಬರುತ್ತದೆ. ಯಾವುದೇ ಬಂದರೂ ಅದನ್ನು ಪೋಲೀಸ್ ಫೋರ್ಸಿಗೆ ಅನ್ವಯಿಸದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಆರ್.ಎಂ. ಪಾಟೀಲರು ವಕೀಲರು ಇದ್ದಾರೆ. ತಜ್ಞರಿದ್ದಾರೆ. ಅವರು ಈ ಕೆಲಸವನ್ನು ಚೆನ್ನಾಗಿ ಮಾಡಬಹುದು. ಇದರಲ್ಲಿ

ಲಂಚಕೋರರು ಯಾರು ಇದ್ದಾರೆ, ಅದಕ್ಷರಾಗಿರುವವರನ್ನು, ಕೆಲಸಕ್ಕೆ ಬಾರದವರನ್ನು ನಿರ್ಧಾಕ್ಷಿಣ್ಯವಾಗಿ ಕಿತ್ತು ಹಾಕಬೇಕು. ಅಂಥ ಸೋಮಾರಿ ಅಧಿಕಾರಿಗಳನ್ನು ಮೂಲೋತ್ಪಾಟನೆ ಮಾಡುವುದು ಅಗತ್ಯವಾಗಿದೆ. ಹೀಗೆ ಮಾಡುವುದಾದರೆ ನಿಮ್ಮ ಪೊಲೀಸ್ ಇಲಾಖೆಗೆ ಒಳ್ಳೆಯ ಹೆಸರು ಬರುತ್ತದೆ. ಒಳ್ಳೆಯವರು ಯಾರು ಇದ್ದಾರೆ, ಚೆನ್ನಾಗಿ ಕೆಲಸ ಮಾಡತಕ್ಕವರು ಯಾರು ಇದ್ದಾರೆಯೋ ಅವರಿಗೆ ಪ್ರೋತ್ಸಾಹ ಕೊಡಬೇಕು. ಇದನ್ನು ಮಟ್ಟಿಗೆ ಮಾಡಿದರೆ ನಿಮಗೆ ಮರ್ಯಾದೆ ಬರುತ್ತದೆ ಎಂದು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಪಾಟೀಲರಿಗೆ ನಾನು ಹೇಳುತ್ತೇನೆ. ಹಿಂದೆ ಇದ್ದಂತಹ ಗೃಹಮಂತ್ರಿಗಳು ದೇಶವನ್ನೇ ಹಾಳುಮಾಡಿ ಹೋದರು. ಅವರು ಇಲ್ಲಿ ಇಲ್ಲದೇ ಇರುವಾಗ ಅವರ ಬಗ್ಗೆ ಹೇಳುವುದು ಉಚಿತವಲ್ಲದಿದ್ದರೂ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲೇಬೇಕು ಅನ್ನಿಸುತ್ತದೆ. ಅವರು ಮೈಸೂರು ಸಂಸ್ಥಾನದ ಗೃಹಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಮೇಲೆ ದೇಶದಲ್ಲಿ ಆಗಬಾರದ ಅನಾಹುತಗಳು, ಆಗಬಾರದ ತೊಂದರೆಗಳು ಆದವು. ಇಷ್ಟೆಲ್ಲಾ ಮಾಡಿ ಕೆಳಮನೆಯಲ್ಲಿ, ಮೇಲ್ಮನೆಯಲ್ಲಿ ಒಂದು ಹೇಳಿಕೆಯನ್ನಾದರೂ ಕೊಡುವಂಥಾ ಮುಖ ಇಲ್ಲದೆ ಅವರು ಹೊರಟು ಹೋದರು. ನಾನೇನು ಇಲ್ಲಿ ಟೀಕೆ ಮಾಡುವುದಕ್ಕೆ ಬಂದು ಕುಳಿತುಕೊಂಡಿಲ್ಲ. ಮುಖ್ಯವಾಗಿ ಪೊಲೀಸ್ ಇಲಾಖೆಯಲ್ಲಿನ ಆಡಳಿತ ಸರಿಯಾಗಿ ಇಲ್ಲದೇ ಇದ್ದರೆ, ಬಲಯುತವಾಗಿಲ್ಲದೇ ಹೋದರೆ ದೇಶದಲ್ಲಿ ಅರಾಜಕತೆ ಬರುತ್ತದೆ. ಪೊಲೀಸ್ ಇಲಾಖೆ ಸರಿಯಾಗಿ ಇದ್ದಿದ್ದರೆ ಮಧುಗಿರಿಯಂತಹ ಪ್ರಕರಣ, ಬಿಜಾಪುರದಂತಹ ಪ್ರಕರಣ ನಡೆಯುತ್ತಾ ಇರಲಿಲ್ಲ. ಪೊಲೀಸ್ ಆಡಳಿತ ಸರಿಯಾಗಿಲ್ಲದೆ ಇದ್ದರೆ ಇಂಥಾ ಪ್ರಸಂಗಗಳು ಬರುತ್ತವೆ.

ಬಹುಭಾಗ ಪೊಲೀಸ್ ಇಲಾಖೆಯಲ್ಲಿ ಎಲ್ಲೆಲ್ಲಿ ನೋಡಿದರೂ ಕೂಡ ದಕ್ಷರಾದ ಮತ್ತು ನಿಸ್ಪೃಹರಾದ ಅಧಿಕಾರಿಗಳು ಎಲ್ಲಿ ಇರುತ್ತಾರೆಯೋ ಅಲ್ಲಿ ಕೆಲಸ, ಆಡಳಿತ ಚೆನ್ನಾಗಿ ನಡೆಯುತ್ತದೆ. ಮೇಲ್ಪಟ್ಟ ಅಧಿಕಾರಿಗಳು ತಮ್ಮ ಕೈಕೆಳಗಿನ ಅಧಿಕಾರಿಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು. **ಮಾನ್ಯ ಮಂತ್ರಿಗಳು ತಮ್ಮ ಕೈಯಲ್ಲಿ ಚಾವಟಿ ಇಟ್ಟುಕೊಂಡಿರಬೇಕು. ಕೆಳಗಿನವರು ಹೇಳಿದ್ದಕ್ಕೆಲ್ಲ ಸುಮ್ಮನೆ ರೈಟ್ ಎಂದು ಹೇಳಿದರೆ ಅದರಿಂದ ಯಾವ ಅನುಕೂಲವೂ ಇಲ್ಲ.** ಯಾವರೀತಿ ಕೆಲಸಗಳನ್ನು ಆಡಳಿತವನ್ನು ಮಾಡಬೇಕೆಂಬುದನ್ನು ನಾನೇನು ಮಂತ್ರಿಗಳಿಗೆ ಹೇಳಿಕೊಡಬೇಕಾಗಿಲ್ಲ. ಅವರು ಉತ್ತಮವಾದ ಆಡಳಿತವನ್ನು ಮಾಡುತ್ತಾರೆ ಎಂಬ ಭರವಸೆ ನನಗೆ ಇದೆ. ಪೊಲೀಸ್ ಇಲಾಖೆಯಲ್ಲಿ ಏನೇನು ಮಾಡಿಲ್ಲವೋ ಅದನ್ನು ಮಾಡಿ, ಪೊಲೀಸ್ ಆಡಳಿತವನ್ನು ಉತ್ತಮಪಡಿಸುತ್ತಾರೆ ಎನ್ನುವ ನಂಬಿಕೆ ನನಗೆ ಇದೆ.

## ನ್ಯಾಯಾಂಗ ತನಿಖೆಗೆ ರೆವಿನ್ಯೂ ಅಧಿಕಾರಿಗಳು ಬೇಡ

ಪೊಲೀಸ್ ಇಲಾಖೆ ಸರಿಯಾಗಿ ಇದ್ದಿದ್ದರೆ ಮಧುಗಿರಿಯ ಪ್ರಕರಣವಾಗಲೀ ಇನ್ನು ಯಾವುದೇ ಪ್ರಕರಣವಾಗಲೀ ನಡೆಯುತ್ತಾ ಇರಲಿಲ್ಲ. ಈ ರಾಜ್ಯದಲ್ಲಿ ಸರ್ಕಾರ

ಯಾವರೀತಿ ಇದೆ ಎಂಬುದನ್ನು ನೋಡಬೇಕಾದರೆ ಕೆಲವು ಪೋಲೀಸ್ ಸಬ್‌ಇನ್‌ಸ್ಪೆಕ್ಟರ್‌ಗಳನ್ನು ದುರ್ಬಳಕೆ ಮಾಡಿಕೊಂಡಿರುವುದನ್ನು ನೋಡಿದರೆ ಸಾಕು, ಏನು ಅಂತ ತಿಳಿಯುತ್ತದೆ. ಸ್ವಾರ್ಥದ ಉದ್ದೇಶದಿಂದ ಸಬ್‌ಇನ್‌ಸ್ಪೆಕ್ಟರ್‌ಗಳನ್ನು 8–10 ವರ್ಷಗಳಾದರೂ ಒಂದೇ ಊರಿನಲ್ಲಿ ಇಟ್ಟಿದ್ದಾರೆ ಮತ್ತು ಕೆಲವು ಎಸ್.ಪಿ.ಗಳನ್ನು 3 ತಿಂಗಳು, 6 ತಿಂಗಳಿಗೇ ಬೇರೆ ಕಡೆ ಎತ್ತಿ ಹಾಕಿದ್ದಾರೆ. ಮಂತ್ರಿಗಳಾದವರು ಪೊಲೀಸ್ ಅಧಿಕಾರಿಗಳಿಗೆ, ನಾನು ಹೇಳುವುದನ್ನು ಮಾಡಬೇಕು ಎಂದು ಹೇಳಿದರೆ; ಅವರು ಆಗಲೀ ಸ್ವಾಮಿ ಮಾಡುತ್ತೇನೆ ಎಂದು ಹೇಳಿದವರನ್ನೇ ತಮ್ಮ ಬಳಿ ಇಟ್ಟುಕೊಳ್ಳುತ್ತಾರೆ. ಅವರು ಇದು ಆಗುವುದಿಲ್ಲ, ಕಾನೂನಿಗೆ ವಿರೋಧವಾಗಿದೆ ಎಂದು ಹೇಳಿದರೆ ಅಂಥವರಿಗೆ ಬೆಳಗಾಗುವುದರೊಳಗೆ ಎತ್ತಂಗಡಿ ಆದೇಶ ಬರುತ್ತದೆ. ಈ ರೀತಿ ಸರ್ವಿಸ್ಸಿನಲ್ಲಿ ಡೀಮಾರಲೈಶೇಷನ್ ಜಾಸ್ತಿಯಾಗುತ್ತಿದೆ. ಈ ಅಧಿಕಾರದಲ್ಲಿರುವವರು ಶಾಶ್ವತವಲ್ಲ ಎಂಬುದನ್ನು ತಿಳಿದು ವರ್ತಿಸಬೇಕು. ಆದ್ದರಿಂದ ಈ ಸಮಯದಲ್ಲಿ ಈ ಇಲಾಖೆಗೆ ನಾನು ಎಚ್ಚರಿಕೆಯನ್ನು ಕೊಡುತ್ತೇನೆ. ಬಹುಕಾಲ ನಾವೇ ಅಧಿಕಾರದಲ್ಲಿರುತ್ತೇವೆಂದು ಮನಸ್ಸಿಗೆ ಬಂದಹಾಗೆ ಪ್ರೀತಿ ಬರುವ ಹಾಗೆ ಮಾಡುತ್ತಾ ಹೋಗುವುದು ಸರಿಯಲ್ಲ.

ನೀವು ಎಂದರೆ ಈ ಇಲಾಖೆಯವರು ತಿನ್ನುವಂಥಾದ್ದು ಎರಡೂವರೆ ಕೋಟಿ ಜನರ ಉಪ್ಪನ್ನು ಎಂಬುದನ್ನು ಮರೆಯಬೇಡಿ. ನೀವು ಕಾಂಗ್ರೆಸ್ಸಿನವರ ಉಪ್ಪನ್ನು ಮಾತ್ರ ತಿನ್ನುವುದಿಲ್ಲ. ಆದ್ದರಿಂದ ನಿಸ್ಪೃಹತೆಯಿಂದ ಕೆಲಸ ಮಾಡಬೇಕು. ನಿಸ್ಪೃಹತೆಯಿಂದ ದೇಶಸೇವೆ ಮಾಡಬೇಕು. ಬೇರೆಕಡೆ ವರ್ಗಾವಣೆ ಮಾಡಿದರೆ ಏನಾಗುತ್ತದೆ, ಟಿ.ಎ ಕೊಡುತ್ತಾರೆ, ಎಲ್ಲಾ ಖರ್ಚುಗಳನ್ನು ಸರ್ಕಾರದವರೇ ಕೊಡುತ್ತಾರೆ. ಯಾವಾಗಲೂ ಸತ್ಯದಿಂದ ನಡೆಯುವುದನ್ನು ಕಲಿಯಬೇಕು. ಅದು ಎಲ್ಲಿಯವರೆಗೆ ಹೋಗಿದೆಯೆಂದರೆ ಒಂದು ರೀತಿಯಿಂದ ನನಗೆ ಈ ವಿಚಾರದಲ್ಲಿ ಆಶ್ಚರ್ಯವೂ ಆಯಿತು, ಸಂತೋಷವೂ ಆಯಿತು. ಮೊನ್ನೆ ದಕ್ಷಿಣ ಕನ್ನಡದ ಶಾಸಕರು ಗೃಹಖಾತೆಯ ಆಡಳಿತದ ಬಗ್ಗೆ ಟೀಕೆ ಮಾಡಿದರು. ಇದು ಮಾನ್ಯ ಸಚಿವರಿಗೆ ಅರ್ಥವಾಗಿದೆಯೆಂದು ಭಾವಿಸಿದ್ದೇನೆ. ಮತ್ತು ತಮ್ಮ ಕಣ್ಣಿಗೆ ಅಂಜನ ಹಾಕಿದಂತೆ ಹಾಗಿರಬಹುದೆಂದು ಭಾವಿಸುತ್ತೇನೆ. ನೀವು ಹೇಳುವುದು ಕಣ್ಣಮುಚ್ಚಾಲೆ ಆಟ ಆಡಿದಂತಿದೆ. ನ್ಯಾಯಾಂಗ ವಿಚಾರಣೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಹಿಂದೆ ಇಂಥಹ ಸಂದರ್ಭಗಳು ಬಂದಾಗ ನೀವು ನ್ಯಾಯಾಂಗ ವಿಚಾರಣೆ ಮಾಡಿರುವುದೆಲ್ಲ ಬರಿ ಸುಳ್ಳು. ಇನ್ನು ಮುಂದೆಯಾದರೂ ಸಹ ಇಂತಹ ವಿಷಯಗಳ ಬಂದಾಗ ನ್ಯಾಯಾಂಗ ತನಿಖೆಯನ್ನು ರೆವಿನ್ಯೂ ಅಧಿಕಾರಿಗಳಿಂದ ಮಾಡಿಸಬೇಡಿ. ಈ ಅಧಿಕಾರಿಗಳಿಗೂ ಅಧಿಕಾರ ಇದೆಯೆಂದು ನೇಮಕ ಮಾಡಿದರೆ ಜನರಿಗೆ ನಂಬಿಕೆ ಬರುವುದಿಲ್ಲ. ಜನರಲ್ಲಿ ನಿಮಗೆ ವಿಶ್ವಾಸ ಬರುವುದಿಲ್ಲ. ಒಬ್ಬ ಮ್ಯಾಜಿಸ್ಟ್ರೇಟರನ್ನು ನೇಮಕ ಮಾಡುವುದು ಒಳ್ಳೆಯದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

## ಪೊಲೀಸ್ ಪಟೇಲ್ ಹುದ್ದೆ ಬೇಡ

ಒಂದು ಮುಖ್ಯವಾದ ವಿಷಯವೆಂದರೆ ಹಳ್ಳಿಗಾಡಿನಲ್ಲಿ ಪೊಲೀಸ್ ಪಟೇಲರನ್ನು ನೇಮಕ ಮಾಡುವ ಬಗ್ಗೆ ಹೊಸ ಯೋಜನೆಯನ್ನು ಜಾರಿಗೆ ತಂದಿದ್ದೀರಿ. ಇಂಥಹವರನ್ನೇ ಪೊಲೀಸ್ ಪಟೇಲರನ್ನಾಗಿ ನೇಮಿಸುತ್ತೇವೆಂದು ಸಾವಿರ ರೂಪಾಯಿಗಳವರೆಗೂ ಲಂಚ ತೆಗೆದುಕೊಳ್ಳುವುದು ನಡೆಯುತ್ತಿದೆ. ಇಷ್ಟು ಓಟು ಕೊಡಿಸಿದರೆ ಪೊಲೀಸ್ ಪಟೇಲರ ಕೆಲಸ ಕೊಡಿಸಲಾಗುತ್ತದೆಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಅನೇಕ ಕೃತ್ಯಗಳು ನಡೆಯುತ್ತಿವೆ. ಇಂತಹವರನ್ನು ಏನಾದರೂ ನೀವು ಪೊಲೀಸ್ ಪಟೇಲರನ್ನಾಗಿ ನೇಮಕ ಮಾಡಿದರೆ ಜನರಿಂದ ಏಟು ಬೀಳುತ್ತವೆ. ಏಕೆಂದರೆ ಜನರು ಏನು ದಡ್ಡರಲ್ಲ. ಇಂಡಿಯನ್ ಪೀನಲ್ ಕೋಡ್ (ಐ ಪಿ ಸಿ) ಜನ ಓದಿದ್ದಾರೆ. ನಮ್ಮ ಆತ್ಮರಕ್ಷಣೆ ಮಾಡುಕೊಳ್ಳುವುದಕ್ಕೆ, ನಮ್ಮ ಆಸ್ತಿ ರಕ್ಷಣೆ ಮಾಡಿಕೊಳ್ಳುವುದಕ್ಕೆ ಸರ್ಕಾರದ ಸಹಾಯ ಸಿಕ್ಕದಿದ್ದರೆ ಹಾಗೂ ಯಾರಿಂದಲಾದರೂ ತಮ್ಮ ಪ್ರಾಣಕ್ಕೆ ತೊಂದರೆ ಬಂದರೆ ವಿಶೇಷ ಸಂದರ್ಭದಲ್ಲಿ ಅವರನ್ನು ಕೊಲ್ಲುವುದಕ್ಕೆ ಕಾಯಿದೆಯಲ್ಲಿ ಅವಕಾಶವಿದೆ – ಇದೆಲ್ಲವನ್ನೂ ಜನ ತಿಳಿದುಕೊಂಡಿದ್ದಾರೆ. ಗೊತ್ತಿಲ್ಲದ ಜನರಿಗೆ ನಾವು ತಿಳಿಸುತ್ತೇವೆ. ಆದ್ದರಿಂದ ಐ.ಪಿ.ಸಿ 420ರ ಪ್ರಕಾರ ಪ್ರವೀಣನಾದವನನ್ನು ಏನಾದರೂ ನೀವು ಪೊಲೀಸ್ ಪಟೇಲರ ಕೆಲಸಕ್ಕೆ ನೇಮಕ ಮಾಡಿದರೆ ದೇಶಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಪ್ರಜಾಪ್ರಭುತ್ವದ ದೃಷ್ಟಿಯಿಂದ, ಪ್ರಜಾಪ್ರಭುತ್ವದ ಉಳಿಯುವಿಕೆಯ ದೃಷ್ಟಿಯಿಂದ ಪೊಲೀಸ್ ಪಟೇಲರನ್ನು ನೇಮಕ ಮಾಡುವ ಕೆಲಸಕ್ಕೆ ಹೋಗಬೇಡಿ. ಈಗ ಗ್ರಾಮ ಪಂಚಾಯ್ತಿ ಸೆಕ್ರೇಟರಿ ಎಂದು ಮಾಡಿದ್ದೀರಿ. ಅವರೂ ಸಹ ಸರ್ಕಾರಿ ಅಧಿಕಾರಿಗಳೇ ಆಗಿದ್ದಾರೆ. ಹಳ್ಳಿಗಳಲ್ಲಿ ಏನಾದರೂ ತಕ್ರೀರು ಆದರೆ ಸರ್ಕಾರಕ್ಕೆ ರಿಪೋರ್ಟ್ ಮಾಡುತ್ತಾರೆ. ಆದ್ದರಿಂದ ಇವರಿಗೇ ಪೊಲೀಸ್ ಪಟೇಲರ ಕೆಲಸವನ್ನೂ ಸಹ ವಹಿಸಿದರೆ ಒಳ್ಳೆಯದು.

**ಶ್ರೀ ಜಿ.ಬಿ. ಶಂಕರ್‌ರಾವ್** (ಕಂದಾಯ ಶಾಖೆಯ ಉಪಮಂತ್ರಿಗಳು): ಪೊಲೀಸ್ ಪಟೇಲರು ಇರಬಾರದು ಎಂಬುದು ನಿಮ್ಮ ಅಭಿಪ್ರಾಯವೆ?

**ಶ್ರೀ ಎಚ್. ಸಿದ್ದವೀರಪ್ಪ:** ನಿಮಗೆ ಏನೂ ಗೊತ್ತಾಗುವುದಿಲ್ಲ. ನೀವು ಸುಮ್ಮನಿರಿ. ಪೊಲೀಸ್ ಪಟೇಲರ ಕೆಲಸವನ್ನೂ ಸಹ ಗ್ರಾಮ ಪಂಚಾಯ್ತಿ ಸೆಕ್ರೇಟರಿಯವರಿಗೇ ಕೊಡಿ ಎಂದು ನಾನು ಹೇಳುತ್ತಿರುವುದು. ಈ ರೀತಿ ಮಾಡದಿದ್ದರೆ ನೀವು ಅಕ್ಷಮ್ಯ ಅಪರಾಧ ಮಾಡಿದಂತಾಗುತ್ತದೆ.

ಇನ್ನು ಸರ್ಕಾರದ ಅನೀತಿ ಎಲ್ಲಿಯವರೆಗೆ ಹೋಗಿದೆ ಎಂಬುದರ ಬಗ್ಗೆ ಒಂದು ಉದಾಹರಣೆಯನ್ನು ಮಾತ್ರ ಹೇಳುತ್ತೇನೆ. ಶ್ರೀಮಾನ್ ಕೆ.ಎಚ್. ಪಾಟೀಲರ ಬಗ್ಗೆ ಈ ಸರ್ಕಾರದವರು ಮಾಡಬಾರದ ಪಾಪವನ್ನು ಮಾಡಿದ್ದಾರೆ. ಇದಕ್ಕಾಗಿ ನಿಮಗೆ ಯಮಧರ್ಮರಾಯನೂ ಬೇರೆ ಒಂದು ನರಕವನ್ನು ಸೃಷ್ಟಿಮಾಡಬೇಕಾಗಿದೆ.

ಈಗಿರುವ ನರಕ ನಿಮಗೆ ಸಾಲದು. ಇವರಮೇಲೆ ಒಂದು ಕೇಸನ್ನು ಹಾಕಿಸಿ ಕೋರ್ಟಿಗೆ ಎಳೆಸಾಡಿಸಿದ್ದೀರಿ ಮತ್ತು ನೇತಾಡುವಂತೆ ಮಾಡಿದ್ದೀರಿ. ಹನುಮನಮಟ್ಟಿಯಲ್ಲಿ ಒಂದು ರೂರಲ್ ಇನ್‌ಸ್ಟಿಟ್ಯೂಟ್ ಇದೆ. ಈ ಸಂಸ್ಥೆ ವಿಚಾರದಲ್ಲಿ ಶ್ರೀಮಾನ್ ಪಾಟೀಲರನ್ನು ಕೋರ್ಟಿಗೆ ಎಳೆದಿದ್ದೀರಿ. ಇದಕ್ಕೆ ಕಾರಣವೆಂದರೆ ಇಷ್ಟೆ, ಶ್ರೀ ಪಾಟೀಲರು ಶ್ರೀ ಎಸ್. ನಿಜಲಿಂಗಪ್ಪನವರ ವಿರುದ್ಧವಾಗಿ ಚುನಾವಣೆ ವಿಚಾರವಾಗಿ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದಾರೆಂದು. ಶ್ರೀ ನಿಜಲಿಂಗಪ್ಪನವರು ಕೂಡ ಕೋರ್ಟಿನಲ್ಲಿ ಪಾಟೀಲರು ನನ್ನ ವೈರಿ ಎಂದು ಹೇಳಿದ್ದಾರೆ. ಈ ಕೇಸ್‌ನಲ್ಲಿ ಸರ್ಕಾರದವರು ಮಧ್ಯಪ್ರವೇಶ ಮಾಡಿಲ್ಲ ಎಂದು ನೀವು ಹೇಳಬೇಡಿ. ನಿಮಗೆ ಶಕ್ತಿ ಇದ್ದರೆ ಈ ಕೇಸನ್ನು ಮೇಲಕ್ಕೆ ಎತ್ತಬಹುದಿತ್ತು. ಈ ಕೇಸ್ ಬಗ್ಗೆ ಕೋರ್ಟ್‌ನವರು ಕೊಟ್ಟಿರುವ ತೀರ್ಮಾನವನ್ನು ನೋಡುವುದಾದರೆ ಶ್ರೀ ಪಾಟೀಲ್ ಅವರು ಏನೂತಪ್ಪು ಮಾಡಿಲ್ಲವೆಂದು ಅರ್ಥವಾಗುತ್ತದೆ. ಅವರು ಮಾಡಬಾರದ ಕೆಲಸ ಏನು ಮಾಡಿದರು ಎಂದು ಕೇಸು ಹಾಕಿದಿರಿ ಎಂದು ಕೇಳುತ್ತೇನೆ. ಅವರ ಮೇಲೆ ಕೇಸು ಹಾಕಿಸುವುದಕ್ಕೆ ಶ್ರೀ ಎಸ್.ಆರ್. ಕಂಠಿಯವರೇ ಕಾರಣ. ಶ್ರೀ ಪಾಟೀಲರು ಅಲ್ಲದೆ ಬೇರೆ ಯಾರಾದರೂ ಆಗಿದ್ದರೆ ಇನ್ನೂ ಹೆಚ್ಚಿನ ಹಿಂಸೆಯನ್ನು ಕೊಡುತ್ತಿದ್ದಿರಿ. ಇವರು ನಿರ್ದೋಷಿಗಳು ಎನ್ನುವ ಬಗ್ಗೆ ಕೋರ್ಟ್‌ನವರು ಕೊಟ್ಟಿರುವ ಹೇಳಿಕೆಯನ್ನು ಓದುತ್ತೇನೆ:

"The Magistrate observed that the prosecution was a waste of public money and time. He observed that it was not possible to hold that prosecution was politically motivated (as contended by Mr.Patil); but the fact that there was no basis to file the charge sheet against the accused and that the prosecution evidence established the innocence of the accused, gave a handle to him (Mr.Patil) to contend that he was prosecuted because of public enemity. It also created a lurking feeling in the mind of the court that it might be so."

This was reported by the Deccan Herald.

ನಿಮ್ಮ ಮುಖಕ್ಕೆ ಮಸಿ ಬಳಿಯುವುದಕ್ಕೆ ಇದೊಂದೇ ಸಾಕು. ಇಂತಹುಗಳನ್ನು ನೀವು ಓದುವುದಿಲ್ಲವೆಂದು ಕಾಣುತ್ತದೆ. ರಾಯಲ್ ಕಮೀಷನ್ ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಮಗೆ ರಕ್ಷಣೆ ಕೊಡಲು ಯಾರು ಇಲ್ಲವೆಂದು ತಿಳಿದುಕೊಳ್ಳಬೇಡಿ. ಕೋರ್ಟೇ ಸಾರ್ವಜನಿಕರಿಗೆ ಡಿಫೇನ್ಸ್ ಆಗಿದೆ ಎಂದು ಹೇಳಿದ್ದಾರೆ. ಕೋರ್ಟಿನಿಂದ ಬರತಕ್ಕಂಥ ತೀರ್ಮಾನಗಳನ್ನು ಸರ್ಕಾರದವರು ತರಿಸಿ ನೋಡಬೇಕು. ಶ್ರೀ ಪಾಟೀಲರ ಬಗ್ಗೆ ಕೇಸು ಆಗುವುದಕ್ಕೆ ಶ್ರೀ ಎಸ್.ಆರ್. ಕಂಠಿಯವರೇ ಕಾರಣ.

ಅವರು ಈಗ ಇಲ್ಲಿಲ್ಲ. ಈ ಬಗ್ಗೆ ಕೋರ್ಟಿನವರು ಕೊಟ್ಟಿರುವ ತೀರ್ಮಾನದಂತೆ ಅವರು ರಾಜೀನಾಮೆ ಕೊಡಬೇಕು. ಈ ವಿಚಾರದಲ್ಲಿ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ಆದರೆ ಸಮಯವಿಲ್ಲ. ಹಿಂದೆ ಹೈಕೋರ್ಟಿನಲ್ಲಿ ಶ್ರೀ ಭೀಮಯ್ಯ ಎನ್ನುವ ನ್ಯಾಯಾಧೀಶರು ಇದ್ದರು. ಅವರು ಒಳ್ಳೆಯ ತೀರ್ಮಾನ ಕೊಡುತಿದ್ದರು. ತಿಪ್ಪೆಯಲ್ಲಿ ಕೋಳಿಗಳು ಕೆದಕುವಂತೆ 8ವರ್ಷಕ್ಕೆ 9ವರ್ಷಕ್ಕೆ ಒಂದುಸಾರಿ ಕೆದಕಿ ಒಂದೊಂದೇ ಕೇಸನ್ನು ಹೊರಗೆ ತರುತ್ತಾರೆ. ಈ ರೀತಿ ಬಹಳ ಕಾಲದಮೇಲೆ ತಂದು ನಿರಪರಾಧಿಯನ್ನು ಕೋರ್ಟಿಗೆ ಎಳೆಯುವುದು, ಈ ರೀತಿಯಾದರೆ ಜನರಿಗೆ ವಿಶ್ವಾಸ ಬರುವುದಿಲ್ಲ. 6ವರ್ಷಗಳ ಕೆಳಗೆ ಒಬ್ಬ ನಿಪರಾಧಿಯ ಮೇಲೆ ಹಾಕಿರುವಂಥ ಕೇಸನ್ನು ನಾನು ನಡೆಸುತ್ತಿದ್ದೇನೆ.

**ಶ್ರೀ ಆರ್. ಎಂ. ಪಾಟೀಲ್:** ಆಗ ನೀವು ಕೇಸ್ ಹಾಕಿಸಿದ್ದಿರಾ?

**ಶ್ರೀ ಎಚ್. ಸಿದ್ದವೀರಪ್ಪ:** ನಾನು ಹಾಕಿಸಿಲ್ಲ. ಇದೇ ರೀತಿ ಸರ್ಕಾರದವರು ಮುಂದುವರೆಸಿದರೆ ಜನರಿಗೆ ಸರ್ಕಾರದ ಮೇಲೆ ನಂಬಿಕೆ ಬರುವುದಿಲ್ಲ. Justice must not only be done but it must be seemingly ಜರಟಿಜ. ಇನ್ನು ಪೋಲಿಸಿನವರ ಬಗ್ಗೆ ಒಂದು ಸಲಹೆ ಕೊಡುವುದೇನೆಂದರೆ ಅವರ ಕಾಕಿ ಬಟ್ಟೆಗಳನ್ನು ಬದಲಾವಣೆ ಮಾಡಿಸಬೇಕು. ಈ ಬಟ್ಟೆಯಿಂದ ಜನಗಳಿಗೆ ಜಿಗುಪ್ಸೆ ಬಂದಿದೆ. ಬಟ್ಟೆ ಬಣ್ಣ ಬದಲಾಯಿಸಿದರೆ ಏನಾದರೂ ಜನರಿಗೆ ಪೋಲೀಸಿನವರ ಮೇಲೆ ನಂಬಿಕೆ ಬರಬಹುದೆಂದು ಕಾಣುತ್ತದೆ. ಕಾಕಿ. ಕಾವಿ ಮತ್ತು ಖಾದಿ ಈ ಮೂರೂ ಬಣ್ಣಗಳನ್ನು ಬದಲಾವಣೆ ಮಾಡಿದರೆ ಒಳ್ಳೆಯದಾದೀತೆಂದು ಕಾಣುತ್ತದೆ. ನಾನು ಮಾನ್ಯ ಗೃಹಮಂತ್ರಿಗಳಿಗೆ ಕೆಲವೊಂದು ವಿಷಯಗಳ ಬಗ್ಗೆ ಅಂಕಿಅಂಶಗಳನ್ನು ಒದಗಿಸಿಕೊಡಬೇಕೆಂದು ಕೇಳಿದ್ದೆ. ಅದರಂತೆ ಒದಗಿಸಿಕೊಟ್ಟಿದ್ದಾರೆ. ಆದರೆ ನಾನು ಕೇಳಿದಂತಹ Are there cases pending investigation for more than one year in cognizable cases? If so, what are they .... ಎನ್ನುವ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

**ಶ್ರೀ ಆರ್. ಎಂ. ಪಾಟೀಲ್:** ಬಹಳ ಕೇಸುಗಳು ಇವೆ.

**ಶ್ರೀ ಎಚ್. ಸಿದ್ದವೀರಪ್ಪ:** ನನಗೆ ಅದು ಗೊತ್ತಿದೆ. ಸಿಂಡಿಕೇಟ್ ಬ್ಯಾಂಕಿನವರು ಒಬ್ಬ ಎರಡು ಲಕ್ಷ ರೂಪಾಯಿಗಳನ್ನು ಹೊಡೆದುಕೊಂಡು ಹೋಗಿದ್ದಾರೆ ಎಂಬ ಬಗ್ಗೆ 5.3.1967ರಲ್ಲಿ ಒಂದು ಪಿರ್ಯಾದೆ ಕೊಟ್ಟಿದ್ದರೂ ಸಹ ಇನ್ನೂ ಕೇಸನ್ನು ಇನ್‌ವೆಸ್ಟಿಗೇಟ್ ಮಾಡಿಲ್ಲ. ಇದೇ ವಿಚಾರದಲ್ಲಿ ನಾನು ಎರಡು – ಮೂರುಬಾರಿ ಪ್ರಸ್ತಾಪ ಮಾಡಿದ್ದೇನೆ. ಇಂತಹ ವಿಚಾರದಲ್ಲಿ ಒಂದುದಿನ ತಡ ಮಾಡಿದರೂ ಸಹ ಸಾಕ್ಷ್ಯ ಕಳೆದು ಹೋಗುತ್ತದೆ. ಈ ವಿಚಾರದಲ್ಲಿ ಯಾರನ್ನಾದರೂ ಉಳಿಸಬೇಕೆಂದಿದ್ದರೆ ಬೇಕಾದರೆ ನಿಧಾನ ಮಾಡಿ. ಖಾದಿ ಬೋರ್ಡಿನಲ್ಲಿ ಏನಾಯಿತು ಎಂಬುದು ನಿಮಗೆ

ಗೊತ್ತಿದೆ. 20 ವರ್ಷಗಳಾದರೂ ಸಹ ಯಾವ ಕೇಸನ್ನೂ ಹಾಕುವುದಕ್ಕಾಗುವುದಿಲ್ಲ. ನಿಧಾನಮಾಡಿ ರುಜುವಾತು ಮಾಡುವುದಕ್ಕೆ ಹೋದರೆ ಅದು ಸಾಧ್ಯವಾಗುವುದಿಲ್ಲ. ಆದುದರಿಂದ ನಾನು ಹೇಳುವುದು ಪೋಲೀಸು ಡಿಪಾರ್ಟ್‌ಮೆಂಟಿನಲ್ಲಿ ಏನು ಅನ್ಯಾಯಗಳಾಗಿವೆ, ಎಷ್ಟು ದುಡ್ಡು ಕೊಟ್ಟಿದ್ದಾರೆ ಎನ್ನುವುದನ್ನು ಇಲ್ಲಿ ಹೇಳುತ್ತಿದ್ದೇನೆ. ಬ್ಯಾಂಕಿನವರು ಎರಡು ಲಕ್ಷದಷ್ಟು ಹಣ ಕೊಟ್ಟಿರುವುದು ಬರದೇ ನಿಂತು ಹೋಗಿದೆ. ನೀವು ಚಾರ್ಜಸೀಟ್ ಹಾಕಿದರೆ ಬರುತ್ತದೆ. ಆದರೆ ನೀವು ಚಾರ್ಜ್‌ಶೀಟ್ ಹಾಕುವುದರಲ್ಲೇ ತಡ ಮಾಡುತ್ತಿದ್ದೀರಿ. ಚಾರ್ಜ್‌ಶೀಟು ಹಾಕಿದರೆ ಇದು ಪ್ರೈಮಾಫೇಸಿ ಕೇಸು ಇದೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ ಮತ್ತು ಇದರಲ್ಲಿ ನಿಮ್ಮ ಕಾಂಗ್ರೆಸ್‌ನಲ್ಲಿರುವ ಪುಢಾರಿಗಳೊಬ್ಬರನ್ನು ಬದುಕಿಸುವುದಕ್ಕಾಗಿ ಇವನ್ನೆಲ್ಲಾ ಮಾಡುತ್ತಿದ್ದೀರಿ.

ನಿಮಗೆ ಬೇಕಾದವರು ಅಲ್ಲದಿದ್ದರೆ ಇನ್ನಾರನ್ನಾದರೂ ಇಲ್ಲಿ ನೇಮಿಸಿದ್ದರೆ ಇಷ್ಟು ಹೊತ್ತಿಗೆ ಅವರನ್ನು ಸಸ್ಪೆಂಡ್ ಮಾಡಿಬಿಡುತ್ತಿದ್ದರು. ಇದು ನಿಮ್ಮ ಸರಕಾರದ ಅದಕ್ಷತೆಯನ್ನು ತೋರಿಸುತ್ತದೆ. ಸರಕಾರದ ಇಲಾಖೆ ಇರುವುದಾದರೂ ಏತಕ್ಕಾಗಿ? ಅವರೆಲ್ಲಾ ಏನು ಮಾಡುತ್ತಿದ್ದಾರೆ? ಇದನ್ನು ಹೇಗಾದರೂ ಮಾಡಿ ಮುಂದೂಡಬೇಕು ಎಂದು ಮಾಡಿದ್ದಾರೆ. ನಾನು ಇಲ್ಲಿ ಪೋಲೀಸು ಇಲಾಖೆಯ ಮೇಲೆ ಚರ್ಚೆ ಮಾಡುವಾಗ ಇದಕ್ಕೆ ಮೂರು ದಿನಗಳಷ್ಟಾದರೂ ಕಾಲಾವಕಾಶ ಕೊಡಬೇಕೆಂದು ಹೇಳಿದರೂ ಅದು ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಮೂರು ದಿನಗಳಷ್ಟು ಕಾಲ ತೆಗೆದುಕೊಂಡರೂ ಅದು ಸಾಲುವುದಿಲ್ಲ. ಇದನ್ನು ಇಷ್ಟು ಸುಲಭವಾಗಿ ಇಂದು ಕೈಬಿಡಬೇಕಲ್ಲ ಎಂದು ಬಹಳ ವ್ಯಸನವಾಗುತ್ತಿದೆ. ಇದರ ಜೊತೆಗೆ ಇನ್ನೂ ಕೆಲವು ಇಲಾಖೆಗಳ ಬಗ್ಗೆ ಹೇಳುತ್ತೇನೆ.

## ಹೋಂ ಗಾರ್ಡ್ಸ್ ಕುರಿತು

ಹೋಂ ಗಾರ್ಡ್ಸ್ ಎಂದರೆ ಗೃಹರಕ್ಷಕದಳ ಎಂದು ಈ ಇಲಾಖೆಯಲ್ಲಿ ಮಾಡಿದ್ದಾರೆ. ಇದು ಬಹಳ ಮುಖ್ಯವಾದುದು. ಗೃಹರಕ್ಷಕ ದಳಗಳನ್ನು ನಮ್ಮ ದೇಶದಲ್ಲಿ ಇನ್ನೂ ಹೆಚ್ಚು ಮಾಡಬೇಕಾದುದು ಸರಕಾರದ ಆದ್ಯಕರ್ತವ್ಯ. ಸೆಲ್ಫ್ ಪ್ರೊಟೆಕ್ಷನ್‌ಗೋಸ್ಕರ ಮಾಡಿರುವ ಇದು ಒಂದು ನಾನ್ ಅಫಿಸಿಯಲ್ ಬಾಡಿ. ಇದರಲ್ಲಿ ತಯ್ಯಾರು ಮಾಡುವಂತಹ ಜನರು ಬಹಳ ಒಳ್ಳೆಯವರು ಮತ್ತು ಉತ್ತಮವಾದ ಜನರು. ಇವರು ದೇಶದಲ್ಲಿ ಅಶಾಂತಿಯಾದಾಗ ಜನರ ರಕ್ಷಣೆ ಮಾಡುವುದಕ್ಕೆ ಬಹಳ ಸಹಾಯಕವಾಗುತ್ತಾರೆ.

ನಾನು ಆಡಳಿತದಲ್ಲಿದ್ದಾಗಿನ ಒಂದು ಸಂದರ್ಭ ಜ್ಞಾಪಕಕ್ಕೆ ಬರುತ್ತಿದೆ. ಕೆಲವು ಕಡೆಗಳಲ್ಲಿ ಅಶಾಂತಿಯಾದ ಸಂದರ್ಭಗಳು ಬಂದಾಗ ದೇಶದ ಜನ ರಕ್ಷಣೆಗಾಗಿ ಸರಕಾರವನ್ನು ಕೇಳುವುದಕ್ಕೆ ಬರುತ್ತಾರೆ. ಇದು ನನ್ನ ಅನುಭವದಲ್ಲೂ ಬಂದಿದೆ.

ಹಿಂದೆ ತುಮಕೂರು ಹತ್ತಿರದ ಕ್ಯಾತ್ಸಂದ್ರದ ಬಳಿ ಇದ್ದ ಅಡಕೆ ಹಾಗೂ ತೆಂಗಿನ ತೋಟಗಳಲ್ಲಿ ಕಳ್ಳತನಗಳು ಜಾಸ್ತಿಯಾದಾಗ ನಾನು ಗೃಹಮಂತ್ರಿಯಾಗಿದ್ದೆ. ನನ್ನ ಬಳಿ ಕೆಲ ಜನ ಬಂದು ಸೂಕ್ತ ರಕ್ಷಣೆ ಕೊಡಬೇಕೆಂದು ಕೇಳಿದ್ದರು. ಆಗ ನಾನು ಆ ಪ್ರದೇಶದಲ್ಲೇ ಇರುವ ಸುಮಾರು ಇಪ್ಪತ್ತು ಹುಡುಗರನ್ನು ಸೇರಿಸಿ ಅಕ್ಕಪಕ್ಕದ ಜನರ ಬಂದೋಬಸ್ತಿಗಾಗಿ ಅವರಿಗೆ ಆರು ಬಂದೂಕುಗಳನ್ನು ತರಿಸಿ ಕೊಟ್ಟಿದ್ದೆ. ಅದರಿಂದಾಗಿ ಅಲ್ಲಿನ ಜನರ ಕಷ್ಟಗಳು ಸ್ವಲ್ಪಮಟ್ಟಿಗೆ ಸುಧಾರಿಸಲು ಅನುಕೂಲವಾಯಿತು. ಹೀಗಾಗಿ ಅವರ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡಿಕೊಳ್ಳಲು ಅವರಿಗೆಲ್ಲಾ ಬಹಳ ಅನುಕೂಲವಾಯಿತು ಎಂದು ನನಗೆ ಅಲ್ಲಿಂದ ಅನೇಕ ರಿಪೋರ್ಟ್‌ಗಳೂ ಬಂದವು.

ಈಗ ಸರಕಾರದವರು ಇಲ್ಲಿ ಮಾಡಿರುವ ಹೋಂ ಗಾರ್ಡ್ಸ್‌ಗಳ ಬಗ್ಗೆ ನನಗೆ ಅನೇಕ ರಿಪೋರ್ಟ್‌ಗಳೂ ಬಂದಿವೆ. ಇದರಲ್ಲಿ ಸರಿಯಾದ ನೀತಿಯನ್ನು ರೂಪಿಸಿಕೊಂಡು ಕೆಲಸ ಮಾಡುವುದು ಬಹಳ ಮುಖ್ಯ. ಈಗಿರುವ ಕಮ್ಯಾಂಡರ್‌ರವರು ಇದರ ಕಡೆಗೆ ಸ್ವಲ್ಪ ಹೆಚ್ಚು ನಿಗಾ ಇಟ್ಟು ಕೆಲಸ ಮಾಡುತ್ತಿಲ್ಲ ಎಂದು ನನಗೆ ತಿಳಿದು ಬಂದಿದೆ. ಇದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಸರಕಾರ ಇದರ ಕಡೆಗೆ ತಮ್ಮ ಗಮನವನ್ನು ಹರಿಸಬೇಕೆಂದು ಇಷ್ಟುಮಾತ್ರ ಇಲ್ಲಿ ಹೇಳುತ್ತೇನೆ.

ಇನ್ನು ಮಂತ್ರಿಗಳು ಹಸ್ತಕ್ಷೇಪ ಮಾಡುವುದು ಎಂದರೆ ಅದು ಅಕ್ಷಮ್ಯ ಅಪರಾಧ. ಇದರಲ್ಲೂ ಮಂತ್ರಿಗಳಲ್ಲದೆ ಈಗ ಉಪ ಮಂತ್ರಿಗಳು ಕೂಡ ಹಸ್ತಕ್ಷೇಪಮಾಡಲು ಹೊರಟಿದ್ದಾರೆ. ನಮ್ಮ ಕ್ಷೇತ್ರಕ್ಕೆ ನಾನು ಇತ್ತೀಚೆಗೆ ಹೋಗಿದ್ದಾಗ ಇದು ನನಗೆ ಗೊತ್ತಾಯಿತು! ನಮ್ಮ ಮಾನ್ಯ ಉಪಮಂತ್ರಿಗಳಾದ ಶ್ರೀ ಬೋರಯ್ಯನವರು ಬಂದಾಗ ಇದು ನಡೆಯಿತು ಎಂದು ಕೇಳಿದ್ದೇನೆ. ಮಾನ್ಯ ಬೋರಯ್ಯನವರು ನನ್ನ ಸ್ನೇಹಿತರು ಹಾಗು ನನ್ನ ಕ್ಷೇತ್ರದ ಕಡೆಯಿಂದಲೇ ಬಂದವರು. ಆದರೆ ಅವರೇ ಈ ರೀತಿಯಿಂದ ಮಾಡಿದರು ಎನ್ನುವುದನ್ನು ಕಂಡಾಗ ನನಗೆ ಬಹಳ ಆಶ್ಚರ್ಯವಾಯಿತು. ನಮ್ಮ ಜಿಲ್ಲೆಯ ಪ್ರಮುಖ ಮುಖಂಡರು ಮತ್ತು ತರುಣರೂ ಆಗಿರುವುದರಿಂದ ಇನ್ನೂ ಚೆನ್ನಾಗಿ ಮುಂದಕ್ಕೆ ಬರಬೇಕೆಂದು ಆಸೆ ಪಡುತ್ತೇನೆ. ಆದರೆ ನಾನು ಚಿತ್ರದುರ್ಗದ ಕಡೆ ಹೋಗಿದ್ದಾಗ ಇವರು ನಡೆಸಿದ ಆಟಾಟೋಪ ಕೆಲಸಗಳು ಏನೂ ಅನ್ನುವುದು ಗೊತ್ತಾಯಿತು. ಶ್ರೀಮಾನ್ ಬೋರಯ್ಯನವರು ಈರೀತಿ ಮಾಡುವುದಕ್ಕೆ ಹೋದದ್ದು ನೋಡಿ ನನಗೆ ಬಹಳ ಆಶ್ಚರ್ಯವೇ ಆಯಿತು.

ಇಲ್ಲಿ ಒಂದು ಕೇಸಿನಲ್ಲಿ ಒಬ್ಬ ಮನುಷ್ಯನ ಬಂಗಾರ ಇತ್ಯಾದಿ ಪದಾರ್ಥಗಳು ಕಳುವಾಗಿವೆ ಎಂದು ಹೇಳಲು ಪೊಲೀಸು ಸ್ಟೇಷನ್ನಿಗೆ ಬಂದಾಗ ಎರಡು ಮೂರು ದಿನ ಪೊಲೀಸು ಕಸ್ಟಡಿಯಲ್ಲಿ ಇಟ್ಟುಕೊಂಡಿದ್ದಾರೆ ಎಂದು ಹೇಳಿದರು. ಆದರೆ ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಇದನ್ನು ನೋಡಿ, ಇದರಲ್ಲಿ ಯಾರು ಪಿರ್ಯಾಧಿಯಾಗಿದ್ದರೋ ಅವರೇ ಜಿಲ್ಲಾ ಎಸ್.ಪಿ.ಯವರಲ್ಲಿಗೆ ಹೋಗಿ ಹೇಳಿದ್ದಾರೆ. ಮಾನ್ಯಶ್ರೀ ಬೋರಯ್ಯನವರು ಬೆಂಗಳೂರಿನಿಂದ ನನಗೆ ಟೆಲಿಫೋನಿನಲ್ಲಿ

ಹೇಳಿದ್ದಾರೆ, ಇದರ ಬಗ್ಗೆ ನಾನು ಆಗಲೇ ಸರ್ಕಲ್ ಇನ್‌ಸ್ಪೆಕ್ಟರ್‌ರವರಿಗೆ ಹೇಳಿದ್ದೇನೆ ಎಂದು ಎಸ್.ಪಿಯವರು ಹೇಳಿದಾಗ ಇದರ ಐರನಿ ಏನಿದೆ ಅನ್ನುವುದು ನನಗೆ ಗೊತ್ತಾಯಿತು. ಮತ್ತೆ ಪಿರ್ಯಾಧಿಯಾದವನು ಎಸ್.ಪಿ. ಕಡೆ ಹೇಳಿದರೆ ಅವರು ಪುನ: ನೀವು ಸರ್ಕಲ್ ಇನ್‌ಸ್ಪೆಕ್ಟರ್ ಬಳಿಗೆ ಹೋಗಿ ಎಂದು ಆಗಲೇ ಹೇಳಿದನಲ್ಲಾ ಅವರಲ್ಲಿಗೇ ಹೋಗಿ ಅವರಿಗೆ ಎಲ್ಲವನ್ನೂ ಹೇಳಿದ್ದೇನೆ ಎಂದು ಹೇಳುತ್ತಾರೆ. ಮೊನ್ನೆ ದಿವಸ ಕೂಡ ಟೆಲಿಫೋನ್ ಬಂತು ಎಂದು ಹೇಳಿದರೆ ಆಡಳಿತ ಹೇಗೆ ನಡೆಯುತ್ತದೆ ಎಂದು ಹೇಳಬಹುದು. ಮಾನ್ಯ ಮಂತ್ರಿಗಳಾದವರು ಯಾರೇ ಆಗಿರಲಿ ತಮ್ಮ ಇಲಾಖೆಗೆ ಸಂಬಂಧಪಡದೇ ಇದ್ದರೂ ಇಂಥ ಕೆಲಸಕ್ಕೆ ಕೈ ಹಾಕಬಾರದು. ಮಂತ್ರಿಗಳಾದವರು ಇತರ ಅಧಿಕಾರಿಗಳ ಬಗ್ಗೆ ಇಷ್ಟು ಸದರವಾಗಿ ಆಡಳಿತ ಮಾಡಿದರೆ ಇದು ಅವರ ಅದಕ್ಷತೆ ತೋರಿಸುತ್ತದೆ. ಇದನ್ನು ಮಾನ್ಯ ಉಪಮಂತ್ರಿಗಳಾದ ಶ್ರೀ ಬೋರಯ್ಯನವರೂ ತಿಳಿದುಕೊಳ್ಳಬೇಕು. ಇದನ್ನು ಅವರು ಮಾಡಿಲ್ಲ.

**ಶ್ರೀ ಎಚ್.ಸಿ. ಬೋರಯ್ಯ** (ಸಾರಿಗೆ ಖಾತೆಯ ಉಪಮಂತ್ರಿಗಳು): ಸ್ವಾಮೀ, ಇದರ ಬಗ್ಗೆ ಮಾನ್ಯ ಸದಸ್ಯರು ಹಿಂದೆ ಪ್ರಶ್ನೆ ಕೇಳಿದಾಗಲೂ ವಿವರವಾಗಿ ಹೇಳಿದ್ದೆ. ಇದೊಂದು ದಿವಸ ಬಿಟ್ಟು ಬೇರೆ ಯಾವುದಾದರೂ ಒಂದು ಸಂದರ್ಭವನ್ನು ಇಲ್ಲಿ ಹೇಳಲಿ, ಆಗ ನಾನು ಒಪ್ಪಿಕೊಳ್ಳುತ್ತೇನೆ. ಇದೂ ಕೂಡ ನಾನು ಅಲ್ಲಿಗೆ ಹೋಗಿದ್ದಾಗ ಇಲ್ಲಿ ಒಂದು ರೀತಿಯಾದ ಘರ್ಷಣೆಯಾಗುವಂತಹ ಸಂದರ್ಭ ಬಂದಿದೆಯೆಂದು ಗೊತ್ತಾದುದರಿಂದ ಮತ್ತು ಇಲ್ಲಿನ ಜನರಿಗೆ ಪೊಲೀಸು ಬಂದೋಬಸ್ತು ಅವಶ್ಯಕವಾಗಿ ಬೇಕು ಎಂದು ತಿಳಿದು ಬಂದುದರಿಂದ ಸಂಬಂಧಪಟ್ಟ ಪೊಲೀಸು ಅಧಿಕಾರಿಗಳಿಗೆ ತಕ್ಕ ಬಂದೋಬಸ್ತು ಮಾಡಬೇಕೆಂದು ಹೇಳಲು ಇಲ್ಲಿ ನಾನು ಪ್ರವೇಶ ಮಾಡಬೇಕಾಯಿತು. ಎಸ್.ಪಿ. ಅವರಿಗೆ ಸುಗಮವಾಗಿ ಕೆಲಸ ನಡೆಯುವುದಕ್ಕಾಗಿ ಹೇಳಿದೆ ಅಷ್ಟೆ.

**ಶ್ರೀ ಎಚ್. ಸಿದ್ದವೀರಪ್ಪ:** ನಾನು ಅದಕ್ಕಾಗಿ ಹೇಳುವುದು; ನಾನು ಇಲ್ಲಿ ಹೇಳಿದ ಕೇಸನ್ನು ತಾವು ಸಂಪೂರ್ಣವಾಗಿ ಮತ್ತು ಸಕ್ಸಸ್‌ಫುಲ್ ಆಗಿ ತನಿಖೆ ಮಾಡಿಸಿ, ನಾನು ಆಗ ಮಾನ್ಯ ಬೋರಯ್ಯನವರು ಇದರಲ್ಲಿ ಏನೂ ಮಾಡಿಲ್ಲ ಎಂದು ನಾನು ತಿಳಿದುಕೊಳ್ಳಬಹುದು. ಇದನ್ನು ತನಿಖೆ ಮಾಡಿಸದೆ ಏತಕ್ಕಾಗಿ ತಡಮಾಡುತ್ತಿದ್ದೀರಿ? ನಾನು ಮೊನ್ನೆ ಚಿತ್ರದುರ್ಗಕ್ಕೆ ಹೋದಾಗ ನನ್ನ ಹತ್ತಿರ ಕೆಲವು ಜನರು ಬಂದು ನಿಮ್ಮ ಸರಕಾರದಲ್ಲಿ ಕೇಳುವವರೇ ಇಲ್ಲ, ನಿಮ್ಮ ಮಂತ್ರಿಗಳಾದ ಶ್ರೀ ಬೋರಯ್ಯನವರೇ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಹೀಗೆಲ್ಲಾ ಮಾಡುತ್ತಿದ್ದಾರೆ ಎಂದು ಹೇಳಿದರು. ಇದಕ್ಕಾಗಿ ತಾವು ಸರಿಯಾದ ರೀತಿಯಲ್ಲಿ ಇದನ್ನು ತನಿಖೆ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು ಎಂದು ಇಲ್ಲಿ ಹೇಳುತ್ತೇನೆ. ಇದರ ಬಗ್ಗೆ ಇನ್ನೂ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. I am not prepared to pursue it further. ಇನ್ನು ಕನ್‌ವಿಕ್ಷನ್ಸ್ ಬಗ್ಗೆ ಹೇಳಬೇಕಾಗಿದೆ.

**Sri S.D.KOTHAVALE**(Sankeswar) - For clearing my own doubt, suppose an ordinary member of the public finds that something is wrong and some police bandobust is needed, should he not bring it to the notice of the police and see that something is done? If an ordinary citizen can do it , I do not understand why Deputy Minister or a Minister should not do it. To seek the aid in the proper context is not wrong.

**ಶ್ರೀ ಎಚ್. ಸಿದ್ದವೀರಪ್ಪ:** ನಾನು ನನ್ನ ಮಾನ್ಯ ಸ್ನೇಹಿತರಲ್ಲಿ ಇದನ್ನು ಏತಕ್ಕಾಗಿ ಹೇಳುತ್ತಿದ್ದೇನೆ ಎಂದರೆ ನಿಮ್ಮ ಹಿತದೃಷ್ಟಿಯಿಂದಲೇ ಹೇಳುತ್ತಿದ್ದೇನೆ. ಮಂತ್ರಿಗಳಾದವರು ಕೆಳದರ್ಜೆಯ ಅಧಿಕಾರಿಗಳೊಡನೆ ಮಾತನಾಡುವುದಕ್ಕೆ ಹೋದರೆ ಅವರಿಂದೇನಾಗುತ್ತದೆ ಎನ್ನುವುದು ತಮಗೆ ತಿಳಿಯುವುದಿಲ್ಲ. ಅವರು ಎಂತಹ ಪಾಕಡಜನ ಇರುತ್ತಾರೆ ಎನ್ನುವುದು ನಿಮಗೆ ಗೊತ್ತಾಗುವುದಿಲ್ಲ. ನೀವು ಸರಿಯಾದ ಒಂದು ನೀತಿಯನ್ನು ಪರಿಪಾಲನೆ ಮಾಡಬೇಕಾದರೆ ಇದನ್ನು ಸರಿಯಾಗಿ ಮಾಡಬೇಕು. ಇವೊತ್ತು ಕಾಂಗ್ರೆಸ್ ಪಕ್ಷದವರಾದ ಶ್ರೀಮಾನ್ ಕೊಠಾವಳಿಯವರೇ ಬಂದು ಹೇಳಿದರು ಎಂದರೆ ನಿಮ್ಮ ಚೀಲವನ್ನು ಬಿಚ್ಚಿಸಿಬಿಡುತ್ತಾರೆ. ಇಂತಹ ಅಧಿಕಾರಿಗಳೂ ಇರುತ್ತಾರೆ. ಇದರ ಬಗ್ಗೆ ಸರಿಯಾದ ರಿಪೋರ್ಟ್ ಕೂಡಾ ನಿಮಗೆ ಬರುವುದಿಲ್ಲ. ಇವತ್ತು ಮಾಡುವುದಕ್ಕೆ ಹೋದರೆ ಅದರಿಂದ ಎಷ್ಟು ಬದಲಾವಣೆ ಆಗುತ್ತದೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿರಬೇಕು. ಅದಕ್ಕೋಸ್ಕರ ಇದನ್ನು ಸರಿಯಾಗಿ ತಿಳಿದುಕೊಳ್ಳಬೇಕು ಎಂದು ಹೇಳುತ್ತಿರುವುದು.

**Sri S.D.KOTHAVALE**: It is a question of time also . If there is not sufficient time, he must make an approach even to the smallest officer.

**ಶ್ರೀ ಎಚ್. ಸಿದ್ದವೀರಪ್ಪ:** ಜಿಲ್ಲೆಯಲ್ಲಿ ಎಸ್.ಪಿ. ಎನ್ನುವ ಅಧಿಕಾರಿಗಳೇ ಬಹಳ ಜವಾಬ್ದಾರಿ ಅಧಿಕಾರಿಯಾಗಿರುತ್ತಾರೆ. ಅವರಿಗೇ ಎಲ್ಲ ಸೂಚನೆಗಳನ್ನೂ ಕೊಡಬೇಕು. ಅವರ ಕೈ ಕೆಳಗಿರುವ ಸಣ್ಣಸಣ್ಣ ಅಧಿಕಾರಿಗಳಿಗೆ ಯಾವ ಸೂಚನೆಗಳನ್ನೂ ಕೊಡಬಾರದು. ಇದರಿಂದ ಜನಕ್ಕೆ ಕ್ಷೇಮವಾಗುವುದಕ್ಕೆ ಬದಲಾಗಿ ಅಕ್ಷೇಮವಾಗುತ್ತದೆ. ಇದನ್ನು ಮುಂದುವರೆಯುವುದಕ್ಕೆ ಅವಕಾಶ ಕೊಡಬಾರದು. ಇನ್ನೊಂದು ವಿಷಯ ಹೇಳುತ್ತೇನೆ. ತನಿಖೆಯಲ್ಲಿ ಎಷ್ಟೆಷ್ಟು ಅನ್ಯಾಯವಾಗುತ್ತದೆ ಎನ್ನುವುದನ್ನು ನಾನು ನಡೆಸಿದ ಒಂದು ಕೇಸಿನಲ್ಲಿ ನೋಡಿದರೆ ಕಳವಳವಾಗುತ್ತದೆ. ಇದು ನಮ್ಮ ಆಡಳಿತದ ವೈಶಿಷ್ಟ್ಯ. ಒಂದು ಕೇಸಿನಲ್ಲಿ ಕೆಲವು ಜನ ಒಬ್ಬನನ್ನು ಹೊಡೆದರು. ಏನೋ ಮೈಮೇಲೆ ಸಣ್ಣಪುಟ್ಟ ಗಾಯಗಳಾಗಿದ್ದರೆ ಡಾಕ್ಟರ್ ಮತ್ತು ತನಿಖಾಧಿಕಾರಿ ಒಂದಾಗಿ ಸೇರಿ ಕೈ

ಮುರಿಯಿತು, ಕಾಲು ಮುರಿಯಿತು, 14 – 15 ಗಾಯಗಳಾಗಿವೆ ಎಂದು ವರದಿ ಬರೆದಿದ್ದರು. ಇದು ಬಯಲಿಗೆ ಹೇಗೆ ಬಂತು ಅಂದರೆ ಸಾಂದರ್ಭಿಕ ಸಾಕ್ಷಿ ಮೂಲಕ. ಗಲಾಟೆಯಾದ ಸ್ಥಳಕ್ಕೆ ಇನ್ನೊಬ್ಬ ಡಾಕ್ಟರು ಹೋಗಿದ್ದರು. ಅಲ್ಲಿ ಏನೇನು ನಡೆದಿದೆ ಎಂಬುದನ್ನು ಬರೆದುಕೊಂಡು ಬಂದಿದ್ದರು.

ನನ್ನ 30 ವರ್ಷಗಳ ಅನುಭವದಲ್ಲಿ ಇಂಥ ಪ್ರಕರಣ ನನ್ನ ಮುಂದೆ ಬಂದಿರಲಿಲ್ಲ. ಈ ಕೇಸು ಹಾಕಬೇಕು ಎಂದು ಆ ಇನ್ನೊಬ್ಬ ಡಾಕ್ಟರನ್ನು ಹುಡುಕಿಕೊಂಡು ಹೋದರು. 14 – 15 ಗಾಯಗಳಾಗಿವೆ ಎಂದು ವರದಿ ಬರೆದಿದ್ದಾರೆ ಎಂದು ಅವರಿಗೆ ತಿಳಿಸಿದೆವು. ಇನ್ನೊಬ್ಬ ಡಾಕ್ಟರ್ ನೋಡಿದ್ದಾರೆ ಎನ್ನುವುದು ಎರಡನೇ ಡಾಕ್ಟರಿಗೆ ಗೊತ್ತಿರಲಿಲ್ಲ. ಅವರಿಂದ ಈ ವಿಷಯ ಹೊರಬಿತ್ತು. 2 – 3 ಗಾಯಗಳಾಗಿದ್ದವು ಎಂದು ಅವರು ತಿಳಿಸಿದರು. ಇದು ಗೊತ್ತಾದಮೇಲೆ ಕೋರ್ಟ್‌ನ ಮುಂದೆ ಕೇಸು ಬಂದಾಗ ಅರಿಕೆ ಮಾಡಿಕೊಂಡು ಈ ಕೇಸಿನಲ್ಲಿ ವರದಿ ಮಾಡಿರುವುದು ಸುಳ್ಳು ಇದೆ ಎಂದು ತಿಳಿಸಿದೆವು. ಹೀಗಾದರೆ ಹೇಗೆ ಸ್ವಾಮಿ? ಈ ರೀತಿ ಮುಂದುವರೆದರೆ ಸಮಾಜದಲ್ಲಿ ನಿರಪರಾಧಿಯನ್ನು ಗಲ್ಲಿಗೆ ಏರಿಸಬಹುದು.

ನೂರುಜನ ತಪ್ಪಿಸಿಕೊಂಡರೂ ಚಿಂತೆ ಇಲ್ಲ, ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು ಎಂದು ತತ್ವ ಇದೆ – ಆ ರೀತಿ ಮಾಡಿದ್ದೀರಾ. ಕಣ್ಣಲ್ಲಿ ಕಣ್ಣು ಇಟ್ಟು ನೋಡಬೇಕು. ತನಿಖೆ ಮಾಡುವುದಕ್ಕೆ ಜಿಲ್ಲಾ ಎಸ್.ಪಿ. ಅವರನ್ನು ನೇಮಕ ಮಾಡಿ ಅವರನ್ನು ಜವಾಬ್ದಾರರನ್ನಾಗಿ ಮಾಡಬೇಕು. ಅಂದರೆ ಜನರಲ್ಲಿ ನಂಬಿಕೆ ಬರುತ್ತದೆ. ಇದರ ಬಗ್ಗೆ ಇನ್ನೂ ಹೆಚ್ಚಿಗೆ ಹೇಳಲು ಹೋಗುವುದಿಲ್ಲ. ಪೊಲೀಸ್ ಇಲಾಖೆ ಸುಧಾರಿಸಲಿಕ್ಕೆ ಸಾಧ್ಯವಿದೆ. ಅದು ಎಲ್ಲಿಯವರೆಗೆ ನೀವು ಮನಸ್ಸು ಮಾಡಿ ಹಸ್ತಕ್ಷೇಪ ಮಾಡುವುದಿಲ್ಲ ಅಲ್ಲಿಯವರೆಗೆ ಅಧಿಕಾರಿಗಳು ತಪ್ಪು ಮಾಡಿದರೆ ಬೇಕಾದ ಶಿಕ್ಷೆ ಮಾಡಿ, ಅದಕ್ಕೆ ನಾವು ಸಪೋರ್ಟ್ ಮಾಡುತ್ತೇವೆ. ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಬೇಕು. ಒಳ್ಳೆ ಅಧಿಕಾರಿಗಳಿಗೆ ಶಹಬ್ಬಾಶ್‌ಗಿರಿ ಕೊಡಬೇಕು. ಈ ವಿಷಯವನ್ನು ನಡೆಸಿಕೊಂಡು ಬರುವುದು ಬಹಳ ಕಷ್ಟದ ಕೆಲಸ. ಕಟ್ಟಕಡೆಯದಾಗಿ ಒಂದು ಮಾತು ಹೇಳುತ್ತೇನೆ. ಯಮಧರ್ಮರಾಯನಂತೆ ಸತ್ಯ ಧರ್ಮದಿಂದ ನಡೆದರೆ ಪೊಲೀಸ್ ಇಲಾಖೆ ಸುಧಾರಿಸೀತು. ಯಮಧರ್ಮರಾಯನಂತೆ ದಂಡ ಇಟ್ಟುಕೊಂಡು ಶಿಕ್ಷೆ ಮಾಡುವುದಕ್ಕೆ ತಯಾರಾಗಬೇಕು ಎಂದು ಹೇಳಿ ಈ ಬೇಡಿಕೆಗಳನ್ನು ವಿರೋಧಿಸಿ ನನ್ನ ಮಾತು ಮುಗಿಸುತ್ತೇನೆ.

* * *

# ಬಸವೇಶ್ವರ ಜಯಂತಿ ಆಚರಣೆ ಕುರಿತ ಚರ್ಚೆ

15, ಏಪ್ರಿಲ್ 1968

(ಹನ್ನೆರಡನೇ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರ ಶ್ರೀ ಬಸವೇಶ್ವರ ಅವರ ಜಯಂತಿಯನ್ನು ಸರ್ಕಾರವೇ ಮುಂದೆ ನಿಂತು ಆಚರಿಸಬಾರದು, ಅದನ್ನು ಸಂಘ, ಸಂಸ್ಥೆಗಳು ಆಚರಿಸಿದರೆ ಹೆಚ್ಚು ಅರ್ಥಪೂರ್ಣ. ದೇಶದಲ್ಲಿ ನೂರಾರು ಜಾತಿ, ಪಂಗಡ, ಹಲವು ಧರ್ಮಗಳಿವೆ – ಎಂದು ವಿರೋಧ ಪಕ್ಷದ ನಾಯಕ ಎಚ್. ಸಿದ್ದವೀರಪ್ಪನವರು ಹೇಳಿದ್ದಕ್ಕೆ ಗದಗದ ತರುಣ ಸಂಘದವರು ಕರಪತ್ರ ಹೊರಡಿಸಿ ಪ್ರತಿಭಟನೆ ಮಾಡಿದ್ದರು. ಜತೆಗೆ ಎಲ್ಲಾ ಸದಸ್ಯರಿಗೂ ಆ ಪ್ರತಿ ಕಳುಹಿಸಿದ್ದರು. ಈ ಬಗ್ಗೆ ಶಾಸಕ ಎಸ್.ಎಸ್. ಶೆಟ್ಟರ್ ಅವರು ನಿಲುವಳಿ ಸೂಚನೆ ಕಳುಹಿಸಿ, ಸಿದ್ದವೀರಪ್ಪನವರು ಹೇಳಿಕೆ ಕೊಡಬೇಕು ಎಂದು ಪಟ್ಟು ಹಿಡಿದರು. ಆದರೆ ಅಂದು ಸದನದ ಕಾರ್ಯಕಲಾಪ ನಡೆಸಿದ ಉಪಾಧ್ಯಕ್ಷರು 'ಹೇಳಿಕೆ ಕೊಡುವುದು ಬೇಕಾಗಿಲ್ಲ' ಎಂದರು. ಹಾಗೂ ಪಟ್ಟು ಬಿಡದ ಶೆಟ್ಟರ್ ಉತ್ತರಕ್ಕೆ ಒತ್ತಾಯಿಸಿದರು.)

ಶ್ರೀ **ಎಚ್. ಸಿದ್ದವೀರಪ್ಪ:** ನನ್ನ ಹೆಸರನ್ನು ಈಗ ಮಾನ್ಯ ಸ್ನೇಹಿತರಾದ ಶ್ರೀಮಾನ್ ಎಸ್. ಎಸ್. ಶೆಟ್ಟರ್ ಅವರು ಎತ್ತಿರುವುದರಿಂದ ಈ ವಿಷಯದಲ್ಲಿ ಒಂದೆರಡು ಮಾತುಗಳನ್ನು ಆಡಬೇಕಾಗಿದೆ. ದೇಶದಲ್ಲಿ ಇದರ ವಿಚಾರದಲ್ಲಿ ಏನಾದರೂ ಬೇರೆ ಭಾವನೆ ಬರಬಹುದು ಎಂಬ ಒಂದು ಉದ್ದೇಶದಿಂದ ಮಾನ್ಯ ಸ್ನೇಹಿತರು ಈ ಪ್ರಶ್ನೆಯನ್ನು ಎತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ. ಈ ವಿಷಯ ಇಷ್ಟೆ. ನಾನು ಒಂದು ಡಿಮ್ಯಾಂಡ್ ಮೇಲೆ ಮಾತನಾಡುತ್ತಾ ಇರಬೇಕಾದರೆ ಶ್ರೀ ಬಸವೇಶ್ವರರ ಜಯಂತಿ ಉತ್ಸವದಲ್ಲಿ ಘನ ಸರ್ಕಾರದವರು ತೆಗೆದುಕೊಂಡಿರತಕ್ಕ ಕಾರ್ಯಕ್ರಮದ ವಿಚಾರದಲ್ಲಿ ಒಂದು ಟೀಕೆಯನ್ನು ಮಾಡಿದ್ದೇನೆ. ಆ ಟೀಕೆ ಮಾಡಿರುವುದನ್ನು ಕೆಲವು ಸ್ನೇಹಿತರು ಈ ಸಭೆಯ ಹೊರಗಡೆಗೆ ಸರಿಯಾದ ಅರ್ಥವನ್ನು ಮಾಡಿಕೊಳ್ಳದೆ, ಯಾವ ಉದ್ದೇಶದಿಂದ ನಾನು ಟೀಕೆಯನ್ನು ಮಾಡಿದೆನೋ ಅದರ ಅರ್ಥವನ್ನು ಮಾಡಿಕೊಳ್ಳದೆ ತಪ್ಪು ಕಲ್ಪನೆ, ತಪ್ಪು ಭಾವನೆಯನ್ನು ಮಾಡಿಕೊಂಡು ಜನರಲ್ಲಿ ಬೇರೆ ಅಭಿಪ್ರಾಯ ಬರುವ ರೀತಿಯಲ್ಲಿ ಒಂದು ಪತ್ರವನ್ನು ಬರೆದಿದ್ದಾರೆ. ಅದನ್ನು ಎಲ್ಲಾ ಸದಸ್ಯರಿಗೂ ಕಳುಹಿಸಿದ್ದಾರೆ ಎಂದು ನಮ್ಮ ಸ್ನೇಹಿತರು ಹೇಳಿದರು. ನನಗೂಕೂಡ ಒಂದು ಪ್ರತಿಯನ್ನು ಕಳುಹಿಸಿದ್ದಾರೆ. ಅದಕ್ಕೆ ನಾನು ಹೆಚ್ಚಿನ ಮಹತ್ವ ಕೊಡಲಿಲ್ಲ. ಬಹುಶ: ಈ ಪ್ರಜಾಪ್ರಭುತ್ವದಲ್ಲಿ ಅವರವರ ಅಭಿಪ್ರಾಯಗಳನ್ನು ಅವರವರು ಹೇಳಲಿಕ್ಕೆ ಎಲ್ಲರಿಗೂ ಹಕ್ಕು ಇದೆ. ಈ ಸಭೆಯಲ್ಲಿರುವರೆಲ್ಲರಿಗೂ ಹಕ್ಕು ಇದೆ. ಹೊರಗಡೆ

ಇರತಕ್ಕವರಿಗೂ ಈ ಹಕ್ಕು ಇದೆ. **ನಾನು ಮಾಡಿದಂತಹ ಟೀಕೆ, ಬಸವೇಶ್ವರರ ವಿಚಾರದಲ್ಲಿ ಮಾಡಿದಂತಹ ಟೀಕೆ ಎಂದು ಅವರು ತಿಳಿದಿದ್ದರೆ ಅದು ಶುದ್ಧ ತಪ್ಪು.**

ನಾನು ಮಾಡಿದ ಟೀಕೆ ಬಸವೇಶ್ವರರ ವಿಚಾರದಲ್ಲಿ ಆಗಲಿ, ಅವರ ತತ್ವದ ವಿಚಾರದಲ್ಲಿಯಾಗಲಿ ಅಲ್ಲ. ಅವರು ಘನವಾದ ವ್ಯಕ್ತಿ ಎಂಬ ವಿಚಾರದಲ್ಲೂ ಕೂಡ. ನಾನು ಅವರನ್ನು ಅಲ್ಲಗಳೆಯಲಿಲ್ಲ. ನಾನು ಮಾಡಿದ್ದು ಇಷ್ಟೆ: ಜಾತ್ಯಾತೀತರಾಷ್ಟ್ರ ಇರಬೇಕಾದರೆ ಇಂತಹ ದೊಡ್ಡವರ ಜಯಂತಿ ಉತ್ಸವವನ್ನು ಘನ ಸರ್ಕಾರದವರು ಸರ್ಕಾರದ ಪರವಾಗಿ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಅದನ್ನು ಮಾಡಬೇಕಾಗಿರುವವರು, ಮಾಡತಕ್ಕವರು ಸಾರ್ವಜನಿಕರು.

ಈ ರೀತಿ ಪ್ರತಿಯೊಬ್ಬ ವ್ಯಕ್ತಿಗಳ ವಿಚಾರದಲ್ಲಿ ಮಾಡುವುದಾದರೆ ನಮ್ಮ ದೇಶದಲ್ಲಿ ಮೂರು ಸಾವಿರ ಜಾತಿಗಳಿವೆ. ಅಷ್ಟೇ ಧರ್ಮಗಳೂ ಇವೆ. ಅಷ್ಟೇ ಒಳಜಾತಿಗಳೂ ಇವೆ. ಅವರವರಿಗೆ ಅವರವರ ಧರ್ಮ ದೊಡ್ಡದು. ಅವರವರ ಘನತೆ ಅವರವರಿಗೆ ದೊಡ್ಡದು, ಆದ್ದರಿಂದ ಇದನ್ನೆಲ್ಲಾ ಸರ್ಕಾರದ ಮೂಲಕ ಮಾಡಬೇಕಾದರೆ ಅದಕ್ಕೆ ಒಂದು ಇಲಾಖೆಯನ್ನೇ ಮಾಡಬೇಕಾಗುತ್ತದೆ ಮತ್ತು ವರ್ಷದಲ್ಲಿ 365 ದಿನವೂ ಆ ಜಯಂತಿ, ಈ ಉತ್ಸವ ಮಾಡಬೇಕಾದರೆ ಸಾಲದು. ಅದನ್ನು ಮಾಡಿ ನನಗೂ ಅನುಭವ ಇದೆ. ಇವತ್ತು ಯಾವ ಒಂದು ಘನ ಉದ್ದೇಶವನ್ನು ಇಟ್ಟುಕೊಂಡು ಮಾಡಿದ್ದೀರಿ ಅದು ಕಾರ್ಯರೂಪಕ್ಕೆ ಬರುವಾಗ ಅನೇಕ ಸಂದರ್ಭಗಳಲ್ಲಿ ವಿರುದ್ಧವಾಗಿ ಪರಿಣಮಿಸಿದೆ ಎಂಬುದನ್ನೂ ಮನಗಂಡಿದ್ದೇನೆ. ಇದರ ವಿಚಾರದಲ್ಲಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ನಾನು ಯಾರ ಮೇಲೂ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಬಸವೇಶ್ವರರ ವಿಚಾರದಲ್ಲಿ ಯಾವ ಭಕ್ತಿ, ಪ್ರೇಮ, ವಿಶ್ವಾಸ ಅವರಿಗೆ ಇದೆಯೋ ಅದಕ್ಕೆ ಇಮ್ಮಡಿಯಾದ ಭಕ್ತಿ, ಪ್ರೇಮ, ವಿಶ್ವಾಸ ನನಗೂ ಇದೆ. ಅವರಿಗಿಂತ ಹೆಚ್ಚಿನ ನಂಬಿಕೆ ನನ್ನಲ್ಲಿ ಇದೆ. ನನಗೂ ಅವರಿಗೂ ಇರತಕ್ಕ ಭಿನ್ನಾಭಿಪ್ರಾಯ ಇಷ್ಟೆ, ಇದನ್ನು ಸರ್ಕಾರದವರು ಮಾಡಬಾರದಿತ್ತು ಎಂದು ಹೇಳಿದ್ದು ಕೆರಳಿಸಿದೆ. ಇದನ್ನು ಸಾರ್ವಜನಿಕ ಸಂಸ್ಥೆಗಳು ಮಾಡಬೇಕಿತ್ತು ಎಂಬುದು ಎಷ್ಟೋ ಅಷ್ಟೆ. ಬಸವೇಶ್ವರರ ವಿಚಾರ, ತತ್ವಗಳನ್ನು ಅರಿತು ನುರಿತವರು ಮತ್ತು ಕರಗತ ಮಾಡಿಕೊಂಡಿರುವ ಶ್ರೀ ಬಿ.ಡಿ. ಜತ್ತಿಯವರ ನೇತೃತ್ವದಲ್ಲಿ ಏರ್ಪಾಟು ಸಮಿತಿಯವರು ಇದನ್ನು ಮಾಡಬೇಕಾಗಿತ್ತು ಎಂಬುದು ನನ್ನ ಸ್ಪಷ್ಟ ಅಭಿಪ್ರಾಯವೇ ಹೊರತು ಶ್ರೀಮಾನ್ ಎಸ್.ಆರ್. ಕಂಠಿಯವರು ಮಾಡಿದ್ದು ಸರಿಬರಲಿಲ್ಲ. ಕಂಠಿಯವರು ಮಾಡಿದ್ದು ಏನಿದೆ ಅದು ದುಡ್ಡುಕೊಟ್ಟು ಪ್ರಚಾರ ಮಾಡುವುದಕ್ಕೆ ಏರ್ಪಾಟಾದ ವ್ಯವಸ್ಥೆಯಾಗಿದೆ.

ನಾನು ಮಂತ್ರಿಯಾಗಿದ್ದಾಗ ಇಂತಹ ಒಂದು ಪ್ರಸಂಗ ನಡೆಯಿತು. ಸಂಸ್ಕೃತಿ ಪ್ರಚಾರ ಕಾರ್ಯ ಅಂತ ನಾವು ಕಾರ್ಯಕ್ರಮ ಹಮ್ಮಿಕೊಂಡಿದ್ದೆವು. ಸಂಸ್ಕೃತಿ ಪ್ರಚಾರ

ಕಾರ್ಯದಲ್ಲಿ ಕೆಲವರಿಗೆ ಟಿ.ಎ. ಡಿ.ಎ. ಕೊಟ್ಟು ಹೊಗಳಿಸಿಕೊಳ್ಳಲಿಕ್ಕೆ ಸರ್ಕಾರದವರು ಕಳುಹಿಸಿದ್ದಾರೆ ಎಂಬ ಟೀಕೆ ನಮ್ಮ ಮೇಲೆ ಬಂತು. ಕೆಲವು ಮಾನ್ಯ ಸದಸ್ಯರು ಈ ದಿವಸ ಸರ್ಕಾರದಲ್ಲಿ ಆ ಕಡೆಯೂ ಇದ್ದಾರೆ. ಇದನ್ನು ನಾನು ಏಕೆ ಹೇಳುತ್ತೇನೆ ಎಂದರೆ ಅನಾವಶ್ಯಕವಾಗಿ ನಾವು ಟೀಕೆಗೆ ಗುರಿಯಾಗಬಾರದು. ಅನೇಕರು ಅನೇಕ ಪಂಥ, ಅನೇಕ ಮತಗಳನ್ನು ಅನುಸರಿಸುತ್ತಾ ಇರುವ ಕಾಲದಲ್ಲಿ ಯಾರೋ ಒಬ್ಬರ ಹೊಗಳಿಕೆಗಾಗಿ ಇದನ್ನು ಮಾಡಿದ್ದಾರೆ ಎಂಬ ಭಾವನೆ ಬರಬಾರದು. ಇವರಿಗಿಂತಲೂ ಹೆಚ್ಚು ವಿಶ್ವಾಸ ಇರತಕ್ಕ ಜನ ಹೊರಗಡೆ ಇರುವಾಗ ಸರ್ಕಾರದವರು ಕೈ ಹಾಕಬಾರದು ಎಂಬ ಉದ್ದೇಶದಿಂದ ಟೀಕೆ ಮಾಡಿದೆನೇ ಹೊರತು ಮತ್ತೆ ಬೇರೆ ಉದ್ದೇಶ ಇಲ್ಲ. ಸುಪ್ರಭಾತದ ವಿಚಾರದಲ್ಲಿ ನಾನು ಹೇಳಿದ್ದು ನಿಜ. ಸುಪ್ರಭಾತ ಹೇಳಬೇಕಾದರೆ.....

**ಶ್ರೀ ಬಿ.ಡಿ ಜತ್ತಿ** (ಆಹಾರ ಮತ್ತು ನಿತ್ಯೋಪಯೋಗಿ ಸರಬರಾಜು ಶಾಖೆಗಳ ಮಂತ್ರಿಗಳು): ಬಸವೇಶ್ವರರ ಸುಪ್ರಭಾತ ಇದುವರೆವಿಗೂ ಯಾರು ಹೇಳಿಲ್ಲ. ತಾವು ಹೇಳಿದ್ದು ಶರಣ ಬಸವೇಶ್ವರರದ್ದು ಇರಬೇಕು. ಬಸವೇಶ್ವರರ ವಿಷಯದಲ್ಲಿ ಬರೆದದ್ದು ಇದುವರೆಗೂ ಯಾರು ಹಾಡಿಲ್ಲ. ನೀವು ಹೇಳಿದ್ದು ತಪ್ಪು. ಬಸವೇಶ್ವರರದು ಅಲ್ಲ, ಅದು ಶರಣ ಬಸವೇಶ್ವರರಿಗ ಸಂಬಂಧ ಇದೆ.

**ಶ್ರೀ ಎಚ್. ಸಿದ್ದವೀರಪ್ಪ:** ತಪ್ಪು ಕಲ್ಪನೆ ಆಗಿರಬಹುದು. ರೇಡಿಯೋದಲ್ಲಿ ಕೇಳಬೇಕಾದರೆ ಅರ್ದಬಂರ್ಧ ಕೇಳಿದೆ. ಅದು ಇನ್ಯಾವುದೊ ಇದ್ದಿರಬೇಕು. ವೆಂಕಟೇಶ ಸುಪ್ರಭಾತ ಬರುತ್ತದೆ, ಅದೇ ರೀತಿ ಬಸವೇಶ್ವರರ ಸುಪ್ರಭಾತ ಮಾಡಿಸಿದ್ದಾರೋ ಏನೋ ಎಂಬ ಭಾವನೆ ಬಂತು. ಅದು ತಪ್ಪು ಅಂತ ಹೇಳಿದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಬಸವೇಶ್ವರರು ತಮ್ಮ ತತ್ವದಲ್ಲಿ ಏನು ಹೇಳಿದರು; ನಮ್ಮ ಮನಸ್ಸಿಗೆ ಏನು ಸತ್ಯವಾಗಿ ಕಾಣುತ್ತದೆ ಅದರಂತೆ ನಡೆಯಬೇಕು ಎಂದು ಹೇಳಿದರು. ಅವರು ಹೇಳಿದ್ದಕ್ಕೆ ಅಪ್ರಿಯವಾಗಿ ಅಥವಾ ವಿರುದ್ಧವಾಗಿ ಬೇರೆಯವರು ಏನಾದರೂ ಹೇಳಿದ್ದರೆ ಕಷ್ಟವಾಗುತ್ತಿತ್ತೇನೊ...

ಬಹುಶ: ನಾನು ಹೇಳಿದ ಮಾತನ್ನು ಬೇರೆ ಅನ್ಯಮತೀಯರು ಹೇಳಿದರೆ ಜಾತಿವಾದವನ್ನು ತರುತ್ತಾರೆ ಎಂಬ ಆಪಾದನೆಗೂ ಗುರಿಯಾಗುತ್ತಿದ್ದರು. ಬಸವೇಶ್ವರರ ಅನುಯಾಯಿಯಾಗಿ ಹೇಳುತ್ತೇನೆ: ಬಸವೇಶ್ವರ ಜಯಂತಿ ವಿಷಯದಲ್ಲಿ ಸರ್ಕಾರ ಮಾಡಿರುವುದು ತಪ್ಪು. ಈ ರೀತಿ ಮಾಡಬಾರದಿತ್ತು ಎಂದು ಏನು ಹೇಳಿದ್ದೆನೋ ಈಗಲೂ ಅದೇ ನನ್ನ ಖಚಿತವಾದ ಅಭಿಪ್ರಾಯ. ಈ ಅಭಿಪ್ರಾಯವನ್ನು ಬದಲಾವಣೆ ಮಾಡಲಿಕ್ಕೆ ಯಾವಬೇರೆ ಸನ್ನಿವೇಶವೂ ಕೂಡಿ ಬಂದಿಲ್ಲ ಎಂದು ಹೇಳುತ್ತೇನೆ.

* * *

# ಮಹಾಜನ ವರದಿ ಮೇಲಿನ ನಿರ್ಣಯದ ಚರ್ಚೆ

25, ಫೆಬ್ರವರಿ 1970

**Sri H. SIDDAVEERAPPA**: Sir, this is an impartant matter which is now before this House in the form of several motions that we are now considering . Hon.Members who have given notice of this - motion have stated the subtance of their respective motions. If we see the happenings in this state from the time of the report , States Reorganisation Commission and from the time this new state came into being, i.e., from first november 1956.

**ಶ್ರೀಮತಿ ಚಂಪಾಬಾಯಿ ಭೋಗಲೆ:** ಇದು ಮಹಾಜನ್ ಕಮೀಷನ್ ರಿಪೋರ್ಟಿಗೆ ಸಂಬಂಧಪಟ್ಟ ಚರ್ಚೆಯಾಗಿರುವುದರಿಂದ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ದಯವಿಟ್ಟು ಕನ್ನಡದಲ್ಲಿ ಮಾತನಾಡಬೇಕು ಎಂದು ನಾನು ಅವರನ್ನು ಕೇಳಿ ಕೊಳ್ಳುತ್ತೇನೆ.

**ಶ್ರೀ ಎಚ್. ಸಿದ್ದವೀರಪ್ಪ:** ಇದು ಬಹು ಮಹತ್ತರವಾದ ವಿಷಯ. ದಿನಾಂಕ 1.11.1956ನೇ ಇಸವಿಯಿಂದ ನಮ್ಮ ರಾಜ್ಯ ವಿಸ್ತರಣೆಯಾದ ಮೇಲೆ, ಎರಡರಷ್ಟು ಹೆಚ್ಚಾಗಿದೆ. ಹೀಗಾಗಿ ಒಂದಲ್ಲಾ ಒಂದು ರೀತಿಯಲ್ಲಿ ವೆಡಂಭೂತವಾಗಿ ನಮ್ಮನ್ನು ಕಾಡುತ್ತಿದೆ. ದಿನಾಂಕ 16.11.1955ರಲ್ಲಿ ಈ ಸಭೆಯ ಮುಂದೆ 'ರಾಜ್ಯ ಪುನರ್‌ರಚನಾ ಆಯೋಗದ ವರದಿ' ಚರ್ಚೆಗೆ ಬಂದಾಗ್ಗ ನಾನು ಒಂದು ವಿಷಯ ಹೇಳಿದ್ದೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ:

I feel, Sir, today we are living in a disturbed atmosphers. I think, it will be temporary and a passing phase.

ರಾಜ್ಯ ಪುನರ್ವಿಂಗಡನೆ ಆಗಿ ಈಗ್ಗೆ ಸುಮಾರು ಹದಿನಾಲ್ಕು ವರ್ಷಗಳು ಆಗಿದ್ದರೂ ಕೂಡ ಈ ಘೂಣಣಾಡಿಭಜಾಜ ಚೀಟಫಥಿಝಜಡಿ ಅಂದರೆ ಅಶಾಂತ ವಾತಾವರಣ ಯಾವ ರೀತಿಯಿಂದಲೂ ಕಡಿಮೆಯಾಗಿಲ್ಲ. ಈ ಅಶಾಂತ ವಾತಾವರಣ ಇಮ್ಮಡಿ, ಮುಮ್ಮಡಿಯಾಗಿದೆ. ಈ ರಾಜ್ಯದಲ್ಲಿ ಸೇರಿರತಕ್ಕಂಥ ಭಾಗಗಳು ಸೇರಿದ ಮೇಲೆ ಶಾಂತಿಯಿಂದ ಸುಖವಾಗಿ ಇರತಕ್ಕಂಥ ಸನ್ನಿವೇಶಕೂಡ ಬಂದಿಲ್ಲ.

This ! am, prompted to say for various reasons. After all, we have to realise that the formation of a new state in the Sovereign right of the parliament. We have right to express our opinion; there is no doubt about it. Under article 3 of the Constitution . when the question came before the Constituicnt assembly it was suggested that for the word ' constitution' the word 'consent ' may be introduced . I have the proceedings of the Constituient assembly. I had the privilege to be present when Article 3 was discussed. After careful examination , the elders who framed the constitution came to the conclution that in the larger interest of this country that it would be better that Parliament which is a sovereign authority representing all parts of india from the Cape Comoria to Himalayas should have the sovereign right. I would like say that there should be no room to suspicion that only to major communities are vitally interested in this problem .

ಈ ವಿಷಯವನ್ನು ಏತಕ್ಕೋಸ್ಕರ ಹೇಳಿದೆ ಅಂದರೆ ಇದರಲ್ಲಿ ಇರುವಂಥ ವಿಷಯವನ್ನು ಆವೇಶಪೂರಿತವಾಗಿ ಯೋಚನೆ ಮಾಡದೆ ಯಾವುದಾದರೂ ಒಂದು ಸಮಗ್ರ ದೃಷ್ಟಿ ಇಟ್ಟುಕೊಂಡು ನಾವು ಈ ವಿಷಯವನ್ನು ಯೋಚನೆ ಮಾಡಬೇಕು. ರಾಜ್ಯ ಪುನರ್ವಿಂಗಡನಾ ಕಾಯ್ದೆ ಬಂದಾಗ್ಗೆ ಆವಾಗ ಏನು ಪರಿಸ್ಥಿತಿ ಇತ್ತು. ಆಗಿನ ಪರಿಸ್ಥಿತಿಗೆ ಅನುಸರಿಸಿ ಫಜಲ್ ರಿಪೋರ್ಟಿನಲ್ಲಿ ಬದಲಾವಣೆ ಮಾಡಿ, ಐದು ರಾಜ್ಯಗಳ ಐದು ಭಾಗಗಳಿಂದ ಸೇರಿದ ಈ ನಮ್ಮ ರಾಜ್ಯ ನಿರ್ಮಾಣ ಮಾಡಿದರು.

ಹಾಗೆ ರಾಜ್ಯಗಳ ನಿರ್ಮಾಣವಾದ ಮೇಲೆ ಅಂದಿನಿಂದ ಇಂದಿನವರೆಗೂ ಕೆಲವು ಭಾಗಗಳಲ್ಲಿ ಈ ಗಡೀ ಸಮಸ್ಯೆಯನ್ನುವುದು ಇನ್ನೂ ಹಾಗೇ ನಡೆದುಕೊಂಡು ಬರುತ್ತಿದೆ ಎಂಬುದನ್ನು ನಾವು ನೋಡುತ್ತಲೇ ಬಂದಿದ್ದೇವೆ. ಆದರೆ ಈ ಗಡೀ ವ್ಯವಹಾರದಲ್ಲಿ ನಮಗೆ ಹೆಚ್ಚಿಗೆ ಕಾಣಿಸುತ್ತಿರುವುದು ಮೈಸೂರು – ಮಹಾರಾಷ್ಟ್ರ ಗಡಿ ವಿಚಾರ ಒಂದೇ. ಹೀಗೇ ಇನ್ನೂ ಅನೇಕ ಭಾಗಗಳಲ್ಲಿ ನಮಗೆ ಗಡಿ ಸಮಸ್ಯೆ

ಇದ್ದೇ ಇದೆ. ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದ್ದರೆ ನಾವೊಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಇಲ್ಲಿಗೆ 3 – 4 ವರ್ಷಗಳ ಹಿಂದೆ ಕೇಂದ್ರದಲ್ಲಿಯೂ ಮತ್ತು ಮಹಾರಾಷ್ಟ್ರದಲ್ಲಿಯೂ ಹಾಗೂ ಮೈಸೂರು ರಾಜ್ಯದಲ್ಲೂ ಈ ಮೂರು ಕಡೆಗಳಲ್ಲೂ ಒಂದೇ ಪಕ್ಷಕ್ಕೆ ಸೇರಿದ ಸರ್ಕಾರ ಆಡಳಿತದಲ್ಲಿತ್ತು. ಆದರೆ ಇಲ್ಲಿಯವರೆಗೂ ಯಾರನ್ನು ಈ ಕನ್ನಡನಾಡಿನ ಆರ್ಕಿಟೆಕ್ಟ್ ಅಥವಾ ನಿರ್ಮಾಪಕರೆಂದು ಕರೆಯಲಾಗುತ್ತಿತ್ತೋ ಅವರೇ ಇಲ್ಲಿಯವರೆಗೂ ನಮ್ಮ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಅವರು ಶ್ರೀಯುತ ನಿಜಲಿಂಗಪ್ಪನವರು. ಇದಾದನಂತರ ಅವರು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರೂ ಆದರು. ಹಾಗೆ ಅವರು ಅಧಿಕಾರದಲ್ಲಿದ್ದ ಅವಧಿಯಲ್ಲೇ ಈ ಗಡಿ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತವೆ ಎಂದುಕೊಂಡಿದ್ದೆವು. ಅಂದರೆ ಆ ರಾಜ್ಯಗಳ ಪುನರ್ವಿಂಗಡಣೆಯ ಆಯೋಗದವರು ತಮ್ಮ ವರದಿಯಲ್ಲಿ ಸೂಚಿಸಿದ್ದ ಪ್ರಕಾರ ಸಣ್ಣಪುಟ್ಟ ಗಡೀ ಹೊಂದಾಣಿಕೆಗಳನ್ನು ಸುಲಭವಾಗಿ ತೀರ್ಮಾನ ಮಾಡಿಬಿಡುತ್ತಾರೆಂದು ನಾವು ತಿಳಿದಿದ್ದೆವು. ನನಗೆ ಜ್ಞಾಪಕವಿದ್ದ ಹಾಗೆ ಜೋನಲ್ ಕೌನ್ಸಿಲ್ ಗಡೀ ವಿವಾದಗಳನ್ನು ತೀರ್ಮಾನಮಾಡಲು ರಾಜ್ಯಗಳ ಪುನರ್ವಿಂಗಡಣೆಯ ಆಕ್ಟಿನ 21ನೇ ಸೆಕ್ಷನ್ನಿನಲ್ಲಿ (ಕಾಲಂನಲ್ಲಿ) ಅದನ್ನು ಹೇಳಿದ್ದಾರೆ. ಆ ಸೆಕ್ಷನ್ನಿನಲ್ಲಿ ಈ ಗಡಿ ವಿವಾದಗಳನ್ನು ಯಾವ ರೀತಿ ತೀರ್ಮಾನ ಮಾಡಬೇಕೆಂಬುದನ್ನು ತಿಳಿಸಲಾಗಿದೆ. ಅದರಲ್ಲಿ ಯಾವ ಒಂದು ಸಂಶಯಕ್ಕೂ ಆಸ್ಪದವಿಲ್ಲ. ಆ ಜೋನಲ್ ಕೌನ್ಸಿಲ್‌ನ ಧ್ಯೇಯಧೋರಣೆಗಳೇನು ಎಂದರೆ –

``In particular, without prejudice to the generality of the provisions of sub-section (1) the Zonal Council may discuss and make recommendations with regards to any matter of common interest in the field of economic and social planning and in matters concerning border disputes, linguistic minorities and inter-state transport; and (c) and any matter arising out of this Act."

ಎಂದರೆ ಎಸ್.ಆರ್.ಸಿ ಆಕ್ಟ್ ಪಾರ್ಲಿಮೆಂಟರಿಯಲ್ಲಿ ಪಾಸಾದಾಗ ಅಲ್ಲಿ ಏನೇನು ಚರ್ಚೆಗಳು ನಡೆದಿವೆ, ಎನ್ನತಕ್ಕ ವರದಿಗಳೆಲ್ಲಾ ನನ್ನ ಬಳಿ ಇವೆ. ಆದರೆ ನನಗೆ ಸಾಕಷ್ಟು ಕಾಲಾವಕಾಶ ಇಲ್ಲದಿರುವ ಕಾರಣ ಅವುಗಳನ್ನೆಲ್ಲಾ ಈಗ ಓದುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಅಲ್ಲಿ ಚರ್ಚೆಯಾದ ಕಾಲದಲ್ಲಿ ಈ ಗಡೀ ಸಮಸ್ಯೆಗಳು ಪುನಃ ಪುನಃ ತಲೆ ಎತ್ತದಂತೆ ಈ ಜೋನಲ್ ಕೌನ್ಸಿಲ್‌ಗಳು ಕೆಲಸ ನಡೆಸಬೇಕೆಂದು ತಿಳಿಸಿರುತ್ತದೆ. ಮತ್ತು ಈ ನಮ್ಮ ಮೈಸೂರು ಮತ್ತು ಮಹಾರಾಷ್ಟ್ರ ಗಡೀ ಸಮಸ್ಯೆ ವೆಸ್ಟರ್ನ್ ಜೋನಲ್ ಕೌನ್ಸಿಲ್ಲಿಗೆ ಸೇರಿದೆ. ಆ ಜೋನಲ್ ಕೌನ್ಸಿಲ್‌ನಲ್ಲಿರುವ ರಾಜ್ಯಗಳು ಎರಡೇ ಎರಡು. ಒಂದು ಮೈಸೂರು, ಇನ್ನೊಂದು ಮಹಾರಾಷ್ಟ್ರ. ಆ ಕಾಲದಲ್ಲಿ ಈ ಎರಡೂ ರಾಜ್ಯಗಳಲ್ಲೂ ಹಾಗೂ ಕೇಂದ್ರದಲ್ಲೂ ಒಂದೇ ಪಕ್ಷಕ್ಕೆ ಸೇರಿದ ಸರ್ಕಾರ

ಆಡಳಿತದಲ್ಲಿತ್ತು ಎಂಬುದನ್ನು ಈ ಮೊದಲೇ ಹೇಳಿದ್ದೇನೆ. ಹೊಸ ಮೈಸೂರು ರಾಜ್ಯ ನಿರ್ಮಾಣವಾದ ತಾರೀಖಿನಿಂದ ಹಿಡಿದು ಇಲ್ಲಿಯವರೆಗೂ ಅಂದರೆ ಹಾಲಿ ಮುಖ್ಯಮಂತ್ರಿಯಾಗಿರುವ ಶ್ರೀ ವೀರೇಂದ್ರ ಪಾಟೀಲರು ರಾಜ್ಯದ ಮುಖ್ಯಮಂತ್ರಿಗಳು ಆಗುವವರೆಗೂ ಹಿಂದೆ ಯಾರು ಮುಖ್ಯಮಂತ್ರಿ ಆಗಿದ್ದರು ಅವರು ಏತಕ್ಕೆ ಈ ಗಡಿ ಸಮಸ್ಯೆ ಬಗೆಹರಿಸಲಿಲ್ಲ? ರಾಜ್ಯದ ಸಾರ್ವಭೌಮತ್ವವನ್ನೇ ಅವರು ವಹಿಸಿಕೊಂಡಿದ್ದರೂ ಇದಕ್ಕೊಂದು ಸೂಕ್ತ ಪರಿಹಾರವನ್ನು ಏಕೆ ಕಂಡು ಹಿಡಿಯಲಿಲ್ಲ? ಹಾಗಾದರೆ ಅವರು ನಡೆಸಿದ ಆಡಳಿತವಾದರೂ ಏನು? ಎಂಬ ಪ್ರಶ್ನೆಯೂ ನಮ್ಮ ಎದುರು ಇದೆ.

**ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ):** ಸ್ವಾಮಿ ನನ್ನದೊಂದು ಕ್ರಿಯಾಲೋಪ ಇದೆ. ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರು ನುರಿತ ಪಾರ್ಲಿಮೆಂಟೇರಿಯನ್. ನಮಗೆ 1947ರಲ್ಲೇ ಸ್ವರಾಜ್ಯ ಬಂತು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಕಳೆದ 22 ವರ್ಷಗಳಿಂದಲೂ ಹಿಂದಿನ ಮುಖ್ಯಮಂತ್ರಿಗಳು ಇಲ್ಲಿ ಸಾರ್ವಭೌಮತ್ವ ವಹಿಸಿ ಆಡಳಿತ ನಡೆಸುವುದಕ್ಕೆ ಅವಕಾಶ ಇದೆಯೇ ಎಂಬುದನ್ನು ಅಧ್ಯಕ್ಷರು ವಿಷದೀಕರಿಸಬೇಕೆಂಬುದೇ ನನ್ನ ಕ್ರಿಯಾಲೋಪ.

**ಅಧ್ಯಕ್ಷರು:** ಇದರಲ್ಲೇನೂ ಕ್ರಿಯಾಲೋಪ ಇಲ್ಲ. ತಾವು ಭಾಷಣವನ್ನು ಮುಂದುವರೆಸಬಹುದು.

**ಶ್ರೀ ಎಚ್. ಸಿದ್ದವೀರಪ್ಪ:** ಅವರು ಈ ದೇಶದ ಸಾರ್ವಭೌಮತ್ವವನ್ನು ಇಟ್ಟುಕೊಂಡಿದ್ದಹಾಗೆ ವರ್ತಿಸಿ, ಈ ದೇಶದ ಆಗುಹೋಗುಗಳಿಗೆಲ್ಲಾ ಜವಾಬ್ದಾರರಾಗಿದ್ದಾರೆ ಎಂದು ಬೆಳಗಾಂ, ರಾಜ್ಯ ಪುನರ್ವಿಂಗಡಣ ಕಾಯ್ದೆ ಪ್ರಕಾರ ಕನ್ನಡ ರಾಜ್ಯದ ಒಂದು ಭಾಗವಾಯಿತೋ ಅಂದಿನಿಂದಲೂ ಒಂದಲ್ಲಾ ಒಂದು ರೀತಿಯಲ್ಲಿ ಮಹಾರಾಷ್ಟ್ರೀಯರು ಅದು ನಮಗೆ ಸೇರಬೇಕೆಂದು ವಾದಿಸುತ್ತಾ ಬಂದಿದ್ದಾರೆ. ಹಾಗೆ ಅವರು ವಾದ ಮಾಡುತ್ತಿದ್ದರೂ ಎಷ್ಟು ಸಾರಿ ಜೋನಲ್ ಮೀಟಿಂಗ್ ಕರೆದಿದ್ದರು, ಹಾಗೆ ಕರೆದಿದ್ದ ಮೀಟಿಂಗ್‌ಗಳಲ್ಲಿ ಎಷ್ಟು ಸಾರಿ ಬೆಳಗಾವಿ ಬಗ್ಗೆ ಚರ್ಚೆ ಮಾಡಲಾಯಿತು? ಇದನ್ನು ಇಲ್ಲಿಯವರೆಗೂ ತೀರ್ಮಾನ ಮಾಡದೆ ಹಾಗೇ ಏಕೆ ಬಿಟ್ಟುಕೊಂಡು ಬಂದರು? ಹಾಗೆ ಇವರು ಸಂಪೂರ್ಣವಾಗಿ ಈ ಪ್ರಶ್ನೆ ಬಗೆಹರಿಸದೆ ಇರುವುದರಿಂದ ರಾಜ್ಯದ ಯಾವ ಪ್ರಜೆಗೂ ಸುಖ ನೆಮ್ಮದಿ ಇಲ್ಲ. ಎಲ್ಲಿ ನೋಡಿದರೂ ಅಶಾಂತಿ ವಾತಾವರಣ ತುಂಬಿ ತುಳುಕುತ್ತಿದೆ. ಇದು ಆಗ ಅಧಿಕಾರದಲ್ಲಿದ್ದವರು ಕರ್ತವ್ಯನಿಷ್ಠೆಯನ್ನು ಸರಿಯಾಗಿ ಪರಿಪಾಲಿಸಲಿಲ್ಲ ಎಂಬುದನ್ನು ಎತ್ತಿತೋರಿಸುತ್ತಿದೆ; ಅವರು ತಮ್ಮ ಕರ್ತವ್ಯದಲ್ಲಿ ವಿಫಲರಾಗಿದ್ದಾರೆ.

**ಶ್ರೀ ಕೆ.ಎಚ್. ಶ್ರೀನಿವಾಸ್ (ಸಾಗರ):** ಈ ಜೋನಲ್ ಕೌನ್ಸಿಲ್‌ನಲ್ಲಿ ಇದನ್ನು ಎತ್ತ ತಕ್ಕ ಹೊಣೆ ನಮ್ಮದಾಗಿರಲಿಲ್ಲ. ಯಾರು ಬೆಳಗಾಂ ನಮಗೆ ಬರಬೇಕೆಂದು

ವಾದಿಸುತ್ತಿದ್ದಾರೋ ಅವರು ಆ ವಿಚಾರವನ್ನು ಜೋನಲ್ ಕೌನ್ಸಿಲ್‌ನಲ್ಲಿ ಎತ್ತಬೇಕಾಗಿತ್ತು ಅಲ್ಲವೇ?

**ಶ್ರೀ ಕೆ.ಎಚ್. ರಂಗನಾಥ್:** ಹಾಗಾದರೆ ನಮ್ಮ ಸರ್ಕಾರದವರು ಕಾಸರಗೋಡು, ಮಡಕಶಿರಾ ಇತ್ಯಾದಿ ಪ್ರಶ್ನೆಯನ್ನಾದರೂ ಎತ್ತಬಹುದಾಗಿತ್ತಲ್ಲವೇ? ಏಕೆ ಎತ್ತಲಿಲ್ಲ?

**ಶ್ರೀ ಎಚ್. ಸಿದ್ದವೀರಪ್ಪ:** ರಾಜ್ಯಾಧಿಕಾರವನ್ನು 12 ವರ್ಷಗಳ ಕಾಲ ಸದಾ ತಮ್ಮ ಕೈಲೇ ಇಟ್ಟುಕೊಂಡಿದ್ದರೂ ಇದನ್ನು ಅವರೇಕೆ ಪರಿಹರಿಸಲಿಲ್ಲ? ಇದನ್ನು ಹಾಗೇ ಏಕೆ ಉಳಿಸಿಕೊಂಡು ಬಂದರು? ಜನರು ಇದರ ಪರಿಹಾರಕ್ಕಾಗಿ ಅವರನ್ನೇ ಎದುರು ನೋಡುತ್ತಿರಲಿಲ್ಲವೇ? ಆದ್ದರಿಂದ ಅವರು ತಮ್ಮ ಕರ್ತವ್ಯದಲ್ಲಿ ಲೋಪ ಮಾಡಿದ್ದಾರೆ. ಅಂಥವರು ಇನ್ನೂ ಅಧಿಕಾರದಲ್ಲಿರುವುದಕ್ಕೆ ಸಂಖ್ಯಾ ಬಲ ಇದ್ದರೂ ನೈತಿಕ ಬಲ ಇದೆಯೇ ಎಂದು ಕೇಳುತ್ತೇನೆ.

ಇನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಮೊನ್ನೆತಾನೇ ಬೆಳಗಾಂನಲ್ಲಿ ಭಾಷಣ ಮಾಡುತ್ತ, "ನಾನು ಬೆಳಗಾಂ ಅನ್ನು ಬರ್ಲಿನ್ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ" ಎಂಬುದಾಗಿ ಒಂದು ವಿವರವಾದ ಘೋಷಣೆಯನ್ನು ಮಾಡಿದ್ದಾರೆ. ಆದರೆ ನಾನು ಅವರ ಬಗ್ಗೆ ಏನೋ ವಿಷಯವೊಂದನ್ನು ಹೇಳಬೇಕೆಂದಿದ್ದೇನೆ. ಅಂದರೆ ಅವರು ಈ ಭಾಷಣ ಮಾಡಿದ ಕಾಲದಲ್ಲಿ ಮುಖ್ಯಮಂತ್ರಿಗಳ ಸ್ಥಾನದಲ್ಲಿದ್ದರು. ಅಂದರೆ ಅವರು ಮುಖ್ಯಮಂತ್ರಿಗಳಾಗಿದ್ದುಕೊಂಡು ಹೀಗೊಂದು ಭಾಷಣ ಮಾಡುತ್ತಿದ್ದಾರೆಂಬುದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು. ಆದರೆ ನಾನು ಇಲ್ಲಿಯವರೆಗೂ ಇಂಥ ಜಟಿಲ ಸನ್ನಿವೇಶಗಳಲ್ಲಿ ಇವರು ಬಹಳ ಎಚ್ಚರಿಕೆಯಿಂದ ಮಾತನಾಡುವ ವ್ಯಕ್ತಿ, ಇವರು ಬಹಳ ಹುಷಾರಾಗಿ ಮಾತನಾಡಬಲ್ಲವರು, ಹೆಚ್ಚಿಗೆ ಮಾತನಾಡುವವರಲ್ಲ ಎಂಬುದಾಗಿ ಭಾವಿಸಿದ್ದೆ.

ಆದರೆ ಆ ದಿವಸ ಅದೇನು ಆ ನೆಲದ ಗುಣವೋ ಅಥವಾ ಅಲ್ಲಿ ಸೇರಿದ್ದ ಜನರ ಗುಣವೋ ಗೊತ್ತಿಲ್ಲ. ನಮ್ಮ ದೇಶದಲ್ಲಿ ಈವೊತ್ತು ಬೆಳಗಾಂ ಪ್ರಶ್ನೆ ಇಷ್ಟು ಉಲ್ಬಣವಾಗಿ ಬೆಳೆದಿದ್ದರೆ ಇದಕ್ಕೆ ಕಾರಣರು ಯಾರೇ ಆಗಿರಲಿ ಅದರ ಕಷ್ಟನಷ್ಟಗಳನ್ನು ಅನುಭವಿಸುವವರು, ಗುಂಡಿನ ಏಟಿಗೆ ಬಲಿಯಾದವರು, ಲಾಠಿ ಏಟು ತಿಂದವರು ಅಲ್ಲಿನ ಜನಗಳೇ. ಈ ಜನ ಅಲ್ಲಿಗೆ ಹೋಗಿ ಒಂದು ಸಭೆಯನ್ನು ಕರೆದು ಅದರಲ್ಲಿ ಪ್ರಸ್ತಾಪಮಾಡಿದ್ದಾರೆ. ಅದಕ್ಕೆ ನಾನಾದರೂ, ಇದು ರಾಜಕೀಯ ಭಾಷಣ ಎಂದು ಹೇಳಬೇಕಾಗುತ್ತದೆ, ಬೇರೆ ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈ ದೇಶಕ್ಕೆ ಮಾಡಬಾರದ ಅನ್ಯಾಯವನ್ನು ಮಾಡುತ್ತಾ ಇದ್ದಾರೆ. ಇದಕ್ಕೆಲ್ಲಾ ಕಾರಣ ಹೇಳಿದ್ದಕ್ಕೆಲ್ಲಾ ಕೈಯನ್ನು ಮೇಲಕ್ಕೆ ಎತ್ತುವುದರಿಂದ ಎಂದು ಹೇಳಬೇಕಾಗಿದೆ. ಅದರಲ್ಲಿ ನೀವು ಒಬ್ಬರೇ ಅಲ್ಲ, ಎಲ್ಲಾ ಜನಗಳೂ ಸೇರಿದ್ದಾರೆ. ಅವರು ಬೆಳಗಾಂಗೆ ಹೋಗಿ ಈ

ರೀತಿಯಾದ ಭಾಷಣ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆ ಎನ್ನುವಂಥಾದ್ದನ್ನು ಎರಡು ವಾಕ್ಯದಲ್ಲಿ ನಾನು ತಿಳಿಸುತ್ತೇನೆ. ಡಾಕ್ಟರ್ ನಾಗಪ್ಪ ಆಳ್ವ ಅವರು ಹಸನ್ಮುಖಿಗಳಾಗಿ ನಗುತ್ತಾ ಮೆರವಣಿಗೆಯಲ್ಲಿ ಹೋಗುತ್ತಾ ಇರುವ ಫೋಟೋ ಇದೆ, ಬೇಕಾದರೆ ಕಳುಹಿಸುತ್ತೇನೆ. ಅದರಲ್ಲಿ ಅವರು ಏನು ಹೇಳುತ್ತಾರೆ ಎಂದರೆ ಅದು ಈ ರೀತಿ ಇದೆ:

"The Chief Minister Veerendra Patil today lashed at the decision for delaying the decision on the Mahajan Commission Report and served an ultimatum stating that there is a limit to our patience. It is about three years since the report has been subbitted to the center and the center is sitting pretty over it. I ask the Center not to put our patience to the test."

Mr. Patil lost no time in reacting to the suggestions by snapping back . The chief minister also revealed the suggestion made by the Union Government. it has become an issue of prestige to the Maharashtra Government to get some part of Belgaum. Mr. Patil lost no time in reacting to the suggestion and snapped back: " Do you want to create another Berlin in Belgaum ! So long as I am Chief Minister, I will not entertain any such idea."

ಇಷ್ಟೇ ಅಲ್ಲ ಒಂದು ಇಂಚು ಜಾಗವನ್ನೂ ಬೆಳಗಾವಿಯಿಂದ ಬಿಟ್ಟುಕೊಡುವುದಿಲ್ಲ ಎಂದು ಹೇಳಿದರು.

ಇನ್ನೊಬ್ಬ ಸದಸ್ಯರು ಹಣೆಗೆ ತಿಲಕವನ್ನು ಇಡುವೊಷ್ಟು ಜಾಗವನ್ನೂ ಬಿಟ್ಟುಕೊಡುವುದಿಲ್ಲ ಎಂದು ವೀರವಾಣಿ ಮಾತುಗಳಿಂದ ಹೇಳಿದರು. ಹೀಗೆ ಬರೀ ಭಾಷಣ ಮಾಡುವುದಾದರೆ ಏನು ಬೇಕಾದರೂ ಹೇಳಬಹುದು ಎಂದು ಹೇಳುತ್ತೇನೆ.

**ಶ್ರೀ ಆರ್.ಜಿ. ವಾಲಿ:** ಬೆಳಗಾಂ ಹಂಚುತ್ತಾರೆ ಎನ್ನುವ ವಿಷಯ ತಿಳಿದರೆ ತಮಗೆ ಸಂತೋಷವಾಗುತ್ತದೆಯೇ ಎಂದು ಕೇಳುತ್ತೇನೆ.

**ಶ್ರೀ ಎಚ್. ಸಿದ್ದವೀರಪ್ಪ:** ನಿಮಗೆ ಎಷ್ಟು ಸಂಕಟವಾಗುತ್ತದೆಯೋ ಅಷ್ಟೇ ಸಂಕಟ ನಮಗೆ ಆಗುತ್ತದೆ. ಶ್ರೀಮಾನ್ ವಾಲಿಯವರು ನಮ್ಮ ಮನಸ್ಸಿಗೆ ಸಂತೋಷವಾಗುತ್ತದೆಯೇ ಎನ್ನುವ ಮಾತನ್ನು ಹೇಳಿದರು. ಅವರ ಮನಸ್ಸಿಗೆ ಎಷ್ಟು ದುಃಖವಾಗಿದೆಯೋ ಅದರ ಎರಡರಷ್ಟು ನಮಗೂ ದುಃಖವಾಗಿದೆ. ಇದರಲ್ಲಿ ರಾಜಕೀಯ ಚಲಾವಣೆ ಮಾಡುವುದಕ್ಕೆ ಹೋಗಬೇಡಿ. ಇಂಗ್ಲಿಷ್ ಭಾಷಣದಲ್ಲಿ

ಆಗಿದ್ದರೆ ನಾನು ಚೆನ್ನಾಗಿ ಹೇಳುತ್ತಿದ್ದೆ. ಇದನ್ನು ಬಹಳ ದುಃಖದಿಂದ ಹೇಳುತ್ತೇನೆ. ನಮ್ಮ ಜನಗಳು ಬಸವನ ಹಾಗೆ ತಲೆದೂಗುತ್ತಾರೆ. ಕೈ ಎತ್ತಬೇಕು ಎಂದರೆ ಕೈ ಎತ್ತಿ ಬಿಡುತ್ತಾರೆ. ಆದುದರಿಂದ ಇದಕ್ಕೆಲ್ಲಾ ನೀವೆ ಕಾರಣವೇ ಹೊರತು ಬೇರೆ ಯಾರೂ ಅಲ್ಲ. ಈ ಒಂದು ವಿಷಯವನ್ನು ಹಿಂದೆಯೇ ತೀರ್ಮಾನ ಮಾಡಬೇಕಾಗಿತ್ತು. ಅಂದರೆ 1957ನೇ ಇಸವಿಯಲ್ಲೇ ತೀರ್ಮಾನ ಮಾಡಬೇಕಾಗಿತ್ತು. ತಪ್ಪಿದರೆ 1962ನೇ ಇಸವಿಯಲ್ಲೋ ಅಥವಾ ಮಹಾಚುನಾವಣೆ ಆದ 1967ನೇ ಇಸವಿಯಲ್ಲೋ ಈ ಗಡಿ ಸಮಸ್ಯೆಯನ್ನು ಇತ್ಯರ್ಥ ಮಾಡಬೇಕಾಗಿತ್ತು. ಇದರ ಬಗ್ಗೆ ಎಸ್.ಆರ್.ಸಿ ರಿಪೋರ್ಟ್‌ನಲ್ಲಿ 229ನೇ ಪೇಜಿನ 847ನೇ ಪ್ಯಾರಾದಲ್ಲಿರುವ ಒಂದೆರಡು ವಾಕ್ಯಗಳನ್ನು ತಮಗೆ ವಿವರಿಸುತ್ತೇನೆ. ಅದು ಈ ರೀತಿ ಇದೆ:

"It may seem that we have merely stated what should be obvious to all. It is however patent that if the implication of these important facts had been fully appreciated and had been accepted, the question of territorial redistribution would not have developed into a major national problem of disquieting proportions. It has been most distressing to us to witness through the course of our enquiry a kind of border warfare in certain areas in which old comrades in arms in the battle for freedom have been pitted against one another in acrimonius controversy showing little appreciation of the fact that the States are but the limbs of the same body , politic and that territorial re-adjustment between them should not assume the form of disputes between alien powers. "

ಇದನ್ನು ನಾವು ಗಮನದಲ್ಲಿಟ್ಟುಕೊಂಡು ಈ ಹೊತ್ತಿನ ದಿವಸ ಯಾವ ಸಮಸ್ಯೆ ಬಂದಿದೆ ಅದನ್ನು ಈಗ ಬಗೆಹರಿಸಬೇಕಾಗಿದೆ. ಈಗ ಏನಾಗಿದೆ ಎಂದರೆ ಇದರ ಬಗ್ಗೆ ಒಬ್ಬರು ಮಾನ್ಯ ಸದಸ್ಯರು ಶ್ರೀಮಾನ್ ಶ್ರೀಕಂಠಯ್ಯನವರು ಒಂದು ನಿರ್ಣಯ ಕೂಡ ಕಳುಹಿಸಿದ್ದಾರೆ. ಅದರಲ್ಲಿ ಅವರೇ ಹೇಳಿರುವಂತೆ ಮೈಸೂರು ರಾಜ್ಯದ ಸುದೈವವೋ ಇಲ್ಲವೇ ದುರ್ದೈವವೋ ನಮಗೆ ಐದು ಭಾಗದ ರಾಜ್ಯಗಳು ಬಂದು ಸೇರಿದವು. ಒಂದುಕಡೆ ಹಳೆಯ ಮದ್ರಾಸು ಪ್ರಾಂತ್ಯದ ಭಾಗಗಳು, ಇನ್ನೊಂದು ಕಡೆ ಮಹಾರಾಷ್ಟ್ರದ ಭಾಗಗಳು, ಮತ್ತೊಂದು ಕಡೆ ಆಂಧ್ರದ ಕೆಲವು ಭಾಗಗಳು, ಮಗದೊಂದು ಕಡೆ ಕೇರಳದ ಕೆಲವು ಭಾಗಗಳು... ಹೀಗೆ ಬೇರೆಬೇರೆ ಭಾಗಗಳಲ್ಲಿ ಹರಿದು ಹಂಚಿ ಹೋಗಿರುವ ಭಾಗಗಳನ್ನು ಒಂದುಗೂಡಿಸಿ 'ಕನ್ನಡನಾಡು' ಎಂದು ನಮ್ಮ ರಾಜ್ಯವನ್ನು ಒಂದುಗೂಡಿಸಿದಾಗ ನಮಗೆ ಬಂದಂತಹ ಸಮಸ್ಯೆಗಳು ಎಷ್ಟು ದೊಡ್ಡದಾಗಿ ಬಂದಿದ್ದವು ಎಂದು ಹೇಳಿದರೆ ಅದು ಅತಿಶಯೋಕ್ತಿ ಅಲ್ಲ. ಆಗ

ಒಂದೊಂದನ್ನೂ ಸಮಗ್ರವಾದ ದೃಷ್ಟಿಯಿಂದ ಬಗೆಹರಿಸಿದ್ದರೆ ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ಇಂತಹ ಸಮಸ್ಯೆಗಳನ್ನು ಬಗೆಹರಿಸುವುದು ಬಹಳ ಸುಲಭವಾಗಿತ್ತು. ಆಗ ರಾಜ್ಯದ ಆಡಳಿತದ ಸೂತ್ರವನ್ನು ವಹಿಸಿಕೊಂಡಿದ್ದವರು ಬಹುಮುಖ್ಯವಾದ ಇಂತಹ ರಾಷ್ಟ್ರದ ಜಟಿಲ ಪ್ರಶ್ನೆಗಳು ಬಂದಾಗ ಇದರ ಬಗ್ಗೆ ಸರಿಯಾದ ಪ್ರಯತ್ನ ಮಾಡಲಿಲ್ಲ ಎನ್ನುವುದನ್ನು ಈ ರಾಜ್ಯದ ಜನತೆ ಸ್ಪಷ್ಟವಾಗಿ ಗಮನಿಸಿದ್ದಾರೆ. ಹಿಂದೆ ಮೈಸೂರು ರಾಜ್ಯದ ಪುನರ್ವಿಂಗಡಣೆ ಆದಾಗ ದಿವಂಗತ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂರವರು ಹಳೆಯ ಮೈಸೂರನ್ನು ಕೂಡಿಸುವಾಗ ಒಂದು ಹಿತವಚನ ಹೇಳಿದ್ದರು ಅದು ಹೀಗಿದೆ:

"Old Mysore has a distinct culture of its own, has a distinct heritage of its own. You have been formed into a homogenous unit for a long time. It is absolutely inevitable that South Kanara must join you because there is no other way and also Coorg and Kollegal. If you want , if you willing, you may form into a viable unit. It is just possible".

ಆಗ ಬೇಗ ದೇಶ ದೊಡ್ಡದಾಗುತ್ತದೆ, ಅದರಂತೆ ಜನಸಂಖ್ಯೆಯೂ ಬೆಳೆಯುತ್ತದೆ. ಜೊತೆಗೆ ಮುಂದೆ ಬರುವ ಪಂಚವಾರ್ಷಿಕ ಯೋಜನೆಗಳಲ್ಲಿ ದೇಶದ ಆರ್ಥಿಕ ಪ್ರಗತಿಗೆ ಅನುಕೂಲವಾಗುತ್ತದೆ ಎಂದು ಆಗ ಆಡಳಿತದಲ್ಲಿದ್ದವರು ಇದಕ್ಕೆ ಎಷ್ಟೇ ವಿಧವಾದ ತಾತ್ವಿಕ ವಿರೋಧ ಇದ್ದರೂ ಇದನ್ನು ತಡೆಗಟ್ಟಲಿಲ್ಲ. ಆಗ ಬಹುಶಃ ಇಂತಹ ಪ್ರಸಂಗಗಳು ಬಿಡಿಸಲಾರದಂಥ ಅಶಕ್ತ ಸರ್ಕಾರದ ಕೈಯಲ್ಲಿ ಈ ದೇಶದ ರಾಜ್ಯಭಾರ ಸಿಕ್ಕುತ್ತದೆ ಎನ್ನುವುದಾದರೆ ನಮ್ಮಷ್ಟಕ್ಕೆ ನಾವೇ ದೂರ ಇರುತ್ತೇವೆ ಎಂದು ಹೇಳಬಹುದಾಗಿತ್ತು. ಆದರೆ ಈಗ ಏನಾಗಿದೆ ಎಂದರೆ ಗಂಟು ಬಿದ್ದರೆ ಬಿಡುವುದಿಲ್ಲ ಎನ್ನುವುದು ಗೊತ್ತು. ಆಮೇಲೆ ಮಹಾಜನ್ ಕಮೀಷನ್ ಎಂದು ನೇಮಿಸಿದರು. ಅದು ಒಂದು ದುರಂತ ನಾಟಕವಾಯಿತು. ಹೇಗೆ ಆಯಿತು ಅನ್ನುವುದು ನಮಗೆಲ್ಲಾ ಗೊತ್ತಾಗಿದೆ.

**ಶ್ರೀ ಕೆ. ಪುಟ್ಟಸ್ವಾಮಿ:** ಆಗ ನೀವು 'ಹೋಂ ಮಿನಿಸ್ಟ್ರು' ಆಗಿದ್ದಿರಿ. ಆಗ ನೀವು ಏಕೆ ಒಪ್ಪಿದಿರಿ ಎಂದು ಕೇಳುತ್ತೇನೆ.

**ಶ್ರೀ ಎಚ್. ಸಿದ್ದವೀರಪ್ಪ:** ಮಹಾಜನ್ ಕಮೀಷನ್ ನೇಮಕ ಮಾಡುವಾಗ ಅದು ಹೇಗೆ ಆಯಿತು ಎನ್ನುವುದು ದೇಶಕ್ಕೆಲ್ಲಾ ಗೊತ್ತಿದೆ. ಇದಕ್ಕೆ ಹೇಗೆ ಒಪ್ಪಿಗೆ ಕೊಟ್ಟರು ಮತ್ತು ಯಾರು ಒಪ್ಪಿದರು ಎನ್ನುವುದು ನಮಗೆಲ್ಲರಿಗು ಗೊತ್ತಿದೆ. ಹಾಗೆ ಆಗ ಆಡಳಿತದಲ್ಲಿದ್ದವರು ಇದಕ್ಕೆ ಒಪ್ಪಿಗೆ ಕೊಟ್ಟಿದ್ದು ಅಕ್ಷಮ್ಯ ಅಪರಾಧವೇ. ಈ ಮಹಾಜನ್ ಕಮೀಷನ್ ನಮ್ಮ ರಾಜ್ಯಕ್ಕೆ ಒಪ್ಪಿಗೆ ಆಗದಿದ್ದರೂ, ಹೇಗಾದರೂ ಇಂತಹ ಒಂದು ವರದಿಯನ್ನು ಪೂರ್ತಿಯಾಗಿ ನಾವೆಲ್ಲರೂ ಒಪ್ಪಬೇಕು ಎಂದು ಕೇಳುತ್ತಲೇ ಇದ್ದೇವೆ. ಆದರೆ ಈಗ್ಗೆ ಎರಡು ವರ್ಷಗಳಿಂದಲೂ ನೀವೇನು ಮಾಡುತ್ತಿದ್ದೀರಿ

ಎಂದು ಕೇಳಬೇಕಾಗಿದೆ. ಪ್ರಧಾನಮಂತ್ರಿಗಳಿಗೆ ಮತ್ತು ಶ್ರೀಮಾನ್ ನಿಜಲಿಂಗಪ್ಪನವರಿಗೆ ಭಿನ್ನಾಭಿಪ್ರಾಯ ಬರುವುದಕ್ಕೆ ಮುನ್ನ ಎಲ್ಲರೂ ಒಂದಾಗಿದ್ದ ಕಾಲದಲ್ಲಿ ಏತಕ್ಕೋಸ್ಕರ ಈ ಸಮಸ್ಯೆಯನ್ನು ಇತ್ಯರ್ಥಪಡಿಸಲು ಪ್ರಯತ್ನ ಮಾಡಲಿಲ್ಲ? ಇದು ಇವರ ತಪ್ಪಲ್ಲವೆ ಎಂದು ಇಲ್ಲಿ ಕೇಳಬೇಕಾಗಿದೆ.

ಇದನ್ನು ಏಕೆ ಮಾಡಲಿಲ್ಲ ಎನ್ನುವುದಕ್ಕೆ ನಮಗೆ ಯಾವ ಕಾರಣವೂ ಗೊತ್ತಾಗಲಿಲ್ಲ. ಆ ಕಡೆ 'ಶಿವಸೇನೆ' ಎಂದು ಹೇಳುತ್ತಾರೆ, ಈ ಕಡೆ 'ಬಸವ ಸೇನೆ' ಎಂದು ಹೇಳುತ್ತಾರೆ. ಇನ್ನೂ ಎಷ್ಟು ಸೇನೆ ಎಂದು ಮಾಡಲು ಹೊರಡುತ್ತಾರೋ ಏನೋ ನಮಗೆ ಗೊತ್ತಿಲ್ಲ. ಈಗ ಬಂದಿರತಕ್ಕ ಸನ್ನಿವೇಶಗಳನ್ನು ನಾವು ನೋಡುವುದಾದರೆ ಇದು ನಮ್ಮ ಕನ್ನಡ ನಾಡಿನ ದುರಂತ ಎಂದು ಹೇಳಬೇಕಾಗಿದೆ. ನಾವು ಯಾವ ಸನ್ನಿವೇಶದಲ್ಲಿದ್ದೇವೆ ಎಂದರೆ ಒಂದುಕಡೆ ತಮಿಳುನಾಡು ನಮಗೆ ವಿರೋಧವಾಗಿದೆ. ಆ ಕಡೆ ಆಂಧ್ರದವರು ವಿರೋಧಿಯಾಗಿದ್ದಾರೆ. ಹಾಗೇ ಕೇರಳದವರೂ ಕೂಡ ವಿರೋಧಿಯಾಗಿದ್ದಾರೆ. ಮತ್ತೆ ಮಹಾರಾಷ್ಟ್ರದವರ ತಗಾದೆ, ವಿರೋಧ ಇದ್ದೇ ಇದೆ. ಒಟ್ಟಿನಲ್ಲಿ ಸುತ್ತಮುತ್ತಲ ರಾಜ್ಯದವರೆಲ್ಲ ವಿರೋಧವಾಗಿದ್ದಾರೆ. ಯಾವ ರಾಜ್ಯದವರೂ ಕೂಡ ನಿಮಗೆ ಸ್ನೇಹಿತರಾಗಿಲ್ಲ.

ನಿಮಗೆ ಇರುವ ಸ್ನೇಹಿತ ಒಬ್ಬನೇ. ಅದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅರಬ್ಬಿ ಸಮುದ್ರ ಸುಮಾರು ಮುನ್ನೂರು ಮೈಲುಗಳ ಉದ್ದ ಇರುವ ಪ್ರದೇಶ. ಬೇರೆ ಯಾವುದೂ ನಿಮಗೆ ಅನುಕೂಲವಾಗಿ ಕಾಣುತ್ತಿಲ್ಲ. ಯಾವ ಕಡೆಗೆ ತಿರುಗಿದರೂ, ನಮ್ಮಲ್ಲಿ ಯಾವ ಮೂಲೆಗೆ ಹೋದರೂ ಮತ್ತು ಎಲ್ಲಿಗೆ ಹೋದರೂ ವಿರೋಧ. ತಮಿಳು ನಾಡಿನವರು ಈಗ ಕಾವೇರಿ ನೀರಿನ ವಿವಾದ ಎಬ್ಬಿಸಿ ಅದಕ್ಕೆ ಬೇರೆ ಒಂದು ರೀತಿಯ ಟ್ರಿಬ್ಯುನಲ್ ನ್ಯಾಯ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆಂಧ್ರದವರ ತಕರಾರು, ವಿರೋಧ ಬೇರೆಯದೇ ಇದೆ. ಏತಕ್ಕಾಗಿ ಇಷ್ಟೆಲ್ಲ ವಿರೋಧ ಮಾಡಬೇಕಾಗಿತ್ತು ಎಂದು ನಾನು ಕೇಳುತ್ತೇನೆ. ಕಾರಣವೇನೋ ಬೇಕಾದಷ್ಟು ಹೇಳಬಹುದು, ತಮಿಳುನಾಡು ಮತ್ತು ಕೇರಳ ಏತಕ್ಕೆ ಕಾದಾಡಬಾರದು?

**ಶ್ರೀ ಬೋಳ ರಘುರಾಮಶೆಟ್ಟಿ:** ಕೇಂದ್ರದವರು ವಿರೋಧ ಮಾಡುವುದಕ್ಕೆ ಕಾರಣವೇನು?

**ಶ್ರೀ ಎಚ್. ಸಿದ್ದವೀರಪ್ಪ:** ಕೇಂದ್ರದವರು ವಿರೋಧ ಮಾಡುತ್ತಾರೆನ್ನುವುದು ನಿಮ್ಮ ಭ್ರಮೆ ಎಂದು ಹೇಳುತ್ತಿರುವೆ. ಇದನ್ನು ಯಾರು ನಿಮಗೆ ಹೇಳಿದರು? ಮತ್ತು ಯಾರು ವಿರೋಧವಾಗಿದ್ದಾರೆ ? ಎಂದು ನಾನು ಕೇಳುತ್ತಿದ್ದೇನೆ. ಈಗ ಬಂದಿರತಕ್ಕ ಸನ್ನಿವೇಶ ಏನಾಗಿದೆ ಎಂದರೆ ನೀವೇ ಎಲ್ಲವನ್ನೂ ಮಾಡಿಕೊಂಡಿರುವುದು ಎನ್ನುವುದು ಗೊತ್ತಾಗುತ್ತದೆ. ಇದಕ್ಕೆ ದೊಡ್ಡ ದೊಡ್ಡ ಕಾನೂನಿನ ಪಂಡಿತರುಗಳು ಬೇಕು ಎಂದು ಅಂಥವರನ್ನು ನೇಮಿಸಿಕೊಂಡರು. ಮದ್ರಾಸಿನಲ್ಲಿ ಉತ್ತಮವಾದ ಪಂಡಿತರು ಎಂದು ಹೆಸರುವಾಸಿಯಾಗಿದ್ದ ಶ್ರೀ ನಂಬಿಯಾರ್ ಎನ್ನುವವರನ್ನು ನ್ಯಾಯಪಂಡಿತರೆಂದು

ನೇಮಕಗೊಂಡಿದ್ದರು. ಇದನ್ನು ಅಂತಹ ಪಂಡಿತರಿಂದಲೇ ತಿಳಿಯಬೇಕು ಎಂದಲ್ಲ. ನಮ್ಮಂತಹ ಸಾಮಾನ್ಯ ಕಾನೂನು ತಿಳಿದವರಿಗೂ, ಜನಸಾಮಾನ್ಯರಿಗೂ ಇದರ ಅರ್ಥ ಏನೆಂದು ಗೊತ್ತಾಗುತ್ತದೆ.

ಬೀಗ ಹಾಕಿದ್ದಾರೆ. ಆದರೆ ಇದರ ಬೀಗದ ಕೈ ಎಲ್ಲಿದೆ ಎನ್ನುವುದನ್ನು ನೋಡದೆ ಸುಮ್ಮನೆ ಬಾಗಿಲಿಗೆ ಹೋಗಿ ಗುದ್ದಿ ಹಣೆ ಚಚ್ಚಿಕೊಂಡರೆ ಬೀಗ ತೆಗೆಯಲು ಆಗುತ್ತದೆಯೇ? ಇದು ಹೇಗಿದೆ ಎಂದರೆ ಕತ್ತಲಲ್ಲಿ ಕರಿ ಬೆಕ್ಕನ್ನು ಅರಸುವಂತಾಗಿದೆ. ಸರಿಯಾದ ಬೀಗದ ಕೈ ತಂದು ಅದರಿಂದ ಬೀಗವನ್ನು ತೆಗೆಯುವುದರ ಬದಲು ಬೇರೆ ಬೀಗದ ಕೈಯಿಂದ ತೆಗೆಯಲು ಹೋದರೆ ಅದನ್ನು ತೆಗೆಯಲು ಆಗುತ್ತದೆಯೇ? ಬೀಗದ ಕೈ ಎಲ್ಲಿದೆ ಎನ್ನುವುದು ಗೊತ್ತಿಲ್ಲವೇ? ನಮ್ಮ ಇಂದಿನ ಮುಖ್ಯಮಂತ್ರಿಗಳು ಬಹಳ ಚತುರರು ಮತ್ತು ಒಳ್ಳೆಯ ಹೆಸರು ಪಡೆದಿರುವವರು ಎಂದು ನಾನು ಕೆಲವು ಇಂಟರ್ ನ್ಯಾಷನಲ್ ಪೇಪರ್‌ಗಳಲ್ಲಿಕೂಡ ಓದಿದ್ದೇನೆ. 'ನ್ಯೂಯಾರ್ಕ್ ಟೈಂಸ್' ಎನ್ನುವ ಇಂಟರ್ ನ್ಯಾಷನಲ್ ಪೇಪರ್ ಬರುತ್ತದೆ. ಶ್ರೀಮಾನ್ ನಿಜಲಿಂಗಪ್ಪನವರಿಗೂ, ಶ್ರೀಮತಿ ಇಂದಿರಾ ಗಾಂಧಿಯವರಿಗೂ ಒಮ್ಮತ ಉಂಟುಮಾಡುವುದರಲ್ಲಿ ಬಹು ಮುಖ್ಯವಾದ ಪಾತ್ರ ವಹಿಸಿದ್ದರು ಎಂದು ಬಹಳ ದೊಡ್ಡದಾಗಿ ಆ ಪೇಪರ್‌ನಲ್ಲಿ ಬಂದಿರುವುದನ್ನು ಓದಿದ್ದೇನೆ. ಇವರಿಗೇಕೆ ಈಗ ಇಂತಹ ದುರ್ಬುದ್ಧಿ ಬಂತು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅದೇನು ದುರ್ದೈವವೋ ಗೊತ್ತಾಗಲಿಲ್ಲ. ಇಂತಹವರು ಏಕೆ ನುಡಿದಂತೆ ನಡೆಯಲಿಲ್ಲ. ಶ್ರೀಮತಿ ಇಂದಿರಾಗಾಂಧಿಯವರನ್ನು ಕಾಂಗ್ರೆಸ್‌ನಿಂದ ಉಚ್ಚಾಟನೆ ಮಾಡುವುದಕ್ಕೆ ಮುಂಚೆ ಇದನ್ನು ಏಕೆ ತೆಗೆದುಕೊಳ್ಳಲಿಲ್ಲ? ಇದಕ್ಕಾಗಿ ಸುಮಾರು 25 – 30 ಸಾರಿ ಅವರು ದೆಹಲಿಗೆ ಯಾತ್ರೆ ಕೈಗೊಂಡಿದ್ದರು. ತಮಿಳುನಾಡಿನಲ್ಲಿ ಈಗಿರುವ ಡಿ.ಎಂ.ಕೆ ಸರ್ಕಾರ ಕೇಂದ್ರ ಸರ್ಕಾರದ ವಿಶ್ವಾಸದಲ್ಲಿದೆ ಎಂದು ಹೇಳುವಾಗ ಅದೇ ರೀತಿ ನೀವು ಏಕೆ ಆಗಲಿಲ್ಲ? ನೀವು ಕೇಂದ್ರ ಸರಕಾರದೊಡನೆಯೇ ಉಳಿದುಕೊಳ್ಳಬಹುದಾಗಿತ್ತು.

"Deliberately with a design and purpose , they are whipping up anti- Central Government feeling in the State for ulterior purpose and with a veiw to see that their party interests are promoted".

ಇದನ್ನು ಮಾಡುವುದರಿಂದ ಇವರಿಗೆ ಸುಖವಾಗುತ್ತದೆ ಎಂದು ತಿಳಿದುಕೊಂಡಿದ್ದಾರೆ. ಅದು ಒಂದು ಭ್ರಮೆ. ಅವರು ಮಾಡುತ್ತಾ ಇರುವ ರೀತಿಯನ್ನು ನೋಡಿದರೆ ಇಂತಹವರು ಮುಂದೆ ನಮ್ಮ ರಾಜ್ಯಗಳಲ್ಲಿ ಬಂದಾರು ಎಂದು ಇದನ್ನು ಎದುರಿಸುವುದಕ್ಕೆ ನಮ್ಮ ರಾಜ್ಯಾಂಗದಲ್ಲಿ ಬೇಕಾದಷ್ಟು ನೆರವು ಹಾಗು ವಜ್ರಕವಚವನ್ನು ನಮ್ಮ ರಕ್ಷಣೆಗಾಗಿ ಕೊಟ್ಟಿದ್ದಾರೆ. ಇಂತಹ ಸಂದರ್ಭಗಳಲ್ಲಿ ರಾಜ್ಯಾಂಗದಲ್ಲಿ ಹೇಳಿರುವುದನ್ನು ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದರೆ ಒಳ್ಳೆಯದು. ರಾಜ್ಯಾಂಗವನ್ನು ಬದಲಾವಣೆ ಮಾಡುವುದಕ್ಕೆ ಪಾರ್ಲಿಮೆಂಟಿಗೆ ಪೂರ್ಣವಾದ ಅಧಿಕಾರವಿದೆ. ಇಂತಹ

ಸಾಧಾರಣ ಮಸೂದೆಗಳು ಪಾರ್ಲಿಮೆಂಟ್ ಮುಂದೆ ಬಂದರೆ ಪಾಸ್ ಆಗುವುದಕ್ಕೆ ಮೂರನೇ ಎರಡು ಭಾಗದಷ್ಟು ಮೆಜಾರಿಟಿ ಬೇಕಾಗುವುದಿಲ್ಲ. ಸಿಂಪಲ್ ಮೆಜಾರಿಟಿಯಿಂದಲೇ ಇದು ತೀರ್ಮಾನವಾಗುವುದಕ್ಕೆ ಅವಕಾಶವಿದೆ.

1956ನೇ ಇಸವಿಯಲ್ಲಿ ಉದ್ದೇಶಪೂರ್ವಕವಾಗಿ ರಾಜ್ಯಾಂಗಕ್ಕೆ 5ನೇ ತಿದ್ದುಪಡಿಯನ್ನು ಮಾಡಿದ್ದಾರೆ. ಇದರ ಪ್ರಕಾರ ಬಿಲ್ ಪಾಸುಮಾಡುವುದಕ್ಕೆ ಮೊದಲು ಕೇಂದ್ರ ಸರ್ಕಾರದವರು ಸಂಬಂಧಪಟ್ಟ ರಾಜ್ಯಸರ್ಕಾರಗಳಿಗೆ 15 ದಿನಗಳ ಕಾಲವನ್ನು ಕೊಡುತ್ತಾರೆ ಎನ್ನೋಣ; 15ನೇ ದಿವಸದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅವಕಾಶ ಇಲ್ಲ. ನಮ್ಮ ಭಾರತದ ಸಂವಿಧಾನದಲ್ಲಿ ಈ ರೀತಿ ಹೇಳಿದೆ:

" for expressing its views thereon within such period as maybe specified in the reference or within such further period as the President may allow and the period so specified or allowed has expired."

ಆದ್ದರಿಂದ ಇದನ್ನು ನಾವು ಸಮಗ್ರ ದೃಷ್ಟಿಯಿಂದ ವಿಚಾರ ಮಾಡಬೇಕಾಗಿದೆ. ಪಾರ್ಲಿಮೆಂಟಿನಲ್ಲಿ ಇಡೀ ಹಿಂದೂಸ್ತಾನದಿಂದ ಆರಿಸಿ ಬಂದಿರುವ ಸದಸ್ಯರು ಸುಮಾರು 565 ಮಂದಿ ಇದ್ದಾರೆ. ಅಲ್ಲಿ ಕೇವಲ ಮಹಾರಾಷ್ಟ್ರ ಮತ್ತು ಮೈಸೂರಿನವರೇ ಇಲ್ಲ. ಎಲ್ಲಾ ರಾಜ್ಯಗಳ ಪ್ರತಿನಿಧಿಗಳು ಸಹ ಇದ್ದಾರೆ. ಇಂತಹ ಸನ್ನಿವೇಶದಲ್ಲಿ ಕೂಡ ಕೇಂದ್ರ ಸರ್ಕಾರ ನಮ್ಮ ರಾಜ್ಯದ ವಿರುದ್ಧವಾಗಿ ತೀರ್ಮಾನ ಕೈಗೊಳ್ಳುವುದಕ್ಕೆ ಹೊರಟಿರುವುದು ಏತಕ್ಕಾಗಿ ಎಂಬುದನ್ನು ನೋಡಬೇಕಾಗಿದೆ. ಏತಕ್ಕಾಗಿ ಈ ರೀತಿ ವರ್ತಿಸುತ್ತಿದ್ದಾರೆಂಬುದನ್ನು ನಾವು ಕೇಳಬೇಕಾಗಿದೆ. ಇಂತಹ ಸಂದರ್ಭದಲ್ಲಿ ಸೌಜನ್ಯದ ದೃಷ್ಟಿ ಇರಬೇಕು.

ಹಳ್ಳಿಯ ಒಂದು ಗಾದೆ ಇದೆ: "ಕಾರ್ಯವಾಸಿ .......ಕಾಲು ಕಟ್ಟು" ಎಂಬುದಾಗಿ. ಅಂದರೆ, ಹೋಗಿ ಭಿಕ್ಷೆ ಬೇಡಿ ಎಂದು ನಾನು ಹೇಳುತ್ತಿಲ್ಲ. ನಮ್ಮ ರಾಜ್ಯಕ್ಕೆ ಆಗಿರುವಂತಹ ಅನ್ಯಾಯವನ್ನು ಪಾರ್ಲಿಮೆಂಟಿನಲ್ಲಿರುವ ಎಲ್ಲಾ ಸದಸ್ಯರ ಮುಂದೆ ಹೇಳಿ ಅವರ ಮನಸ್ಸನ್ನು ಮೊದಲು ಒಲಿಸಿಕೊಳ್ಳಬೇಕು. ಪಾರ್ಲಿಮೆಂಟಿನಲ್ಲಿ ನಮಗೆ ಬಹುಮತ ಬರುವಂತೆ ಸನ್ನಿವೇಶವನ್ನು ಕಲ್ಪಿಸಬೇಕು. ಇವತ್ತಿನ ದಿವಸ ಪಾರ್ಲಿಮೆಂಟಿಗೆ ಗಡಿ ವಿಚಾರದಲ್ಲಿ ಬೇಕಾದಹಾಗೆ ಬದಲಾವಣೆ ಮಾಡುವುದಕ್ಕೆ ರಾಜ್ಯಾಂಗದ ಪ್ರಕಾರ ಅಧಿಕಾರ ಇದೆ. ಅದೇ ಅಮೇರಿಕಾ ದೇಶದಲ್ಲಿ ಒಂದು ರಾಜ್ಯದ ಗಡಿಯ ಪ್ರದೇಶವನ್ನು ಇನ್ನೊಂದು ರಾಜ್ಯಕ್ಕೆ ವರ್ಗಾವಣೆ ಮಾಡಬೇಕಾದರೆ ಆಯಾ ರಾಜ್ಯಗಳ ಒಪ್ಪಿಗೆ ಮೊದಲು ಬೇಕು. ಇದೇ ಪದ್ಧತಿ ಆಸ್ಟ್ರೇಲಿಯಾ ದೇಶದಲ್ಲಿಯೂ ಕೂಡ ಇದೆ. ಆಡಳಿತದ ದೃಷ್ಟಿಯಿಂದ ಇದು ಸರಿ ಎಂದು ಕಾಣುತ್ತದೆ.

ಆದರೆ ನಮ್ಮ ದೇಶದಲ್ಲಿ ಮಾತ್ರ ಪೂರ್ಣ ಅಧಿಕಾರವನ್ನು ಪಾರ್ಲಿಮೆಂಟ್ ಇಟ್ಟುಕೊಂಡಿದೆ. ಇವತ್ತಿನ ದಿವಸ ಪರಿಸ್ಥಿತಿ ಇಷ್ಟರಮಟ್ಟಿಗೆ ಹೋಗಿದ್ದರೂ ಕೂಡ

ಮಾನ್ಯ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ತಾವೇ ದೆಹಲಿಗೆ ಹೋಗಿ ಪ್ರಧಾನಮಂತ್ರಿ ಅವರಲ್ಲಿ ಮಾತನಾಡದೆ ತಮ್ಮ ಚೀಫ್ ಸೆಕ್ರೇಟರಿಯವರನ್ನು ದೆಹಲಿಗೆ ಕಳುಹಿಸಿದರು. ಅವರು ಪ್ರಧಾನ ಮಂತ್ರಿಯವರನ್ನು ಇಂಟರ್‌ವ್ಯೂ ಕೇಳಿದಾಗ ಅವರು ಪತ್ರವನ್ನು ನಮ್ಮ ಸೆಕ್ರೇಟರಿಯವರ ಹತ್ತಿರ ಕೊಟ್ಟುಹೋಗಿ, ನಾನು ಮುಖ್ಯಮಂತ್ರಿಗಳಿಗೆ ಕಾಗದ ಬರೆಯುತ್ತೇನೆ ಎಂದು ಹೇಳಿದರಂತೆ. ಯಾರೇ ಪ್ರಧಾನಮಂತ್ರಿಗಳಾಗಲೀ, ಈ ರೀತಿ ಉತ್ತರ ಕೊಡುವುದು ಸಹಜ. ಇದಕ್ಕೆ ಮೊದಲು ಮುಖ್ಯಮಂತ್ರಿಗಳು ನನಗೆ ಕಾಯಿಲೆ ಇರುವುದರಿಂದ ದೆಹಲಿಗೆ ಹೋಗುವುದಕ್ಕೆ ಆಗಲಿಲ್ಲ ಎಂದು ಹೇಳಿಕೆ ಕೊಟ್ಟರು. ಅವರಿಗೆ ಕಾಯಿಲೆ ಇಲ್ಲ ಎಂದು ನಾನು ಹೇಳುತ್ತಿಲ್ಲ. ಅವರು ಆರೀತಿ ಹೇಳಿಕೆ ಕೊಟ್ಟಮೇಲೆ ಕೆಲವುಕಡೆ ಟೂರ್ ಮಾಡಿದ್ದಾರೆ. ದೇಹ ಶ್ರಮ ಮಾಡಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಸ್ಪೆಷಲ್ ಪ್ಲೇನ್ ಮಾಡಿಕೊಂಡು ದೆಹಲಿಗೆ ಹೋಗಿದ್ದರೆ ನಾವು ಬೇಡ ಎಂದು ಹೇಳುತ್ತಿರಲಿಲ್ಲ. ಹೋಗಿದ್ದರೆ ಪ್ರಧಾನಮಂತ್ರಿಗಳು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ರಾಜಕೀಯವನ್ನು ಕಾರಣವಾಗಿ ಇಟ್ಟುಕೊಳ್ಳುವುದು ಸರಿಯಲ್ಲ. ರಾಜಕೀಯಶಾಸ್ತ್ರವನ್ನು ಓದಿದರೆ ಇದು ಗೊತ್ತಾಗುತ್ತದೆ. ಒಳ್ಳೆಯ ಮಾತಿನಲ್ಲಿ ಅಪ್ರಿಯವಾದುದನ್ನೂ ತಿನ್ನಿಸಬಹುದಂತೆ, ಕೆಟ್ಟ ಮಾತಿನಲ್ಲಿ ಬೆಲ್ಲವನ್ನೂ ಸಹ ತಿನ್ನಿಸುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರನ್ನು ಈ ಸರ್ಕಾರದವರು ಕಾಸಿಗಿಂತ ಕಡೆಯಾಗಿ ಕಾಣುತ್ತಿದ್ದಾರೆ. ನಿಮಗೆ ಅವರನ್ನು ಅಧಿಕಾರದಿಂದ ತೆಗೆಯುವ ಅವಕಾಶ ಇದ್ದರೆ ತೆಗೆಯಿರಿ. ಆದರೆ ಈ ದೇಶದ 45 ಕೋಟಿ ಜನರ ಒಪ್ಪಿಗೆ ಇರುವವರೆಗೆ ಅವರು ಆ ಸ್ಥಾನದಲ್ಲಿ ಮುಂದುವರೆಯುತ್ತಾರೆ. ಇವತ್ತಿನ ದಿವಸ ಈ ಸರ್ಕಾರದವರು ತಮ್ಮ ಸಾಮ್ರಾಜ್ಯವನ್ನು ಉಳಿಸಿಕೊಳ್ಳುವುದಕ್ಕೆ ಎಲ್ಲಾರೀತಿಯ ಅವಕಾಶವನ್ನೂ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಸರಿಯಲ್ಲವೆಂದು ಹೇಳಿ ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ:-

ಮೊನ್ನೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಾಗಪ್ಪ ಆಳ್ವ ಅವರು ಅಜ್ಜಂಪುರದಲ್ಲಿ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ಪ್ರಧಾನಮಂತ್ರಿಯವರನ್ನು ವಾಚಾಮಗೋಚರವಾಗಿ ಬೈದರು. ಇದನ್ನು ಅಲ್ಲಿದ್ದ ಸಾಮಾನ್ಯ ಜನರಲ್ಲಿ ಕೆಲವರು ಪ್ರತಿಭಟಿಸಿ, ದೇಶದ ಪ್ರಧಾನಮಂತ್ರಿಗಳನ್ನು ಈ ರೀತಿ ಸಾರ್ವಜನಿಕವಾಗಿ ಬೈಯ್ಯಬಾರದು ಎಂದೂ ಅವರು ಹೇಳಿದರು. ಆರೀತಿ ಪ್ರತಿಭಟಿಸಿದ ಕೆಲವು ಜನರನ್ನು ಸಬ್ ಇನ್‌ಸ್ಪೆಕ್ಟರ್ ಅವರು ಬಂಧಿಸಿ, ಸ್ಟೇಷನ್‌ಗೆ ಕರೆದುಕೊಂಡುಹೋಗಿ ಅಲ್ಲಿ ಒಂದಷ್ಟು ಕಾಲ ಇಟ್ಟುಕೊಂಡು ಅವರಿಗೆ ಏನೇನೋ ಮಾಡಿದರು. ಇವತ್ತಿನ ದಿವಸ ಈ ರಾಜ್ಯದಲ್ಲಿ ಇಂದಿರಾಗಾಂಧಿಕೀ ಜೈ ಎಂದು ಕೂಗಿದರೆ ಅದು ಒಂದು ತಕ್ಸೀರು ಎಂದು ಕಾಣುತ್ತದೆ. ಈ ರೀತಿ ಕೂಗಬಾರದು ಎಂಬುದಾಗಿ ಒಂದು ಕಾನೂನನ್ನು ತರಬಹುದೆಂದು ಕಾಣುತ್ತದೆ. ಅಜ್ಜಂಪುರದಲ್ಲಿ ನಡೆದ ಘಟನೆ ಬಗ್ಗೆ ನಾನು ಮುಖ್ಯಮಂತ್ರಿಯವರನ್ನು ಕೇಳಿದಾಗ ಅವರು ಆ ಬಗ್ಗೆ ಐ.ಜಿ.ಪಿ ಅವರಿಗೆ

ಬರೆದಿದ್ದೇನೆ, ಅವರು ವಿಚಾರಣೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಇದನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಇವತ್ತಿನ ದಿವಸ ಏನೇ ಘಟನೆಗಳು ನಡೆಯಲಿ ಅದನ್ನು ಪತ್ರಿಕೆಯವರು ಬಹಳ ಚೆನ್ನಾಗಿ ವರದಿ ಮಾಡುತ್ತಾರೆ.

**ಬೆಳಗಾಂ ಬಗ್ಗೆ ಈ ಸರಕಾರದವರು ಮೊದಲಿನಿಂದಲೂ ಕೂಡ ಒಂದು ಸರಿಯಾದ ನಿಲುವನ್ನು. ಸರಿಯಾದ ದೃಷ್ಟಿಕೋನವನ್ನು ತಳೆಯಲಿಲ್ಲ.** ಮೊನ್ನೆ ಬೆಳಗಾವಿಯಲ್ಲಿ ಸಭೆ ಸೇರಿದ್ದರು. ಅಲ್ಲಿ ಇವರು ಸಾಧಿಸಿದ್ದು ಏನು? ಅಲ್ಲಿ ಮಾತನಾಡಿದವರೆಲ್ಲಾ ಇಂದಿರಾಗಾಂಧಿಯವರನ್ನು ಬೈದದ್ದೇ ಬೈದದ್ದು. ಅಷ್ಟೇ ಇವರು ಮಾಡಿದ್ದು. ಏತಕ್ಕೋಸ್ಕರ ಈ ಒಂದು ವಾತಾವರಣವನ್ನು ಇವತ್ತಿನ ದಿವಸ ಹುಟ್ಟಿಸಿದ್ದಾರೆ ಎಂಬುದನ್ನು ಮುಖ್ಯಮಂತ್ರಿಯವರೇ ಹೇಳಬೇಕು. ಇಬ್ಬರು ಅಧಿಕಾರಿಗಳು ದೆಹಲಿಯಿಂದ ಬಂದರು. ಅವರು ಕೆಲವು ವಿಚಾರಗಳನ್ನು ಹೇಳಿದರು. ಅದಕ್ಕೆ ನಾನು ಬರೆದು ಕಳುಹಿಸಿ ಎಂದು ಹೇಳಿದೆ ಎಂಬುದಾಗಿ ಮುಖ್ಯಮಂತ್ರಿಗಳು ಹೇಳಿರುವ ಸಂಗತಿಗಳು ಪತ್ರಿಕೆಗಳಲ್ಲಿ ಬಂತು. ಪ್ರಧಾನಮಂತ್ರಿಗಳಿಂದ ಈ ವಿಚಾರದಲ್ಲಿ ಒಂದು ಹೇಳಿಕೆ ಬರುವವರೆಗೂ ಕೂಡ ಪತ್ರಿಕೆಗಳಿಗೆ ತಿಳಿಸದೇ ಕಾಯಬಹುದಾಗಿತ್ತು. ಇಲ್ಲವೇ ತಾವೇ ಕೂಡಲೇ ದೆಹಲಿಗೆ ಹೋಗಿ ಪ್ರಧಾನಮಂತ್ರಿಗಳಲ್ಲಿ ಮಾತನಾಡಬಹುದಾಗಿತ್ತು. ಇದನ್ನು ಬಿಟ್ಟು ಕಳೆದ 10 ದಿನಗಳಿಂದ ಪ್ರಚಾರ ಮಾಡುವುದರಲ್ಲಿಯೇ ಕಾಲ ಕಳೆಯಬೇಕಾಯಿತು. ಈ ರೀತಿ ಪ್ರಚಾರ ಮಾಡುವುದಕ್ಕೆ ಪ್ರಾರಂಭ ಮಾಡಿದಮೇಲೆ ಏನಾಯಿತು ಎಂದರೆ ಕೆಲವರು ದೆಹಲಿಗೆ ಡೆಲಿಗೇಷನ್ ಹೋದರು. ಅದರಲ್ಲಿ ಮಾನ್ಯ ಡಿ.ಎಂ. ಸಿದ್ದಯ್ಯನವರೂ ಒಬ್ಬರು. ಮಾನ್ಯ ಸಿದ್ದಯ್ಯನವರನ್ನು ನಾನು ಕೇಳಿದಾಗ ಅವರು ಹೇಳಿದರು:

Yes, it was a Government delegation; I went - ಎಂಬುದಾಗಿ. ಸರಕಾರದ ಕಡೆಯಿಂದ ನಿಯೋಗ ಕಳುಹಿಸಿದ ಮೇಲೆ ನಮ್ಮನ್ನು ಕರೆಸಿಕೊಂಡು ಅಭಿಪ್ರಾಯ ಕೇಳಬೇಕಾದ ಅವಶ್ಯಕತೆಯಾದರೂ ಏನಿತ್ತು? ನಮ್ಮನ್ನು ಕರೆಸಿಕೊಂಡಾಗ ಒಂದು ರುಜುವಿಲ್ಲದ ಪೇಪರ್‌ಅನ್ನು ಮುಖ್ಯಮಂತ್ರಿಗಳು ತೋರಿಸಿದರು. ಈ ವಿಚಾರದಲ್ಲಿ ಹೋರಾಟ ಮಾಡಲು ನಮ್ಮ ರಾಜ್ಯದಿಂದ ಆರಿಸಿ ಹೋದಂತಹ ಸಂಸತ್ ಸದಸ್ಯರು ಇದ್ದಾರೆ. ನಮ್ಮ ರಾಜ್ಯದ ರಕ್ಷಣೆ ಮಾಡಬೇಕಾದ್ದು ಅವರ ಕರ್ತವ್ಯ. ಅವರು ತಮ್ಮ ಕರ್ತವ್ಯವನ್ನು ಮಾಡುತ್ತೇವೆ ಎಂದು ಹೇಳಿದರು. ಅವರು ಕರ್ತವ್ಯವನ್ನು ಮಾಡುತ್ತಾರೆ ಎಂಬ ನಂಬಿಕೆ ಇದ್ದಮೇಲೆ ಇಲ್ಲಿ ಏನು ಮಾಡಿದರು ಅಂದರೆ, ಮೊದಲನೇ ದಿವಸ ನಮ್ಮನ್ನು ಕೆಲವರನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದರು – ಎರಡನೇ ದಿವಸವೂ ನಮ್ಮನ್ನು ಕರೆದರು. ಮೂರನೇ ದಿವಸವು ನಮ್ಮನ್ನು ಕರೆದಾಗ ನಾನು ಮುಖ್ಯಮಂತ್ರಿಗಳಿಗೆ ಹೇಳಿದೆ: ಇದನ್ನು ಎಲ್ಲರೂ ಒಪ್ಪಿಕೊಂಡರೆ ಸರಿಮಾಡಬಹುದು. ನಮಗೂ ಈ ದೇಶದ ಗಡಿ ರಕ್ಷಣೆ ಮಾಡಬೇಕು ಎಂಬ ಕಾತುರತೆ ಇದೆ.

ಈ ಗಡಿ ವಿಚಾರದಲ್ಲಿ ತೊಂದರೆಯಾಗಬಾರದು ಎನ್ನುವ ಕಾತುರತೆ ನಮ್ಮ ಪಕ್ಷಕ್ಕೂ ಇದೆ. ಈ ಸಭೆಯಲ್ಲಿರುವ ಎಲ್ಲರಿಗೂ ಇದೆ. ಇದಕ್ಕೆ ವಿರೋಧವಾಗಿ ಬೆಳಗಾವಿಯನ್ನು ಬಿಟ್ಟುಕೊಡಿ. ಇನ್ನೊಂದು ಬಿಟ್ಟುಕೊಡಿ ಎಂದು ಹೇಳುವ ಅಧಮರು ಯಾರೂ ಇಲ್ಲ. ಆರೀತಿ ಯಾರು ಯೋಚನೆ ಮಾಡಿಲ್ಲ. ನಾನು ಆಗಲೇ ಹೇಳಿದೆ, ನೀವು ನಮ್ಮನ್ನು ಈ ವಿಚಾರದಲ್ಲಿ ಸಂಪರ್ಕ ಮಾಡುವುದಾದರೆ, ವಿಚಾರ ಮಾಡುವುದಾದರೆ ಎಲ್ಲರೂ ಕೂಡಿ ಈ ಬಗ್ಗೆ ಒಂದು ನಿರ್ಣಯವನ್ನು ತರಬೇಕೆಂಬ ಆಸೆ ನಮಗಿದೆ. ನಿರ್ಣಯವನ್ನು ತರುವುದಕ್ಕೆ ಅವಕಾಶವನ್ನು ಕೊಡಿ ಎಂದು ನಮ್ಮ ಸಲಹೆಯನ್ನು ಅವರ ಮುಂದೆ ಇಟ್ಟು ಕೇಳಿದಾಗ ಅವರು ನಿನ್ನೆಯ ದಿವಸ ಒಂದು ನಿರ್ಣಯದ ಕರಡು ಪ್ರತಿಯನ್ನು ನನ್ನ ಕೈಯಲ್ಲಿ ಕೊಟ್ಟರು. ಆಗ ನಾನು ಹೇಳಿದೆ – ಇದನ್ನು ನಾನು ಪಕ್ಷದ ಮುಂದೆ ಇಡುತ್ತೇನೆ, ಈ ನಿರ್ಣಯವನ್ನು ಏನು ಮಾಡಬೇಕೆಂಬ ಬಗ್ಗೆ ಯೋಚನೆ ಮಾಡುತ್ತೇವೆ. ನಂತರ ನಾನು ನಿಮಗೆ ತಿಳಿಸುತ್ತೇನೆ ಎಮದು ಹೇಳಿದೆ.

ಈ ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳೇ ಮೂವ್ ಮಾಡಬೇಕು ಎಂದು ನನ್ನ ಅಭಿಪ್ರಾಯ ಇತ್ತು. ಈ ನಿರ್ಣಯವನ್ನು ಸಭೆಯ ಮುಂದೆ ಯಾರು ಇಡಬೇಕೆಂಬ ಬಗ್ಗೆ ನಾವೆಲ್ಲರೂ 11 ಗಂಟೆಗೆ ಸೇರಿ ತೀರ್ಮಾನ ಮಾಡೋಣ ಎಂದು ಹೇಳಿದರು. ನಿನ್ನೆಯ ದಿವಸ ಸಂಜೆ ನಮ್ಮ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿಗಳು ಕೊಟ್ಟ ಕರಡನ್ನು ಕುರಿತು ಯೋಚನೆ ಮಾಡುವಾಗ ಶ್ರೀಮಾನ್ ಶಾಂತವೇರಿ ಗೋಪಾಲಗೌಡರ ಹೆಸರಿನಲ್ಲಿ ಅಂಥದ್ದೇ ನಿರ್ಣಯ ಹೋಗಿದೆ ಎಂದು ತಿಳಿಯಿತು.

ಶ್ರೀಮಾನ್ ಗೋಪಾಲಗೌಡರ ಹೆಸರಿನಲ್ಲಿ ಬಂದಂತಹ ನಿರ್ಣಯಕ್ಕೂ ಮುಖ್ಯಮಂತ್ರಿಗಳು ನನಗೆ ಕೊಟ್ಟ ಕರಡು ನಿರ್ಣಯಕ್ಕೂ ಯಾವ ಒಂದು ಕಾಮ, ಫುಲ್‌ಸ್ಟಾಪ್‌ಕೂಡ ವ್ಯತ್ಯಾಸ ಇರಲಿಲ್ಲ. ನಿನ್ನೆಯ ದಿವಸ ಮುಖ್ಯಮಂತ್ರಿಗಳು ನಾವುಗಳೆಲ್ಲಾ ಒಟ್ಟಿಗೆ ಕೂಡಿ ಯೋಚನೆ ಮಾಡೋಣ ಎಂದು 11 ಗಂಟೆಗೆ ಟೈಮ್ ಕೊಟ್ಟು, ಕಾಲಾವಕಾಶ ಕೊಟ್ಟು ಈ ನಿರ್ಣಯದ ನೋಟೀಸ್ ಕೊಡುವುದಕ್ಕೆ ಕಾರಣವೇನಿತ್ತು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಈ ನಿರ್ಣಯ ಯಾರ ಹೆಸರಿನಲ್ಲಿ ಬರಬೇಕು. ಹೇಗೆ ಬರಬೇಕು ಎಂಬುವನ್ನು ವಿಚಾರ ಮಾಡೋಣ ಎಂದು ಹೇಳಿದ್ದಾರೆ. ಅದರಲ್ಲಿ ಈಗ ಈ ರೀತಿ ಮಾಡಿದ್ದಾರಲ್ಲಾ ಎಂದು ನಾನು ರಾತ್ರಿ 8.30 ಗಂಟೆಗೆ, ಆಮೇಲ 9 ಗಂಟೆಯಲ್ಲಿ ಮುಖ್ಯಮಂತ್ರಿಗಳಿಗೆ ಟೆಲಿಫೋನ್ ಮಾಡಿ ಕೇಳಿದೆ. ಆಗ ಮುಖ್ಯಮಂತ್ರಿಗಳು ಮನೆಯಲ್ಲಿ ಇಲ್ಲ ಎಂದು ಹೇಳಿದರು. ಆಮೇಲೆ ಮತ್ತೆ ಪ್ರೈವೇಟ್ ಸೆಕ್ರೇಟರಿಗಳಿಗೆ ಫೋನ್ ಮಾಡಿ ಮುಖ್ಯಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಿ ಇಂಥಾ ನಂಬರ್‌ಗೆ ಫೋನ್ ಮಾಡಬೇಕೆಂದು ಹೇಳಿದ್ದೆ. ಯಾರು ಯಾರು ಈ ಸಭೆಗೆ ಬರುತ್ತಾರೆ ಅಥವಾ ಬರುವುದಿಲ್ಲ ಎನ್ನುವುದರ ಬಗ್ಗೆ ಮಾತನಾಡಬೇಕೆಂದು ಹೇಳಿದ್ದೆ. ಸುಮಾರು

ನಾಲ್ಕುಸಾರಿ ಮುಖ್ಯಮಂತ್ರಿಗಳನ್ನು ಫೋನಿನಲ್ಲಿ ಸಂಪರ್ಕ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಅದು ಸಾಧ್ಯವಾಗಲಿಲ್ಲ. ಆದರೆ ಅವರೂ ಆ ಬಗ್ಗೆ ನನಗೆ ಏನೂ ಹೇಳಲಿಲ್ಲ.

ನಮ್ಮನ್ನು ಕೇಳದೆ ನಿರ್ಣಯವನ್ನು ಈ ಸಭೆಯಲ್ಲಿ ತಂದಮೇಲೆ ನಾನು ಏನು ಹೇಳುವುದು? ಈ ವಿಷಯವನ್ನು ಮುಖ್ಯಮಂತ್ರಿಗಳು ನನಗೆ ಹೇಳುವುದಕ್ಕೆ ಇಷ್ಟಪಡಲಿಲ್ಲವೆಂದು ಕಾಣುತ್ತದೆ ಸಂತೋಷ. ಈ ಸಮಸ್ಯೆ ಬಗೆಹರಿಯಬೇಕಾದರೆ ನಮ್ಮ ಪಕ್ಷವನ್ನು ಒಂದು ರೀತಿಯಿಂದ ಬೇರೆಕಡೆಗೆ ತೋರಿಸಿ ಈ ಪಕ್ಷದವರು ಇದಕ್ಕೆ ವಿರೋಧವಾಗಿದ್ದಾರೆ ಎಂಬ ಭಾವನೆ ಈ ದೇಶದಲ್ಲಿ ಬರತಕ್ಕಂಥ ಹುನ್ನಾರ ಇದರಲ್ಲಿ ಇದೆಯೇನೋ ಎನ್ನುವ ಶಂಕೆ ಬರುತ್ತದೆ. ನೀವು ಮಹಾಜನ್ ಕಮೀಷನ್ ವರದಿಗೆ ದಿನಾಂಕ 15.12.1967ರಲ್ಲಿ ಒಪ್ಪಿಗೆ ಕೊಟ್ಟಿದ್ದೀರಿ. ಆದರೆ ಈ ಮಹಾಜನ್ ಕಮಿಷನ್ನಿನ ವರದಿಯನ್ನು ಜಾರಿಗೆ ತರುವುದಕ್ಕೆ ಎರಡು ವರ್ಷಗಳಾದರೂ ನಿಮ್ಮ ಕೈಯಲ್ಲಿ ಆಗಲಿಲ್ಲ. ಇನ್ನೂ 10 ವರ್ಷಗಳಾದರೂ ಅದನ್ನು ಜಾರಿಗೆ ತರುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಈ ಅನುಮಾನ ನಿಮ್ಮಲ್ಲಿ ಇದೆ.

ಈ ಪ್ರಶ್ನೆಯನ್ನು ನಾವು ಯೋಚನೆ ಮಾಡಿದ್ದೇವೆ. ಈಗ ಯಾವುದೂ ಬೇಡ, ಗೋಟಾಳು. ರಾಜ್ಯ ಪುನರ್ವಿಂಗಡಣಾ ಕಾಯ್ದೆಯಲ್ಲಿ ಏನಿದೆ ಅದರ ಪ್ರಕಾರ ಯಾವ ಯಾವ ಭಾಗಗಳು ಎಲ್ಲೆಲ್ಲಿ ಇವೆ, ಅದೇ ಇರಬೇಕು. ಅದರಲ್ಲಿ ಏನೂ ಬದಲಾವಣೆ ಮಾಡಕೂಡದು. ಬದಲಾವಣೆ ಮಾಡಿದರೆ ಇದು ಮೈಮೇಲೆ ಬರುತ್ತದೆ. ಇದನ್ನು ಮಾಡಕೂಡದು. ಬಾರ್ಡರ್ ಹೊಂದಾಣಿಕೆ ಆದರೆ ಹೊಸೂರು, ತಾಳವಾಡಿ, ಫಿರ್ಕಾ, ಕಾಸರಗೋಡು ಮೊದಲಾದುವು ಮೈಸೂರು ರಾಜ್ಯಕ್ಕೆ ಬರಬೇಕಾಗುತ್ತದೆ. ಪಾಪ, ಕಾಸರಗೋಡಿನವರು ಗೋಳಾಡುತ್ತಿದ್ದಾರೆ.

ಇವೆಲ್ಲವುಗಳ ಬಗ್ಗೆ ಸಮಗ್ರ ದೃಷ್ಟಿ ಆಗುವವರೆಗೂ ಐಜಣ ಣಖಜ ಟಜಜಚಿಟಿರ ಜಠಿರ ಟುಜ ಎನ್ನುವ ಹಾಗೆ ಅದು ಹಾಗೆಯೇ ಇರಲಿ. ಈಗ ಅದಕ್ಕೆ ಕೈ ಹಾಕುವುದಕ್ಕೆ ಹೋಗಬೇಡಿ. ಅನೇಕ ಕಷ್ಟ ನಷ್ಟಗಳು ಈಗಾಗಲೇ ಆಗಿವೆ. ಹಿಂದೆ ಮಹಾಜನ್ ಕಮೀಷನ್ ನೇಮಕ ಮಾಡಿದಾಗ ಗೊಂದಲವುಂಟಾಗಿ ದಾವಣಗೆರೆಯಲ್ಲಿ ಚಿಕ್ಕಮಗಳೂರಿನಲ್ಲಿ ಇನ್ನೂ ಮುಂತಾದ ಕಡೆಗಳಲ್ಲಿ ಎಷ್ಟೋ ಮಕ್ಕಳು ಗುಂಡಿಗೆ ಸಿಕ್ಕು ಸತ್ತು ಹೋದರು. ಈ ದೃಷ್ಟಿಯಿಂದ ಎಸ್.ಆರ್.ಸಿ. ಆಕ್ಟ್ ಪ್ರಕಾರ ಈಗ ಇರತಕ್ಕ – Status Quo Ante ಇಡಬೇಕಾದ್ದು ಸೂಕ್ತ ಎಂದು ನಾವೆಲ್ಲರೂ ಮೀಟಿಂಗ್ ಮಾಡಿ ಯೋಚನೆಮಾಡಿ ಇದನ್ನು ತಂದಿದ್ದೇವೆ.

ಈ ನಮ್ಮ ನಿರ್ಣಯ ಮಹಾಜನ್ ಕಮೀಷನ್ನಿನ ವರದಿಗಿಂತ ಉತ್ತಮವಾದದ್ದು. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಒಪ್ಪಿಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ. ಮಹಾಜನ್ ಕಮೀಷನ್ನಿನ ವರದಿಯಿಂದ ನಮಗೆ ರಾಜ್ಯದ ಕೆಲವು

ಕನ್ನಡ ಭಾಗಗಳು ಬಿಟ್ಟು ಹೋಗುತ್ತವೆ. ನಮ್ಮ ನಿರ್ಣಯವನ್ನು ಒಪ್ಪಿಕೊಂಡರೆ ಈಗ ಹೇಗಿದೆಯೋ ಹಾಗೆಯೇ ಇರುತ್ತದೆ. ಇರುವ ಒಂದು ಇಂಚು ಜಾಗಕೂಡ ಹೋಗುವುದಿಲ್ಲ. ಹಣೆಗೆ ತಿಲಕ ಇಡಲು ಮಣ್ಣು ಕೊಡಬೇಕಾದ ಪರಿಸ್ಥಿತಿ ಬರುವುದಿಲ್ಲ. ನಮ್ಮ ನಿರ್ಣಯವನ್ನು ನೀವು ಯೋಚನೆ ಮಾಡುತ್ತೀರಿ ಎಂದು ನಾನು ತಿಳಿದಿದ್ದೇನೆ. ನಮ್ಮ ನಿರ್ಣಯ ನಿಮಗೆ ಸರಿಯಾಗಿಲ್ಲದಿದ್ದರೆ ಶ್ರೀಮಾನ್ ಶ್ರೀಕಂಠಯ್ಯನವರ ನಿರ್ಣಯವನ್ನು ಒಪ್ಪಿಕೊಳ್ಳಿರಿ. ಏತಕ್ಕೆಂದರೆ ಅವರು ಪ್ರೊಫೆಸರ್ ಆಫ್ ಪಾಲಿಟಿಕ್ಸ್. ಇತಿಹಾಸದಲ್ಲಿ ಗಡಿ ಸಮಸ್ಯೆ ಬಂದಾಗ ಯಾವರೀತಿ ಆಗಿದೆ, ಏನೇನು ಆಗಿವೆ ಎಂಬುದನ್ನು ತಿಳಿದುಕೊಂಡು ಅವರು ಅವರ ನಿರ್ಣಯವನ್ನು ತಂದಿದ್ದಾರೆ. ಇಲ್ಲಿ ನಾನು ನಿಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ.

ಹಿಂದೆ ಬರ್ಲಿನ್‌ನಲ್ಲಿ ಹಿಟ್ಲರ್ ಏನು ಮಾಡುತ್ತಿದ್ದ ಎಂದರೆ ಒಂದುಕಡೆ ಸೈನ್ಯವನ್ನು ಮಾರ್ಚ್‌ಮಾಡುವುದು, ಇನ್ನೊಂದುಕಡೆ ಚೇಂಬರ್‌ಲೀನ್ ಅವರನ್ನು ಅವರ ಚೇಂಬರ್‌ಗೆ ಕರೆಸಿಕೊಂಡು ರಾಜಿ ಮಾಡಿಕೊಳ್ಳೋಣ ಎಂದು ನಾಟಕವಾಡುತ್ತಿದ್ದ. ಈರೀತಿಯಾಗಿ ಪ್ರಪಂಚದ ಚರಿತ್ರೆಯಲ್ಲಿ ಬಹಳ ಬಹಳ ಕುತಂತ್ರಗಳು ನಡೆದಿವೆ. ಹೀಗೆ ಈ ಬಗ್ಗೆ ಕುತಂತ್ರ ಮಾಡದೆ ಇದನ್ನು ಸರಿಯಾದ ರೀತಿಯಲ್ಲಿ ಬಗೆಹರಿಸಬೇಕಾದರೆ ಒಂದು ಹೈಪವರ್ ಕಮೀಷನ್ ಅನ್ನು ನೇಮಕ ಮಾಡಬೇಕು ಎನ್ನುವ ಒಂದು ವಾದವನ್ನು ಇಡುವುದಕ್ಕೆ ಯೋಚನೆ ಮಾಡಬೇಕು. ಪೂರ್ವಾಪರ ಯೋಚನೆ ಮಾಡಿ ಇದನ್ನು ಮಾಡತಕ್ಕದ್ದು ಬಹಳ ಒಳ್ಳೆಯದು.

ಇನ್ನೊಂದು ವಿಷಯವನ್ನು ನಾನು ಹೇಳುತ್ತೇನೆ. ಇದನ್ನು ನೀವು ದೊಡ್ಡದಾಗಿ ಎಲ್ಲಾ ಸೇರಿಕೊಂಡು ಏನೇನೋ ಮಾಡುತ್ತೇವೆ ಎಂದು ಹೋಗಿ ಏನೋ ಆಗುವುದಕ್ಕಿಂತ ಸ್ವಲ್ಪ ಶಾಂತಚಿತ್ತರಾಗಿ ಯೋಚನೆ ಮಾಡಿ. ಇವೊತ್ತಿನ ದಿವಸ ಈ ರಾಜ್ಯದಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿ ಅಧಿಕಾರದಲ್ಲಿದ್ದಾರೆ. ಆದ್ದರಿಂದ ಅವರು ಬರೆದದ್ದೇ ಆದೇಶ – 'ಆರ್ಡರು'. ಅವರು ಏನು ಬರೆದರೂ ನಾವು ಅದನ್ನು ಅನುಭವಿಸುತ್ತೇವೆ ಎನ್ನುವುದಕ್ಕಿಂತ Act of persuation ನಿಂದ ಹೋಗುವಂಥಾದ್ದು ಬಹಳ ಮುಖ್ಯವಾದದ್ದು. ಈಗ್ಗೆ ಎರಡು ವರ್ಷಗಳ ಹಿಂದೆಯೇ ನಾನು ಹೇಳಿದ್ದೇನೆ. ಇದು ಎಲ್ಲರಿಗೂ ಸೇರಿದೆ ಎನ್ನುವ ಭಾವನೆ ಬರಬೇಕಾದರೆ ಇಲ್ಲಿ ಒಂದು ಸಂಯುಕ್ತ ಮಂತ್ರಿಮಂಡಲ ರಚನೆಯಾಗಬೇಕು. ಇದು ನಿಮ್ಮ ಕೈಯಲ್ಲಿ ಆಗುವುದಿಲ್ಲ. ನಿಮಗೆ ಜಾಂಡೀಸ್ ಬಂದು ಹೋಗಿದೆ. ನಿಮ್ಮಿಂದ ಈ ಕಾರ್ಯ ಮಾಡುವುದಕ್ಕಾಗುವುದಿಲ್ಲ.

ನೀವು ನಿಮ್ಮ ಜಾಗವನ್ನು ಬಿಟ್ಟು ಇಳಿದರೆ ರಾಜ್ಯಕ್ಕೆ ನೀವು ದೊಡ್ಡ ಉಪಕಾರ ಮಾಡುತ್ತೀರಿ. ನೀವು ಇದಕ್ಕಿಂತ ಹೆಚ್ಚಿನ ಉಪಕಾರ ಮಾಡಬೇಕಾದ್ದಿಲ್ಲ. Trust begets trust, love begets love and hatred begets hatred. ಎನ್ನುವ

ಹಾಗೆ ನಿಮಗೆ ಕೇಂದ್ರ ಸರ್ಕಾರದಲ್ಲಿ ಸರಿಯಾದ ಹೊಂದಾಣಿಕೆ ಇಲ್ಲ. ನಮಗೆ ತೊಂದರೆ ಆಗುತ್ತದೆ. ಏತಕ್ಕೋಸ್ಕರ ಈ ರಾಜ್ಯವನ್ನು ಕಷ್ಟಕ್ಕೆ ಸಿಲುಕಿಸುತ್ತೀರಿ? ಯಾರಾದರೂ ಮಹನೀಯರು ನಮ್ಮ ಸ್ಥಾನಕ್ಕೆ ಬರಬಹುದು. ಅನುಕೂಲಕರವಾದ ವಾತಾವರಣ ಉಂಟು ಮಾಡುವಂತಹವರು ಬರಲಿ.

ಈಗ ನಾನು ಹೇಳುವುದು ಏನೆಂದರೆ ಈಗ ನೀವು ವಾದಗ್ರಸ್ಥರಾದ ಒಬ್ಬ ವ್ಯಕ್ತಿಯಾಗಿದ್ದೀರಿ. ನೀವು ಬೆಳಗಾವಿನಲ್ಲಿ ಭಾಷಣಮಾಡಿ ನಿಮ್ಮ ಅಧಃಪತನಕ್ಕೆ ದಾರಿ ಮಾಡಿಕೊಂಡಿರಿ. ಇವೊತ್ತು ಈ ದೇಶವನ್ನು ಉಳಿಸಬೇಕೆಂಬ ಆಸೆ, ಆಕಾಂಕ್ಷೆ ನಿಮಗೆ ಇದ್ದರೆ ಈಗಲೇ ನಿಮ್ಮ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟುಬಿಡಿ ಎಂದು ಕೇಳುತ್ತೇನೆ.

ಇನ್ನೊಂದು ವಿಚಾರ ಹೇಳುತ್ತೇನೆ: ಇವತ್ತು ಸರ್ವಪಕ್ಷಗಳ ನಿಯೋಗ ಹೋಗಬೇಕೆಂದು ಹೇಳುತ್ತಿದ್ದಾರೆ. ಇದರಿಂದ ಏನು ಸಾಧಿಸುತ್ತಾರೆಂದು ನನಗಂತೂ ಅರ್ಥವಾಗುತ್ತಾ ಇಲ್ಲ. ಇವತ್ತು ಅಲ್ಲಿ ನಮ್ಮ ಸಂಸತ್ ಸದಸ್ಯರು ಇದ್ದೇ ಇರುತ್ತಾರೆ. ಸರ್ವಪಕ್ಷಗಳು ಎಂದು ಮಾಡುವುದಕ್ಕಿಂತ ನೀವು ಅಲ್ಲಿ ಒಂದು ತಿಂಗಳು ಕ್ಯಾಂಪ್ ಮಾಡಿ; ಒಂದು ಆಸನ ಹಾಕಿಕೊಂಡು ಕೂತುಕೊಂಡುಬಿಡಿ. ನಿಮಗೆ ಆ ರೀತಿ ಮಾಡತಕ್ಕ ಶಕ್ತಿ ಇದೆ. ಅಲ್ಲಿ ಹೋಗಿ ಕೇಳಿ. ಆದ್ದರಿಂದ ನಾನಾದರೂ ಹೇಳುತ್ತೇನೆ – ಇದು ಬಹಳ ದುರ್ದೈವದ ಸಂಗತಿ. ಇದನ್ನು ಬೆಳೆಸುವುದಕ್ಕೆ ಬಿಡಬೇಡಿ.

ಇವತ್ತು ಹುಬ್ಬಳ್ಳಿ, ಧಾರವಾಡದ ಮಕ್ಕಳು ಇದರಿಂದ ಸಂಕಟಕ್ಕೆ ಗುರಿಯಾಗಿದ್ದಾರೆ. ಇದರಿಂದ ಕಷ್ಟಕ್ಕೆ ಸಿಲುಕಿದವರು ಮಕ್ಕಳು ಮತ್ತು ನಿರಪರಾಧಿ ಜನಸಾಮಾನ್ಯರು. ಯಾರು ಇದಕ್ಕೆ ಕಾರಣಕರ್ತರು ಇದ್ದಾರೋ ಅವರು ಇದಕ್ಕೆ ಈಡಾಗುವುದಿಲ್ಲ. ಈಡಾಗುವುದು ನಿರಪರಾಧಿಗಳು. ಆದ್ದರಿಂದ ಇದನ್ನು ಬಗೆಹರಿಸಲು ಕೂಡಲೇ ಮುಖ್ಯಮಂತ್ರಿಯವರು ಹೋಗಬೇಕು. ಇದರಲ್ಲಿ ಇಜ್ಜತ್ ಅಥವಾ ಏನು ಇದೆ? ಅದನ್ನು ಬಿಟ್ಟು ಅಲ್ಲಿ ಹೋಗಿ ಕೂತುಕೊಂಡು, ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಿ ಇದನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಬೆಳಗಾಂನಲ್ಲಿರತಕ್ಕ ಜನರಾಗಲಿ, ಉತ್ತರ ಕರ್ನಾಟಕದ ಜನರಾಗಲಿ – ಯಾರೇ ಆದರೂ ತಪ್ಪು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲ. ನಾನು ಅರಿಕೆ ಮಾಡಿಕೊಳ್ಳುವುದು ಏನೆಂದರೆ ಅವರ ಸಂಘಟನೆಯಲ್ಲಿ ನಾವೂ ಭಾಗಿಯಾಗಿ ಅವರಿಗೆ ಏನು ಸಹಾಯ ಬೇಕಾಗುತ್ತದೆ, ಅದನ್ನು ನಮ್ಮ ಪಕ್ಷದವರು ಕೊಡಲು ತಯಾರಾಗಿದ್ದೇವೆ. ಆದರೆ ನಮ್ಮ ಸಹಕಾರವನ್ನು ಮತ್ತು ಸಹಾಯವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಮನಸ್ಸಿಲ್ಲ ಎಂಬುದನ್ನು ಹೇಳಿ ಈ ನಿರ್ಣಯವನ್ನು ಅಂಗೀಕರಿಸಬೇಕೆಂದು ಸೂಚಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

* * *



WD-H-035-12

# ಗ್ರಾಮ ಪಂಚಾಯ್ತಿ ಚುನಾವಣೆ ಪ್ರಜಾಪ್ರಭುತ್ವದ ಚರ್ಚೆ

15, ಏಪ್ರಿಲ್ 1968

ಶ್ರೀ ಎಚ್. ಸಿದ್ದವೀರಪ್ಪ: ಸ್ವಾಮಿ ಅಧ್ಯಕ್ಷರೇ, ಮೊನ್ನೆ ತಾನೇ ಗ್ರಾಮ ಪಂಚಾಯ್ತಿ ಚುನಾವಣೆ ನಡೆಯಿತು. ಇನ್ನೂ ಕೆಲವು ಕಡೆ ನಡೆಯುತ್ತಾ ಇದೆ. ನಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ರಾಜ್ಯಾಂಗದಲ್ಲಿ 40ನೇ ವಿಧಿಯಲ್ಲಿ Organisation of village Panchayath ಎಂಬುದರಲ್ಲಿ ಈರೀತಿ ನಮೂದಿಸಿದ್ದಾರೆ. ಅದರಲ್ಲಿ:

The state shall take steps to organise Village Panchayats and endow them with such powers and authority, as may be necessary for them to function as units of Self-Government.

ಇದನ್ನು ಯಾವ ಉದ್ದೇಶದಿಂದ ಕೊಟ್ಟಿದ್ದಾರೆಂದರೆ; ಈ ದೇಶದಲ್ಲಿ ಗ್ರಾಮ ಪಂಚಾಯ್ತಿಗಳು ಪ್ರಜಾಪ್ರಭುತ್ವದ ಸರಿಯಾದ ಮಾರ್ಗದಲ್ಲಿ ಹೋಗಬೇಕಾದರೆ, ಪ್ರಜಾಪ್ರಭುತ್ವದ ತಳಹದಿ ಸರಿಯಾಗಿರಬೇಕಾದರೆ, ತಕ್ಕ ಅಧಿಕಾರ ಇರಬೇಕು ಹಾಗೂ ಗ್ರಾಮ ಪಂಚಾಯ್ತಿಗಳು ಬಹಳ ಸುಗಮವಾಗಿ ನಡೆಯಬೇಕು. ಹೀಗಾಗಿ ಜನಗಳು ಸ್ವಯಂ ಪ್ರೇರಿತರಾಗಿ ತಮಗೆ ಬೇಕಾದ ವ್ಯಕ್ತಿ – ಸದಸ್ಯರನ್ನು ಚುನಾವಣೆಯಲ್ಲಿ ಆಯ್ಕೆ ಮಾಡಿಕೊಳ್ಳಬಹುದು. ಈ ದೃಷ್ಟಿಯಿಂದ ಗ್ರಾಮ ಪಂಚಾಯ್ತಿಗಳಿಗೆ ರಾಜ್ಯಾಂಗದಲ್ಲಿ ವಿಶೇಷ ಗಮನ ನೀಡಲಾಗಿದೆ. ಸರ್ಕಾರದವರು ಏಳು ವರ್ಷಗಳ ಕಾಲ ಈ ಗ್ರಾಮಪಂಚಾಯ್ತಿ ಚುನಾವಣೆಗಳನ್ನು ಮಾಡಲಿಲ್ಲ.

1967ನೇ ಫೆಬ್ರವರಿಯಲ್ಲಿ ಸಾರ್ವಜನಿಕ ಚುನಾವಣೆಯಾದ ಮೇಲೆ ಕಣ್ಣುಬಿಟ್ಟು ಈಗ ಗ್ರಾಮಪಂಚಾಯ್ತಿ ಚುನಾವಣೆ ಮಾಡುತ್ತೇವೆಂದು ಹೊರಟಿದ್ದಾರೆ. ಅದನ್ನು ಈಗ ಏನು ಮಾಡುತ್ತಿದ್ದಾರೆಂದರೆ ಈಗಾಗಲೇ ಮಾಡಿರುವ, ಮಾಡುತ್ತಿರುವ ಅನ್ಯಾಯ, ಅತ್ಯಾಚಾರ, ಹಸ್ತಕ್ಷೇಪಗಳನ್ನು ನೋಡಿದರೆ ಇವರಿಗೆ ಯಾವ ಶಿಕ್ಷೆ ಕೊಟ್ಟರೂ ತೀರದು.

ಪ್ರಜಾಪ್ರಭುತ್ವ ಕೊಲೆಯನ್ನು ಈ ಗ್ರಾಮಪಂಚಾಯ್ತಿ ಚುನಾವಣೆಯಲ್ಲಿ ಮಾಡಿದ್ದಾರೆ. ಅದನ್ನು ವಿವರವಾಗಿ ಹೇಳುವುದಕ್ಕೆ ಕಾಲವಿಲ್ಲ. ಒಂದೆರಡು ವಿಷಯಗಳನ್ನು ಮಾತ್ರ ಅವರ ಗಮನಕ್ಕೆ ತರುತ್ತೇನೆ. ಈ ಗ್ರಾಮ ಪಂಚಾಯ್ತಿಗಳ ಚುನಾವಣೆಗಳಾದಮೇಲೆ ಅವರಷ್ಟಕ್ಕೆ ಅವರನ್ನು ಬಿಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಅಧಿಕಾರಿಗಳಿಂದ ಹಸ್ತಕ್ಷೇಪ ಮಾಡದೇ ಇದ್ದಿದ್ದರೆ, ಪ್ರಜಾಪ್ರಭುತ್ವದಲ್ಲಿ ಜನಗಳೇ ಅವರಿಗೆ ಬೇಕಾದಂಥವರನ್ನು ಆರಿಸುತ್ತಿದ್ದರು. ಈ ಪ್ರಕಾರವೇ ಆಡಳಿತವನ್ನು ಮಾಡುತ್ತಿದ್ದರು.

ಯಾವುದೇ ಒಂದು ಗ್ರೂಪ್ ಅಥವಾ ಗುಂಪು ಬೆಳೆಯಬೇಕೆಂಬ ದೃಷ್ಟಿಯಿಂದ ಅದಕ್ಕೊಂದು ತಳಹದಿ ಹಾಕಿ ಕೆಲವು ಕಡೆಗಳಲ್ಲಿ ಒಳ್ಳೆಯ ಜನರು ಆರಿಸಿ ಬಾರದೇ ಇರುವ ರೀತಿಯಲ್ಲಿ ಅವರ ಅರ್ಜಿಗಳನ್ನು ವಜಾ ಮಾಡಿದ್ದಾರೆ. ಇದು ಅವರಿಗೆ ಆಶ್ಚರ್ಯ ಆಗಬಹುದು, ಕೆಲವು ಕಡೆಗಳಲ್ಲಿ ಫೋರ್ಜರಿ ಮಾಡುತ್ತಿದ್ದಾರೆ. ತನ್ನ ಉಮೇದುವಾರಿಕೆಯನ್ನು ವಾಪಾಸು ತೆಗೆದುಕೊಂಡಿದ್ದೇನೆಂದು ಹೇಳಿದರೂ ಅರ್ಜಿಯೇ ಕೊಟ್ಟಿರುವುದಿಲ್ಲ. ಅಭ್ಯರ್ಥಿಗಳ ಹೆಸರಲ್ಲಿ ಹೆಬ್ಬೆಟ್ಟು ಗುರುತು ಹಾಕಿಸಿದ್ದಾರೆ. ಅರ್ಜಿಗಳನ್ನು ವಾಪಾಸು ತೆಗೆದುಕೊಂಡು ತಮಗೆ ಬೇಕಾದವರನ್ನು ಅಲ್ಲಿ ನಿಲ್ಲಿಸಿದ್ದಾರೆ. ಮಹತ್ವವಾದ 'ಇಂಡಿಯನ್ ಪೀನಲ್ ಕೋಡ್' ಸೆಕ್ಷನ್ನನ್ನೂ ಕೂಡ ತಮ್ಮ ಅಧಿಕಾರಿಗಳಿಂದ ಮೀರಿಸಿ ನಡೆಸಿದ್ದಾರೆ. ಅಲ್ಲಿ ಸಣ್ಣಸಣ್ಣ ಅಧಿಕಾರಿಗಳು ಮತ್ತು ಅವರ ಮೇಲೆ ಇರತಕ್ಕ ದೊಡ್ಡದೊಡ್ಡ ಅಧಿಕಾರಿಗಳಿದ್ದರೂ, ಅಲ್ಲಿನ ಸ್ಥಳೀಯ ಕಾಂಗ್ರೆಸ್ ಮುಖಂಡರ ಒತ್ತಡದಿಂದ ಆರೀತಿ ಮಾಡಿ ಇವತ್ತು ಕೆಲವು ಕಡೆಗಳಲ್ಲಿ ನಿಷ್ಪಕ್ಷಪಾತವಾಗಿ ಚುನಾವಣೆ ಆಗದ ರೀತಿಯಲ್ಲಿ ತಡೆ ಹಿಡಿದಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಈ ಗ್ರಾಮಪಂಚಾಯ್ತಿ ಚುನಾವಣೆಯಲ್ಲಿ ಅತಿ ಮುಖ್ಯವಾಗಿ ಆಗಿರತಕ್ಕ ಅನ್ಯಾಯಗಳು ಎಂದರೆ, ಅಲ್ಲಲ್ಲಿ ಗ್ರೂಫ್‌ಗಳನ್ನು ಮಾಡಿರುವುದು ಬಹುಮುಖ್ಯವಾದದ್ದು.

ಒಂದೇ ಹಳ್ಳಿಯಲ್ಲಿ ಈಶಾನ್ಯ ದಿಕ್ಕಿನಲ್ಲಿ ಒಂದು ಗ್ರೂಪ್, ವಾಯುವ್ಯ ದಿಕ್ಕಿನಲ್ಲಿ ಮತ್ತೊಂದು ಗ್ರೂಪ್, ಇನ್ನೊಂದು ದಿಕ್ಕಿನಲ್ಲಿ ಇನ್ನೊಂದು ಗುಂಪು, ಈ ಮಧ್ಯ ಮತ್ತೊಂದು ಮೂಲೆಯಲ್ಲಿ ಬರೀ ಮನೆಗಳನ್ನು ಆರಿಸಿಕೊಂಡು ಅಲ್ಲಿಯೇ ಗ್ರೂಪ್‌ಗಳನ್ನು ಮಾಡಿರುವ ನಿದರ್ಶನಗಳು ಬೇಕಾದಷ್ಟು ಇವೆ. ಇದರ ಬಗ್ಗೆ ನಮ್ಮ ಹೈಕೋರ್ಟಿನಲ್ಲಿ 340 ರಿಟ್ ಅರ್ಜಿಗಳು ಬಿದ್ದಿವೆ ಎಂಬುದಾಗಿ ಕೇಳಿದ್ದೇನೆ. ಇವರ ಮೇಲೆ ಜನಗಳ ಆಪಾದನೆಗಳನ್ನು ಮತ್ತು ಅಫಿಡವಿಟ್‌ಗಳನ್ನು ಹಾಕಿದ್ದಾರೆ. ಇಂತಿಂಥ ಮಹನೀಯರುಗಳು ಕಾಂಗ್ರೆಸ್ಸಿನವರಿಗೆ ಓಟು ಕೊಟ್ಟಿಲ್ಲವೆಂಬು ನಮ್ಮನ್ನು ಸೋಲಿಸಬೇಕೆಂಬ ದೃಷ್ಟಿಯಿಂದ ಈರೀತಿ ಹಸ್ತಕ್ಷೇಪಗಳನ್ನು ಮಾಡಿದ್ದಾರೆಂದು ಪ್ರಮಾಣ ಪತ್ರಗಳನ್ನು ಮತ್ತು ಅಫಿಡವಿಟ್ಟುಗಳನ್ನೂ ಹೈಕೋರ್ಟಿನಲ್ಲಿ ಅನೇಕರು ಕೊಟ್ಟಿದ್ದಾರೆ. ಅದು, ಏನು ತೋರಿಸುತ್ತದೆ, ಈ ವಿಷಯ ಮಾನ್ಯ ಮಂತ್ರಿಗಳಿಗೂ ಗೊತ್ತಿದೆ.

The Divisional Commisioner is the final authority for the formation of this ಎಂಬುದು. ಒಂದು ಗ್ರಾಮದಲ್ಲಿ ಮೊದಲು ಡಿವಿಜನಲ್

ಕಮೀಷನರ್ ಒಂದು ಫೈನಲ್ ಆರ್ಡರ್ ಮಾಡಿದ್ದರೂ, ಇವರು ಬರುವುದಿಲ್ಲವೆಂದು ಗೊತ್ತಾದ ಮೇಲೆ ಇವರು ಹಸ್ತಕ್ಷೇಪ ಮಾಡುವುದಿಲ್ಲವೆಂದು ಹೇಳಿದರು. ನನ್ನ ಆರ್ಡರ್ ಆಗಿದೆ, ಯಾರೇನೂ ಮಾಡುವುದಿಲ್ಲ, ಇವರಿಗೆ ಅಧಿಕಾರ ಇಲ್ಲದಿದ್ದರೂ ಮತ್ತೆ ರಿವೈಜ್ ಮಾಡಿ ಆರ್ಡರ್ ಕೊಟ್ಟಿದ್ದಾರೆಂದು ಮಂತ್ರಿಗಳು ಹೇಳುತ್ತಾರೆ. ಈ ಮಾತು ಸುಳ್ಳು. ಬೇಕಾದರೆ ಗ್ರಾಮದ ಹೆಸರು, ಯಾವ ತಾರೀಖು ಎಲ್ಲವನ್ನೂ ಇಲ್ಲಿ ಹೇಳಿ ರುಜುವಾತು ಮಾಡುತ್ತೇನೆ.

ಈಗಾಗಲೇ ನನ್ನ ಕ್ಷೇತ್ರಕ್ಕೆ ಹೋಗಿ ಬಂದಿರುವ ಕಾರಣ, ನನಗನ್ನಿಸುತ್ತದೆ. ಅನೇಕ ಗ್ರಾಮಗಳಲ್ಲಿ ಚುನಾವಣೆ ನಡೆಯಬೇಕಾದರೆ ತಮ್ಮ ಕಡೆಯವರಿಗೆ ಓಟು ಬರುವುದಿಲ್ಲವೆಂದು ಕಂಡಾಗ, ನಾಳೆ ಬೆಳಗ್ಗೆ ಚುನಾವಣೆ ಎಂದರೆ, ಇವತ್ತು ರಾತ್ರಿಯೇ ಬಣವೆಗಳಿಗೆ ಬೆಂಕಿ ಹಚ್ಚಿದ್ದಾರೆ. ಇವರಿಗೆ ಯಾರ್ಯಾರು ಸಾರ್ವತ್ರಿಕ ಚುನಾವಣೆಯಲ್ಲಿ ಸಹಾಯ ಮಾಡಿದ್ದರೋ ಅಂತಹ ಅಧಿಕಾರಗಳನ್ನು ಅಲ್ಲಿಯೇ ಇಟ್ಟುಕೊಂಡಿದ್ದಾರೆ. ಅಂತಹವರನ್ನೂ ಕೂಡ ಇದುವರೆವಿಗೂ ಎಲ್ಲಿಗೂ ವರ್ಗ ಮಾಡಿಲ್ಲ. ಅವರಿಂದ ಮಾಡಿಸಬೇಕಾದ ಕೆಲಸಗಳನ್ನು ಮಾಡಿಸುತ್ತಿದ್ದಾರೆ ಬಹುಶಃ ಎಲ್ಲಾ ಜಿಲ್ಲೆಗಳಲ್ಲಿಯೂ ಈ ರೀತಿಯೇ ನಡೆದಿದೆ ಎಂದು ಹೇಳಬಹುದು. ಹೀಗೆಯೇ ಮಾಡುತ್ತಿದ್ದರೆ, ನಾನು ಹೇಳುತ್ತೇನೆ. ಸಾರ್ವತ್ರಿಕ ಚುನಾವಣೆ ಏನಾದರೂ ಗ್ರಾಮಪಂಚಾಯ್ತಿ ಚುನಾವಣೆಯಾದನಂತರ ಆಗಿದ್ದರೆ, ನಿಜವಾಗಿ ಇವರು ಈ ಪ್ರಮಾಣದಲ್ಲಿ ಈ ಅಧಿಕಾರದಲ್ಲಿ ಇರುತ್ತಿರಲಿಲ್ಲವೆಂದು. 127 ಅಲ್ಲ, ಅದರಲ್ಲಿ ಅರ್ಧಕೂಡ ಬರುತ್ತಿದ್ದರೋ ಇಲ್ಲವೋ ಎಂದು ಹೇಳಬಹುದು. ಅಷ್ಟೊಂದು ಹಸ್ತಕ್ಷೇಪ ಮಾಡುತ್ತಿದ್ದಾರೆ.

ಈಗ ಮಾಡಿದ್ದು ಆಯಿತು, ಇನ್ನು ಮುಂದೆ ಮಾಡಬೇಡಿ ಎಂದು ನಾನು ಈ ಪ್ರಜಾಪ್ರಭುತ್ವದ ಉಳಿಗಾಲದ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅಧಿಕಾರಿಗಳ ಹಸ್ತಕ್ಷೇಪವನ್ನೂ ಸಹ ಕೂಡಲೇ ನಿಲ್ಲಿಸಬೇಕು.

**ರೆಗ್ಯುಲೇಟೆಡ್ ಮಾರ್ಕೆಟ್ ಸದಸ್ಯ ನಾಮಕರಣದ ಚರ್ಚೆ:**

ಸಹಕಾರ ಸಂಘಗಳ ನಾಮಕರಣ ವಿಚಾರದಲ್ಲಿ ನನಗೆ ಬಹಳ ಪ್ರಿಯವಾದಂತಾದ್ದು ಅಂದರೆ ರೆಗ್ಯುಲೇಟೆಡ್ ಮಾರ್ಕೆಟ್. ಈ ರೆಗ್ಯುಲೇಟೆಡ್ ಮಾರ್ಕೆಟ್ಟಿಗೋಸ್ಕರ ನಮ್ಮ ರೈತ ಬೆಳೆದಂತಹ ಫಸಲಿಗೆ ಅನ್ಯಾಯವಾಗದ ರೀತಿಯಲ್ಲಿ ಧಾರಣೆ ಮಾಡಿಕೊಟ್ಟರೆ, ಮಾನ್ಯ ಶ್ರೀ ನಾಡಗೌಡ ಅವರ ಪುತ್ಥಳಿಯನ್ನು ಎಲ್ಲಾ ರೆಗ್ಯುಲೇಟೆಡ್ ಮಾರುಕಟ್ಟೆಗಳಲ್ಲೂ ಇಡಲಾಗುವುದು. ನಿಮ್ಮಲ್ಲಿ ಆ ಶಕ್ತಿ ಇದೆಯೇ? ಹೆಸರಿಗೆ ಮಾತ್ರ ರೆಗ್ಯುಲೇಟೆಡ್ ಮಾರ್ಕೆಟ್ ಮಾಡಿದ್ದೇವೆ ಎಂದು ತೋರಿಸುತ್ತಿದ್ದೀರಿ. ಇದನ್ನು ಜಾರಿಗೆ ತರುವಾಗ ಇಣುಕಿ ಇಣುಕಿ ಮಾಡುತ್ತಿದ್ದೀರಿ. ಇಂತಹ ಆ್ಯಕ್ಟ್ ಹಿಂದೂಸ್ಥಾನದಲ್ಲಿ ಎಲ್ಲಿಯೂ ಇಲ್ಲ. ಬಹಳ ಅತ್ಯುತ್ತಮವಾದಂತಹ ಕಾನೂನನ್ನು ಮಾಡಿದ್ದೀರಿ. ಆದರೆ ಅದನ್ನು ಜಾರಿಗೆ ಕೊಡುವ ಧೈರ್ಯ ಇವರಿಗೆ ಇಲ್ಲ. ಪಕ್ಕಲು

ಮನಸ್ಸು. ನಿಜವಾಗಿ ನಿಮಗೆ ಅದನ್ನು ಜಾರಿಗೆ ಕೊಡುವ ಶಕ್ತಿ ಇಲ್ಲ. ಏನೋ ಇನ್ನೂ ರೂಲ್ಸ್ ಮಾಡಬೇಕೆಂದು ಹೇಳುತ್ತೀದ್ದೀರಿ. ಅಂತೂ ಏನೋ ಮಾಡಿ ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯನ್ನು ರಚನೆ ಮಾಡಿದ್ದೀರಿ. Better late than never.

**Sri P.M.NADGOUDA**-You should congratulate the Government on the constitution of the Davangere Regulated Market Committee.

ನಿಮ್ಮ ಕ್ಷೇತ್ರದಲ್ಲಿ ಮಾಡಿದ್ದನ್ನು ಒಂದನ್ನಾದರೂ ಕೋಟ್ ಮಾಡಿದಿರಿ.

**ಶ್ರೀ ಎಚ್. ಸಿದ್ದವೀರಪ್ಪ:** ಹಿಂದೆ ಏನು ಮಾಡಿದ್ದರೋ ಅದನ್ನೇ ನೀವು ಮಾಡುತ್ತಿದ್ದೀರಿ. ಹೊಸದಾಗಿ ಏನಾದರೂ ಮಾಡಿದ್ದರೆ, ಅದನ್ನು ಆತ್ಮೀಯತೆಯಿಂದ ವಂದಿಸುತ್ತಿದ್ದೆನು. ಈ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಒಬ್ಬ ಸದಸ್ಯನನ್ನು ನಾಮಕರಣ ಮಾಡಿದ್ದೀರಿ. ಒಬ್ಬ ವರ್ತಕರನ್ನು ನಾಮಕರಣ ಮಾಡಿದ್ದೀರಿ. ಅಲ್ಲಿ 5 ಜನ ಪ್ರತಿನಿಧಿಗಳು ಇದ್ದಾರೆ. ಯಾವ ಸ್ಪೆಷಲ್ ಅರ್ಹತೆ ಇದೆಯೆಂದು ಮತ್ತೊಬ್ಬರನ್ನು ನಾಮಕರಣ ಮಾಡಿದ್ದೀರಿ? ಮಾನ್ಯ ಶ್ರೀ ವಿ.ಎಲ್. ಶಿವಪ್ಪನವರು ತಿಪಟೂರಿನಿಂದ ಬಂದಿರುವ ಸದಸ್ಯರು. ಅವರಿಗೆ ಇದರ ಸೆಕೆ ಬಹಳ ಗೊತ್ತು. ಯಾರಿಗೋ ನಾಮಕರಣ ಮಾಡಬೇಕೆಂಬ ಅಭಿಪ್ರಾಯ ನಿಮಗೆ ಇರಬೇಕು. ಅವರನ್ನು ಮಾಡದೇ ನಿಮಗೆ ಬೇಕಾದಂಥವರಿಗೆ ನಾಮಕರಣ ಮಾಡಿದ್ದರೂ ನಮ್ಮದು ಏನೂ ನಡೆಯುತ್ತಾ ಇಲ್ಲ. ರೈತರು ಬಹಳ ಬಲವಾಗಿದ್ದಾರೆ. ಇನ್ನೂ ಕೆಲವುಕಾಲ ಬೇಕು. ಇದುವರೆವಿಗೆ ಯಾರು ಹತ್ತಿಕ್ಕಿದ್ದರೂ ಅದನ್ನು ತಪ್ಪಿಸಿಕೊಂಡು ಇರುತ್ತಿದ್ದಿರಿ. ಈಗಾಗಲೇ 100 ಅಡಿ ಮೇಲಕ್ಕೆ ಹಾರಿ ನಿಮ್ಮನ್ನು ಜಿಗುಟುವ ಶಕ್ತಿ ನಮ್ಮ ರೈತರಿಗೆ ಬರುತ್ತಾ ಇದೆ. ನಿಜವಾಗಿ ನಾವು ಅದನ್ನು ತಡೆದು ನಿಲ್ಲಿಸುತ್ತಿದ್ದೇವೆ.

ತಿಪಟೂರಿನ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಅಧಿಕಾರಿಗಳ ಸಂಬಳವನ್ನು ನಿಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ಏರಿಸಿದ್ದೀರಿ. 125ರಿಂದ 600ರವರೆಗೆ ಸಂಬಳ ಸಾರಿಗೆ ಇದ್ದರೆ, 13.3.1967ರಲ್ಲಿ ಅವರ ಅವಧಿ ಮುಗಿದಿದ್ದರೂ 11.3.1967ರಿಂದ 600 ರೂಪಾಯಿ ಸಂಬಳವನ್ನು ಕೊಡುತಿದ್ದೀರಿ. ಇದಕ್ಕೆ ಕಾರಣವೇನೆಂದರೆ, ಅಲ್ಲಿನ ಅಧಿಕಾರಿಗಳು ನಿಮಗೆ ಬೆಂಬಲಕೊಡಲಿ ಎಂದು ಆರೀತಿ ಮಾಡುತ್ತಿದ್ದೀರಿ.

ನಮ್ಮ ಅಧಿಕಾರಿಗಳು ಇಂತಹ ಅನ್ಯಾಯವನ್ನು ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಆ ಪಾಪವನ್ನು ಅವರ ಕೈಲಿ ಮಾಡಿಸುತ್ತಿದ್ದೀರಿ. ಅವನಿಂದ ನಿಮಗೆ ಶಾಹಬ್ಬಾಸ್‌ಗಿರಿ ಬೇಕು. ನಿಮ್ಮ ಶಿಫಾರಸ್ಸು ಇರುತ್ತದೆ. ಮಾನ್ಯಶ್ರೀ ಚಿಕ್ಕೇಗೌಡರು ವಿಜಿಲೆನ್ಸ್ ಕಮೀಷನ್ ಬಗ್ಗೆ ಒಂದು ದೂರನ್ನು ಕೊಟ್ಟಿದ್ದಾರೆ. ಅದನ್ನು ಮುಚ್ಚಿಸಬೇಕಾದರೆ ನಿಮಗೆ ಸೆಕ್ರೇಟರಿ ಸಹಾಯಬೇಕು. ಅದನ್ನು ಮಾಡುವುದು ಸರಿಯೇ? ಇವರಿಗೆ

ಇರತಕ್ಕ ಅಧಿಕಾರವನ್ನು ಮೊಟಕು ಮಾಡಕೂಡದು. ಆರೀತಿಯಾಗಿ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯಲ್ಲಿ ಅನ್ಯಾಯವಾಡಿದೆ. ಅದರಿಂದ ಅಲ್ಲಿ ಬಹಳ ಬದಲಾವಣೆಗಳು ಆಗಬೇಕಾಗಿದೆ.

ಇವತ್ತಿನವರೆಗೂ ಒಂದು 5 – 6 ಕೆ.ಜಿ. ಹತ್ತಿಯನ್ನು ಎಕ್ಸ್‌ಟ್ರಾ ಹಾಕಿಕೊಳ್ಳುತ್ತಿದ್ದಾರೆ. ಅದಕ್ಕೆ ಬೆಲೆ ಎಷ್ಟು ಗೊತ್ತಿದೆಯೇ? ಪ್ರತಿ ವರ್ಷಕ್ಕೆ 6 ಕೋಟಿ ರೂಪಾಯಿಗಳ ದಾಸ್ತಾನು ಆಗುತ್ತಿದೆ. ಇದರಲ್ಲಿ ರೈತರ ದುಡ್ಡು ವರ್ಷಕ್ಕೆ 50ಲಕ್ಷ ರೂಪಾಯಿಗಳು ಪೋಲಾಗುವುದನ್ನು ಕೂಡಲೇ ನಿಲ್ಲಿಸಬೇಕು. ಆ ಕೆಲಸವನ್ನು ಮಂತ್ರಿಗಳು ಜಾಗ್ರತೆಯಾಗಿ ಮಾಡುತ್ತಾರೆಂದು ನಾನು ನಂಬುತ್ತೇನೆ. ಇನ್ನು ಹೆಚ್ಚಿಗೆ ಈ ವಿಚಾರದಲ್ಲಿ ಹೇಳಲು ನನಗೆ ಅವಕಾಶ ಇಲ್ಲ.

**ಸಹಕಾರ ಸಂಘಗಳ ಪರಿಸ್ಥಿತಿ:**

ಇನ್ನು ಸಹಕಾರ ಸಂಘಗಳ ವಿಚಾರವಾಗಿ ನಮ್ಮ ಮಾನ್ಯ ಸ್ನೇಹಿತರು ಹೇಳಿದ್ದಾರೆ. ನಿಮ್ಮ ಗಮನಕ್ಕೂ ಒಂದೆರಡು ವಿಷಯಗಳನ್ನೂ ತರುತ್ತೇನೆ. ಸಹಕಾರ ಸಂಘಗಳ ಪರಿಸ್ಥಿತಿ ಹೇಗಾಗಿದೆ ಎಂದರೆ ಯಾರೋ ಕಲ್ಪನೇ ಇಲ್ಲದೇ ಇರತಕ್ಕಂಥ ಸಹಕಾರ ಸಂಘಗಳನ್ನು ಮಾಡಿಕೊಂಡು ನಿಮ್ಮ ಕೈಯಿಂದ ಹಣವನ್ನು ಕಸಿದುಕೊಳ್ಳಲು ಬಂದಿದ್ದಾರೆ. ನಮ್ಮ ಸ್ನೇಹಿತರಾದ ಬಳ್ಳಾರಿ ಜಿಲ್ಲೆಯವರು ನಮಗೆ ವಾಸ್ತವವಾದ ಅಂಕಿಅಂಶಗಳನ್ನು ಕೊಟ್ಟರು, ಸರ್ಕಾರಕ್ಕೂ ಬರೆದರು. ಮಾನ್ಯ ಮಂತ್ರಿಗಳಿಗೂ ಬರೆದೆವು. ಯಾರೂ ವಿಚಾರಣೆ ಮಾಡುವುದಿಲ್ಲ ಎಂದು ತಿಳಿಸಿದ್ದಾರೆ.

ಬಳ್ಳಾರಿ ಜಿಲ್ಲಾ ಮೈನ್ಸ್ ಓನರ್ಸ್ ಕೋ ಆಪರೇಟಿವ್ ಸೊಸೈಟಿ ವಿಚಾರ ಕೇಳಿದರೆ ನಗು ಬರುತ್ತದೆ. ಅವರು ಕ್ಯಾಪಿಟಲಿಸ್ಟ್ ಕ್ಲಾಸ್. ಅವರಿಗೆ ಬ್ಯಾಂಕುಗಳಲ್ಲಿ ಲಕ್ಷಗಟ್ಟಲೆ ದುಡ್ಡು ಕೊಡುತ್ತಾರೆ. ಅವರು ಏತಕ್ಕೆ ಸಹಕಾರ ಸಂಘ ಮಾಡಿದ್ದಾರೆ? ಅಂತಹ ಸಂಘಕ್ಕೆ 27 – 28 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಕೊಟ್ಟಿದ್ದೀರಿ. 1963ನೇ ಇಸವಿಯಲ್ಲಿ ಆಡಿಟ್ ರಿಪೋರ್ಟ್ ಕೊಟ್ಟಿದ್ದಾರೆ. ಅಲ್ಲಿ ಏನು ಅನ್ಯಾಯ ಏನು ನಡೆಯುತ್ತಾ ಇದೆ ಎಂದು ನಮಗೆ ತಿಳಿಸಿದ್ದಾರೆ.

ಒಬ್ಬ ಮಾನ್ಯ ಸದಸ್ಯರಾದ ಎಂ.ಎಲ್.ಎ ಅವರು, ಬಳ್ಳಾರಿ ಜಿಲ್ಲೆಯ ಪ್ರಮುಖರು ಸೇರಿ ಅರ್ಜಿ ಬರೆದಿದ್ದಾರೆ. ವಿವರ ಕೊಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ. ಇದನ್ನು ನೋಡಿದರೆ ಯಾವುದಾದರೂ ದುಡ್ಡು ಹೊಡೆಯಬೇಕು ಎಂದರೆ ಸಹಕಾರ ಸಂಘದಿಂದ ಮಾಡಬೇಕು ಬೇರೆ ಇನ್ನಾವ ದಾರಿಯೂ ಬೇಕಿಲ್ಲ. ನಾನು ಹಿಂದೆ ಹೇಳಿದಹಾಗೆ ಅಲಿಬಾಬ ಹಾಗೂ 40 ಕಳ್ಳರು ಇದಕ್ಕೆ ಹೋಲಿಕೆಯಾಗುತ್ತಿದೆ.

ಸಹಕಾರ ಸಂಘಗಳಲ್ಲಿ ಕೋಟಿ ಕೋಟಿ ದುಡ್ಡು ಲುಕ್ಸಾನು ಆಗಿದೆ. ನಿಮಗೆ ಹಿಡಿಯುವ ಶಕ್ತಿ ಇಲ್ಲ. ಅವರನ್ನು ಮುಟ್ಟುವುದಕ್ಕೆ ಹೋಗುವುದಿಲ್ಲ, ಮನೆ ಕಟ್ಟಿರುವುದಿಲ್ಲ.

ಮನೆ ಕಟ್ಟಿದ್ದೇವೆ ಎಂದು 10 – 15 ವರ್ಷ ಇದ್ದ ಹಳೆ ಮನೆಗಳಿಗೆ 1 ಲಕ್ಷ, 2 ಲಕ್ಷ ತೆಗೆದುಕೊಂಡಿದ್ದಾರೆ. ಕೆಟ್ಟ ಸೊಸೈಟಿಗಳೂ ಇವೆ. ಎಲ್ಲಾ ಕೆಟ್ಟದ್ದು ಆಗಿದ್ದರೆ ದೇಶವೇ ಉಳಿಯುವುದಿಲ್ಲ. ಆದರೆ ಕೆಟ್ಟ ಸಂಘಗಳನ್ನು ಜಾಸ್ತಿ ಮಾಡದೇ ಇರುವ ಅಧಿಕಾರ ನಿಮ್ಮ ಕೈಯಲ್ಲಿ ಇದೆ.

ಸಹಕಾರ ಸಂಘಗಳು ಸ್ವಯಂಪ್ರೇರಿತವಾಗಿ ವಾಲಂಟೀರ್ ಆಗಿ ಬರುತ್ತವೆ. 100 ರೂ. ಷೇರು ಮಾಡಿದ ಸಾಕು, ಅವರಿಗೆ ಲಕ್ಷ ರೂಪಾಯಿ ಕೊಡುವುದಕ್ಕೆ ಹೊರಟಿದ್ದೀರಿ. ಇದು ನಮ್ಮ ದುರ್ದೈವ. ಎಲ್ಲಿ ದುಡ್ಡು ಬಿಟ್ಟಿ ಸಿಕ್ಕುತ್ತದೋ ಅಲ್ಲಿ ಏನೇನೋ ನೆಪ ಹಾಕಿಕೊಂಡು ಬರುತ್ತಾರೆ. ಅದನ್ನು ನಿಮಗೆ ಪ್ಲಗ್ ಮಾಡುವುದಕ್ಕಾಗುವುದಿಲ್ಲ. ನೀವು ಕೊಟ್ಟ ದುಡ್ಡಿನಲ್ಲಿ ಶೇ.50 ಭಾಗ ರೈಟ್ ಆಫ್ ಮಾಡಬೇಕಾಗುತ್ತದೆ. ಈ ರೀತಿ ಅನ್ಯಾಯವಾಗುತ್ತಾ ಇದೆ. ಇದಕ್ಕೆ ನೀವೇ ಕಾರಣರು. ಇದನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ.

**ಕಮ್ಯುನಿಟಿ ಡೆವಲಪ್‌ಮೆಂಟ್ ಬಗ್ಗೆ:**

ಇನ್ನು ಕಮ್ಯುನಿಟಿ ಡೆವಲಪ್‌ಮೆಂಟ್ ಮತ್ತು ಎನ್.ಇ.ಎಸ್. ವಿಚಾರ: ಇದರಲ್ಲಿ ಒಂದು ಮಾತನ್ನು ಅವಶ್ಯವಾಗಿ ಹೇಳಬೇಕಾಗಿದೆ. ಅಡ್ಮಿನಿಸ್ಟ್ರೇಟೀವ್ ರೆಫರೆನ್ಸ್ ಕಮೀಷನ್ನಿನವರು ಚೆನ್ನಾಗಿ ಯೋಚನೆ ಮಾಡಿ ಇದನ್ನು ವಜಾ ಮಾಡಿ ಎಂದು ಹೇಳಿದ್ದಾರೆ. ಇದು ದೇಶದಲ್ಲಿ ಬೇಡ, ಇದರಂಥ ಪೀಡೆ ಬೇರೆ ಯಾವುದೂ ಇಲ್ಲ ಎಂದು ಹೇಳಿದ್ದಾರೆ. ಇದು ಮೊದಲು ಬಂದಾಗ ಕಾಮಧೇನು ಕಲ್ಪವೃಕ್ಷದ ಹಾಗೆ ಬಂದು ಗ್ರಾಮಾಂತರ ಪ್ರದೇಶದಲ್ಲಿ ಹಾಲು ಹರಿಯುವ ರೀತಿ ಮಾಡುತ್ತೇವೆ ಎಂದು ಹೇಳುತ್ತಾ ಇದ್ದರು.

ಈಗ ಸರ್ಕಾರ ಸಿಬ್ಬಂದಿಯನ್ನು ಏನು ಇಟ್ಟುಕೊಂಡಿದ್ದಾರೋ ಅದು ಯಾವುದಕ್ಕೂ ಪ್ರಯೋಜನ ಇಲ್ಲ. 3 ಕೋಟಿ, 29 ಲಕ್ಷದ 29 ಸಾವಿರ ರೂಪಾಯಿನಲ್ಲಿ 2 ಕೋಟಿ ರೂಪಾಯಿನಷ್ಟು ಅವರ ಸಂಬಳಕ್ಕೆ ಹೋಗುತ್ತದೆ. ಇದರಲ್ಲಿ ಏನೂ ಅನುಮಾನ ಇಲ್ಲ. ಈ ಬಜೆಟ್ಟನ್ನು ನೋಡಿದರೆ ಡೆವೆಲಪ್‌ಮೆಂಟ್ ವರ್ಕ್‌ಗೆ ಪ್ರಾವಿಷನ್ ಮಾಡಿಲ್ಲ. ಕೇಂದ್ರದಿಂದ ಬರಬೇಕು, ಅವರು ಕೊಟ್ಟರೆ ಹಂಚಬೇಕು, ನಮ್ಮ ಹತ್ತಿರ ದುಡ್ಡು ಇಲ್ಲ. ಸ್ಕೆಲಿಟನ್ ದುಡ್ಡು ಇಟ್ಟುಕೊಂಡಿದ್ದೀರಿ. ಇಲ್ಲಿ ಬೇಕಾದಷ್ಟು ಅನ್ಯಾಯ ಆಗಿದೆ.

ನನ್ನ ಕ್ಷೇತ್ರದ ಉದಾಹರಣೆ ಹೇಳುತ್ತೇನೆ, ನಾನು ಒಂದು ವರ್ಷದಿಂದ ಮೆಂಬರ್ ಆಗಿದ್ದೇನೆ. ಅಲ್ಲಿರತಕ್ಕ ವ್ಯಕ್ತಿಯನ್ನು ಬಾರಯ್ಯ ಹಳ್ಳಿಗಳನ್ನು ನೋಡಿಕೊಂಡು ಬರೋಣ ಎಂದು ಕರೆದೆ. ಇವತ್ತಿನವರೆಗೂ ನನ್ನ ಜೊತೆಗೆ ಬರಲಿಲ್ಲ. ಬೇಕಾವಷ್ಟು ಕಾಗದ ಬರೆದಿದ್ದೇನೆ. ನನ್ನ ಹತ್ತಿರ ಅದರ ಉತ್ತರಗಳು ಇವೆ. ಹಳ್ಳಿಗಳಲ್ಲಿ ಹೋಗಿ ಪರಿಸ್ಥಿತಿ ನೋಡೋಣ ಎಂದರೆ ನಮ್ಮ ಜೊತೆಗೆ ಬರುವುದಕ್ಕೆ ನಾಚಿಗೆ. ನಿಮ್ಮ

ಪಾರ್ಟಿಯವರು ಹೇಳಿರುತ್ತಾರೆ ವಿರೋಧ ಪಕ್ಷದ ಜನರ ಜೊತೆಗೆ ಹೋಗಕೂಡದು ಎಂದು. ಶುದ್ಧ ಅನ್ಯಾಯ.

ಕಮ್ಯುನಿಟಿ ಡೆವೆಲಪ್‌ಮೆಂಟ್‌ನಿಂದ ಏನು ಅನ್ಯಾಯವಾಗುತ್ತಿದೆ ಎನ್ನುವುದನ್ನು ವಿವರವಾಗಿ ಹೇಳಬೇಕಾಗಿಲ್ಲ. ಶ್ರೀಮಾನ್ ನಾಡಗೌಡರಿಗೆ ಸವಾಲು ಹಾಕುತ್ತೇನೆ. ನಿಮಗೆ ಮನವರಿಕೆ ಆಗಿದ್ದರೆ ಇವನ್ನು ಕೇಂದ್ರ ಸರ್ಕಾರಕ್ಕೆ ಬರೆದುಬಿಡಿ, ಕಮ್ಯುನಿಟಿ ಡೆವೆಲಪ್‌ಮೆಂಟ್ ನಮ್ಮ ರಾಜ್ಯದಲ್ಲಿ ತೆಗೆದುಹಾಕುತ್ತೇವೆ ಎಂದು. ಇದರಿಂದ ಪುಣ್ಯವೂ ಇಲ್ಲ, ಪುರುಷಾರ್ಥವೂ ಇಲ್ಲ. ಈ ರೀತಿ ಮಾಡಿದರೆ ಉಪಕಾರ ಮಾಡಿದಂತಾಗುತ್ತದೆ. ಇಲ್ಲಿ ಕಾಲು ಇಟ್ಟರೆ ಉಸುಬಿನಲ್ಲಿ ಹೂತು ಹೋಗುತ್ತದೆ. ಸ್ಟ್ರಾಂಗ್ ಫೌಂಡೇಷನ್ ಇಲ್ಲ. ನಿಮ್ಮ ಕಷ್ಟ ನೋಡಿದರೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಈ ಕಷ್ಟ ಬರಬಾರದಾಗಿತ್ತು. ನೇರವಾಗಿ ಜನಗಳ ಸಂಪರ್ಕ ಬರತಕ್ಕ ಖಾತೆ ಇಟ್ಟುಕೊಂಡಿದ್ದೀರಿ. ನಿಮಗೆ ಹುರುಪು ಬರಲಿ ಎಂದು ಕಟುವಾಗಿ ಟೀಕೆ ಮಾಡುತ್ತಿದ್ದೇನೆ. ನೀವು ಉತ್ತರ ಕರ್ನಾಟಕದ ಜನ. ನಿಮಗೆ ಹುರುಪುಕೊಟ್ಟು ಏನಾದರೂ ಎಬ್ಬಿಸೋಣ ಎಂದು ಹೇಳುತ್ತಿದ್ದೇನೆ. ಎಬ್ಬಿಸಿದರೂ ಎದ್ದು ಮಲಗಿಕೊಳ್ಳಬೇಕು ಎಂದರೆ ಮತ್ತೆ ಮಲಗಿಕೊಳ್ಳಿ. ದಯವಿಟ್ಟು ಈ ಡಿಪಾರ್ಟ್‌ಮೆಂಟಿನಲ್ಲಿ ಹೊಸ ನೀತಿಯನ್ನು ತಂದು ಹೊಸ ಆಡಳಿತ ತರಬೇಕಾದರೆ ಮೆಹನತ್‌ನಿಂದ ಕೆಲಸ ಮಾಡಲಿ ಎಂದು ನಾನು ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ.

* * *

# ಸಭಾಪತಿ ಶ್ರೀ ಬಾಳಿಗಾ ನಿಧನಕ್ಕೆ ಸಂತಾಪ

## 2, ಸೆಪ್ಟೆಂಬರ್ 1968

ಶ್ರೀ ಎಚ್. ಸಿದ್ದವೀರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಸಭಾಪತಿಯಾಗಿದ್ದ ಶ್ರೀಮಾನ್ ಬಾಳಿಗಾ ಅವರು ನಮ್ಮನ್ನು ಅಗಲಿ ಈ ಸಭೆಯನ್ನು ಬಹಳ ಸಂಕಟ ಪರಿಸ್ಥಿತಿಯಲ್ಲಿ ಬಿಟ್ಟು ಹೋಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಶ್ರೀಮಾನ್ ಬಾಳಿಗಾ ಅವರು ಯಾವ ರೀತಿ ಇದ್ದರು, ಅವರ ವ್ಯಕ್ತಿತ್ವದ ಗುಣಗಳೇನು ಎಂಬುದು ಈ ಸಭೆಯಲ್ಲಿರುವ ಮಾನ್ಯ ಸದಸ್ಯರೆಲ್ಲರಿಗೂ ತಿಳಿದೇ ಇದೆ. ಅವರೊಬ್ಬ ಒಳ್ಳೆಯ ಸ್ಪೀಕರ್ ಆಗಿದ್ದರು. ಬುದ್ಧಿವಂತಿಕೆ ಅವರಲ್ಲಿ ಎದ್ದು ಕಾಣುತ್ತಿದ್ದ ಗುಣ. ಬುದ್ಧಿವಂತರಾಗಿದ್ದ ಅವರಲ್ಲಿ ಮಾನವೀಯತೆ ಎದ್ದು ಕಾಣುತ್ತಿತ್ತು. ಅವರು ಸೌಜನ್ಯದಿಂದ ಮಾನವೀಯ ಗುಣಗಳಿಂದ ಎಲ್ಲರ ಮನ ಗೆದ್ದಿದ್ದರು.

1967ರ ಚುನಾವಣೆ ಆದ ನಂತರ ವಿಧಾನಸಭೆಯಲ್ಲಿ ಸದಸ್ಯರ ನಡುವೆ ನಡೆಯುತ್ತಿದ್ದ ವಾಗ್ವಾದ, ಚರ್ಚೆಯ ಭಿನ್ನ ದಾರಿಯಿಂದಾಗಿ ಅವರಲ್ಲದೆ ಬೇರೆ ಯಾರಾದರೂ ಇದ್ದಿದ್ದರೆ ಬೇರೆಯೇ ಆಗುತ್ತಿತ್ತು. ನಾವು ಆವೇಶ, ಆಕ್ರೋಶವಾಗಿ ಮಾತಾಡಿದರೆ ಅವರು ಸಮಾಧಾನದಿಂದ ನಮ್ಮನ್ನು ತಿದ್ದುತ್ತಿದ್ದರು. ಶ್ರೀ ಬಾಳಿಗಾ ಅವರ ಸೌಜನ್ಯ, ನಡತೆ ದೊಡ್ಡದು. ಅವರು ಸಮಾಧಾನದಿಂದ ಕೇಳಿ ಎಲ್ಲರನ್ನೂ ತೃಪ್ತಿ ಪಡಿಸುತ್ತಿದ್ದರು. ಅವರು ವಿದ್ಯೆಯ ಗಣಿಯೇ ಆಗಿದ್ದರು. ಅವರು ಯಾವುದಾದರು ಒಂದು ವಿಷಯದ ಬಗ್ಗೆ ಲೇಖನ ಬರೆಯಲು ಸಾಕಷ್ಟು ಪುಸ್ತಕ ಓದುತ್ತಿದ್ದರು. ಅಂಥ ಬರೆದ ಲೇಖನಗಳನ್ನು ನಮಗೆಲ್ಲಾ ತೋರಿಸಿ, ನೋಡಿ ಇಂಥ ವಿಷಯದ ಮೇಲೆ ಬರೆದಿದ್ದೇನೆ, ಓದಿ. ಏನಾದರೂ ಇದ್ದರೆ ಹೇಳಿ ಎಂದು ಸಲಹೆ ಕೇಳುತ್ತಿದ್ದರು. ಅವರು ವಿದ್ವಾಂಸರು. ಸುಮಾರು ಗ್ರಂಥಗಳನ್ನು ಓದಿ ಕರಗತ ಮಾಡಿಕೊಂಡಿದ್ದರು. ಆಡಳಿತ ಪಕ್ಷ, ವಿರೋಧ ಪಕ್ಷದ ಸದಸ್ಯರಿಗೆ ಸಮಾನ ಮಾನ್ಯತೆ ನೀಡುತ್ತಿದ್ದರು. ಸಂದಿಗ್ಧ ಸಂದರ್ಭದಲ್ಲಿ ಕಲಾಪಗಳನ್ನು ಜಾಣ್ಮೆಯಿಂದ ನಡೆಸಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ ಹಾಗೆ ಅವರ ಸ್ಥಾನವನ್ನು ತುಂಬುವುದು ಬಹಳ ಕಷ್ಟ. ಆದ್ದರಿಂದ ಮುಂದೆ ಈ ಸ್ಥಾನಕ್ಕೆ ಯಾರು ಬಂದರೂ ಒಂದನ್ನು ಅವರು

ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ ಬರೀ ನಿಯಮ, ಕಾನೂನು ಇದೆ ಅವರ ಚೌಕಟ್ಟಿನಲ್ಲಿ ನಡೆದುಕೊಂಡು ಹೋಗುತ್ತೇನೆ ಎಂದರೆ ಬಹಳ ಕಷ್ಟ. ಈಗಿರುವಂತಹ ಪರಿಸ್ಥಿತಿಯಲ್ಲಿ ಹಿಂದೂಸ್ಥಾನದಲ್ಲಿ ಸಭಾಪತಿಗಳು ಯಾರು ಆಗಿರುತ್ತಾರೋ ಅವರ ಮೇಲೆ ಪ್ರಜಾಪ್ರಭುತ್ವ ಬೆಳೆಸುವ ಜವಾಬ್ದಾರಿ ಹೆಚ್ಚಾಗಿರುತ್ತದೆ. ಆದ್ದರಿಂದ ಅವರು ಶ್ರೀಮಾನ್ ಬಾಳಿಗಾ ಅವರಿಗೆ ಇದ್ದಂತಹ ತಾಳ್ಮೆ, ಸೌಜನ್ಯತೆ ಮತ್ತು ಜವಾಬ್ದಾರಿಯಿಂದ ಸರ್ಕಾರದ ಮನೋಭಾವನೆಯನ್ನು ಬೆಳೆಸಿಕೊಂಡು ಬರಬೇಕು.

ಒಂದುಸಾರಿ ಸಭಾಪತಿಯಾಗಿ ಆಯ್ಕೆ ಆದಮೇಲೆ 'ನಾನು (ಸಭಾಪತಿ) ಆದ ಮೇಲೆ ಯಾವ ಪಕ್ಷಕ್ಕೂ ಸೇರಿದವನಲ್ಲ' ಎಂದು ತಿಳಿಯಬೇಕು. ಇಷ್ಟೇ ಅಲ್ಲದೆ ಲೋಕಸಭೆಯ ನಾಯಕರು ಹಾಕಿದಂತಹ ಒಂದು ನೀತಿ ಮಾರ್ಗವಿದೆ. ಸಭಾಪತಿಯಾದವರು ಯಾವ ದಿವಸ ಚುನಾಯಿಸಿ ಬರುತ್ತಾರೋ, ಅವರು ಯಾವ ಪಕ್ಷಕ್ಕೆ ಸೇರಿರಲಿ, ಅದಕ್ಕೆ ರಾಜೀನಾಮೆ ಕೊಟ್ಟು – ನಾನು ಯಾವ ಪಕ್ಷಕ್ಕೂ ಸೇರಿಲ್ಲ ಎಂದು ಪ್ರಕಟಿಸಬೇಕು. ಸರ್ವರನ್ನೂ ಸಮಾನತೆಯ ದೃಷ್ಟಿಯಿಂದ ನೋಡಿಕೊಳ್ಳಬೇಕು.

ಶ್ರೀಮಾನ್ ಬಾಳಿಗಾ ಅವರನ್ನು ನಾವು ಕಳೆದುಕೊಂಡರೂ ಅವರ ಮಾರ್ಗದರ್ಶನವನ್ನು ಬಿಡಬಾರದು. ಅವರು ಕಾಯಿಲೆ ಬಿದ್ದಮೇಲೆ ಪುನಃ ಬರಲಾರರು ಎಂದು ನಾವು ಯಾರೂ ಭಾವಿಸಿರಲಿಲ್ಲ. ಹುಟ್ಟಿದಮೇಲೆ ಮನುಷ್ಯ ಸಾಯಲೇಬೇಕು. ಕೊನೆಯದಾಗಿ ಶ್ರೀ ಬಾಳಿಗಾ ಅವರನ್ನು ಮತ್ತೊಮ್ಮೆ ಸ್ಮರಿಸುತ್ತ, ಅವರು ಹಾಕಿದ ಮಾರ್ಗವನ್ನು ಜ್ಞಾಪಕದಲ್ಲಿಟ್ಟುಕೊಂಡು ನಡೆಯಬೇಕೆಂಬುದು ನಮ್ಮ ಆಶಯವಾಗಬೇಕು. ಅವರ ಆತ್ಮಕ್ಕೆ ಶಾಂತಿ ಸಿಕ್ಕಲಿ ಎಂದು ಆಶಿಸಿ ನನ್ನ ಮಾತು ಮುಗಿಸುತ್ತೇನೆ.

* * *

# ವ್ಯವಸಾಯ ಇಲಾಖೆ ಚರ್ಚೆ

9, ಜುಲೈ 1952.

**ಶ್ರೀ ಎಚ್. ಸಿದ್ದವೀರಪ್ಪ :** ಸ್ವಾಮಿ, ನನ್ನ ಮಾನ್ಯ ಸ್ನೇಹಿತರಾದ ಶ್ರೀ ದೇವರಾಜ ಅರಸು ಅವರು ಭಾಷಣ ಮಾಡಿದಮೇಲೆ ಸ್ವಲ್ಪ ವಿಶದವಾಗಿ ಜವಾಬು ಕೊಡಬೇಕಾದ ಪ್ರಸಂಗ ಬಂದಿದೆ. ಅದಕ್ಕಾಗಿ ದಯವಿಟ್ಟು ನನಗೆ ಸ್ವಲ್ಪ ಅವಕಾಶಕೊಡಬೇಕೆಂದು ಮೊದಲೇ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವ್ಯವಸಾಯ ಇಲಾಖೆಯಿಂದ ಏನು ಪ್ರಯೋಜನ ಇಲ್ಲ, ಇವೊತ್ತೇ ಮುಚ್ಚಬೇಕು ಎಂದು ಶ್ರೀ ದೇವರಾಜ ಅರಸು ಅವರು ಹೇಳಿದ್ದನ್ನು ಕೇಳಿದರೆ ಬಹಳ ಆಶ್ಚರ್ಯವಾಗುತ್ತದೆ. ವ್ಯವಸಾಯ ಇಲಾಖೆ ಕೆಲಸ ಹೇಳುವಷ್ಟು ಸುಲಭವಲ್ಲ. ಅದನ್ನು ಮಾಡಬೇಕಾದರೆ ಅನೇಕ ವರ್ಷಗಳ ಕಾಲ ಪ್ರಯತ್ನಮಾಡಿ ಅದರ ಫಲವಾಗಿ ಉತ್ತಮಗೊಳಿಸಬೇಕೇ ವಿನಾ ಒಂದೇಸಾರಿ ಒಂದುಕಡೆ ಪರೀಕ್ಷೆ ಮಾಡಿನೋಡಿ ಹೇಳುವುದು ಸರಿಯಲ್ಲವೆಂದು ತಿಳಿದುಕೊಂಡಿದ್ದೇನೆ.

ಒಟ್ಟಿನಲ್ಲಿ ಅಲ್ಲಿ ಲೋಪದೋಷಗಳಿರಬಹುದು. ಅವುಗಳನ್ನು ತಿದ್ದುವುದಕ್ಕೆ ಸರ್ಕಾರದವರು ಸಂಪೂರ್ಣವಾಗಿ ತಯಾರಾಗಿದ್ದಾರೆ. ಖರ್ಚುಮಾಡುವ ಹಣಕ್ಕೆ ತಕ್ಕಷ್ಟು ಉತ್ಪತ್ತಿಯನ್ನು ಇತರರು ನಿರೀಕ್ಷಿಸುವಂತೆ ಸರ್ಕಾರವೂ ಸ್ವಾಭಾವಿಕವಾಗಿಯೇ ನಿರೀಕ್ಷಿಸುತ್ತದೆ, ಎಂದಮಾತ್ರಕ್ಕೆ ಎಲ್ಲೂ ಈ ಕೆಲಸ ಸರಿಯಾಗಿ ನಡೆಯುತ್ತಿಲ್ಲ, ಯಾವುದನ್ನೂ ಈ ಇಲಾಖೆ ಮಾಡುತ್ತಿಲ್ಲ ಎಂಬ ವಾದವನ್ನು ಒಪ್ಪಲಾಗುವುದಿಲ್ಲ. ವ್ಯವಸಾಯದ ಇಲಾಖೆಯವರು ಜಮೀನುಗಳ ಕಡೆ ಹೆಚ್ಚು ಗಮನ ಕೊಡುವುದಕ್ಕೆ ಆಗದಿದ್ದುದು ಅಲ್ಲಿನ ಲೋಪದೋಷಗಳಿಗೆ ಒಂದು ಕಾರಣವಾಗಿದೆ. ಯುದ್ಧ ಪ್ರಾರಂಭವಾದಮೇಲೆ ಕೆಲಸ ಕಾರ್ಯಗಳು ಇತ್ತೀಚೆಗೆ ಹೆಚ್ಚಿವೆ ಎಂಬುದನ್ನು ಮಾನ್ಯಸಭೆ ಗಮನಿಸಬೇಕು.

ಯುದ್ಧ ಶುರುವಾದಮೇಲೆ ಆಹಾರವನ್ನು ಉತ್ಪತ್ತಿ ಮಾಡುವುದಕ್ಕೆ ಬೇಕಾದ ವ್ಯವಸಾಯದ ಸಲಕರಣೆ, ಬೀಜ, ಗೊಬ್ಬರ, ಕಬ್ಬಿಣದ ಸಾಮಾನು ಮುಂತಾದುವುಗಳನ್ನು ಶೇಖರಣೆ ಮಾಡುವ ಜವಾಬ್ದಾರಿಯೂ ಸಹ ವ್ಯವಸಾಯ ಇಲಾಖೆಗೇ ಬಿತ್ತು. ತಕ್ಕಡಿ ಹಿಡಿದು ವ್ಯಾಪಾರ ಮಾಡುವ ಕಡೆಗೆ ಹೆಚ್ಚುಕಾಲ ವಿನಿಯೋಗವಾಗಿ ವ್ಯವಸಾಯದ

ಇಲಾಖೆಯವರಿಗೆ ತಮ್ಮ ನೈಜವಾದ ಕೆಲಸದ ಕಡೆ, ತಾವು ಮಾಡಬೇಕಾದ ಕರ್ತವ್ಯದಕಡೆ ಗಮನಕೊಡುವುದಕ್ಕೆ ಅವಕಾಶವಾಗಲಿಲ್ಲ. ಆದ್ದರಿಂದ ಅವರ ಮೇಲೆ ಆಪಾದನೆ ಮಾಡಲು ಅವಕಾಶವಿಲ್ಲ. ಈಗ ಅದಕ್ಕೆ ಅವಕಾಶ ಕೊಡುವುದಿಲ್ಲ. ವ್ಯವಸಾಯದ ಇಲಾಖೆ ಜಮೀನಿನ ಮೇಲೆಯೇ ಇರಬೇಕು, ಜಮೀನಿನ ಮೇಲೆ ಹೆಚ್ಚು ಕೆಲಸ ಮಾಡಬೇಕು ಎಂಬ ಒಂದು ಗೊತ್ತಾದ ನೀತಿಯನ್ನು ಸರ್ಕಾರದವರು ಜಾರಿಗೆ ತಂದಿದ್ದಾರೆಂದು ನಿವೇದನೆ ಮಾಡಿಕೊಳ್ಳುತ್ತೇನೆ. ಒಂದು ಯೋಜನೆ ಈಗಲೂ ಇದೆ. ಸಹಕಾರ ಸಂಘಗಳಿಗೆ ವ್ಯಾಪಾರದ ಕೆಲಸವನ್ನು ಒದಗಿಸಿ, ಬಾಕಿ ಕೆಲಸ ವ್ಯವಸಾಯದ ಇಲಾಖೆ ಮಾಡಬೇಕು. ಎಲ್ಲಿ ಸಾಧ್ಯವೋ ಅಲ್ಲಿ ಆರೀತಿ ಮಾಡಬೇಕು ಎಂದು ಮಾಡಿದೆ.

ವ್ಯವಸಾಯ ಇಲಾಖೆಗೆ ಎಲ್ಲಿ ಏನು ಬಿತ್ತಬೇಕು, ಏನು ಬೆಳೆಯಬೇಕು ಎಂಬುದೇ ಗೊತ್ತಿಲ್ಲವೆಂದು ದೇವರಾಜ ಅರಸು ಅವರು ಹೇಳಿದರು. ಅವರಿಗೆ ಒಂದು ವಿಷಯ ತಿಳಿಸಬೇಕಾಗಿದೆ. ಅಲ್ಲಲ್ಲಿ ಒಂದೊಂದು ವರ್ಷ ಹೀಗೆ ಆಗಿರಬಹುದು. ಬಾಟನಿ ಸೆಕ್ಷನ್ ತೆಗೆದುಕೊಂಡರೆ, ಸುಮಾರು 25 ವರ್ಷಗಳಿಂದ ಯಾವರೀತಿ ಕೆಲಸ ಮಾಡಿದೆ, ಹೇಗೆ ಕೆಲಸ ಮಾಡಿದ್ದರಿಂದ ಪ್ರಯೋಜನ ಹೊಂದಲು ಅವಕಾಶವಾಯಿತು ಎಂಬುದನ್ನು ತಿಳಿದುಕೊಳ್ಳಬಹುದು. ಉದಾಹರಣೆಗೆ ರಾಗಿ ತೆಗೆದುಕೊಳ್ಳೋಣ. ಮೈಸೂರು ರಾಜ್ಯದ ಮುಖ್ಯ ಆಹಾರ ಧಾನ್ಯವಿದು. 300 ನಮೂನೆಗಳ ರಾಗಿಯನ್ನು ಪ್ರಯೋಗಮಾಡಿ ನಮ್ಮ ದೇಶಕ್ಕೆ ಯಾವ ರಾಗಿ ಆಗುತ್ತದೆ, ಯಾವ ರಾಗಿ ಬೆಳೆಯಬೇಕು, ಯಾವುದನ್ನು ಬೆಳೆದರೆ ರೈತನಿಗೆ ಅನುಕೂಲವಾಗುತ್ತದೆ ಎಂಬ ವಿಷಯದಲ್ಲಿ ತಿಳಿವಳಿಕೆ ಕೊಟ್ಟಿದ್ದೇವೆ. ರೈತರು ಬಹಳ ಸಂತೋಷದಿಂದ ಬೆಳೆ ಬೆಳೆದಿದ್ದಾರೆ. ಉಳುಮೆಯ ಕೆಲಸ ಮಾಡಿದ್ದಾರೆ. ಮೊದಲು ರಾಗಿಬೀಜ ಕೊಟ್ಟಿದ್ದರಲ್ಲಿ ಎಷ್ಟು ಇಳುವರಿ ಬರುತ್ತಿತ್ತೋ ಅದಕ್ಕಿಂತ ಶೇಕಡಾ 60ರಷ್ಟು ಜಾಸ್ತಿ ಇಳುವರಿ ಬರುತ್ತದೆ ಎಂದು ಅಂದಾಜು ಮಾಡಿದ್ದೇವೆ.

ಮತ್ತೊಂದು ಧಾನ್ಯ ಬತ್ತ ತೆಗೆದುಕೊಳ್ಳೋಣ. ಇವತ್ತು ಎಲ್ಲರಿಗೂ ಕೊಯಮತ್ತೂರು ಸಣ್ಣ ಬಹಳ ಚೆನ್ನಾಗಿದೆ ಎಂಬ ಅನುಭವ ಬಂದಿದೆ. ಆ ಕೊಯಮತ್ತೂರು ಸಣ್ಣಕ್ಕೆ ಒಂದು ಸಾಯಿಲ್ ಇಳಿಸಬೇಕಾದರೆ ಅದು 25 ವರ್ಷಕಾಲ ಅವಿಚ್ಛಿನ್ನವಾಗಿ, ಅವಿಶ್ರಾಂತಿಯಿಂದ ವ್ಯವಸಾಯದ ಇಲಾಖೆ ದುಡಿದುದರ ಪ್ರತಿಫಲವೇ ಹೊರತು ಮತ್ತೆ ಬೇರೆ ಕಾರಣ ಇಲ್ಲ ಎಂಬುದನ್ನು ಮಾನ್ಯ ಸಭೆಯವರು ತಿಳಿದುಕೊಳ್ಳಬೇಕು. ಆಮೇಲೆ ಕಬ್ಬಿನ ಬಗ್ಗೆ ಒಂದಷ್ಟು ವಿವರ; ಇದರ ಬಗ್ಗೆ 30 ವರ್ಷಗಳಿಂದ ಪ್ರಯೋಗ ನಡೆಸಿದ್ದೇವೆ. 30 ವರ್ಷಗಳ ಪ್ರಯೋಗದ ಫಲವಾಗಿ ಇವೊತ್ತು ಮಂಡ್ಯದ ರೈತರ ಮುಖದಲ್ಲಿ ನಗು ಅರಳಿದೆ. ಅವರು ಖಂಡಿತಾ ನನ್ನ ಮಾತನ್ನು ಒಪ್ಪುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಅ...ಂತ ಕಡಲೇಕಾಯಿ ತೆಗೆದುಕೊಳ್ಳೋಣ. ಇಲ್ಲಿ ನೋಡಿದರೆ 1917 – 18ರಲ್ಲಿ ನಮ್ಮ ದೇಶದಲ್ಲಿ 77 ಸಾವಿರ ಎಕರೆ ಕಡಲೆಕಾಯಿ ಬೆಳೆ ಬೆಳೆದಿತ್ತು. ಆದರೆ ಉತ್ಪನ್ನ ಚೆನ್ನಾಗಿರಲಿಲ್ಲ. ಇವೊತ್ತಿನ ದಿವಸ 2.89 ಲಕ್ಷ ಎಕರೆಗಳನ್ನು ಸಾಗಿಗೆ (ಉಳಿಮೆಗೆ) ...ಂದಿದ್ದೇವೆ. ಹೀಗೆ ಹೇಳುತ್ತಾ ಹೋದರೆ ಬಹಳ ಹೇಳಬಹುದು. ಒಂದು ಮಾತು ಹೇಳುತ್ತೇನೆ: ವ್ಯವಸಾಯದ ಇಲಾಖೆಯ ಕಾರ್ಯಕ್ರಮ ಬಹಳ ಚೆನ್ನಾಗಿ ಆಗಬೇಕು, ರೈತರಿಗೆ ನಾನಾ ರೀತಿಯಲ್ಲಿ ಇನ್ನೂ ಹೆಚ್ಚಿನ ಅನುಕೂಲ ದೊರೆಯಬೇಕು ಎಂಬ ವಿಚಾರದಲ್ಲಿ ಶ್ರೀಮಾನ್ ದೇವರಾಜ ಅರಸು ಅವರಿಗೂ ಸರ್ಕಾರದವರಿಗೂ ಭಿನ್ನಾಭಿಪ್ರಾಯವಿಲ್ಲ. ಭಿನ್ನಾಭಿಪ್ರಾಯ ಇಷ್ಟೆ: ಸಾರಾಸಗಟಾಗಿ ಟೀಕೆ ಮಾಡುವುದಕ್ಕಿಂತ "ಇನ್ನೂ ಕೆಲಸ ಮಾಡಿ, ಮಾಡಿರುವುದು ಚೆನ್ನಾಗಿದೆ" ಎಂದು ಹೇಳಿದರೆ ಉತ್ತಮ. ನೀವು ಮಾಡಿರುವುದೆಲ್ಲಾ ನಿಷ್ಪ್ರಯೋಜನ ಎಂದು ಹೇಳಿದರೆ, ಎಷ್ಟು ಮಾಡಿದರೂ ಇಷ್ಟೇತಾನೇ ಎಂಬ ಮನೋಭಾವ ಬರುತ್ತದೆ.

**ಶ್ರೀ ಡಿ. ದೇವರಾಜ ಅರಸು:** ಕೆಲಸ ಮಾಡುವವರ ವಿಷಯ ನಮಗೆ ಗೊತ್ತಿದೆ.

**ಶ್ರೀ ಎಚ್. ಸಿದ್ದವೀರಪ್ಪ:** ಇಷ್ಟು ಮಾತ್ರ ಹೇಳುತ್ತೇನೆ: ಖಂಡಿತವಾಗಿಯೂ ವ್ಯವಸಾಯದ ಇಲಾಖೆಯ ಮೇಲೆ ನಮ್ಮೆಲ್ಲರ ಕಣ್ಣು ಇರುವಾಗ ಅದು ಬಹಳ ಚೆನ್ನಾಗಿ ಕೆಲಸ ಮಾಡಬೇಕು. ಖಂಡಿತವಾಗಿ ಇದನ್ನು ...ಂಗೆ ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್‌ರವರು ಮತ್ತು ಎಂ. ಲಿಂಗಣ್ಣನವರು ಹೆಚ್ಚು ಆಹಾರ ಬೆಳೆ ಬೆಳೆಯುವ ವಿಚಾರದಲ್ಲಿ ಒಂದು ಮಾತು ಹೇಳಿದರು ಮತ್ತು ಇಮಾಂರವರೂ ಸಹ ನಿನ್ನೆ ...ದಿನ ಕೇಳಿದರು: ಇಂಡಿಯಾ ಸರ್ಕಾರದವರಿಂದ ಎಷ್ಟು ತರಿಸಿದ್ದೀರಿ, ನೀವು ಎಷ್ಟು ಕೊಟ್ಟಿದ್ದೀರಿ ಎಂದು. ಈ ವಿಚಾರದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಇಂಡಿಯಾ ಸರ್ಕಾರದವರು ನಮಗೆ 1949 – 50, 1950 – 51, 195... – 52ರಿಂದ ಗ್ರಾಂಟ್ ಮತ್ತು ಲೋನ್ ರೂಪದಲ್ಲಿ 3,17,83,516 ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಎಲ್ಲಾ ಹಣವನ್ನೂ ರೈತರಿಗೇ ನೇರವಾಗಿ ಕೊಟ್ಟಿದೆ. ನಿನ್ನೆ ನಾನು ಅರಿಕೆ ಮಾಡಿಕೊಂಡಹಾಗೆ, ಒಂದು ಪರ್ಸೆಂಟ್ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಿಗೆ ಹಾಕಿರುವುದು. ನಾವು ಖರ್ಚು ಮಾಡಿರುವುದು 2,74,43,245 ರೂಪಾಯಿಗಳನ್ನು. ಇದನ್ನು ಮಾನ್ಯ ಸಭೆಯವರು ಗಮನಿಸಿದರೆ ನಮ್ಮ ವಿಚಾರದಲ್ಲಿ ಇರತಕ್ಕ ಕಟುವಾದ ಟೀಕೆ ಸ್ವಲ್ಪ ಸಡಿಲವಾಗಬಹುದು ಎಂದು ನಾನು ಭಾವಿಸುತ್ತೇನೆ. ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ ಮೈಸೂರು ಸರ್ಕಾರದವರು ದೊಡ್ಡ ಯೋಜನೆಗಳನ್ನು ಹಾಕಿದ್ದಾರೆ. ಬೃಹತ್ ನೀರಾವರಿ ಕೆಲಸಕ್ಕೆ ಬಹಳ ದುಡ್ಡು ಖರ್ಚು ಮಾಡಿದ್ದಾರೆ ಎಂಬುದನ್ನು ಮರೆಯಬಾರದು.

**ಶ್ರೀ ಜನಾಬ್ ಜೆ. ಮಹಮದ್ ಇಮಾಂ**: May I interrupt for a minute for clarification? ನಿನ್ನೆ ತಾವು ಕೊಟ್ಟ ಉತ್ತರದಲ್ಲಿ 2,67,24,579 ರೂಪಾಯಿಗಳು ಎಂಬುದಾಗಿ ಹೇಳಿದ್ದಿರಿ. ಈಗ ಹೇಳಿದ ಪ್ರಕಾರ 5 ಕೋಟಿ 91 ಲಕ್ಷ ಚಿಲ್ಲರೆ ಬರುತ್ತದೆ. ಯಾವುದು ಸರಿ? Perhaps it does not include the amounts for all the three years.

**Sri H. Siddaveerappa**: Propably that figure was supplied according to the tenor of the question. I am giving these figures from 1949 - 50 right up to 1951 - 52. I have given the grant, the loan and the total. I will place this copy in the hands of my friend..... may get them verified.

**Mr. SPEAKER**: That does not include the grant made to the co-operative Societies in regard to farming.

**ಶ್ರೀ ಎಚ್. ಸಿದ್ದವೀರಪ್ಪ**: ಒಂದು ಅಂಶವನ್ನು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಜಿ.ಎಂ.ಎಫ್ ಸ್ಕೀಂ ಪ್ರಕಾರ ಕೈಗೊಂಡ ಕಾರ್ಯಕ್ರಮಗಳನ್ನು ಜಾಗ್ರತೆ ನೀವು ಪೂರೈಸಿಲ್ಲ ಎಂದು ಹೇಳಬಹುದು. ನೋಡಲಿಕ್ಕೆ ಅದು ಹಾಗೇ ಕಾಣುತ್ತದೆ. ಇಷ್ಟು ದುಡ್ಡು ಖರ್ಚು ಮಾಡಿದರೂ ಆಹಾರದ ಅಭಾವ ಹೋಗಲಿಲ್ಲವಲ್ಲ ಎಂದು ನಿಮಗನ್ನಿಸಬಹುದು. ಆದರೆ ಒಂದು ವಿಷಯವನ್ನು ಮರೆಯಕೂಡದು. ಅವ್ವೊತ್ತಿನ ದಿವಸ ಏನಾಗಿತ್ತು ಎಂದರೆ ಪ್ರೊಕ್ಯೂರ್‌ಮೆಂಟು, ಕಂಟ್ರೋಲು ಇಂಥ ಸಂಕೋಲೆಗಳಿಂದ ರೈತನಿಗೆ ಎಷ್ಟು ಉತ್ತೇಜನ ಇರಬೇಕಿತ್ತೋ ಅಷ್ಟು ಉತ್ತೇಜನ ಇರಲಿಲ್ಲ. ಎಷ್ಟು ಹೆಚ್ಚು ಸಹಾಯ ಮಾಡಿದರೂ ವಾಣಿಜ್ಯ ಬೆಳೆಗಳಿಗೆ ನಿಗಾ ಕೊಡುತ್ತಿದ್ದರೇ ಹೊರತು ಆಹಾರ ಧಾನ್ಯ ಬೆಳೆಯುತ್ತಿರಲಿಲ್ಲ. ನಾವು ರೈತರಿಗೆ ಅನುಕೂಲವಾಗುವ ಅನೇಕ ಕೆಲಸಗಳನ್ನು ಮಾಡಿದ್ದೇವೆ. ತಮ್ಮಲ್ಲಿ ಅರಕೆ ಮಾಡಿಕೊಳ್ಳುವುದಾದರೆ, 1945 – 50 ರಲ್ಲಿ 481, 1950 – 51ರಲ್ಲಿ 1,295, 1951 – 52ರಲ್ಲಿ 552 ಬಾವಿಗಳನ್ನು ತೆಗೆದಿದ್ದಾರೆ. 18 ಮೇಜರ್‌ವರ್ಕ್ಸ್ ಮಾಡಿದ್ದಾರೆ.

Out of the Grow More Food Scheme, we have advanced 13,26,000 rupees for major works and area to be benifited is 22, 765 acres.

**Sri Srinivas Iyengar**: Are the works completed?

**Sri H. Siddaveerappa**: Most of them are complete.

ಆಮೇಲೆ ಮೇಜರ್ ಮತ್ತು ಮೈನರ್ ಕೆರೆಗಳನ್ನು ರಿಪೇರಿ ಮಾಡಿದ್ದೇವೆ. ಹೂಳು ತೆಗೆಸಿದ್ದೇವೆ. ಲಿಫ್ಟ್ ಇರಿಗೇಷನ್ ಮತ್ತು ರಿವರ್ ವ್ಯಾಲಿ ಪ್ರಾಜೆಕ್ಟ್‌ಗಳನ್ನು

ತೆಗೆದುಕೊಂಡು ಆ ಕೆಲಸ ಮಾಡಿದ್ದೇವೆ. ಫೀಡರ್ ಚಾನಲ್‌ಗಳನ್ನು ರಿಪೇರಿಮಾಡಿದ್ದೇವೆ. ಬೀಜ ಮತ್ತು ಗೊಬ್ಬರ ಹಂಚಿಕೆ ಮಾಡಿದ್ದೇವೆ. ಇಷ್ಟೆಲ್ಲಾ ಆಗಿ ತಕಾವಿ ಸಾಲಗಳನ್ನು ಕೊಟ್ಟಿದ್ದೇವೆ. ಹೀಗೆ ಅನೇಕ ಉಪಯುಕ್ತವಾದ ಕಾರ್ಯಗಳನ್ನು ಮಾಡಿದ್ದೇವೆ. ಕಾಲ ಇಲ್ಲದೇ ಇರುವುದರಿಂದ ಎಲ್ಲವನ್ನೂ ಹೇಳಲು ಅವಕಾಶವಿಲ್ಲ. ಯಾರಾದರೂ ಮಾನ್ಯ ಸದಸ್ಯರು ನಿಜವಾಗಿಯೂ ಜೆ.ಎಂ.ಎಫ್. ಸ್ಕೀಂ ಪ್ರಕಾರ ಎಷ್ಟು ಕಾರ್ಯಗಳಾಗಿವೆ. ಏನು ಕೆಲಸ ನಡೆದಿದೆ, ಯಾವಯಾವ ರೀತಿ ಮುಂದುವರೆದಿದೆ ಎಂಬುದನ್ನು ತಿಳಿದುಕೊಳ್ಳಲು ಅಪೇಕ್ಷೆಪಟ್ಟರೆ ಅವರಿಗೆ ಕೃತಜ್ಞತೆಯಿಂದ, ಸಂತೋಷದಿಂದ ತಿಳಿಸುತ್ತೇನೆ. ಆದ್ದರಿಂದ ವಿಷಯ ಸಂಗ್ರಹಣೆ ಮಾಡಿ ತಪ್ಪಿದ್ದರೆ ಹೇಳಬೇಕೇ ಹೊರತು, ಒಂದೇ ಒಂದು ಬ್ರಷ್ ಇಟ್ಟುಕೊಂಡು ಒಂದೇ ಬಣ್ಣ ಬಳಿಯುವಂತೆ ಹೇಳುವುದು ಚನ್ನಾಗಿರುವುದಿಲ್ಲ.

ಶ್ರೀ ಎಸ್. **ಗೋಪಾಲಗೌಡರು:** ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸುತ್ತೀರಾ? ಅಂಕಿ ಸಂಖ್ಯೆ ಕೊಡುತ್ತೀರಾ?

ಶ್ರೀ **ಎಚ್. ಸಿದ್ದವೀರಪ್ಪ:** ಹೌದು, ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ವ್ಯವಸಾಯ ಇಲಾಖೆ ಉಪಯುಕ್ತವಾದದ್ದು. ವ್ಯವಸಾಯದ ಇಲಾಖೆಯ ಪ್ರಾಮುಖ್ಯತೆ ಸರ್ಕಾರದ ಗಮನಕ್ಕೆ ಬಂದಿದೆ. ತಾವು ಯಾವ ದೃಷ್ಟಿಯಿಂದ ಟೀಕೆ ಮಾಡಿದ್ದರೂ ಅದನ್ನು ಸಲಹಾ ರೂಪವಾಗಿ ತೆಗೆದುಕೊಂಡು ಸರ್ಕಾರದವರು ವ್ಯವಸಾಯ ಇಲಾಖೆಯನ್ನು ಉತ್ತಮಪಡಿಸಲಿಕ್ಕೂ, ಸರಿಪಡಿಸಲಿಕ್ಕೂ ಇನ್ನೂ ಹೆಚ್ಚಾಗಿ ಪ್ರಯತ್ನ ಮಾಡುತ್ತೇವೆ.

* * *

# ಪ್ರತಿಪಕ್ಷದ ಸಹಕಾರ ಕುರಿತು ಮಾತು

3, ಸೆಪ್ಟೆಂಬರ್ 1968

**ಶ್ರೀ ಎಚ್. ಸಿದ್ದವೀರಪ್ಪ :** ಮಾನ್ಯ ಸಭೆಯ ವಿರೋಧ ಪಕ್ಷದ ನಾಯಕರು ಒಂದು ಸೂಚನೆಯನ್ನು ತಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು. ಅದನ್ನು ಬಹಳ ಸಾವಧಾನದಿಂದ ಕೇಳಿದೆ. ಅವರು ಹೇಳಿದ್ದರಲ್ಲಿ ಕಾಂಗ್ರೆಸ್ ಪಕ್ಷದವರೇ ರಾಜ್ಯಭಾರ ಮಾಡುತ್ತಿದ್ದಾರೆ, ಅದೇ ನೀತಿ ಇದೆ, ಅದೇ ಧೋರಣೆ ಇದೆ, ಅದೇ ರೀತಿ ಮುಂದುವರೆಯುತ್ತದೆ ಎಂದು ಹೇಳಿದರು. ಇದನ್ನು ಕೇಳಿ ನನಗೆ ಸ್ವಲ್ಪ ಒಂದು ರೀತಿಯ ವ್ಯಸನವೂ ಆಯಿತು. ಗಾಬರಿಯೂ ಆಯಿತು. ಏಕೆಂದರೆ ಈ ದೇಶಕ್ಕೆಲ್ಲ ಗೊತ್ತಿತ್ತು, ಹಿಂದೆ ಇದ್ದ ಆಡಳಿತ ಉಸುಬಿನಲ್ಲಿ ಸಿಕ್ಕಿಕೊಂಡು ಮೇಲೆ ಏಳುತ್ತ ಇರಲಿಲ್ಲ, ಆದುದರಿಂದ ಬೇರೆ ಮಂತ್ರಿಮಂಡಲ ಬಂದರೆ ಅದಕ್ಕೆ ಒಂದು ಹೊಸ ಹುರುಪು ಕೊಟ್ಟು ರಾಜ್ಯಭಾರ ಸುಗಮವಾಗಿ ನಡೆಯುವಂತೆ ತೆಗೆದುಕೊಂಡು ಹೋಗಬಹುದು ಎನ್ನುವ ಆಸೆ ಎಲ್ಲ ಇತ್ತು ಎಂದು ಅನೇಕ ಸಾರಿ ಈ ಸಭೆಯಲ್ಲಿ ಹೇಳಿದ್ದೇನೆ. ದೇಶದ ಹಿತದೃಷ್ಟಿಯಿಂದ ಎಲ್ಲರ ಸಹಕಾರವನ್ನೂ ಅಪೇಕ್ಷೆ ಮಾಡುತ್ತೇನೆ ಎನ್ನುವ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಒಂದು ವಿಷಯವನ್ನು ಈ ಸಮಯದಲ್ಲಿ ನಾನು ಈ ಸಭೆಯ ಮೂಲಕ ಅವರ ಗಮನಕ್ಕೆ ತರಬೇಕೆಂದು ಇಚ್ಛೆಪಟ್ಟು ಎದ್ದು ನಿಂತಿದ್ದೇನೆ.

ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಆಡಳಿತ ಪರಿಸ್ಥಿತಿ ಹೇಗಿದೆ ಎಂದರೆ ಆಡಳಿತದ ಕೀಲುಗಳೆಲ್ಲ ಸಡಿಲವಾಗಿವೆ. ಎಷ್ಟೋ ಕೀಲುಗಳಿಲ್ಲದ ಗಾಡಿಗಳು ಓಡುತ್ತಿವೆ ಎಂದು ಹೇಳಿದರೂ ತಪ್ಪಾಗಲಾರದು. ಅಧಿಕಾರಿಗಳ ಮೇಲೆ ಸರಿಯಾದ ಲಗಾಮು ಇಟ್ಟು ಆಡಳಿತವನ್ನು ಸರಿಯಾಗಿ ತೆಗೆದುಕೊಂಡು ಹೋಗದೆ ಇದ್ದರೆ ಈ ಬ್ಯೂರಾಕ್ರೆಸಿ ಕೈಯಲ್ಲಿ ಈ ದೇಶ ಉಳಿಯುವುದಿಲ್ಲ ಎನ್ನುವುದನ್ನು ಮೊದಲು ಈ ಮಂತ್ರಿಮಂಡಳ ಎಷ್ಟು ಜಾಗ್ರತೆ ಅರ್ಥ ಮಾಡಿಕೊಳ್ಳುತ್ತದೋ, ಅಷ್ಟೂ ಈ ದೇಶಕ್ಕೆ ಒಳ್ಳೆಯದು ಎಂದು ಭಾವಿಸಿದ್ದೇನೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಯಾರೂ ಸರಿಯಾದ ರೀತಿಯಿಂದ ಲಗಾಮನ್ನು ಹಿಡಿದುಕೊಂಡು ಹೋಗದೆ ಇರುವುದರಿಂದ ಆಡಳಿತದಲ್ಲಿರತಕ್ಕ ಆಡಳಿತ ವರ್ಗ ಸರಿಯಾಗಿ ನಡೆಸಿಕೊಂಡು ಹೋಗುತ್ತಿಲ್ಲ. ಇವೊತ್ತಿನ ದಿವಸ ಒಂದೇ ಒಂದು

ಉದಾಹರಣೆಯನ್ನು ಹೇಳಬೇಕೆಂದರೆ ಮಾನ್ಯ ಮುಖ್ಯಮಂತ್ರಿ ಇಂದು ಹೇಳಿಕೆಯನ್ನು ಕೊಟ್ಟು there are three bug bears ಎಂದು ಹೇಳಿದರು. ಆ ಪತ್ರಿಕೆ ಇವೊತ್ತು ತರಲಿಲ್ಲ. ಆಡಳಿತದಲ್ಲಿ ಒಬ್ಬ ತಹಸೀಲ್ದಾರ ಮಾಡತಕ್ಕ ವಿಚಾರದಲ್ಲಿ ಸಹ ಕೆಲವರು ನನಗೆ ಕಾಗದ ಬರೆಯುತ್ತಾರೆ ಎಂದು ಹೇಳಿದರು. ಇದಕ್ಕೆ ಕಾರಣವಿಷ್ಟೆ, ನನ್ನ ಸ್ವಂತ ಅನುಭವದ ಮೇಲೆ ಹೇಳುತ್ತಿದ್ದೇನೆ. ಸರ್ಕಾರದಲ್ಲಿ ಟೆಲಿಫೋನ್ ಸೌಕರ್ಯವಿದೆ. ಅವರು ಎಷ್ಟು ಬಾರಿ ಫೋನ್ ಮಾಡಿದರೂ ಆಗಬಹುದು. ಅದೇ ಒಬ್ಬ ಖಾಸಗಿ ವ್ಯಕ್ತಿ ಫೋನ್ ಮಾಡಬೇಕಾದರೆ ಪ್ರತಿ ಸಲ ಫೋನ್ ಮಾಡಿದಾಗಲೂ 20 ಪೈಸೆ ಕೊಡಬೇಕು. ಸಾರ್ವಜನಿಕರಿಂದ ಅನೇಕ ಬೇಡಿಕೆಗಳು ಬಂದಾಗ ಸಣ್ಣ ಸಣ್ಣ ವಿಷಯಗಳಿಗೆ ಅಧಿಕಾರಿಗಳಿಗೆ ಹತ್ತು ಸಾರಿ, ಇಪ್ಪತ್ತು ಸಾರಿ ಟೆಲಿಫೋನ್ ಮಾಡಿದರೂ ಅದಕ್ಕೆ ಮನ್ನಣೆ ಕೊಡದೆ ಇರತಕ್ಕ ಕೆಲವು ನಿದರ್ಶನಗಳು ನನ್ನಂಥವನ ಅನುಭವಕ್ಕೆ ಬಂದಿವೆ. ನಾನು ಕೆಲವು ಕಾಲ ಆಡಳಿತದ ಹೊರೆಯನ್ನು ಹೊತ್ತಿದ್ದೇನೆ. ಎಲ್ಲ ಅಧಿಕಾರಿಗಳೂ ಹೀಗೆಯೇ ಇದ್ದಾರೆ ಎಂದು ನಾನು ಹೇಳುವುದಿಲ್ಲ. ಸ್ವೀಪಿಂಗ್ ಜನರಲೈಸೇಷನ್ ಮಾಡುತ್ತಿಲ್ಲ. ಒಳ್ಳೆಯ ಅಧಿಕಾರಿಗಳೂ ಇದ್ದಾರೆ, ದಕ್ಷರೂ ಇದ್ದಾರೆ. ಅದೇ ರೀತಿ ಅದಕ್ಕೆ ತದ್ವಿರುದ್ಧವಾಗಿರತಕ್ಕವರೂ ಇದ್ದಾರೆ. ಹತ್ತೂವರೆ ಗಂಟೆಗೆ ಬಂದು 5 ಗಂಟೆಗೆ ಹೋಗತಕ್ಕ ಅಧಿಕಾರಿಗಳೂ ಇದ್ದಾರೆ.

ಈ ಎಲ್ಲ ದೃಷ್ಟಿಯಿಂದ ಆಡಳಿತವನ್ನು ಸರಿಮಾಡಬೇಕಾದರೆ ನಮ್ಮ ದಕ್ಷತೆ ಮೊದಲು ಪ್ರದರ್ಶನವಾಗಬೇಕು. ಹಾಗೆ ಮಾಡಿದೆ ಬಹುಮಟ್ಟಿಗೆ ಪ್ರಜಾಪ್ರಭುತ್ವದಲ್ಲಿ ಉಳಿಗಾಲವಿರುತ್ತದೆ. ಇಲ್ಲದೆ ಇದ್ದರೆ ಇಲ್ಲ. ಇದನ್ನು ನೀವು ಯಾವ ರೀತಿ ಮಾಡುತ್ತೀರಿ ಎಂದು ನೋಡಬೇಕು. ಈಗಾಗಲೇ ನಿಮ್ಮ ಆಡಳಿತ ಬಂದು ಕೆಲವು ತಿಂಗಳಾಗಿವೆ. ಇನ್ನು ಅದೇ ರೀತಿ ಹೋಗತಕ್ಕ ಮಾರ್ಗವನ್ನು ಬಿಟ್ಟು ಬೇರೆ ರೀತಿಯಿಂದ ತೆಗೆದುಕೊಂಡು ಹೋಗಬೇಕು. ನಿಮ್ಮ ಆಡಳಿತದಲ್ಲಿ ಎಷ್ಟೋ ಹೊಸ ಮಂತ್ರಿಗಳನ್ನು ತೆಗೆದುಕೊಂಡಿದ್ದೀರಿ. ಅನೇಕರು ನಮಗೆ ಪರಿಚಯವಿಲ್ಲ. ಪರಿಚಯವನ್ನು ಮಾಡಕೊಳ್ಳಬೇಕಾದ ಪ್ರಸಂಗ ಬರಬಹುದು. ಮೊದಲನೆ ದಿವಸ ನಮ್ಮ ನಿಮ್ಮ ಇಂಟ್ರೊಡಕ್ಷನ್ ಆಗಿದ್ದರೆ ಚೆನ್ನಾಗಿತ್ತು ಎಂದು ಕಾಣುತ್ತದೆ. ನಿಮ್ಮ ಕೈಯಲ್ಲಿ ಏನು ಅಧಿಕಾರ ಶಕ್ತಿ ಇದೆ ಅದನ್ನು ಯಾವ ರೀತಿ ಮಾಡುತ್ತೀರಿ, ಹೇಗೆ ನಿರ್ವಹಣೆ ಮಾಡುತ್ತೀರಿ, ನೀವು ಯಾವ ರೀತಿ ದೇಶವನ್ನು ತೆಗೆದುಕೊಂಡು ಹೋಗುತ್ತೀರಿ ಎನ್ನುವುದರ ಮೇಲೆ ಈ ಕಡೆಯ ಪಕ್ಷದವರ ಸಹಕಾರ ನೀವು ಏನು ಕೇಳಿದ್ದೀರಿ ಅದನ್ನು ವಿಚಾರ ಮಾಡತಕ್ಕುದ್ದು ಬರುತ್ತದೆ. ನೀವೇನಾದರೂ ತಪ್ಪು ರೀತಿಯಿಂದ ಆಡಳಿತ ಮಾಡಿದರೆ ನಾವು ಖಡಾಖಂಡಿತವಾಗಿ ಕಾಂಗ್ರೆಸ್ ಕಡೆ ಕೈ ಮಾಡಿ ಹೇಳಬೇಕಾಗುತ್ತದೆ. ಇದಕ್ಕೆ ಈ ಸಂದರ್ಭ ಸಿಕ್ಕಿದ್ದರಿಂದ ಒಂದೆರಡು ಮಾತನ್ನು ಈ ಸಮಯದಲ್ಲಿ ಹೇಳುತ್ತಿದ್ದೇನೆ; ಮತ್ತು ದೇಶ ಯಾವ ರೀತಿ ಇದರ ವಿಚಾರದಲ್ಲಿ ಯೋಚನೆ ಮಾಡುತ್ತದೆ ಎನ್ನುವುದನ್ನೂ ತಿಳಿಸಿದ್ದೇನೆ.

* * *



WD-H-035-13

# ಉಪಮಂತ್ರಿಗಳ ಕಾರುಬಾರು ಸುತ್ತ

24, ಜನವರಿ 1969

**ಶ್ರೀ ಎಚ್. ಸಿದ್ದವೀರಪ್ಪ :** ಸ್ವಾಮೀ, ರಾಜ್ಯಪಾಲರ ಭಾಷಣದ ಮೇಲೆ ನಾನು ಭಾಷಣ ಮಾಡಿದಾಗ ನೇರವಾಗಿ ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಎಚ್. ಸಿ. ಬೋರಯ್ಯನವರು ಕಳೆದ ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಯಾವ ರೀತಿ ಜಾತೀಯವಾದವನ್ನು ಎತ್ತಿ, ಜಾತೀಯ ಆಧಾರದ ಮೇಲೆ ಜಾತೀಯ ವಿಷಬೀಜವನ್ನು ಬಿತ್ತಿದ್ದಾರೆಂಬುದನ್ನು ನನ್ನ ಭಾಷಣದಲ್ಲಿ ತಿಳಿಸಿದ್ದೇನೆ. ಅವರ ವಿಚಾರದಲ್ಲಿ ನಾನು ಏನು ಹೇಳಿದ್ದೇನೋ ಅದರಲ್ಲಿ ಪ್ರತಿಯೊಂದು ಶಬ್ದಕ್ಕೂ ನಾನು ಹೊಣೆಯಾಗಿದ್ದೇನೆ. ಒಂದು ವೇಳೆ ನಾನು ತಪ್ಪು ಹೇಳಿದ್ದೇನೆ ಎನ್ನುವುದನ್ನು ಮಾನ್ಯ ಉಪಮಂತ್ರಿಗಳ ರುಜುವಾತು ಮಾಡಿಕೊಟ್ಟರೆ, ಅದಕ್ಕೆ ಈ ಮಾನ್ಯ ಸಭೆಯಾಗಲೀ, ಅಥವಾ ತಾವಾಗಲೀ ನನಗೆ ಯಾವ ಶಿಕ್ಷೆಯನ್ನು ವಿಧಿಸಿದರೂ ನಾನು ಅದನ್ನು ವಹಿಸಲಿಕ್ಕೆ ಸಿದ್ಧನಾಗಿದ್ದೇನೆ.

ನಾನು ಮಾತನಾಡಬೇಕಾದರೆ, ನನ್ನ ಜವಾಬ್ದಾರಿಯನ್ನು ಅರಿತು ಮಾತನಾಡಿದ್ದೇನೆ. ಅದಕ್ಕೆ ಜವಾಬು ಕೊಡಲು ನಾನು ದುರ್ದೈವವಶಾತ್ ಇರಲಿಲ್ಲ. ಕಾರಣಾಂತರಗಳಿಂದ ಡೆಲ್ಲಿಗೆ ಹೋಗಿದ್ದೆ. ಬಂದ ಮೇಲೆ ವಿಷಯ ಗೊತ್ತಾಯಿತು. ಈಗ ತಾನೆ ಭಾಷಣದ ವರದಿಯು ಸಿಕ್ಕಿತು. ಅವರ ಭಾಷಣದ ವರದಿಯನ್ನು ನೋಡಿದರೆ, ಅವರು ಹೇಳಿದ್ದಾರೆ : "ಈ ಜಾತಿ ವಾದವನ್ನು ನಮ್ಮ ಜಿಲ್ಲೆಯಲ್ಲಿ ನಾನಲ್ಲ ಮಾಡಿದ್ದು, ಸಿದ್ದವೀರಪ್ಪನವರು ಬಿತ್ತಿದ್ದಾರೆ", ಎನ್ನತಕ್ಕಂತಹ ಒಂದು ಅಪಾದನೆಯನ್ನು ಮಾಡಿದ್ದಾರೆ. ನಾನು ಹೇಳಿದ್ದೇನೆ– ಭಾರತ ದೇಶದಲ್ಲಿ ಯಾರೇ ಆಗಲಿ, ಇವತ್ತು ಜಾತಿಯ ಆಧಾರದ ಮೇಲೆ ಏನಾದರೂ ಮಾಡಿದರೆ, ಅವರು ಅಕ್ಷಮ್ಯ ಅಪರಾಧವನ್ನು ಮಾಡಿದ ಹಾಗೆ ಆಗುತ್ತದೆ; ಮತ್ತು ಯಾವ ಉಗ್ರಶಿಕ್ಷೆಯನ್ನೂ ಅನುಭವಿಸಬೇಕಾಗುತ್ತದೆ. ತಾವು ನೋಡಿದ್ದೀರಿ ಮೊನ್ನೆ ಸುಪ್ರೀಂ ಕೋರ್ಟು ತೀರ್ಪು ಆಯಿತು. ಸುಪ್ರೀಂ ಕೋರ್ಟು ತೀರ್ಮಾನದ ಪ್ರಕಾರ, ಯಾರು ಜಾತೀಯತೆಯನ್ನು

ಮುಂದಿಟ್ಟು ಚುನಾವಣೆ ಪ್ರಚಾರ ಮಾಡಿದರೆ, ಅದು ಯಾವ ರೀತಿ ಅಪರಾಧವೆಂಬುದನ್ನು ಅವರು ತೋರಿಸಿದ್ದಾರೆ.

ಇವೊತ್ತು ಈ ಮಂತ್ರಿಯವರಲ್ಲದೆ, ನಮ್ಮ ಜಿಲ್ಲೆಯಲ್ಲಿ ಇನ್ನೊಬ್ಬ ಉಪಮಂತ್ರಿಯವರೂ ಇದ್ದಾರೆ; ಅವರು ಶ್ರೀ ಬಿ.ಎಲ್.ಗೌಡರು. ಅವರು ಕೂಡ ಚುನಾವಣೆಯ ಪ್ರಚಾರದಲ್ಲಿ ಇಳಿದಿದ್ದರು. ಅವರ ವಿಚಾರದಲ್ಲಿ ಈ ಅಪಾದನೆಯನ್ನು ನಾನು ಮಾಡಲಿಕ್ಕೆ ತಯಾರಿಲ್ಲ; ಏಕೆಂದರೆ, ಎಲ್ಲಿಯೂ ಅವರು ಜಾತಿವಾದವನ್ನು ಹೇಳಲಿಲ್ಲ. ಅದೇ ರೀತಿ ನಮ್ಮ ಸ್ನೇಹಿತರಾದಂತಹ ಶ್ರೀ ಮಂಜುನಾಥರವರು ಕೂಡ ಅನೇಕ ಪ್ರಚಾರ ಭಾಷಣಗಳನ್ನು ಮಾಡಿದ್ದಾರೆ. ಎಲ್ಲೆಲ್ಲೂ ಜಾತಿವಾದವನ್ನು ಹೇಳಲಿಲ್ಲ. ಈ ಮಂತ್ರಿಯವರು ಏನು ತಿಳಿದಿದ್ದಾರೆಂದರೆ, ಬಹುಶಃ ನಾನು ಪಾಳೇಗಾರನಾಗಿ ರಾಜ್ಯಭಾರ ಮಾಡಬಹುದು ಎಂದು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ ಎಂದು ಕಾಣುತ್ತದೆ. ಅವರು ಎಲ್ಲೆಲ್ಲಿ ಹೋದರೂ ಎಲ್ಲಾ ಕಡೆಯೂ ಜಾತೀಯತೆಯ ವಿನಹ ಏನೂ ಮಾಡಲಿಲ್ಲ. ಹಿಂದೆ ಒಂದು ಸಾರಿ ಹೇಳಿದ್ದೆ – ನಮ್ಮ ಜಿಲ್ಲೆಯ ಪ್ರಮುಖ ವ್ಯಕ್ತಿಯಾದ ಎಂ.ಪಿ. ಶ್ರೀ ಮುಲ್ಕಾಗೋವಿಂದ ರೆಡ್ಡಿಯವರ ಭಾವ ಮೈದುನರ ಮನೆಯಲ್ಲಿ ಕಳ್ಳತನವಾದಾಗ, ಆ ಕಳ್ಳತನದ ವಿಚಾರದಲ್ಲಿ ಪೋಲೀಸಿನವರು ತನಿಖೆ ಮಾಡುತ್ತಿದ್ದಾಗ, ಈ ಮಾನ್ಯ ಉಪಮಂತ್ರಿಯವರು ಒಳಹೊಕ್ಕು, ತನಿಖೆಗೆ ಅಡ್ಡಿಮಾಡಿದರು ಎಂದು ಹೇಳಿದಾಗ, ಇವರು ಇದೇ ಸಭೆಯಲ್ಲಿ ಒಪ್ಪಿಕೊಂಡರು. ಅದು ಬೇಕಾದರೆ, ಪ್ರೋಸಿಡಿಂಗ್ಸ್‌ನಲ್ಲಿ ಇದೆ. ನಾನು ತಿಳಿದೆ, ಏನಾದರೂ ತಿಳುವಳಿಕೆ ಇಲ್ಲದೆ ಮಾಡಿದ್ದಾರೆ, ಮುಂದಾದರೂ ಮಾಡಲಿಕ್ಕಿಲ್ಲ ಎಂದು. ಇವರು ತಿಂಗಳಲ್ಲಿ ಸುಮಾರು 25 ದಿವಸ ಅಲ್ಲಿರುವ ರೋಡ್ ಟ್ರಾನ್ಸ್‌ಪೋರ್ಟ್ ಗೆಸ್ಟ್ ಹೌಸಿನಲ್ಲಿ ಠಾಣೆ ಮಾಡಿದ್ದಾರೆ. ಅಲ್ಲಿ ಇವರು ಇದ್ದು ಮಾಡಿದ್ದು ಹೇಯವಾದ ಕೆಲಸ. ಜಾತೀಯತೆಯ ಅಪಚಾರವನ್ನು ಎಲ್ಲೆಲ್ಲೂ ಮಾಡಿದ್ದಾರೆ.

ಕಾಂಗ್ರೆಸ್ ಪಕ್ಷವಾಗಲಿ ಯಾವುದೇ ಪಕ್ಷವಾಗಲಿ ಈ ಚುನಾವಣೆಯಲ್ಲಿ ಭಾಗವಹಿಸಬಾರದೆಂದು ನನ್ನ ಅಭಿಪ್ರಾಯ. ನಾನು ಸ್ಥಳೀಯ ಚುನಾವಣೆಯ ಪ್ರಚಾರದಲ್ಲಿ ಭಾಗವಹಿಸಬೇಕು ಎನ್ನತಕ್ಕ ಅಭಿಪ್ರಾಯ ಇದ್ದವನು. ಅದಕ್ಕಾಗಿ ಜಿಲ್ಲೆಯ ಯಾವ ಪ್ರಚಾರಕ್ಕೂ ಹೋಗಿಲ್ಲ. ಚಿತ್ರದುರ್ಗ ತಾಲೂಕಿಗೆ 2 ದಿನ ಹೋದೆ. ನನಗೆ 15ನೇ ತಾರೀಕಿಗೆ ಚಿತ್ರದುರ್ಗದ ತಾಲ್ಲೂಕು ಬೋರ್ಡಿನ ವೈಸ್ ಪ್ರೆಸಿಡೆಂಟ್ ಕಾಗದ ಬರೆದಿದ್ದಾರೆ. ಅವರು ಈ ರೀತಿ ಬರೆದಿರುತ್ತಾರೆ:

"ಶ್ರೀಯುತ ಎಚ್. ಸಿದ್ದವೀರಪ್ಪ, ಎಂ.ಎಲ್.ಎ ಇವರಿಗೆ, ನಮಸ್ಕಾರಗಳು, ಸ್ವಾಮಿ, ತಾಲ್ಲೂಕು ಬೋರ್ಡಿನ ಚುನಾವಣೆಗೆ ಪ್ರಚಾರ ಶುರುವಾಗಿದೆ, ನಾವೆಲ್ಲರೂ ಪ್ರತೀ ಮನೆ ಮನೆಗೂ ಹೋಗಿ ಕ್ಯಾನ್‌ವಾಸ್ ಮಾಡುತ್ತಿದ್ದೇವೆ. ಆದರೆ ಕಾಂಗ್ರೆಸ್ಸಿನ ಪರವಾಗಿ ಉಪಮಂತ್ರಿ ಶ್ರೀ ಎಚ್.ಸಿ. ಬೋರಯ್ಯನವರ ಪ್ರಚಾರದ ದೆಸೆಯಿಂದ

ಗ್ರಾಮ ಗ್ರಾಮಗಳಲ್ಲಿ ಜಾತೀಯತೆಯ ವಿಷ ಬೀಜವೃಕ್ಷವಾಗಿ ಬೆಳೆದಿರುತ್ತೆ. ಉಪಮಂತ್ರಿಯಾದವರು ಪ್ರತಿಯೊಂದು ತಾಲೂಕು ಬೋರ್ಡಿನ ಕ್ಷೇತ್ರದ ಪ್ರತಿ ಗ್ರಾಮಕ್ಕೂ ಟೈಂ ಕೊಟ್ಟು ಪ್ರೋಗ್ರಾಂ ಪ್ರಿಂಟ್ ಮಾಡಿಸಿ ಹಂಚಿರುತ್ತಾರೆ. ಪೊಲೀಸ್ ಸಿಬ್ಬಂದಿ ಅವರ ಹಿಂದೆನೇ ಓಡಾಡುತ್ತಿದೆ. 1. ಬೆಳಗಟ್ಟಿ ಗ್ರಾಮದಲ್ಲಿ ನಾಯ್ಕರ ಹಟ್ಟಿಗೆ ಮಾತ್ರ ಹೋಗಿ ಕಾಂಗ್ರೆಸ್ಸಿಗೆ ಓಟು ಕೊಡಬೇಕು, ತಪ್ಪಿದರೆ ನನ್ನ ಮಾನ ಹೋಗುತ್ತೆ, ಮಂತ್ರಿತನ ಹೋಗುತ್ತೆ ಅಂತ ಹೇಳಿ ಪ್ರಚಾರ ಮಾಡಿದ್ದಾರೆ. 2. ಕೊಳಾಳು ಗ್ರಾಮದಲ್ಲಿ ಜನರ ಕಾಲು ಹಿಡಿದು ಪ್ರಚಾರ ನಡೆಸಿದ್ದಾರೆ. ಪ್ರತಿಯೊಂದು ಗ್ರಾಮದಲ್ಲೂ ನಾಯಕ ಜನಾಂಗದವರನ್ನೇ ಕಾಣುತ್ತಾ ನಮ್ಮ ಜಾತಿಯವರೆಲ್ಲಾ ಕಾಂಗ್ರೆಸ್ಸಿಗೇ ಓಟು ಕೊಡಬೇಕು ಅಂತ ಹೇಳುತ್ತಿದ್ದಾರೆ.

ನನ್ನ ಮೇಲೂ ಮತ್ತು ಶ್ರೀಮಾನ್ ಗಂಗಾಧರಯ್ಯನವರ ಕ್ಷೇತ್ರದ ಮೇಲೂ ತೀವ್ರತರವಾದ ಪ್ರಚಾರವನ್ನು ಪೊಲೀಸಿನವರ ಸಹಾಯದೊಡನೆ ಮಾಡುತ್ತಿದ್ದಾರೆ. ಅಧಿಕಾರಿಗಳ ಸಹಕಾರವನ್ನು ಪಡೆಯುತ್ತಿದ್ದಾರೆ. ಅಮಲ್ದಾರ್‌ವರ ಮೇಲೆ ಪ್ರಭಾವ ಬೀರಿ ಹೊಸ ಓಟರುಗಳ ಹೆಸರನ್ನು ಸೇರಿಸಲು ಒತ್ತಾಯ ಪಡಿಸುತ್ತಿದ್ದಾರೆ. ಈ ಉಪಟಳ ತಡೆಯುವುದು ಬಹಳ ಕಷ್ಟವಾಗಿದೆ. ಮುಖಂಡರಾದ ನೀವು ಕೂಡ್ಲೆ ಬಂದು ಪ್ರಚಾರ ಕಾರ್ಯ ಮಾಡಬೇಕು. ಶ್ರೀ ಹೊ. ಸಿ. ಬೋರಯ್ಯನವರ ಅಧಿಕಾರ ದುರುಪಯೋಗ ನಿಲ್ಲಿಸುವಂತೆ ಮಾಡಲು ಕೋರುತ್ತೇನೆ." ಎಂದು ಒಂದು ಕಾಗದವನ್ನು ಬರೆದ ಮೇಲೆ ನಾನು ಅಲ್ಲಿಗೆ ಹೋದೆ. 25ನೇ ತಾರೀಕು ಚುನಾವಣೆ ನಡೆಯಿತು. 19ನೇ ತಾರೀಖು ನಾನು ಅಲ್ಲಿಗೆ ಹೋಗಿ ಅವರು ಪ್ರಚಾರ ಮಾಡಿದ್ದನ್ನು ಕಣ್ಣಾರೆ ನೋಡಿದ್ದೇನೆಯೇ ಎಂದು ಅವರು ವ್ಯಾಖ್ಯಾನ ಮಾಡಿದ್ದಾರೆ. ನಾನು ಅವರನ್ನು ಭೇಟಿ ಮಾಡಲಿಲ್ಲ. ಎಲ್ಲೆಲ್ಲಿ ಯಾವ ಯಾವ ಗ್ರಾಮಗಳಿಗೆ ಹೋಗಿ ಯಾವ ಯಾವ ಜನಗಳಿಗೆ ಏನೇನು ಹೇಳಿದ್ದಾರೆ, ಯಾರ ಯಾರ ಕಾಲು ಹಿಡಿದರು, ಎನ್ನತಕ್ಕಂಥ ವರದಿಯನ್ನು ಖುದ್ದಾಗಿ ಪರೀಕ್ಷಿಸಿ ಕಾಗದದಲ್ಲಿ ಇದ್ದದ್ದು ಸತ್ಯ ಎಂದು ತಿಳಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಟಪಾಲನ್ನು ಬರೆದಿದ್ದೇನೆ. ಒಂದು ಕಡೆ ಈ ಉಪಮಂತ್ರಿಗಳು ಜಾತೀಯ ವಿಷಬೀಜವನ್ನು ಬಿತ್ತುತ್ತಿದ್ದಾರೆ.

ಇಂಥ ಮಂತ್ರಿಗಳನ್ನು ಇಟ್ಟುಕೊಂಡರೆ ಈ ದೇಶಕ್ಕೆ ಕ್ಷೇಮವಿಲ್ಲ ಎಂದು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಜಾತಿವಾದ ಪ್ರಚಾರ ಮಾಡಿದವನು ನಾನಲ್ಲ, ಸಿದ್ದವೀರಪ್ಪನವರೇ ಅಂತ ಹೇಳಿದ್ದಾರೆ. ಇದು ವಿಚಾರಣೆಯಾಗಬೇಕು. ಚಿತ್ರದುರ್ಗ ತಾಲೂಕಿನಲ್ಲಿ ಇವರ ಉಪಟಳವನ್ನು ತಡೆಯುವುದಕ್ಕೆ ನಾನು ಎರಡು ದಿವಸ ಹೋಗಬೇಕಾಯಿತು. ಆದರೆ ನಾನು ಯಾವ ಪ್ರಚಾರ ಕಾರ್ಯಕ್ಕೂ ಹೋಗಲಿಲ್ಲ. ಎರಡು ಹಳ್ಳಿಗಳನ್ನು ಬಿಟ್ಟರೆ ಬಾಕಿ ಯಾವ ಹಳ್ಳಿಗಳಿಗೂ ನಾನು ಹೋಗಲಿಲ್ಲ. ಶ್ರೀಮಾನ್ ಹೊ.ಸಿ. ಬೋರಯ್ಯನವರು ಚಿತ್ರದುರ್ಗ ತಾಲ್ಲೂಕಿನ ಮೂಲೆ ಮೂಲೆಗಳಿಗೆಲ್ಲಾ ಹೋಗಿ ಮತ ಪ್ರಚಾರ, ಜಾತಿ ಪ್ರಚಾರ ಮಾಡಿದ್ದನ್ನು ಬೇಕಾದರೆ ನಾನು ರುಜುವಾತು ಮಾಡುತ್ತೇನೆ. ಇವರು ಚಿಕ್ಕಸಿದ್ದವನಹಳ್ಳಿ, ಕೋಳಾಳ್ ಮತ್ತು

ಕೊಟ್ಟಿ ಹಳ್ಳಿಗಳಿಗೆ ಹೋಗಿ ಪ್ರಚಾರ ಮಾಡಿ ಯಾರೂ ಲಿಂಗಾಯಿತರಿಗೆ ಹೆದರಬೇಡಿ ನಮಗೆ ಅಧಿಕಾರ ಇದೆ ಎಂದು ಹೇಳಿದ್ದಾರೆ. ಆಮೇಲೆ ವೀರಶೈವರೇ ಹೆಚ್ಚಾಗಿರತಕ್ಕ ಹಾಗೂ ಅವರ ಮತ ಇರತಕ್ಕ ಸಿರಿಗೆರೆ ಹೋಗಿ ಲೌಡ್ ಸ್ಪೀಕರ್ ಹಾಕಿಕೊಂಡು ಮಾತನಾಡಿ ಯಾರೂ ಹೆದರಬೇಡಿ ನಾನು ಮಂತ್ರಿಯಾಗಿದ್ದೇನೆ, ಏನು ಬಂದರೂ ನೋಡಿಕೊಳ್ಳುತ್ತೇನೆ ಇವರನ್ನು ಮಟ್ಟ ಹಾಕುತ್ತೇನೆ ಎಂದು ಪ್ರಚಾರ ಮಾಡಿದ್ದಾರೆ. ಈ ಬಗ್ಗೆ ನೂರಾರು ಜನಗಳ ಸಾಕ್ಷಿಯನ್ನು ಬೇಕಾದರೂ ಕೊಡುವುದಕ್ಕೆ ನಾನು ತಯಾರಾಗಿದ್ದೇನೆ.

25ನೇ ತಾರೀಖಿನ ದಿವಸ ಇವರು ಗೆಸ್ಟ್ ಹೌಸಿಗೆ ಬಾಡಿಗೆ ಕೊಟ್ಟಿದ್ದಾರೆಯೇ ಹೇಗೆ ಹೇಳಲಿ? ಆ ಗೆಸ್ಟ್ ಹೌಸಿಗೆ ನಾಯಕರ ಕಾನ್‌ಫರೆನ್ಸ್ ಕರೆದು ಚುನಾವಣೆಯ ಪ್ರಚಾರವನ್ನು ಮಾಡಿದ್ದಾರೆ. ಇದು ಸುಳ್ಳೆ? ಇದು ಸುಳ್ಳಾದರೆ ಬೇಕಾದ ಶಿಕ್ಷೆಗೆ ಸಿದ್ಧ. ಮೊನ್ನೆ ದ್ಯಾಮೇನ ಹಳ್ಳಿಯಲ್ಲಿ ಒಬ್ಬ ಹೆಂಗಸನ್ನು ಬೆತ್ತಲೆ ಮಾಡಿ, ಆಕೆಗೆ ಸುಣ್ಣ ಬಳಿದು ಮೆರವಣಿಗೆ ಮಾಡಿದ್ದಾರೆ. ಇದಕ್ಕೆ ಇವರ ಪ್ರೋತ್ಸಾಹ ಇದೆ ಎಂದು ನನ್ನ ಗಮನಕ್ಕೆ ಬಂದಿದೆ. ನಾನು ಇದನ್ನು ಬೇಕಾದರೆ ರುಜುವಾತು ಮಾಡಿಕೊಡುತ್ತೇನೆ. ಈ ರೀತಿ ಇರತಕ್ಕ ಮನುಷ್ಯರನ್ನು ಮಂತ್ರಿಮಂಡಲದಲ್ಲಿ ಇಟ್ಟುಕೊಂಡರೆ ದೇಶಕ್ಕೆ ಕ್ಷೇಮ ಉಂಟಾಗುತ್ತದೆಯೇ? ಈ ಮನುಷ್ಯರಿಗೆ ಜಾತಿ ವಿನಃ ಇನ್ನೊಂದು ಏನೂ ಗೊತ್ತಿಲ್ಲ. ರೆಡ್ಡಿಗಳ ಮೇಲೆ ನಾಯಕರನ್ನು ಎತ್ತಿ ಕಟ್ಟುವುದು, ಇನ್ನೊಂದು ಕಡೆ ಲಿಂಗಾಯಿತರ ಮೇಲೆ ನಾಯಕರನ್ನು ಎತ್ತಿಕಟ್ಟುವುದು ಇದೇ ಇವರ ಕೆಲಸ. ಆಮೇಲೆ ಇವರು ಚುನಾವಣಾ ಪ್ರಚಾರಕ್ಕೆ ಪೊಲೀಸ್ ವ್ಯಾನನ್ನು ನಾನು ತೆಗೆದುಕೊಂಡು ಹೋಗಿಲ್ಲ ಎಂದು ಹೇಳಿದ್ದಾರೆ, ಬೇಕಾದರೆ ನಾನು ಇದನ್ನು ರುಜುವಾತು ಮಾಡಿಕೊಡುತ್ತೇನೆ. ಈ ವಿಚಾರದಲ್ಲಿ ನಾನು ಡಿ.ಎಸ್.ಪಿಗೆ ಬರೆದಿದ್ದೇನೆ, ಡಿಸಿಗೆ ಬರೆದಿದ್ದೇನೆ ಮತ್ತು ಪ್ರೆಸ್ ಸ್ಟೇಟ್‌ಮೆಂಟ್ ಕೂಡ ಕೊಟ್ಟಿದ್ದೇನೆ.

ನಾನು ಇವರ ತಾಲ್ಲೂಕ್‌ಗೆ ಕಾಲಿಡುತ್ತಿರಲಿಲ್ಲ. ಇವರ ಒಂದು ಉಪಟಳವನ್ನು ತಾಳಲಾರದೆ ನಾನು ಹೋಗಬೇಕಾಯಿತು. ಆ ಭಾಗದಲ್ಲಿ ಎಷ್ಟು ಜಾತಿಯವರು ಇದ್ದಾರೆಯೋ ಅವರೆಲ್ಲರ ಸಾಕ್ಷಿಯನ್ನು ಸಹ ಕೊಡಿಸುತ್ತೇನೆ. ಇದು ರುಜುವಾತಾಗಬೇಕಾಗಿದೆ. ಅವರು ತಪ್ಪು ಮಾಡಿದ್ದಾರೋ ನಾವು ತಪ್ಪು ಮಾಡಿದ್ದೇವೋ ಎಂಬುದು ರುಜುವಾತಾಗಲಿ. ಮಾನ್ಯ ಸ್ನೇಹಿತರು ಕೆಲವರು ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ಕಳಿಸಬೇಕೆಂದರು. ಆ ರೀತಿ ಕಳಿಸಿದರೆ ಬಹಳ ಸಂತೋಷ. ಯಾವ ಕಮಿಟಿಗೆ ಬೇಕಾದರೂ ಹಾಕಿ. ಬೀಜವನ್ನು ಬಿತ್ತಿದ್ದೇನೆ ಎಂದು ಹೇಳಿದ್ದಾರೆ. ನಾನು ಇಲ್ಲವೆಂದು ಹೇಳಿದ್ದೇನೆ. ಅವರೂ ಸಹ ಇಲ್ಲವೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಏನು ಮಾಡಿದ್ದೇನೆ, ಅವರು ಏನು ಮಾಡಿದ್ದಾರೆ ಎಂಬುದು ರುಜುವಾತಾಗಬೇಕಾಗಿದೆ. ಅದಕ್ಕೋಸ್ಕರ ತಾವು ಒಂದು ದಾರಿಯನ್ನು ಮಾಡಿಕೊಡಬೇಕಾಗಿದೆ ಎಂದು ಹೇಳುತ್ತೇನೆ.

* * *

# ಕಂದಾಯ ಮಸೂದೆ ಕುರಿತು ಚರ್ಚೆ

10, ಏಪ್ರಿಲ್ 1969

**ಶ್ರೀ ಎಚ್.ಸಿದ್ದವೀರಪ್ಪ** (ಹರಿಹರ) : ಸ್ವಾಮೀ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಈ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈ ಸಮಯದಲ್ಲಿ ನನಗೆ ಇಲ್ಲಿ ಸರ್ವಜ್ಞನ ಒಂದು ಪದ್ಯ ನೆನಪಿಗೆ ಬರುತ್ತದೆ, ಅದು

**ಮೂರ್ಖನಿಗೆ ಬುದ್ಧಿಯಂ ನೂರ್ಕಾಲ ಪೇಳ್ದೊಡೆ**
**ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ**

ಎಂದು ಹೇಳುವಂತೆ ಈ ಸರಕಾರಕ್ಕೆ ನೂರ ಸಲ ಹೇಳಿ ತಲೆ ಚಚ್ಚಿಕೊಂಡರೂ ಅದಕ್ಕೇನೂ ಬೆಲೆಯನ್ನೇ ಕೊಡುತ್ತಿಲ್ಲ. ನಮಗೂ ಹೇಳಿ ಹೇಳಿ ಸಾಕಾಗಿ ಹೋಗಿದೆ. ಆದರೂ ಸ್ವಲ್ಪವಾದರೂ ಅವರ ಕಿವಿಗೆ ಬೀಳಲಿ ಎಂದು ಹೇಳಿದರೂ ಅದನ್ನು ಕೇಳುತ್ತಿಲ್ಲ. ನಾವು ಇಲ್ಲಿ ಹೇಳುತ್ತಿರುವುದೆಲ್ಲಾ ಬರೀ ಅರಣ್ಯ ರೋದನವಾಗುತ್ತದೆ ಎನ್ನುವುದು ಈಗಾಗಲೇ ನಮಗೂ ಮನವರಿಕೆಯಾಗಿದೆ. ಆದರೂ ಚಿಂತೆಯಿಲ್ಲ. ಮುಂದಿನ ಜನಾಂಗಕ್ಕೆ ಇಂತಹ ಕಂದಾಯದ ಮಸೂದೆ ಬಂದಿತ್ತು, ಇದನ್ನು ಯಾವ ರೀತಿ ಮಾಡಿದರು ಎನ್ನುವುದನ್ನು ತೋರಿಸಬೇಕು ಎಂದು ಅದಕ್ಕಾಗಿ ಇಲ್ಲಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಈಗ ಬೇಕಾಗಿರುವುದು ಮುಂದೆ ನಮಗೆಲ್ಲರಿಗೂ ವೋಟು ಕೊಟ್ಟು ಇಲ್ಲಿಗೆ ಯಾರು ಕಳುಹಿಸಿರುತ್ತಾರೋ ಅವರಿಗೆ ಇಲ್ಲಿ ಏನೇನು ನಡೆಯಿತು ಎನ್ನುವ ವರದಿಯನ್ನು ಒಪ್ಪಿಸಬೇಕಾಗಿದೆ ಮತ್ತು ಇಲ್ಲಿ ನಡೆದ ನಡವಳಿಕೆಗಳ ಬಗ್ಗೆ ಅತಿ ಮುಖ್ಯವಾದ ಎರಡು ಮಾತುಗಳನ್ನು ಇಲ್ಲಿ ಹೇಳುತ್ತೇನೆ.

ಸ್ವಾಮೀ, ಇದರಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಮಸೂದೆಯನ್ನು ಮಂಡಿಸುತ್ತಾ – ನಿಮಗೆಲ್ಲಾ ಪರಿಹಾರಗಳನ್ನು ತರಲಿಕ್ಕೆ ಅನುಕೂಲವಾಗುವಂತೆ ಇಲ್ಲಿ ಮಸೂದೆ ತಂದಿದ್ದೇವೆ ಎಂದು ಹೇಳಿದರು. ನಾನಾದರೂ ಹೇಳುವುದು ಇಲ್ಲಿ ನಾವು ಇದಕ್ಕಾಗಿ ಮಾಡಿದ ಧರಣಿ ಮುಷ್ಕರದ ಪರಿಣಾಮ ಏನಾಯಿತು? ಆಗ

ಹೇಳಿದಂತೆ ಇಲ್ಲಿ ತಂದಿರುವ ಮಸೂದೆಯನ್ನು ನೋಡಿದರೆ, ಇವರು ಮಾಡಿರುವುದು ಹೇಗಾಗಿದೆ ಎಂದರೆ, ಗುಡ್ಡ ಅಗೆದು ಇಲಿ ತೆಗೆದಂತೆ ಆಗಿದೆ. ಇದರಲ್ಲಿ ಎರಡೇ ಎರಡು ಕಾಲಂಗಳನ್ನು ಹಾಕಿ ತಂದಿದ್ದೇವೆ ಎಂದು ಹೇಳುತ್ತಾರೆ. ಇದರಲ್ಲಿ ಎಷ್ಟು ತಿರುಳಿದೆ ಎಂದರೆ, ರೈತನಿಗೆ ಎಷ್ಟು ಕಷ್ಟಗಳನ್ನು ಮತ್ತು ಎಷ್ಟು ಕಿರುಕುಳಗಳನ್ನು ಕೊಡಬಹುದೋ ಅಷ್ಟನ್ನೂ ಕೊಡುವುದಕ್ಕೆ ಈ ಒಂದು ಮಸೂದೆಯಲ್ಲಿ ಅವಕಾಶವಿದೆ. ಮುಂದೆ ಇದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿದರೆ ಇದನ್ನು ಒಂದು ನೆಪ ಮಾಡಿಕೊಂಡು, 1972ರಲ್ಲಿ ನಡೆಯುವ ಚುನಾವಣೆಯಲ್ಲಿ ಜನರನ್ನು ವೋಟು ಕೇಳುವಾಗ ತಮ್ಮ ಕಡೆಗೇ ಕೊಡಬೇಕು ಎಂದು ಕೇಳುವುದಕ್ಕಾಗಿ ತಂದಂತಿದೆ. ಇದರಲ್ಲಿ ಯಾವ ಅನುಮಾನವೂ ಇಲ್ಲ. ಇದರಿಂದ ದೇಶದಲ್ಲಿ ಒಂದು ರೀತಿಯ ಗೊಂದಲಕ್ಕೆ ಹಾಗೂ ಕಹಿ ವಾತಾವರಣಕ್ಕೆ ಅವಕಾಶವಾಗುತ್ತದೆ.

1965ನೇ ಚುನಾವಣೆಯಲ್ಲಿ ಜನರ ಮುಂದೆ ಹೋಗಿ ಏನು ಭರವಸೆ ಕೊಟ್ಟಿದ್ದೀರಿ ಅದಕ್ಕೆ ಗಮನಕೊಟ್ಟು ಇದನ್ನು ತಂದಿದೆ ಎಂದು ನಾನು ತಿಳಿದುಕೊಂಡಿಲ್ಲ. ಈಗ ಇರತಕ್ಕ ರೀತಿಯಲ್ಲಿ ಕಾನೂನಿನಲ್ಲಿ ಏನನ್ನೂ ಮಾಡಿಲ್ಲ. ನಾನು ಇದನ್ನು ಚೆನ್ನಾಗಿ ಪರೀಕ್ಷೆ ಮಾಡಿ ನೋಡಿದ್ದೇನೆ. ಯಾವ ರೀತಿಯಿಂದ ಕಂದಾಯ ಜಾಸ್ತಿಯಾಗಿದೆ ಎನ್ನುವುದನ್ನು ಆಮೇಲೆ ಬೇಕಾದರೆ ತಮಗೆ ತೋರಿಸಿಕೊಡುತ್ತೇನೆ. ಏನೋ ಸುಪ್ರೀಂ ಕೋರ್ಟಿನವರು ನಮಗೆ ಒಂದು ದೊಡ್ಡ ಉಪಕಾರ ಮಾಡಿದ್ದಾರೆ. ಅವರು ಇಂತಹ ಕಂದಾಯವನ್ನು ಜಾಸ್ತಿ ಮಾಡುವಾಗ ನೀವು ಪ್ರತಿಯೊಬ್ಬರನ್ನೂ ಕೇಳಬೇಕು ಮತ್ತು ಅವರು ತಮ್ಮ ಅಭಿಪ್ರಾಯ ಕೊಡಲು ಅವಕಾಶ ಕೊಡಬೇಕು ಎಂದು ಹೇಳಿದ್ದಾರೆ. ಕಂದಾಯವನ್ನು ರದ್ದು ಮಾಡುತ್ತೇವೆ ಎಂದು ಕೃಷಿ ಮಾಡುವ ಜನರಿಂದ ವೋಟ್‌ನ್ನು ಪಡೆದು ಇಲ್ಲಿ ಅಧಿಕಾರಕ್ಕೆ ಬಂದಮೇಲೆ ಅದನ್ನು ಮರೆತಿದ್ದೀರಿ. ಇದಕ್ಕಾಗಿ ಜನ ಈಗಾಗಲೇ ನಿಮ್ಮ ಕುತ್ತಿಗೆಗಳನ್ನು ಕುಯ್ಯಲು ಬರುತ್ತಿದ್ದಾರೆ ಎಂದು ತಿಳಿದಿದ್ದರೂ ನೀವು ಕೇಳಿದರೂ ಕೇಳದಂತೆ ಕುಳಿತಿದ್ದೀರಿ. ಬಹುಶಃ ಪತ್ರಿಕೆಗಳಲ್ಲಿ ಎಲ್ಲರೂ ಓದಿರಬಹುದು. ಇಂಡೋನೇಷ್ಯಾದಲ್ಲಿ ಡಾಕ್ಟರ್ ಸುಕಾರ್ನೋ ಎನ್ನುವ ಮಹಾವಿಭೂತಿ ಪುರುಷರಿಗೆ ಅವರ ಅಧಿಕಾರ ಹೋದ ಮೇಲೆ ಏನಾಯಿತು ಎನ್ನುವ ಪರಿಸ್ಥಿತಿಯನ್ನು ತಾವು ನೆನೆಸಿಕೊಂಡರೆ ಸಾಕು. ಅದೇ ಬವಣೆ ನಿಮಗೂ ಬರುತ್ತದೆ. ಸುಮಾರು ಹತ್ತು ವರ್ಷಗಳಿಂದಲೂ ನಾವು ಹೇಳುತ್ತ ಬರುತ್ತಿದ್ದರೂ ನಿಮಗೆ ಕಿವಿ ಕೇಳಿಸುತ್ತಿಲ್ಲ. ಒಂದಲ್ಲ ಒಂದು ದಿವಸ ನಿಮಗೂ ಇಂತಹ ಪರಿಸ್ಥಿತಿ ಬಂದೇ ಬರುತ್ತದೆ. ಹಾಗೂ ಹೀಗೂ ಹೋಗತಕ್ಕಂತಹ ನಿಮ್ಮ ಪರಿಸ್ಥಿತಿಯ ಬಗ್ಗೆ ಸರಿಯಾದ ಅರಿವು ಮಾಡಿಕೊಳ್ಳಬೇಕು ಎಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ತಾವು ಇಲ್ಲಿ ಏನು ಹೇಳುತ್ತೀರಿ ಎಂದರೆ ಗಾರ್ಡನ್ ಮೇಲೆ ಅಥವಾ ಕ್ರಾಪ್ ಮೇಲೆ ತರಿಕಂದಾಯ ಹಾಕುತ್ತೇವೆ ಎಂದು ಹೇಳುತ್ತೀರಿ.

ಕ್ರಾಪ್ ಮೇಲೆ ತರಿಕಂದಾಯ ಹಾಕಬೇಕಾದರೆ ಇಂದು ನಿಮ್ಮಲ್ಲಿ ಶ್ಯಾನುಭೋಗರು ಇಲ್ಲ. ಅವರನ್ನು ತೆಗೆದು ಅವರ ಜಾಗದಲ್ಲಿ ಅಕೌಂಟೆಂಟ್‌ರನ್ನು ನೇಮಿಸಿದ್ದೀರಿ. ಇವರು ವರ್ಷದಿಂದ ವರ್ಷಕ್ಕೆ ಕಂದಾಯ ಇಷ್ಟು ಬರಬೇಕು ಎಂದು ಬರೆಯಬೇಕಾದರೆ, ಈ ಭೂಪ ಏನು ಮಾಡುತ್ತಾನೆ ಎಂದರೆ ಮಾಲು ಕಡಿಮೆ ಇದೆಯೇ ಹೆಚ್ಚಾಗಿದೆಯೇ ಯಾವುದನ್ನೂ ನೋಡುವುದಿಲ್ಲ. ಕ್ರಾಪ್ ಹೇಗೆ ಬರುತ್ತದೋ ಅದಕ್ಕೆ ತಕ್ಕಂತೆ ಹೈಯರ್ ಟ್ಯಾಕ್ಸ್ ಕೊಡಬೇಕೆಂದು ಬರೆದು ಬಿಡುತ್ತಾನೆ. ಇದರ ಮೇಲೆ ಸರಿಯಾಗಿಲ್ಲ ಎಂದರೆ ಅಪೀಲು ಬೇಕಾದರೆ ಹೋಗಿ ಎಂದು ಹೇಳುತ್ತಾರೆ. ಇದೇ ರೀತಿ ಈಗ ಲೆವಿ ವಿಚಾರವೂ ಕೂಡ ಆಗಿ, ಅನೇಕ ಗೊಂದಲಗಳಿಗೆ ಕಾರಣವಾಗಿದೆ. ಕೊಡತಕ್ಕ ಲೆವಿ ಇಷ್ಟು ಎಂದು ಬರೆಯಲು ಬತ್ತ ಎಷ್ಟು ಬಂದಿದೆ ಎನ್ನುವುದನ್ನು ನೋಡದೇ ಸುಮ್ಮನೆ ತನಗೆ ಮನಸ್ಸಿಗೆ ಬಂದಂತೆ ಲೆಕ್ಕಗಳನ್ನು ಬರೆಯುತ್ತಾರೆ. ಈಗ ಎರಡು ಲಕ್ಷ ಟನ್ ಭತ್ತ ಬರಬೇಕೆಂದು ಲೆವಿ ಲೆಕ್ಕ ಬರೆಯುತ್ತಿರುವುದು ಇಲ್ಲಿರುವ ಅಕೌಂಟೆಂಟರುಗಳು ಸರಿಯಾದ ಲೆಕ್ಕಗಳನ್ನು ಬರೆಯುವುದರಿಂದ ಆಗುತ್ತದೆ.

ಮಾನ್ಯ ಆಹಾರ ಮಂತ್ರಿಗಳು ಒಂದು ಮೀಟಿಂಗ್ ಕರೆದಿದ್ದಾರೆ. ಆಗ ಇರುವ ಕಷ್ಟಗಳನ್ನು ಹೇಳಬೇಕಾಗುತ್ತದೆ. ಒಟ್ಟಿನಲ್ಲಿ ರೈತರಿಗೆ ಕಿರುಕುಳ ಕೊಡುವುದಕ್ಕಾಗಿ ಲೆವಿಪದ್ಧತಿ ತಂದು ಬಡ ರೈತರನ್ನು ಹಿಂಸೆ ಮಾಡಿ ನಿರ್ದಾಕ್ಷಿಣ್ಯದಿಂದ ವಸೂಲು ಮಾಡುತ್ತಿದ್ದಾರೆ. ಇದಕ್ಕೆ ಒಂದು ಸಣ್ಣ ಉದಾಹರಣೆ ಇಲ್ಲಿ ಅಧಿಕಾರಿಗಳ ಬಗ್ಗೆ ಹೇಳುತ್ತೇನೆ. ನಮ್ಮಲ್ಲಿ ಬಹಳ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಹಿಂದೆ ಇದೇ ಸರಕಾರದಲ್ಲಿ ಶ್ರೀ ತಿಪ್ಪೇರುದ್ರಯ್ಯ ಎನ್ನುವವರು ಜಿಲ್ಲಾಧಿಕಾರಿಗಳಾಗಿದ್ದರು. ಅವರೇ ಒಂದು ಪತ್ರಿಕೆಯಲ್ಲಿ ಸಹಕಾರ ಎನ್ನುವ ವಿಚಾರದಲ್ಲಿ ಒಂದು ಲೇಖನವನ್ನು ಬರೆದಿದ್ದರು. ಅದೇನೆಂದರೆ, ಅವರು 1933ರಲ್ಲಿ ಅಮಲ್ದಾರರಾಗಿದ್ದಾಗ ಸರಕಾರಕ್ಕೆ ಬರಬೇಕಾದ ಸಾಲದ ಬಾಕಿಯನ್ನು ವಸೂಲು ಮಾಡಲು ಒಂದು ಹಳ್ಳಿಗೆ ಹೋದಾಗ ಅವರ ಮುಂದೆ ಒಬ್ಬ ಹರಿಜನ ಬಂದು ಒಂದು ಕುಡುಗೋಲು ತೋರಿಸಿ ಅಲ್ಲಿದ್ದ ಶ್ಯಾನುಭೋಗರ ಕತ್ತನ್ನು ಕುಯ್ಯುತ್ತೇನೆ ಎಂದು ಹೇಳುತ್ತಿದ್ದನಂತೆ. ಅಲ್ಲಿ ಆಗ ಅವರೆದುರಿಗೆ ಶೇಕದಾರರು ಹಾಗೂ ಇತರ ಎಲ್ಲ ಅಧಿಕಾರಿಗಳೂ ಇದ್ದರು. ಅಲ್ಲಿದ್ದ ಸುಮಾರು 8–10 ಜನರು ಅವನನ್ನು ಹಿಡಿದುಕೊಳ್ಳಲು ಹೋದರು. ಆ ಹರಿಜನನಾದವನು ಇವರ ಮುಂದೆ ನಾನು ಮೂರು ಕಾಸ ಕೂಡ ದೇವರಾಣೆಯಾಗಿ ಸರಕಾರದಿಂದ ಸಾಲವಾಗಿ ತೆಗೆದುಕೊಂಡಿಲ್ಲ. ಇಲ್ಲಿರುವ ಶ್ಯಾನುಭೋಗರೇ ನನ್ನ ಕೈ ಹೆಬ್ಬೆಟ್ಟು ಹಾಕಿಸಿಕೊಂಡು ನಾನು ಸಾಲ ತೆಗೆದುಕೊಂಡಿದ್ದೇನೆಂದು ಹೇಳಿ ನನ್ನನ್ನು ಹಾಳು ಮಾಡುತ್ತಿದ್ದಾರೆ ಎಂದು ಹೇಳಿದಾಗ, ಕೂಡಲೇ ಇವರು ವಿಚಾರಣೆ ನಡೆಸಿ ಶ್ಯಾನುಬೋಗರನ್ನು ಎದುರಿನಲ್ಲೇ ಕರೆಸಿ ಕೇಳಿದಾಗ ಅವನು ತನ್ನ ತಪ್ಪನ್ನು ಒಪ್ಪಿಕೊಂಡನಂತೆ. ಆಗ ಹೀಗೆ ಮಾಡಿರುವುದು ನಿಜ ಎಂದು ಗೊತ್ತಾಯಿತು. ಹೀಗೆ

ಇಂದಿನ ಪರಿಸ್ಥಿತಿಯಲ್ಲಿ ಸುಳ್ಳು ಲೆಕ್ಕ ಬರೆಯುವವರೇ ಜಾಸ್ತಿ ಇದ್ದಾರೆ. ಹಿಂದೆ ಇದ್ದ ಅಧಿಕಾರಿಗಳು ಏನಾದರೂ ತಪ್ಪು ಮಾಡಿದರೆ ಅವರನ್ನು ಅಲ್ಲೇ ಶಿಕ್ಷೆ ಮಾಡಿ ಹೋಗುತ್ತಿದ್ದರು. ಕಂದಾಯ ಬಿಟ್ಟುಬಿಡಿ ಎಂದು ನಾನು ಹೇಳುವವನಲ್ಲ.

ಈ ಸರ್ಕಾರವಾಗಲಿ, ಮುಂದಿನ ಸರ್ಕಾರವಾಗಲಿ ಯಾವ ಸರ್ಕಾರವೇ ಆಗಲಿ ಕಂದಾಯವನ್ನು ಪೂರಾ ಬಿಟ್ಟು ನಡೆಸುವದಕ್ಕಾಗುವುದಿಲ್ಲ. ನಿಮಗೆ ಇದರಲ್ಲಿ 7 ಕೋಟಿ ರೂಪಾಯಿ ಆದಾಯ ಬರುತ್ತದೆ. ಮೊನ್ನೆ ಶ್ರೀಮಾನ್ ರಾಚಯ್ಯನವರು ಇದರ ಬಗ್ಗೆ ಪ್ರತಿಯೊಬ್ಬ ರೈತನಿಗೂ ಒಂದು ಪುಸ್ತಕವನ್ನೇ ಕೊಡುತ್ತೇವೆ, ಇದಕ್ಕೆ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಈ ಸರ್ವೆ ಅಂಡ್ ಸೆಟಲ್‌ಮೆಂಟಿನವರು 1965ರಲ್ಲಿ ಸರಿಯಾಗಿ ಸರ್ವೆ ಕೆಲಸ ಮಾಡಿಲ್ಲ ಎನ್ನುವುದನ್ನು ನಿಮ್ಮಲ್ಲೇ ಕೆಲವರು ಹೇಳುತ್ತಾರೆ. ಮತ್ತು ಮಂತ್ರಿಮಂಡಲದ ಅನುಭವವೂ ಅದೇ ರೀತಿಯಾಗಿದೆ. ಇದಕ್ಕೆ 25 ಲಕ್ಷ ರೂಪಾಯಿ ಖರ್ಚು ಮಾಡಿದರೂ ಪಕ್ಕ ಸರ್ವೆ ಮಾಡಿಲ್ಲ. ಈಗ ಲ್ಯಾಂಡ್ ರೆವಿನ್ಯೂ 7 ಕೋಟಿ ರೂಪಾಯಿ ಏನು ಬರುತ್ತದೋ ಅದಕ್ಕೆ ಡಬ್ಬಲ್ ಬೇಕಾದರೂ ತೆಗೆದುಕೊಳ್ಳಿ. ಆದರೆ ರೈತರಿಗೆ ಕೊಡುವ ಕಿರುಕುಳವನ್ನು ತಪ್ಪಿಸಿ. Let us have a pragmatic approach. ನಿಮಗೆ ರಿಸೋರ್ಸಸ್ ಬೇಕು, ದೊಡ್ಡ ದೊಡ್ಡ ಕೆರೆ ಕಟ್ಟಬೇಕು ಎಂದು ಎಲ್ಲವನ್ನೂ ಹೇಳುತ್ತೀರಿ. ಒಮ್ಮೆಲೇ ಇಂತಿಷ್ಟು ಕಂದಾಯ ಕೊಡಬೇಕೆಂದು ತಿಳಿಸಿಬಿಡಿ. ಬಾಗಾಯಿತಿಗೆ ಇಷ್ಟೇ ದರ ಖುಷ್ಕಿಗೆ ಇಷ್ಟೇ ದರ ಹಾಕಿದ್ದೇವೆ ಎಂದು ನಿರ್ಧರಿಸಿಬಿಡಿ. ಅವನನ್ನು 30 ವರ್ಷದ ತನಕವೂ ಮಾತನಾಡಿಸಬಾರದು. ಅವನು ಕಬ್ಬು, ಬತ್ತ ಯಾವುದಾದರೂ ಬೆಳೆದುಕೊಳ್ಳಲಿ. ಮೊನ್ನೆ ಕಬ್ಬು ಜಾಸ್ತಿ ಬೆಳೆದಿದ್ದರಿಂದ ಬೆಲ್ಲ ಬೆಲೆ ಇಳಿದುಹೋಯಿತು. ಆದುದರಿಂದ ರೈತರಿಗೆ ಸರಿಯಾದ ಬೆಲೆ ಸಿಕ್ಕಲಿಲ್ಲ. ಅಗ್ರಿಕಲ್ಚರಲ್ ಪ್ರಾಡಕ್ಟ್ಸ್ ಬೆಲೆ ವಿಪರೀತಿ ಫ್ಲಕ್ಚುಯೇಟ್ ಆಗುತ್ತಾ ಇದೆ. ಈಗ ನಿಮ್ಮ ಹತ್ತಿರ ಇರುವ ಪುಸ್ತಕಗಳನ್ನೆಲ್ಲಾ ಸುಟ್ಟುಬಿಡಿ, ಮತ್ತೆ ಸರ್ವೆ ಮಾಡಿಸಿ. ಅದು ಒಂದೂ ಪ್ರಯೋಜನಕ್ಕೆ ಬರುವುದಿಲ್ಲ. ಮತ್ತೆ ಸೈಂಟಿಫಿಕ್ ಆಗಿ ಮಾಡಿದ್ದೇವೆ ಎಂದು ಹೇಳುತ್ತೀರಿ. ಇದರಲ್ಲಿ ಯಾವ ಸೈಂಟಿಫಿಕ್ ಮೆಥೆಡ್ಡೂ ಇಲ್ಲ: ರೈತನಿಗೆ ಕಿರುಕುಳ ಮಾತ್ರ ಕೊಡುತ್ತಿದ್ದೀರಿ. 30 ವರ್ಷದ ತನಕವೂ ಈ ರೀತಿ ಇರಬೇಕು ಎನ್ನುವ ಕಾನೂನು ಇದೆ. ಮಿರ್ಜಾ ಸಾಹೇಬರ ಕಾಲದಲ್ಲಿ ಯಾವ ಯಾವ ಭಾಗದಲ್ಲಿ ಕಾನೂನು ದೃಷ್ಟಿಯಿಂದ ಎಲ್ಲೆಲ್ಲಿ 2 ಆಣೆ 4 ಆಣೆ ಆದ ಕಡೆ ರೆಮಿಷನ್ ಕೊಡುತ್ತಿದ್ದರು. ಕಾನೂನು ದೃಷ್ಟಿಯಿಂದ ಏನು ಮಾಡಬೇಕೋ ಅದನ್ನು ಮಾಡುತ್ತಿದ್ದರು. ಈಗ ನೀವು ಏನು ಮಾಡುತ್ತೀರಿ ಎಂದರೆ ಪುಸ್ತಕದಲ್ಲಿ ಗೀಚಿ ಬಿಡುತ್ತೀರಿ. ಹಾಗಾದರೆ ಕಂದಾಯ ರದ್ದಾಗುತ್ತದೆಯೇ? ರೈತನಿಗೆ ನ್ಯಾಯವಾಗಿ ಕಂದಾಯ ರದ್ದು ಮಾಡುವುದಾದರೆ ಅವನ ಮನಸ್ಸು ಒಲಿಯಬಹುದು. ನಿಮಗೆ ಅಧಿಕಾರ ಇದೆ. ಸಂಖ್ಯಾಬಲ ಇದೆ ಎಂದು ಮಸೂದೆ ತಂದು ಈ ರೀತಿ ಮಾಡುತ್ತೇವೆ ಎನ್ನುವುದು ಸರಿಯಲ್ಲ. ಈ ಖಾತೆಯನ್ನು ಶ್ರೀಮಾನ್ ಕೌಜಲಗಿ ಅವರ ತಲೆಗೆ

ಕಟ್ಟಿದ್ದಾರೆ. ಅವರು ಬಹಳ ಮೆತ್ತನೆ ಮನುಷ್ಯ. ಇದನ್ನು ಶ್ರೀಮಾನ್ ಪುಟ್ಟಸ್ವಾಮಿಯವರ ತಲೆಗೆ ಕಟ್ಟಿದ್ದರೆ ಚೆನ್ನಾಗಿತ್ತು. ನಿಮಗೆ ಒಳ್ಳೆಯ ಮಾತು ಹೇಳಿದರೂ ಏನೂ ಪ್ರಯೋಜನವಿಲ್ಲ. ನಿಮಗೆ ಕಂದಾಯ ಬೇಕು ಸರಿ. ಆದರೆ ಅದನ್ನು ಯಾವ ರೀತಿ ಹಾಕಬೇಕು ಎಂದರೆ ಅದನ್ನು ಒಂದು ಸೈಂಟಿಫಿಕ್ ರೀತಿಯಲ್ಲಿ ಹಾಕಬೇಕು. ದಾಗಾಯಿತಿಗೇ ಆಗಲಿ, ಖುಷ್ಕಿಗೇ ಆಗಲಿ ಇಷ್ಟೇ ಕಂದಾಯ ಕೊಡಬೇಕು ಎಂದು ನಿರ್ಧರಿಸಿ ಬಿಡಿ. ಶ್ಯಾನುಭೋಗರನ್ನು ಬೇಕಾದರೆ ಪಿ.ಎಸ್.ಸಿ.ಯಿಂದ ಅಪಾಯಿಂಟ್ ಮಾಡಿ ಈಗ 4 ಆಣೆ ಬೆಳೆ ಇದ್ದರೂ ಕೂಡ ಅವನಿಗೆ ಪೂರ್ತಾ ಕಂದಾಯ ಕೊಡಬೇಕು ಎಂದು ಹೇಳುತ್ತಾರೆ. ಈ ರೀತಿ ರೈತರ ತಲೆ ಒಡೆಯುವುದಕ್ಕೆ ಹೋದರೆ ಅವನು ನಿಮ್ಮನ್ನು ಎಚ್ಚರಿಸಬೇಕಾಗುತ್ತದೆ. ಇಷ್ಟು ಹೇಳಿ ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ.

**ಶ್ರೀ ಡಿ.ಎಂ. ಸಿದ್ದಯ್ಯ** (ಬಿಳಿಗೆರೆ): ಈ ಮಸೂದೆಯನ್ನು ಓಟಿಗೆ ಹಾಕಿದಿರಿ. ಮಸೂದೆ ಅಂಗೀಕಾರವಾಯಿತು. ಮಾನ್ಯ ಶ್ರೀ ಸಿದ್ದವೀರಪ್ಪನವರು ಈಗ ಹೇಳುತ್ತಾರೆ. ಮಾನ್ಯ ಮಂತ್ರಿಗಳು ಉತ್ತರ ಕೊಡಲಿ ಕೇಳುತ್ತೇವೆಂದು. ಅವರು ಉತ್ತರ ಕೊಡಲು ಎದ್ದಾಗ ಅವರನ್ನು ಉತ್ತರ ಕೊಡಲು ಬಿಡಲಿಲ್ಲ. ಅವರಿಗೆ ಬೇಕೆಂದಾಗ ಉತ್ತರ ಹೇಳುವುದು ಬೇಡವೆಂದಾಗ ನಿಲ್ಲಿಸುವುದು – ಹೀಗೆ ಆಗಿದೆ. ಇದು ವಿರೋಧ ಪಕ್ಷದ ನಾಯಕರ ಘನತೆಗೆ ಗೌರವ ತರುವುದಲ್ಲ. ಇದರ ಬಗ್ಗೆ ತಾವು ಒಂದು ರೂಲಿಂಗ್ ಕೊಡಬೇಕು.

**ಶ್ರೀ ಎಚ್. ಸಿದ್ದವೀರಪ್ಪ** – ಮಾನ್ಯ ಶ್ರೀ ಸಿದ್ದಯ್ಯನವರ ವ್ಯಾಖ್ಯಾನವನ್ನು ಕೇಳಿದ ಮೇಲೆ ನಾನು ಎರಡು ಮಾತುಗಳನ್ನು ಹೇಳಬೇಕಾಗಿದೆ. ತಾವು ಹೇಳಿದಿರಿ ಮಂತ್ರಿಗಳು ಉತ್ತರ ಹೇಳುವುದಿಲ್ಲವೆಂದು. ಮಂತ್ರಿಗಳು ಎದ್ದು ನಿಂತರೂ ಉತ್ತರ ಕೊಡುವುದಕ್ಕೆ ಅವಕಾಶ ಸಿಗಲಿಲ್ಲ– ಹೀಗೆ ಅವರು ಬೇರೆ ಬೇರೆ ವ್ಯಾಖ್ಯಾನಗಳನ್ನು ಹೇಳುತ್ತಿದ್ದಾರೆ. ನಾನು ತಿಳಿದ ಮಟ್ಟಿಗೆ ಓಟಿಗೆ ಹಾಕಿದ್ದು ಕೇಳಲಿಲ್ಲ, ಪಾಸ್ ಆಯಿತೆಂದು ಹೇಳಿದ್ದು ಕೇಳಿಸಲಿಲ್ಲ. ಯಾವುದೂ ಕೇಳಿಸಲಿಲ್ಲ. ನಾವು ದೆವ್ವ ಕೂತ ಹಾಗೆ ಇಲ್ಲಿಯೇ ಇದ್ದೇವೆ. ಒಂದೂ ಕೇಳಿಸಲಿಲ್ಲ. ಯಾವುದೂ ಕೇಳಿಸಲ್ಲಿಲ್ಲ. ಈಗ ಇನ್ನೇನಾದರೂ ಬೇರೆ ಶಬ್ದ ನಾವು ಉಪಯೋಗಿಸುವುದಕ್ಕೆ ತಯರಾಗಿಲ್ಲ. ಕೇವಲ ಎರಡು ನಿಮಿಷಗಳಲ್ಲಿ ಲಗ್ನ ಕಟ್ಟಿ ಮದುವೆ ಮಾಡಲು ಡೋಲ್ ಹೊಡೆಸಿ, ತಾಳಿ ಕಟ್ಟುವ ಹಾಗೆ ಮಾಡುತ್ತೇವೆಂದು ಹೇಳಿದರೆ ಮಾಡಲಿ. ಮಾನ್ಯ ಶ್ರೀ ಡಿ.ಎಂ. ಸಿದ್ದಯ್ಯನವರು ಹೇಳಿದರು, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ವಿರೋಧ ಪಕ್ಷದ ಸದಸ್ಯರು ಅವಕಾಶ ಕೊಡಲಿಲ್ಲವೆಂದು. ಮೊಟ್ಟಮೊದಲನೆಯದಾಗಿ ಯಾವ ಕಾರ್ಯಕಲಾಪಗಳನ್ನು ಮಾಡತಕ್ಕ ಪರಿಸ್ಥಿತಿಯಲ್ಲಿಯೂ ಈ ಸಭೆಗೆ ಇರಲಿಲ್ಲವೆಂದು ಮಾನ್ಯ ಸದಸ್ಯರು ಒಪ್ಪಿಕೊಂಡಿದ್ದಾರೆ. ಯಾವ ಕಾರ್ಯಕಲಾಪ ಮಾಡುವಂಥ ಪರಿಸ್ಥಿತಿ ಇಲ್ಲದೇ ಇರುವಾಗ,

ತಾವು ಅದನ್ನು ಕನ್‌ಸಿಡರೇಷನ್ನಿಗೆ ಹಾಕಿದ್ದೇನೆ, ಪಾಸ್ ಆಗಿದೆ ಎಂದು ಹೇಳುವುದಾದರೂ ಹೇಗೆ? ಇದನ್ನು ಓಟಿಗೆ ಹಾಕಿದ್ದಾರೆಂದು ಮಾನ್ಯ ಸದಸ್ಯರಾದ ಶ್ರೀ ಸಿದ್ದಯ್ಯನವರು ಹೇಳುತ್ತಿದ್ದಾರೆ ಹಾಗಾದರೆ ಸಭೆ ಇದನ್ನು ಎಂತಹ ಗೊಂದಲದಲ್ಲಿ ಪಾಸ್ ಮಾಡಿದೆ ಎಂಬುದು ಗೊತ್ತಾಗುತ್ತದೆ. ಅಧ್ಯಕ್ಷರೇ, ಇದು ಈ ಸಭೆಯ ಘನತೆಗೆ ತಕ್ಕದ್ದಲ್ಲ. ಗೊಂದಲವಾಯಿತು. ಅವರು ಏನು ಹೇಳಿದ್ದಾರೆಂಬುದು ನನಗೆ ಗೊತ್ತಾಗಲಿಲ್ಲ. ಆದ್ದರಿಂದ ತಮಗೂ ಮತ್ತು ಈ ಸಭೆಗೂ ಮರ್ಯಾದೆ ಬರಬೇಕಾದರೆ ಆಡಳಿತ ಪಕ್ಷದವರು ಪ್ರಾಮಾಣಿಕರಾಗಿರಬೇಕು. ಈಗ ಇಂತಹ ಕಾಂಗ್ರೆಸ್‌ನವರ ಕೈಲಿ ಸಿಕ್ಕಿರುವ ತಾವು ಸ್ಪೀಕರ್ ಅವರು ಹುಚ್ಚರ ಕೈಲಿ ಸಿಕ್ಕಿದ ಹಾಗಾಗಿದೆ. ಇದರಿಂದ ನಿಮಗೆ ಪ್ರಜಾಪ್ರಭುತ್ವದಲ್ಲಿ ಗೌರವ ಬರುವುದಿಲ್ಲ.

* * *

# ರೈತನ ಮೇಲೆ ಒತ್ತಡಬೇಡ

10, ಏಪ್ರಿಲ್ 1969

**ಶ್ರೀ ಎಚ್. ಸಿದ್ದವೀರಪ್ಪ** (ಹರಿಹರ) : ಸ್ವಾಮಿ, ಇದರಲ್ಲಿ ಮೊದಲು ಒಂದು ಅಂಶವನ್ನು ತಮ್ಮ ಗಮನಕ್ಕೆ ತಂದು ನಂತರ ಎರಡು ಮಾತುಗಳನ್ನು ಹೇಳಬೇಕಾಗಿದೆ. ಸೆಲೆಕ್ಟ್ ಕಮಿಟಿಯಲ್ಲಿ ನಾನು ಒಬ್ಬ ಸದಸ್ಯನಾಗಿದ್ದೆ ಎಂದು ಇದರಲ್ಲಿ ನಮೂದಿಸಿದೆ. ನನಗೆ ಗೊತ್ತಿದ್ದ ಹಾಗೆ ಸೆಲೆಕ್ಟ್ ಕಮಿಟಿ ಮೀಟಿಂಗ್ ಇದೆ ಎಂದು ನೋಟೀಸ್ ನನಗೆ ಬಂದಿಲ್ಲ. ಸೆಲೆಕ್ಟ್ ಕಮಿಟಿಗಳಲ್ಲಿ ನಾನು ಹಾಜರಾಗಿಲ್ಲ. ಆದುದರಿಂದ ಈ ತಳಹದಿಯ ಮೇಲೆ ಒಂದೆರಡು ಮಾತುಗಳನ್ನು ಈ ಮಸೂದೆಯ ವಿಚಾರದಲ್ಲಿ ಹೇಳಬೇಕಾಗಿದೆ.

ಮಾನ್ಯ ಸ್ನೇಹಿತರಾದ ಶ್ರೀಮಾನ್ ಕೆ. ಎಚ್. ಪಾಟೀಲರು ಏನು ಕೆಲವು ವಿಷಯಗಳನ್ನು ಹೇಳಿದರು ಅದನ್ನು ಅವರು ತಮ್ಮ ಸ್ವಂತ ಅನುಭವದಿಂದ ಹೇಳಿದ್ದಾರೆ. ಅವರು ಸ್ವತಃ ವ್ಯವಸಾಯಗಾರರು, ಕೈ ಮುಟ್ಟಿ ವ್ಯವಸಾಯ ಮಾಡುತ್ತ ವ್ಯವಸಾಯಗಾರರ ಕಷ್ಟಗಳೇನಿವೆ, ಅವರ ತೊಂದರೆಗಳೇನಿವೆ ಎನ್ನುವುದನ್ನು ತಿಳಿದುಕೊಂಡು ಅವರು ನಮ್ಮೆಲ್ಲರಿಗೂ ಮನದಟ್ಟಾಗುವ ರೀತಿಯಲ್ಲಿ ಈ ಕಾನೂನನ್ನು ಶಾಸನದಲ್ಲಿ ತಂದರೆ ಆಗ ಇದರ ದುಷ್ಪರಿಣಾಮವೇನಾಗುತ್ತದೆ ಎನ್ನುವದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಸರ್ಕಾರದಲ್ಲಿದ್ದವರಲ್ಲಿ ನಾನು ಒಂದು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ ಇದನ್ನು ನೀವು ಶಾಸನ ಕಡತಕ್ಕೆ ಸೇರಿಸುವುದಕ್ಕಿಂತ ಮುಂಚೆ ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕು. ಇದರ ದುಷ್ಪರಿಣಾಮ ಎಷ್ಟರಮಟ್ಟಿಗೆ ಆಗುತ್ತದೆ, ಇದನ್ನು ಮಾಡಿರತಕ್ಕ ರೀತಿ ನೀತಿ ಸರಿಯಾಗಿದೆಯೇ, ಆ ರೀತಿ ಏನಾದರೂ ಕಾಯಿಲೆಗಳು ಬರಬೇಕಾದರೆ ಅದಕ್ಕೆ ರೈತನೇನಾದರೂ ಮುಖ್ಯನಾದವನೇ, ಅವನು ಮಾಡತಕ್ಕ ಕಾರ್ಯದಿಂದೇನಾದರೂ ಬಂದಿದೆಯೇ ಅಥವಾ ನನ್ನ ಮಾನ್ಯ ಸ್ನೇಹಿತರಾದ ನಂಜೇಗೌಡರು ಹೇಳಿದ ಹಾಗೆ ಏನಾದರೂ ಕಾರಣಗಳಿಂದ ಕಾಯಿಲೆಗಳು ಬರುತ್ತವಲ್ಲ, ಅದಕ್ಕೆ ರೈತನು ಎಷ್ಟರಮಟ್ಟಿಗೆ ಕಾರಣನಾದಾನು, ಶಾಸನದಿಂದ ಒಂದು ಒತ್ತಡವನ್ನು

ರೈತನ ಮೇಲೆ ಹೇರುವುದು ಸಾಧ್ಯವೇ, ವೆಲ್‌ಫೇರ್ ಸ್ಟೇಟ್ ಎಂದು ಹೇಳುವಾಗ ಅಂಥ ರೋಗ ರುಜಿನಗಳನ್ನು ತಡೆಗಟ್ಟತಕ್ಕುದು ಸರ್ಕಾರದ ಕರ್ತವ್ಯವಲ್ಲವೇ ಎನ್ನುವುದನ್ನು ಮೂಲಭೂತವಾಗಿ ಯೋಚನೆ ಮಾಡಬೇಕಾಗಿದೆ. ಉದಾಹರಣೆಗೆ ಹೇಳಬೇಕಾದರೆ ಒಂದು ನಗರದಲ್ಲಿ ಕಾಲರ ಅಥವಾ ಪ್ಲೇಗ್ ಬಂತು ಎಂದು ಇಟ್ಟುಕೊಳ್ಳೋಣ. ಆವಾಗ ಈ ರೋಗಗಳನ್ನು ತಡೆಗಟ್ಟಲು ನಿಮ್ಮ ಮನೆ ಖರ್ಚಿನಿಂದಲೇ ನೀವೆಲ್ಲ ಏನೇನು ಔಷಧಿ ಬೇಕು ಅದನ್ನೆಲ್ಲ ಸ್ವತಃ ನೀವೇ ತಂದುಕೊಡಿ ಎಂದರೆ ಎಷ್ಟು ಜನ ನಿಮ್ಮ ಮಾತಿಗೆ ಬೆಲೆ ಕೊಟ್ಟಾರು? ಆ ರೀತಿ ಬಂದ ರೋಗಗಳನ್ನು ತಡೆಗಟ್ಟುವುದು ನಿಮ್ಮ ಕರ್ತವ್ಯವಲ್ಲವೇ, ಆ ರೀತಿ ನೀವು ಮಾಡುವುದಿಲ್ಲವೇ? ಅಂಥದ್ದರಲ್ಲಿ ಪ್ರಕೃತಿ ನಿಯಮದಿಂದ ಅಥವಾ ಬೇರೆ ಕಾರಣದಿಂದ ಬಂದಂಥ ಕಾಯಿಲೆಯನ್ನು ತಡೆಗಟ್ಟಬೇಕಾಗಿರುವ ನಿಮ್ಮ ಕರ್ತವ್ಯವನ್ನು ರೈತನ ಮೇಲೆ ಶಾಸನಬದ್ಧವಾಗಿ ಹೇಗೆ ಹೇರುತ್ತೀರಿ? ಇದು ಸಾಧ್ಯವೇ? ಶಾಸನದಿಂದ ಅದನ್ನು ತಡೆಗಟ್ಟುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ಇದು ಒಂದು ಹುಚ್ಚು ಸಲಹೆ ಎಂದು ಹೇಳಿದರೆ ತಪ್ಪಾಗಲಾರದು. ಈ ರೀತಿ ಯಾರು ಸಲಹೆ ಕೊಟ್ಟರೋ ಶಾಸನದಿಂದ ರೈತನ ಮೇಲೆ ಹಾಕಿ, ರೈತನೇ ಇದನ್ನು ತಡೆಗಟ್ಟಬೇಕು, ಅವನಿಂದ ತಡೆಗಟ್ಟುವುದಕ್ಕೆ ಸಾಧ್ಯ ಎನ್ನುವ ಅಭಿಪ್ರಾಯವನ್ನು ಯಾರು ಕೊಟ್ಟರೋ ನನಗಂತೂ ತಿಳಿಯದಾಗಿದೆ.

ನಾನು ಹೋದ ಸಾರಿ ಒಂದು ವಿಷಯವನ್ನು ಹೇಳಿದೆ. ನಮ್ಮ ಕ್ಷೇತ್ರದಲ್ಲಿ ಬಹಳ ಕಷ್ಟಪಟ್ಟು ರೈತರು ಸಾವಿರಾರು ರೂಪಾಯಿ, ಲಕ್ಷಾಂತರ ರೂಪಾಯಿ ಗೊಬ್ಬರ ಹಾಕಿ ಬತ್ತದ ಫಸಲನ್ನು ಇಟ್ಟರು. ಬೆಳೆ ಚೆನ್ನಾಗಿ ಬಂದಿತ್ತು. ಹೊಡೆ ಬರುವ ಕಾಲದಲ್ಲಿ ಇಲಿಗಳು ಹಾವಳಿ ಮಾಡಿದವು. ಅವುಗಳಿಗೆ ಬುದ್ಧಿ ಬಹಳ ಜಾಸ್ತಿ. ಹುಲಿಯನ್ನು ಹೊಡೆಯಬಹುದು, ಇಲಿಯನ್ನು ಹೊಡೆಯುವುದು ಕಷ್ಟ ಎಂದು ಹೇಳುತ್ತಾರೆ. ಅವು ಏನು ಮಾಡುತ್ತಿದ್ದವು ಎಂದರೆ ಹೊಡೆ ಬಂದಾಗ ತಿನ್ನುವುದಕ್ಕೆ ಷುರು ಮಾಡಿದವು. ಇದನ್ನು ಯಾವ ರೀತಿ ತಡೆಗಟ್ಟುವುದು ಎಂದು ಗೊತ್ತಾಗಲಿಲ್ಲ. ಯಾವ ಯಾವ ಔಷಧಿ ಇದೆಯೋ ಅದನ್ನೆಲ್ಲ ತೆಗೆದುಕೊಂಡು ಹಾಕಿದರೂ ಅವುಗಳಿಗೆ ಇಮ್ಯೂನಿಟಿ ಬರುತ್ತಿತ್ತು. ಏನು ಮಾಡಿದರೂ ಅವು ಸಿಕ್ಕುತ್ತಿರಲಿಲ್ಲ. ಅವು ಬಿಲ ಮಾಡಿಕೊಂಡು ಅಲ್ಲಲ್ಲೇ ಸೇರಿಕೊಳ್ಳುತ್ತಿದ್ದವು. ಈ ರೀತಿಯಾಗಿ ನಾನು ನೋಡಿದ ಹಾಗೆ ಸಾವಿರಾರು ಎಕರೆ ಜಮೀನಿನಲ್ಲಿದ್ದ ಬತ್ತದ ಫಸಲು ಲುಕ್ಸಾನವಾಯಿತು. ವ್ಯವಸಾಯ ಇಲಾಖೆಗೆ ಬರೆದು ಇಲಿಗಳನ್ನು ನಾಶ ಮಾಡಲು ಬೇಕಾಗುವ ಔಷಧಿಯನ್ನು ಕೊಡಿರಿ ಎಂದು ಕೇಳಿದಾಗ ಇಲಿಗಳನ್ನು ಕೊಲ್ಲ ತಕ್ಕ ಔಷಧಿಯನ್ನು ಸಾಕಷ್ಟು ಪ್ರಮಾಣದಲ್ಲಿ ಕೊಡತಕ್ಕ ಶಕ್ತಿ ಅವರಿಗೆ ಇರಲಿಲ್ಲ. ಇಲಾಖೆಗಳನ್ನು ನೋಡಿದರೆ ಅವು ಬೃಹದಾಕಾರವಾಗಿ ಬೆಳೆಯುತ್ತಿವೆ. ವ್ಯವಸಾಯ ಇಲಾಖೆಯು ಒಂದಕ್ಕೆ 20ರಷ್ಟು

ಬೆಳೆದಿದೆ. ವ್ಯವಸಾಯ ಇಲಾಖೆ ಒಂದೇ ಅಲ್ಲ ಎಲ್ಲ ಇಲಾಖೆಗಳೂ ಇದೇ ರೀತಿ ಬೆಳೆದಿವೆ. ಇಲಾಖೆಗಳ ಬೆಳವಣಿಗೆಯಾಗಿದೆಯೇ ಹೊರತು ಅದರಿಂದ ರೈತನಿಗೆ ಏನಾದರೂ ಅನುಕೂಲವಾಗತಕ್ಕ ರೀತಿಯಿಂದ ನಡೆದಿದೆಯೇ ಎಂದು ನೋಡಿದರೆ ಬಹಳ ಶೋಚನೀಯವಾದ ಸ್ಥಿತಿ ಇದೆ ಎಂದು ನಾವು ಹೇಳಬೇಕಾಗುತ್ತದೆ. ರೈತರನ್ನು ಇಷ್ಟರಮಟ್ಟಿಗೆ ತೊಂದರೆಗೆ ಈಡು ಮಾಡಿರತಕ್ಕ ರಾಷ್ಟ್ರಗಳು ಎಂದರೆ ಬಹುಶಃ ಟೋಟಲಿಟೇರಿಯನ್ ಸ್ಟೇಟ್ಸ್ ಇರಬಹುದೇ ಹೊರತು ಪ್ರಜಾಪ್ರಭುತ್ವವಿರತಕ್ಕ ರಾಷ್ಟ್ರಗಳಲ್ಲಿ ಎಲ್ಲಿಯೂ ಈ ರೀತಿ ಇಲ್ಲ. ಅಮೆರಿಕಾದಲ್ಲಾಗಲೀ, ಇಂಗ್ಲೆಂಡಿನಲ್ಲಾಗಲೀ, ಇನ್ನು ಯಾವುದೇ ರಾಷ್ಟ್ರಗಳಲ್ಲಾಗಲೀ ಈ ರೀತಿ ಏನಾದರೂ ಕಾಯಿಲೆ ಬಂದರೆ ಅದನ್ನು ನಿವಾರಣೆ ಮಾಡಿ ಮುಂದೆ ಅದು ಬರದಂತೆ ತಡೆಗಟ್ಟುವುದು ಸರ್ಕಾರದ ಕರ್ತವ್ಯ. ಆ ಕರ್ತವ್ಯವನ್ನು ಬಿಟ್ಟು ರೈತರ ಮೇಲೆ ಹಾಕಿ, ರೈತರೇ ಅದನ್ನು ಮಾಡಬೇಕು ಎಂದು ಅದಕ್ಕೆ ಕಾನೂನು ಬೇರೆ ಮಾಡುತ್ತಿದ್ದೀರಿ. ರೈತನ ಸ್ಥಿತಿ ಏನು ಎನ್ನುವುದನ್ನು ನೋಡಬೇಕು. ರೈತನಿಗೆ ಹೊಟ್ಟೆಗೆ ಹಿಟ್ಟಿಲ್ಲದೇ ಇರುವಾಗ ಅವನು ಇದಕ್ಕೆಲ್ಲ ಎಲ್ಲಿಂದ ದುಡ್ಡು ತರುತ್ತಾನೆ? ನೂರಕ್ಕೆ 80 ಜನ ರೈತರಿರುವ ನಮ್ಮ ರಾಜ್ಯದಲ್ಲಿ ಇಂಥ ಕಾನೂನು ತರುವುದು ಶುದ್ಧ ಮೂರ್ಖತನ, ಅವಿವೇಕದ ಪರಮಾವಧಿ ಎಂದು ಹೇಳಿದರೂ ತಪ್ಪಾಗಲಾರದು. ಆದುದರಿಂದ ಈಗಲಾದರೂ ನಾನು ಹೇಳುತ್ತೇನೆ, ನೀವು ಆ ಕಾನೂನನ್ನು ಶಾಸನ ಕಡತದಲ್ಲಿಟ್ಟರೂ ಇದನ್ನು ಜಾರಿಗೆ ಕೊಡತಕ್ಕ ಶಕ್ತಿ ಇಲ್ಲ. ಜಾರಿಗೆ ಕೊಡುವುದಕ್ಕೆ ನಿಮ್ಮ ಕೈಯಿಂದ ಆಗುವುದಿಲ್ಲ.

ನೀವು 10 ವರ್ಷದಲ್ಲಿ ಏನೇನು ಶಾಸನಗಳನ್ನು ಮಾಡಿದ್ದೀರಿ ಅಷ್ಟು ಶಾಸನಗಳನ್ನೂ ಜಾರಿಗೆ ಕೊಡದೆ ಹಾಗೆ ಹಳೇ ಕಡತದಲ್ಲಿಟ್ಟು ಇಲಿಗಳು ತಿಂದು ಹಾಗೆಯೇ ಹಾಳಾಗಿವೆ. ಈ ರೀತಿಯಿಂದ ಯಾವುದೋ ಒಂದು ಕಾನೂನನ್ನು ಕೈಯಲ್ಲಿ ಇಟ್ಟುಕೊಂಡು ಒಂದು ವರ್ಗದವರು ಹೇಳಿದಹಾಗೆ ಕೇಳಬೇಕು ಎನ್ನುವ ಆಸೆಯಿಂದ ಮಾಡತಕ್ಕ ಶಾಸನಗಳನ್ನು ಏನಾದರೂ ಮಾಡಿ ಉಪಯೋಗಿಸಬೇಕು ಎಂದು ಮನಸ್ಸಿನಲ್ಲಿದ್ದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಈಗ ಜನಗಳು ಬಹಳ ಹುಷಾರಾಗಿದ್ದಾರೆ. ರೈತನು ಕಷ್ಟಪಟ್ಟು ಬೆಳೆದ ಧಾನ್ಯವನ್ನು ಕಳೆದುಕೊಳ್ಳುವುದಕ್ಕೆ ಇಷ್ಟ ಪಡುತ್ತಾನೆಯೇ? ಯಾವ ಮನುಷ್ಯನು ತಾನೇ ಬಂದಿರತಕ್ಕ ಹುಳುಗಳನ್ನು ತೆಗೆಯುವುದಿಲ್ಲ ಎಂದು ಹೇಳುತ್ತಾನೆ. ಗಿಟ್ಟಿ ಹುಳುಗಳು ಬರುತ್ತವೆ. ಹುಳುಗಳನ್ನು ಮಕ್ಕಳು, ಹೆಂಗಸರೂ ಎಲ್ಲರೂ ಸೇರಿ ಮನೆಯಲ್ಲಿ ಬಟ್ಟೆಯಲ್ಲಿ ಹಿಡಿದು ಸುಡುತ್ತಾರೆ. ಇದನ್ನು ನಿಮ್ಮ ಕಾಯಿದೆ ಇಲ್ಲದೇ ಮಾಡುತ್ತಾರೆ, ಅದು ಬಿಟ್ಟು ಈ ರೀತಿ ಕಾನೂನು ಮಾಡಿದರೆ ಯಾವ ಪುಣ್ಯವೂ ಇಲ್ಲ, ಪುರುಷಾರ್ಥವೂ ಇಲ್ಲ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಈ ಕಾನೂನನ್ನು ಶಾಸನಕ್ಕೆ ಸೇರಿಸುವುದಕ್ಕಿಂತ ಮುಂಚೆ ಬಹಳ ದಿವಸ ಯೋಚನೆ ಮಾಡಬೇಕು. ಇದು ಸರ್ಕಾರದ ಆದ್ಯ ಕರ್ತವ್ಯ. ಇವತ್ತಿನ ದಿವಸ ನಾವು ನೋಡುತ್ತಾ ಇದ್ದೇವೆ. ನಮ್ಮ ಮೈಸೂರಿನಲ್ಲಿರುವ ಫಾರೆಸ್ಟ್‌ನಲ್ಲಿ

ಗಂಧದ ಮರಕ್ಕೆ ಬರುವ ರೋಗವನ್ನು ನಿಮ್ಮ ಕಂಟ್ರೋಲ್‌ನಲ್ಲಿ ಇಡುವುದಕ್ಕೇ ಸಾಧ್ಯವಿಲ್ಲ. ಇದರಿಂದಾಗಿ ಗಂಧದ ಮರಕ್ಕೆ ರೋಗ ಬಂದು ಇಡೀ ಗಂಧದ ಐಶ್ವರ್ಯ ನಾಶವಾಗುತ್ತಾ ಇದೆ ಎಂದು ಪತ್ರಿಕೆಯಲ್ಲಿ ಓದಿದಾಗ ನನಗೆ ಕಣ್ಣೀರು ಇಡುವ ಪರಿಸ್ಥಿತಿ ಬಂತು.

ಇದನ್ನೇ ಕಂಟ್ರೋಲ್ ಮಾಡದೇ ಇರುವಾಗ ಗದ್ದೆಯಲ್ಲಿ ಇರುವ ಮರಕ್ಕೆ ಹುಳ ಬಿದ್ದಿದೆ ಎಂದರೆ ಹೇಗೆ ತಡೆಯುತ್ತೀರಿ? ಅದೇ ರೀತಿ ಮರಗಳಿಗೆ ಸಾವಿರಾರು ಕಾಯಿಲೆಗಳು ಬರುತ್ತವೆ. ಇದರಿಂದ ಜನರನ್ನು ರೇಗಿಸುವುದು ಒಳ್ಳೆಯದಲ್ಲ. ಫ್ಯಾಕ್ಟರಿಯಲ್ಲಿ ಏನಾದರೂ ಘೇರಾವೋ ಮಾಡಿದರೆ ನಿಮ್ಮ ಕೈಯಲ್ಲಿ ತಡೆಯುವುದಕ್ಕೆ ಸಾಧ್ಯವಿಲ್ಲ. ಇನ್ನು 100ಕ್ಕೆ 80 ಜನರು ಇರುವ ರೈತರು ಒಂದು ತಿಂಗಳು ಘೇರಾವೋ ಮಾಡಿದರೆ ಹೊಟ್ಟೆಗಿಲ್ಲದೇ ಸತ್ತು ಹೋಗಬೇಕಾಗುತ್ತದೆ. ಹೀಗಿರುವಾಗ ಏತಕ್ಕೋಸ್ಕರ ಕಾನೂನು ಮಾಡುತ್ತೀರಿ? That government is the best which is least governed. ಆದ್ದರಿಂದ ಏನೂ ಸಾಧನೆಯಾಗುವುದಿಲ್ಲ. ಇದನ್ನು ಬಹಳ ದೀರ್ಘವಾಗಿ ಯೋಚನೆ ಮಾಡಿ; ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪುನಃ ಹಾಕಬೇಕು. ಈಗ ಇರತಕ್ಕ ರೀತಿಯಲ್ಲಿ ಖಂಡಿತ ತರಕೂಡದು. ಯಾವ ರೋಗ ರುಜಿನಗಳನ್ನು ಶಾಸನದಿಂದ ತಡೆಯಬೇಕೆಂದು ಇಟ್ಟುಕೊಂಡಿದ್ದಿರೋ ಅದು ಶಾಸನದಿಂದ ನಡೆಯುವುದಿಲ್ಲ. ಜನಗಳಿಗೆ ತಿಳುವಳಿಕೆಯಾಗುವಂತೆ ನಿಮ್ಮ ಇಲಾಖೆಯವರು ಮನೆ ಮನೆ ಬಾಗಿಲಿಗೂ ಹೋಗಿ ದಾರಿ ತೋರಿಸಿದರೆ ನಮ್ಮ ರೈತರು ಮಾಡುವುದಕ್ಕೆ ಸಿದ್ದರಿದ್ದಾರೆ.

* * *

# ವಿರೋಧ ಪಕ್ಷದ ನಾಯಕರಾಗಿ ಪ್ರಥಮ ಭಾಷಣ

30, ಜನವರಿ 1970

**ಶ್ರೀ ಎಚ್. ಸಿದ್ದವೀರಪ್ಪ** – ಮಾನ್ಯ ಉಪಾಧ್ಯಕ್ಷರೇ, ಇದುವರೆಗೂ ನಡೆದಂಥ ಕಾರ್ಯ ಕಲಾಪಗಳನ್ನು ನೋಡಿ ಅನೇಕ ಭಾವನೆಗಳು ನನ್ನಲ್ಲಿ ಮೂಡಿವೆ. ಒಂದು ವಿಚಾರವನ್ನು ಹೇಳುತ್ತೇನೆ ನಾನು ಯಾವತ್ತಿಗೂ ಯಾವ ಸ್ಥಾನವನ್ನಾಗಲಿ ಎಂದೂ ಅಪೇಕ್ಷೆ ಪಟ್ಟವನಲ್ಲ. ಅದಾಗಿ ಬಂದ ಕೆಲಸವನ್ನು ನನ್ನ ಶಕ್ತಿ ಮೀರಿ ಮಾಡಲಿಕ್ಕೆ ಪ್ರಯತ್ನ ಪಟ್ಟಿದ್ದೇನೆಂದು ಅಷ್ಟು ಹೇಳುತ್ತೇನೆ. ಈ ಹೊತ್ತಿನ ದಿವಸ ನಾನೇನೂ ವಿರೋಧ ಪಕ್ಷದ ನಾಯಕನನ್ನಾಗಿ ಮಾಡಿ ಎಂದು ಯಾರನ್ನೂ ಕೇಳಲಿಲ್ಲ.

ನಮ್ಮ ಪಕ್ಷದವರು ನನ್ನನ್ನು ನಾಯಕನನ್ನಾಗಿ ಆರಿಸಿದಾಗ ನಾನು ಅಧ್ಯಕ್ಷರಿಗೆ ಬರೆಯುವುದಕ್ಕೆ ಕಾರಣವಾಯಿತು. 19ನೇ ತಾರೀಖು ನಮ್ಮ ಸಭೆಯಲ್ಲಿ ತೀರ್ಮಾನವಾದ ಮೇರೆಗೆ 20ನೇ ತಾರೀಕು ನಾನು ಅಧ್ಯಕ್ಷರಿಗೆ ಒಂದು ಕಾಗದ ಬರೆದು, ಈ ರೀತಿ ನಮ್ಮದು ಒಂದು ಪಕ್ಷ, ನನ್ನನ್ನು ನಾಯಕನನ್ನಾಗಿ ಆರಿಸಿದೆ. ಇಷ್ಟು ಜನ ಸದಸ್ಯರಿದ್ದಾರೆಂದು ತಿಳಿದ ಮೇಲೆ ಇನ್ನೂ ಕೆಲವು ಕಾರ್ಯಕ್ರಮ ಕೇಳಿದರು. ಅದನ್ನೆಲ್ಲ 21ನೇ ತಾರೀಖು ಕೊಟ್ಟೆ. ಆಮೇಲೆ ಇಲ್ಲಿಯವರೆಗೂ ನೀವು ಮಾಡಿ, ಈ ಹೊತ್ತೇ ಮಾಡಿ, ಈಗಲೇ ಮಾಡಿ ಎನ್ನ ತಕ್ಕ ಒತ್ತಡವನ್ನು ನಾವು ಯಾವತ್ತಿಗೂ ತರಲಿಲ್ಲ. ನನಗೆ ಗೊತ್ತಿತ್ತು ಏನು ನಡೆಯುತ್ತಿದೆ ಎಂದು, ನನ್ನ ಸ್ನೇಹಿತರಾದ ಗೋಪಾಲಗೌಡರು ಮತ್ತು ಸ್ನೇಹಿತರು ಸಂಯುತ್ತ ವಿಧಾಯಕ ದಳವನ್ನು ಮಾಡಬೇಕೆಂಬ ಪ್ರಯತ್ನದಲ್ಲಿದ್ದಾರೆಂದು ತಿಳಿದ ನಾನು ಇದನ್ನು ಒತ್ತಾಯ ಮಾಡದೆ ಸುಮ್ಮನೆ ಇದ್ದೆ. ಕಾರಣವೇನೆಂದರೆ ನನ್ನನ್ನು ನಾಯಕನನ್ನಾಗಿ ಆರಿಸುವುದು ಒಂದು ಪಕ್ಷ. ಆ ಪಕ್ಷಕ್ಕೆ ನಾನು ನಾಯಕನೇ ಹೊರತು ಬಾಕಿಯವರಿಗೆ ನಾಯಕನಲ್ಲ, ಆ ರೀತಿಯಿಂದ ನಾನು ಹೇಳಿಕೊಳ್ಳಲೂ ಇಲ್ಲ. ಇದನ್ನು ಮಾನ್ಯ ದೇವರಾಜ ಅರಸ್ ಅವರು ಸ್ಪಷ್ಟೀಕರಿಸಿದ್ದಾರೆ. ಆ ಮೇಲೆ ಈ ಹೊತ್ತಿನ ದಿವಸ ಕೆಲವರು ತಿಳಿದು ಕೊಂಡಿರಬಹುದು, ವಿರೋಧಪಕ್ಷದಲ್ಲಿ ಏನೂ ಸಾಧನೆ ಮಾಡಲಾರದೆ ನಾವು ಹೊಸ ಪಕ್ಷದವರು ಈ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು.

ಈಗ ನಡೆದಂಥ ಪ್ರತಿಕ್ರಿಯೆಯಿಂದ ನನ್ನ ಮನಸ್ಸಿಗೆ ನೋವಾಗಿರುಷ್ಟು ಇನ್ನು ಯಾರ ಮನಸ್ಸಿಗೂ ಆಗಿರಲಾರದು. ಕಳೆದ ಮೂರು ವರ್ಷಗಳಿಂದ ವಿರೋಧ ಪಕ್ಷವನ್ನು ಸಂಘಟಿಸಿ ಅದನ್ನು ಡೀಜೂರ್ ಎಂದು ಕರೆಯಿರಿ, ಡೀಫ್ಯಾಕ್ಟೋ ಎಂದು ಕರೆಯಿರಿ, ಅದು ಒಂದು ವಿರೋಧ ಪಕ್ಷವಾಗಿ ಕೆಲಸ ಮಾಡಿಕೊಂಡು ಬಂತು. ಶ್ರೀಮಾನ್ ಶಿವಪ್ಪನವರು ಅತ್ಯಂತ ಮಾನ್ಯ ಸ್ನೇಹಿತರು, ಬಹಳ ವರ್ಷಗಳಿಂದ ಅವರನ್ನು ಬಲ್ಲೆ. ನಾನು ಹಿಂದೆ ಒಂದು ಸಾರಿ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದಂತೆ 'He is perfect gentleman' ಇದರಲ್ಲಿ ಅನುಮಾನವಿಲ್ಲ. ಯೂನಿವರ್ಸಿಟಿ ಸಿಂಡಿಕೇಟಿನಲ್ಲಿ ಅವರ ಜೊತೆ ಕೆಲಸ ಮಾಡಿದ್ದೇನೆ. ಕಳೆದ ಮೂರು ನಾಲ್ಕು ದಿವಸಗಳಿಂದಲೂ ಅವರಿಗೆ ಹೇಳಿದೆ, ಈಗ ಯಾರಾದರೂ ನಿಮ್ಮನ್ನು ನಾಯಕರನ್ನಾಗಿ ಆರಿಸಿದರೆ ನನಗೆ ಆಗತಕ್ಕ ಸಂತೋಷ ಇನ್ನು ಯಾರಿಗೂ ಆಗುವುದಿಲ್ಲ. ಒಂದು ವೇಳೆ ಶ್ರೀಮಾನ್ ಗೋಪಾಲ್‌ಗೌಡರು ಅಥವಾ ಶಿವಪ್ಪನವರು ನಾಯಕರು ಎಂದು ಹೇಳಿದ್ದರೆ ನಾನು ತುಂಬಿದ ಹೃದಯದಿಂದ ಸ್ವಾಗತಿಸುತ್ತಿದ್ದೆ. ಏತಕ್ಕೋಸ್ಕರ ಈ ಮಾತು ಹೇಳುತ್ತೇನೆಂದರೆ ವಿರೋಧ ಪಕ್ಷದವರಾದ ನಮ್ಮೆಲ್ಲರ ಮೇಲೂ ಒಂದು ಜವಾಬ್ದಾರಿ ಇದೆ. ಈ ಹೊತ್ತು ನಾವೆಲ್ಲರೂ ಒಗ್ಗಟ್ಟಾಗಿ ಒಂದು ಕೆಲಸವನ್ನು ಮಾಡುವುದಕ್ಕೆ ಕಷ್ಟವಿರಬೇಕಾದರೆ, ಅನೇಕ ಕಾರಣಗಳಿಂದ ಇಲ್ಲಿ ಬಹು ವಿಧವಾದ ರಾಜಕೀಯ ಪಕ್ಷಗಳು ಇವೆ. ಭಿನ್ನಭಾವನೆಗಳು ಇರುವಂಥ ಪಕ್ಷಗಳೂ ಇರುವ ಕಡೆಗಳಲ್ಲಿ ಪೋಲರೈಸೇಷನ್ ಆಫ್ ಪಾರ್ಟೀಸ್ ಎಂದು ಮಾಡಿಕೊಂಡು ಒಂದೇ ರೀತಿಯ ಕಾರ್ಯಕ್ರಮವನ್ನು ಹೊಂದಿರುವ ಜನ ಹೆಚ್ಚು ಹೆಚ್ಚಾಗಿ ಒಂದು ಗುಂಪಾಗಿ ಆಗುತ್ತ ಹೋಗುವುದು ಪ್ರಜಾಪ್ರಭುತ್ವಕ್ಕೆ ಒಳ್ಳೆಯದು ಎಂದು ಈ ದೇಶದಲ್ಲಿರುವ ರಾಜಕಾರಣಿಗಳೆಲ್ಲರೂ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದು ದೇಶದಲ್ಲಿ ಎಲ್ಲ ಕಡೆಯೂ ನಡೆಯುತ್ತಿದೆ. ಇಡೀ ನಮ್ಮ ರಾಜ್ಯದಲ್ಲಿ, ಹಿಂದುಸ್ಥಾನದಲ್ಲಿ ಎಲ್ಲ ಕಡೆಯಲ್ಲಿ ಇಂಥ ಪರಿಸ್ಥಿತಿಯನ್ನು ನಾನು ನೋಡುತ್ತಿದ್ದೇನೆ.

ಶ್ರೀಮಾನ್ ಗೋಪಾಲಗೌಡರು ಒಂದು ಹೇಳಿದರು. ಅವರಿಗೆ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಅದೇ ರೀತಿಯಿಂದ ಈ ಸಭೆಯ ನಾಯಕರಾದ ವೀರೇಂದ್ರ ಪಾಟೀಲರೂ ಹೇಳಿದರು. ನಮ್ಮ ಕರ್ತವ್ಯವನ್ನು, ನಾವು ಮಾಡಬೇಕಾದುದನ್ನು ಯಾವ ದೃಷ್ಟಿಯಿಂದ ಮಾಡಬೇಕೋ ಹಾಗೆ ಮಾಡುತ್ತೇವೆಯೇ ಹೊರತು ವೈಯಕ್ತಿವಾಗಿ ನಾವು ಕೆಲಸ ಮಾಡಬೇಕಾದುದಿಲ್ಲ. ವಿರೋಧಪಕ್ಷದವರ ಕರ್ತವ್ಯ ಯಾವರೀತಿ ಇದೆ, ಈ ಸರ್ಕಾರದ ವಿಚಾರದಲ್ಲಿ ಏನೇನು ಕಾರ್ಯಕ್ರಮಗಳನ್ನು ನಾವು ಸರ್ಕಾರವನ್ನು ಟೀಕೆ ಮಾಡುವುದರಲ್ಲಿ ತೆಗೆದುಕೊಳ್ಳಬೇಕು ಅದನ್ನು ಮಾಡುತ್ತೇವೆ. ಮತ್ತು ರಾಜ್ಯಾಂಗದತ್ತವಾದ ನಮ್ಮ ಕರ್ತವ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

* * *



WD-H-035-14

# ಗೊಬ್ಬರದ ಗೊಂದಲ

30, ಜನವರಿ 1970

**ಶ್ರೀ ಎಚ್. ಸಿದ್ದವೀರಪ್ಪ :** ಶ್ರೀಮಾನ್ ಗೋಪಾಲಗೌಡರು ಹೇಳಿದ ಒಂದೆರಡು ಮಾತುಗಳನ್ನು ಪುಷ್ಠಿಕರಿಸುತ್ತಾ ಮಾನ್ಯ ಉಪ ಮುಖ್ಯಮಂತ್ರಿ ಬಿ. ಎಲ್. ಗೌಡರಿಗೆ ಕೇಳುತ್ತೇನೆ. ಅವರು ಜವಾಬು ಕೊಡಬೇಕಾದರೆ ನಾನು ಎತ್ತತಕ್ಕ ಪ್ರಶ್ನೆಗಳಿಗೆ ನೇರವಾದ ಜವಾಬನ್ನು ಕೊಡುತ್ತಾರೆ ಎಂದು ನಿರೀಕ್ಷಣೆ ಮಾಡುತ್ತೇನೆ. ನನಗೆ ಗೊತ್ತಿದ್ದ ಹಾಗೆ ಸುಮಾರು 30 ಕೋಟಿ ರೂಪಾಯಿಗಳ ಬಂಡವಾಳವನ್ನು ಗೊಬ್ಬರದ ಮೇಲೆ ತೊಡಗಿಸಿದ್ದೀರಿ. ಇಷ್ಟು ಗೊಬ್ಬರ ಬೇಕೆಂದು ಯಾರು ಎಸ್ಟಿಮೇಟ್ ಮಾಡಿದರು? ಇಲಾಖೆ ಇಲಾಖೆಗಳಲ್ಲಿಯೇ ಅವರ ಮೇಲೆ ಇವರು, ಇವರ ಮೇಲೆ ಅವರು ಹೇಳತಕ್ಕ ಪರಿಸ್ಥಿತಿ ಬಂತೇ? ಇದು ಒಳ ಅಂತರಂಗ ಗೊತ್ತಿರತಕ್ಕ ವಿಷಯವಾಗಿರುವುದರಿಂದ ಇದನ್ನು ಸ್ಪಷ್ಟಪಡಿಸಬೇಕು. ನಿನ್ನೆ ದಿವಸ ಮಾನ್ಯ ಸಭಾ ನಾಯಕರು ಇಲ್ಲಿ ಭಾಷಣವನ್ನು ಮಾಡಿ, ಅವರು ಸಾಧನೆ ಮಾಡಿರತಕ್ಕ ವಿಷಯಗಳನ್ನು ಹೇಳುತ್ತಾ ಇಷ್ಟೊಂದು ಹಣ ಸಾಲ ಕೊಟ್ಟಿದ್ದೇವೆ ಎಂದು ಹೇಳಿದರು. ನೋಡುವುದಕ್ಕೆ ಈ ಅಂಕಿಅಂಶಗಳು ಬಹಳ ಚೆನ್ನಾಗಿ ಕಾಣಬಹುದು. ಈ ಗೊಬ್ಬರದ ವಿಷಯದಲ್ಲಿ ಏನಾಗಿದೆ ಎಂದರೆ ಮನಾಪಲಿ ಇಟ್ಟುಕೊಂಡರು ಅದರ ಜೊತೆಗೆ ಖಾಸಗಿಯವರಿಗೆ ಸ್ವಲ್ಪ ಅದನ್ನು ವ್ಯಾಪಾರ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಖಾಸಗಿಯವರು ಇವರಿಗಿಂತ ಸ್ವಲ್ಪ ಕಡಿಮೆ ಬೆಲೆಗೆ ಮಾರಾಟ ಮಾಡಿರುವುದರಿಂದ ಇವರ ಗೊಬ್ಬರ ಮಾರ್ಕೆಟ್‌ನಲ್ಲಿ ವ್ಯಾಪಾರವಾಗುತ್ತಾ ಇಲ್ಲ. ಇವರು ಇತಿಮಿತಿ ಇಲ್ಲದೇ ತರಿಸಿದ್ದಾರೆ. ನಮ್ಮ ರೈತರು ಈ ಗೊಬ್ಬರದ ಖಾರ ಹೊರಟು ಹೋಗಿದೆ ಕೆಟ್ಟು ಹೋಗಿ ನಾಥ ಬರುತ್ತದೆ, ಆದ್ದರಿಂದ ಇದು ನಮಗೆ ಬೇಡ ಎಂದು ಹೇಳುತ್ತಾರೆ. ಎರಡನೇಯದಾಗಿ ಖಾಸಗಿಯವನು ಮಗ್ಗಲಲ್ಲೇ ಕುಳಿತಿದ್ದಾನೆ, ಅವನು ಮಾರತಕ್ಕ ಗೊಬ್ಬರದ ಬೆಲೆ ಕಡಿಮೆ ಇದೆ. ಈ ಒಂದು ವ್ಯವಸ್ಥೆಯನ್ನು ಯಾವ ರೀತಿ ಮಾಡಿದರು ಎಂಬುದನ್ನು ಮಾನ್ಯ ಉಪಮಂತ್ರಿಗಳು ಹೇಳಬೇಕು. ಕಾಸ್ಟ್ ಅಕೌಂಟ್ ಲೆಕ್ಕ ಹಾಕಿದಾಗ

ಹೊರಗಡೆಯಿಂದ ಬರುವ ಗೊಬ್ಬರದ ಕಾಸ್ಟ್‌ಪ್ರೈಸ್ ಏನಿದೆ ಇದು ಕೊನೆಗೆ ಗ್ರಾಹಕನಾದ ರೈತನ ಮೇಲೆ ಬೀಳುತ್ತದೆ. ಅದನ್ನು ನೀವು ಎಲ್ಲೆಲ್ಲಿ, ಯಾವ ಯಾವ ಹಂತದಲ್ಲಿ ಜಾಸ್ತಿ ಮಾಡಿದ್ದೀರಿ, ಹೇಗೆ ಆಯಿತು ಎಂಬುದನ್ನು ನೋಡಿದರೆ ಟ್ರಾನ್ಸ್‌ಪೋರ್ಟ್ ಇದೆಲ್ಲಾ ಬೀಳಬೇಕಾದ್ದೆ, ಬಿದ್ದಿದೆ, ಇದರಲ್ಲಿ ಸುಮಾರು ರುಪಾಯಿಯಲ್ಲಿ 14 ಆಣೆ ಭಾಗ ಈ ಸಹಕಾರ ಸಂಘಗಳಲ್ಲಿ ಸೆಂಟ್ರಲ್ ಬ್ಯಾಂಕ್ ಆದ ಅಪೆಕ್ಸ್ ಬ್ಯಾಂಕು ಅಲ್ಲಿಂದ ಕೆಳಗೆ ಡಿಸ್ಟ್ರಿಕ್ಟ್ ಬ್ಯಾಂಕು, ಅಲ್ಲಿಂದ ಕೆಳಗೆ ತಾಲ್ಲೂಕು ಸೊಸೈಟಿ, ಇತ್ಯಾದಿ ಇತ್ಯಾದಿಯಾಗಿ ಹೋಗಿ ಗ್ರಾಹಕರಿಗೆ ಸಿಕ್ಕ ಬೇಕಾದರೆ ಇಷ್ಟು ದುಡ್ಡು ಜಾಸ್ತಿಯಾಗಿದೆ. ಇನ್ನೊಂದು ವಿಷಯವನ್ನು ಈ ಮಾನ್ಯ ಸಭೆ ಗಮನಿಸಬೇಕು. ಸೆಂಟ್ರಲ್ ಸೊಸೈಟಿಯವರು ಒಬ್ಬನಿಂದ ಒಂದು ಕ್ವಿಂಟಾಲ್‌ಗೆ 5 ರೂಪಾಯಿ ಜಾಸ್ತಿ ತೆಗೆದುಕೊಂಡು ಅದನ್ನು ಸೆಂಟ್ರಲ್ ಸೊಸೈಟಿಯ ಷೇರಿಗೆ ಅಂತ ಹಾಕಿದ್ದಾರೆ. ಸೆಂಟ್ರಲ್ ಸೊಸೈಟಿಯ ಷೇರು ಮೊಬಲಗು ಕೊಡುವವನು ರೈತ. ಈ ರೈತನಿಂದ ತೆಗೆದುಕೊಂಡ ಲಾಭ ಅವರ ಲಾಭ ಬಿತ್ತುವ  ಹಾಗಿಲ್ಲ, ಬೆಳೆಯುವ ಹಾಗೆ ಇಲ್ಲ. ತಮಗೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಿಕೊಂಡು ಅವರ ಸಹಾಯವನ್ನು ಪಡೆದುಕೊಂಡು ಇಷ್ಟೊಂದು ಅನ್ಯಾಯ ಮಾಡಿದ್ದಾರೆ. ಇದರ ವಿಚಾರಣೆಯನ್ನು ಮಾಡಿದರೆ ಇಲ್ಲಿರತಕ್ಕ ತಿಮಿಂಗಲಗಳು, ಯಾವ ಯಾವ ರೀತಿಯಲ್ಲಿ ಸೇರಿಕೊಂಡಿವೆ ಅನ್ನುವುದು ಈಚೆಗೆ ಬಂದರೆ ಮೈಸೂರು ದೇಶದಲ್ಲಿ ಈ ಸರ್ಕಾರ ಇರಲಿಕ್ಕೆ ಲಾಯಕ್ ಅಲ್ಲ, ಇದು ಜನಗಳ ಶೋಷಣೆಯನ್ನು ಮಾಡತಕ್ಕ ಕಾರ್ಯ ಕೈಗೊಂಡಿದೆ ಎಂಬುದು ಬಯಲಿಗೆ ಬರುತ್ತದೆ.

ಇನ್ನೊಂದು ವಿಷಯ ಏನೆಂದರೆ ಗೊಬ್ಬರ ಹಾಕಿದ್ದಾರೆ, ದಾವಣಗೆರೆಯ ಒಂದರ ವಿಷಯ ನನಗೆ ಗೊತ್ತು. ಅಲ್ಲಿ ಸುಮಾರು ಒಂದು ತಿಂಗಳಿಗೆ ಐದೂವರೆ, ಆರು ಸಾವಿರ ರೂಪಾಯಿ ಗೋಡೌನ್ ಚಾರ್ಜಸ್ ಕೊಡಬೇಕು. ಅವರು ಇದನ್ನು ತೆಗೆದು ಹಾಕಿರಿ, ನಮಗೆ ಗೊಬ್ಬರಬೇಡ, ಗೋಡೌನ್ ಚಾರ್ಜಸ್ ಕೊಡುವುದಕ್ಕಾಗುವುದಿಲ್ಲ ನಮ್ಮ ಷೇರು ಬಂಡವಾಳ ಇರುವುದೆಲ್ಲಾ 50 ಸಾವಿರ ರೂಪಾಯಿಗಳಿರಬಹುದು, ಅದನ್ನು ನಾವು ಇದರ ಬಾಡಿಗೆಗೆ ಕೊಟ್ಟರೆ ಹೇಗೆ ಉಳಿದುಕೊಳ್ಳಬೇಕು ಎಂದು ಹೇಳಿ ರಿಜಿಸ್ಟ್ರಾರ್ ಅವರಿಗೆ ನೋಟೀಸ್ ಕೊಟ್ಟಿದ್ದಾರೆ. ಇದನ್ನು ಇಡಬೇಡಿ ಎಂದು ಹೇಳಿದ್ದಾರೆ. ಈಗ ಅದನ್ನು ತೆಗೆದುಕೊಂಡು ಹೋಗಿ ಮುನಿಸಿಪಾಲಿಟಿಗೆ ಹಾಕುವುದಕ್ಕೂ ದಾರಿ ಇಲ್ಲ. ಇದಂತಹ ಒಂದು ಪರಿಸ್ಥಿತಿ ಏನಿದೆ ಇದರ ವಿಚಾರಣೆಗೆ ಒಂದು ಸ್ಪೆಷಲ್ ಆಡಿಟ್ ಸೆಲ್ ಮಾಡುವುದರ ಜೊತೆಗೆ ಈಗ ಏನು ಆಗಿದೆ ಇದರ ವಿಷಯದಲ್ಲಿ ತಾವು ಏನು ಹೇಳುತ್ತೀರಿ? ಇದು ಸರಿಯೇ? ಅಲ್ಟಿಮೇಟ್ ಆಗಿ ಎಷ್ಟು ಲುಕ್ಸಾನವಾಗಿದೆ?

ಈಗ ಕೈಗಾರಿಕಾ ಸಂಸ್ಥೆಯಲ್ಲಿ ಏನೇನಾಗಿದೆ ಎನ್ನುವುದನ್ನು ಹೇಳುತ್ತೇನೆ. ಸಹಕಾರ ಸಂಘಗಳಲ್ಲಿ ಅಚಲ ವಿಶ್ವಾಸ, ಅಚಲ ಪ್ರೇಮ ಇಟ್ಟುಕೊಂಡು ನಾನು 1928ನೇ ಇಸವಿಯಿಂದಲೂ ಕೆಲಸ ಮಾಡುತ್ತಿದ್ದೆ. ಇತ್ತೀಚೆಗೆ ಆಗುವುದನ್ನು ನೋಡಿದರೆ ಈಗ ಈ ಸಂಸ್ಥೆಗಳನ್ನು ರಿಜಿಸ್ಟರ್ ಮಾಡಿಸಬೇಕಾದರೆ ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ್ ಕಂಪನೀಸ್ ಅವರ ಹತ್ತಿರ ಮಾಡಿಸೋಣ ಅನ್ನುವಷ್ಟು ಬೇಜಾರಾಗಿದೆ. ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್ ಅವರ ಸಹವಾಸವೇ ಬೇಡ ಅನಿಸುತ್ತದೆ, ಅವರ ಹಿಡಿತವೇ ಬೇಡ ಅನಿಸುವಷ್ಟು ಬೇಜಾರಾಗಿಬಿಟ್ಟಿದೆ. ಅದನ್ನು ತಿಳಿದುಕೊಂಡು ಆದಷ್ಟು ಜಾಗ್ರತೆ ಅಂಕಿಅಂಶಗಳನ್ನು ಕೊಡುತ್ತಾರೆಂದು ಹೇಳಿ ಶ್ರೀಮಾನ್ ಕೆ. ಹೆಚ್.ಪಾಟೀಲರು ತಂದಿರತಕ್ಕಂಥ ಅರ್ಧಗಂಟೆಯ ಕಾಲ ಚರ್ಚೆಯನ್ನು ಪುಷ್ಟೀಕರಿಸುತ್ತೇನೆ.

* * *

## 14, ಮಾರ್ಚ್ 1970

**ಶ್ರೀ ಎಚ್. ಸಿದ್ದವೀರಪ್ಪ** (ಹರಿಹರ) – ಅಧ್ಯಕ್ಷರೇ, ಈಗ ಮಾನ್ಯ ಸಭೆಯ ನಾಯಕರಾದ ಶ್ರೀ ವೀರೇಂದ್ರ ಪಾಟೀಲರು ಹೇಳಿದುದನ್ನು ಕೇಳಿದ್ದೇವೆ ಮತ್ತು ಶ್ರೀಮಾನ್ ಹುಚ್ಚಮಾಸ್ತಿಗೌಡರು, ಯಾರು ಆಪಾದನೆಯನ್ನು ಮಾಡಿದರು ಎಂದು ಹೇಳಿದ್ದನ್ನು ಸಹ ಕೇಳಿದ್ದೇವೆ. ಅವರು ನಮ್ಮ ಪಕ್ಷಕ್ಕೆ ಸೇರಿದ ಸದಸ್ಯರಾಗಿದ್ದಾರೆ. ಈಗ ನಡೆಯುತ್ತಿರತಕ್ಕ ವಿಷಯ ಕೇವಲ ಶ್ರೀಮಾನ್ ವೀರೇಂದ್ರ ಪಾಟೀಲರು ಮತ್ತು ಶ್ರೀಮಾನ್ ಹುಚ್ಚಮಾಸ್ತಿ ಗೌಡರಿಗೆ ಸೇರಿದ್ದಲ್ಲ. ಆ ವಿಷಯ ಸಭೆಯ ಸ್ವತ್ತಾಗಿದೆ. ಆ ವಿಷಯ ಎಷ್ಟೊಂದು ತೀಕ್ಷ್ಣವಾಗಿದೆ ಎನ್ನುವದಕ್ಕೆ ಈಗ ನಾವು ತೆಗೆದುಕೊಂಡಿರುವ ಕಾಲವೇ ಸಾಕ್ಷಿ, ಈ ಕಾಲದಲ್ಲಿ ಇಷ್ಟೊಂದು ತುರುಸಿನ ಅಥವಾ ಬಿರುಸಾದ ಚರ್ಚೆ ಆಗಿರಬೇಕಾದರೆ ಈ ದೇಶದಲ್ಲಿ ಈ ವಿಚಾರದಲ್ಲಿ ಏನು ತೀವ್ರತೆ ಇದೆ ಎನ್ನುವುದನ್ನು ಹೊರಪಡಿಸುತ್ತದೆ ಈಚಲ ಮರದ ಕೆಳಗೆ ಕುಳಿತು ಮಜ್ಜಿಗೆ ಕುಡಿದರೆ.... ಎಂಬ ಗಾದೆ ಹೇಳುತ್ತಾರಲ್ಲ ಹಾಗಿರಬಾರದು, ಈ ಹೊತ್ತಿನ ದಿವಸ ಯಾರೇ ಅಧಿಕಾರ ಸ್ಥಾನದಲ್ಲಿರಲಿ, ಈ ಸಭೆಯ ಸದಸ್ಯರಾಗಿರಲಿ, ಪದೇ ಪದೇ ಈ ರೀತಿಯಾದ ಪ್ರಶ್ನೆ ಬರುತ್ತದೆ. ಒಂದು ಅಭಿಪ್ರಾಯ ಜನರಲ್ಲಿ ಏನು ಬರುತ್ತದೆ ಎಂದರೆ ಈ ಸಭೆಗೆ ಹೋಗತಕ್ಕವರು ಜೇಬನ್ನು ದೊಡ್ಡದು ಮಾಡಿಕೊಳ್ಳುವುದಕ್ಕೆ ಹೋಗುತ್ತಾರೆ ಎನ್ನತಕ್ಕ ವಿಚಾರ ಸರ್ವೇ ಸಾಮಾನ್ಯವಾದ ಹೋಟೆಲುಗಳಿಗೆ ಹೋಗಲಿ, ಬಸ್‌ಸ್ಟಾಂಡಿಗೆ ಹೋಗಲಿ ಕ್ಷೌರದಂಗಡಿಗೆ ಹೋಗಲಿ ಸಾಮಾನ್ಯ ಜನರು ಎಲ್ಲೆಲ್ಲಿ ಇರುತ್ತಾರೆ ಅಲ್ಲೆಲ್ಲ ಈ ಮಾತು ಬರುವುದನ್ನು ಕೇಳಿದ್ದೇವೆ.

ಇದು ಪ್ರಜಾಪ್ರಭುತ್ವಕ್ಕೆ ಕುಠಾರ ಪ್ರಾಯವಾದುದು. ತಾವು ಇಂಗ್ಲೆಂಡಿಗೆ ಹೋಗಿ ಬಂದಿದ್ದೀರಿ, ಇಂಗ್ಲೆಂಡಿನ ಸಂಪ್ರದಾಯವನ್ನು ಪದೇ ಪದೇ ತಿಳಿಸುತ್ತಿರುತ್ತೀರಿ. ಇಂಗ್ಲೆಂಡಿನ ಸಂಪ್ರದಾಯವನ್ನು ತೆಗೆದುಕೊಂಡು ಅನೇಕ ಸಲ ಉದಾಹರಣೆಯನ್ನು ಸಹ ಕೊಟ್ಟಿದ್ದೇನೆ. ಯಾರೋ ಒಬ್ಬ ಮಂತ್ರಿ ಒಂದು ಬೆಳ್ಳಿಯ ಸಿಗರೇಟ್ ಕೇಸನ್ನು ತೆಗೆದುಕೊಂಡಿದ್ದರಿಂದ ಮಂತ್ರಿ ಪದವಿಯನ್ನು ಕಳೆದುಕೊಂಡ ಕಾಲವಿದೆ. ಈ ಚರ್ಚೆ ಇಷ್ಟು ತೀಕ್ಷ್ಣವಾಗಿ ಈ ದೇಶದಲ್ಲಿ ನಡೆಯುತ್ತಿದೆ ಅದಕ್ಕಾಗಿ ಒಂದು ಸಲಹೆ ಮಾಡಿ ವಿನಯದಿಂದ ಕೇಳಿಕೊಂಡೆ. ಶ್ರೀಮಾನ್ ನಿಜಲಿಂಗಪ್ಪನವರು ಇದ್ದಾಗಲೂ ಕೇಳಿಕೊಂಡೆ, ಏನೆಂದರೆ ಮಂತ್ರಿಯಾಗಿ ಯಾರೂ ಖಾಯಂ ಆಗಿ ಇರುವುದಿಲ್ಲ, ಇದನ್ನೆಲ್ಲ ಒಂದು ದಿವಸ ಬಿಟ್ಟು ಹೋಗಬೇಕಾಗುತ್ತದೆ. ಸ್ಥಾನ ಪಲ್ಲಟವಾಗುತ್ತದೆ. ಆದ್ದರಿಂದ ನಾವು ಇನ್ನೂ ಬದುಕಿದ್ದಾಗಲೇ ಮಂತ್ರಿಗಳಾಗಲಿ, ಮಾಜಿ ಮಂತ್ರಿಗಳಾಗಿರಲಿ, ಈ ಸಭೆಯಲ್ಲಿರಲಿ, ಇಲ್ಲದೇ ಇರಲಿ, ಸಾಯುವುದಕ್ಕಿಂತ ಮುಂಚೆ ನಾವು ಪರಲೋಕಕ್ಕೆ ಹೋಗುವುದಕ್ಕೇ ಒಂದು ಪಾಸ್ ಪೋರ್ಟ್ ಕೊಡುವ ಹಾಗೆ ಸರಿಯಾದ ವಿಚಾರಣೆ

ಮಾಡಿ ನಾವು ವಿಮುಕ್ತರಾಗಿ ಹೋಗುತ್ತೇವೆ, ಅದಕ್ಕೆ ಒಂದು ದಾರಿ ಮಾಡಬೇಕಾದುದು ಮುಖ್ಯ ಎಂದು. ಇದು ನನಗೆ ಬೇಕಾಗಿದೆ. ನಿಮಗೆ ಬೇಕೋ ಬೇಡವೋ ಗೊತ್ತಿಲ್ಲ. ಅದಕ್ಕೋಸ್ಕರ ಹೇಳಿದ್ದೇನೆ. ನನ್ನನ್ನೇ ಮೊದಲು ವಿಚಾರಣೆಗೆ ಗುರಿ ಮಾಡಿ ಎನ್ನುವುದನ್ನು ಹೇಳುತ್ತಿದ್ದೇವೆ.

ಶ್ರೀಮಾನ್ ನಿಜಲಿಂಗಪ್ಪನವರಿಗೂ ಹೇಳಿದೆ. ಅವರು ಹೇಳಿದರು. ನಾನು ಮಾಡುತ್ತೇನೆ, ಏಕೆ ಆಗುವುದಿಲ್ಲ ಎಂದು. ಪೌರುಷ ಮಾಡಬೇಡಿ– ಹಳ್ಳಿಗಳಲ್ಲಿ ದೀಪಾವಳಿ ಹಬ್ಬಕ್ಕೆ ಪಟಾಕಿ ತಂದುಕೊಡುತ್ತೇವೆ, ಅದರಲ್ಲಿ ಕೆಲವು ಪಟಾಕಿಗಳು ಹತ್ತುವುದಿಲ್ಲ, ಟುಸ್ ಎಂದು ಹೋಗುತ್ತವೆ. ಹಾಗೆ ಮಾಡಬೇಡಿ, ಎಂದು ಹೇಳಿದರೆ ಖಂಡಿತ ಮಾಡುತ್ತೇನೆ ಎಂದು ಹೇಳಿದರು. ಇದನ್ನು ನಾನು ಹಿಂದೆಯೇ ಹೇಳಿದ್ದೇನೆ. ಅಂಗಲಾಚಿ ಕೇಳಿಕೊಂಡೆ, ಮೊದಲು ಕಾನೂನು ತೆಗೆದುಕೊಂಡು ಬನ್ನಿ 24 ಗಂಟೆಯೊಳಗೆ ಪಾಸು ಮಾಡುತ್ತೇವೆಂದರೆ ಆ ಕಡೆಗೆ ನಿಮ್ಮ ಗಮನವೇ ಹೋಗಿಲ್ಲ. ಕಾನೂನೂ ಮಾಡಿದರೆ ಭಯ ಏನೋ? ಕಾನೂನು ಮಾಡಿದ ಮೇಲೆ ಯಾರಾದರೂ ಸುಳ್ಳು ಅಪಾದನೆ ಮಾಡಿದರೆ, ಗುರುತರವಾದ ಶಿಕ್ಷೆಗೆ ಅವರನ್ನು ಗುರಿ ಮಾಡಬಹುದು ಅಂಥದನ್ನು ಮಾಡಿ ಎಂದರೆ ಅದನ್ನು ಅಲ್ಲಿಗೇ ಬಿಟ್ಟರು. ಲೋಕಪಾಲ, ಲೋಕಾಯುಕ್ತ ಬಿಲ್ ಬಂದಾಗ ಅಂಥದ್ದು ನಮಗೆ ಬೇಡ ಅಂದಿರಿ, ಪಬ್ಲಿಕ್ ಮೆನ್ ಎನ್‌ಕ್ವೈಯರಿ ಬಿಲ್ ತೆಗೆದುಕೊಳ್ಳಲಿಲ್ಲ. ಹೊರಗಡೆ ಮಾತನಾಡಿ ಎಂದು ಮಾನ್ಯ ಮುಖ್ಯ ಮಂತ್ರಿಗಳ ಬಾಯಿಂದ ಬಂದುದಕ್ಕೆ ನನಗೆ ದುಃಖವಾಗುತ್ತದೆ. ಹಳ್ಳಿಗಳಲ್ಲಿ ಹುಡುಗರು ಗೋಲಿ ಆಟ ಆಡುವಾಗ, ನನ್ನ ಕೇರಿಗೆ ಬಾರೋ, ನೋಡುತ್ತೇನೆ ಎಂದು ಹೇಳುವುದುಂಟು. ಆ ಧಾಟಿಯಲ್ಲಿ ಹೇಳಿದ ಹಾಗೆ ಆದೀತು. ಎಷ್ಟು ಜನರ ಮೇಲೆ ಕೇಸು ಹಾಕುತ್ತೀರಿ? ಹೊರಗಡೆಯವರು ಕಾನೂನು ಮಾಡುತ್ತಾರೆಯೋ ಇಲ್ಲವೋ ಅದು ಬೇಡ. ನಮ್ಮಲ್ಲಿ ಒಂದು ಕಾನೂನು ತನ್ನಿ ಎಂದರೆ ಅದರ ಕಡೆಗೆ ಗಮನ ಕೊಡುತ್ತಿಲ್ಲ.

ಕೇಂದ್ರ ಸರ್ಕಾರದವರು ನೇಮಿಸಿದ್ದ ಸಂತಾನಂ ಕಮಿಟಿಯವರು ಒಂದು ಸೂಕ್ತ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಗಮನಿಸುತ್ತಿಲ್ಲ, ಅದನ್ನೆಲ್ಲ ಬಿಟ್ಟು ಶ್ರೀ ವೀರೇಂದ್ರ ಪಾಟೀಲರು ಹೊಸ ಸೂತ್ರ ಕೊಡುತ್ತಿದ್ದಾರೆ. ಹೊರಗೆ ಬಂದು ಮಾತನಾಡಿ ಎಂದು, ಹೊರಗೆ ಬಂದು ಮಾತನಾಡುವುದಕ್ಕೆ ಹೆದರಬೇಕಾದ ಪ್ರಶ್ನೆ ಇಲ್ಲ. ಇದರ ನೂರರಷ್ಟು ಪಬ್ಲಿಕ್ ಸ್ಪೀಚ್‌ನಲ್ಲಿ ಮಾತನಾಡುತ್ತಾರೆ. ನಿಮ್ಮ ಘನತೆ, ಗೌರವ, ನಿಮಗೆ ಸೇರಿದಷ್ಟೇ ನಮಗೂ ಸೇರಿದ್ದು. ದೇಶದ ಎರಡೂವರೆ ಕೋಟಿ ಜನರ ಪ್ರತಿನಿಧಿಯಾಗಿ ಎಲ್ಲಿಯವರೆಗೆ ಇರುತ್ತೀರಿ ಅಲ್ಲಿಯವರೆಗೆ ಮುಖ್ಯಮಂತ್ರಿ ಸ್ಥಾನದ ಗೌರವ ನಿಮ್ಮ ಒಬ್ಬರಿಗೆ ಅಲ್ಲ. ದೇಶಕ್ಕೆಲ್ಲಾ ಸೇರಿದ್ದು. ಮುಖ್ಯಮಂತ್ರಿ ಸ್ಥಾನ ಗೌರವ ಹೋಗುತ್ತಿದೆ, ಬೀದಿ ಕಸವಾಗಿ ಹೋಗುತ್ತಿದೆ; ಅದನ್ನು ಉಳಿಸಿಕೊಳ್ಳಬೇಕು ಎಂದು ಇದ್ದರೆ, ಆ ಕಡೆಯ ಅಷ್ಟೊಂದು ನನ್ನ ಮಾನ್ಯ ಸದಸ್ಯರಿಗೆ ಮುಖ್ಯಮಂತ್ರಿ ಸ್ಥಾನದ ಗೌರವವನ್ನು

ಉಳಿಸಿಕೊಳ್ಳಬೇಕು ಎಂದು ಇದ್ದರೆ, ನಾನು ಎಷ್ಟೋ ಸಲ ಹೇಳಿರುವಂತೆ ಒಂದು ಕಾನೂನು ಮಾಡಿ, ಅದರ ಪ್ರಕಾರ ಮುಂದುವರಿಯಿರಿ. ಅದನ್ನು ಬಿಟ್ಟು ಹೊರಗೆ ಬನ್ನಿ, ಮಾತನಾಡಿ ಎನ್ನುವುದು ಸರ್ವಸಮ್ಮತವಾದುದಲ್ಲ, ಈ ಸಭೆಗೆ ಭೂಷಣವಲ್ಲ, ಆದುದರಿಂದ ನಾನು ಇನ್ನೂ ಒಮ್ಮೆ ಕೇಳಿಕೊಳ್ಳುತ್ತೇನೆ, ಶ್ರೀಮಾನ್ ನಿಜಲಿಂಗಪ್ಪನವರು ಪ್ರಾರಂಭಮಾಡಿ ಅರ್ಧಕ್ಕೆ ನಿಲ್ಲಿಸಿರುವುದನ್ನು ಷುರು ಮಾಡಿ, ಅದಕ್ಕಾಗಿ ಒಂದು ಕಾಯಿದೆಯನ್ನು ತೆಗೆದುಕೊಂಡು ಬನ್ನಿ. ಆಡ್ಮಿನಿಸ್ಟ್ರೇಷನ್ ರಿಫಾರಮ್ಸ್ ರಕಮೆಂಡೇಷನ್ ಇದೆ, ಸಾಹಿತ್ಯ ಬೇಕಾದಷ್ಟಿದೆ.

ಒಂದು ಕಾಯಿದೆಯನ್ನು ತೆಗೆದುಕೊಂಡು ಬಂದರೆ ಒಂದೇ ಒಂದು ದಿವಸದಲ್ಲಿ ಅದನ್ನು ಕಾನೂನು ಮಾಡಿ ಕೊಡುತ್ತೇವೆ. ಹೊರಗೆ ಬಂದು ಹೇಳಿ ಎಂದು ಹೇಳಿದಂಥ ಮಾತುಗಳನ್ನಾಡುವುದು ಸರಿಯಲ್ಲ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಸುಮಾರು ಇಪ್ಪತ್ತು ವರ್ಷಗಳಿಂದ ಈ ಮಾನ್ಯ ಸಭೆಯ ಸದಸ್ಯರಾಗಿದ್ದಾರೆ. ಸಾರ್ವಜನಿಕ ಕೆಲಸವನ್ನು ಲಘವಾಗಿ ಭಾವಿಸಿ ಅವರು ಮಾಡಲಾರರು. ಒಂದು ವೇಳೆ ಮಾಡಿದರೆ ಅದಕ್ಕೆ ಪ್ರಾಯಶ್ಚಿತ ತೆಗೆದುಕೊಳ್ಳಲೇಬೇಕಾಗುತ್ತದೆ. ಆದುದರಿಂದ ಈ ಪರಿಶೀಲನೆಯನ್ನು ಮುಂದುವರಿಸಬೇಕು ಹಾಗೂ ಮುಂದೆ ಇಂಥ ಪ್ರಸಂಗಬಾರದಂತೆ ಕಾನೂನು ಮಾಡುತ್ತೇವೆ ಎಂದು ಆಶ್ವಾಸನೆಕೊಟ್ಟರೆ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

* * *

# ಪ್ರಥಮ ಮಹಿಳಾ ಸ್ಪೀಕರ್ ಶ್ರೀಮತಿ ನಾಗರತ್ನಮ್ಮಗೆ ಅಭಿನಂದನೆ

1970

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು ) : ಮಾನ್ಯ ಅಧ್ಯಕ್ಷರೇ ಈ ದಿವಸ ತಮ್ಮನ್ನು ಅಭಿನಂದಿಸುವ ಕಾರ್ಯದಲ್ಲಿ ಭಾಗವಹಿಸಲು ನನಗೆ ಬಹಳ ಸಂತೋಷ ಉಂಟಾಗಿದೆ. ನಾನು ತಮ್ಮನ್ನೂ ಮತ್ತು ತಮ್ಮ ಮನೆತನವನ್ನೂ ಅನೇಕ ವರ್ಷಗಳಿಂದ ಬಲ್ಲೆ. ತಮ್ಮ ಮನೆತನ ಮೈಸೂರು ಜಿಲ್ಲೆಯಲ್ಲಿ ಒಂದು ಬಹಳ ಹೆಸರಾದ ಮನೆತನ. ದೇಶ ಸೇವೆ ಮತ್ತು ಸಮಾಜ ಸೇವೆಗಳಲ್ಲಿ ತಮ್ಮ ಮನೆತನ ಪ್ರಖ್ಯಾತಿಗಳಿಸಿದೆ. ಮೈಸೂರು ನಗರದಲ್ಲಿ ತಮ್ಮ ಯಜಮಾನರು ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ತನ್ಮೂಲಕ ಬಹಳ ಹೆಚ್ಚಿನ ರೀತಿಯಲ್ಲಿ ಸಮಾಜ ಸೇವೆಯನ್ನು ಮಾಡಿದ್ದಾರೆ. ಆ ತಮ್ಮ ವಿದ್ಯಾರ್ಥಿ ನಿಲಯದಲ್ಲಿ ಹಿಂದೆ ನಾನೂ ಒಬ್ಬ ಸ್ಟೂಡೆಂಟಾಗಿದ್ದೆ. ನಾವುಗಳು ಯಾರಾದರೂ ತಮ್ಮ ಕ್ಷೇತ್ರಕ್ಕೆ ಹೋಗಿ ನೋಡಿದಾಗ ಮಾತ್ರ ಅಲ್ಲಿ ಜನರು ಎಷ್ಟರ ಮಟ್ಟಿಗೆ ತಮ್ಮ ಮನೆತನದ ಬಗ್ಗೆ ಒಂದು ಅಭಿಮಾನ ಇಟ್ಟುಕೊಂಡಿದ್ದಾರೆ, ಎಷ್ಟರಮಟ್ಟಿಗೆ ಗೌರವವನ್ನಿಟ್ಟುಕೊಂಡಿದ್ದಾರೆ ಎಂಬುದು ಗೊತ್ತಾಗುತ್ತದೆ. ನಾನು ಒಂದಾವರ್ತಿ ತಮ್ಮ ಕ್ಷೇತ್ರಕ್ಕೆ ಬಂದಿದ್ದಾಗ ಅಲ್ಲಿಯ ಜನರು ತಮ್ಮ ಮನೆತನದ ಬಗ್ಗೆ ಎಷ್ಟರಮಟ್ಟಿನ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ ಎಂಬುದನ್ನು ನೋಡಿ ನನಗೆ ಬಹಳ ಆನಂದವಾಯಿತು.

ಇನ್ನು ತಮಗಿರತಕ್ಕ ಅಪಾರ ಲೌಕಿಕ ಜ್ಞಾನದ ಬಗ್ಗೆ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತಮಗಿರತಕ್ಕ ಅನುಭವದ ಬಗ್ಗೆ ಏನು ಹೇಳಿದ್ದಾರೋ ಅದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ತಾವು ಈ ದಿವಸ ಈ ಮಾನ್ಯ ಸಭೆಗೆ ಅಧ್ಯಕ್ಷರಾಗಿರತಕ್ಕದ್ದು ಕೇವಲ ಇಲ್ಲಿರತಕ್ಕ ಸದಸ್ಯರಾದ ನಮಗೆ ಮಾತ್ರವೇ ಅಲ್ಲದೇ ಇಡೀ ದೇಶಕ್ಕೆ ಒಂದು ಹೆಮ್ಮೆಯನ್ನು ತರತಕ್ಕದ್ದಾಗಿದೆ. ಐದು ವರ್ಷಗಳ ಕಾಲವಾದ ನಂತರ ಇಂಥವರು ಒಬ್ಬರು ಈ ಮಾನ್ಯ ಸಭೆಗೆ ಅಧ್ಯಕ್ಷರಾಗಿದ್ದರು ಅಂಥ ಒಂದು ಪ್ರಶಂಸನೀಯವಾದ ರೀತಿಯಲ್ಲಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಟ್ಟರು

ಎಂಬುದನ್ನು ಸುವರ್ಣಾಕ್ಷರಗಳಲ್ಲಿ ಬರೆಯತಕ್ಕ ಕಾಲಬರುತ್ತೆ ಎಂಬುದಾಗಿ ನಾನು ಭಾವಿಸುತ್ತೇನೆ.

ಹಿಂದೆ ಇದೇ ಸಭೆಯ ಅಧ್ಯಕ್ಷರಾಗಿದ್ದ ಮಾನ್ಯ ಎಚ್. ಸಿದ್ದಯ್ಯನವರು ಇಲ್ಲಿ ಅಧ್ಯಕ್ಷರಾಗಿದ್ದು ಬಹಳ ಒಳ್ಳೆಯ ಹೆಸರನ್ನು ಗಳಿಸಿಕೊಂಡರು. ಅಂದರೆ ಬೇರೆಯವರು ಒಳ್ಳೇ ಹೆಸರನ್ನು ಗಳಿಸಿಕೊಳ್ಳಲಿಲ್ಲ ಎಂದು ನಾನು ಹೇಳುತ್ತಿಲ್ಲ. ಶ್ರೀಮಾನ್ ಬಾಳಿಗರವರೂ ಒಳ್ಳೇ ಹೆಸರನ್ನು ತೆಗೆದುಕೊಂಡರು. ತಾವೂ ಕೂಡ ಹಾಗೇ ಒಳ್ಳೇ ಹೆಸರನ್ನು ತೆಗೆದುಕೊಳ್ಳುತ್ತೀರಿ ಎನ್ನುವುದರಲ್ಲಿ ನಮಗೆಲ್ಲರಿಗೂ ನಂಬಿಕೆ ಇದೆ. ಪ್ರಜಾಪ್ರಭುತ್ವವು ಒಂದು ಒಳ್ಳೆ ದಾರಿಯಲ್ಲಿ ಬೆಳೆಯುವುದಕ್ಕೆ ತಾವು ಒಂದು ಒಳ್ಳೆ ದಾರಿಯನ್ನು ಹಾಕಿಕೊಡುತ್ತೀರೆಂಬ ಭರವಸೆ ನಮಗಿದೆ. ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯರುಗಳಾದ ವಾಟಾಳ್ ನಾಗರಾಜು ಹಾಗೂ ನಾಗಣ್ಣನವರು ಹೇಳಿದಂತೆ ಈ ಸಭೆಯಲ್ಲಿರತಕ್ಕ ಏನು ಎರಡು ಪಕ್ಷಗಳು– ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಇವೆ ಅವು ಒಂದು ನಾಣ್ಯಕ್ಕೆ ಎರಡು ಮುಖಗಳಿದ್ದಂತೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೇನಿವೆ ಇವೆರಡೂ ದೇಶದ ಹಿತದೃಷ್ಟಿಯಿಂದ ಪ್ರಜಾಪ್ರಭುತ್ವವನ್ನು ಒಂದು ಸರಿಯಾದ ರೀತಿಯಲ್ಲಿ ಬೆಳೆಸಿಕೊಂಡು ಬರುವುದು ಅತ್ಯಗತ್ಯ. ಪ್ರಜಾಪ್ರಭುತ್ವದ ಯಶಸ್ಸು ಈ ಎರಡೂ ಪಕ್ಷಗಳ ಆಶ್ರಯವನ್ನವಲಂಬಿಸಿದೆ. ಅಧ್ಯಕ್ಷರಾದ ತಾವು ಯಾರನ್ನೂ ಎತ್ತಿಕಟ್ಟುವುದೂ ಇಲ್ಲ – ಅಥವಾ ಅತ್ತ ಕಡೆ ಇರತಕ್ಕವರನ್ನೂ ಇಳಿಸುವುದೂ ಇಲ್ಲ. ತಾವು ಉಭಯ ಪಕ್ಷಗಳವರನ್ನೂ ಒಂದೇ ದೃಷ್ಟಿಯಿಂದ ಕಾಣುತ್ತೀರೆಂಬ ಭರವಸೆ ನಮಗಿದೆ.

ಈ ದಿವಸ ಆ ಅಧ್ಯಕ್ಷ ಸ್ಥಾನದಲ್ಲಿರತಕ್ಕವರು ಶ್ರೀಮತಿ ನಾಗರತ್ನಮ್ಮನವರು– ಹೆಣ್ಣುಮಗಳು. ಅವರ ವಿಚಾರದಲ್ಲಿ ಸೌಜನ್ಯತೆಯಿಂದ ವರ್ತಿಸಬೇಕು ಎಂದು ಎಲ್ಲರೂ ಭಾವಿಸತಕ್ಕದ್ದು ಹಾಗಿರಲಿ, ಆದರೆ ತಾವು ಈ ಸಭೆಯಲ್ಲಿ ಏನೇ ಒಂದು ರೂಲಿಂಗ್‌ನ್ನು ಕೊಡಲಿ ಅದನ್ನು ನಾವೆಲ್ಲರೂ ಶಿರಸಾವಹಿಸಿ ಪಾಲಿಸಿಕೊಂಡು ಬರುತ್ತೇವೆ ಎಂಬ ಭರವಸೆಯನ್ನು ನಾನು ತಮಗೆ ಕೊಡಬಯಸುತ್ತೇನೆ. ತಮ್ಮ ರೂಲಿಂಗುಗಳು ಯಾವತ್ತೂ ನಿಷ್ಪಕ್ಷಪಾತವಾದವುಗಳಾಗಿರುತ್ತವೆಂಬುದನ್ನು ನಾನು ಬಲ್ಲೆ. ಈ ಸಭೆಯಲ್ಲಿ ನಡೆಯ ತಕ್ಕ ಚರ್ಚೆಗಳ ಬಗ್ಗೆ ಇಲ್ಲಿರತಕ್ಕ ಮಾನ್ಯ ಸದಸ್ಯರುಗಳಿಗೆ ಒಂದು ಗಂಟೆಗೆ ಎಷ್ಟು ದುಡ್ಡು ಖರ್ಚಾಗುತ್ತದೆ ಎಂಬುದನ್ನು ತಾವೆಲ್ಲರೂ ಗಮನಿಸಿ ಆ ವೆಚ್ಚವನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬೇಕು ಎನ್ನತಕ್ಕ ಬಗ್ಗೆ ವಿರೋಧ ಪಕ್ಷದವರು ಟೀಕೆಗಳನ್ನು ಮಾಡಲೇಬೇಕಾಗುತ್ತದೆ. ಅಂಥ ಟೀಕೆಗಳಿಂದ ದೇಶಕ್ಕೆ ಅನುಕೂಲವಾಗುತ್ತದೆ. ಇಂಥ ಅನೇಕ ವಿಷಯಗಳಲ್ಲಿ ಅಧ್ಯಕ್ಷರಾದ ತಮಗೆ ಅಪಾರವಾದ ಅನುಭವ ಇರುವುದರಿಂದ ತಾವು ಉಭಯ ಪಕ್ಷಗಳವರನ್ನು ಒಂದು ಒಳ್ಳೇ ದಾರಿಯಲ್ಲೇ ತೆಗೆದುಕೊಂಡು ಹೋಗುತ್ತೀರಿ ಎಂಬ ಭರವಸೆ ನಮಗಿದೆ. ಈ ಸಭೆಯ

ಕಾರ್ಯಕಲಾಪಗಳಲ್ಲಿ ತಮಗೆ ನಮ್ಮಿಂದ ಬೇಕಾಗತಕ್ಕ ಎಲ್ಲ ಸಹಾಯಗಳನ್ನೂ ನಾವು ನೀಡಲು ಸದಾ ಸಿದ್ಧರಾಗಿದ್ದೇವೆ. ಈ ಎಲ್ಲಾ ವಿಚಾರಗಳಲ್ಲೂ ಭಗವಂತನು ತಮಗೆ ಒಳ್ಳೆಯ ಮಾರ್ಗದರ್ಶನ ಮಾಡಲೆಂದು ಹಾರೈಸುತ್ತೇನೆ. ಇಂಥ ಅಧಿಕಾರ ಸ್ಥಾನವನ್ನು ಅಲಂಕರಿಸುವುದರಲ್ಲಿ ತಾವು ಎರಡನೇಯವರು, ಒಂದನೆಯವರು ಡಾ. ಸುಶೀಲಾ ನಾಯರ್ ಅವರು ಎಂಬುದಾಗಿ ಆಗಲೇ ಹೇಳಿದರು. ಆದರೆ ಹಿಂದೆ ಆ ದೆಹಲಿಯ ಒಂದು (ಸಿ) ರಾಜ್ಯವಾಗಿತ್ತು; ಇದರಂತೆ ಅದು ಒಂದು (ಎ)ಸ್ಟೇಟಾಗಿರಲಿಲ್ಲ. ಈ ದಿವಸ ಇಂಥ ಒಂದು (ಎ) ಸ್ಟೇಟಿನ ಶಾಸನ ಸಭೆಗೆ ಅಧ್ಯಕ್ಷರನ್ನಾಗಿ ಆರಿಸಿದ್ದರ ಬಗ್ಗೆ ನನಗೆ ಬಹಳ ಹೆಮ್ಮೆ ಉಂಟಾಗಿದೆ. ಈ ವಿಚಾರದಲ್ಲಿ ನಾವು ತಮ್ಮನ್ನು ಹೊಗುಳುವುದಿರಲಿ–ಇಡೀ ಭಾರತವೇ ತಮ್ಮನ್ನು ಹೊಗಳುತ್ತದೆ ಎಂದು ಹೇಳಿ ಭಗವಂತನು ತಮಗೆ ಒಳ್ಳೆಯದನ್ನು ಮಾಡಲೆಂದು ಹಾರೈಸಿ, ತಮ್ಮನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

* * *

# ಮತ್ತಷ್ಟು ಪಬ್ಲಿಕ್ ಸರ್ವೀಸ್ ಕಮೀಷನ್ ಚರ್ಚೆ

17, ಅಕ್ಟೋಬರ್ 1970

**ಶ್ರೀ ಎಚ್. ಸಿದ್ದವೀರಪ್ಪ** : ಜನರಿಗೆ ನ್ಯಾಯ ದೊರೆಯುತ್ತಿದ್ದರೆ ಇವತ್ತು ಅಧಿಕಾರಿಗಳ ಹಿಂದೆ ಸುತ್ತುವರಿಯುತ್ತಾ ಇರಲಿಲ್ಲ. ಇದೇ ರೀತಿ ಶಾಸಕರನ್ನು ಬೇರೆ ಯಾವ ಕೆಲಸ ಕೂಡ ಮಾಡಲಿಕ್ಕೆ ಜನರು ಬಿಡುತ್ತಾ ಇಲ್ಲ. ಸ್ವಾಮಿ, ನಮಗೆ ಅನ್ಯಾಯವಾಗಿದೆ, ಸ್ವಾಮಿ, ನಮಗೆ ಅದಾಗಿದೆ, ಸ್ವಾಮಿ ನಾವು ಲೋಕಲ್ ಕ್ಯಾಂಡಿಡೇಟ್ಸ್, ನಮ್ಮನ್ನು ತೆಗೆದು ಬಿಟ್ಟಿದ್ದಾರೆ – ಹೀಗೆ ಪ್ರತಿನಿತ್ಯವೂ ಜನರ ಅಹವಾಲು ಇದ್ದೇ ಇರುತ್ತದೆ. ಇಲ್ಲಿ ಅನೇಕ ಸಲ ಅದರ ಕೆಲವು ಕತೆಗಳನ್ನು ಹೇಳಿದ್ದೇನೆ. ಸೇಲ್ಸ್ ಟ್ಯಾಕ್ಸ್ ಇಲಾಖೆಯ ಕಥೆಯನ್ನೂ ಸಹ ಹೇಳುತ್ತಿದ್ದೆ. ಆದರೆ ಆ ಕಥೆಗಳನ್ನು ಹೇಳುತ್ತಾ ಹೋದರೆ, ಹುಚ್ಚು ಹಿಡಿಯಬಹುದು.

ಸರ್ಕಾರದವರು ಈ ರೀತಿ ಮಾಡುವುದರಲ್ಲಿ ಏನಾದರೂ ನ್ಯಾಯ ಇದೆಯೇ? ಪ್ರೊಬೇಷನರಿ ಪೀರಿಯಡ್ ಮುಗಿದ ಮೇಲೆ ಏನಾದರೂ ಮೇಲ್ದರ್ಜೆಗೇರಿಸಿ ಆಯ್ಕೆ ಪ್ರಕ್ರಿಯೆಯಲ್ಲಿ ನಿಯಮ ಮಾಡಿ ಅವರನ್ನು ರೆಗ್ಯೂಲರೈಸ್ಡ್ ಮಾಡಿದ್ದರೆ ಯಾವ ತೊಂದರೆಯೂ ಬರುತ್ತಿರಲಿಲ್ಲ. ಕೆಲವು ಅಂಶಗಳನ್ನು ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಅವರ ರಿಪೋರ್ಟಿನಲ್ಲಿ ಹೇಳಿದ್ದಾರೆ. ನನ್ನ ಅಭಿಪ್ರಾಯವಲ್ಲ. ಇವರು ಮಾಡಿರತಕ್ಕದ್ದನ್ನೆಲ್ಲಾ ನಮ್ಮ ಮುಂದೆ ಇಡುವುದಕ್ಕೆ ಇವರು ಇಷ್ಟಪಡುತ್ತಿಲ್ಲ. ಅವುಗಳನ್ನೆಲ್ಲಾ ನಮ್ಮ ಮುಂದೆ ಇಡುವುದಕ್ಕೆ ಇವರಿಗೆ ಶಕ್ತಿಯೂ ಇಲ್ಲ. ಇದರಲ್ಲಿ ಹೇಳಿರುವಷ್ಟೇ ಸಾಕು. ಪಬ್ಲಿಕ್ ಸರ್ವೀಸ್ ಕಮೀಷನ್‌ನವರು ಒಂದು ಹೇಳಿದರೆ ಇವರು ಒಂದು ಮಾಡಿದ್ದಾರೆ. ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿಯೂ ಇದೇ ರೀತಿ ಮಾಡಿದ್ದಾರೆ. ಅಪಾಯಿಂಟ್‌ಮೆಂಟ್‌ಗಳನ್ನು ಇವರು ಸರಿಯಾದ ರೀತಿಯಲ್ಲಿ ಮಾಡಿಲ್ಲ. ಶ್ರೀಮಾನ್ ವೈ. ರಾಮಕೃಷ್ಣ ಅವರಿಗೆ ಸಂಬಂಧಪಟ್ಟ ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿಯೂ ಇದೇ ರೀತಿ ನಡೆದಿದೆ.

ಶ್ರೀಮಾನ್ ಡಾ. ನಾಗಪ್ಪ ಆಳ್ವ ಅವರು ಈ ಡಿಪಾರ್ಟ್‌ಮೆಂಟಿನಲ್ಲಿ ಏನು ಅನ್ಯಾಯ ಮಾಡಿಟ್ಟು ಹೋಗಿದ್ದಾರೆ. ಆ ಅನ್ಯಾಯವನ್ನು ಬಹುಶಃ ಯಾವ ಮಂತ್ರಿ

ಆ ಸ್ಥಾನಕ್ಕೆ ಬಂದರೂ ಅದನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲ. 1951ನೇ ಇಸವಿಯಲ್ಲಿ ಶ್ರೀ ಪದ್ಮನಾಭಯ್ಯನವರು ಪಬ್ಲಿಕ್ ಸರ್ವೀಸ್ ಕಮೀಷನ್ ಚೇರ್ಮನ್ ಆಗಿದ್ದಾಗ ಈ ಡಿಪಾರ್ಟ್‌ಮೆಂಟಿನಲ್ಲಿ ರೆಕ್ರೂಟ್‌ಮೆಂಟ್ ಆಯಿತು. ಆಗ ರೆಕ್ರೂಟ್‌ಮೆಂಟಿಗೆ ಅಪ್ಲಿಕೇಷನ್ ಕರೆಯಲಿಲ್ಲ. 1961ನೇ ಇಸವಿಯಿಂದ ಈಚೆಗೆ ಪಬ್ಲಿಕ್ ಸರ್ವೀಸ್ ಕಮೀಷನ್‌ನವರು ರೆಕ್ರೂಟ್‌ಮೆಂಟ್ ಮಾಡುವವರೆಗೆ ಇವರು ನೂರಾರು ಅಪಾಯಿಂಟ್‌ಮೆಂಟುಗಳನ್ನು ಮಾಡಿದ್ದಾರೆ. ಇವುಗಳನ್ನು ಯಾವ ಆಧಾರದ ಮೇಲೆ ಯಾವ ಬಲದ ಮೇಲೆ ಮಾಡಿದ್ದಾರೆ? ಯಾವ ರೆಕ್ರೂಟ್‌ಮೆಂಟ್ ರೂಲ್ಸ್ ಇಟ್ಟುಕೊಂಡು ಅಪಾಯಿಂಟ್‌ಮೆಂಟ್‌ಗಳನ್ನು ಮಾಡಿದ್ದಾರೆ ಎಂಬುದನ್ನು ನೋಡಿದರೆ ತಮಗೆ ಬೇಕಾದವರನ್ನು ಮನಸ್ಸಿನಲ್ಲಿಟ್ಟುಕೊಂಡು ಅನೇಕರಿಗೆ ಅನೇಕರೀತಿಯಲ್ಲಿ ಒಂದು ಸಾವಿರ ರೂಪಾಯಿ, 600 ರೂಪಾಯಿಗಳ ಸಂಬಳ ಬರತಕ್ಕವರನ್ನು ಈ ಡಿಪಾರ್ಟಿಮೆಂಟ್‌ನಲ್ಲಿ ನೇಮಿಸಿ ಈ ಇಲಾಖೆಯನ್ನು ಹೊಲಸು ಮಾಡಿ ಇಟ್ಟಿದ್ದಾರೆ. ಕಾರಣವೇನೆಂದರೆ ಇದಕ್ಕೆ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿಲ್ಲ. ಮತ್ತು ಈ ಹುದ್ದೆಗಳಿಗೆ ಪಬ್ಲಿಕ್ ಸರ್ವೀಸ್ ಕಮೀಷನ್ನಿನವರು ನೇಮಿಸಿಲ್ಲ.

ಪಬ್ಲಿಕ್ ಸರ್ವೀಸ್ ಕಮೀಷನ್ನಿನವರು ಸರ್ಕಾರಕ್ಕೆ ನೀವು ಅನ್ಯಾಯ, ಅಕ್ಷಮ್ಯ ಅಪರಾಧ ಮಾಡಿದ್ದೀರಾ ಎಂದು ಹೇಳಿದರೆ ಇವರು ನಮ್ಮ ಕೈಯಲ್ಲಿ ಅಧಿಕಾರ ಇದೆ ನಾವು ಅದನ್ನು ರೆಗ್ಯುಲರೈಜ್ ಮಾಡುತ್ತೇವೆ ಎಂದು ಆ ಅಪಾಯಿಂಟ್‌ಮೆಂಟ್‌ಗಳನ್ನು ರೆಗ್ಯುಲರೈಜ್ ಮಾಡಿದರು. ಯಾವ ನೌಕರರನ್ನು ನೇಮಕ ಮಾಡಿದ್ದು ತಪ್ಪು ಎಂದು ಪಬ್ಲಿಕ್ ಸರ್ವೀಸ್ ಕಮೀಷನ್‌ನವರು ಹೇಳಿದರೋ ಅದನ್ನು ಲಕ್ಷ ಮಾಡದೆ ಸರ್ಕಾರದವರು ಅವರನ್ನೆಲ್ಲಾ ರೆಗ್ಯೂಲರೈಜ್ ಮಾಡಿದರು. ಅದನ್ನು ಈ ವರದಿಯಲ್ಲಿ ಹೇಳಿದ್ದಾರೆ. ಇದರ ಜೊತೆಗೆ ಕೆಲವು ನೌಕರರ ವಿಷಯದಲ್ಲಿ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕು, ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಬೇಕು ಎಂದು ಹೇಳಿದಂತಹ ಸಂದರ್ಭದಲ್ಲಿ ಅದನ್ನು ಸರ್ಕಾರದವರ ಗಮನಕ್ಕೆ ತೆಗೆದುಕೊಳ್ಳದೇ ಅಲಕ್ಷ್ಯ ಮಾಡಿದ್ದಾರೆ. ಒಂದು ಸಂದರ್ಭದಲ್ಲಿ ಒಬ್ಬರು ಎಗ್ಜಿಕ್ಯೂಟಿವ್ ಇಂಜಿನೀಯರು ಬಹಳ ಸಿಮೆಂಟ್ ಮೂಟೆ ಕದ್ದಿದ್ದಾರೆ, ಅವರ ಮೇಲೆ ಡಿಸಿಪ್ಲೀನರಿ ಆಕ್ಷನ್ ತೆಗೆದುಕೊಳ್ಳಬೇಕು, ಅವರನ್ನು ಡಿಸ್‌ಮಿಸ್ ಮಾಡಬೇಕು ಎಂದು ಪಬ್ಲಿಕ್ ಸರ್ವೀಸ್ ಕಮೀಷನ್ನಿನವರು ಹೇಳಿದರೆ ಅವರನ್ನು ಸೂಪರಿನ್‌ಟೆಂಡೆಂಟ್ ಇಂಜಿನಿಯರ್ ಆಗಿ ನೇಮಕ ಮಾಡಿದ್ದಾರೆ. ಇವರಿಗೆ ಸಂಬಂಧೀಕರು ಅಥವಾ ಯಾರೋ ತಮಗೆ ಬೇಕಾದವರು ಇದ್ದರೆ ಅವರನ್ನು ಕೆಲಸಕ್ಕೆ ನೇಮಕ ಮಾಡಿದ್ದಾರೆ. ಅದರಲ್ಲೂ ಶ್ರೀಮಾನ್ ನಾಡಗೌಡರ ಪೋರ್ಟ್‌ಪೋಲಿಯೋ ತೆಗೆದುಕೊಂಡರೆ ಅಸಿಸ್ಟೆಂಟ್ ರಿಜಿಸ್ಟ್ರಾರರ ನೇಮಕಗಳನ್ನು ಮಾಡಿದ್ದಾರೆ. ಇವರಿಗೆ ಸಂಬಂಧಿಕರು ಅಥವಾ ಯಾರೋ ತಮಗೆ ಬೇಕಾದವರು ಇದ್ದರೆ ಅವರನ್ನು ಕೆಲಸಕ್ಕೆ ನೇಮಕಮಾಡಿದ್ದಾರೆ. ಅದರಲ್ಲೂ ಶ್ರೀಮಾನ್ ನಾಡಗೌಡರ ಪೋರ್ಟ್‌ಪೋಲಿಯೋ ತೆಗೆದುಕೊಂಡರೆ ಅಸಿಸ್ಟೆಂಟ್ ರಿಜಿಸ್ಟ್ರಾರರ ನೇಮಕಗಳನ್ನು ಮಾಡಿದ್ದಾರೆ.

**ಶ್ರೀ ವೀರೇಂದ್ರ ಪಾಟೀಲರು** – ಆಗ ಇವರು ಇರಲಿಲ್ಲ.

**ಶ್ರೀ ಎಚ್.ಸಿದ್ದವೀರಪ್ಪ**– ಇತ್ತೀಚೆಗೆ ಕೆಲವು ಮಾಡಿದ್ದಾರೆ. 1966–67ನೇ ಇಸವಿಯಲ್ಲಿ 13 ಜನ ಜಾಯಿಂಟ್ ಡೈರಕ್ಟರನ್ನು ನೇಮಕ ಮಾಡಿದ್ದಾರೆ. ಡೆಪ್ಯೂಟಿ ಡೈರೆಕ್ಟರನ್ನು ನೇಮಕ ಮಾಡಿದ್ದಾರೆ. ಇದಕ್ಕೆಲ್ಲಾ ಪಬ್ಲಿಕ್ ಕಮೀಷನ್ನಿನವರನ್ನು ಲೆಕ್ಕದಲ್ಲೇ ಇಟ್ಟುಕೊಂಡಿಲ್ಲ. ಅನೇಕ ಸಾರಿ ಪಬ್ಲಿಕ್ ಸರ್ವೀಸ್ ಕಮೀಷನ್ನಿನವರನ್ನು ಕನಸಲ್ಟ್ ಮಾಡಿಲ್ಲ. ಅನೇಕ ವಿಷಯಗಳನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಗಮನಕ್ಕೆ ತೆಗೆದುಕೊಂಡು ಹೋಗಿಲ್ಲ. ಅವರನ್ನು ಲಕ್ಷ್ಯ ಮಾಡದೆ ಅನೇಕ ನೇಮಕಗಳನ್ನು ಮಾಡಿದ್ದಾರೆ. ಈ ರೀತಿಯಲ್ಲಿ ಮಾಡಿ ಒಂದು ದಾರುಣ ಪರಿಸ್ಥಿತಿಗೆ ತಂದಿಟ್ಟಿದ್ದಾರೆ. ಇವೊತ್ತು ಬೆಳಿಗ್ಗೆ ಎರಡು ಗಂಟೆಗಳ ಕಾಲ ಲೋಕಲ್ ಕ್ಯಾಂಡಿಡೇಟ್‌ಗಳ ವಿಷಯ ಚರ್ಚೆಯಾಗಿದೆ. ಅವರು ಬಹಳ ತೊಂದರೆಯಲ್ಲಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಸರ್ಕಾರದವರು ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಿ ಎಂದು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರನ್ನು ಕೇಳಬೇಕಾಗಿತ್ತು. ಆದರೆ ಇವರು ಆ ರೀತಿ ಮಾಡಲಿಲ್ಲ. ರೂಲ್ಸ್ ಇಲ್ಲದೇ ಇದ್ದರೆ ಏನು ಬೇಕಾದರೂ ಮಾಡಬಹುದು. ರೂಲ್ಸ್ ಇದ್ದರೆ ಕಷ್ಟ. ರೂಲ್ಸ್ ಇಲ್ಲದೆ ಇದ್ದುದರಿಂದ ಸಾವಿರಾರು ಜನ ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಿ ಇವೊತ್ತು ಸಾವಿರಾರು ಜನ ವಿದ್ಯಾವಂತರನ್ನು ನಿರುದ್ಯೋಗಿಗಳಾಗಿ ಮಾಡಿದ್ದಾರೆ. ಇವೊತ್ತು ಬಿ.ಇ. ಫಸ್ಟ್‌ಕ್ಲಾಸ್ ಬಂದವನಿಗೆ ನೌಕರಿ ಸಿಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ 35 ಪರ್ಸೆಂಟ್ ಮಾರ್ಕ್ಸ್ ಬಂದ ಅನೇಕ ಜನಗಳನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ಮೇರಿಟ್‌ನಲ್ಲಿ ಪಾಸು ಮಾಡಿದವರಿಗೆ ಇವೊತ್ತು ಕೆಲಸವಿಲ್ಲ. ಇದರಿಂದ ದೇಶದಲ್ಲಿ ಅಸಂತೋಷ ಹೆಚ್ಚಾಗಿದೆ. ಎಲ್ಲೆಲ್ಲಿ ನೋಡಿದರೂ ಅತೃಪ್ತಿ ಉಂಟಾಗಿದೆ. ಈ ರೀತಿಯಲ್ಲಿ ಇದರ ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ. ನಮ್ಮ ಮೈಸೂರು ರಾಜ್ಯದ ಮೆರಿಟೆಡ್ ಸ್ಟೂಡೆಂಟ್ 300 ಜನ ಅಮೆರಿಕಾ ಮತ್ತು ಇಂಗ್ಲೆಂಡಿನಲ್ಲಿ ಇದ್ದಾರೆ. ಅಲ್ಲಿ ಅವರು ಬಹಳ ಒಳ್ಳೆಯ ಹೆಸರು ತೆಗೆದುಕೊಂಡಿದ್ದಾರೆ. ಡಾ. ತಿಮ್ಮೇಗೌಡ ಎನ್ನುವವರು ಕೆಲವು ಕಾಲ ಮಾರ್ಥಾಸ್ ಆಸ್ಪತ್ರೆಯಲ್ಲಿ ಇದ್ದರು. ಅವರಿಗೆ ಒಳ್ಳೆಯ ಇಂಟರ್‌ನ್ಯಾಷನಲ್ ರೆಪ್ಯೂಟೇಷನ್ ಇದೆ. ಕೆಲವು ವಿಚಾರದಲ್ಲಿ ಅಮೇರಿಕಾದವರು ಇವರನ್ನು ಕನ್‌ಸಲ್ಟ್ ಮಾಡುತ್ತಿದ್ದಾರೆ. ಇಂಥಾ ವ್ಯಕ್ತಿ ಇಲ್ಲಿಗೆ ಬಂದಾಗ ಅವರಿಗೆ ಒಂದು ನೌಕರಿಯನ್ನು ಕೊಡುವುದಕ್ಕೆ ಇವರ ಕೈಯಲ್ಲಿ ಆಗಿಲ್ಲ. ಇವರಿಗೆ ಸಲಾಮು ಹಾಕಿ, ಬೆಣ್ಣೆ ಹಚ್ಚಿ ಕೈಮುಗಿಯತಕ್ಕಂತಹ ಜನಗಳಿಗೆ ಇವರು ಅನುಕೂಲ ಮಾಡಿಕೊಡುತ್ತಾರೆ.

**ಶ್ರೀ ವೈ. ರಾಮಕೃಷ್ಣ** – ಈಗ ತಾವು ಹೇಳಿದಿರಿ ತಮಗೆ ಇಷ್ಟಬಂದವರನ್ನು ನೇಮಕ ಮಾಡಿದ್ದಾರೆಂದು. ಅಂಥಾ ಹೈ ಕ್ವಾಲಿಫಿಕೇಷನ್ ಇರುವವರು ಈ ಸಂಬಳಕ್ಕೆ ಬರುತ್ತಾರೆಯೇ?

**ಶ್ರೀ ಎಚ್. ಸಿದ್ದವೀರಪ್ಪ** – ಅದಕ್ಕೆ ಮೈಸೂರು ಪೇ ಕಮಿಷನ್ನಿನವರು ಏನು ಹೇಳಿದ್ದಾರೆ. ಮತ್ತು ಲಕ್ಷ್ಮಣಸ್ವಾಮಿ ಮೊದಲಿಯಾರ್ ಅವರು ಏನು ಹೇಳಿದ್ದಾರೆ ಎಂದರೆ, ಅವರಿಗೆ ಸರಿಯಾದ ಪೇ ಸ್ಕೇಲ್ ಕೊಟ್ಟು ಅವರು ಬೇರೆ ಪ್ರೈವೇಟಾಗಿ ಪ್ರಾಕ್ಟೀಸ್ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕೊಡಬೇಕು ಎಂಬುದಾಗಿ. ಆಂಧ್ರದಲ್ಲಿ, ಕೇರಳದಲ್ಲಿ ಮತ್ತು ತಮಿಳುನಾಡಿನಲ್ಲಿ ಇಂಥಾ ಒಂದು ಪದ್ಧತಿ ಇದೆಯೆಂದು ಗೊತ್ತಾಗಿದೆ. ಅವರಿಗೆ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಇಷ್ಟು ಗಂಟೆಗಳು ಎಂದು ಗೊತ್ತು ಮಾಡಿದ್ದಾರೆ ಎಂದು ನಾನು ಕೇಳಿದ್ದೇನೆ. ಇದನ್ನು ಪೇ ಕಮೀಷನ್‌ನವರು ಒಪ್ಪಿದ್ದಾರೆ ಎಂದು ಗೊತ್ತಾಗಿದೆ. ಆದ್ದರಿಂದ ಸರ್ಕಾರಿ ಹುದ್ದೆಯಲ್ಲಿರತಕ್ಕಂಥ ಡಾಕ್ಟರುಗಳಿಗೆ ಔಟ್ ಆಫ್ ಆಫೀಸ್ ಆವರ್ಸ್‌ನಲ್ಲಿ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಅಡ್ಡಿ ಮಾಡಬೇಡಿ. ಇದೇ ಮಾತನ್ನು ಪೇ–ಕಮೀಷನ್ ಅವರು ಸಹ ಹೇಳಿದ್ದಾರೆ.

* * *

## ಮೆಡಿಕಲ್ ಸ್ನಾತಕೋತ್ತರ ಕುರಿತು

17, ಅಕ್ಟೋಬರ್ 1970

**ಶ್ರೀ ಎಚ್. ಸಿದ್ದವೀರಪ್ಪ** – ಒಂದು ಮಾತನ್ನು ಸವಿನಯದಿಂದ ಹೇಳಬಯಸುತ್ತೇನೆ. ಹೊರಗಿನಿಂದ ಬಂದಂಥ ಡಾಕ್ಟರುಗಳು ಇಲ್ಲಿ ಸರಿಯಾದ ಕೆಲಸ ಸಿಗದೆ ವಾಪಸ್ ಹೋಗುತ್ತಿರುವುದು ಸಂಬಳ ಸಾಕಷ್ಟು ಸಿಗದಿರುವುದು ಕಾರಣ ಎಂಬ ಮಾತನ್ನು ನಾನು ಅಷ್ಟಾಗಿ ಒಪ್ಪಿಕೊಳ್ಳಲು ಇಷ್ಟ ಪಡುವುದಿಲ್ಲ. ಅವರು ಕೇವಲ ದುಡ್ಡಿಗಾಗಿ ಅಂಟಿಕೊಂಡಿರುವುದಿಲ್ಲ. ಕೆಲವರು ಇರಬಹುದು ಆದರೆ ಹೆಚ್ಚಿನವರು ದುಡ್ಡು ಮುಖ್ಯವಲ್ಲ ನಮ್ಮ ದೇಶದ ಸೇವೆ ಮುಖ್ಯ ಎಂದುಕೊಂಡು ಇಲ್ಲಿಗೆ ಬರುತ್ತಾರೆ. ಸ್ವಾಭಿಮಾನ ತೊರೆದು ದೇಶ ಸೇವೆ ಮಾಡಬೇಕೆಂಬ ಉದ್ದೇಶದಿಂದ ಬರುತ್ತಾರೆ. ಅನೇಕರಿಗೆ ಗೊತ್ತಿರಬಹುದು, ಹೊರದೇಶಗಳಲ್ಲಿ ಲಂಚ್ ಸಮಯದಲ್ಲಿ 25 ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳತಕ್ಕಂಥ ಡೀನ್, ದೊಡ್ಡ ದೊಡ್ಡ ಡಾಕ್ಟರ್‌ಗಳು, ನರ್ಸ್‌ಗಳು ಮತ್ತು ಆಯಾಗಳು ಒಂದೆಡೆ ಸೇರಿಕೊಂಡು ಊಟ ಮಾಡುತ್ತಾರೆ. ಅಲ್ಲಿಯ ಒಂದು ಸಮಾನತೆ ಮತ್ತು ಆ ಒಂದು ಅಟ್‌ಮಾಸ್‌ಫಿಯರ್ ನಮ್ಮಲ್ಲಿ ಇಲ್ಲ. ಹೊರಗಿನಿಂದ ಇಲ್ಲಿಗೆ ಬಂದಂಥ ಡಾಕ್ಟರ್‌ಗಳು ಇಲ್ಲಿ ಕೆಲಸಕ್ಕಾಗಿ ಸಂಬಂಧಪಟ್ಟವರ ಹತ್ತಿರ ಹೋಗಿ ಸಲಾಮ್ ಹೊಡೆಯಬೇಕು. ಬೆಗ್ ಮಾಡಬೇಕು. ಇದು ಬಹಳ ಜನರಿಗೆ ಹಿಡಿಸುವುದಿಲ್ಲ. ಆದ್ದರಿಂದ ಅನೇಕರು ಎಲ್ಲಿ ಕೆಲಸ ಮಾಡಿದರೂ ಅನ್ನ ಸಿಗುತ್ತದೆ ಎಂದುಕೊಂಡು ವಾಪಸ್ ಬೇರೆ ದೇಶಗಳಿಗೆ ಹೊರಟು ಹೋಗುತ್ತಿದ್ದಾರೆ. ನಮ್ಮ ದೇಶದಲ್ಲಿ ಸೇವೆ ಮಾಡಬೇಕು ಹೆಸರು ಗಳಿಸಬೇಕು ಎಂಬ ಉದ್ದೇಶದಿಂದ ಬಂದವರಿಗೆ ಇಲ್ಲಿ ಸರಿಯಾದ ಉತ್ತೇಜನ ಇಲ್ಲ. ಕೆಲಸ ಸಿಕ್ಕಿದರೂ ಕೂಡ, ಬೇಕಾದಂಥ ಉಪಕರಣಗಳು ಇರುವುದಿಲ್ಲ, ಕತ್ತರಿ ಕೂಡ ಇರುವುದಿಲ್ಲ. ಹೇಳುವುದಾದರೆ, ಪ್ರೊಫೆಸರ್ ಹುದ್ದೆಯನ್ನು ಪೋಸ್ಟ್ ಗ್ರಾಜ್ಯುಯೇಟ್ ಆದವರಿಗೆ ಕೊಡಬೇಕೆಂದು ನಿಯಮ ಇದೆ. ಇವತ್ತು ಗ್ರಾಜ್ಯುಯೇಟ್ ಪೋಸ್ಟ್ ಗ್ರಾಜ್ಯುಯೇಟ್ ಡಿಗ್ರಿ ಕೋರ್ಸ್ ಹೇಳಿಕೊಡಲು ಇಂಡಿಯಾ ದೇಶದಲ್ಲಿ ಅನೇಕ ಇನ್ಸ್ಟಿಟ್ಯೂಷನ್‌ಗಳು ಪ್ರಾರಂಭವಾಗಿವೆ.

ದರ್ಭಾಂಗದಲ್ಲಿರ ತಕ್ಕಂಥ ಒಂದು ಇನ್ಸ್ಟಿಟ್ಯೂಷನ್ ಅವರು 11 ತಿಂಗಳಿಗೆ ಪೋಸ್ಟ್ ಗ್ರಾಜ್ಯುಯೇಟ್ ಡಿಗ್ರಿ ಕೊಡುತ್ತಾರೆ. ಇಂತಹವರನ್ನು ಕೂಡ ನಮ್ಮ ರಾಜ್ಯದಲ್ಲಿ ನೇಮಕ ಮಾಡಿಕೊಳ್ಳಲು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನೆ ಬದಲಾವಣೆ ಮಾಡಿದರು. ಇದರಿಂದ ಅಮೇರಿಕಾಕ್ಕೆ ಹೋಗಿ ಎರಡು ಮೂರು ಸಲ ಗೋತಾ ಹೊಡೆದು, 6–7 ವರ್ಷ ಓದಿ ಡಿಗ್ರಿ ತೆಗೆದುಕೊಂಡಂತಹವರಿಗೆ ಕೆಲಸ ಸಿಗುವುದು ಕಷ್ಟವಾಗುತ್ತಿದೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಪೋಸ್ಟ್ ಗ್ರಾಜ್ಯುಯೇಟ್‌ಗೆ ಯಾವ ಯಾವ ಕೋರ್ಸ್‌ಸ್‌ಗಳನ್ನು ರೆಕಗ್ನೈಜ್ ಮಾಡಿದ್ದಾರೋ ಅದನ್ನು ತೆಗೆದು ಕೊಂಡು ಪಾಸ್ ಮಾಡಿದವರಿಗೆ ಕೆಲಸ ಕೊಡಬೇಕೆಂದು ನಿಯಮವಿದ್ದರೂ ಕೂಡ ನಮ್ಮ ಸರ್ಕಾರದವರು 11 ತಿಂಗಳು ಓದಿ ಡಿಗ್ರಿ ತೆಗೆದುಕೊಂಡಂತಹವರನ್ನು ಕೂಡ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ.

**ಶ್ರೀ ವೈ ರಾಮಕೃಷ್ಣ** – ಆ ರೀತಿ ಏನೂ ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಹಿಂದಿನ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸೇ ಇವತ್ತಿಗೂ ಕೂಡ ಜಾರಿಯಲ್ಲಿದೆ.

**ಶ್ರೀ ವೀರೇಂದ್ರ ಪಾಟೀಲ್** – ಮೊದಲು ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್‌ಸ್ ಸಲುವಾಗಿ ಹೊರದೇಶಗಳಿಗೆ ಹೋಗಲು ಫಾರಿನ್ ಎಕ್ಸ್‌ಛೇಂಜ್ ಮತ್ತು ಪಿ ಫಾರಮ್ಸ್ ಸಿಗುತ್ತಿರಲಿಲ್ಲ. ಈ ಬಗ್ಗೆ ಕೆಲವರು ರಾಜ್ಯಾಂಗದ ಪ್ರಕಾರ ಪ್ರಪಂಚದ ಯಾವುದೇ ಭಾಗದಲ್ಲಿ ವಿದ್ಯಾಭ್ಯಾಸ ಮಾಡಲು ಹಕ್ಕಿದೆ ಎಂಬುದಾಗಿ ಸುಪ್ರೀಂ ಕೋರ್ಟ್‌ಗೆ ಹೋದರು. ಅಲ್ಲಿ ಅದು ಸ್ಟ್ಯಾಂಡ್ ಆಯಿತು. ಹೊರಗಡೆ ಹೋಗಿ ಓದಬಹುದು ಎಂದು ಸುಪ್ರೀಂ ಕೋರ್ಟ್‌ನವರು ತೀರ್ಮಾನ ಕೊಟ್ಟಮೇಲೆ ಅನೇಕ ಜನ ಫಾರಿನ್‌ಗೆ ಹೋಗುತ್ತಿದ್ದಾರೆ. ಈ ರೀತಿ ಹೊರದೇಶಗಳಿಗೆ ಹೋಗುವುದನ್ನು ತಪ್ಪಿಸಲು ನಮ್ಮ ದೇಶದಲ್ಲಿ ಕೂಢ ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್‌ನ್ನು ಪ್ರಾರಂಭ ಮಾಡಬೇಕೆಂದು ನಮ್ಮ ಕೇಂದ್ರ ಸರ್ಕಾರದವರು ತೀರ್ಮಾನ ಕೈಕೊಂಡು ಅದರಂತೆ ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್‌ನ್ನು ಪ್ರಾರಂಭ ಮಾಡಲು ಅನುಮತಿ ಕೊಡುತ್ತಿದ್ದಾರೆ. ಈಗ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಏನು ರೆಕಗ್ನೈಸ್ ಮಾಡಿದ್ದಾರೋ ಅದನ್ನೇ ನಾವು ಅನುಸರಿಸುತ್ತಿದ್ದೇವೆ. ಇದನ್ನು ಬಿಟ್ಟು ಬೇರೆ ಕಡೆ ಡಿಗ್ರಿ ತೆಗೆದುಕೊಂಡಂತಹವರಿಗೆ ನಾವು ಕೆಲಸ ಕೊಡುತ್ತಿಲ್ಲ.

**ಶ್ರೀ ಎಚ್. ಸಿದ್ದವೀರಪ್ಪ** – ತಾವು ಇನ್ನೊಂದು ಸಲ ಈ ಬಗ್ಗೆ ಇರತಕ್ಕಂತ ರೂಲ್ಸ್‌ಗಳನ್ನು ತರಿಸಿಕೊಂಡು ನೋಡಬೇಕು. ನಾನು ಸಹ ಇನ್ನೊಂದು ಸಲ ನೋಡುತ್ತೇನೆ. ಈಗ ಹೇಳಿದ್ದು ತಪ್ಪಿದ್ದರೆ ಅದನ್ನು ಒಪ್ಪಿಕೊಳ್ಳುತ್ತೇನೆ.

**ಶ್ರೀ ವೀರೇಂದ್ರ ಪಾಟೀಲ್** – ಆಗಬಹುದು

**ಶ್ರೀ ಎಚ್. ಸಿದ್ದವೀರಪ್ಪ** – 1964ರಲ್ಲಿ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಿದರು. ನಂತರ ಅದನ್ನು 1967ರಲ್ಲಿ ಬದಲಾವಣೆ ಮಾಡಿದರು. ಅದರಲ್ಲಿ

ಎಷ್ಟರಮಟ್ಟಿಗೆ ತಾರತಮ್ಯ ಇದೆ ಎಂದರೆ ಕೆಲವು ಪೋಸ್ಟ್‌ಗಳಿಗೆ ನೇಮಕ ಮಾಡಲು ಟೀಚಿಂಗ್ ಎಕ್ಸ್‌ಪೀರೀಯನ್ಸ್ 5 ವರ್ಷ ಇರಬೇಕೆಂದು ಮತ್ತೆ ಕೆಲವು ಪೋಸ್ಟ್‌ಗಳಿಗೆ 4 ವರ್ಷ ಇರಬೇಕೆಂದು ಅದೇ ರೀತಿ 3 ವರ್ಷ, ಎರಡು ವರ್ಷ ಒಂದು ವರ್ಷ, 6 ತಿಂಗಳು ಇರಬೇಕೆಂದು ಮಾಡಿದ್ದಾರೆ. ಇದನ್ನು ಯಾವ ಒಂದು ಆಧಾರದ ಮೇಲೆ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಮೊದಲು ಟೀಚಿಂಗ್ ಕೇಡರ್ ಮತ್ತು ಅಡ್ಮಿನಿಸ್ಟ್ರೇಟಿವ್ ಸರ್ವೀಸ್ ಕೇಡರ್ ಎಂಬುದಾಗಿ ಎರಡು ರೀತಿ ಇತ್ತು. ಈಗ ಎರಡನ್ನೂ ಸೇರಿಸಿ ಒಂದೇ ಕೇಡರ್ ಮಾಡಿದ್ದಾರೆ. ಒಂದು ಸರಿಯಾದ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ. ಆ ರೀತಿ ಇದ್ದಿದ್ದರೆ ದೇಶದಲ್ಲಿ ಇಂತಹ ಒಂದು ಪರಿಸ್ಥಿತಿ ಬರುತ್ತಿರಲಿಲ್ಲ. ಮೆಡಿಕಲ್‌ನಲ್ಲಿ ಏನು ಗೋಳಾಗಿದೆಯೋ ಅದೇಗೋಳು ಇಂಜಿನಿಯರಿಂಗ್‌ನಲ್ಲಿಯೂ ಕೂಡ ಆಗಿದೆ. ಎಲ್ಲಿ ನೋಡಿದರೂ ಕೂಡ ಅಸಂತೋಷ, ಅತೃಪ್ತಿ ಎಂಬುದು ತುಂಬಿತುಳುಕಾಡುತ್ತಿದೆ.

ಅನೇಕ ವಿಷಯಗಳನ್ನು ನನ್ನ ಅನೇಕ ಮಾನ್ಯ ಸ್ನೇಹಿತರು ಮಾತನಾಡುವವರಿದ್ದಾರೆ. ಕಾನ್‌ಸ್ಟಿಟ್ಯೂಷನಲ್ ಗ್ಯಾರಂಟಿ ಎಂದು ಇದೆಯಲ್ಲ ಅದನ್ನು ಏತಕ್ಕೋಸ್ಕರ ಮರೆತು ಬಿಟ್ಟಿದ್ದಾರೆ? ಅದನ್ನು ಗಮನದಲ್ಲಿಟ್ಟು ಕೊಂಡಿದ್ದರೇ?

ಮೊನ್ನೆ ತಾನೇ ಒಂದು ಗವರ್ನಮೆಂಟ್ ಆರ್ಡರ್ ಹೊರಡಿಸಿದ್ದಾರೆ. ಆದರ ಪ್ರಕಾರ ಜೂನಿಯರ್ ಅಸಿಸ್ಟೆಂಟ್ ಇಂಜಿನಿಯರ್ ಎನ್ನುವ ಹೊಸ ಹುದ್ದೆಯ ನಿರ್ಮಾಣ ಮಾಡಿದ್ದಾರೆ. ಇದು ಒಂದು ಹೊಸ ಕೇಡರ್. ಆ ಅಸಿಸ್ಟೆಂಟ್ ಇಂಜಿನಿಯರಿಗೆ ಮತ್ತು ಜೂನಿಯರ್ ಇಂಜಿನಿಯರಿಗೆ ಮಧ್ಯೆ ಒಂದು ಹುದ್ದೆ ಮಾಡಿ ಜೂನಿಯರ್ ಇಂಜಿನಿಯರ್‌ಗಳಿಗಿಂತ ಹೆಚ್ಚಿನ ಗ್ರೇಡ್ ಕೊಡಬೇಕೆಂದು ಮಾಡಿದ್ದಾರೆ. ಅಷ್ಟೇಅಲ್ಲ, ಈಗ ನಮ್ಮ ರಾಜ್ಯದಲ್ಲಿ 2,040 ಜನ ಜೂನಿಯರ್ ಇಂಜಿನಿಯರ್‌ಗಳಿದ್ದಾರೆ. ಅದರಲ್ಲಿ ಹತ್ತು ವರ್ಷ ಕಾಲ ಯಾರು ಸರ್ವೀಸ್ ಮಾಡಿದ್ದಾರೆ ಅವರನ್ನು ಜೂನಿಯರ್ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಮಾಡಬೇಕೆಂದು 5-6-70ರಲ್ಲಿ ಆರ್ಡರ್ ಹೊರಡಿಸಿದ್ದಾರೆ. ಅದರ ಪ್ರಕಾರ 680 ಹೊಸ ಹುದ್ದೆಗಳ ನಿರ್ಮಾಣವಾಗುತ್ತದೆ. ಇಂಥ ಘನವಾದ ಮಹತ್ತರವಾದ ಬದಲಾವಣೆಯನ್ನು ಮಾಡಬೇಕಾದ್ದು ನಿಮ್ಮ ಮನಸ್ಸಿನಲ್ಲಿದ್ದರೆ ಪಬ್ಲಿಕ್ ಸರ್ವೀಸ್ ಕಮಿಷನ್ ಅವರನ್ನು ಅದರ ಬಗ್ಗೆ ಕೇಳಿದ್ದೀರಾ? ಅವರ ಅಭಿಪ್ರಾಯವನ್ನು ತೆಗೆದುಕೊಂಡಿದ್ದೀರಾ? ಸರ್ವೀಸ್ ಕಮಿಷನ್ ಅಭಿಪ್ರಾಯ ಕೇಳಬೇಕು ಎಂದು ರಾಜ್ಯಾಂಗದಲ್ಲಿ ವಿಧಿ ನಿಮಯಗಳಿವೆ. ಅದರಂತೆ ಕೇಳಿದ್ದೀರಾ ಎನ್ನುವುದನ್ನು ನಮಗೆ ನೀವು ಸ್ಪಷ್ಟಪಡಿಸಬೇಕು.

ಕಾನೂನು ಪ್ರಕಾರ 18 ಪರ್ಸೆಂಟ್ ರಿಸರ್ವೇಷನ್ ಇರಬೇಕು. 18 ಪರ್ಸೆಂಟ್ ಎಂದರೆ ಎಷ್ಟಾಗುತ್ತದೆ ಎನ್ನುವುದನ್ನು ಲೆಕ್ಕ ಹಾಕಿ, ಇದನ್ನೆಲ್ಲಾ ನೋಡಿದರೆ ಇದು ರಾಮರಾಜ್ಯವೋ, ರಾವಣರಾಜ್ಯವೋ, ಅಥವಾ ಅನಾಯಕತ್ವ ರಾಜ್ಯವೋ ಎನ್ನುವುದು



WD-H-035-15

ಅರ್ಥವಾಗುವುದಿಲ್ಲ. "ಸಿಕ್ಕದವರಿಗೆ ಸೀರುಂಡೆ" ಎನ್ನುವ ಗಾದೆಯಂತೆ ನಿಮ್ಮ ಕೈಯಲ್ಲಿ ಏನು ಬೇಕಾದರೂ ಆಗಬಹುದು ಎನ್ನುವ ಭಾವನೆ ಬರುತ್ತದೆ. ನಿಮಗೆ ಬೇಕು ಎಂದರೆ ಯಾರನ್ನಾದರೂ ಮೇಲಕ್ಕೆ ಎತ್ತಬಹುದು. ಏನು ಬೇಕಾದರೆ ಮಾಡಬಹುದು, ಮಾಡಿಯೇ ತೀರುತ್ತೀರಿ ಎನ್ನುವ ಅಭಿಪ್ರಾಯ ಕೆಲವರಲ್ಲಿ ಬಂದಿದೆ. ಈ ಆಜ್ಞೆಯಿಂದ ಕೆಲವರಿಗೆ ಅಸಮಾಧಾನವಾಗಿದೆ. ಜಾತಿ ಜಾತಿಯಲ್ಲಿ ವ್ಯಾಜ್ಯ ಹಚ್ಚಿದ್ದೀರಿ. ಇಷ್ಟೇ ಅಲ್ಲದೆ ಇದೇನು, ಈ ರಾಜ್ಯದಲ್ಲಿ ನಾವು ಪ್ರಜೆಗಳಾಗಿ ಬಾಳುವುದಕ್ಕೆ ಹಕ್ಕಿಲ್ಲವೇ ಎನ್ನುವ ಭಾವನೆ ಬರುತ್ತದೆ. ನಾನು ಒಂದು ವಿಚಾರವನ್ನು ಕೇಳಿದ್ದೇನೆ ಅದು ನಿಜವಲ್ಲದಿದ್ದರೆ ಮಾನ್ಯ ಸಭಾನಾಯಕರು ನನ್ನ ಮುಂದೆ ಹೇಳಬೇಕು. ಈಗ ಲೆಜಿಸ್ಲೇಟಿವ್ ಕೌನ್ಸಿಲ್ ಚುನಾವಣೆ ಬರುವುದಿದೆ.

ಮೂರು ಉಪಚುನಾವಣೆಗಳಲ್ಲಿ ಏಟು ತಿಂದುದರಿಂದ ಏನಾದರೂ ಮಾಡಿ ಕಳೆದುಕೊಂಡಿರುವ ಸ್ಥಾನಗಳನ್ನು ಹಿಂದಕ್ಕೆ ಪಡೆಯಲೇಬೇಕು ಎನ್ನುವ ಘಟ್ಟಕ್ಕೆ ಬಂದಾಗ ಸ್ಟ್ರಾಗ್ರೇಟ್ ಆಗಿರುವವರಿಗೆ ಅನುಕೂಲ ಮಾಡಲು ಈ ಹುದ್ದೆಗಳನ್ನು ಕ್ರಿಯೇಟ್ ಮಾಡಿಕೊಟ್ಟರೆ, ನಾವು ನಿಮಗೆ ವೋಟು ಕೊಡುತ್ತೇವೆ, ಇಲ್ಲದೆ ಇದ್ದರೆ ಇಲ್ಲ ಎಂದು ಕೆಲವರು ಹಠ ಹಿಡಿದರು. ಲೆಜಿಸ್ಲೇಟಿವ್ ಕೌನ್ಸಿಲ್ ಚುನಾವಣೆ ಕಾಲದಲ್ಲಿ ಯಾರಿಗೋ ಬ್ರೇನನಲ್ಲಿ ಬಂತು ಈ ರೀತಿ ಏಕೆ ಮಾಡಬಾರದು ಎಂದು. ಆ ಬ್ರೇನ್‌ವೇವ್ ಬಂದವರು ಬೆಂಗಳೂರು ಜಿಲ್ಲೆಯವರು. ಬೆಂಗಳೂರು ಜಿಲ್ಲೆಯಲ್ಲಿ ಬುದ್ಧಿವಂತರಿದ್ದಾರೆ. ಹಳ್ಳಿಯಲ್ಲಿ ಹುಟ್ಟಿರುವ ನಮ್ಮಂಥ ಜನಗಳಿಗೆ ಇದು ಅರ್ಥವಾಗುವುದಿಲ್ಲ, ಹೊಳೆಯುವುದಿಲ್ಲ, ಇವರು ಇದನ್ನು ಯಾವಾಗ ತಲೆಯೊಳಗೆ ಹಾಕಿದರೋ ಅದೇ ಸಮಯದಲ್ಲಿ ಇವರು ಯಾವ ರೀತಿ ಇದನ್ನೆಲ್ಲಾ ಮಾಡಿದರೋ ದೇವರೇ ಬಲ್ಲ.

**ಶ್ರೀ ವೀರೇಂದ್ರ ಪಾಟೀಲ್**: ಅಧ್ಯಕ್ಷರೇ ಬಹುಶಃ ಇಷ್ಟು ಮಾತ್ರ ನಾನು ಒಪ್ಪಬಹುದು. ಮಾನ್ಯ ಸದಸ್ಯರು ಯಾವುದೇ ವಿಚಾರ ಹೇಳುವುದಕ್ಕೆ ಪ್ರಯತ್ನ ಮಾಡಿ ವಿವರಣೆ ಕೊಡುತ್ತಿದ್ದರೆ ಕೇಳುವವರು ಹೌದು, ಇದು ನೂರಕ್ಕೆ ನೂರರಷ್ಟು ಸತ್ಯವಿರಬಹುದು. ಎನ್ನುವಷ್ಟು ಶಕ್ತಿಯಿಂದ ಹೇಳುತ್ತಾರೆ. ನಾನು ಅದನ್ನು ಒಪ್ಪುತ್ತೇನೆ, ಆ ಸಾಮರ್ಥ್ಯ ಅವರಲ್ಲಿದೆ. ಜೂನಿಯರ್ ಅಸಿಸ್ಟೆಂಟ್ ಇಂಜಿನಿಯರುಗಳ ಹುದ್ದೆ ನಿರ್ಮಾಣ ಮಾಡುವಾಗ ನಮಗೆ ಮುಂದೆ ಚುನಾವಣೆ ಬರುತ್ತದೆ ಎಂದು ಆರ್ಡರ್ ಮಾಡಲಿಲ್ಲ.

ಪೇ ಕಮಿಷನ್ ಶಿಫಾರಸ್ಸು ಪ್ರಕಾರ ಹುದ್ದೆಗಳನ್ನು ನಿರ್ಮಾಣ ಮಾಡಿದ್ದೇವೆ. ಅದರ ಹೊರತಾಗಿ ಮತ್ತೇನೂ ಮಾಡಿಲ್ಲ. ಇದಕ್ಕೆ ಶ್ರೀಮಾನ್ ಸಿದ್ದವೀರಪ್ಪನವರು ಉಪ್ಪು ಖಾರ ಒಗ್ಗರಣೆ ಎಲ್ಲ ಸೇರಿಸಿ ಹೇಳುತ್ತಿದ್ದಾರೆ. ತಮಗೆ ಬೇಕಾದವರಿಗೆ ಯಾರಿಗೋ ಪ್ರಮೋಷನ್ ಕೊಡುವುದಕ್ಕೆ ಇವೆಲ್ಲ ನಾವು ಮಾಡುತ್ತಿದ್ದೇವೆಂದು

ಹೇಳುತ್ತಿದ್ದಾರೆ. ನಾವು ಪೋಸ್ಟ್ಸ್ ಕ್ರಿಯೇಟ್ ಮಾಡಿದ್ದೇವೆ. ಆದರೆ ಅದರ ಪ್ರಕಾರ ಇನ್ನೂ ಯಾರಿಗೂ ಪ್ರಮೋಷನ್ ಕೊಟ್ಟಿಲ್ಲ, ಇನ್ನೂ ಏನು ಆಗಿಲ್ಲ, ಇದಕ್ಕೆಲ್ಲಾ ಪ್ರೊಸೀಜರ್ ಇದೆ, ಪ್ರೋಸಿಜರ್ ಪ್ರಕಾರ ಮಾಡಲಾರದೆ ಹೋದರೆ ಯಾರಾದರೂ ಹೈಕೋರ್ಟಿಗೆ ಹೋಗಿ ಚಾಲೆಂಜ್ ಮಾಡಿದರೆ ಎಲ್ಲವನ್ನೂ ಮತ್ತೆ ಮಾಡಬೇಕಾದ ಪರಿಸ್ಥಿತಿ ಬರಬಹುದು. ಅದೇಕೆ ನಾನು ಇಷ್ಟು ಮಾತ್ರ ಹೇಳುತ್ತೇನೆ. ಆ ಪೇಕಮಿಷನ್‌ವರ ಸಲಹೆಯ ಮೇರೆಗೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಕಾರ್ಯಕ್ರಮದ ಪ್ರಕಾರ ಈ ಪೋಸ್ಟ್ ಕ್ರಿಯೇಟ್ ಮಾಡಿದ್ದೇವೆ. ಅಷ್ಟೇ ವಿನಾ ಇದರಲ್ಲಿ ನಮ್ಮ ಬಳಗದವರು ಯಾರೂ ಇಲ್ಲ.

**ಶ್ರೀ ಟಿ.ಆರ್. ಶಾಮಣ್ಣ:** ಆ ಜೂನಿಯರ್ ಇಂಜಿನಿಯರುಗಳ ಅಸೋಸಿಯೇಷನ್ನಿನವರು ಪದೇ ಪದೇ ಎಜಿಟೇಟ್ ಮಾಡಿ ಒತ್ತಾಯಮಾಡುತ್ತಿದ್ದ ಕಾಲದಲ್ಲಿ ಸರ್ಕಾರದವರು ಆ ಆರ್ಡರನ್ನು ಮಾಡಲಿಲ್ಲವೇ? ಆ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿದೆಯೇ?

**ಶ್ರೀ ಎಚ್. ಸಿದ್ದವೀರಪ್ಪ:** ಮಾನ್ಯ ಸದಸ್ಯರು ಸರ್ಕಾರದವರನ್ನು ಬಹಳ ಚೆನ್ನಾಗಿ ರಕ್ಷಣೆ ಮಾಡುತ್ತಿದ್ದಾರೆ. ಈ ವಿಚಾರ ಇಲ್ಲಿ ಇಷ್ಟು ಮುಖ್ಯವಾಗಿ ಏತಕ್ಕೆ ಬಂದಿತೆಂದರೆ ಆ 681 ಜನರು ಮುಂದೆ ಪ್ರಮೋಷನ್ ಇಲ್ಲದೆ ಸ್ಟಾಗ್ನೇಷನ್ ಆಗತಕ್ಕ ವಿಚಾರ ಬಂದುದರಿಂದ ಇದನ್ನು ಎತ್ತಬೇಕಾಗಿ ಬಂದಿತು. ಹೀಗಾದರೆ ಆ ಸೀನಿಯಾರಿಟಿಗೇನು ಬೆಲೆ ಇರುತ್ತದೆ? ನನಗೂ ಗೊತ್ತು ಆ ಪೇ ಕಮಿಷನ್ನಿನವರು ರೆಕಮೆಂಡ್ ಮಾಡಿದ್ದಾರೆ ಎಂಬುದು. ಆದರೆ ಹಾಗೇ ಆ ಪೇಕಮಿಷನ್ನಿನವರು ಮಾಡಿರತಕ್ಕ ರೆಕಮೆಂಡೇಷನ್‌ಗಳು ಅನೇಕವಾಗಿವೆ. ಇದೊಂದನ್ನೇ ಅವರೇನೂ ಮಾಡಿಲ್ಲ. ನಾನು ಓದಿದ್ದೇನೆ. ಅವರ ವರದಿಯನ್ನು. ಅದೊಂದು ದೊಡ್ಡ ಗ್ರಂಥದರಾಶಿ. ಅವರು ಮಾಡಿರತಕ್ಕ ಸಲಹೆಗಳು ಎಷ್ಟೋ ಇದ್ದರೂ ಅವುಗಳನ್ನೆಲ್ಲಾ ಬಿಟ್ಟು ನಿಮ್ಮ ಕಣ್ಣು ಏಕೆ ಈ ಒಂದರ ಮೇಲೆ ಬಿತ್ತು ಎಂಬುದು ಆಶ್ಚರ್ಯವಾಗಿದೆ. ಅವರ ಈ ನೂರಾರು ರೆಕಮೆಂಡೇಷನ್‌ಗಳಲ್ಲಿ ಇದಕ್ಕೆ ಏಕೆ ಅಷ್ಟು ಹೆಚ್ಚಿನ ಪ್ರಾಶಸ್ತ್ಯ ಕೊಟ್ಟರು? ಇಂತ ಸರ್ಕಾರದವರ ಹಸ್ತಕ್ಷೇಪದಿಂದಲೇ ಸರ್ವೀಸಿನಲ್ಲಿ ಎಲ್ಲಿ ನೋಡಿದರೂ ಆ ಡಿಸ್‌ಕೌಂಟ್ ಎಂಬುದು ತುಂಬಿತುಳುಕುತ್ತಿದೆ. ಇನ್ನಾದರೂ ಇದನ್ನು ಖಂಡಿತ ನಿಲ್ಲಿಸಬೇಕು ಎಂದು ಹೇಳುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು ಎರಡು ಲಕ್ಷ ನೌಕರಿದ್ದಾರೆ. ಅವರಿಗೆ ಖಜಾನೆಯಿಂದ ಸುಮಾರು 75 ಕೋಟಿ ರೂಪಾಯಿಗಳನ್ನು ಅಂದರೆ ನಮ್ಮ ರಾಜ್ಯದ ವರಮಾನದಲ್ಲಿ ಶೇ. 45 ರಷ್ಟನ್ನು ನಾವು ನೌಕರಿಗಾಗಿ ಖರ್ಚುಮಾಡುತ್ತಿದ್ದೇವೆ. ಅಷ್ಟಾದರೂ ಯಾರೊಬ್ಬರಲ್ಲೂ ಆ ಸಂತೃಪ್ತಿ ಎಂಬುದೇ ಕಾಣುತ್ತಿಲ್ಲ. ಯಾರೊಬ್ಬರಲ್ಲೂ ಸಮಾಧಾನ ಕಾಣುತ್ತಿಲ್ಲ. ಕಾರಣ ಎಲ್ಲೆಲ್ಲೂ ಅನ್ಯಾಯ ತುಂಬಿ ತುಳುಕುತ್ತಿದೆ.

**ಶ್ರೀ ವೀರೆಂದ್ರ ಪಾಟೀಲ್** : ಎಲ್ಲರನ್ನೂ ಒಂದೇ ಸಮನಾಗಿ ತೃಪ್ತಿ ಪಡಿಸುವಂಥ ಮೋಡಿಗುಳಿಗೆಗಳು ತಮ್ಮಲ್ಲಿ ಏನಾದರೂ ಇದ್ದರೆ ಅವನ್ನು ಸಜೆಸ್ಟ್ ಮಾಡಿ.

**ಶ್ರೀ ಎಚ್. ಸಿದ್ದವೀರಪ್ಪ:** ಅದಕ್ಕೆ ನನ್ನ ಸಲಹೆಯಾದರೂ ಇಷ್ಟೇ; ಸರ್ಕಾರದವರು ತಮ್ಮ ಹಸ್ತಕ್ಷೇಪ ನಿಲ್ಲಿಸಬೇಕು ಮತ್ತು ಪಬ್ಲಿಕ್ ಸರ್ವೀಸ್ ಕಮೀಷನ್ನಿನ ಕೈಯನ್ನು ಬಲಪಡಿಸಬೇಕು. ಆದರೆ ಈ ಹುದ್ದೆಗಳನ್ನು ಭರ್ತಿಮಾಡುತ್ತಿರುವುದೆಲ್ಲಾ ಒಂದು ಸ್ಲಿಪ್‌ಷಾಡಾಗಿ ನಡೆಯುತ್ತಿದೆ. ಅದರಿಂದಲೇ ಎಲ್ಲಿ ನೋಡಲಿ ಅನ್ಯಾಯ, ನೆಪೋಟಿಸಂಗೆ ಅವಕಾಶವಾಗಿದೆ. ಇದನ್ನು ತಪ್ಪಿಸಬೇಕಾದರೆ ಈ ಅಧಿಕಾರವನ್ನು ಸಂಪೂರ್ಣವಾಗಿ ಪಿ.ಎಸ್. ಸಿ. ಗೆ ಬಿಟ್ಟುಕೊಡಿ ಎಂದು ಹೇಳುತ್ತಿದ್ದೇನೆ. ಈ ದಿವಸ ಈ ಕೆಲಸಗಳಿಗೆ ಅರ್ಜಿಹಾಕಿಕೊಂಡಿರತಕ್ಕ ಅಭ್ಯರ್ಥಿಗಳು ನಮ್ಮನ್ನು ನಮ್ಮ ಕೆಲಸವನ್ನು ಮಾಡುವುದಕ್ಕೆ ಬಿಡುವುದಿಲ್ಲ. ಅವರು ನಮ್ಮ ಹತ್ತಿರ ಬಂದು ಆ ಮಂತ್ರಿಗಳು ಆ ಮೆಂಬರಿಗೆ ಹೇಳಿದರು ಈ ಮೆಂಬರಿಗೆ ಹೇಳಿದರು ಈ ಮಂತ್ರಿಗಳು ಈ ಮೆಂಬರಿಗೆ ಹೇಳಿದರು ಎಂದು ಹೇಳಿ ನಮ್ಮ ಬಗ್ಗೆ ಯಾವ ಪಿ.ಎಸ್. ಸಿ. ಮೆಂಬರಿಗಾದರೂ ಶಿಫಾರ್ಸು ಮಾಡಿ, ನಾವು ನಿಮ್ಮನ್ನು ಚುನಾವಣೆ ಮಾಡಿ ಕಳುಹಿಸಿಲ್ಲವೇ ಎಂದು ಕೇಳುತ್ತಿದ್ದಾರೆ.

**ಶ್ರೀ ವೀರೇಂದ್ರ ಪಾಟೀಲ್**:– ಹಾಗಾದರೆ ಮಾನ್ಯ ಸದಸ್ಯರೂ ಕೂಡ ಆ ಪಬ್ಲಿಕ್ ಸರ್ವೀಸ್ ಕಮೀಷನ್ನಿನ ಸದಸ್ಯರ ಹತ್ತಿರ ಹೋಗಿದ್ದರೆಂದು ಅರ್ಥವಾಗುತ್ತಿದೆ.

**ಶ್ರೀ ಎಚ್ ಸಿದ್ದವೀರಪ್ಪ**:– ನಾನು ಪರ್ಸನಲ್ಲಾಗಿ ಹೋಗಲಿಲ್ಲ, ಪೋನಿನಲ್ಲಿ ಇಂಥ ಒಬ್ಬ ಅಭ್ಯರ್ಥಿ ಇಂಥ ಹುದ್ದೆಗೆ ಅರ್ಜಿಹಾಕಿಕೊಂಡು ಇದ್ದಾನೆ. ಅವನಿಗೆ ನ್ಯಾಯ ದೊರಕಿಸಿಕೊಡಿ ಎಂದು ಹೇಳಿದ್ದೇನೆ. ಅಷ್ಟನ್ನೂ ಮಾಡದಿದ್ದರೆ ಅವರು ನಮ್ಮನ್ನು ಹಿಂದಕ್ಕೆ ಮುಂದಕ್ಕೆ ಬಿಡುವುದಿಲ್ಲ. ಸುಮ್ಮನೆ ನಮ್ಮನ್ನು ಏಕೆ ಪಾಪಿಗಳನ್ನಾಗಿ ಮಾಡುತ್ತೀರಿ? ಈಗಲಾದರೂ ನಿಮ್ಮ ಈ ಅಧಿಕಾರವೇನಿದೆ ಅದನ್ನೆಲ್ಲಾ ಆ ಪಿ.ಎಸ್.ಸಿ.ಗೆ ಬಿಟ್ಟು ಕೊಡಿ. ನಮ್ಮ ಹತ್ತಿರ ಬರತಕ್ಕ ಅಭ್ಯರ್ಥಿಗಳು ಹೇಳುತ್ತಾರೆ ಸ್ಟೇಟಿನಲ್ಲಿ ಫಸ್ಟ್ ಕ್ಲಾಸ್ ಮತ್ತು ಫಸ್ಟ್ ರ್‍ಯಾಂಕಿನಲ್ಲಿ ಬಂದಿದ್ದರೂ ಅಂತಹ ಬಡವರಿಗೆ ಸರ್ಕಾರದಲ್ಲಿ ಕೆಲಸಗಳು ಸಿಕ್ಕುತ್ತಿಲ್ಲ ಎಂದು. ಅವರು ಗೋಗರೆಯುತ್ತಿದ್ದಾರೆ. ಇದರಿಂದ ನಮಗೆ ಆ ಕಾಟ ತಪ್ಪಿಸಿ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರದವರು ಇಂಥ ವ್ಯವಹಾರಗಳಲ್ಲಿ ಅವರ ರೀತಿ ನೀತಿಗಳು ಹೇಗಿರಬೇಕು ಎಂಬುದಕ್ಕೆ ಅವರು ಒಂದು ನಿರ್ದಿಷ್ಟವಾದ ನಿಯಮವನ್ನು ಅಳವಡಿಸಿಕೊಳ್ಳಬೇಕು. ಆದರೆ ಈ ವಿಚಾರದಲ್ಲಿ ಆ ಪಿ.ಎಸ್.ಸಿ ಸದಸ್ಯರ ಮೇಲೆ ನನ್ನ ಯಾವ ಆಕ್ಷೇಪಣೆಗಳೂ ಇಲ್ಲ. ಅವರು ತಮ್ಮ ಹೊಣೆಯೇನಿದೆ ಎಂಬುದನ್ನು ಅರಿತು ಅದಕ್ಕನುಸಾರವಾಗಿ ನಡೆದಿದ್ದಾರೆಂಬುದನ್ನು ಅವರ ವರದಿಯಿಂದ ನಾವು ಕಾಣಬಹುದಾಗಿದೆ. ಆದರೆ ಅವರು ಬರೆದಿರತಕ್ಕ ವರದಿಯ ಬಗ್ಗೆ ಸರ್ಕಾರದವರು ಕೊಟ್ಟಿರತಕ್ಕ ಎಕ್ಸ್‌ಪ್ಲನೇಷನ್ ಹೇಗಿದೆ ಎಂದರೆ

ಕಾಗೆ ಗುಬ್ಬಿ ಕಥೆ ಇದ್ದ ಹಾಗಿದೆ. ಪಿ.ಎಸ್.ಸಿ ಅವರು ಚೆನ್ನಾಗಿ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದರೆ ಈ ದಿವಸ ಹೈಕೋರ್ಟಿನಲ್ಲಿ ಅಷ್ಟೊಂದು ರಿಟ್‌ಅರ್ಜಿಗಳೇಕೆ ಇರಬೇಕಾಗಿತ್ತು? ಇನ್ನೂ ಆ ಹಳೇಕಾಲದ ಹೊಂಬೇಗೌಡರ ಸಿಸ್ಟಂನ್ನು ಈ ಅಭ್ಯರ್ಥಿಗಳ ಎಗ್ಸಾಮಿನೇಷನ್ ಬಗ್ಗೆ ಅನುಸರಿಸಲಾಗುತ್ತಿದೆ. ಅದನ್ನು ಬದಲಾಯಿಸಬೇಕು. ಪಿ.ಎಸ್. ಸಿ. ಅವರ ಅಧಿಕಾರವನ್ನು ಹೆಚ್ಚಿಸಿ ಅವರ ಕೈ ಬಲಪಡಿಸಬೇಕು ಎಂದು ಹೇಳುತ್ತೇನೆ. ಪಿ.ಎಸ್. ಸಿ. ಛೇರ್ಮನ್ನರನ್ನು ಕೇಳಿ ಅವರಿಗೆ ಈ ವಿಚಾರದಲ್ಲಿ ಏನು ಸೌಕರ್ಯಗಳು ಬೇಕೆಂದು ಕೇಳುತ್ತಾರೋ ಅವುಗಳನ್ನು ಸರ್ಕಾರದವರು ಒದಗಿಸಬೇಕು. ಹಾಗೆ ಮಾಡಿದರೆ ಆಗ ಈ ಅನ್ಯಾಯಗಳು ತಪ್ಪುತ್ತವೆಂದು ಹೇಳುತ್ತೇನೆ.

* * *

# ಆಡಳಿತರೂಢ ಪಕ್ಷದ ಬಗ್ಗೆ ಟೀಕೆ

15, ಮಾರ್ಚ್ 1971

**ಶ್ರೀ ಎಚ್. ಸಿದ್ದವೀರಪ್ಪ:** ಎರಡು ಮಾತಿನಲ್ಲಿ ನಾನು ಹೇಳತಕ್ಕಂಥದ್ದನ್ನು ತಮ್ಮ ಮುಂದೆ ಅರಿಕೆ ಮಾಡಿಕೊಳ್ಳುತ್ತೇನೆ. ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಚೆನ್ನಬಸಪ್ಪನವರು ಏತಕ್ಕೋಸ್ಕರ ಈ ನಿಲುವಳಿ ಸೂಚನೆಯನ್ನು ತಂದಿದ್ದಾರೆ ಎನ್ನುವುದನ್ನು ತಮಗೆ ತಿಳಿಸಿದ್ದಾರೆ. ನಮ್ಮ ಪಕ್ಷದ ಪರವಾಗಿ ಅವರು ಈ ನಿಲುವಳಿ ಸೂಚನೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈಗ ನಾನು ಮಾತನಾಡತಕ್ಕ ವಿಷಯದಲ್ಲಿ ಕೇವಲ ಈ ಸರ್ಕಾರಕ್ಕೆ ಸಂಬಂಧಪಟ್ಟ ಹಾಗೆ ಏನೂ ಹೇಳುತ್ತಾ ಇಲ್ಲ. ಏಕೆಂದರೆ ಈ ಸರ್ಕಾರಕ್ಕೆ ಏನು ಹೇಳಿದರೂ ಏನೂ ಪ್ರಯೋಜನವಿಲ್ಲ ಎನ್ನುವುದು ಅನುಭವಕ್ಕೆ ಬಂದಿದೆ. ಏಕೆಂದರೆ

"ಮೂರ್ಖಂಗೆ ನೂರ್ಕಾಲ ಬುದ್ಧಿ ಹೇಳುವುದು ಗೋರ್ಕಲ್ಲಮೇಲೆ ಮಳೆ ಸುರಿದಂತೆ' ಎಂದು ಸರ್ವಜ್ಞ ಕವಿ ಹೇಳಿದಹಾಗೆ ಅವರಿಗೆಷ್ಟು ಸಾರಿ ಹೇಳಿದರೂ ಪ್ರಯೋಜನವಿಲ್ಲ. ಅದಕ್ಕೋಸ್ಕರ ಈಗ ನಾನು ಹೇಳತಕ್ಕಂಥಾದ್ದು ಇಲ್ಲಿ ಕೆಲವರು ಪಾಜ್ಞರು ಇದ್ದಾರೆ. ಮುಖ್ಯಮಂತ್ರಿಗಳ ವಿಚಾರವೂ ಗೊತ್ತು. ಅವರು ಯಾರೋ ಮಾಡಿದ ಪಾಪಕ್ಕೆ ಹೊಣೆ ಆಗಿದ್ದಾರೆ. ಅದಕ್ಕೆ ಅವರು ತಗುಲಿಹಾಕಿಕೊಂಡಿದ್ದಾರೆ, ಇವರ ಮಂತ್ರಿಮಂಡಲ ಮಾಡಿದ ಪಾಪಕ್ಕೆ ಅನೇಕ ಜನ ಮಾನ್ಯ ಸ್ನೇಹಿತರು, ಘನತೆ ಇರುವವರು, ನಿರಪರಾಧಿಗಳೂ ಸಹ ಈ ಹುಚ್ಚು ಹೊಳೆಯಲ್ಲಿ ಕೊಚ್ಚಿ ಹೋಗುವ ಪರಿಸ್ಥಿತಿ ಬಂದಿದೆ. ಈ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿದಂಥ ದುರಾಡಳಿತಕ್ಕೆ ಜನ ರೋಸಿ ಹೋಗಿ, ಬೇಸತ್ತು ನಿಮ್ಮಲ್ಲಿ ಯಾವ ರೀತಿಯಾದ ನಂಬಿಕೆಯನ್ನೂ ಇಟ್ಟುಕೊಳ್ಳದೆ ಸಧ್ಯ ನೀವು ತೊಲಗಿ, ನಿಮ್ಮ ರಾಜ್ಯಭಾರದಿಂದ ದೇಶಕ್ಕೆ ಕ್ಷೇಮವಾಗುವುದಿಲ್ಲ ಎಂದು ರಾಜ್ಯದಲ್ಲಿ ಅದ್ವಿತೀಯ ರೀತಿಯಿಂದ ತೋರಿಸಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ಜನತೆ ಅಖಂಡ ವಿಶ್ವಾಸವನ್ನು ಮತ್ತು ಪ್ರೀತಿಯನ್ನು ಇಟ್ಟು ಅವರು ಬಡಜನತೆಗೆ

ಅನುಕೂಲ ಮಾಡುತ್ತಾರೆ. ಬಡ ಜನತೆಯ ರಕ್ಷಣೆ ಮಾಡುತ್ತಾರೆ ಎನ್ನುವ ದೃಷ್ಟಿಯಿಂದ ಸ್ವಯಂ ಪ್ರೇರಿತರಾಗಿ ಬಂದು ಅವರಿಗೆ ಮತವನ್ನು ಕೊಟ್ಟರು. ನಿಮ್ಮ ಅಧ್ಯಕ್ಷರು ಹೇಳಿದ ಹಾಗೆ ಯಾವ ದುಡ್ಡಿನ ಪ್ರಭಾವವೂ ಇದರಲ್ಲಿ ಇಲ್ಲ ಎಂದು ಹೇಳಲು ಸಂತೋಷ ಪಡುತ್ತೇನೆ. ದುಡ್ಡು ಏನೂ ಇಲ್ಲ ಎಂದು ನೀವೇ ಹೇಳಿದಿರಿ ಅಂದಮೇಲೆ ನಾನು ಹೇಳುವುದು ಇಷ್ಟೇ. ಇದರಲ್ಲಿ ಎರಡು ವಿಧ ಇದೆ. ಒಂದು ಹೈಕೋರ್ಟ್ ಏನಾದರೂ ಹೇಳಿದರೆ ಅದನ್ನು ಕೋರ್ಟ್ ತೀರ್ಪು ಎಂದು ಒಪ್ಪಿಕೊಳ್ಳುತ್ತೇವೆ, ಎಲ್ಲಕ್ಕಿಂತಲೂ ಹೆಚ್ಚಿನ ಕೋರ್ಟು ಜನತೆಯ ಕೋರ್ಟು ಎಂದು ಇಂಗ್ಲೆಂಡಿನಲ್ಲಿ ಹೇಳುತ್ತಾರೆ. ಏಕೆ ಪ್ರಜಾಪ್ರಭುತ್ವ ಇರತಕ್ಕ ಎಲ್ಲಾ ದೇಶದಲ್ಲಿಯೂ ಹೇಳುತ್ತಾರೆ. ಈಗ ಜನತೆಯ ಕೋರ್ಟು ನಿಮ್ಮಲ್ಲಿ ನಂಬಿಕೆ ಇಡದೆ ನೀವು ಬೇಡ, ಸದ್ಯ ತೊಲಗಿ ಹೋಗಿ ಎಂದು ಒಂದು ದಾರಿಯನ್ನು ತೋರಿಸಿದ್ದಾರೆ.

ನೀವು ಅಧಿಕಾರಕ್ಕೆ ಅಂಟಿಕೊಂಡಿದ್ದೀರಿ ಎಂದು ನಾನು ಹೇಳುವುದಿಲ್ಲ, ಏನೋ ಒಂದು ತಡೆ ಹಾಕಿಕೊಂಡು, ಏನೋ ಒಂದು ಪ್ರತಿಷ್ಠೆಯಿಂದ, ಏನು ಮಾಡಿದರೂ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ನೀವು ಕಾಲಿನ ಮೇಲೆ ನಡೆಯುವ ಬದಲು ತಲೆಯ ಮೇಲಿನಿಂದ ನಡೆಯುತ್ತಿದ್ದೀರಿ. ಇನ್ನು ನಿಮ್ಮ ಆಡಳಿತವನ್ನು ಜನರು ಬಹುಕಾಲ ತಡೆಯುವುದಿಲ್ಲ. ನೀವು ಹೊರಕ್ಕೆ ಹೋಗಿ ಜನತೆಗೆ ಮುಖ ತೋರಿಸುವುದಕ್ಕೆ ಆಗುವುದಿಲ್ಲ. ಹೊರಕ್ಕೆ ಹೋದಾಗ ಜನ ನಿಮ್ಮನ್ನು ಯಾವ ರೀತಿಯಿಂದ ಕಾಣಬೇಕೋ ಆ ರೀತಿಯಿಂದ ಕಾಣುತ್ತಾರೆ. ಪ್ರಜಾಪ್ರಭುತ್ವ ಇರತಕ್ಕ ಯಾವ ರಾಷ್ಟ್ರವನ್ನೇ ತೆಗೆದುಕೊಳ್ಳಿ, ಇಷ್ಟೊಂದು ಬಹುಮತದಿಂದ ನಿಮ್ಮ ಪಕ್ಷವನ್ನು ತಿರಸ್ಕಾರ ಮಾಡಿರಬೇಕಾದರೆ ನೀವಿನ್ನೂ ಅಧಿಕಾರದಲ್ಲಿ ಕೂತುಕೊಳ್ಳುತ್ತೇವೆ ಎಂದು ಹೇಳುವುದು ಹುಚ್ಚು ಧೈರ್ಯ, ಭಂಡ ಧೈರ್ಯ. ಇಂಥಾ ಧೈರ್ಯ ನಿಮಗೆ ಇರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಹಳ್ಳಿಗಳಲ್ಲಿ ತರುಣರು ತಾವು ಪ್ರಜಾಪ್ರಭುತ್ವದಲ್ಲಿ ದಾರಿ ತೋರಿಸುತ್ತೀರಿ ಎಂದು ಆಸೆ ಪಟ್ಟಿದ್ದರು. ಮಾನ್ಯ ಸ್ನೇಹಿತರಾದ ದೇವರಾಜ್ ಅರಸ್‌ರವರು ಹೇಳಿದ ಹಾಗೆ ತಾವು ಎರಡು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು. ಒಂದನೆಯದು, ರಾಜೀನಾಮೆ ಕೊಡುವುದು ಗೌರವಯುತವಾದದ್ದು. ಎರಡನೆಯದು, ಸಭೆಯನ್ನು ವಿಸರ್ಜನೆ ಮಾಡಿ ನಾವು ದೇಶದ ಮುಂದೆ, ಜನಗಳ ಮುಂದೆ ಚುನಾವಣೆಗೆ ನಿಲ್ಲುತ್ತೇವೆ, ಚುನಾವಣೆಯನ್ನು ಮಾಡಬೇಕೆಂದು ಕೇಳುತ್ತೇವೆ ಎನ್ನುವುದು. ಈ ಎರಡು ಕಾರ್ಯಕ್ರಮಗಳನ್ನು ಬಿಟ್ಟು ಇಲ್ಲಿ ಕುಳಿತುಕೊಳ್ಳುತ್ತೇವೆ ಎಂದು ತಾವು ತಿಳಿದಿದ್ದರೆ ಅದಕ್ಕೆ ಬೆಲೆ ಇದೆಯೇ? ಮಾನ್ಯ ಸ್ನೇಹಿತರು ಅನೇಕರು ಇದ್ದಾರೆ. ಬಾಕಿ ಕಡೆ ಇರತಕ್ಕವರು ಇದ್ದಾರೆ. ನಾಳೆ ಜನ ನಿಮ್ಮ ವಿಚಾರದಲ್ಲಿ ಏನು ಹೇಳುತ್ತಾರೆ ಎನ್ನುವ ವಿಚಾರ ಮಾಡಬೇಕು. ಏನೋ ಕುರುಡು ನೆಪ ಹೇಳಿ ಹಿಂದೆ ಕೈ ಎತ್ತುತ್ತಿದ್ದರು. ಇನ್ನು ಮುಂದೆ ಆ ಕೆಲಸವನ್ನು ದಯವಿಟ್ಟು ಮಾಡಬೇಡಿ. ನಾಳೆ ದಿವಸ ನಿಮ್ಮ ಸಭೆ ಸೇರಿದಾಗ

ಕೂಲಂಕಷವಾಗಿ ವಿಚಾರ ಮಾಡಿ ದೇಶದ ಹಿತದೃಷ್ಟಿಯಿಂದ ನೀವು ಒಂದು ಕಾರ್ಯಕ್ರಮವನ್ನು ಸರ್ಕಾರಕ್ಕೆ ತಿಳಿಸಬೇಕಾದರೆ ಅದಕ್ಕೆ ಎರಡು ಮೂರು ವಿಧಾನಗಳು ಇವೆ. ಒಂದನೆಯದು ಶ್ರೀ ಸಿ.ಬಿ ಗುಪ್ತರವರು ಹೇಳಿದರು.

**ಅಧ್ಯಕ್ಷರು** : ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಸಂಬಂಧಪಟ್ಟ ಹಾಗೆ ಹೇಳಿ.

**Sri H. SIDDAVEERAPPA**: I am saying this in order to show how the Adjournment Motion is admissible.

**Mr SPEAKER** : I request the hon. Member to be brief.

**ಶ್ರೀ ಎಚ್. ಸಿದ್ದವೀರಪ್ಪ**: ಶ್ರೀ ಸಿ.ಬಿ. ಗುಪ್ತರವರು ಮತ್ತು ಶ್ರೀ ಎಸ್.ಕೆ. ಪಾಟೀಲರು ಅವರಂಥವರೇ ಈಗ ದೇಶದಲ್ಲಿ ಕಾಂಗ್ರೆಸ್ ಎಂದರೆ ಇಂದಿರಾಗಾಂಧಿ, ಇಂದಿರಾಗಾಂಧಿ ಎಂದರೆ ಕಾಂಗ್ರೆಸ್ ಅನ್ನುತ್ತಾರೆ. ಈಗ ಇರತಕ್ಕ ಕಾಂಗ್ರೆಸ್‌ನ್ನು ವಿಸರ್ಜನೆ ಮಾಡಿ, ಇದರಿಂದ ಏನೂ ಪ್ರಯೋಜನವಿಲ್ಲ, ಇಂದಿರಾ ಗಾಂಧಿ ಕಡೆಗೆ ಕಾಂಗ್ರೆಸ್ ಪಕ್ಷವನ್ನು ಗೌರವಯುತವಾಗಿ ವಹಿಸಿಕೊಡಬೇಕು ಎಂದು ಹೇಳಿದ್ದಾರೆ. ಅದು ಕೆಲವರಿಗೆ ಹಿಡಿಸಲಿಲ್ಲ. ಅದು ನಿಮಗೆ ಸಂಬಂಧಪಟ್ಟದ್ದು. ನಿಮಗೆ ಈಗ ಬಂದಿರತಕ್ಕ ಕಷ್ಟ ಏನು ಎಂದರೆ ಎರಡು ವಿಷಯಗಳನ್ನು ಈ ಚುನಾವಣೆಯಲ್ಲಿ ಮುಂದೆ ಇಟ್ಟು ಕೊಂಡು ದೇಶದ ಮೂಲೆ ಮೂಲೆಗಳಲ್ಲಿ ಹಳ್ಳಿ-ಹಳ್ಳಿಗಳಲ್ಲಿ ಹೇಳಿದಿರಿ. ಕಾವೇರಿ ಜಲ ಬತ್ತಿ ಹೋಗುತ್ತದೆ, ಬೆಳಗಾವಿ ನೆಲ ಅರಬ್ಬೀಸಮುದ್ರಕ್ಕೆ ಬಿದ್ದು ಹೋಗುತ್ತದೆ, ಈ ಎರಡನ್ನೂ ರಕ್ಷಣೆ ಮಾಡಬೇಕಾಗಿದೆ. ಆದುದರಿಂದ ನಮಗೇ ನಿಮ್ಮ ಓಟು ಕೊಡಿ ಎಂದು ಹೇಳಿದಿರಿ. ಆ ಸಂದರ್ಭದಲ್ಲಿ ಇಂದಿರಾ ಗಾಂಧಿಯವರಿಗೆ ಸಹಸ್ರನಾಮಗಳಿಂದ ಬಿಲ್ವಾರ್ಚನೆಯನ್ನು ನಿಮ್ಮ ಪಕ್ಷದವರು ಮಾಡಿದ್ದಾರೆ. ಆದುದರಿಂದ ನಾನು ಹೇಳುವುದು ಇಷ್ಟೇ, ನಿಮ್ಮ ಮಂತ್ರಿಮಂಡಲ ಕೇಂದ್ರ ಸರ್ಕಾರದ ಹತ್ತಿರ ಹೋಗಿ ಕಾವೇರಿ ಜಲವನ್ನು, ಬೆಳಗಾವಿ ನೆಲವನ್ನೂ ಉಳಿಸಿಕೊಡುತ್ತೇವೆ ಎಂದು ಯಾವ ಮುಖದಿಂದ ಹೇಳುತ್ತಾರೆ. ಬೇಕಾದಷ್ಟು ಅನ್ಯಾಯ ಮಾಡಿದ್ದಾರೆ ಎಂದು ಹೇಳಿದಿರಿ. ನಾನು ನಿಮಗೆ ನೂರಾರು ಉದಾಹರಣೆಗಳನ್ನು ಹೇಳಬಲ್ಲೆ. ಅಷ್ಟೇ ಅಲ್ಲ, ದೇಶದ್ರೋಹ ಮಾಡಿದ್ದಾರೆ ಎಂದು ಹೇಳಿದ ಕೇಂದ್ರ ಸರ್ಕಾರದವರು ಇಲ್ಲಿಯವರೆಗೆ ಮೈಸೂರು ರಾಜ್ಯದ ವಿಚಾರದಲ್ಲಿ ಬಹಳ ಹೆಚ್ಚಿನ ಮಮತೆಯನ್ನು ಇಟ್ಟು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುತ್ತಾ ಬಂದರು. ಆದುದರಿಂದ ನಾನು ಯೋಚನೆ ಮಾಡುತ್ತೇನೆ, ನಿಮ್ಮ ಕಣ್ಣಿಗೆ ಆಲದ ಮರ ಸರಿಯಾಗಿದೆ ಎಂದು ಕಾಣುತ್ತಿದೆ. ಆದರೆ ನಮಗೆ ಗೊತ್ತು. ಆಲದ ಮರ ಏನಾಗಿದೆ ಎಂದರೆ ಒಳಗೆಲ್ಲಾ ಗೆದ್ದಲು ಹಿಡಿದು ಮೇಲೆ ಹಸಿರು ಎಲೆ ಕಾಣಿಸುತ್ತಾ ಇದೆ. ಅದು ಊಫ್ ಎಂದು ಗಾಳಿ ಬಂದಾಗ ಬಿದ್ದು ಹೋಗುತ್ತದೆ.

ದೇಶದ ಹಿತದೃಷ್ಟಿಯಿಂದ ತಾವು ಇಲ್ಲಿ ಇದ್ದರೆ ಮುಂದೆ ತೊಂದರೆಯಾಗುತ್ತದೆ, ದೇಶದ ಸಮಸ್ಯೆಗಳನ್ನು ಬಿಡಿಸತಕ್ಕ ಶಕ್ತಿಯನ್ನು ನೀವು ಕಳೆದುಕೊಂಡಿದ್ದೀರಿ, ನಿಮ್ಮ ಪಕ್ಷ ಕಳೆದುಕೊಂಡಿದೆ, ಜನತೆ ನಿಮ್ಮಲ್ಲಿ ವಿಶ್ವಾಸವನ್ನು ಇಟ್ಟಿಲ್ಲ, ಎಲ್ಲರ ಸಮಸ್ಯೆ ಇದು. ಆದ್ದರಿಂದ ಈ ಹಣಕಾಸಿನ ಬಡ್ಜೆಟ್‌ನ್ನು ಮಂಡಿಸಬೇಡಿ ಎಂದು ಹೇಳುತ್ತೇನೆ, ಇದು ಜನತೆಯ ಬಡ್ಜೆಟ್ ಆಗುವುದಿಲ್ಲ. ಹಿಂದೆ ಒಂದು ರಂಪ್ ಪಾರ್ಲಿಮೆಂಟ್ ಅಂತ ಇತ್ತು ಆ ರಂಪ್ ಪಾರ್ಲಿಮೆಂಟ್ ಮಂಡಿಸಿದ ಹಾಗೆ ಅಂಕಿಅಂಶಗಳನ್ನು ತಂದು ಇಟ್ಟರೆ ರಿಯಲಿಸ್ಟಿಕ್ ಬಡ್ಜೆಟ್ ಆಗುವುದಿಲ್ಲ. 4 ತಿಂಗಳ ಬಡ್ಜೆಟ್‌ನ್ನು ಇಡುತ್ತಾರೆ ಎಂದು ಸ್ಪೀಕರ್‌ರವರು ಈಗಾಗಲೇ ಹೇಳಿದರು. 4 ತಿಂಗಳ ಬಡ್ಜೆಟ್ ಮಂಡಿಸಿದರೆ ಬಹುಶಃ 4 ತಿಂಗಳು ಅಲ್ಲ, ಒಂದು ತಿಂಗಳೂ ಸಹ ಅದನ್ನು ಅಡ್ಮಿನಿಸ್ಟರ್ ಮಾಡತಕ್ಕ ಶಕ್ತಿ ನಿಮಗೆ ಇರುವುದಿಲ್ಲ, ಆದ್ದರಿಂದ ಮಾನ್ಯ ಹೆಗಡೆಯವರಲ್ಲಿ ಸವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ- ನಮಗೂ ಗೊತ್ತಿದೆ, ಕಾನ್‌ಸ್ಟಿಟ್ಯೂಷನ್ ಪ್ರಕಾರ ಮಾರ್ಚಿ ಅಖೈರಿನೊಳಗೆ ಈ ಮನೆ ಕೆಲವು ಹಣಕಾಸನ್ನು ಮಂಜೂರಾತಿ ಮಾಡದಿದ್ದರೆ ಕನ್‌ಸಾಲಿಡೇಟೆಡ್ ಫಂಡ್‌ನಿಂದಾಗಲಿ, ಬಾಕಿ ಕಡೆಯಿಂದಾಗಲಿ ಹಣಕಾಸನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇಷ್ಟು ಮಾಡಿ ಎಂದು ಕೇಳಿಕೊಳ್ಳುತ್ತೇನೆ, ಅದೂ ನಮ್ಮ ಮಾತಿಗೆ ಬೆಲೆ ಕೊಟ್ಟರೆ ಒಂದು ತಿಂಗಳ ಮಟ್ಟಿಗೆ ಮಂಜೂರಾತಿ ಕೊಡೋಣ. ಒಂದು ತಿಂಗಳ ಬಡ್ಜೆಟ್‌ನ್ನು ಮಾಡಿಕೊಂಡು ಯಾರೇ ನಡೆಸಲಿ, ಆಮೇಲೆ ಸರಿಯಾಗಿ ಕಾನೂನು ಪ್ರಕಾರ ಶಾಸ್ತ್ರೋಕ್ತವಾಗಿ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿಯನ್ನು ವಿಚಾರ ಮಾಡಿಕೊಂಡು ಕೆಲಸ ಮಾಡತಕ್ಕ ಕಾಲ ಬರುತ್ತದೆ. ನೀವು ಆ ಕಾಲ ಬರತಕ್ಕ ಸ್ಥಿತಿಯಲ್ಲಿ ಇರುವುದಿಲ್ಲ.

ಚೆನ್ನಾಗಿ ಅರ್ಥಮಾಡಿಕೊಳ್ಳಿ, ಈಗಿರತಕ್ಕ ಪರಿಸ್ಥಿತಿಯಲ್ಲಿ ಈಗಾಗಲೇ ಮಂತ್ರಿಮಂಡಲ ಬೇಕಾದಷ್ಟು ಇರ್‌ಗ್ಯೂಲ್ಯಾರಿಟೀಸನ್ನು ಮಾಡಿದೆ. ಒಂದಲ್ಲ, ಎರಡಲ್ಲ, ಅದನ್ನು ಹೇಳಲಿಕ್ಕೆ ಹೋಗಲು ನನಗೆ ಇಚ್ಛೆ ಇಲ್ಲ ಈ ನಿಲುವಳಿ ಸೂಚನೆಯನ್ನು ತಂದಿರುವ ಉದ್ದೇಶವಾದರೂ ಇಷ್ಟೇ. ಈ ದೇಶದ ಆಡಳಿತವನ್ನು ನಡೆಸತಕ್ಕ ಹಕ್ಕನ್ನು ಸಂಪೂರ್ಣವಾಗಿ ನೀವು ಕಳೆದುಕೊಂಡಿದ್ದೀರಿ. ಜನತೆಗೆ ನಿಮ್ಮಲ್ಲಿ ವಿಶ್ವಾಸವಿಲ್ಲ. ಜನತೆ ನಿಮ್ಮಲ್ಲಿ ಎಲ್ಲಾ ವಿಧವಾದ ಆಶಯಗಳನ್ನೂ ಬಿಟ್ಟಿದ್ದಾರೆ. ಆದ್ದರಿಂದ ಪ್ರಜಾಪ್ರಭುತ್ವವನ್ನುಸರಿಸಿ ನೀವು ಈ ವಾರವೇ ಈ ರೀತಿಯಾದ ಬಡ್ಜೆಟ್‌ನ್ನು ಮಂಡಿಸದೆ ಒಂದು ತಿಂಗಳ ಬಡ್ಜೆಟ್‌ನ್ನು ಮಾತ್ರ ಮಂಡಿಸಿ ಒಪ್ಪಿಗೆಯನ್ನು ಪಡೆಯಿರಿ. ಅದಕ್ಕೂ ಹೆಚ್ಚಿಗೆ ಮಾಡಿಕೊಂಡು ಹೋದಿರಿ ಎಂದರೆ ಈಗಲೇ ಹೇಳುತ್ತೇನೆ ಮುಂದೆ ಆಗತಕ್ಕ ಭವಿಷ್ಯವನ್ನು ಯಾವ ರೀತಿಯಿಂದಲೂ ಹೇಳಲಿಕ್ಕೆ ಈಗ ನಾನು ಇಚ್ಛೆ ಪಡುವುದಿಲ್ಲ, ಇಷ್ಟು ಮಾತ್ರ ಹೇಳುತ್ತೇನೆ, ನೀವು ಗೌರವಯುತವಾಗಿ ಮನೆಗೆ ಹೋಗುವುದು ಸರಿ, ನಿಮ್ಮ ಪಕ್ಕದಲ್ಲಿರತಕ್ಕ ಇತರ ಮಾನ್ಯ ಸದಸ್ಯರಲ್ಲೂ ಅಧ್ಯಕ್ಷರ ಮುಖೇನ ಸವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ತಮ್ಮ ಜವಾಬ್ದಾರಿಯನ್ನು

ಅರಿತವರಾಗಿರುವುದರಿಂದ ತಾವು ಇದನ್ನು ಅರಿತುಕೊಂಡು ಸರ್ಕಾರದವರಿಗೆ ಸಹಾಯ ಮಾಡಿ. ಯಾರೋ ಮಾಡಿದ ಪಾಪಕ್ಕೆ ಯಾರೋ ಭಾಗಿಗಳಾದ ಹಾಗೆ ನೀವೆಲ್ಲರೂ ಆಗಬೇಕಾಗುತ್ತದೆ. ನೀವು ನಮ್ಮ ಸ್ನೇಹಿತರು ಇದ್ದೀರಿ, ನಿಮ್ಮ ವಿಚಾರದಲ್ಲಿ ನಮಗೆ ಅತ್ಯಂತ ವಿಶ್ವಾಸ, ಪ್ರೀತಿ, ಗೌರವ ಇದೆ, ಆದ್ದರಿಂದ ನಾನು ಹೇಳುವುದು ಇಷ್ಟೇ, ಮಾನ್ಯ ಹಣಕಾಸಿನ ಮಂತ್ರಿಗಳು ಈ ಕಡೆಯ ಸದಸ್ಯರ ಇಂಗಿತವನ್ನು ಅರಿತು ಈ ವಿಷಯದಲ್ಲಿ ನನ್ನ ಮಾತಿಗೆ ಬೆಲೆ ಕೊಡುತ್ತೀರಿ ಎಂದು ತಿಳಿದು ಕೊಂಡಿದ್ದೇನೆ. ಅನೇಕ ಸಾರಿ ಹೇಳುತ್ತೀರಿ " ಐ ವ್ಯಾಲ್ಯು ಯುವರ್ ವರ್ಡ್ಸ್" ಎಂದು ಆದ್ದರಿಂದ ನೀವು ಬೆಲೆ ಕೊಡಬೇಕು. ಒಂದು ಮಾತು ಹೇಳುತ್ತೇನೆ, ನೀವು ಸಂಯುಕ್ತ ರಂಗ ರಚನೆ ಮಾಡಿ ಕೊಂಡಿದ್ದೀರಲ್ಲಾ ಅದರಲ್ಲಿರತಕ್ಕ ಜನಸಂಘದ ಮಾನ್ಯ ಸದಸ್ಯರಾದ ಶ್ರೀಮಾನ್ ಮಳ್ಳೂರು ಆನಂದರಾಯರು ಮೇಲ್ಮನೆಯಲ್ಲಿ ಡಿಸೆಂಬರ್ ಅಧಿವೇಶನದಲ್ಲಿ ಒಂದು ಭಾಷಣ ಮಾಡಿದರು, ಅದನ್ನು ಓದುತ್ತೇನೆ. ಒಂದು ವಿಷಯ ಅದರಲ್ಲಿ ಬಹಳ ಮುಖ್ಯವಾಗಿದೆ; ಅದು ಈ ರೀತಿ ಇದೆ:-

"ಇನ್ನೊಂದು ಕಾಂಗ್ರೆಸ್ ಇಂದು ಪೂರ್ಣವಾಗಿ ಸತ್ತು ಹೋಗಿದೆ, ಉಳಿದಿಲ್ಲ, ಅದರಿಂದ ಜನತೆಗೆ ದುಃಖವಿಲ್ಲ. ಕಾಂಗ್ರೆಸ್ ಸತ್ತು ಹೋಗಿ ಸಮಾಧಿಯಾಗಿ ಕರ್ಮ ಮುಗಿದಿದೆ. ಇನ್ನೊಂದು ವಿಚಿತ್ರ ಪರಿಸ್ಥಿತಿ ಇದೆ, ವೀರಶೈವವರಲ್ಲಿ ಒಂದು ಪದ್ಧತಿಯಿದೆ, ಯಾರಾದರೂ ಸತ್ತರೆ ಸಮಾಧಿ ಮಾಡಿ ಅದರ ಮೇಲೆ ಲಿಂಗವನ್ನು ಪ್ರತಿಷ್ಠೆ ಮಾಡುವರು. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷರಾದ ದಿವಸವೇ ಸತ್ತು ಹೋಯಿತು. ಅದರ ಮೇಲೆ ನಿಜಲಿಂಗವನ್ನು ಸ್ಥಾಪನೆ ಮಾಡಿದರು. ಸಾಯುವುದಕ್ಕೆ ಮುಂಚೆ ಅಸುಖವಿದ್ದರೆ ಸತ್ತ ಮೇಲೆ ಭೂತವಾಗುವುದು. ಕಾಂಗ್ರೆಸ್ಸಿಗೆ ತುಂಬಾ ಅಧಿಕಾರ ಲಾಲಸೆ ಇದೆ, ಆದುದರಿಂದ ಅದು ಸತ್ತರೂ ಅಧಿಕಾರ ಬಿಟ್ಟು ಹೋಗಲು ಮನಸ್ಸಿಲ್ಲ. ಆದುದರಿಂದ ಅದು ಸಮಾಧಿಯಾದ ಮೇಲೆ ಭೂತದ ರೂಪದಲ್ಲಿ ಓಡಾಡುತ್ತಿದೆ, ಅದು ಕಿರುಕುಳ ಕೊಡುವುದನ್ನು ತಡೆಯುವುದು ಅಸಾಧ್ಯವಾಗಿದೆ. ಇನ್ನೊಂದು ದುಃಖದ ಸಂಗತಿ ಹೇಳುತ್ತೇನೆ. ಕೆಲವು ಸಮಯ ಭೂತ ಮೋಹಿನಿ ರೂಪವನ್ನು ಧರಿಸುವುದು, ಅದು ನೋಡುವುದಕ್ಕೆ ಸುಂದರವಾಗಿರುವುದು, ಅದನ್ನು ನೋಡಿ ಅನೇಕರು ಮೋಹಪರವಶರಾಗಿ ತಬ್ಬಿಕೊಳ್ಳುವರು. ಪ್ರೇಮದಿಂದ ಹಾಗೆ ತಬ್ಬಿಕೊಂಡಾಗ ಭೂತವು ರಕ್ತವನ್ನು ಹೀರಿಬಿಡುವುದು. ಮೋಹಿನಿ ರೂಪ ತಾಳಿದಾಗ ಅದು ಸುಂದರವಾಗಿ ಕಂಡರೂ ಕರಾಳವಾಗಿರುವುದು. ಶ್ರೀ ವೀರೇಂದ್ರಪಾಟೀಲರು ಅಥವಾ ಇತರರು ಯಾರು ಕಾಂಗ್ರೆಸ್ ಪಕ್ಷಕ್ಕೆ ಸೇರಿರುವರೋ ಅವರು ಈಗ ಭೂತದಿಂದ ಬಿಡುಗಡೆ ಹೊಂದಿ ಸುರಕ್ಷಿತವಾಗಿರಲಿ. ಭೂತದಿಂದ ಅವರು ತೊಂದರೆಗೀಡಾಗುವುದು ಬೇಡ. ಶ್ರೀ ವೀರೇಂದ್ರಪಾಟೀಲರು ಪರಿಸ್ಥಿತಿ ಅರ್ಥ ಮಾಡಿಕೊಂಡು ಅದಕ್ಕೆ ತಕ್ಕಂತೆ

ವರ್ತಿಸಿದರೆ ಗಡಿ ಸಮಸ್ಯೆಯೇನಿದೆ ಅದು ಬಗೆಹರಿಯುತ್ತಿತ್ತು. ಅದಕ್ಕೆ ಈಗಲೂ ಅವರು ಪ್ರಯತ್ನಮಾಡಬಹುದು. ಇನ್ನೂ ಕಾಲ ಮಿಂಚಿಹೋಗಿಲ್ಲ, ಒಳ್ಳೆಯ ಕಾಲ, ಚುನಾವಣೆ ಕಾಲ ಬಂದಿದೆ..."

ಈ ರೀತಿ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಆದ್ದರಿಂದ ನಾನಿವತ್ತು ತಮ್ಮಲ್ಲಿ ಅರಿಕೆ ಮಾಡಿ ಕೊಳ್ಳುತ್ತೇನೆ, ಮಾನ್ಯ ಹಣಕಾಸಿನ ಮಂತ್ರಿಗಳು ಪರಿಸ್ಥಿತಿಯನ್ನು ಚೆನ್ನಾಗಿ ವಿಚಾರ ಮಾಡಿರಿ, ನೀವು ಪ್ರಪಂಚದ ಪರ್ಯಟನೆ ಮಾಡಿದ್ದೀರಿ, ದೇಶಗಳನ್ನೆಲ್ಲಾ ನೋಡಿದ್ದೀರಿ, ನಿಮ್ಮ ಮನಸ್ಸಿಗೆ ಇದು ಒಪ್ಪುವುದಿಲ್ಲ, ವಿಧಿ ಬರೆದಂತಹ ಬರಹವನ್ನು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ನಿಲುವಳಿ ಸೂಚನೆಯನ್ನು ಮಂಡಿಸಲು ಸಭೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

* * *

# ಬಜೆಟ್ ಮೇಲಿನ ಚರ್ಚೆ

## 16 ಮಾರ್ಚ್ 1971

ನಿನ್ನೆಯ ದಿವಸ ನಡೆದ ಘಟನೆಯ ವಿಚಾರದಲ್ಲಿ ಈಗಾಗಲೇ ಮಾನ್ಯ ಸ್ನೇಹಿತರಾದ ಶ್ರೀಮಾನ್ ಚನ್ನಬಸಪ್ಪನವರು ಕ್ರಿಯಾಲೋಪ ಎತ್ತಿ ಹೇಳಿದ್ದಾರೆ. ನಮ್ಮಲ್ಲಿ ಕೆಲವರಿಗೆ ಸುಮಾರು 40 ವರ್ಷಗಳ ಅನುಭವ ಈ ವಿಧಾನ ಸಭೆಯಲ್ಲಿ ಇದೆ ಮತ್ತು ಕೆಲವರಿಗೆ ಹಿಂದೆ ಇದ್ದಂತಹ ಪ್ರಜಾಪ್ರತಿ ನಿಧಿ ಸಭೆಯ ಅನುಭವವೂ ಇದೆ. ಈ ರೀತಿಯ ಅನುಭವ ಇದ್ದವರು ಆ ಕಡೆಯೂ ಇದ್ದಾರೆ, ಈ ಕಡೆಯೂ ಇದ್ದಾರೆ. ನಿನ್ನೆಯ ದಿವಸ ಏನು ಘಟನೆ ನಡೆಯಿತು ಎನ್ನುವುದರ ಬಗ್ಗೆ ನಾವು ಈ ದೇಶದ ಮುಂದೆ ಮತ್ತು ದೇಶದ ಜನತೆಯ ಮುಂದೆ, ಅದರ ನೈಜ ಸ್ವರೂಪವನ್ನು ಇಡಬೇಕಾದುದು ಅತ್ಯಾವಶ್ಯಕ. ತಮಗೆಲ್ಲಾ ಗೊತ್ತಿರುವ ಹಾಗೆ ಹಿಂದೆಂದೂ ನಡೆಯದ ರೀತಿ ನಿನ್ನೆ ದಿವಸ ಈ ಬಡ್ಜೆಟ್ ಅಧಿವೇಶನದ ಸಭೆಯನ್ನು ಕರೆದ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಕುಪಿತರಾಗಿದ್ದರು. ಇಂಥಾದ್ದು ನಡೆಯಬಾರದೆಂಬ ವಿಚಾರದಿಂದ ಬಹುಶಃ ಉದ್ವೇಗದಿಂದ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ನಾನು ತಮಗೆ ಅರಿಕೆ ಮಾಡಿಕೊಂಡೆ. ಅದೇ ರೀತಿಯಾಗಿ ಸರ್ಕಾರಕ್ಕೂ ಅರಿಕೆಮಾಡಿಕೊಂಡೆ. ಈ ಸಭೆಯು ಉದ್ವೇಗದಲ್ಲಿದೆಯೆಂದು.

ಈ ದಿವಸ ಕಾರ್ಯಕ್ರಮವನ್ನು ದಯಮಾಡಿ ನಿಲ್ಲಿಸಿ, ನಾಳೆಯ ದಿವಸ ಶಾಂತಿ ವಾತಾವರಣದಲ್ಲಿ ಇದನ್ನು ವಿಚಾರ ಮಾಡೋಣ. ಈ ಸಂದರ್ಭದಲ್ಲಿ ನಿಮಗೆ ಸರ್ಕಾರ ನಡೆಸುವುದು ಎಷ್ಟು ಕಷ್ಟವೆಂಬುದು ನನಗೆ ಅನುಭವ ಇದೆ. ಒಂದು ತಿಂಗಳ ಮುಂಗಡ ಬಡ್ಜೆಟ್‌ನ್ನು ಮಂಜೂರು ಮಾಡುವುದಕ್ಕೆ ನಾವು ಸಮ್ಮತಿಯನ್ನು ಕೊಡುತ್ತೇವೆಂದು ಹೇಳಿದರೂ ನಮ್ಮ ಮಾತಿಗೆ ಗಮನ ಕೊಡದೆ, ಸಭಾನಾಯಕರು ಮತ್ತು ತಾವೂ ಸಹ ಹಠಮಾಡಿ ವಿರೋಧಪಕ್ಷದವರ ಮನಸ್ಸಿನ ಉದ್ವೇಗವನ್ನು ಕಡೆಗಣಿಸಿ, ತಾವು ನಿನ್ನೆ ಈ ರೀತಿಯಾಗಿ ಸಭಾಕಾರ್ಯಕಲಾಪಗಳನ್ನು ನಡೆಸಿದುದರಿಂದಲೇ ಅನೇಕ ರೀತಿಯ ಘಟನೆಗಳು ಕೆಲವು ಉದ್ವೇಗದ ವಾತಾವರಣದಲ್ಲಿ ನಡೆದು ಹೋದವು. ಈ ಸಭೆಯ ಗೌರವ ಮತ್ತು ಈ ಸಭೆಯಲ್ಲಿರತಕ್ಕ

ಗಾಂಭೀರ್ಯವನ್ನು ಕಾಪಾಡುವುದರಲ್ಲಿ ನಾವು ಯಾರಿಗೂ ಹಿಂದೆ ಇರುವುದಿಲ್ಲ. ಆದರೆ ನಿನ್ನೆ ನಡೆದಂಥ ಕಹಿ ವಾತಾವರಣಕ್ಕೆ ನೀವು ಮತ್ತು ಸಭಾನಾಯಕರು ಅನುಸರಿಸಿದ ಅನುಚಿತ ನೀತಿಯೇ ಕಾರಣವೆಂದು ಹೇಳಬೇಕಾಗಿದೆ. ಕ್ಷಮಿಸಬೇಕು. ಈ ಸಮಯದಲ್ಲಿ ಆ ರೀತಿ ಹೇಳದೆ ಬೇರೆ ಗತಿ ಇಲ್ಲ. ಆ ರೀತಿಯಾಗಿ ಅನಿವಾರ್ಯವಾಗಿ ಹೇಳಬೇಕಾಗಿದೆ. ಇದರಿಂದ ಈ ದೇಶದಲ್ಲಿ ಒಂದು ವಾತಾವರಣ ಬರಬಹುದು. ನಮ್ಮ ಪಕ್ಷಕ್ಕೆ ನೂರಕ್ಕೆ ನೂರು ಜನ ಅಂದರೆ ಈ ದೇಶದ ಇಡೀ ಜನ ಈ ಪಕ್ಷದಲ್ಲಿ ಮಹತ್ತರ ವಿಶ್ವಾಸವನ್ನು ವ್ಯಕ್ತಪಡಿಸಿರುವಾಗ ಏನು ಈ ರೀತಿ ನಡೆಯಿತು ಈ ದೇಶದಲ್ಲಿ ಎಂದು ತಿಳಿದುಕೊಂಡರೆ ಅದಕ್ಕೆ ಕಾರಣರು ನಾವಲ್ಲ, ನೀವು ಎಂಬುದಾಗಿ ನಾನು ಈ ಸಮಯದಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ತಾವು ಇನ್ನು ಮುಂದೆ ಇಂತಹ ಕಹಿ ಪ್ರಸಂಗ ನಡೆಯದ ಹಾಗೆ ನೋಡಿಕೊಳ್ಳಬೇಕು. ವಿರೋಧಪಕ್ಷದಲ್ಲಿ ಇವತ್ತು ನಾವು ಕುಳಿತಿರಬಹುದು, ನಾಳೆ ಇನ್ನೊಬ್ಬರು ಕುಳಿತಿರಬಹುದು. ಈ ಸಭೆಯ ಕಾರ್ಯಕಲಾಪಗಳು ಆಡಳಿತ ಪಕ್ಷದವರಿಗೆ ಎಷ್ಟು ಮುಖ್ಯವೋ ವಿರೋಧಪಕ್ಷದವರಿಗೂ ಅಷ್ಟೇ ಮುಖ್ಯ. ನಮ್ಮನ್ನು ಬೇರೆ ರೀತಿಯಲ್ಲಿ ನೋಡುತ್ತೇನೆಂದರೆ ಅದು ಸರಿಯಲ್ಲ. ತಪ್ಪು ಮಾಡಿದ ಮೇಲೆ ತಪ್ಪು ಮಾಡಿದ್ದೇನೆಂದು ಒಪ್ಪಿಕೊಳ್ಳಬೇಕು. ಇಂಥಾದ್ದು ಮುಂದೆ ಆಗಬಾರದು. ಏನೋ ಪ್ರಸಂಗನಡೆಯಿತು. ಇದು ಪ್ರಿಸಿಡೆಂಟ್ ಆಗುವುದು ಬೇಡ. ನಾವು ಮಾಡಿರುವುದೇ ರೈಟ್, ನಾವು ಹಾಡಿದ್ದೇ ರಾಗ, ನಾವು ಉಗುಳಿದ್ದೇ ಸರಿ ಎಂದು ಹೇಳುವುದು ಸರಿಯಲ್ಲ. ಸದ್ಯಕ್ಕೆ ಅದನ್ನು ಇಲ್ಲಿಗೇ ನಿಲ್ಲಿಸಬೇಕೆಂದು ನನ್ನ ಅರಿಕೆ. ನಾನು ಈ ಸಭೆಯ ಮುಂದೆ ಈಗ ಯಾವ ವಿಚಾರದಲ್ಲಿ ಮಾತನಾಡಬೇಕೆಂಬುದು ಬಹಳ ಮುಖ್ಯವಾದ ವಿಷಯ. ನಿನ್ನೆಯೇ ತಮಗೆ ಅರಿಕೆ ಮಾಡಿಕೊಂಡಿದ್ದೇನೆ, ಈ ಸಭೆಯಲ್ಲಿ ಬಜೆಟ್ ಮಂಡಿತವಾಗಿಲ್ಲವೆಂದು. ಅದು ನನ್ನ ಖಚಿತವಾದ ಅಭಿಪ್ರಾಯ. ಈ ಬಜೆಟ್ ನಿನ್ನೆ ಮಂಡಿತವಾಗಿದ್ದರೆ, ಅದು ಕಾನೂನು ರೂಪವಾಗಿ ಮಂಡಿತವಾಗಬೇಕಿತ್ತು. ಆ ರೀತಿ ಆಗದೆ ಸುಮ್ಮನೆ ದೇವಸ್ಥಾನದಲ್ಲಿ ಶಾಸ್ತ್ರ ಹೇಳುವಾಗ ವಾಲಗ ಊದುವ ಹಾಗೆ ಮತ್ತು ಒಂದು ಮದುವೆಯಾಗುವಾಗ ತಾಳಿಕಟ್ಟುವ ಸಮಯದಲ್ಲಿ ಡೋಲ್ ಹೊಡೆಯುವ ಹಾಗೆ ಆ ಒಂದು ಲೆಕ್ಕಾಚಾರದಲ್ಲಿ ನೀವು ಅದನ್ನು ಇಲ್ಲಿ ಮಂಡಿಸಿದ್ದೀರಿ. ಇದರಿಂದ ನಿಮ್ಮ ಬಜೆಟ್ ಯಾವ ರೀತಿ ಇದೆಯೆಂದು ಹೇಳುವುದಕ್ಕೆ ನನಗೆ ವ್ಯಸನವಾಗುತ್ತವೆ. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಮಂಡಿಸಿದ ಕೊನೆಯ ಬಜೆಟ್ ಈ ರೀತಿ ಪರ್ಯಾವಸಾನವಾಯಿತಲ್ಲಾ, ಈ ರೀತಿ ಗೋಳು ಆಯಿತಲ್ಲಾ ಎಂದು ನಾನು ಹೇಳಬೇಕಾಗಿದೆ. ಆದ್ದರಿಂದ ನೀವು ಮಂಡಿಸಿರುವ ಬಜೆಟ್‌ನ್ನು ನಾನು ಬಜೆಟ್ ಎಂದು ಪರಿಗಣಿಸುವುದಿಲ್ಲ. ಬಜೆಟ್ ಭಾಷಣ ಮಾಡುವುದಕ್ಕೂ ಹೋಗುವುದಿಲ್ಲ. ಅವರು ಕೊಟ್ಟಿರುವ ಹೊತ್ತಿಗೆಗಳನ್ನು ಪ್ರಿಂಟ್ ಮಾಡಿಸುವುದಕ್ಕೆ ಟನ್ನು ಗಟ್ಟಲೆ ಕಾಗದ ಬೇಕು.

ಸಾಮಾನ್ಯವಾಗಿ ಒಂದು ವರ್ಷದ ಬಡ್ಜೆಟ್ ತಯಾರು ಮಾಡಬೇಕಾದರೆ ಕನಿಷ್ಠ ಪಕ್ಷ ಆರು ತಿಂಗಳಾದರೂ ಬೇಕು ಅಥವಾ ಸುಮಾರು 9 ತಿಂಗಳಾದರೂ ಬೇಕು. ತಾವು ಬೇಕಾದರೆ ಪರೀಕ್ಷೆ ಮಾಡಿ, ತಾವು ಈ ದೇಶದಲ್ಲಿ ನಡೆಯತಕ್ಕ ಆಗುಹೋಗುಗಳನ್ನು ನೋಡತಕ್ಕ ಜವಾಬ್ದಾರಿಯನ್ನು ಹೊತ್ತುಕೊಂಡು ಅಂತಹ ಪವಿತ್ರವಾದ ಪೀಠದಲ್ಲಿ ಕೂತು ಕೊಳ್ಳುತ್ತೀರಿ. ನಾವು 1952ನೇ ಇಸವಿಯಿಂದ ಈ ಸಭೆಯ ಸದಸ್ಯರಾಗಿ ಬಂದಮೇಲೆ, ಎಷ್ಟು ಬಡ್ಜೆಟ್‌ಗಳನ್ನು ಮಂಡಿಸಿದ್ದಾರೆಂಬುದು ಗೊತ್ತು. ಆ ಬಡ್ಜೆಟ್‌ನ ಪವಿತ್ರತೆಯನ್ನು ಕಾಪಾಡಿಕೊಂಡಿದ್ದೇವೆ. ಕಾರ್ಯಕ್ರಮಗಳನ್ನು ಬಡ್ಜೆಟ್‌ನಲ್ಲಿ ಏನೋ ಹಾಕುತ್ತಾರೆ. ಅವನ್ನು ಇವರು ಇಲ್ಲಿಯವರೆಗೂ ಮಾಡುತ್ತಾ ಇಲ್ಲ. ಒಂದನ್ನೇನೋ ಮಾಡುತ್ತಾರೆ ಅದು ಇವರು ಸರಿಯಾಗಿ ಸಂಬಳ ತೆಗೆದುಕೊಳ್ಳುತ್ತಾರೆ, ನಮಗೂ ತಿಂಗಳಿಗೆ 400 ರೂಪಾಯಿಗಳಂತೆ ಕೊಡುತ್ತಾರೆ ಮತ್ತು ಅಧಿಕಾರಿಗಳಿಗೂ ಸಂಬಳ ಕೊಡುವುದಾಗಿದೆ, ಆದರೆ ಡೆವಲಪ್‌ಮೆಂಟಲ್ ವರ್ಕ್‌ಗಳಿಗೆ ಮತ್ತು ಬಾಕಿ ಕಾರ್ಯಕ್ರಮಗಳನ್ನು ಯಾವುದನ್ನೂ ಮಾಡಲಿಲ್ಲ. 16 ವರ್ಷಗಳಲ್ಲಿ ಕರ್ನಾಟಕ ಏಕೀಕರಣವಾದ ಮೇಲೆ 1956ನೇ ನವೆಂಬರ್ 1ನೇ ತಾರೀಖಿನಿಂದ ಇಲ್ಲಿಯವರೆಗೂ ಸರಾಸರಿ ವರ್ಷಕ್ಕೆ 250 ಕೋಟಿ ರೂಪಾಯಿಗಳ ಅಂದರೆ 16 ವರ್ಷಗಳಿಗೆ 4 ಸಾವಿರ ಕೋಟಿ ರೂಪಾಯಿಗಳನ್ನು ಇವರ ಕೈಲಿ ಕೊಟ್ಟಿದ್ದೇವೆ. ಏನಾಯಿತು?

ಇವತ್ತು ಯಾರಾದರೂ ಯುರೋಪಿನಿಂದ ಒಂದು ಡ್ಯಾನ್ಸಿಂಗ್ ಟ್ರೂಪ್ ಬಂದರೆ ಸಾಕು. ಇವರು ನಾವು ಅವರಿಂದ ಡ್ಯಾನ್ಸ್ ಮಾಡಿಸಬೇಕೆಂದು ಬಡ್ಜೆಟ್‌ನಲ್ಲಿ ಖರ್ಚು ಹಾಕಿಸುತ್ತಾರೆ. ಆ ಐಟಂ ಬಡ್ಜೆಟ್‌ನಲ್ಲಿ ಇಲ್ಲದಿದ್ದರೂ ಹೇಗೋ ಅದರಲ್ಲಿ ಆಮೇಲೆ ಸೇರಿಸಿ ಬಿಡುತ್ತಾರೆ. ಜಪಾನ್ ಎಕ್ಸ್‌ಪೊ–70 ಕ್ಕೆ ಖರ್ಚಾದುದನ್ನು ಮೊದಲು ಬಡ್ಜೆಟ್‌ನಲ್ಲಿ ಸೇರಿಸಿರಲಿಲ್ಲ. ಅದನ್ನೂ ಆಮೇಲೆ ಸೇರಿಸಿದ್ದಾರೆ. ಸಿನಿಮಾ ಮುಂತಾದವುಗಳಿಗೆ ಹಣ ಸಹಾಯ ಕೊಡುವ ಬಗ್ಗೆ ಬಡ್ಜೆಟ್‌ನಲ್ಲಿ ಪ್ರಾವಿಜನ್ ಇಲ್ಲದೆ ಇದ್ದರೂ ಅಂತಹ ಅನೇಕ ಐಟಂಗಳಿಗೆ ಬೇಕಾದನೆ ನಾಳೆಯೇ ಖರ್ಚು ಮಾಡುತ್ತಾರೆ. ಇವತ್ತು ಬಡ್ಜೆಟ್ ಮಂಜೂರು ಮಾಡಿ ಮತ್ತೆ ಕೇವಲ 15 ದಿವಸಗಳಲ್ಲಿಯೇ ಪುನಃ ಸಪ್ಲಿಮೆಂಟರಿ ಬಡ್ಜೆಟ್‌ನ್ನು ತೆಗೆದುಕೊಂಡು ಬರುತ್ತಾರೆ. ಇವರಿಗೆ ಲಂಗು ಲಗಾಮು ಏನೂ ಇಲ್ಲ. ಇವರ ಕುದುರೆ ಎತ್ತ ಕಡೆಗೆ ಬೇಕಾದರೂ ಓಡುತ್ತದೆ. ನಾವು ಈ ರೀತಿಯೇ ಮಾಡಬೇಕೆಂದು ಒಂದು ದೃಢನಿರ್ಧಾರವಿಲ್ಲ. ಇವತ್ತಿನವರೆಗೂ ಏಕೆ ಈ ರೀತಿ ಮಾಡುತ್ತಿದ್ದೇವೆ, ಸಾರ್ವಜನಿಕರ ಹಣ ಈ ರೀತಿ ಪೋಲು ಮಾಡುವುದಕ್ಕೆ ಕಾರಣವೇನೆಂಬ ಬಗ್ಗೆ ಅವರ ದೃಷ್ಟಿ ಇಲ್ಲವೇ ಇಲ್ಲ. ಅವರು ನಿಜವಾಗಿ ಒಂದು ಲಂಗು ಲಗಾಮು ಇಟ್ಟುಕೊಂಡು ಹೋಗಿದ್ದರೆ, ಆಗ ಪರಿಸ್ಥಿತಿಯೇ ಬೇರೆ ಆಗುತ್ತಿತ್ತು. ಇವರು ಹೇಗೆ ಬಂದಿದ್ದಾರೋ ಹಾಗೆಯೇ ಲಾಗ ಹೊಡೆಯುತ್ತಾರೆ. ಉದಾಹರಣೆಗೆ ಹೇಳಬೇಕಾದರೆ, ಇವರು ಒಂದು ವಿಷಯವನ್ನು ಸದುದ್ದೇಶದಿಂದ

ಮಾಡಿದ್ದಾರೆಂದು ತಿಳಿದು ಕೊಂಡಿದ್ದೆ. ಭೂತಲಿಂಗಂ ಸರ್ಕಾರ ರಚಿಸಿದಂಥ ಕಮಿಟಿಯಲ್ಲಿ ನಾನೂ ಸದಸ್ಯನಾಗಿದ್ದೆ. ಆಗ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನಾವು ಚೆನ್ನಾಗಿ ಅರ್ಥಮಾಡಿಕೊಂಡು ನಮ್ಮ ರಾಜ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಯಾವ ಪಕ್ಷವೇ ಆಡಳಿತದಲ್ಲಿರಲಿ ಅವರು ಅದನ್ನು ಕೂಲಂಕಷವಾಗಿ ವಿಚಾರ ಮಾಡಿ ಸರಿಯಾದ ಶಿಫಾರಸುಗಳನ್ನು ಸರ್ಕಾರಕ್ಕೆ ಮಾಡಬೇಕೆಂದು ಸೂಚನೆ ಮಾಡಿದ್ದೆವು. ಅವರು ತಜ್ಞರು. ಆ ಕಮಿಟಿಯಲ್ಲಿ ಈ ಅಸೆಂಬ್ಲಿಯಲ್ಲಿರುವ ಮಾನ್ಯ ಶ್ರೀ ಘೋರ್ಪಡೆಯವರು ಮತ್ತು ನಾನೂ ಇದ್ದೆವು.

ಇದರಲ್ಲಿ ಬಹಳ ಕೂಲಂಕಷವಾಗಿ ಯೋಚನೆ ಮಾಡಬೇಕಾಗುತ್ತದೆ. ಲ್ಯಾಂಡ್ ರೆವಿನ್ಯೂ; ಆಕ್ಟ್ರಾಯ್ ಇವೆಲ್ಲಾ ಹೇಗೆ ಇರಬೇಕು, ನಮ್ಮ ಫೈನಾನ್ಸ್‌ನ್ನು ಹೇಗೆ ಇನ್‌ಕ್ರೀಸ್ ಮಾಡಬೇಕು, ಡೆವಲಪ್‌ಮೆಂಟ್ ವರ್ಕ್ಸ್ ಯಾವ ರೀತಿ ಇರಬೇಕು, ಆಡಳಿತದಲ್ಲಿ ಯಾವ ರೀತಿ ಇರಬೇಕು ಎಂಬುದನ್ನು ಯೋಚನೆ ಮಾಡಿದ್ದೀರಾ? ಆದರೆ ಚುನಾವಣೆ ಬಂದಾಗ ಹತ್ತು ಎಕರೆಗೆ ಇರತಕ್ಕ ಜಮೀನಿಗೆ ನಾವು ಕಂದಾಯವನ್ನು ಬಿಟ್ಟು ಬಿಟ್ಟಿದ್ದೇವೆ ಎಂದು ತಕ್ಷಣ ಮಾಡಿಬಿಟ್ಟಿದ್ದೀರಿ. ಅದಕ್ಕೆ ಗವರ್ನ್‌ಮೆಂಟ್ ಆರ್ಡರ್ ಇದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಜುಲೈ ಒಂದನೇ ತಾರೀಖಿನಿಂದ ಆಕ್ಟ್ರಾಯ್ ಕೊಡುವುದು ಬೇಡ ಎಂದು ಹೇಳಿದ್ದೀರಿ. ಒಂದು ಕನ್‌ಸ್ಟಿಟೆಂಟ್ ಥಿಂಕಿಗ್ ಇಲ್ಲ. ಎಲ್ಲಾ ಸ್ಪೆಕ್ಟಾಕ್ಯುಲರ್ ಆಗಿದೆ. ಕೇಂದ್ರ ಸರಕಾರಕ್ಕೆ ಆಪಾದನೆ ಮಾಡತಕ್ಕಂಥ ಒಂದು ಧೈರ್ಯ ಮಾಡಿ ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಗಿಮಿಕ್ಸ್ ಮಾಡುತ್ತಾರೆ ಎಂದು ಹೇಳತಕ್ಕಂಥವರು ಈ ರಾಜ್ಯದಲ್ಲಿ ಗಿಮಿಕ್ಸ್ ವಿನಹ ಬೇರೆ ಏನನ್ನೂ ಮಾಡಿಲ್ಲ. ಇದನ್ನು ಮಾಡುತ್ತೇವೆ ಅದನ್ನು ಮಾಡುತ್ತೇವೆ ಎಂದು ಹುಡುಗರಿಗೆ ಹೇಳುವ ಹಾಗೆ ಬಾಂಬೇ ದೇಖೋ, ಮದರಾಸ್ ದೇಖೋ, ಅಂತ ಮೂರು ಕಾಸು, ಆರು ಕಾಸು ಕೊಟ್ಟು ತೋರಿಸುವಂತೆ ರಾಮಕೃಷ್ಣಹೆಗಡೆಯವರು ನಮ್ಮ ದೇಶದಲ್ಲಿ ಜನತೆಯ ಕಣ್ಣಿಗೆ ಮಣ್ಣನ್ನು ಎರಚುವ ಕಾರ್ಯವನ್ನು ಮಾಡಿದ್ದಾರೆ. ಇದು ಅನಾದಿಕಾಲದಿಂದಲೂ ನಡೆದುಕೊಂಡು ಬಂದಿದೆ. ಅಷ್ಟೇ ವಿನಹ ದೇಶದಲ್ಲಿ ಪ್ರಗತಿಗಾಗಿ ಏನೇನು ಮಾಡಿದ್ದಾರೆ ಎಂದರೆ ಏನೂ ಇಲ್ಲ.

ಹಳ್ಳಿ ಗಾಡಿನ ಜನ ಜೀವನವನ್ನು ಉತ್ತಮ ಪಡಿಸುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಬೇಕು. ಇವೊತ್ತು ನಾನು ಹೇಳುತ್ತೇನೆ ಅವರು ಮಾಡಿರತಕ್ಕಂಥದ್ದು ಎಲ್ಲಿ ಜನ ಗಲಾಟೆ ಮಾಡುತ್ತಾರೆ, ಕೂಗುತ್ತಾರೆ, ಅಲ್ಲಿ ಅವರ ವಿಚಾರದಲ್ಲಿ ಅವರಿಗೆ ಬೇಕಾದ ಅನುಕೂಲಗಳನ್ನು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆದರೆ ಹಳ್ಳಿಗಾಡಿನಲ್ಲಿ ರೈತಾಪಿ ಕಸಬಿನಿಂದ ಜೀವನ ಮಾಡತಕ್ಕ ಜನ ನೂರಕ್ಕೆ 80 ಜನ ಇದ್ದಾರೆ. ಆ ಶೇಕಡ 80 ಜನರ ಜೀವನದ ವಿಚಾರದಲ್ಲಿ ಯಾವ ರೀತಿ ಅನುಕೂಲ ಮಾಡಿದ್ದೀರಿ? ಉದಾಹರಣೆಗೆ ಹೇಳಬೇಕು ಎಂದರೆ ಸರ್ಕಾರಿ ನೌಕರರು ಈ ರಾಜ್ಯದಲ್ಲಿ ಶೇಕಡಾ 100ಕ್ಕೆ ಎರಡು ಪರ್ಸೆಂಟ್ ಇದ್ದಾರೆ.

ಅವರಿಗೆ ನಮ್ಮ ಉತ್ಪತ್ತಿಯಲ್ಲಿ 34 ಅಥವಾ 35 ಪರ್ಸೆಂಟ್ ಎಂದರೆ, ನೂರು ರೂಪಾಯಿ ಉತ್ಪತ್ತಿ ಇದ್ದರೆ ಅವರಿಗೆ 35 ರೂಪಾಯಿಗಳನ್ನು ಸಂಬಳದ ರೂಪದಲ್ಲಿ ಕೊಡುತ್ತಿದ್ದೀರಿ. ಹಳ್ಳಿ ಗಾಡಿನಲ್ಲಿ ಇರತಕ್ಕಂಥ ನೂರಕ್ಕೆ 80 ಜನರು ಅರೆ ಹೊಟ್ಟೆ ಇರತಕ್ಕಂಥವರು, ಆ ಜನರ ವಿಚಾರದಲ್ಲಿ ಅವರ ಜನಜೀವನ ಮಟ್ಟವನ್ನು ಏರಿಸಲಿಕ್ಕೆ ನೀವು ಏನು ಮಾಡಿದ್ದೀರಿ? ಲ್ಯಾಂಡ್ ಆರ್ಮಿ ಮಾಡಿದ್ದೇವೆ, ಎರಡೂವರೆ ರೂಪಾಯಿ ಮಿನಿಮಂ ವೇಜಸ್ ಮಾಡಿದ್ದೇವೆ ಎಂದು ಹೇಳುತ್ತೀರಿ, ಆದರೆ ಅವರಿಗೆ ಹೊಟ್ಟೆಗಿಲ್ಲ, ಬಟ್ಟೆಗಿಲ್ಲ, ನೀವು ಮಾಡಿರುವುದು ಕಾಗದದ ಮೇಲೆ ಮಾತ್ರ ಇರುತ್ತದೆ. ಅದು ಜಾರಿಗೆ ಬರುವ ಪರಿಸ್ಥಿತಿಯೇ ಇಲ್ಲ. ಕೂಲಿ ಇಲ್ಲ ಎಂದರೆ ಕೂಲಿ ಕೊಡುವುದಕ್ಕೆ ಏನು ಏರ್ಪಾಡು ಮಾಡಿದ್ದೀರಾ? ಇವನ್ನೆಲ್ಲಾ ಇಲ್ಲಿ ಯೋಚನೆ ಮಾಡಿದ್ದೀರಾ? ಯಾತಕ್ಕೋಸ್ಕರ ಇದನ್ನು ಹೇಳುತ್ತೇನೆ ಎಂದರೆ, ಇಂತಹ ಬಜೆಟ್‌ನ್ನು ಇಲ್ಲಿ ಯಾರೂ ನಂಬುವುದಿಲ್ಲ, ಇಂತಹ ಬಡ್ಜೆಟ್‌ನಿಂದ ಜನ ಮೋಸ ಹೋಗುವುದಿಲ್ಲ. ದೇಶದಲ್ಲಿ ಒಂದು ಕ್ರಾಂತಿ ನಡೆಯುತ್ತದೆ. ಕ್ರಾಂತಿಕಾರಕವಾದ ಬದಲಾವಣೆ ಆಗುತ್ತಾ ಇದೆ. ಬಡವರು ಇವೊತ್ತು ಎದ್ದು ನಿಂತಿದ್ದಾರೆ, ಎಚ್ಚೆತ್ತು ಕೇಳುತ್ತಿದ್ದಾರೆ ನಮಗೋಸ್ಕರ ಏನು ಮಾಡಿದ್ದೀರಿ ಎಂದು ಅವರು ಕೇಳಿದರೆ ಈ ಬಜೆಟ್‌ನಲ್ಲಿ ನೀವು ಏನು ತೋರಿಸಬಲ್ಲಿರಿ ಎಂದು ಕೇಳುತ್ತೇನೆ. ಒಂದು ಲಂಚದ ಇಲಾಖೆಯನ್ನು ಓಪನ್ ಮಾಡಿದ ಹಾಗೆ ಮಾಡಿದ್ದಾರೆ, ಯಾವುದಾದರೂ ಸರಿ, ಕೇಂದ್ರದಿಂದ ಹಣ ಬರಲಿ, ಸ್ಟೇಟ್ ಬಜೆಟ್‌ನಿಂದ ಹಣ ಬರಲಿ ಯಾವ ಉದ್ದೇಶಕ್ಕಾಗಿ ಹಣ ಕೊಡುತ್ತಾ ಇದ್ದೀರೋ ಅದು ಆ ಉದ್ದೇಶಕ್ಕೆ ಖರ್ಚು ಮಾಡುತ್ತಾ ಇಲ್ಲ. ಪ್ರತಿಯೊಂದು ಇಲಾಖೆಯಲ್ಲಿಯೂ ಲಂಚ ತಾಂಡವಾಡುತ್ತಿದೆ.

ರಸ್ತೆ ಮಾಡಲಿಕ್ಕೆ ಒಂದು ಲಕ್ಷ ರೂಪಾಯಿ ಕೊಟ್ಟರೆ 50 ಸಾವಿರ ರೂಪಾಯಿನ ಕೆಲಸವೂ ಆಗುವುದಿಲ್ಲ. ಇನ್ನು ಉಳಿದ 50 ಸಾವಿರ ರೂಪಾಯಿ ಯಾವ ರೀತಿಯಲ್ಲಿ ಖರ್ಚಾಗಬೇಕೋ ಆ ರೀತಿಯಲ್ಲಿ ಆಗುತ್ತಿದೆ. ನೌಕರನ್ನು ನೋಡಿದರೆ 10ಕ್ಕೆ ನೂರರಷ್ಟು ಜಾಸ್ತಿ ಮಾಡಿದ್ದೀರಿ. ಆಡಳಿತದ ಮೇಲೆ ಬಿಗಿ ಇಲ್ಲದೆ ಲಂಚದ ಮಟ್ಟಿಗೆ ಮಾತ್ರ ವಸೂಲು ಆಗುತ್ತಾ ಇದೆ. ಮೊನ್ನೆ ಚುನಾವಣೆ ನಡೆಯಿತು. ಅದರಲ್ಲಿ ಎಷ್ಟೋ ಜನ ಸ್ಟೇಟ್ ಆಫೀಸರುಗಳನ್ನು ದುಡ್ಡು ವಸೂಲು ಮಾಡುವುದಕ್ಕೆ ತಮ್ಮ ಏಜೆಂಟ್‌ರುಗಳನ್ನಾಗಿ ಉಪಯೋಗಿಸಿಕೊಂಡಿದ್ದಾರೆಂದು ನನಗೆ ಗೊತ್ತಾಗಿದೆ. ಪಿಡಬ್ಲ್ಯೂಡಿ ಇಲಾಖೆಯಲ್ಲಿ ಒಬ್ಬ ಅಸಿಸ್ಟೆಂಟ್ ಇಂಜನಿಯರು 5 ಸಾವಿರ ರೂಪಾಯಿಗಳನ್ನು ಕೊಡಬೇಕು, ಒಬ್ಬ ಎಕ್ಸಿಕ್ಯೂಟಿವ್ ಇಂಜನಿಯರು 10 ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ವಿಧಾಯಕ ಮಾಡಿದ್ದಾರೆ. ಇದನ್ನೆಲ್ಲಾ ಅವನು ಹೇಗೆ ಕೊಡುತ್ತಾರೆ? ಯಾವನಾದರೂ ಒಬ್ಬ ಕಂಟ್ರಾಕ್ಟುದಾರನನ್ನು ಹಿಡಿಯುತ್ತಾರೆ. ಅವನು 5 ಸಾವಿರ ಕೊಡಬೇಕಾದರೆ 25 ಸಾವಿರ ರೂಪಾಯಿನ ಕಂಟ್ರಾಕ್ಟನ್ನು ಅವನಿಗೆ ಕೊಡಿಸಿ ಅವನಿಂದ ವಸೂಲು ಮಾಡುತ್ತಾರೆ. ಪ್ರತಿಯೊಂದು ಇಲಾಖೆಯಲ್ಲಿಯೂ ಲಂಚದ ರಾಜ್ಯವಾಗಿದೆ.

ಮೈಸೂರು ರಾಜ್ಯದಲ್ಲಿ ಇರುವಷ್ಟು ಲಂಚ ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಕಾರಣ ಏನು ಎಂದರೆ ಆಡಳಿತದಲ್ಲಿ ಇರತಕ್ಕಂಥದವರು ಅದಕ್ಕೆ ದಾರಿಯನ್ನು ಹಾಕಿಕೊಟ್ಟಿದ್ದಾರೆ. ಈ ರೀತಿ ಮುಂದಿನ ಜನಾಂಗಕ್ಕೆ ನಿಜಾಂಶವನ್ನು ಹೇಳಬೇಕು ಎಂದರೆ ಕಷ್ಟವಾಗುತ್ತದೆ. ಶ್ರೀಮಾನ್ ನಿಜಲಿಂಗಪ್ಪನವರು ಇದ್ದಾಗಲೂ ಇದನ್ನು ಹೇಳಿದ್ದೆ.

ದೇಶದಲ್ಲಿ ಜನತೆ 100ಕ್ಕೆ 100ರಷ್ಟು ನಿಮಗೆ ವಿರುದ್ಧವಾಗಿ ಓಟು ಮಾಡಿದ್ದರೆ, ಕೇವಲ ಶ್ರೀಮತಿ ಇಂದಿರಾಗಾಂಧಿಯವರ ತತ್ವಗಳು ಕಾರಣವಲ್ಲ, ಅವರ ನೇತೃತ್ವ ಕಾರಣವಲ್ಲ. ಅವರ ನೇತೃತ್ವದಲ್ಲಿ ವಿಶ್ವಾಸ ಇಟ್ಟು ಸಮಾಜವಾದದ ತತ್ವದಲ್ಲಿ ನಂಬಿಕೆ ಇಟ್ಟು ಜನಗಳು ಅವರಿಗೆ ಓಟನ್ನು ಮಾಡಿದ್ದಾರೆ. ಅದರ ಜೊತೆಗೆ ನಿಮ್ಮ ದುರಾಡಳಿತ ಯಾವಾಗ ಕೊನೆಗೊಂಡಿತೋ ಎನ್ನುವ ಆಶಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಬೇಸತ್ತು, ಜಿಗುಪ್ಸೆ ಪಟ್ಟುಕೊಂಡು ಓಟು ಕೊಟ್ಟಿದ್ದಾರೆ. ಜನಗಳು ನಾಡಿಯನ್ನು ಹಿಡಿದು ನೋಡಿದರೆ, ಈ ಸರ್ಕಾರ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ನಮಗೆ ಈ ಕುತ್ತು ತಪ್ಪಿದ್ದಲ್ಲ ಎನ್ನುವ ದೃಷ್ಟಿಯಿಂದ ಆ ರೀತಿ ಮಾಡಿದ್ದಾರೆ. ನಮಗೆ ಬಂದಿರತಕ್ಕ ವರ್ತಮಾನದ ಪ್ರಕಾರ ನಾಳೆ ನಡೆಯತಕ್ಕ ಚುನಾವಣೆಗೆ ಸುಮಾರು ಮೂರು ಕೋಟಿ ರೂಪಾಯಿಗಳಷ್ಟು ಹಣವನ್ನು ಜಮಾ ಮಾಡಿದ್ದೀರಿ ಎಂದು ಕೇಳಿದ್ದೇನೆ. ಫಂಡ್ ಬೆಳೆಯುತ್ತಾ ಇದೆ. ಅವೆಲ್ಲ ಆಗಬೇಕಾದರೆ ಸಾರ್ವಜನಿಕ ಬೊಕ್ಕಸದಿಂದ ಇರತಕ್ಕ ಹಣವನ್ನೆಲ್ಲಾ ಕಂಟ್ರಾಕ್ಟರುಗಳಿಗೋಸ್ಕರ ಖರ್ಚುಮಾಡುತ್ತಿದ್ದೀರಿ. ಕಂಟ್ರಾಕ್ಟರುಗಳಿಂದ ಹಣವನ್ನು ವಸೂಲು ಮಾಡತಕ್ಕ ಪದ್ಧತಿಯನ್ನು ಜಾರಿಗೆ ತಂದು ಆಡಳಿತದ ಪಾವಿತ್ರತೆಯನ್ನು ಕಳೆದು, ಕೆಲಸ ಕಾರ್ಯಗಳು ಸರಿಯಾಗಿ ನಡೆಯದೆ ಇರತಕ್ಕ ರೀತಿಯಲ್ಲಿ ಇವೊತ್ತು ಆಡಳಿತವನ್ನು ಈ ಸರಕಾರ ನಡೆಸುತ್ತಿದೆ. ಇವೊತ್ತು ಯಾವ ಕಂಟ್ರಾಕ್ಟರು ಕಾಲಕ್ಕೆ ಸರಿಯಾಗಿ ಕೆಲಸ ಮಾಡಿದ್ದಾರೆ ಎಂದು ನಾನು ಕೇಳುತ್ತೇನೆ. ದೇವರ ಬೆಳಕೆರೆ ಪ್ರಾಜೆಕ್ಟ್‌ನ್ನು ಕಟ್ಟುತ್ತೇವೆ ಎಂದು ಹೇಳಿ ಪ್ರೋಗ್ರಾಂ ಪ್ರಕಾರ ಕೆಲಸಕಾರ್ಯಗಳು ಇನ್ನೂ ಆಗಿಲ್ಲ. ಅದಕ್ಕೆ ಕಾರಣ ತಮಗೆ ಬೇಕಾದವರಿಗೆ ಕಂಟ್ರಾಕ್ಟ್ ಕೊಡುತ್ತಾ ಇರುವುದರಿಂದ ರಾಜ್ಯ ಪರ್ಮಿಟ್ ರಾಜ್ಯವಾಗುತ್ತಾ ಇರುವುದರಿಂದ ದೇಶದಲ್ಲಿ ಕುತ್ತು ಒದಗಿದೆ.

ಇನ್ನೊಂದು ವಿಚಾರ ಹೇಳಬೇಕೆಂದರೆ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಕುಶಾಗ್ರ ಬುದ್ಧಿಯುಳ್ಳವರು. ನಮ್ಮಲ್ಲಿ ಇರತಕ್ಕವರ ಪೈಕಿ ಅವರು ಬುದ್ಧಿವಂತರು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಅವರಿಗೆ ಗೊತ್ತಿದೆ ಜನತೆಯ ನಾಡಿ ಏನು ಇದೆ, ಇವರ ಪಕ್ಷದ ವಿಚಾರದಲ್ಲಿ ಜನತೆ ಯಾವ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ ಎಂಬುದು. ಚುನಾವಣೆಯಲ್ಲಿ 27 ಸ್ಥಾನಗಳಲ್ಲಿ 27 ಸ್ಥಾನಗಳನ್ನು ಕಳೆದುಕೊಂಡು, ಈ ವಿಚಾರದಲ್ಲಿ ಮೈಸೂರು ರಾಜ್ಯ ಕಿರೀಟಪ್ರಾಯವಾಗಿದೆ. ನಮ್ಮ ರಾಜ್ಯದಲ್ಲಿ ಇವರು



WD-H-035-16

17 ಜನರನ್ನು ನಿಲ್ಲಿಸಿದ್ದರು ಮತ್ತು ಇಡೀದೇಶದಲ್ಲಿ 239 ಉಮೇದುವಾರರನ್ನು ನಿಲ್ಲಿಸಿದ್ದರು. ಅವರ ಪೈಕಿ ಆರಿಸಿಬಂದವರು ಎಷ್ಟು ಎಂದರೆ 16. ಈ 16ರಲ್ಲಿ ಗುಜರಾತ್‌ನಲ್ಲಿ 10, ಬಿಹಾರ್‌ನಲ್ಲಿ 3, ಉತ್ತರಪ್ರದೇಶದಲ್ಲಿ 1, ತಮಿಳುನಾಡಿನಲ್ಲಿ 1, ಇನ್ನೊಂದೆಲ್ಲೋ ಕಡೆ 1, ಮೈಸೂರು ರಾಜ್ಯ ಇಡೀ ರಾಜ್ಯದಲ್ಲಿ, ಇನ್ನು 18 ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ಎರಡನ್ನು ಬಿಟ್ಟು ಬಾಕಿ ಉಳಿದ ಎಲ್ಲೂ ಹೇಳುವುದಕ್ಕೆ ಹೆಸರು ಇಲ್ಲದ ಹಾಗೆ ಜನರು ಇವರನ್ನು ತೆಗೆದುಬಿಟ್ಟಿದ್ದಾರೆ. ಇಷ್ಟಾದರೂ ನಾವು ಜನತಾ ಪ್ರತಿನಿಧಿಗಳು, ನಾವು ಒಂದು ಬಡ್ಜೆಟ್‌ನ್ನು ನಿಮ್ಮ ಮುಂದೆ ಇಡುತ್ತೇವೆ ಎಂದು ಸಾಹಸ ಮಾಡುವುದಕ್ಕಿಂತ ನಮ್ಮ ಸ್ನೇಹಿತರಾದ ರಾಮಕೃಷ್ಣಹೆಗಡೆಯವರು ಧೈರ್ಯವಾಗಿ ಹೇಳಬೇಕಾಗಿತ್ತು ಜನತೆ ನಮ್ಮ ವಿಚಾರದಲ್ಲಿ ಈ ಅಭಿಪ್ರಾಯ ಇಟ್ಟುಕೊಂಡಾಗ ಈ ಬಡ್ಜೆಟ್‌ನ್ನು ಮಂಡಿಸುವುದು ಸೂಕ್ತವಲ್ಲ, ನಾನು ಮಂಡಿಸಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದರೆ ಶಹಬಾಸ್ ಎಂದು ಹೇಳುತ್ತಾ ಇದ್ದೆ, ಈ ಪ್ರಕಾರ ಹೇಳಲಿಲ್ಲ, ಹೇಳಿ, ಬರೆಯಿಸಿ ಅಂತ ಯಾವ ರೀತಿ ಬಂತು ಅಂತ ಅನ್ನುವುದನ್ನು ಅವರೇ ತೋರಿಸಿದರು. ಇದೇ ಒಂದು ವಿಷಯವನ್ನು ನಾವು ಗಮನದಲ್ಲಿ ಇಟ್ಟುಕೊಂಡರೆ ಇವತ್ತು ಹೇಳುತ್ತೇನೆ ಚುನಾವಣಾ ಕಮಿಷನ್ ಅವರು ಒಂದು ಅಖೈರು ತೀರ್ಪುಕೊಟ್ಟಿದ್ದಾರೆ, ಹಿಂದೂಸ್ಥಾನದಲ್ಲಿ ಇರತಕ್ಕ ಕಾಂಗ್ರೆಸ್ಸು ಎಂದರೆ ಶ್ರೀಮಾನ್ ಜಗಜೀವನರಾಂರವರ ಅಧ್ಯಕ್ಷತೆಯಲ್ಲಿ ಇರುವುದೇ ಕಾಂಗ್ರೆಸ್ಸು. ಆ ಸಿಂಬಲ್ ಅವರಿಗೆ ಒಪ್ಪುವುದು ಎಂದರೂ ಸುಪ್ರೀಂ ಕೋರ್ಟಿಗೆ ಹೋದರು. ಆದರೂ ಕೂಡ ಅದು ನಮ್ಮ ವಿರುದ್ಧವಾಗಿ ತೀರ್ಮಾನವಾಗಿಲ್ಲ. ಸುಪ್ರೀಕೋರ್ಟು ಏನು ತೀರ್ಮಾನ ಕೊಡುತ್ತದೆಯೋ ನೋಡೋಣ. ಆ ವಿಚಾರ ನಾನು ಹೇಳಲಿಕ್ಕೆ ಹೋಗುವುದಿಲ್ಲ.

ಇನ್ನೊಂದು ವಿಷಯ ಈ ಸಮಯದಲ್ಲಿ ಹೇಳುತ್ತೇನೆ. ಅವರು ಕೆಲವು ಸಂದರ್ಭದಲ್ಲಿ ಒಬ್ಬರ ಕಣ್ಣಿಗೂ ಕಾಣದ ಹಾಗೆ ದುಡ್ಡು ಹೊಡೆಯತಕ್ಕ ಕೆಲವು ಅನುಕೂಲತೆಗಳು ಇವೆ. ಅವು ಬಯಲಿಗೆ ಬರದ ಹಾಗೆ ಇವತ್ತು ಯಾರ ಮುಂದೂ ಬರದಹಾಗೆ ಒಳಗಿಂದೊಳಗೆ ದುಡ್ಡು ಹೊಡೆಯತಕ್ಕ ರೀತಿ ನೀತಿಗಳನ್ನು ಯಾವ ರೀತಿ ಅವರು ಪರ್ಫೆಕ್ಟ್ ಮಾಡಿದ್ದಾರೆ ಎಂದರೆ ಮಾತೆತ್ತಿದರೆ ಒಂದು ಕಾರ್ಪೊರೇಷನ್ ಮಾಡುವುದು. ಅರಣ್ಯ ಇಲಾಖೆಗೆ ಒಂದು ಕಾರ್ಪೊರೇಷನ್, ಇನ್ನೊಂದಕ್ಕೆ ಇನ್ನೊಂದು ಕಾರ್ಪೊರೇಷನ್. ಕಾರ್ಪೊರೇಷನ್ ಅಂದ ಕೂಡಲೇ ಅಲ್ಲಿ ಏನು ಬರುತ್ತದೆ ಎಂದರೆ ಕೆಲವು ಲಿಮಿಟ್ಸ್ ಇವೆ. ಆ ಬಡ್ಜೆಟ್‌ನ್ನು ಆಡಿಟರ್ ಜನರಲ್‌ರವರೂ ಸಹ ತನಿಖೆ ಮಾಡುವುದಕ್ಕಾಗಲಿ ಅಥವಾ ಅದರ ವಿವರಕ್ಕಾಗಲೀ ಹೋಗುವುದಕ್ಕೆ ಅವಕಾಶವಿರುವುದಿಲ್ಲ.

ಭದ್ರಾವತಿ ಕಬ್ಬಿಣದ ಕಾರ್ಖಾನೆಯಂತಹ ಮಹಾಸಂಸ್ಥೆಯಲ್ಲಿ ಏನೇನು ಅನ್ಯಾಯವಾಗಿದೆ ಯಾವ್ಯಾವ ಲೋಪವಾಗಿದೆ ಎಂಬುದು ನನಗೆ ಗೊತ್ತಿದೆ. ಪ್ರೊಡಕ್ಷನ್

ಕಾಸ್ಟ್‌ಗಿಂತ ಒಂದು ಟನ್‌ಗೆ 200-300 ರೂಪಾಯಿ ಕಡಿಮೆ ಮಾಡಿ ತಮಗೆ ಬೇಕಾದವರಿಗೆ ಲಕ್ಷಾಂತರ ರೂಪಾಯಿಗಳ ಮಾಲನ್ನು ಕೊಟ್ಟಿದ್ದಾರೆ. ಬೆಂಗಳೂರು ವಾಟರ್ ಸಪ್ಲೈ ವಿಚಾರದಲ್ಲಿ ದೊಡ್ಡ ಕ್ರಾಂತಿಯಾದರೂ ಕೇಳುವುದಿಲ್ಲ, ಮಾಡುವುದನ್ನು ಮಾಡುತ್ತೇವೆ ಎಂದು ಮಾಡಿದರು. ಈ ರೀತಿ ಯಾವ್ಯಾವುದರಲ್ಲಿ ಏನೇನು ಮಾಡುತ್ತಾರೆ ಎಂಬುದನ್ನು ಜನ ಕಣ್ಣಿನಲ್ಲಿ ಕಣ್ಣಿಟ್ಟು ಬರೆದುಕೊಳ್ಳುತ್ತಾ ಇದ್ದಾರೆ. ಒಂದು ಕಮಿಷನ್ ಮಾಡಿ, ಆ ಕಮಿಷನ್‌ನಲ್ಲಿ ಯಾವ್ಯಾವುದರಲ್ಲಿ ಏನೇನು ಅನ್ಯಾಯ ಮಾಡಿದ್ದೀರಿ, ಎಲ್ಲೆಲ್ಲಿ ಎಷ್ಟು ದುಡ್ಡು ಹಾಳು ಮಾಡಿದ್ದೀರಿ ಎಂಬ ವಿಚಾರವನ್ನು ತನಿಖೆ ಮಾಡತಕ್ಕ ಪ್ರಯತ್ನವನ್ನು ಮುಂದೆ ಬರತಕ್ಕ ಸರ್ಕಾರ ಯಾವುದೇ ಬರಲಿ ಅದು ಮಾಡಬೇಕಾಗುತ್ತದೆ ಎಂಬುದನ್ನು ಮರೆಯುವ ಹಾಗೆ ಇಲ್ಲ. ಇದೇ ರೀತಿ ಮಂತ್ರಿಗಳ ಮೇಲೆ ಚಾರ್ಜ್ ಷೀಟು ಹಾಗೆಯೇ ಪೆಂಡಿಂಗ್ ಇದೆ. ಅದರ ಮೇಲೆ ಏನೂ ಆಗಿಲ್ಲ. ಹಿಂದೆ ಅರಿಕೆ ಮಾಡಿಕೊಂಡಿದ್ದೆ, ಇದನ್ನು ಬಗೆಹರಿಸಿಕೊಳ್ಳಬೇಕಾಗಿದ್ದರೆ ನೀವೇ ಕಲೆತು ಒಂದು ತೀರ್ಮಾನ ಮಾಡಿ ಈ ಸಭೆಯ ಮುಂದೆ ಇಡಿ ಎಂದು. ಲೋಕಪಾಲ ಲೋಕಾಯುಕ್ತ ಬಿಲ್ ಬಂದಾಗ ಬೇಡ ಎಂದಿರಿ. ಆಮೇಲೆ ಶ್ರೀಮಾನ್ ನಿಜಲಿಂಗಪ್ಪನವರು ವಾಗ್ದಾನ ಕೊಟ್ಟಿದ್ದರು. ಅದನ್ನು ವೀರೇಂದ್ರ ಪಾಟೀಲ್‌ರವರು ಮಾಡಲಿಲ್ಲ, ಬಿಟ್ಟುಬಿಟ್ಟಿದ್ದೇವೆ ಎಂದರು. ಬೇಕಾದ್ದನ್ನು ಹೊಡೆದುಕೊಳ್ಳಿರಿ ಎಂದು ಬಿಟ್ಟಿದ್ದೀರೋ? ಲಂಚ ಹೊಡೆಯದೇ ಇರತಕ್ಕ ಇಲಾಖೆ ಯಾವುದೂ ಇಲ್ಲ. ಆಡುಮುಟ್ಟದ ಸೊಪ್ಪು ಯಾವುದೂ ಇಲ್ಲ ಅಂತ ಅಂದ ಹಾಗೆ ಲಂಚ ಹೊಡೆಯದ ಇಲಾಖೆ ಯಾವುದೂ ಇಲ್ಲ. ಲಂಚ ಹೊಡೆಯತಕ್ಕ ಅವಕಾಶವನ್ನು ಪರ್‌ಫೆಕ್ಟ್ ಮಾಡಿಕೊಂಡು ಕೆಲಸ ಮಾಡುತ್ತಾ ಇದ್ದೀರಿ, ಇದು ಅನೇಕ ರೀತಿಯಲ್ಲಿ ಜನತೆಯಲ್ಲಿ ಜಿಗುಪ್ಸೆಯನ್ನುಂಟುಮಾಡುತ್ತಾ ಇದೆ. ನೀವು ಈಗ ಯಾರ್‍ಯಾರು ಅಧಿಕಾರದಲ್ಲಿ ಇದ್ದೀರಿ, 1947ನೇ ಇಸವಿಯಿಂದ ಯಾರ್‍ಯಾರು ಮಂತ್ರಿಗಳಾಗಿದ್ದರು ಅವರನ್ನೆಲ್ಲಾ ವಿಚಾರಿಸಿ. ಬಿಹಾರದಲ್ಲಿ ಮಾಡಲಿಲ್ಲವೇನು? ನಾವು ಬಿಟ್ಟು ಬಿಟ್ಟೆವು ಎಂದರೆ ನೀವು ಬಿಡಬಹುದು, ಮುಂದೆ ಬರತಕ್ಕವರು ನಿಮ್ಮನ್ನು ಬಿಡುವುದಿಲ್ಲ. ಮುಂದೆ ಯಾರೇ ಬರಲಿ ಇದನ್ನು ಮೊದಲು ಮಾಡಬೇಕಾದ್ದು ಅವರ ಕರ್ತವ್ಯ ಅವರು ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಇನ್ನೊಂದು ವಿದ್ಯುಚ್ಛಕ್ತಿ, ಬಹಳ ಹಣ ಒದಗಿಸುತ್ತೇವೆ ಎಂದು ಪದೇ ಪದೇ ಹೇಳುತ್ತಾ ಇದ್ದೀರಿ. ಈ ಸಾರಿ ಬಡ್ಜೆಟ್ ಮಂಡಿಸಿರುವುದರಲ್ಲೂ ಹೇಳಿದ್ದೀರಿ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಏನಾಗಿದೆ ಎಂದರೆ ಹಿಂದೆಯೂ ಮುಖ್ಯಮಂತ್ರಿಗಳ ಗಮನಕ್ಕೆ ತಂದೆ ಅಲ್ಲಿ ಬಹಳ ಲೋಪದೋಷ ಇದೆ, ಬಹಳ ಅನ್ಯಾಯ ನಡೆಯುತ್ತಾ ಇದೆ, ಬಹಳ ರೀತಿಯಿಂದ ದುಡ್ಡು ವ್ಯಯವಾಗುತ್ತಾ ಇದೆ, ನಾನು ಕೇಳಿದ್ದರಲ್ಲಿ ಹೋದ ವರ್ಷ ಸುಮಾರು 8 ಕೋಟಿ ರೂಪಾಯಿನ ಮಾಲನ್ನು ಟೆಂಡರ್ ಯಾವುದೂ ಕರೆಯದೆ ಕೊಟ್ಟಿದ್ದಾರೆ. ಇದರಲ್ಲಿ ಅವರಿಗೂ ಇವರಿಗೂ ಏನೇನು ನಡೆದಿದೆಯೋ,

ಹಿಂದಿನ ಕಾಲದಲ್ಲಿ ಒಂದು ಪಿನ್ನು ಕೊಂಡುಕೊಳ್ಳಬೇಕಾದರೂ ಸ್ಟೋರ್‌ಪರ್ಚೇಸ್ ಕಮಿಟಿಗೆ ಹೋಗಬೇಕಾಗಿತ್ತು, ಸ್ಟೋರ್ ಪರ್ಚೇಸ್ ಕಮಿಟಿಗೆ ಹೋಗದೆ ಯಾವುದನ್ನೂ ಪರ್ಚೇಸ್ ಮಾಡುವುದಕ್ಕೆ ಆಗುತ್ತಾ ಇರಲಿಲ್ಲ. ನಾನು ಕೇಳಿದ್ದು ಆ ಇಲಾಖೆಯಲ್ಲಿ ಕಂಟ್ರಾಕ್ಟದಾರರು ಒಬ್ಬರಿಂದ ಮೊನ್ನಿನ ಚುನಾವಣೆಯಲ್ಲಿ ಸುಮಾರು 50 ಲಕ್ಷ ರೂಪಾಯಿ ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೇನೆ.

**ಶ್ರೀ ವೀರೇಂದ್ರಪಾಟೀಲ್** (ಮುಖ್ಯಮಂತ್ರಿಗಳು) 50 ಲಕ್ಷ ರೂಪಾಯಿ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾ ಇದ್ದಾರೆ. ವಿರೋಧಪಕ್ಷದ ನಾಯಕರು ಏನಾದರೂ ಮಾತನಾಡಿದರೆ ಅಂಕಿಅಂಶಗಳನ್ನು ಇಟ್ಟುಕೊಂಡು ಮಾತನಾಡುತ್ತಾರೆ ಎಂಬ ಅಭಿಪ್ರಾಯ ಇರುತ್ತದೆ, ಅವರು ಹೇಳುವ ಲೆಕ್ಕದ ಪ್ರಕಾರ ಇವತ್ತೇ ಮೊದಲು ಬಹುಶಃ ಇಂತಹ ಕೆಟ್ಟ ಆಡಳಿತ ಇನ್ನೆಲ್ಲೂ ಜಗತ್ತಿನಲ್ಲಿ ಸಿಕ್ಕುವ ಹಾಗೆ ಇಲ್ಲ. ಅದು ಇಲ್ಲೇ ಇದೆ ಅನ್ನುವ ರೀತಿಯಲ್ಲಿ ಮಾತನಾಡುತ್ತಾ ಇದ್ದಾರೆ. ಈ ರೀತಿ ಆಪಾದನೆ ಮಾಡುವ ಮುಂಚೆ ವಿಚಾರ ಮಾಡಿ ಮಾತನಾಡಬೇಕು. 50 ಲಕ್ಷ ರೂಪಾಯಿ ಎಲೆಕ್ಷನ್‌ಗೆ ಲಂಚ ತೆಗೆದುಕೊಂಡಿದ್ದೇವೆ ಎಂದು ಮಾತನಾಡಿದರೆ I am only sorry.

**Sri. H. SIDDAVEERAPPA** : You need not be sorry; the facts are there. 8ಕೋಟಿ ರೂಪಾಯಿಗಳ ಮಾಲಿಗೆ ಅವರು ಆರ್ಡರ್ ಕೊಟ್ಟಿದ್ದು ನನಗೆ ಗೊತ್ತಿದೆ. 5 ಪರ್ಸೆಂಟ್‌ನ ಹಾಗೆ ಕಂಡ್ರಾಕ್ಟ್‌ದಾರರಿಂದ ತೆಗೆದುಕೊಂಡಿದ್ದಾರೆ. 8 ಕೋಟಿ ರೂಪಾಯಿಗೆ 5ಪರ್ಸೆಂಟ್‌ನಂತೆ ಎಷ್ಟು ಆಯಿತು ಲೆಕ್ಕ ಹಾಕಿ. ತಾವು ಕಮಿಷನ್ ಆಫ್ ಇನ್‌ಕ್ವೈರಿ ಮಾಡಿ, ಹೇಳುತ್ತೇನೆ, ನಾನು ಹೇಳಿದ್ದರಲ್ಲಿ ತಪ್ಪಿದ್ದರೆ ಯಾವ ಶಿಕ್ಷೆಗೆ ಬೇಕಾದರೂ ಗುರಿಯಾಗುತ್ತೇನೆ, ಈ ರೀತಿ ಇಂಡಸ್ಟ್ರಿಯಲಿಸ್ಟ್ ಕ್ಯಾಪಿಟಲಿಸ್ಟ್ಸ್ ನಿಂದ ದುಡ್ಡು ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದೀರಿ. ನಮಗೆ ಬಂದಿರುವ ಲೆಕ್ಕದ ಪ್ರಕಾರ ಮೊನ್ನೆ ನಡೆದ ಚುನಾವಣೆಯಲ್ಲಿ ನೀವೇನೂ ಕಡಿಮೆ ಖರ್ಚು ಮಾಡಲಿಲ್ಲ. ಹೇರಳವಾಗಿ ಖರ್ಚು ಮಾಡಿದ್ದೀರಿ. ಕಾಳಿನದಿ ಯೋಜನೆ, ಹಾರಂಗಿ ಯೋಜನೆ, ಹೇಮಾವತಿ ಯೋಜನೆ ಮುಂತಾದವನ್ನು ಮಾಡುವುದಾಗಿ ಎಲ್ಲಾ ಕಡೆ ಹೇಳುತ್ತೀರಿ. ಆದರೆ ಅವೆಲ್ಲವನ್ನೂ ಒಟ್ಟಿಗೆ ತೆಗೆದುಕೊಂಡು ಮಾಡುವುದಕ್ಕಿಂತ ಒಂದೊಂದಾಗಿ ಪೂರ್ಣ ಮಾಡಿ ನಂತರ ಇನ್ನೊಂದನ್ನು ತೆಗೆದುಕೊಂಡಿದ್ದರೆ ಚೆನ್ನಾಗಿತ್ತು ಎಂದು ನನಗನಿಸುವುದು. ಹಾಗೆ ಮಾಡಿದ್ದರೆ ಶ್ರೀ ರಾಮಕೃಷ್ಣ ಹೆಗಡೆಯವರ ಉದಾರತೆಯಿಂದ ಎಕ್ಸೈಜ್ ಇಲಾಖೆಯಲ್ಲಿ ಬರುವ 20 ಕೋಟಿ ರೂಪಾಯಿ ಆದಾಯದಿಂದ ಇದುವರೆಗೆ 3-4 ಪ್ರಾಜೆಕ್ಟುಗಳನ್ನು ಪೂರ್ಣ ಮಾಡಬಹುದಾಗಿತ್ತು. ನಮ್ಮ ದೇಶದಲ್ಲಿ ನೂರರಲ್ಲಿ 13 ಎಕರೆ ನೀರಾವರಿಯಾಗಿದೆ ಎಂದು ನೀವು ಹೇಳುತ್ತೀರಿ. ನಮ್ಮಲ್ಲಿ ಸಾವಿರಾರು ಹಳ್ಳಿಗಳಿವೆ. ಅವಕ್ಕೆಲ್ಲಾ ಕೊಡಲು ಎಷ್ಟು ಕಾಲ ಬೇಕು ಎಂಬುದನ್ನು ಯೋಚಿಸಿ. ಒಂದು ವರ್ಷಕ್ಕೆ ಎಷ್ಟು ಹಳ್ಳಿಗಳಿಗೆ

ಕೊಡುವಿರಿ? ಹಿಂದಿನ ಲೆಕ್ಕದ ಪ್ರಕಾರ ಏಳೂವರೆ ಸಾವಿರ ಹಳ್ಳಿಗಳಿಗೆ ಕೊಟ್ಟಿದ್ದೀರಿ. ಈಗ ವರ್ಷಕ್ಕೆ 800 ಹಳ್ಳಿಗಳಿಗೆ ಕೊಟ್ಟರೆ 5 ವರ್ಷಗಳಲ್ಲಿ ಪೂರ್ಣವಾಗಿ ಎಲ್ಲ ಹಳ್ಳಿಗಳಿಗೂ ಕೊಡಲು ಸಾಧ್ಯವೇ? ಒಂದು ಸರಿಯಾದ ಕಾರ್ಯಕ್ರಮವಿಲ್ಲ ಸುಮ್ಮನೆ ಮಾಡುತ್ತೇವೆಂದು ಹೇಳುತ್ತಾರೆ. ಜನರಿಗೆ ಕುಡಿಯುವ ನೀರು ಒದಗಿಸುತ್ತೇವೆ, ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಹೇಳುತ್ತೀರಿ, ಆದರೆ ಒಂದನ್ನೂ ಮಾಡಿಲ್ಲ. ಇಷ್ಟೇ ಅಲ್ಲ, ಇನ್ನೊಂದು ವಿಚಾರ ಹೇಳಬೇಕೆಂದರೆ ಹಳ್ಳಿಗಳ ವಿಚಾರದಲ್ಲಿ ಕನಿಕರವಿಲ್ಲ, ಮಮತೆಯಿಲ್ಲ, ಉದಾಹರಣೆಗೆ ಇಂದು ಕಾಸ್ಟ್ ಆಫ್ ಪ್ರೊಡಕ್ಷನ್ ಜಾಸ್ತಿಯಾಗಿದೆ ಅದನ್ನು ನೋಡಿದ್ದೀರಿ, ಅದು ಕಳೆದ 4 ವರ್ಷಗಳಲ್ಲಿ ಶೇ. 150 ರಷ್ಟು ಜಾಸ್ತಿಯಾಗಿದೆ. ಮತ್ತು ಕೆಲವು ಧಾರಣೆಗಳು ಕೆಳಗಿಳಿದಿವೆ, ಹಳ್ಳಿಗಳವರಿಗೆ ಉತ್ಪತ್ತಿ, ವೆಚ್ಚ ಒಂದು ಕಡೆ ಜಾಸ್ತಿಯಾಗಿದೆ. ಈ ಬಗ್ಗೆ ಏನು ಕ್ರಮ ಕೈಕೊಂಡಿದ್ದೀರಿ? ಸಾಲದ್ದಕ್ಕೆ ತಕ್ಕಡಿ ಹಿಡಿಯುವವರ ಹಾವಳಿ ಬೇರೆ. ಮಾರ್ಕೆಟ್ಟುಗಳಿಗೆ ಹೋಗಿ ಅಲ್ಲಿ ಅನ್ಯಾಯ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡಿ. ಶ್ರೀ ನಾಡಗೌಡ ಇಲಾಖೆಯಲ್ಲೇನು ಅನ್ಯಾಯವಾಗುತ್ತಿದೆ ಎಂದು ನೋಡಿ. ಉದಾಹರಣೆಗೆ ರೆಗ್ಯುಲೇಟೆಡ್ ಮಾರ್ಕೆಟಿನಲ್ಲೇನು ಅನ್ಯಾಯವಾಗುತ್ತಿದೆ ಎಂದು ನೋಡಿ. ಉದಾಹರಣೆಗೆ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಮಾರಿದ ರೈತರಿಗೆ ಮಾರಿದ ದಿವಸವೇ ಹಣ ಕೊಡಬೇಕೆಂದಿದೆ. ಆದರೆ ಹಾಗೆ ಕೊಡುತ್ತಿಲ್ಲ. ದಾವಣಗೆರೆ ಮಾರ್ಕೆಟ್‌ನಲ್ಲಿ 3 ತಿಂಗಳಾದರೂ ಹಣ ದೊರೆಯುತ್ತಿಲ್ಲ. ಮಾರಾಟ ಮಾಡಿದ ದಿವಸವೇ ಹಣ ಕೊಡಬೇಕು ಎಂದು ಹೇಳಿದ್ದು ಎಲ್ಲಿ ಹೋಯಿತು? ತಕ್ಕಡಿಯವರು ಕೇಳಿದಾಗ ಹಣ ಕೊಡುವರು. ಆದುದರಿಂದ ಅವರಿಗೆ ಬೇಕಾದ ಅನುಕೂಲ ಮಾಡುವಿರಿ. ಅವರನ್ನು ವಿರೋಧ ಮಾಡಿಕೊಳ್ಳುವುದಿಲ್ಲ. ಇದರಿಂದ ರೈತರಿಗೆ ಅನುಕೂಲವಾಗುತ್ತಿಲ್ಲ.

ಕಾಲ ಬದಲಾವಣೆಯಾಗಿದೆ ಈಗ. ಬೆಳೆದು ಮಾರುವವರಿಗೆ ಸರಿಯಾದ ಧಾರಣೆಯಿಲ್ಲ. ರೈತರಿಗೆ ಸಕಾಲದಲ್ಲಿ ಹಣ ಸಿಕ್ಕುತ್ತಿಲ್ಲ. ಕಂದಾಯ ಬಿಟ್ಟಿದ್ದೇವೆಂದು ಹೇಳುತ್ತೀರಿ. ಆದರೆ ತಹಸೀಲ್ದಾರರು ಗಂಗಳ, ಚೊಂಬು, ಮುಂತಾದುವುಗಳನ್ನೆಲ್ಲಾ ಹರಾಜು ಹಾಕುತ್ತಿದ್ದಾರೆ. ಕಾನೂನಿಗೆ ವಿರುದ್ಧವಾಗಿ ವರ್ತಿಸಿ ಕಂದಾಯ ವಸೂಲು ಮಾಡುತ್ತಿದ್ದಾರೆ. ಕಾನೂನು ಪ್ರಕಾರ ಪ್ರತಿಯೊಂದು ಜಮೀನಿಗೂ ಅಸಿಸ್ಟೆಂಟ್ ಕಮೀಷನ್‌ರವರು ಮತ್ತು ಅಸಿಸ್ಟೆಂಟ್ ಎಂಜಿನಿಯರು ಹೋಗಿ ನೋಡಿ ಬೆಳೆ ಹೇಗೆ ಆಗಿದೆ, ನೀರು ಸರಬರಾಜು ಆಗಿದಿಯೇ ಎಂದು ನೋಡಿ ನಂತರ ಕಂದಾಯ ವಸೂಲು ಮಾಡಬೇಕು. ಹಾಗೆ ಮಾಡದೆ ಒಂದೊಂದು ಎಕರೆಗೆ 2–3 ಸಾವಿರ ರೂಪಾಯಿ ಬಾಕಿ ಕೇಳುತ್ತಿದ್ದಾರೆ. ಇದು ನಮ್ಮ ಕ್ಷೇತ್ರದಲ್ಲಿಲ್ಲ, ಭದ್ರಾ ಪ್ರಾಜೆಕ್ಟ್ ಇರುವ ಕಡೆ ಲಕ್ಷಗಟ್ಟಲೆ ಕೋಟಿಗಟ್ಟಲೆ ರೈತರು ಕೊಡಬೇಕಾಗಿದೆ. ಇದನ್ನು ಅಡ್ವೈಜರಿ ಕಮಿಟಿ ಮುಂದಿಡುವುದಕ್ಕೆ ಬರುವುದಿಲ್ಲ. ಕಂದಾಯ ಬಿಟ್ಟಿರುವುದಾಗಿ ಹೀಗೆ ವಸೂಲು ಮಾಡುತ್ತಿದ್ದಾರೆ. ಹೀಗಾದರೆ ನೀವು ನಡು ರಸ್ತೆಯಲ್ಲಿ ಹೋಗುವುದಕ್ಕಾಗುವುದಿಲ್ಲ.

ಬೆಂಗಳೂರು ನಗರದಲ್ಲಿ ರಿಸರ್ವ್ ಪೋಲೀಸ್ ನಿಮ್ಮ ಸಹಾಯಕ್ಕೆ ಇರಬಹುದು, ಅದೇ ಬೇರೆ ಕಡೆ ಹಾಗಿರುವುದಿಲ್ಲ. ಇದನ್ನು ತಿಳಿದುಕೊಳ್ಳಬೇಕು.

ಮುಖ್ಯಮಂತ್ರಿಗಳು ಜಪಾನಿಗೆ ಹೋಗಿಬಂದಮೇಲೆ ವಿಧಾನಸೌಧಕ್ಕೆ ದೀಪಾಲಂಕಾರ ಮಾಡಿಸಿದರು. ಹಿಂದೆ ಶ್ರೀ ಕೆಂಗಲ್ ಹನುಮಂತಯ್ಯನವರು ವಿಧಾನಸೌಧ ಮೇಲೆ ಕೆತ್ತಿಸಿದ್ದುದನ್ನು ಅಳಿಸಿಹಾಕಿದರು. ಈಗ ಶ್ರೀ ವೀರೇಂದ್ರ ಪಾಟೀಲರ ಹೆಸರು ಚಿರಸ್ಥಾಯಿಯಾಗಿರುವ ಹಾಗೆ ದೀಪಾಲಂಕಾರ ಮಾಡಿಸಿದ್ದಾರೆ, ಅದಕ್ಕೆ ಖರ್ಚು ಮಾಡಿದ ಹಣವನ್ನು ಹಳ್ಳಿಗಾಡಿನವರ ಅನುಕೂಲಕ್ಕಾಗಿ ಉಪಯೋಗಿಸಿದ್ದರೆ ಎಷ್ಟೋ ಸಹಾಯವಾಗುತ್ತಿತ್ತು. ಹಳ್ಳಿಗಳಲ್ಲಿ ಬಾವಿಗಳನ್ನು ತೋಡಲು ಈ ಹಣ ವಿನಿಯೋಗಿಸಿದ್ದರೆ ಎಷ್ಟೋ ಅನುಕೂಲವಾಗುತ್ತಿತ್ತು. ಕ್ಯಾಬರೆ ಡ್ಯಾನ್ಸಿಂಗ್ ಬೇಕಾದರೆ 10 ಲಕ್ಷ ಕೊಡುವರು. ಹಳ್ಳಿಗಾಡಿನವರಿಗೆ ಅನುಕೂಲ ಮಾಡಲು ಹಿಂದುಮುಂದು ನೋಡುವರು. ಹೀಗೆ ಮಾಡುವುದರ ಉದ್ದೇಶವಾದರೂ ಏನು? ಜನರು ಚುನಾವಣೆ ಸಮಯದಲ್ಲಿ ಕೈಬಿಡುವುದಾದರೆ ಸಿನಿಮಾ ಸ್ಟಾರ್‌ಗಳನ್ನು ನಿಲ್ಲಿಸಿ ಓಟುಗಳಿಸಲು ಪ್ರಯತ್ನ ಮಾಡಬಹುದು, ಅವರು ಜನರಿಗೆ ಬೇಕಾದವರು, ಅವರಿಗೆ ಓಟು ಸಿಕ್ಕುವುದು. ಮೊನ್ನೆ ಚುನಾವಣೆಯಲ್ಲಿ ಸಹಾಯ ಪಡೆದರು. ಬೆಂಗಳೂರಿನಲ್ಲಿ ಶ್ರೀ ಹನುಮಂತಯ್ಯನವರನ್ನೆದುರಿಸಲು ದುಂದುವೆಚ್ಚ ಮಾಡುವುದಕ್ಕೆ ಬದಲಾಗಿ ಜನತೆಗೆ ಉಪಯೋಗವಾಗುವ ಕೆಲಸಗಳಿಗೆ ಅದನ್ನು ವಿನಿಯೋಗಿಸಿದ್ದರೆ ಧನ್ಯವಾದಗಳನ್ನರ್ಪಿಸ ಬಹುದಾಗಿತ್ತು.

ಇಂದು ಸಮಾಜವಾದಿ ಸಮಾಜ ನಿರ್ಮಾಣವಾಗುತ್ತಿದೆ. ಶ್ರೀ ರಾಮಕೃಷ್ಣ ಹೆಗಡೆಯವರು ತಪ್ಪು ತಿಳಿಯಬಾರದು, ನಮಗೆ ಒದಗಿಸಿರುವ ಬಜೆಟ್ ಭಾಷಣದ ಪುಸ್ತಕದಲ್ಲಿ ಅವರು ಕೆಲವು ವಾಕ್ಯಗಳನ್ನು ಸೇರಿಸಿದ್ದಾರೆ, ಅದು ಉದ್ಧಟತನವಾಗಬಹುದು. ಕೇಂದ್ರ ಹೀಗೆ ಮಾಡಿದೆ, ಹಾಗೆ ಮಾಡಬಾರದಾಗಿತ್ತು ಎಂದು ತಿಳಿಸಿದ್ದಾರೆ. ಅನಿಷ್ಟಕ್ಕೆ ಶನೇಶ್ವರ ಗುರಿ ಎಂದು ಹೇಳುವಂತೆ ಕೇಂದ್ರ ಸರ್ಕಾರ ಸಹಕರಿಸುವುದಿಲ್ಲ ನಮಗೆ ತೊಂದರೆ ಮಾಡುತ್ತಿದೆ ಎಂದು ಕೇಂದ್ರ ಸರ್ಕಾರದ ಮೇಲೆ ತಪ್ಪು ಹೊರೆಸುವ ಪ್ರಯತ್ನ ಮಾಡಿದ್ದಾರೆ. ಕೇಂದ್ರ ಸರ್ಕಾರ ಮೈಸೂರಿಗೇನೂ ಅನ್ಯಾಯ ಮಾಡಿಲ್ಲ. ಅದು ಕೊಟ್ಟಿರುವ ಹಣಕಾಸಿನ ಸಾಲತ್ತು ಇಂಟರಿಂ ರಿಲೀಫ್ ಕೈಗಾರಿಕಾ ಸಾಲತ್ತು ಮುಂತಾದ್ದಕ್ಕೆಲ್ಲಾವನ್ನೂ ಗಮನಿಸದೆ ದುರಹಂಕಾರದಿಂದ ಉದ್ಧಟತನದಿಂದ ಕೇಂದ್ರದ ಮೇಲೆ ತಪ್ಪು ಹೊರಿಸಲು ಹೊರಟಿದ್ದಾರೆ. ಕೇಂದ್ರದ ಮೇಲೆ ಯುದ್ಧ ಮಾಡಲು ಹೊರಟಿದ್ದಾರೆ. ಗದಾಯುದ್ಧವಾದ ಮೇಲೆ ದುರ್ಯೋಧನ ಸರೋವರದಲ್ಲಿ ಮುಳುಗಿಕೊಂಡು ಅಯ್ಯೋ ಎಂದು ಮರುಗಿದ ಹಾಗೆ ಇವರು ತೊಡೆ ಮುರಿದುಕೊಂಡು ಮರುಗುತ್ತಿದ್ದಾರೆ. ಈಗಲಾದರೂ ಇವರಿಗೆ ನಮ್ರತೆ ಇದೆಯೋ ಏನೋ ಎಂದರೆ ಅದೂ ಕಾಣುವುದಿಲ್ಲ. ಹಣಕಾಸಿನ ಮಂತ್ರಿಯವರ ಭಾಷಣದಲ್ಲಿ

ಮೊದಲು ಒಂದೇ ವಾಕ್ಯವನ್ನು ಶ್ರೀಮತಿ ಇಂದಿರಾ ಗಾಂಧಿಯವರು ಈ ದೇಶದಲ್ಲಿ ಒಳ್ಳೆಯ ನಾಯಕಿಯಾಗಿ ಪರಿಣಮಿಸಿದ್ದಾರೆ. ಈ ದೇಶ ಅವರ ವಿಚಾರದಲ್ಲಿ ಅಚಲ ನಂಬಿಕೆಯನ್ನು ಇಟ್ಟಿದೆ ಎಂದು ಹೇಳಿದ್ದಾರೆ. ಇದು ನಿಷ್ಪಕ್ಷವಾದ ಮಾತೋ, ಮನಃ ಪೂರ್ವಕವಾಗಿ ಬಂದಿರುವ ಮಾತೋ ಗೊತ್ತಾಗುವುದಿಲ್ಲ. ಏಕೆಂದರೆ ಮುಂದಿನ ಪ್ಯಾರಾಗಳನ್ನು ನೋಡಿದರೆ ಯಾವ ರೀತಿಯಾದ ಮನಃ ಪೂರ್ವಕವಾದ ಕಳಕಳಿ ಇಲ್ಲ ಎನ್ನುವುದು ಗೊತ್ತಾಗುತ್ತದೆ.

**ಶ್ರೀ ರಾಮಕೃಷ್ಣ ಹೆಗಡೆ** : ಒಳ್ಳೆಯ ಮಾತು ಹೇಳಿದರೂ ಅದರಲ್ಲಿ ತಪ್ಪು ಹುಡುಕುತ್ತಿದ್ದಾರೆ. ಪ್ರಾಯಶಃ ಇವರ ಮನಸ್ಸಿನಲ್ಲಿ ಹೇಗೆ ಇದೆಯೋ ಹಾಗೆ ಹೇಳಬೇಕು ಎಂದು ಕಾಣುತ್ತದೆ.

**ಶ್ರೀ ಎಚ್ ಸಿದ್ದವೀರಪ್ಪ** :– ಇನ್ನೊಂದು ವಿಷಯವನ್ನು ತಮಗೆ ತಿಳಿಸುತ್ತೇನೆ. ಈ ಹೊತ್ತು ನಮ್ಮ ರಾಜ್ಯದಲ್ಲಿ ಯಾವುದೇ ಇಲಾಖೆಯನ್ನು ತೆಗೆದುಕೊಂಡರೂ ಅದಕ್ಷತೆ ತುಂಬಿದೆ. ಶ್ರೀಮಾನ್ ರಾಜಶೇಖರಮೂರ್ತಿ ಅವರ ಕೈಗಾರಿಕೆ ಇಲಾಖೆಯನ್ನು ತೆಗೆದುಕೊಂಡರೆ, ಅದು ಎಷ್ಟು ಬೆಳವಣಿಗೆಯಾಗಬೇಕೆಂದು ನಾವು ನಿರೀಕ್ಷೆ ಮಾಡಿದ್ದೆವೋ ಹಾಗೆ ಆಗಿಲ್ಲ. ಚಾರ್ಟ್ ತಯಾರು ಮಾಡಿ ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆ ಎಂದು ಹೇಳುತ್ತಿದ್ದರು. ಆದರೆ ಕಾರ್ಯಗತವಾಗಿ ಏನೂ ಆಗುತ್ತಿಲ್ಲ. ಮೈಸೂರು ದೇಶ ಭಾರತದ ಮ್ಯಾಂಚೆಸ್ಟರ್ ಎಂದು ಹೇಳುತ್ತಿದ್ದ ಕೈಗಾರಿಕೆಗಳ ಬೆಳವಣಿಗೆಯಾಗುತ್ತಿಲ್ಲ, ಕುಂಠಿತವಾಗುತ್ತಿದೆ. ಟ್ರಾನ್ಸ್‌ಪೋರ್ಟ್ ಇಲಾಖೆಯನ್ನು ತೆಗೆದುಕೊಂಡರೆ ಬೆಂಗಳೂರು ನಗರದಲ್ಲಿ ಓಡಾಡುವುದೇ ಕಷ್ಟವಾಗಿದೆ. ನಮ್ಮಷ್ಟಕ್ಕೆ ನಾವು ರಸ್ತೆಯಲ್ಲಿ ಹೋಗುತ್ತಿದ್ದರೆ ನಮ್ಮ ಮೇಲೆ ಹತ್ತುವುದಕ್ಕೆ ವಾಹನಗಳು ಬರುತ್ತವೆ. ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ, ದೇವರೇ ಏನು ಕಾಲ ತಂದೆ ಎಂದು ಬಡಜನರು ವಿಚಾರ ಮಾಡುವ ಕಾಲ ಬಂದಿದೆ. ಎಲ್ಲ ಇಲಾಖೆಗಳಲ್ಲೂ ಅದಕ್ಷತೆಯನ್ನು ಎತ್ತಿ ತೋರಿಸುತ್ತಿದ್ದಾರೆ ಮತ್ತು ಪ್ರದರ್ಶನ ಮಾಡುತ್ತಿದ್ದಾರೆ.

ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಗೆದ್ದಿದ್ದೇವೆ, ಆದುದರಿಂದ ಏನು ಬೇಕಾದರೂ ಮಾಡುತ್ತೇವೆ ಎನ್ನುವ ಹೆಮ್ಮೆ ನಮಗೆ ಇಲ್ಲ. ನಾವು ಇನ್ನೂ ನಮ್ರತೆಯಿಂದ ಇರಬೇಕು, ಜನಗಳ ನಮ್ರ ಸೇವಕರಾಗಿ ಈ ದೇಶದಲ್ಲಿ ನಮ್ಮ ಕರ್ತವ್ಯವನ್ನು ಮಾಡಬೇಕು ಎನ್ನುವುದನ್ನು ನಾನು ಅತಿ ವಿನಯದಿಂದ ಹೇಳುತ್ತಿದ್ದೇನೆ. ನಾನು ಈಗ ಏನು ಟೀಕೆ ಮಾಡುತ್ತಿದ್ದೇನೆ ಅದರ ಹತ್ತರಷ್ಟು ಹಿಂದೆ ಟೀಕೆ ಮಾಡುತ್ತಿದ್ದೆ. ನಮ್ಮ ಪಕ್ಷದಲ್ಲಿ ಕೇವಲ 23 ಜನರಿದ್ದಾಗ ಇದಕ್ಕಿಂತ ಕಟುವಾಗಿ ನಾನು ಟೀಕೆ ಮಾಡುತ್ತಿದ್ದೆ. ಈಗ ನಾಲಿಗೆ ಹಿಡಿದು ಮಾತನಾಡುತ್ತಿದ್ದೇವೆ. ನೀವೆಲ್ಲ ಹಡಗಿನ ವ್ಯಾಪಾರಿ ಜನಗಳು, ಸ್ವಲ್ಪ ಸ್ವಲ್ಪದರಲ್ಲಿ ತೃಪ್ತರಾಗುವ ಜನರಲ್ಲ. ಬೆಕ್ಕು ಮನೆಯಲ್ಲಿ

ಎಲ್ಲರ ಕಣ್ಣಿಗೂ ಕಾಣದ ಹಾಗೆ ಹಾಲು, ಬೆಣ್ಣೆ ತಿಂದು ಇಷ್ಟು ದಿವಸ ದಪ್ಪವಾಗಿ ಓಡಾಡಿತು. ಇಲಿಗಳು ಕೂಡ ರೊಚ್ಚಿಗೆದ್ದಿವೆ. ಬೆಕ್ಕನ್ನು ಇಲಿಗಳು ತಿನ್ನ ತಕ್ಕ ರೀತಿಯಲ್ಲಿ ಈ ಹೊತ್ತು ಜನ ನಿಮ್ಮ ಮೇಲೆ ತಿರುಗಿ ಬಿದ್ದಿದ್ದಾರೆ. ಇದನ್ನು ಮರೆಯಬಾರದು. ಯಾವತ್ತಿಗೂ ಜನತೆಯ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು.

ಅನೇಕರು ಕೈಗಾರಿಕೆಗಳನ್ನು ಮಾಡುವುದರಲ್ಲಿದ್ದಾರೆ. ಇವರಿಂದ ಲಾಭ ಪಡೆದುಕೊಂಡು ಆ ಲಾಭದಲ್ಲಿ ಕೆಲವು ಮಂತ್ರಿಗಳು ಭಾಗಿಗಳಾಗತಕ್ಕ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದನ್ನು ದೇಶದಲ್ಲಿ ಜನ, ತಿಳಿದಿರತಕ್ಕವರು, ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ಇವರು ದುಡ್ಡನ್ನು ಪಾಶ್ಚಿಮಾತ್ಯ ಬ್ಯಾಂಕುಗಳಲ್ಲಿ ಇಟ್ಟಿದ್ದಾರೆ ಎಂದೂ ಸಹ ಜನ ಮಾತನಾಡುತ್ತಾ ಇದ್ದಾರೆ.

ಇನ್ನು ಲಾ ಅಂಡ್ ಆರ್ಡರ್ ವಿಚಾರ ಹೇಳಬೇಕಾದ್ದೇ ಇಲ್ಲ. ಅನೇಕ ಖೂನಿ ಕೇಸುಗಳು, ಈ ಹೊತ್ತಿನವರೆಗೂ ರುಜುವಾತಾಗಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿರುವ ತೆಕ್ಕಲಕೋಟೆಯಲ್ಲಿ ಒಬ್ಬ ತಾಲ್ಲೂಕು ಬೋರ್ಡ್ ಸದಸ್ಯ, ಹಿಂದುಳಿದ ಪಂಗಡಕ್ಕೆ ಸೇರಿದ ಮನುಷ್ಯ, ಸರ್ಕಾರಿ ಬಸ್ಸಿನಲ್ಲಿ ಹೋಗುತ್ತಿರಬೇಕಾದರೆ, ಹಾಡುಹಗಲಿನಲ್ಲಿ ಒಬ್ಬ ಕಾಂಗ್ರೆಸ್ ಪುಡಾರಿಯ ಜೀಪನ್ನು ಬಸ್ಸಿಗೆ ಅಡ್ಡವಾಗಿಟ್ಟು, ಅವನನ್ನು ಖೂನಿ ಮಾಡಿದರು. ಬಸ್ಸಿನಲ್ಲಿ 18–20 ಜನಪ್ರಯಾಣಿಕರಿದ್ದರು. ಈ ಖೂನಿಯಾಗಿ ಆರೇಳು ತಿಂಗಳಾದರೂ ಈ ಹೊತ್ತಿನವರೆಗೂ ರುಜುವಾತಾಗಿಲ್ಲ; ಅದು ಏನಾಯಿತು ಎಂದು ಹೇಳಿಲ್ಲ. ಅದೇ ರೀತಿಯಲ್ಲಿ ಅನೇಕ ಜನ ಅಸೆಂಬ್ಲಿ ಸದಸ್ಯರನ್ನು, ನಮ್ಮ ಪಕ್ಷದವರನ್ನು ಚುನವಾಣೆಯ ಕಾರ್ಯಕ್ರಮಕ್ಕೆ ಹೋಗಿದ್ದಾಗ ಹೊಡೆಸಿದರು. ನಾವು ಫಿರ್ಯಾದು ಕೊಟ್ಟಾಯಿತು. ಅದೇನಾಯಿತು ಎಂದು ಗೊತ್ತಿಲ್ಲ. ನಮ್ಮ ಪಕ್ಷದವರ ವಿರುದ್ಧವಾಗಿ ಆ ಹೊತ್ತೇ ಕೇಸು ತೆಗೆದುಕೊಂಡು ಆ ಹೊತ್ತೇ ರಿಜಿಸ್ಟರ್ ಮಾಡಿಕೊಂಡಿರುವುದು ಎಷ್ಟೋ ಇದೆ. ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ, ಯಾರ ಸರ್ಕಾರವೇ ಬರಲಿ, ಸರ್ಕಾರ ನ್ಯಾಯ, ಧರ್ಮ, ಸತ್ಯದ ದೃಷ್ಟಿಯಿಂದ ಧರ್ಮ ರಕ್ಷಣೆ ಮಾಡಿ ದುಷ್ಟರನ್ನು ಶಿಕ್ಷೆ ಮಾಡಬೇಕು. ಆ ದೃಷ್ಟಿಯಿಂದ ಈ ಸರ್ಕಾರ ಹೋಗಿಲ್ಲ. ತಮಗೆ ಬೇಕಾದವರು ಆ ಪಕ್ಷಕ್ಕೆ ಸೇರಿರುವವರು ಹಣವನ್ನು ದುರುಪಯೋಗ ಮಾಡಿದ್ದಾರೆ. ಲಕ್ಷಗಟ್ಟಲೆ ದುಡ್ಡು ತಿಂದಿದ್ದಾರೆ. ಆದರೆ ಯಾರ ಮೇಲೂ ಕೇಸು ಹಾಕಿಲ್ಲ. ಸಹಕಾರ ಸಂಘಗಳೊಂದರಿಂದಲೇ 200 ಕೋಟಿ ರೂಪಾಯಿಗಳಷ್ಟು ಹಣ ದುರ್ವ್ಯಯವಾಗಿದೆ. ಅದಕ್ಕೆ ಕೂಡ ಲೆಕ್ಕ ಸಿಕ್ಕುತ್ತಿಲ್ಲ. ಹಣ ಬರುತ್ತಿಲ್ಲ. ಈ ರೀತಿ ಪಕ್ಷಪಾತ ಮಾಡುವ ಆಡಳಿತದ ಕೊನೆಗಾಲವಾಗತಕ್ಕ ಸಮಯ ಬಹಳ ಹತ್ತಿರವಿದೆ. ಇದರ ವಿಚಾರದಲ್ಲಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ನಮ್ಮ ರೈತರ ಕಡೆಯಿಂದ ನೂರು ರೂಪಾಯಿ ಬರಬೇಕಾಗಿದ್ದರೆ ಅವರ ಬೆನ್ನು ಹತ್ತಿ ವಸೂಲು ಮಾಡುತ್ತಾರೆ. ಇಂಟರ್ ಸ್ಟೇಟ್ ಟ್ಯಾಕ್ಸ್ ಎಂದು ಹಿಂದೆ

ವಸೂಲು ಮಾಡಿದರು. ಕಾನೂನು ಪ್ರಕಾರ ಅದು ಸರಿಯಲ್ಲ ಎಂದು ಮೈಸೂರು ರಾಜ್ಯದ ಕೆಲವು ವರ್ತಕರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಹಾಕಿದಾಗ ನಮ್ಮ ಹೈಕೋರ್ಟ್ ಕೂಡ ಆ ರೀತಿ ಮಾರಾಟ ತೆರಿಗೆ ವಸೂಲು ಮಾಡುವುದು ಸರಿಯಲ್ಲ ಎಂದು ಹೇಳಿತು. ಒಂದೇ ರಾತ್ರಿ ಒಂದು ಕೋಟಿ 80 ಲಕ್ಷ ರೂಪಾಯಿ ವ್ಯಾಪಾರಸ್ಥರಿಗೆ ವಾಪಾಸು ಕೊಟ್ಟರು. ಆಮೇಲೆ ಸುಪ್ರೀಂ ಕೋರ್ಟಿನಲ್ಲಿ ತೆರಿಗೆ ಹಾಕಿದ್ದು ಸರಿ ಎಂದು ತೀರ್ಮಾನವಾಯಿತು. ಆ ತೀರ್ಪು ಬಂದ ಮೇಲೆ ಹಣಕಾಸಿನ ಮಂತ್ರಿಗಳಾದ ರಾಮಕೃಷ್ಣ ಹೆಗಡೆ ಅವರು ಇದೇ ಸಭೆಯಲ್ಲಿ ಹೇಳಿದರು, ವ್ಯಾಪಾರಸ್ಥರಿಗೆ ಕೊಟ್ಟಿರುವುದನ್ನು ಅವರಿಂದ ತರಿಸಿ ಕೊಳ್ಳುತ್ತೇನೆ ಎಂದು. ವ್ಯಾಪಾರಸ್ಥರ ಕೈಯಲ್ಲಿ ಒಬ್ಬೊಬ್ಬರ ಹತ್ತಿರವೂ 5 ಲಕ್ಷ, 10 ಲಕ್ಷ, 15 ಲಕ್ಷ ರೂಪಾಯಿ ಇದೆ, ಅವರಿಂದ ಹಿಂದಕ್ಕೆ ಪಡೆಯುತ್ತೇವೆಂದು ಹೇಳಿ ಮೂರುವರೆ ವರ್ಷವಾಯಿತು. ಈ ಹೊತ್ತಿನವರೆಗೂ ತರಿಸಿಲ್ಲ, ಅವರ ಹತ್ತಿರ ಹಣ ಕೇಳಲಿಲ್ಲ, ಮೊನ್ನೆ ಚುನಾವಣೆಯ ಕಾಲದಲ್ಲಿ ಶ್ರೀ ವೀರೇಂದ್ರ ಪಾಟೀಲರು ಹೋಗಿ ಹೇಳಿದರು, ನಿಮ್ಮಿಂದ ವಸೂಲು ಮಾಡದೆ ಇನ್ನೂ ಟೈಂ ಕೊಟ್ಟಿದ್ದೇವೆ, ಈಗಲೂ ಹಣ ವಸೂಲು ಮಾಡಿಲ್ಲ, ಆ ಹಣವನ್ನು ಉಪಯೋಗಿಸಿ ನೀವು ವ್ಯಾಪಾರ ಮಾಡಿದ್ದೀರಿ, ಆದ್ದರಿಂದ ಅದರ ಮೇಲೆ 6 ಪರ್ಸೆಂಟ್‌ನಂತೆ ಎಷ್ಟು ಬಡ್ಡಿ ಆಗುತ್ತದೆಯೋ ಅಷ್ಟು ಹಣವನ್ನಾದರೂ ನಮ್ಮ ಫಂಡಿಗೆ ಕೊಡಿ ಎಂದು ಕೇಳಿದರು.

ಶ್ರೀ ವೀರೇಂದ್ರ ಪಾಟೀಲ – ಯಾರಿಗೆ?

**ಶ್ರೀ ಎಚ್. ಸಿದ್ದವೀರಪ್ಪ**– ಮರ್ಚೆಂಟ್ಸ್‌ಗೆ, ಸ್ಪೀಕರ್‌ರವರು ಒಂದು ಕಮಿಷನ್ ಬೇಕಾದರೆ ನೇಮಿಸಲಿ ಅಲ್ಲಿ ಹೆಸರುಗಳನ್ನು ಕೊಡುತ್ತೇನೆ.

ಈ ರೀತಿ ಸರ್ಕಾರದ ದುಡ್ಡು ಒಂದಲ್ಲ ಎರಡಲ್ಲ ಎಷ್ಟೋ ಕಡೆ ದುರುಪಯೋಗವಾಗಿದೆ. ಇದರ ಬಗ್ಗೆ ಎಷ್ಟು ಹೆಸರು ಹೇಳಲಿ, ಇವೆಲ್ಲಾ ನ್ಯಾಯವಾಗಿ ರೈತರು ಕೊಡುವ ದುಡ್ಡು. ಈ ದುಡ್ಡನ್ನು ವ್ಯಾಪಾರದವರಿಗೆ ಕೊಟ್ಟು ಅದರಿಂದ ಬರತಕ್ಕಂಥ ಬಡ್ಡಿಯನ್ನು ಒಂದು ಫಂಡ್ ರೂಪದಲ್ಲಿ ನಮಗೆ ಕೊಡಿ ಎಂದು ಕೇಳುವ ಸರ್ಕಾರ ಇನ್ನು ಎಷ್ಟು ದಿವಸ ಇರಬೇಕು? ಅದನ್ನು ಯೋಚನೆ ಮಾಡಬೇಕು. ಹೀಗೆ ಹೇಳುತ್ತಾ ಹೋದರೆ ಇನ್ನೂ ಬೇಕಾದಷ್ಟು ಇವೆ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿ 3–4 ವರ್ಷವಾಯಿತು ಎಂದು ಕಾಣುತ್ತದೆ. ಅವರ ವಿಚಾರದಲ್ಲಿ ನಾನು ಚೆನ್ನಾಗಿ ನಂಬಿಕೆ ಇಟ್ಟುಕೊಂಡಿದ್ದೆ. ಆದರೆ ಅದೆಲ್ಲಾ ಡಿಸ್‌ರಿಗಾರ್ಡ್ ಆಯಿತು. ಅವರ ಯಜಮಾನವರು ಹೇಳಿಕೊಟ್ಟ ಪಾಠ ಹಾಗೆಯೇ ಇದೆ. ಅದರಲ್ಲಿ ಕೊಂಚವೂ ಬಿಟ್ಟು ಹೋಗುವ ಹಾಗಿಲ್ಲ. ಅವರು ಏನು ಒಂದು ಶಿಸ್ತು ಹಾಕಿಕೊಟ್ಟಿದ್ದಾರೆ ಅದರಲ್ಲಿ ಬಹಳ ಜನರು ಬೇಸತ್ತಿದ್ದಾರೆ. ಆದುದರಿಂದ ಆ ಕಡೆಯಲ್ಲಿರುವ ಮಾನ್ಯ ಸದಸ್ಯರನ್ನು ನಾನು ಕೇಳುತ್ತೇನೆ.

ನೀವು ಏತಕ್ಕೆ ಈ ಪಾಪಕ್ಕೆ ಗುರಿಯಾಗುತ್ತೀರಿ? ಈ ರೀತಿ ನೂರಾರು ಇವೆ. ಎಷ್ಟೋ ತೊಂದರೆಗಳನ್ನು ಜನಗಳಿಗೆ ಕೊಡುತ್ತಿದ್ದೀರಿ. ನೀವು ಇಂದಲ್ಲ ನಾಳೆ ಜನತೆಯ ಮುಂದೆ ಹೋಗಬೇಕಾಗುತ್ತದೆ. ಆವಾಗಲಾದರೂ ಮಾಡಿದ ಪಾಪವನ್ನು ಅನುಭವಿಸಬೇಕಾಗುತ್ತದೆ. ಆದರೆ ಯಾರೋ ಮಾಡಿದ ಪಾಪವನ್ನು ಯಾರ ತಲೆಯ ಮೇಲೋ ಹಾಕಿ ಅವರು ಅನುಭವಿಸಬೇಕಾಗುತ್ತದೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಬಡ್ಜೆಟ್‌ಗೆ ನಾನು ಒಪ್ಪಿಗೆ ಕೊಡುವುದಿಲ್ಲ. ಈ ಬಡ್ಜೆಟ್ ಸರಿಯಾಗಿಲ್ಲ, ಜನತೆಯಲ್ಲಿ ಯಾವ ರೀತಿಯಾಗಿಯೂ ಪ್ರೇಮ ವಿಶ್ವಾಸವಿಲ್ಲ. ಆದುದರಿಂದ ಈ ಬಡ್ಜೆಟ್ಟಿಗೆ ನಮ್ಮ ಅಸ್ತು ಇಲ್ಲ ಮತ್ತು ಅವರ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲಿ ಎಂದು ನಿಮ್ಮ ಮೂಲಕ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

* * *

# ಖಾಸಗಿ ಮೆಡಿಕಲ್ ಕಾಲೇಜು ಸೀಟುಗಳಿಗೆ ಸರ್ಕಾರದ ಮೂಗುದಾರ

11, ಏಪ್ರಿಲ್ 1973.

**ಶ್ರೀ ಎಚ್. ಸಿದ್ದವೀರಪ್ಪ** – ಹಿಂದೆ ಖಾಸಗಿ ಮೆಡಿಕಲ್ ಕಾಲೇಜ್ ಮೇಲೆ ಯಾವ ಕಂಟ್ರೋಲ್ ಇರಲಿಲ್ಲ. ಇಷ್ಟು ಕಂಟ್ರೋಲ್ ಅನ್ನು ಈ ಸರ್ಕಾರದವರು ತಂದಿದ್ದಾರೆ. ಒಂದು ರೂಪಾಯಿನ 12 ಆಣೆ ಭಾಗ ಕಂಟ್ರೋಲ್ ಅನ್ನು ತಂದಿದ್ದೇವೆ. ಇವರು ನಮ್ಮ ಆಡಳಿತದ ಹಿಡಿತಕ್ಕೆ ಒಳಪಡಬೇಕು ಮತ್ತು ಅಡ್ಮಿಷನ್ ಮಾಡಬೇಕು. ಇನ್ನು ನಾಲ್ಕಾಣೆ ಭಾಗ ಅಡ್ಮಿಷನ್ ಹಣವನ್ನು ತೆಗೆದುಕೊಳ್ಳದೇ ನಡೆಸಬೇಕಾದರೆ, ಕಷ್ಟ ಇದೆ. ಮಣಿಪಾಲ್‌ನವರ ಮೇಲೆ ಕೈ ಮಾಡಿ ನೋಡಿಕೊಳ್ಳುತ್ತಾರೆ ಎಂದರೆ ಯಾರೂ ದಕ್ಷಬ್ರಹ್ಮರು ಅಲ್ಲ. ಎಲ್ಲರೂ ಸರ್ಕಾರದ ಆಡಳಿತಕ್ಕೆ ಒಳಪಡಬೇಕಾಗಿದೆ, ಎಲ್ಲರನ್ನೂ ಒಂದೇ ತರಹ ನೋಡಬೇಕಾಗಿದೆ ಎಂದು ಬಿಟ್ಟಿದ್ದೇವೆಯೇ ಹೊರತು ಮಣಿಪಾಲ್‌ನವರಿಗೆ ಯಾವ ರೀತಿಯ ರಿಯಾಯತಿಯನ್ನು ತೋರಿಸಿಲ್ಲ. ಅವರು ಕಾಲೇಜನ್ನು ಒಳ್ಳೆಯ ರೀತಿಯಲ್ಲಿ ಇಟ್ಟುಕೊಂಡಿದ್ದಾರೆ. ಚೆನ್ನಾಗಿ ನಡೆಸುತ್ತಿದ್ದಾರೆ. ಎಜುಕೇಷನ್ ಪಾಯಿಂಟ್ ಆಫ್ ವ್ಯೂ, ಟೆಕ್ನಿಕಲ್ ಪಾಯಿಂಟ್ ಆಫ್ ವ್ಯೂ, ಚೆನ್ನಾಗಿ ಇಟ್ಟುಕೊಂಡಿದ್ದಾರೆ, ಆದ್ದರಿಂದ ನನಗಾದರೂ ಅನಿಸುತ್ತದೆ. ಇವರ ಮೇಲೆ ಒತ್ತಡ ತಂದಿದ್ದಾರೆ. ನಿಮ್ಮನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಎಂದು ಹೇಳತಕ್ಕಂಥದ್ದಾದ್ದು ಸತ್ಯಕ್ಕೆ ದೂರವಾದುದು. ಇವತ್ತು ಪ್ರೈವೇಟ್ ಮೆಡಿಕಲ್ ಕಾಲೇಜುಗಳನ್ನು ಒಂದು ವೇಳೆ ತೆಗೆದುಕೊಂಡಿದ್ದೇವೆಂದು ತಿಳಿದು ಕೊಳ್ಳೋಣ. ತೆಗೆದುಕೊಂಡರೆ ಹಣಕಾಸಿನ ಪರಿಸ್ಥಿತಿಯಲ್ಲಿ ನಮಗೆ ಬಹಳ ತೊಂದರೆ ಬರುತ್ತದೆ.

**ಶ್ರೀ ಕಾಗೋಡು ತಿಮ್ಮಪ್ಪ:** –ಐದು ಸಾವಿರ ರೂಪಾಯಿಗಳನ್ನು ಕೊಟ್ಟವರಿಗೆ ಕಾಯಂ ಸೀಟು ಕೊಡಿಸುತ್ತೀರಾ?

**ಶ್ರೀ ಎಚ್. ಸಿದ್ದವೀರಪ್ಪ:**– ಎಷ್ಟು ಸೀಟು ಇದೆ, ಎಷ್ಟು ಕೊಡುತ್ತಾರೆ, ಈ ವರ್ಷದ ಅಡ್ಮಿಷನ್ ಎಷ್ಟು ಮಾಡಬೇಕು ಎಂದು ತೀರ್ಮಾನ ಆಗಿಲ್ಲ. ಎರಡು

ವರ್ಷದ ಪಿ.ಯು.ಸಿ. ಕೋರ್ಸಿನ ಕೆಲವು ಹುಡುಗರು ಬರುತ್ತಾರೆ. ಹೋದಸಾರಿ ಮಾಡಿದಷ್ಟು ಅಡ್ಮಿಷನ್ಸ್ ಈ ಸಾರಿ ಮಾಡಲಿಕ್ಕೆ ಆಗುತ್ತದೆಯೋ ಇಲ್ಲವೋ ಯಾವ ಯಾವ ಕಾಲೇಜಿನಲ್ಲಿ ಎಷ್ಟೆಷ್ಟು ಅಡ್ಮಿಷನ್ ಮಾಡಬೇಕು ಎನ್ನುವುದನ್ನು ಇನ್ನು ತೀರ್ಮಾನ ಮಾಡಬೇಕು. ಆಮೇಲೆ ಇದು ಸರಿ ಹೋಗುತ್ತದೆ. ಇನ್ನೊಂದು ವಿಷಯವನ್ನು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದರು. ಇಲಾಖೆಯಲ್ಲಿ ಸೀನಿಯಾರಿಟಿ ಲಿಸ್ಟ್ ಇಲ್ಲ, ಕೇಡರ್ ಅಂಡ್ ರೆಕ್ರುಟ್‌ಮೆಂಟ್ ರೂಲ್ಸ್ ಇಲ್ಲ. ಮನಸ್ಸಿಗೆ ಬಂದವರನ್ನು ಅಪಾಯಿಂಟ್ ಮಾಡಿಕೊಳ್ಳುತ್ತಾರೆ. ಹಾಗೆ ಹೀಗೆ ಎನ್ನತಕ್ಕ ಕೆಲವು ಮಾತುಗಳನ್ನು ಹೇಳಿದರು. ಆ ಜಾತಿಯವರಿಗೆ ಹೆಚ್ಚು ಕೆಲಸ ಕೊಟ್ಟಿದ್ದಾರೆ ಎಂದು ಹೇಳಿದರು– ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಕೇಡರ್ ಅಂಡ್ ರೆಕ್ರುಟ್‌ಮೆಂಟ್ ರೂಲ್ಸ್ ಎಷ್ಟು ಇರಬೇಕು, ಯಾವ ರೀತಿ ಸ್ಪಷ್ಟವಾಗಿರಬೇಕು, ಅಷ್ಟೂ ಈ ಡಿಪಾರ್ಟ್‌ಮೆಂಟಿನಲ್ಲಿ ಇಲ್ಲಿಯವರೆಗೂ ಇಲ್ಲ. ಇದರ ವಿಚಾರದಲ್ಲಿ ನಾನು ಬಹಳ ದೀರ್ಘವಾಗಿ ಯೋಚನೆ ಮಾಡಿದ್ದೇನೆ. ಅದಕ್ಕಾಗಿ ನಾನು ಆಗಲೇ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಕೇಡರ್ ಅಂಡ್ ರೆಕ್ರುಟ್‌ಮೆಂಟ್ ರೂಲ್ಸ್ ಅನ್ನು ಇನ್ನೂ ನಾವು ತಯಾರು ಮಾಡಬೇಕು ಈಗ ಇದ್ದುದು ಸರಿಯಾಗಿಲ್ಲ. ಇದು ಒಂದೊಂದು ಕಾಲಕ್ಕೆ ಪರಿವರ್ತನೆಯಾಗಿದೆ ಎನ್ನುವ ವಾದ ಇದೆ. ಆದ್ದರಿಂದ ಇವತ್ತು ಕೇಡರ್ ಅಂಡ್ ರೆಕ್ರುಟ್‌ಮೆಂಟ್ ರೂಲ್ಸ್ ಅನ್ನು ನಾವು ಬೇರೆ ಬೇರೆ ರೀತಿಯಿಂದ ಮಾಡಿಸುತ್ತಿದ್ದೇವೆ. ಇದನ್ನು ಹೊಸದಾಗಿ ನಾವು ಎಲ್ಲಾ ನೋಡಿ ಪ್ರತಿಯೊಂದನ್ನು ಸರಿಯಾದ ರೀತಿಯಿಂದ ಕೂಲಂಕುಷವಾಗಿ ಪರೀಕ್ಷೆ ಮಾಡಿ, ಕೇಡರ್ ಅಂಡ್ ರೆಕ್ರುಟ್‌ಮೆಂಟ್ ರೂಲ್ಸ್ ಮತ್ತು ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಬೇಕು ಎಂದು ನಾನು ಹೇಳಿದಿದ್ದೇನೆ. ಅದರ ಪ್ರಕಾರ ಕೇಡರ್ ಅಂಡ್ ರೆಕ್ರುಟ್‌ಮೆಂಟ್ ರೂಲ್ಸ್ ಈಗ ಆಗುತ್ತಿದೆ. ಇದು ಆದ ಮೇಲೆ ಬಹುಶಃ ಏನೇನು ತೊಂದರೆಗಳು ಇವೆ, ಅವೆಲ್ಲಾ ಕಡಿಮೆಯಾಗುತ್ತವೆಂದು ನಾನು ತಿಳಿದಿದ್ದೇನೆ.

ಶ್ರೀಮಾನ್ ತಿಮ್ಮಪ್ಪನವರು, ಇನ್ನೊಂದು ವಿಷಯವನ್ನು ಹೇಳಿದರು. ಅನೇಕ ನೌಕರಿಗಳನ್ನು ನೇಮಕ ಮಾಡತಕ್ಕದ್ದು ಸರಿಯಲ್ಲ ಎಂದು. ಅಪಾಯಿಂಟ್‌ಮೆಂಟ್ ಮಾಡತಕ್ಕ ಕಾಲದಲ್ಲಿ ನಾವು ಒಂದು ಗಮನದಲ್ಲಿಟ್ಟುಕೊಳ್ಳಬೇಕು. ನಾವು ನೇಮಕ ಮಾಡತಕ್ಕದ್ದು ಟೆಂಪರರಿ ಅಪಾಯಿಂಟ್‌ಮೆಂಟ್ಸ್‌ಗೆ, ಇದು ಸರ್ಕಾರದ ಕರ್ತವ್ಯ ಅಲ್ಲ, ಸರ್ಕಾರಕ್ಕೆ ಸಂಬಂಧಪಟ್ಟದ್ದಲ್ಲ, ಅನೇಕ ಸಾರಿ ನಾನು ಇದನ್ನು ದೀರ್ಘವಾಗಿ ಯೋಚನೆ ಮಾಡಿ ಪ್ರತಿಯೊಂದನ್ನು ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಬಿಟ್ಟು ಬಿಟ್ಟು ಅದರಂತೆ ಮಾಡಿಸಬೇಕು ಎಂದು ಆರ್ಡರ್ ಮಾಡಬೇಕು ಎನ್ನತಕ್ಕ ಸಮಯದಲ್ಲಿ ಯೋಚನೆ ಮಾಡಿದರೆ, ಪಬ್ಲಿಕ್ ಸರ್ವೀಸ್‌ಕಮಿಷನ್‌ನಿಂದ ಅಪಾಯಿಂಟ್‌ಮೆಂಟ್ಸ್ ಆಗಬೇಕಾದರೆ, 2–3 ವರ್ಷ ತಡವಾಗುತ್ತದೆ. ಇದು ಡೆವಲಪಿಂಗ್ ಡಿಪಾರ್ಟ್‌ಮೆಂಟ್ಸ್. ಇದರಲ್ಲಿ ಇನ್ನೂ ದೊಡ್ಡದಾಗಿ ಹೊಸ ಹೊಸದಾಗಿ ಕಾಲೇಜುಗಳ ಕೆಲವು ಭಾಗಗಳನ್ನು

ತೆಗೆಯುತ್ತಿದ್ದೇವೆ; ಆಸ್ಪತ್ರೆಗಳನ್ನು ತೆಗೆಯುತ್ತಿದ್ದೇವೆ. ನಮ್ಮ ನೀತಿಯ ಪ್ರಕಾರ 15 ಸಾವಿರ ಜನಸಂಖ್ಯೆಗೆ ಒಂದು ಹೆಲ್ತ್ ಯುನಿಟ್ಸ್ನಾದರೂ ತೆಗೆಯಬೇಕು ಎಂದು ಇದೆ. ವರ್ಲ್ಡ್ ಬ್ಯಾಂಕ್ ಸ್ಕೀಂ ಪ್ರಕಾರ ನೂರಾರು ಜನ ಡಾಕ್ಟರುಗಳನ್ನು ಅಪಾಯಿಂಟ್ ಮಾಡಬೇಕು. ಅವೆಲ್ಲಕ್ಕೂ ಪಬ್ಲಿಕ್ ಸರ್ವಿಸ್ ಕಮಿಷನ್‌ನ ಅಪಾಯಿಂಟ್‌ಮೆಂಟ್ಸ್‌ಗೆ ಕಾದರೆ ಡಿಪಾರ್ಟ್‌ಮೆಂಟ್ ಗ್ರೋತ್‌ಗೆ ತೊಂದರೆ ಬರುತ್ತದೆ. ಈ ದೃಷ್ಟಿಯಿಂದ ನಾವಾದರೂ ಅಪಾಯಿಂಟ್‌ಮೆಂಟ್ ಅನ್ನು ಯಾವ ರೀತಿ ಮಾಡಬೇಕು ಎನ್ನತಕ್ಕದಕ್ಕೆ ಒಂದೆರಡು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಬೇಕಾದ್ದು ಅವಶ್ಯಕ ಎಂದು ನಾನು ತಿಳಿದಿದ್ದೇನೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ, ಸಾವಿರಾರು ರೂಪಾಯಿಗಳ ಸಂಬಳದಿಂದ ಹಿಡಿದು ಕೆಳಗೆ ಇರತಕ್ಕಂಥವರನ್ನೂ ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಎಷ್ಟೋ ಜನಕ್ಕೆ ಪ್ರಮೋಷನ್ ಮಾಡಿದೆ, ಯಾವ ರೀತಿ ಮಾಡಿದೆ ಎನ್ನುವುದನ್ನು ಲೆಕ್ಕ ಹಾಕಿ ನೋಡಿದರೆ, ಇದನ್ನು ನೀವು ಮನಸ್ಸು ಮಾಡುವುದಿಲ್ಲ. ಇದಕ್ಕೆ ಎರಡು ಕಮಿಟಿಗಳು ಇವೆ. ಸ್ಕ್ರೂಟಿನಿಂಗ್ ಕಮಿಟಿ ಒಂದು ಇದೆ, ಅದಕ್ಕೆ ಜಾಯಿಂಟ್ ಸೆಕ್ರೆಟರಿ ಚೇರ್ಮನ್ ಆಗಿರುತ್ತಾರೆ; ಕೆಲವು ಉನ್ನತ ಸೆಕ್ರೆಟರಿಗಳು ಅದರಲ್ಲಿರುತ್ತಾರೆ. ಸ್ಕ್ರೂಟಿನಿ ಕಮಿಟಿ ಆದ ಮೇಲೆ ಸ್ಟ್ಯಾಫ್ ಸ್ಕ್ರೂಟಿನಿ ಕಮಿಟಿ ಎಂದು ಇನ್ನೊಂದು ಇದೆ.

## 800 ಡಾಕ್ಟರುಗಳಿಗೆ ತಾತ್ಕಾಲಿಕ ಹುದ್ದೆ

ನಾವು ಯಾವ ಪ್ರಮೋಷನ್ ಕೊಡಲಿ, ಅದು ಈ ಕಮಿಟಿಗಳ ಮುಂದೆ ಹೋಗಿ ಆ ಕಮಿಟಿಯವರು ಇದನ್ನು ನೋಡಬೇಕಾದರೆ ಯಾವ ರಾಜಕೀಯವೂ ಇಲ್ಲ, ಅವರು ಇದನ್ನು ನೋಡಿ ಯಾರು ಸೀನಿಯಾರಿಟಿಯಲ್ಲಿದ್ದಾರೆ. ಯಾವನು ಯಾವ ಹುದ್ದೆಗೆ ಲಾಯಕು ಇದ್ದಾನೆ, ಎನ್ನುವುದನ್ನು ನೋಡಿ ಅವರು ಶಿಫಾರಸ್ ಅನ್ನು ಕಳುಹಿಸುತ್ತಾರೆ. ಅದನ್ನು ನಾವು ಸರ್ಕಾರದ ಮುಂದೆ ಇಟ್ಟು ಅದರ ಮೇಲೆ ನಾವು ಆರ್ಡರುಗಳನ್ನು ಹುಕುಂಗಳನ್ನು ಮಾಡುತ್ತೇವೆ. ಈ ದೃಷ್ಟಿಯಿಂದ ಪ್ರಮೋಷನ್ ಕಮಿಟಿಯಿಂದ ಬಂದಂಥ ಶಿಫಾರಸುಗಳನ್ನು ಮುಂದೆ ಇಟ್ಟುಕೊಂಡು ಅದನ್ನು ಜಾರಿಗೆ ಕೊಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಅಷ್ಟೇ ಅಲ್ಲ, ಅನೇಕ ಲೆಕ್ಚರರ್ಸ್‌ಗಳನ್ನು, ಅಸಿಸ್ಟೆಂಟ್ ಸರ್ಜನ್ಸ್, ಡೆಂಟಲ್ ಸರ್ಜನ್ಸ್ ಮುಂತಾದ ನೌಕರಿಗಳಿಗೆ ಬೇಕಾದಷ್ಟು ಹೊಸ ಹೊಸದಾಗಿ ಡೆವಲಪ್‌ಮಾಡಿದ್ದರಿಂದ ಈ ಖಾತೆ ಬೆಳೆಯುತ್ತಾ ಇದೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ, ಸುಮಾರು 800ಕ್ಕು ಮೇಲ್ಪಟ್ಟು, ಡಾಕ್ಟರುಗಳಿಗೆ ಟೆಂಪರರಿಯಾಗಿ ಹುದ್ದೆಗಳನ್ನು ಕೊಟ್ಟಿದ್ದೇವೆ. ಹಂಗಾಮಿಯಾಗಿ ಕೊಟ್ಟಂಥ ಹುದ್ದೆಗಳಿಗೆ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ರವಾನೆ ಮಾಡಿ ಶಾಶ್ವತವಾದ ಹುದ್ದೆಗಳನ್ನಾಗಿ ನಾವು ನೇಮಿಸಿಕೊಂಡಿದ್ದೇವೆ. ಅದನ್ನು ಕಾನೂನು ಪ್ರಕಾರ ಮಾಡಬೇಕು ಎಂದು ತಿಳಿಸಿದ್ದೇವೆ. ಇನ್ ದಿ ಇಂಟರೆಸ್ಟ್ ಆಫ್ ದಿ ಪಬ್ಲಿಕ್ ಸರ್ವೀಸ್, ಎಕ್ಸ್‌ಜಿನ್ಸೀಸ್ ಸರ್ವೀಸ್‌ನಲ್ಲಿ ಜಾಗ್ರತೆಯಾಗಿ ಡಾಕ್ಟರುಗಳು ಬೇಕು. ಈ ಸಮಯದಲ್ಲಿ

ಅಪಾಯಿಂಟ್‌ಮೆಂಟ್ ನಾವು ಮಾಡುತ್ತೇವೆ ಎಂದು ಹೇಳಿದ್ದೇವೆ. ಅದರ ಜೊತೆಗೆ ಡಾಕ್ಟರುಗಳು ಬೇಕು, ಅದರ ಜೊತೆಗೆ ಡಾಕ್ಟರುಗಳ ನಿರುದ್ಯೋಗ ಸಮಸ್ಯೆ ಬಹಳ ಹೆಚ್ಚಾಗಿದ್ದ ಕಾಲದಲ್ಲಿ ಅವರಿಗೆ ನೌಕರಿಗಳನ್ನು ಕೊಡದಿದ್ದರೆ, ಅವರಿಗೆ ಕಷ್ಟವಾಗುತ್ತದೆ. ಅವರು 5–6 ವರ್ಷಕಾಲ ಕಷ್ಟಪಟ್ಟು ಕಾಲೇಜಿನಲ್ಲಿ ಓದಿ ಬಂದು ಕೆಲವರು ಪ್ರೈವೇಟ್ ಆಗಿ ಕ್ಲಿನಿಕ್ ಹಾಕಲಿಕ್ಕೆ ಇಷ್ಟಪಟ್ಟರೆ ಹಾಕಬಹುದು, ಇದರಲ್ಲಿ ಯಾವ ರೀತಿಯ ಭಿನ್ನಾಭಿಪ್ರಾಯವಿಲ್ಲ.

ಅದು ಅಲ್ಲದೆ ಸರ್ಕಾರಿ ನೌಕರಿ ಬೇಕು ಎಂದು ಬಂದಂತ ಕಾಲದಲ್ಲಿ ಆದಷ್ಟು ಅಲ್ಲಲ್ಲಿ ಎಲ್ಲಿ ಕೊಡಲಿಕ್ಕೆ ಸಾಧ್ಯ. ಅಲ್ಲಿ ಕೊಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಸರ್ಕಾರದ ಉದ್ದೇಶ ಇದ್ದುದ್ದು ಎಲ್ಲೆಲ್ಲಿ ಸಾಧ್ಯವೋ, ಎಷ್ಟೆಷ್ಟು ಸಾಧ್ಯವೋ, ಎಷ್ಟು ಜನ ನಿರುದ್ಯೋಗಿಗಳು ಇದ್ದಾರೋ ಆ ನಿರುದ್ಯೋಗಿಗಳಿಗೆ ಅಲ್ಲಲ್ಲೇ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕು ಎನ್ನುವ ದೃಷ್ಟಿಯಿಂದ ಅದನ್ನು ಮಾಡಿದ್ದೇವೆ. ಅದಕ್ಕೋಸ್ಕರ ಮೊನ್ನೆ ತಾನೇ ಕೇಂದ್ರಸರ್ಕಾರದ ಪ್ಲ್ಯಾನಿಂಗ್ ಕಮಿಷನ್‌ನವರು ಅನ್‌ಎಂಪ್ಲಾಯ್‌ಮೆಂಟ್ ಪರಿಹಾರಮಾಡಲು ಯಾವ ರೀತಿ ಆಪರ್‌ಚ್ಯೂನಿಟಿ ಒದಗಿಸಿಕೊಡಬೇಕು ಎಂಬ ಬಗ್ಗೆ ಈಗ ಒಂದು ಸ್ಕೀಂ ಮಾಡಿದ್ದಾರೆ. ಅದು ಮಾನ್ಯ ಸದಸ್ಯರಿಗೆ ತಿಳಿದಿರಬಹುದು. ಎಷ್ಟು ಜನ ನಿರುದ್ಯೋಗಿಗಳು ಇದ್ದರೂ ನಾವು ಕೆಲಸ ಕೊಡಲಿಕ್ಕೆ ತಯಾರಿದ್ದೇವೆ ಎಂದು ಒಂದು ಪ್ಲ್ಯಾನ್ ಮಾಡಿ ಅವರಿಗೆ ಬೇಕಾದ ಔಷಧಿ ಸೌಕರ್ಯಗಳನ್ನು ಕೊಟ್ಟು, ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ಕೆಲಸ ಮಾಡಬೇಕು ಎಂದು ತಿಳಿಸಿ, ಅದರೂ ಡಾಕ್ಟರುಗಳು ಹಳ್ಳಿಗಳಿಗೆ ಹೋಗಲಿಕ್ಕೆ ಹಿಂದು ಮುಂದೆ ನೋಡುತ್ತಾರೆ, ಅದಕ್ಕೆ ಕಾರಣ ಇಲ್ಲದೆ ಇಲ್ಲ. ಅವರಿಗೆ ಸರಿಯಾದ ವಸತಿ ಅಂದರೆ ಮನೆಗಳು, ಅಲ್ಲಿ ಯಾವ ಅನುಕೂಲಗಳು ಇಲ್ಲ, ಹೋಗಿ ಇರಲಿಕ್ಕೆ ಸರಿಯಾದ ನೆರಳು ಇಲ್ಲದಂತಹ ಸಮಯದಲ್ಲಿ ನಾವು ಹೇಗೆ ಮಾಡಬೇಕು ಎನ್ನುವುದು ಕೆಲವರ ವಾದ ಇದೆ. ಆದುದರಿಂದ ನಾನು ಸಭೆಯ ಮೂಲಕ ಅಧ್ಯಕ್ಷರೇ, ಕೇಳಿಕೊಳ್ಳುವುದು ಏನು ಅಂದರೆ ನಮ್ಮ ಹಳ್ಳಿಗಾಡಿನಲ್ಲಿರ ತಕ್ಕ ಜನರಿಗೆ ಆರೋಗ್ಯದ ಅನುಕೂಲಗಳು ಸಿಕ್ಕ ಬೇಕು ಎನ್ನುವ ಪರಿಸ್ಥಿತಿಯನ್ನು ಅರಿತುಕೊಂಡು, ಅದನ್ನು ಗಣನೆಗೆ ತೆಗೆದುಕೊಂಡು ಈ ಸಭೆಯ ಮಾನ್ಯ ಸದಸ್ಯರಿಗೂ ಆ ಅಭಿಪ್ರಾಯ ಇದೆಯೆಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ಸರ್ಕಾರದ ಜೊತೆಗೆ ಸಹಕರಿಸಿ ಎಲ್ಲೆಲ್ಲಿ ಆಸ್ಪತ್ರೆಗಳು ಕೇಳುತ್ತಾರೆ ಅಲ್ಲಿ ಪ್ರಥಮಥಃ ಆಸ್ಪತ್ರೆ ಇಡುವುದಕ್ಕೆ ಜಾಗ, ಅಲ್ಲದೆ ಆ ಡಾಕ್ಟರುಗಳು ಮತ್ತು ಸಿಬ್ಬಂದಿ ವರ್ಗ ಏನು ಇದೆ ಅವರು ಇರಲಿಕ್ಕೆ ಮನೆ ಅಥವಾ ವಸತಿ ಅನುಕೂಲ ಮಾಡಿಕೊಡತಕ್ಕ ಜವಾಬ್ದಾರಿ ತಾವು ಹೊರಬೇಕು. ತಾವು ಹೊರದೇ ಇದ್ದರೆ ಆ ಸ್ಥಳದಲ್ಲಿ ಜಾಗ ಸಿಕ್ಕುವುದಿಲ್ಲ ಎಂದು ಅದನ್ನು ಅಕ್ವೈರ್ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಆದರೆ ನಿಮ್ಮ ಊರಿಗೆ ಆಸ್ಪತ್ರೆ ಬರುತ್ತದೆ, ಸಹಕಾರ ಕೊಡಬೇಕು ಎಂದು ಕೇಳಿದಾಗ ಸಹಕಾರ ಕೊಡದೆ ಇದ್ದರೆ ಸರ್ಕಾರಕ್ಕೆ ಕಷ್ಟವಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ

ಎಲ್ಲೆಲ್ಲಿ ಆಸ್ಪತ್ರೆಗಳನ್ನು ಕೇಳುತ್ತಾರೆ, ಸರ್ಕಾರದವರು ದುಡ್ಡುಕೊಡುತ್ತಾರೆ. ಪಿಡಬ್ಲ್ಯೂಡಿಯಿಂದಲೇ ಕಟ್ಟಬೇಕು, ಹೇಗೆ ಕಟ್ಟಬೇಕು ಎನ್ನುವ ನಿಯಮ ಬೇಕಿಲ್ಲ. ನಮ್ಮ ಹಳ್ಳಿಗಳಲ್ಲಿ ಇರತಕ್ಕ ಜನ ಯಾವ ರೀತಿ ಸುಲಭವಾಗಿ ಮನೆಗಳಲ್ಲಿ ವಾಸವಾಗಿರುತ್ತಾರೆ ಅಂಥ ಮನೆಗಳನ್ನು ಕಟ್ಟಲಿಕ್ಕೆ ಎಷ್ಟು ದುಡ್ಡು ಹಿಡಿಯುತ್ತದೆ. ಅಷ್ಟು ದುಡ್ಡು ಸುಮಾರು ನನ್ನ ಅಭಿಪ್ರಾಯದಲ್ಲಿ 10 ಸಾವಿರ ರೂಪಾಯಿಗೂ ಹೆಚ್ಚಿಗೆ ಬೇಕಾಗುವುದಿಲ್ಲ ಎಂದು ತಿಳಿದಿದ್ದೇನೆ ಆ ರೀತಿ ಅವಕಾಶ ಮಾಡಿ ಕೊಡದೆ ಹೋದರೆ ಎಷ್ಟು ಕೋಟಿ ರೂಪಾಯಿ ಖರ್ಚು ಮಾಡಿದರೂ ಹೊಳೆಯಲ್ಲಿ ಹುಣಸೆ ಹಣ್ಣನ್ನು ಕಲಸಿದ ಹಾಗೆ ಆಗುತ್ತದೆ. ಆದುದರಿಂದ ಮಾನ್ಯ ಸದಸ್ಯರು ಸರ್ಕಾರಕ್ಕೆ ಸಹಾಯಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

## ಸರ್ ಮಿರ್ಜಾ ಹಾಗೂ ಸರ್ ಎಂ. ವಿಶ್ವೇಶ್ವರಯ್ಯ ಅವರ ಮಾರ್ಗದರ್ಶನದಲ್ಲಿ:

ಆಸ್ಪತ್ರೆ ಕೊಡಲಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಾರೆ. ಕೇಂದ್ರಸರ್ಕಾರದ ನೀತಿ ಆದರೂ ಪ್ರತಿ 15 ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆ ಇರತಕ್ಕದ್ದು ಎಂದು ಇದೆ. ಈಗ 80 ಸಾವಿರ ಜನಸಂಖ್ಯೆ ಇದ್ದರೆ 15 ಸಾವಿರಕ್ಕೆ ಒಂದು ಮಾಡಬೇಕು ಎನ್ನುವ ದೃಷ್ಟಿ ಇರಬೇಕಾದರೆ ಸರ್ಕಾರದವರು 100 ಹೊಸ ಆಸ್ಪತ್ರೆಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಈಗ ಅದನ್ನು ತಾವು ಉಪಯೋಗಿಸಿಕೊಂಡು ಕೆಲಸಮಾಡಬೇಕು. ಸರ್ಕಾರಕ್ಕೆ ಸಹಾಯಮಾಡಬೇಕು ಮಾನ್ಯ ಸದಸ್ಯರು ಕೆಲಸ ಎಂದರೆ ತಪ್ಪು ತಿಳಿದುಕೊಳ್ಳಬೇಕಾಗಿಲ್ಲ. ಸಹಾಯ ಮಾಡಬೇಕು ಎಂದು ಬೇಡಿಕೊಳ್ಳುತ್ತೇನೆ. ಈಗ ನೌಕರಿ ಕೊಟ್ಟಿದ್ದಾರೆ. ಎಲ್ಲಿ ಇದ್ದರೂ ನೌಕರಿ ಕೊಡುತ್ತಾರೆ ಎಷ್ಟೋ ಜನರಿಗೆ ಕೊಟ್ಟಿದ್ದಾರೆ, ಈಗ ಅದರ ವಿಚಾರದಲ್ಲಿ ದೊಡ್ಡದಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಇನ್ನು ಮುಂದೆಯೂ ಕೊಡುತ್ತಾರೆ, ಕೇಳಲೇಬೇಕಾಗಿಲ್ಲ. ಕೊಡುತ್ತಾರೆ ಅಷ್ಟು ಮಾತ್ರ ಹೇಳುತ್ತೇನೆ. ಜಾತಿ ಆಧಾರದ ಮೇಲೆ ಮಾಡಬೇಕು ಎಂದು ಮನಸ್ಸು ಸರ್ಕಾರಕ್ಕೆ ಇಲ್ಲ, ನಾವು ಅದನ್ನು ಎಂದೂ ಗಮನದಲ್ಲಿಟ್ಟು ಕೊಳ್ಳಲಿಲ್ಲ. ಹಿಂದೆ ಮಾಡಿಲ್ಲ, ಮುಂದೆ ಮಾಡುವುದೂ ಇಲ್ಲ. ಕೆಲವರಿಗೆ ಧರ್ಮಕರ್ಮ ಸಂಯಮವಿಲ್ಲ ಹಿಂದೆ ಅಧಿಕಾರದಲ್ಲಿ ಬರುವಾಗ ರಾಜ್ಯದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಮತ್ತು ಸರ್ ಮಿರ್ಜಾಇಸ್ಮಾಯಿಲ್ ಅವರ ಹತ್ತಿರ ಹೋಗಿ ಏನು ಸ್ವಾಮಿ ದೇಶದ ಜನತೆಗೆ ಯಾವ ರೀತಿ ಆಡಳಿತವನ್ನು ಮಾಡಬೇಕು, ಹೇಗೆ ಮಾಡಿದರೆ ಸರಿ ಹೋಗುತ್ತದೆ ಎಂದು ಅವರ ಹತ್ತಿರ ನಾನು ಇಂಡಸ್ಟ್ರೀಸ್ ಮಿನಿಸ್ಟರ್ ಆಗಿದ್ದಾಗ ಹೋಗಿ ಕೇಳಿದ್ದೆ.

ತೆರೆದ ಹೃದಯದಿಂದ ಅವರು ಹೇಳಿದರು. ನಾನು ಯಾವ ಜಾತೀಯ ಅಭಿಮಾನ ಇಟ್ಟುಕೊಳ್ಳದೆ ಇದ್ದರೂ ನನಗೂ ಜನರು ಏನೇನೋ ಹೇಳುತ್ತಿದ್ದಾರೆ. ಆದರೂ ಜಾತ್ಯಾತೀತ ರಾಷ್ಟ್ರವನ್ನು ಮಾಡತಕ್ಕ ಆಡಳಿತವನ್ನೂ ದೇಶದಲ್ಲಿ ಕೊಡಬೇಕು ಎಂದು ಅವರು ಹೇಳಿದ ರೀತಿ, ಅವರ ಅಡಿದಾವರೆಯಲ್ಲಿ ಪಾಠ ಕಲಿತವರ ಪೈಕಿ

ನಾನು ಒಬ್ಬ. ಬೇರೆಯವರು ಕಲಿತಿದ್ದಾರೋ ಏನೋ ನನಗೆ ಗೊತ್ತಿಲ್ಲ. ನಾನಂತೂ ಜಾತಿವಾದಿಯಲ್ಲ, ನನಗೆ ಆ ಸ್ವಭಾವವಿಲ್ಲ. ನಾನು ಅಧಿಕಾರ ಬಿಟ್ಟು ಹೋಗುವ ಕಾಲದಲ್ಲಿ ಏನು ನಡೆಯಿತೋ ಗೊತ್ತಿಲ್ಲ. ಅದಕ್ಕೋಸ್ಕರ ಬೇರೆಯವರ ವಿಷಯ ನಾನು ಹೇಳುವುದಿಲ್ಲ. ನಾನು ಹೇಳುತ್ತೇನೆ, ನಮ್ಮ ರಾಜ್ಯದಲ್ಲಿ ಜಾತಿಯಲ್ಲಿ ಬ್ರಾಹ್ಮಣರು ಒಳ್ಳೆಯ ನೌಕರಿಯನ್ನು ಹೊಂದಿರುತ್ತಾರೆ ಎಂದು ಹೇಳುವುದು ತಪ್ಪು. ಬ್ರಾಹ್ಮಣರು ಬುದ್ಧಿಯಲ್ಲಿ ಹೆಚ್ಚಿಗೆ ಇದ್ದಾರೆ, ಅವರು ನಮ್ಮ ರಾಜ್ಯದವರೇ, ಬಾಕಿಯವರೂ ನಾವು ಬ್ರಾಹ್ಮಣರ ಲೆವೆಲ್ಲಿಗೆ ಬರುವುದಕ್ಕೆ ಪ್ರಯತ್ನ ಮಾಡಬೇಕು ಎನ್ನತಕ್ಕದ್ದು ನಮ್ಮ ಗುರಿ ಆಗಿರಬೇಕು. ಅವರು ಹಾಗೆ, ಅವರು ಹೀಗೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ನಮ್ಮ ರಾಜ್ಯದಲ್ಲಿ ಇರತಕ್ಕ ಉನ್ನತ ಡಾಕ್ಟರುಗಳು ನೂರಾರು ಜನ ಈ ದೇಶದಲ್ಲಿ ಜಾತಿಯ ಪಿಡುಗನ್ನು ತಡೆಯಲಾರು, ಬೇರೆ ದೇಶಗಳಿಗೆ ಹೋಗಿ, ಸಹಸ್ರಾರು ಮೈಲು ದೂರದಲ್ಲಿ ಸುಖವಾಗಿ ಇದ್ದಾರೆ. ಅವರು ಹೇಳುತ್ತಾರೆ, ಇಲ್ಲಿಗೆ ಬಂದರೆ ಫ್ರೀಯಾಗಿ ವರ್ಕ್ ಮಾಡುವ ಅವಕಾಶ ಇರಬೇಕು ಎಂದು.

ಬೇರೆ ದೇಶದಲ್ಲಿ Merit is the only consideration. If you are a merited man, and if you work hard, for the Doctor, sky is the limit for earning in those countries. ಬರೀ ಅರ್ನಿಂಗ್ ಬೇಡ ಜನಗಳನ್ನು ಅನುಸರಿಸಿ ಹೋಗತಕ್ಕ ವಾತಾವರಣವನ್ನು ಆದರೂ ನಾವು ಕಲ್ಪನೆ ಮಾಡಬೇಕಾದುದು ನಮ್ಮ ಕರ್ತವ್ಯ. ಆದ್ದರಿಂದ ನಾನಾದರೂ ಹೇಳುತ್ತೇನೆ. ಅಡ್ಮಿಷನ್‌ನಲ್ಲಿ ತಮಗೆಲ್ಲಾ ಗೊತ್ತಿದೆ ಆಡಳಿತಾಧಿಕಾರಿಗಳು ಬೈ ಮೆರಿಟ್ ಯಾವನು ಕಷ್ಟಪಟ್ಟು ಓದುತ್ತಾನೆ, ಯಾವನಿಗೆ ಹೆಚ್ಚು ಮಾರ್ಕ್ಸ್ ಇದೆ ಅವನನ್ನು ಆರಿಸುತ್ತಾರೆ. ಅವನಿಗೆ ಸೀಟು ಹೋಗುತ್ತದೆ. ಈ ದೃಷ್ಟಿಯಿಂದ ನಾವು ಮಾಡತಕ್ಕ ಅಡ್ಮಿಷನ್, ನಾವು ಸ್ಯಾಂಕ್ಷನ್ ಮಾಡಿದರೆ ಹ್ಯಾವ್‌ನಾಟ್ಸ್ ಯಾವ ಸ್ಟ್ಯಾಂಡರ್ಡ್‌ಗೆ ಬರಬೇಕೆಂದು ಹೇಳುತ್ತಾರೆ. ಅಂತಹವರಿಗೆ ನಾವು ಅವರು ಹೆಚ್ಚಿನ ಕ್ಲಾಸಿನಲ್ಲಿ ಪಾಪ್ ಆಗದಿದ್ದರೂ ಚಿಂತೆಯಿಲ್ಲ. ಹಳ್ಳಿಗಾಡಿನಿಂದ ಬಂದಿರತಕ್ಕ ಬ್ಯಾಕ್‌ವರ್ಡ್‌ನ ಕ್ಲಾಸ್‌ನವಗೆ ಆದ್ಯ ಗಮನಕೊಟ್ಟು ಅಡ್ಮಿಷನ್ ಮಾಡಿ ಮುಂದೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ಸೋಷಿಯಲಿಸ್ಟಿಕ್ ಪ್ಯಾಟರನ್ ಪ್ರಕಾರ ಹಿಂದುಳಿದವರು ಮುಂದಕ್ಕೆ ಬರಬೇಕು ಎನ್ನುವುದರಲ್ಲಿ ನಮಗೂ ನಿಮಗೂ ಯಾವ ಭಿನ್ನಾಭಿಪ್ರಾಯವಿಲ್ಲ. ಇದನ್ನೇ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಹೋದರೆ ಮೆಷರಿಂಗ್ ರಾಡ್ ಇಟ್ಟುಕೊಂಡಿರುತ್ತಾರೆ, 58 ಬಂದವನಿಗೆ ಕೊಡುತ್ತಾರೆ, 57 ಬಂದವನಿಗೆ ಮನೆಗೆ ಹೋಗು ಎಂದು ಹೇಳುತ್ತಾರೆ. ಇದನ್ನು ಯಾವ ದೃಷ್ಟಿಯಿಂದ ಬದಲಾವಣೆ ಮಾಡಲಿಕ್ಕೆ ಹೋದರೂ ಹಿಂದುಳಿದ ಪಂಗಡದವರಿಗೆ ಅನ್ಯಾಯವಾಗಬಾರದು. ಟ್ಯಾಲೆಂಟೆಡ್ ಯಾರು ಇದ್ದಾರೆ ಅವರಿಗೆ ತೊಂದರೆ ಆಗಬಾರದು. ಆ ದೃಷ್ಟಿಯಿಂದ ತೆಗೆದುಕೊಂಡು ಹೋಗಬೇಕು ಎನ್ನುವುದೇ ನನ್ನ ಉದ್ದೇಶ. ಈ ದೃಷ್ಟಿಯಿಂದಲೇ ಡಿಪಾರ್ಟ್‌ಮೆಂಟ್‌ಗಳಲ್ಲಿ ಅನೇಕ ನೌಕರಿಗಳನ್ನು,

ನೂರಾರು ಸಂಖ್ಯೆಯಲ್ಲಿ ಕೊಟ್ಟಿದ್ದೇವೆ. ಶೆಡ್ಯೂಲ್ಡ್‌ಕ್ಯಾಸ್ಟ್ ಮತ್ತು ಶೆಡ್ಯೂಲ್ಡ್‌ಟ್ರೈಬ್ಸ್ ಎನ್ನತಕ್ಕ ಯಾವ ಅತಿ ಹಿಂದುಳಿದರತಕ್ಕ ನಿಮ್ನ ವರ್ಗ ಇದೆ ಅವರಲ್ಲಿ ಎಷ್ಟು ಜನರು ಬಂದರೂ ನೌಕರಿ ಖಾಲಿ ಇದ್ದರೆ ಮೊದಲು ಅವರಿಗೆ ಕೊಡಬೇಕೆಂದು ಹೇಳುತ್ತೇನೆ. ನನ್ನ ಹತ್ತಿರ ಲಿಸ್ಟ್ ಇದೆ. ಈಗ ಮಾಡಿರತಕ್ಕ ಅಡ್ಮಿಷನ್ ಪ್ರಕಾರ ಇವೊತ್ತಿಗೂ ಅವರಿಗೆ 5.5 ಪರ್ಸೆಂಟ್ ಹೆಚ್ಚಿಗೆ ಕೊಡಲಿಕ್ಕೆ ಆಗಲಿಲ್ಲ. ಅವರಿಗೆ 18 ಪರ್ಸೆಂಟ್ ಕೊಡಬೇಕು ಎಂದೂ ಇದ್ದರೂ ಒಂದಾನೊಂದು ಕಾಲದಲ್ಲಿ ಅಪ್ಲಿಕೇಷನ್ಸ್ ಇರುತ್ತಾ ಇರಲಿಲ್ಲ. ಈಗ ನನಗೆ ಸಂತೋಷವಾಗುತ್ತಿದೆ, ಅಪ್ಲಿಕೇಷನ್ಸ್ ಬರುತ್ತಾ ಇವೆ, ನಾವು ಇದನ್ನು ಸಮಾಜವಾದ ದೃಷ್ಟಿಯಿಂದ ನೋಡಬೇಕು, ಎನ್ನತಕ್ಕದ್ದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಡಿಪಾರ್ಟ್‌ಮೆಂಟಲ್ ಪ್ರಮೋಷನ್ಸ್ ಮಾಡಲಿಕ್ಕೆ ನಾನು ತಮಗೆ ತಿಳಿಸಿದೆ, ಒಂದು ಸಾವಿರ ರೂಪಾಯಿಯವರೆಗೆ ಹೋಗತಕ್ಕ ಕೆಲವು ನೌಕರಿಗಳು ಅಂತಹವು ಇವೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಇವೊತ್ತಿಗೂ ಕೆಲವು ಕಾಲೇಜುಗಳಿಗೆ ರೆಕಗ್‌ನಿಷನ್ ಕೊಟ್ಟಿಲ್ಲ. ಅವರು ರೆಕಗ್‌ನೇಷನ್ ಕೊಡದೆ ಇದ್ದರೆ ಅಲ್ಲಿ ಓದಿರತಕ್ಕ ವಿದ್ಯಾರ್ಥಿಗಳಿಗೆ ಮುಂದೆ ಅನಾನುಕೂಲವಾಗುತ್ತದೆ. ಉದಾಹರಣೆಗೆ ಬಳ್ಳಾರಿಗೆ ರೆಕಗ್‌ನೇಷನ್ ಕೊಟ್ಟಿಲ್ಲ, ಕಾರಣ ಏನು ಎಂದರೆ ಅಲ್ಲಿ ಯಾವ ಸ್ಟ್ಯಾಫ್ ಪ್ಯಾಟ್ರನ್ ಇರಬೇಕು, ಆ ಪ್ಯಾಟ್ರನ್ ಪ್ರಕಾರ ಹುದ್ದೆಗಳನ್ನು ತುಂಬಿಲ್ಲ, ಆದುದರಿಂದ ಕೊಡುವುದಿಲ್ಲ ಎಂದು ಹೇಳಿದ ಮೇಲೆ ಈ ವರ್ಷ ಅಲ್ಲಿ ಪೋಸ್ಟ್ ಗ್ರ್ಯಾಜ್ಯುಯೇಟ್ ಕೋರ್ಸ್ ಇದೆ. ಬಳ್ಳಾರಿ ಮುಂತಾದ ಮೆಡಿಕಲ್ ಕಾಲೇಜುಗಳಲ್ಲಿ ನೇಮಕವಾದ ಸ್ಟ್ಯಾಫ್ ಇದ್ದರೂ ಖಾಲಿ ಜಾಗಗಳಿಗೆ ನೇಮಕ ಮಾಡತಕ್ಕ ಕಾಲದಲ್ಲಿ ಅನೇಕ ದೊಡ್ಡ ದೊಡ್ಡ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಹೊರಟಿದ್ದೇವೆ.

ಈ ಮೆಡಿಕಲ್ ಡಿಪಾರ್ಟ್‌ಮೆಂಟ್‌ನ ಬೆಳವಣಿಗೆ ಬಗ್ಗೆ ಮಾನ್ಯ ಸಹೋದ್ಯೋಗಿಗಳು ಕೊಟ್ಟಂಥ ಸಲಹೆಗಳನ್ನು ತೆರೆದ ಹೃದಯದಿಂದ ನೋಡುವುದಲ್ಲದೆ ಎಷ್ಟೇ ಹಣಕಾಸಿನ ತೊಂದರೆ ಇದ್ದಾಗ್ಯೂ ಕೂಡ ಹಣದ ಮಂಜೂರಾತಿ ಕೊಟ್ಟು ವಿದ್ಯಾರ್ಥಿಗಳನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬಗ್ಗೆ ನಾನು ಹಾಕಿದ ಪ್ರಪೋಸಲ್ಸ್ ಗಳನ್ನು ನಮ್ಮ ಸಹೋದ್ಯೋಗಿಗಳು ಅಕ್ಸೆಪ್ಟ್ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೋಸ್ಕರ ಅವರಿಗೆ ನಾನು ಋಣಿಯಾಗಿದ್ದೇನೆ ಮತ್ತು ಅವರನ್ನು ಅಭಿನಂದಿಸುತ್ತೇನೆ.

ಇನ್ನು ನಿನ್ನೆ ದಿವಸ ಶ್ರೀಮಾನ್ ಟಿ.ಆರ್. ಶಾಮಣ್ಣನವರು ಮತ್ತು ಶ್ರೀಮಾನ್ ಸಿ.ಎಂ. ಅರ್ಮುಗಂರವರು ಮೆಡಿಕಲ್ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್ ಬಗ್ಗೆ ಹೇಳಿದರು. ಈ ಬಗ್ಗೆ ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಈ ವಿಚಾರದಲ್ಲಿ ಒಂದು ಬಿಲ್ ತಯಾರಾಗುತ್ತಾ ಇದೆ. ಅದು ಸಭೆಯ ಮುಂದೆ ಬರುತ್ತದೆ. ಅವಾಗ ತಮ್ಮ ಸಲಹೆಯನ್ನು ಕೊಡಬಹುದು. ಇದನ್ನು ಮಾಡಿ ನಾನು



WD-H-035-17

ಹೊಗಳಿಸಿಕೊಳ್ಳಬೇಕೆಂದಲ್ಲ. ಇದರ ಉದ್ದೇಶ ಏನೆಂದರೆ ಮೈಸೂರು ರಾಜ್ಯದಲ್ಲಿ ಇದು ಸರಿಯಾಗಿ ಬೆಳವಣಿಗೆಯಾಗಲಿ ಎನ್ನುವ ಉದ್ದೇಶ, ನಮ್ಮ ರಾಜ್ಯದಲ್ಲಿ ಸುಮಾರು 15 ಸಾವಿರ ವಿದ್ಯಾರ್ಥಿಗಳಿಗೆ ಮೆಡಿಕಲ್ ಎಜುಕೇಷನ್ ಯಾವ ರೀತಿಯಾಗಿ ಒದಗಿಸಬೇಕು ಅನ್ನುವುದನ್ನು ನೋಡಬೇಕು. ಇದು ನೆಟ್ ಟೈ ಕಾಲರ್ ಎಜುಕೇಷನ್ ಅಷ್ಟೇ ಅಲ್ಲ, ಅವರು ನಿಜವಾಗಿಯೂ ಹಳ್ಳಿಗಾಡಿನವರ ಜೊತೆಯಲ್ಲಿ ಓಡಾಡಿ, ಆ ಜನತೆಯ ಜೊತೆಗೆ ಬೆರೆತು ಅವರು ಕಲಿತಿರತಕ್ಕಂಥ ವಿದ್ಯೆಯನ್ನು ಆ ಜನತೆಗೆ ಕೊಡಬೇಕು. ಇದರ ಬಗ್ಗೆ ಸಂಬಂಧಪಟ್ಟ ಒಂದು ಕರಿಕ್ಯೂಲಮ್ ಮತ್ತು ಸಿಲಬಸ್ ಬದಲಾವಣೆಯಾಗಬೇಕು. ಈ ಕಾಲೇಜುಗಳಲ್ಲಿ ಡಿಗ್ರಿ ಕೊಡುವುದಕ್ಕೆ ಮುಂಚೆ ಹುಡುಗರು ಆ ಹಳ್ಳಿಗಳ ಜನರ ಜೊತೆಯಲ್ಲಿ ಹೋಗಿ ಅವರ ಸಂಪರ್ಕ ಇಟ್ಟುಕೊಂಡು ಅವರ ಜೊತೆಯಲ್ಲಿ ಹೊಂದಿಕೊಂಡು ಕೆಲಸ ಮಾಡಬೇಕು ಎನ್ನುವುದನ್ನು ಯೋಚನೆ ಮಾಡುತ್ತಿದೆ.

ಅದರ ಜೊತೆಗೆ ಅಲೋಪಥಿಕ್ ಸಿಸ್ಟಂ ಒಂದೇ ಅಲ್ಲ, ಇಂಡಿಯನ್ ಮೆಡಿಸಿನ್ ಸಿಸ್ಟಂ ಆದ ಆಯುರ್ವೇದ, ಯುನಾನಿ ಮತ್ತು ಅಲೋಪಥಿ ಇದೂ ಕೂಡ ಬೆಳವಣಿಗೆ ಆಗಬೇಕು. ಶ್ರೀಮಾನ್ ಟಿ.ಆರ್ ಶಾಮಣ್ಣನವರು ಮತ್ತು ಶ್ರೀಮಾನ್ ಎಂ.ವಿ. ರುದ್ರಪ್ಪನವರು ನ್ಯಾಚುರೋಪತಿ ವಿಷಯವಾಗಿ ಹೇಳಿದರು. ಅದನ್ನೂ ಕೂಡ ಇದರಲ್ಲಿ ಸೇರಿಸಬೇಕಾಗುತ್ತದೆ. I thank that treatment is best, no medicine is used, ಇದು ನನ್ನ ಸ್ವಂತ ಅನುಭವ. ಕೆಲವರು ಈಗ ತಾನೆ ಬಂದಿದ್ದೀರಿ. ಈಗತಾನೇ ತಿಳಿದುಕೊಂಡಿದ್ದೀರಿ. ಈವೊತ್ತಿನ ದಿವಸ ಇರತಕ್ಕಂಥ ಸಮಾಜದಲ್ಲಿ ಏನಾಗಿದೆ ಎಂದರೆ ನಾವು ಮಾಡತಕ್ಕಂಥ ಜೀವನ ಮತ್ತು ನಾನು ಮಾಡತಕ್ಕಂಥ ವಾಸದಲ್ಲಿ ಒಂದು ಇಂಜಕ್ಷನ್ ತೆಗೆದುಕೊಂಡರೆ ಸಾಲುವುದಿಲ್ಲ. 10 ಇಂಜೆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಈ ನವನಾಗರೀಕ ಜೀವನದಲ್ಲಿ ಈ ರೀತಿ ಪರಿಸ್ಥಿತಿ ಇದೆ. ಈ ಬಗ್ಗೆ ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ನಾನಾದರೂ ಕೂಡ ಹೇಳುತ್ತೇನೆ. ಆದುದರಿಂದ ಈ ನೇಚರ್‌ಕ್ಯೂರ್ ಏನು ಇದೆ ಅದು ಬಹಳ ಸಾಧುವಾದುದು. ಇದನ್ನು ಬೇಕಾದರೆ ಪರೀಕ್ಷೆ ಮಾಡಿ ನೋಡಿ ಇದನ್ನು ನಾವು ಅಲ್ಲಗಳೆಯುವ ಹಾಗಿಲ್ಲ, ಡಾ. ಮೇಲುಕೋಟೆಯವರು ಇದಕ್ಕೆ ಸಂಬಂಧ ಪಟ್ಟ ಹಾಗೆ ಒಂದು ರಿಪೋರ್ಟನ್ನು ಈಗತಾನೆ ಕೊಟ್ಟಿದ್ದಾರೆ. ಅದು ಬಹಳ ಚೆನ್ನಾಗಿದೆ, ಅದರಲ್ಲಿರತಕ್ಕಂಥಾದ್ದು ನಮ್ಮ ಇಂಡಿಯನ್ ಸಿಸ್ಟಂಸ್ ಆಫ್ ಮೆಡಿಸಿನ್ನನ್ನು ಇಂಪ್ರೂ ಮಾಡಬೇಕೆಂಬ ವಿಚಾರ. ಅದರ ಜೊತೆಗೆ ಬಾಕಿ ಸಿಸ್ಟಿಂಸ್ ಆಫ್ ಮೆಡಿಸಿನ್ಸ್ ಕೂಡ ಇರಬೇಕು. ಹಿಂದೆ ಇದ್ದ ಹಾಗೆ ಕೆಲವರಿಗೆ ಈ ಬಗ್ಗೆ ಇನ್ನೂ ಒಳ್ಳೇ ಅಭಿಪ್ರಾಯ ಇದೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದು ಏನೆಂದರೆ ಧಾನ ಧರ್ಮ ಮಾಡಬೇಕು. ಒಂದು ಆಸ್ಪತ್ರೆ ಒಂದು ಸ್ಕೂಲ್ ಕಟ್ಟಿಸಿಕೊಡಬೇಕು ಎನ್ನುವ ಮನೋಭಾವನೆ ಇದೆ.

ನಾವು ಉಳ್ಳವರು ಎಂದು ಏನು ಹೇಳುತ್ತೇವೆಯೋ ಅವರು ಮುಂದೆ ಬಂದು 1 ಲಕ್ಷ 2 ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳುತ್ತಾರೆ. ಇದಕ್ಕೆ ಸಮಾಜದ ಸಹಕಾರವೂ ಬೇಕು. ಉದಾಹರಣೆಗೆ ಗೌರಿಬಿದನೂರಿನಲ್ಲಿ ಆಸ್ಪತ್ರೆಯನ್ನು ಸ್ಥಾಪಿಸಲು ಅಲ್ಲಿ ಪ್ರತಿನಿಧಿಗಳ ಸಹಾಯದಿಂದ 2.50–3ಲಕ್ಷ ರೂಪಾಯಿಗಳು ದಾನ ಬಂದಿದೆ, ಹಾಗೆ ದುಡ್ಡು ಇರತಕ್ಕಂಥದವರು ಆಸ್ಪತ್ರೆಗಳನ್ನು ಕಟ್ಟಿಸಬೇಕೆಂದು ಡೊನೇಷನ್ ಕೊಡುವುದಕ್ಕೆ ಪ್ರಯತ್ನ ಪಡುತ್ತಾರೆ. ಆದುದರಿಂದ ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವಿರೋಧ ಪಕ್ಷದವರು ಸರ್ಕಾರವನ್ನು ಸದಾ ಬಯ್ಯುವುದರಲ್ಲಿ ಕಾಲಹರಣ ಮಾಡದೆ ವರ್ಷಕ್ಕೆ ಈ ರೀತಿ 5 ಆಸ್ಪತ್ರೆಗಳ ಬಿಲ್ಡಿಂಗ್‌ಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡಿ. ಅದರಿಂದ ನಿಮ್ಮ ಕ್ಷೇತ್ರಕ್ಕೆ ಹೆಚ್ಚಿನ ಸಹಾಯ ಮಾಡಿದಂತಾಗುವುದಲ್ಲದೇ ನಿಮಗೂ ಒಳ್ಳೆಯದಾಗುತ್ತದೆ ಎಂದು ನಾನಾದರೂ ತಿಳಿದಿದ್ದೇನೆ.

**ಶ್ರೀ ಹೆಚ್.ಎಸ್. ಸಿದ್ದಪ್ಪ**– ಹಾಗಾದರೆ ನಿಮ್ಮ ಕೆಲಸ ಏನು?

**ಶ್ರೀ ಹೆಚ್. ಸಿದ್ದವೀರಪ್ಪ**– ನಮ್ಮ ಕೆಲಸ ಏನು ಅಂದರೆ ಆಸ್ಪತ್ರೆ ಸ್ಥಾಪಿಸಲು ಸ್ಯಾಂಕ್ಷನ್ ಮಾಡುವುದು ಮತ್ತು ಅದನ್ನು ದೀಪ ಹಚ್ಚಿಸಿಕೊಂಡು ನಡೆಸಿಕೊಂಡು ಹೋಗುವುದು.

ಇನ್ನು ಈವೊತ್ತಿನ ದಿವಸ ಅನೇಕ ರೀತಿಯ ಸ್ಪೆಷಲ್ ಹಾಸ್ಪಿಟಲ್ಸ್ ಮಾಡಬೇಕು ಎನ್ನುವ ಯೋಚನೆ ನಮಗೆ ಇದೆ. ಈ ಕುಷ್ಠರೋಗ ಆಗಲಿ, ಟ್ಯುಬರ್‌ಕ್ಯೋಲೋಸಿಸ್ ಆಗಲಿ, ಮೆಂಟಲ್ ಸೈನ್ಸಸ್ ಆಗಲಿ ಇವುಗಳಿಗೆ ಸಂಬಂಧಪಟ್ಟ ಸೈಕಿಯಾಟ್ರಿಕ್ ಬ್ರ್ಯಾಂಚ್ ಪ್ರತಿಯೊಂದು ಜಿಲ್ಲೆಯಲ್ಲೂ ಇರಬೇಕು ಎಂದು ನಾವು ಪ್ರಯತ್ನಸುತ್ತಿದ್ದೇವೆ. ಇದರ ಜೊತೆಗೆ ಬಹಳ ವರ್ಷದಿಂದಲೂ ನಮ್ಮಲ್ಲಿ ಮಲೇರಿಯಾ ರೋಗ ಇರಲಿಲ್ಲ. ಅದನ್ನು ಪೂರ್ಣವಾಗಿ ನಾವು ಮರೆತಿದ್ದೆವು. ಈಗ ಮತ್ತೆ ಅದು ಉಲ್ಬಣಾವಸ್ಥೆಗೆ ಬರುತ್ತಾ ಇದೆ. ಆದುದರಿಂದ ಅದರ ನಿವಾರಣೆಗೆ ಹೆಚ್ಚು ಸ್ಟ್ಯಾಪ್ ಮಾಡಿ, ಅದನ್ನು ತಡೆಗಟ್ಟಲು ಹೆಚ್ಚು ಹಣ ಖರ್ಚು ಮಾಡಬೇಕು. ಅದನ್ನು ತಡೆಗಟ್ಟಲು ನಾವು ವಿಧಾನಗಳನ್ನು ಕಂಡುಹಿಡಿಯಬೇಕು. ಅದು ನಾವು ಗಟ್ಟಿಯೋ, ನೀವು ಗಟ್ಟಿಯೋ ಅಂದುಕೊಂಡು ಮುಂದೆ ಬರುವುದಕ್ಕೆ ಪ್ರಯತ್ನ ಮಾಡುತ್ತಾ ಇದೆ. ಈಗ ಇದು ನಮಗೆ ಬಹಳ ದೊಡ್ಡ ಸಮಸ್ಯೆಯಾಗಿ ಬಂದು ನಮ್ಮನ್ನು ಬಹಳ ಸಂಕಟಕ್ಕೆ ಈಡು ಮಾಡಿದೆ. ಆದುದರಿಂದ ಈ ಮಲೇರಿಯಾ ರೋಗ ನಿವಾರಣೆಗೆ ಎಲ್ಲಾ ಸರ್ಕಾರಗಳೂ ಇದಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ನಾವು ಕೂಡ ಇದನ್ನು ತಡೆಗಟ್ಟುವುದಕ್ಕೆ ಈ ವರ್ಷದ ಬಡ್ಜೆಟ್‌ನಲ್ಲಿ 4 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಹಣವನ್ನು ಇಟ್ಟಿದ್ದೇವೆ. ಅದರ ಜೊತೆಗೆ ಈ ಮಲೇರಿಯಾವನ್ನು ಕಂಟ್ರೋಲ್ ಮಾಡಬೇಕು. ಈ ಮಲೇರಿಯಾ ರೋಗ ಬಂದರೆ ನಮ್ಮ ಜನರನ್ನು ನಿಶ್ಯಕ್ತರನ್ನಾಗಿ ಮಾಡಿಬಿಡುತ್ತದೆ. ಅವರು ಯಾವ

ಕೆಲಸಕ್ಕೂ ಮುಂದೆ ಬಂದು ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ ಎಂದು ನನಗೆ ಅನಿಸುತ್ತದೆ.

ಇನ್ನು ತಮಗೆ ಮೊದಲೇ ಹೇಳಿದ ಹಾಗೆ ಈ ಔಷಧಿಗಳನ್ನು ಕೊಂಡುಕೊಳ್ಳುವ ವಿಚಾರದಲ್ಲಿ ಹೇಳಿದ್ದೇನೆ. ಈ ಬಗ್ಗೆ ಅವರುಗಳ ಲೆಕ್ಕಾಚಾರವನ್ನು ತರಿಸಿ ನೋಡಿದ್ದೇನೆ. ಕೆಲವು ತಾಲ್ಲೂಕು ಆಸ್ಪತ್ರೆಗಳಲ್ಲಿ ಇಡೀ ವರ್ಷದಲ್ಲಿ 3 ಕಾಸಿನಷ್ಟೂ ಔಷಧಿ ಹೋಗಿರಲಿಲ್ಲ. ಈ ರೀತಿ ಬಹಳ ಅನ್ಯಾಯ ನಡೆಯುತ್ತಾ ಇತ್ತು. ಈಗ ಇದಕ್ಕಾಗಿ 3 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಆದುದರಿಂದ ಈ ಬಗ್ಗೆ ಒಂದು ಸ್ಟ್ರೀಮ್‌ಲೈನ್ ಮಾಡಿ ಪ್ರತಿಯೊಂದು ಆಸ್ಪತ್ರೆಗೂ ಒಂದು ನಿಗಧಿಯಾದ ಔಷಧಿಗಳು ಹೋಗಬೇಕು ಎನ್ನುವ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಒಟ್ಟು ಕೊಂಡುಕೊಳ್ಳತಕ್ಕ ಔಷಧಿಗಳಲ್ಲಿ 1/3ಪಾಲಾದರೂ ಕೂಡ 1200 ರೂರಲ್ ಆಸ್ಪತ್ರೆಗಳಿಗೆ ಹೋಗಲೇಬೇಕು ಎನ್ನುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ರೀತಿ ಒಂದು ಸ್ಟ್ರೀಮ್ ಲೈನ್ ಮಾಡಿ ಒಂದೇ ಪ್ಯಾಟ್ರನ್ ಇರಬೇಕು ಅಂತ ಮಾಡಿದ್ದೇವೆ. ಕನಿಷ್ಠ ಪಕ್ಷ ಒಂದು ರೂರಲ್ ಡಿಸ್ಪೆನ್ಸರಿಗೆ 10 ಸಾವಿರ ರೂಪಾಯಿಗಳಷ್ಟು ಔಷಧಿಯನ್ನು ಕೊಡಬೇಕು ಎಂದು ಮಾಡಿದ್ದೇವೆ. ಅದನ್ನು ಅವರು ಸರಿಯಾಗಿ ಉಪಯೋಗಿಸುತ್ತಾರೋ ಇಲ್ಲವೇ ಎನ್ನುವುದನ್ನು ನಾವು ವಾಚ್ ಮಾಡುತ್ತೇವೆ. ನೀವು ಬಡ್ಜೆಟ್ ಸ್ಯಾಂಕ್ಷನ್ ಮಾಡಿ ಹೊರಟುಹೋಗಬಹುದು. ಆಮೇಲೆ ಇದರ ಮೇಲೆ ಅಷ್ಟು ಕಂಟ್ರೋಲ್ ಇರುವುದಿಲ್ಲ. ನಾವು ಈ ಬಗ್ಗೆ ಹೆಚ್ಚು ವಿಚಾರ ಮಾಡಬೇಕಾಗುತ್ತದೆ. ನಾವು ಈ ಬಗ್ಗೆ ಪ್ರತಿ ತಿಂಗಳೂ ಆ ಔಷಧಿಗಳು ಸರಿಯಾಗಿ ತಲುಪುತ್ತದೆಯೇ ಎನ್ನುವುದನ್ನು ವಾಚ್ ಮಾಡಬೇಕಾಗುತ್ತದೆ. ಎಲ್ಲೆಲ್ಲಿ ಮೆಡಿಸನ್ ಹೋಗಿಲ್ಲ, ಎಲ್ಲೆಲ್ಲಿ ಅನ್ಯಾಯವಾಗುತ್ತಿದೆ, ಎಲ್ಲಿ ಔಷಧಿಗಳು ತಲುಪಬೇಕೋ ಅಲ್ಲಿಗೆ ಅದು ಹೋಗದೆ ಬೇರೆ ಕಡೆ ಹೋಗುವ ಸಂದರ್ಭಗಳು ಏನಾದರೂ ಇದ್ದರೆ ಅದನ್ನು ಕೂಡ ನಾವು ವಾಚ್ ಮಾಡಬೇಕಾಗುತ್ತದೆ. ಎಲ್ಲೆಲ್ಲಿ ಮೆಡಿಸನ್ ಹೋಗಿಲ್ಲ, ಎಲ್ಲೆಲ್ಲಿ ಅನ್ಯಾಯವಾಗುತ್ತಿದೆ, ಎಲ್ಲಿ ಔಷಧಿಗಳು ತಲುಪಬೇಕೋ ಅಲ್ಲಿಗೆ ಅದು ಹೋಗದೆ ಬೇರೆ ಕಡೆ ಹೋಗುವ ಸಂದರ್ಭಗಳು ಏನಾದರೂ ಇದ್ದರೆ ಅದನ್ನು ಕೂಡ ನಾವು ವಾಚ್ ಮಾಡಬೇಕಾಗುತ್ತದೆ. ಈ ಬಗ್ಗೆ ನಾವು ಬಲವಾದ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎಂದು ತಿಳಿಸಲು ಅಪೇಕ್ಷೆ ಪಡುತ್ತೇನೆ.

ಇದರ ಜೊತೆಗೆ ಹಾಸ್ಪಿಟಲ್ ಫಾರ್ಮಸಿನಲ್ಲಿ ಹೊಸದಾದ ಸ್ಕೀಂ ಹಾಕಿದ್ದೇವೆ. ನಮ್ಮಲ್ಲಿ ಎಷ್ಟೋ ಜನ ತಜ್ಞರಿದ್ದಾರೆ. ಅವರಿಗೆ ಕೆಲಸ ಕೊಡುವುದಲ್ಲದೆ, ಕ್ವಾಲಿಟಿ ಕಂಟ್ರೋಲ್ ಕೂಡ ನಮಗೆ ಬರುತ್ತದೆ. ಅದರ ಪ್ರಕಾರ ಕೆಲಸ ಕೊಡುವುದಲ್ಲದೆ, ಕ್ವಾಲಿಟಿ ಕಂಟ್ರೋಲ್ ಕೂಡ ನಮಗೆ ಬರುತ್ತದೆ. ಅದರ ಪ್ರಕಾರ ಹಾಸ್ಪಿಟಲ್ ಫಾರ್ಮಸೀಜ್‌ನಲ್ಲಿ ಕೆಲವೊಂದು ದಿನಚರಿಯ ಔಷಧಿಗಳನ್ನು ನಾವು ತಯಾರು ಮಾಡುತ್ತಿದ್ದೇವೆ. ಪ್ರತಿಯೊಂದು ಮೆಡಿಕಲ್ ಕಾಲೇಜಿಗೂ ಒಂದು ಫಾರ್ಮಸಿ ಅಟ್ಯಾಚ್

ಮಾಡಿದ್ದೇವೆ. ಈಗಾಗಲೇ ಕೆಲವನ್ನು ಮಾಡುತ್ತಿದ್ದೇವೆ. ನನಗೆ ಬಂದಿರತಕ್ಕ ರಿಪೋರ್ಟ್ ಪ್ರಕಾರ ಸುಮಾರು ಒಂದು ವರ್ಷಕ್ಕೆ ಇದರಿಂದ 50 ಲಕ್ಷ ರೂಪಾಯಿಗೆ ಕಡಿಮೆ ಇಲ್ಲದೆ ಉಳಿತಾಯವಾಗುತ್ತದೆ. ಅದರ ಜೊತೆಗೆ ಒಳ್ಳೆಯ ಕ್ವಾಲಿಟಿ ಔಷಧಿ ಸಹ ಸಿಕ್ಕುತ್ತದೆ ಎನ್ನುವುದನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕು.

ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮಾನ್ ನಾಯ್ಡು ಅವರು ಕುಟುಂಬ ಯೋಜನೆಯ ವಿಚಾರವಾಗಿ ಹೇಳಿದರು. ಫ್ಯಾಮಿಲಿ ಪ್ಲಾನಿಂಗ್ ನಮ್ಮ ರಾಷ್ಟ್ರದ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಅದರ ವಿಚಾರದಲ್ಲಿ ನಾವು ಈಗ ಬೇರೆ ಯಾವ ದೃಷ್ಟಿಯಿಂದಲೂ ನೋಡುವುದಕ್ಕಾಗುವುದಿಲ್ಲ. ಇದರ ಅವಶ್ಯಕತೆಯನ್ನು ಕಂಡು ಫ್ಯಾಮಿಲಿ ಪ್ಲಾನಿಂಗ್ ಕೆಲಸಕ್ಕೆ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ವರ್ಷಕ್ಕೆ ಸುಮಾರು ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಇದರ ಜೊತೆಗೆ ವರ್ಲ್ಡ್ ಬ್ಯಾಂಕ್‌ನವರು ಹಾಕಿರತಕ್ಕ ಸ್ಕೀಂ ಆಗಸ್ಟ್ ತಿಂಗಳಿನಿಂದ ನಮ್ಮಲ್ಲಿ ಜಾರಿಯಲ್ಲಿದೆ, ಫ್ಯಾಮಿನಿ ಪ್ಲಾನಿಂಗ್‌ನಲ್ಲಿ ಯಾವ ಯಾವುದೋ ದೃಷ್ಟಿಯನ್ನು ತಂದು ಕೆಲವು ಸ್ನೇಹಿತರು ಒಂದು ಜನಾಂಗದ ಜನಸಂಖ್ಯೆ ಜಾಸ್ತಿಯಾಗುತ್ತದೆ ಎನ್ನತಕ್ಕ ವಾದವನ್ನು ನಮ್ಮ ಮುಂದೆ ಇಟ್ಟರು. ನನ್ನ ಹತ್ತಿರ ಇರುವ ಲೆಕ್ಕದಲ್ಲಿ ಆ ರೀತಿಯ ಟೀಕೆಗೆ ಅವಕಾಶವಿಲ್ಲ ಎಂದು ನನಗಾದರೂ ಅನ್ನಿಸುತ್ತದೆ.

**ಕಾಗೋಡು ತಿಮ್ಮಪ್ಪ**: ಸಂಶಯಗಳು ಸರ್ವೇ ಸಾಧಾರಣವಾಗಿ ಬರುತ್ತಿವೆ, ಇಂತಹ ಕೆಲವು ಅಂಶಗಳ ಬಗ್ಗೆ ತಾವು ಇಲ್ಲಿ ದೀರ್ಘವಾಗಿ ಆಲೋಚನೆ ಮಾಡಬೇಕು ಮತ್ತು ಹಾಗೆ ಮಾಡದೇ ಹೋದರೆ ಮುಂದೆ ಈ ಸಂಶಯವೇ ದೊಡ್ಡದಾಗಿ ಬೆಳೆಯುತ್ತದೆ.

**ಶ್ರೀ ಎಚ್. ಸಿದ್ದವೀರಪ್ಪ:** ಸಂಶಯ ಎನ್ನುವ ಪೆಡಂಭೂತಕ್ಕೆ ಹೋಗಬೇಡಿ ಮತ್ತು ಇಂತಹ ಸಾಮ್ರಾಜ್ಯದಲ್ಲಿ ತೇಲಾಡಬೇಡಿರಿ.

**ಶ್ರೀ ಹೆಚ್.ಟಿ. ಕೃಷ್ಣಪ್ಪ**: ಇಂದು ಮುಸ್ಲಿಮರ ಸಂಖ್ಯೆ ಜಾಸ್ತಿಯಾಗುತ್ತಾ ಬೆಳೆಯುತ್ತಿದೆ. ಆದರೆ ಹಿಂದುಗಳ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿದೆ ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತಿದೆ, ಇದರ ಬಗ್ಗೆ ಸರಿಯಾಗಿ ವಿಚಾರ ಮಾಡಬೇಡವೇ?

**ಶ್ರೀ ಎಚ್. ಸಿದ್ದವೀರಪ್ಪ**: ಸುಮ್ಮನೇ ಯಾವ ಯಾವುದೋ ದೃಷ್ಟಿಯಿಂದ ಇದನ್ನು ನೋಡಬೇಡಿ.

**ಶ್ರೀ ಕಾಗೋಡು ತಿಮ್ಮಪ್ಪ**: ಇದರಲ್ಲಿ ಹಿಂದೂ ಫ್ಯಾನಟಿಕ್ಸ್ ಒಂದು ರೀತಿ ಬೆಳೆಯುತ್ತಿದೆ. ಮುಸ್ಲೀಮರ ಸಂಖ್ಯೆಯನ್ನು ಬೆಳೆಸಲು ಅವಕಾಶ ಕೊಡುತ್ತಾರೆ ಹಿಂದುಗಳಿಗಿಲ್ಲ ಎಂದು ಇದೆ. ಆದುದರಿಂದ ಇದರಲ್ಲಿ ಮುಸ್ಲೀಮರನ್ನೂ ಇರುವಂತೆ ಏಕೆ ಮಾಡಬಾರದು?

**ಶ್ರೀ ಎಚ್. ಸಿದ್ದವೀರಪ್ಪ:** ಇದು ಬರೀ ಕಾನೂನು ಮಾಡಿ ಮಾಡುತ್ತಿಲ್ಲ. ವಾಲಂಟರಿಯಾಗಿ ಮಾಡುತ್ತಿರುವ ಯೋಜನೆ.

**ಶ್ರೀ ಎಚ್.ಡಿ. ದೇವೇಗೌಡ:** ಕೋಟಿಗಟ್ಟಲೆ ಖರ್ಚು ಮಾಡುತ್ತಿದ್ದರೂ ನಿಮ್ಮ ಪ್ಲಾನು ಇದರಲ್ಲಿ ಫೇಲ್ ಆಗಿದೆ, ಇದನ್ನು ಹೇಗೆ ಸರಿಮಾಡುತ್ತೀರಿ?!.

**ಶ್ರೀ ಎಚ್. ಸಿದ್ದವೀರಪ್ಪ:** ಇದನ್ನು ರಾಷ್ಟ್ರೀಯ ದೃಷ್ಟಿಯಿಂದ ತಾವು ನೋಡಬೇಕು. ಜನಸಾಮಾನ್ಯರಿಗಾಗಿ ಕುಟುಂಬ ಯೋಜನೆ ಮಾಡುತ್ತಿರುವುದು. ಆದರೆ ಜನಸಂಖ್ಯೆ ಜಾಸ್ತಿಯಾಗುವಂತೆ ಉತ್ಪತ್ತಿಯೂ ದೇಶದಲ್ಲಿ ಹೆಚ್ಚಾದರೆ ಚಿಂತೆ ಇಲ್ಲ. ಆದರೆ ಉತ್ಪತ್ತಿ ಕಡಿಮೆಯಾಗಿ ಬರೀ ಜನಸಂಖ್ಯೆಯೇ ಹೆಚ್ಚುತ್ತಾ ಹೋದರೆ ಅದನ್ನು ಯಾವ ರೀತಿ ಸರಿಪಡಿಸಬೇಕು? ಇದನ್ನು ಸರ್ಕಾರ ಯೋಚನೆ ಮಾಡಬೇಕು.

**ಶ್ರೀ ಟಿ.ಎಂ. ಮಂಜುನಾಥ್:** ರಾಷ್ಟ್ರೀಯ ಮನೋಭಾವನೆ ಬೆಳೆಸಿಕೊಳ್ಳಬೇಕೆಂದು ಮಂತ್ರಿಗಳು ಹೇಳುತ್ತಾರೆ. ನಾನು ಅವರಲ್ಲಿ ಕಳಕಳಿಯಿಂದ ಮನವಿ ಮಾಡುವುದು ಯಾವುದಾದರೂ ಯೋಜನೆ ಮಾಡುವಾಗ ಅದು ನಮ್ಮ ದೇಶದ ಎಲ್ಲಾ ಜನರಿಗೂ ಸಂಬಂಧಪಡುವಂತೆ ಇರಬೇಕು. ಎಲ್ಲ ಜನರಿಗೂ ಸೌಲಭ್ಯಗಳು ದೊರಕುವಂತೆ ಮಾಡಬೇಕು, ಆದರೆ ಇದರಲ್ಲಿ ಯಾವುದೇ ಜನಾಂಗಕ್ಕೆ ಇದು ಅನ್ವಯವಾಗದಂತೆ ಮಾಡುವುದು ಸರಿಯಲ್ಲ. ಇದರ ಬಗ್ಗೆ ಸರಿಯಾದ ಅಂಕಿ ಅಂಶಗಳನ್ನು ಕೊಡದೇ ಇದ್ದರೆ ಇದರಿಂದ ರಾಷ್ಟ್ರಕ್ಕೆ ಹಾನಿಯಾಗುತ್ತದೆ ಮತ್ತು ಮುಂದೆ ಜನರು ತೊಂದರೆಪಡಬೇಕಾಗುತ್ತದೆ.

**ಶ್ರೀ ಎಚ್. ಸಿದ್ದವೀರಪ್ಪ:** ನಮ್ಮ ಕೈಯಲ್ಲಿ ರಾಜ್ಯ ಇರುವವರೆಗೆ ಜನ ಸುಖವಾಗಿಯೇ ಇರುತ್ತಾರೆ.

**ಶ್ರೀ ಎಚ್. ಡಿ. ದೇವೇಗೌಡ:** ಶ್ರೀ ಎಚ್. ಸಿದ್ದವೀರಪ್ಪ ಇರುವವರೆಗೆ ಸುಖವಾಗಿಯೇ ಇರುತ್ತದೆ.

**ಶ್ರೀ ಎಚ್. ಸಿದ್ದವೀರಪ್ಪ:** ಇದೊಂದು ನ್ಯಾಷನಲ್ ಫ್ಯಾಮಿಲಿ ಪ್ರೋಗ್ರಾಂ. ಇದರಲ್ಲಿ ಸಾಕಷ್ಟು ಪ್ರಗತಿಯಾಗಿದೆ ಎನ್ನುವುದಕ್ಕೆ ಕೆಲವು ಅಂಕಿ ಅಂಶಗಳನ್ನು ಕೊಡಬಹುದು. ಹೋದ ವರ್ಷ 55,778 ಆಪರೇಷನ್‌ಗಳಾಗಿದ್ದುವು. ಆದರೆ ಇದೇ ವರ್ಷ ಒಟ್ಟು ಆಪರೇಷನ್‌ಗಳಾಗಿರುವುದು 1.35 ಲಕ್ಷದಷ್ಟು. ಇದರಲ್ಲಿ ಎರಡು ಸಾರಿ ಮೂರು ಸಾರಿ ಚೆನ್ನಾಗಿ ಪರೀಕ್ಷೆ ಮಾಡಿ ಮಾಡಿರುತ್ತಾರೆ.

**ಶ್ರೀ ಎಚ್. ಡಿ. ದೇವೇಗೌಡ:** 60 ರೂಪಾಯಿಗಳು ಸಿಗುತ್ತವೆ ಎಂದು ಆಪರೇಷನ್ ಮಾಡಿಸಿಕೊಂಡಿದ್ದಾರೆ. ಗುಲ್ಬರ್ಗಾ ಹಾಗೂ ಬೀದರು ಕಡೆ ನಾವು ನೋಡಿ ಬಂದಿದ್ದೇವೆ. ಬೀದರ್‌ನಲ್ಲಿ ಆಪರೇಷನ್ ಮಾಡಿಸಿಕೊಂಡವರು ಮತ್ತೆ ಭಾಲ್ಕಿಯಲ್ಲಿ ಹೋಗಿ ಆಪರೇಷನ್ ಮಾಡಿಸಿಕೊಂಡಿರುತ್ತಾರೆ. ನಾಳೆ ಆ ಭಾಗಕ್ಕೆ ಮಂತ್ರಿಗಳು ಬರುತ್ತಿರುವುದರಿಂದ ಅವರಿಗೆ ಇದನ್ನು ನಾವು ತೋರಿಸಿಕೊಡುತ್ತೇವೆ.

**ಶ್ರೀ ಎಚ್. ಸಿದ್ದವೀರಪ್ಪ:** ನಾನು ರಾಯಚೂರು ಜಿಲ್ಲೆಗೆ ಆಪರೇಷನ್ ನಡೆಯುವಾಗ ಹೋಗಿ ನೋಡಿ ಬಂದಿದ್ದೇನೆ. ಎರಡು ಮೂರು ಸಾರಿ ಚೆಕ್ ಮಾಡಿ ಮಾಡುತ್ತಾರೆ. ಇದರಲ್ಲಿ ಪ್ರೊಡಕ್ಟೀವ್ ಏಜ್‌ನಲ್ಲಿ ಯಾರಿದ್ದಾರೋ ಅಂತಹವರನ್ನು ಮಾತ್ರ ಆರಿಸಿ ಆಪರೇಷನ್‌ಗಾಗಿ ಸೇರಿಸುತ್ತಾರೆ.

**ಶ್ರೀ ಎಚ್. ಎಸ್. ಸಿದ್ದಪ್ಪ:** ಬ್ಯಾಚುಲರ್ಸ್‌ಗಳೂ ವ್ಯಾಸೆಕ್ಟಮಿ ಆಪರೇಷನ್ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಎಚ್. ಸಿದ್ದವೀರಪ್ಪ:** ಇದರಲ್ಲಿ ಅವರಿಗೆ ಆಸಕ್ತಿ ಬಂದಿರಬಹುದು, ಬ್ಯಾಚಲರ್ಸ್‌ಗಳಿಗೆ ಮಾಡಕೂಡದು ಎನ್ನುವುದಕ್ಕೆ ಯಾವ ಕಾನೂನು ಇಲ್ಲ. ಇದರಂತೆ ಸನ್ಯಾಸಿಗಳೂ ಮಾಡಿಕೊಂಡಿರಬಹುದು.

**ಶ್ರೀ ಎಸ್. ಬಂಗಾರಪ್ಪ:** ಒಂದು ಸಾರಿ ಆಪರೇಷನ್ ಮಾಡಿಕೊಂಡಿರುವವರು ಎರಡನೇ ಸಾರಿ ಆಪರೇಷನ್ ಮಾಡಲಿಕ್ಕೆ ಬರುವುದಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಮಾನ್ಯ ಮಂತ್ರಿಗಳ ಎದುರಿಗೇನೇ ಒಂದು ಸಾರಿ ಆಪರೇಷನ್ ಮಾಡಿಸಿಕೊಂಡ ವ್ಯಕ್ತಿಯೂ ಎರಡನೇ ಸಾರಿಯೂ ಆಪರೇಷನ್ ಮಾಡಿಸಿಕೊಂಡಿರುವುದನ್ನು ಖಚಿತಪಡಿಸಲು ತಮ್ಮ ಮುಂದೆ ನಿಲ್ಲಿಸಿದರೆ ಅದರ ಬಗ್ಗೆ ತಾವೇನು ಹೇಳುತ್ತೀರಿ?

**ಶ್ರೀ ಎಚ್. ಸಿದ್ದವೀರಪ್ಪ:** ಏಕೆ ಮಾಡಿದರು ಎಂದು ಅದಕ್ಕಾಗಿ ನಾನು ಸಂತಾಪ ಪಡುತ್ತೇನೆ – ಆ ತರಹ ಆಗುವುದಿಲ್ಲ. ಒಂದು ಕಡೆ ಗಾಯವಾಗಿರುವುದು ಇನ್ನೂ ದೊಡ್ಡ ಗಾಯವಾಗುತ್ತದೆ, ಇದನ್ನು ಸರಿಯಾಗಿ ಡಿಸೈಫರು ಮಾಡಲಾಗುವುದಿಲ್ಲ ಎಂದು ಹೇಳುವ ವಾದ ಸರಿಯಲ್ಲ. ಒಟ್ಟಿನಲ್ಲಿ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಂನಿಂದ ನಮ್ಮ ದೇಶಕ್ಕೆ ಬಹಳ ಹೆಚ್ಚು ಅವಶ್ಯಕತೆ ಇದೆ ಎನ್ನುವುದು ಕಂಡುಬಂದಿದೆ. ಇದಕ್ಕಾಗಿ ಕೇಂದ್ರ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಒಂದು ವರ್ಷಕ್ಕೆ ಸುಮಾರು 150 ಕೋಟಿ ರೂಪಾಯಿಯವರೆಗೆ ಖರ್ಚು. ಇದಕ್ಕಾಗಿ ಸುಮಾರು 12 ಕೋಟಿ ರೂಪಾಯಿಗಳ ಒಂದು ಸ್ಕೀಂನ್ನು ಮಾಡಿ ನಮ್ಮ ಮೈಸೂರು ಮೂಲಕ ನಮಗೆ ಗ್ರ್ಯಾಂಟಾಗಿ ಬರುತ್ತಿದೆ ಮತ್ತು ಸಾಕಷ್ಟು ಪ್ರಗತಿಯುತವಾಗಿ ಕೆಲಸಗಳೂ ನಡೆಯುತ್ತಿವೆ. ನಮ್ಮ ಮಟ್ಟಿಗೆ ಫುಲ್ ಗ್ರ್ಯಾಂಟುಗಳೆಂದು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಕಡಿಮೆ ಬಡ್ಡಿಯಲ್ಲಿ ವರ್ಲ್ಡ್ ಬ್ಯಾಂಕಿನಲ್ಲಿ ತೆಗೆದುಕೊಂಡು ನಮ್ಮ ರಾಜ್ಯಕ್ಕೆ ಗ್ರ್ಯಾಂಟಾಗಿ ಕೊಡುತ್ತಿದ್ದಾರೆ ಮತ್ತು ನಮ್ಮ ರಾಜ್ಯದಲ್ಲಿ ಸರಿಯಾಗಿ ಹಾಗೂ ವ್ಯವಸ್ಥಿತವಾದ ರೀತಿಯಲ್ಲಿ ಕೆಲಸಗಳಾಗುತ್ತಿವೆ ಎಂದು ಅವರಿಗೂ ಮನವರಿಕೆಯಾಗಿದೆ. ಅದರಂತೆ ನಾವು ಹೆಚ್ಚು ಉತ್ಸಾಹದಿಂದ ಕೆಲಸ ಮಾಡುವುದು ಅವಶ್ಯಕ. ಶ್ರೀ ನಾಯ್ಡುರವರು ಹೇಳಿದಂತೆ ನಮ್ಮಲ್ಲಿ ಫ್ಯಾಮಿಲಿ ಫ್ಲಾನಿಂಗ್ ಹೆಚ್ಚು ಆಸಕ್ತಿಯಿಂದ ಕೆಲಸ ಮಾಡುತ್ತಿದೆ, ಇದರ ಬಗ್ಗೆ ಯಾರೂ ಯೋಚನೆ ಮಾಡಬೇಕಾಗಿಲ್ಲ.

ಶ್ರೀಮಾನ್ ಸವಣೂರುರವರು ನಾರು ಹುಣ್ಣಿನ ಬಗ್ಗೆ ಹೇಳಿದರು. ಕೆಲವು ಕಡೆ ಇಂತಹ ವಿಚಿತ್ರ ಕಾಯಿಲೆಗಳಿವೆ. ಮುಂಡರಗಿ ತಾಲ್ಲೂಕಿನಲ್ಲಿ ಕೆಲವು ಕಡೆ ಇರುವ ನೀರನ್ನು ಕುಡಿದರೆ ಅಲ್ಲಿನ ಜನರ ಹಲ್ಲುಗಳೇ ಉದುರಿ ಹೋಗುತ್ತವೆ ಎಂದು ಹೇಳುತ್ತಾರೆ.

**ಶ್ರೀ ಎಚ್.ಡಿ. ದೇವೇಗೌಡ:** ಮಾನ್ಯ ಮಂತ್ರಿಗಳು ವಿಚಿತ್ರ ಕಾಯಿಲೆಗಳು ಎಂದು ಹೇಳುತ್ತಾ ಹಲ್ಲುಗಳು ಉದುರುತ್ತವೆ ಎಂದು ಹೇಳಿದರು. ನಮ್ಮ ಮಂತ್ರಿಗಳು ಎಲ್ಲಾದರೂ ಹೋಗಿ ಅಲ್ಲಿ ನೀರು ಕುಡಿದರೆ ಅವರ ಹಲ್ಲುಗಳು ಕೂಡ ಹೋಗಬಹುದು.

## ವೈದ್ಯರಿಗೆ ಎಚ್ಚರಿಕೆ

**ಶ್ರೀ ಎಚ್. ಸಿದ್ದವೀರಪ್ಪ:** ನನ್ನ ಹಲ್ಲುಗಳು ಹೋದರೇನೂ ನನಗೆ ಚಿಂತೆ ಇಲ್ಲ. ಇದಕ್ಕೆ ವಿಚಾರ ಮಾಡಬೇಡಿ. ನಾರು ಹುಣ್ಣುಗಳ ಔಷಧಿಯನ್ನು ಇನ್ನೂ ಯಾರೂ ಕಂಡುಹಿಡಿದಿಲ್ಲ. ಇನ್ನು ಶ್ರೀ ಸಿದ್ದಪ್ಪನವರು ಕೆಲವು ಆಸ್ಪತ್ರೆಗಳಲ್ಲಿರುವ ವೆಹಿಕಲ್‌ಗಳಿಗೆ ಪೆಟ್ರೋಲ್ ತೆಗೆದುಕೊಂಡು ಇದರ ಬಾಕಿಯನ್ನು ನಾಲ್ಕು ವರ್ಷಗಳಾದರೂ ಕೊಟ್ಟಿಲ್ಲ ಮತ್ತು ಜನರಿಗೆ ವಾಹನಗಳು ಸೌಕರ್ಯವೂ ಸಿಗುತ್ತಿಲ್ಲ ಎಂದರು. ಇದು ಬಹು ಗಹನವಾದ ವಿಚಾರ. ಇದರ ಬಗ್ಗೆ ವಿಚಾರ ಮಾಡುತ್ತೇನೆ. ಯಾವ ದೇಶದಲ್ಲಿಯೂ ಇದಕ್ಕೆ ಔಷಧವನ್ನು ಕಂಡುಹಿಡಿದಿಲ್ಲ. ಇದಕ್ಕೆ ವಿಚಾರ ಮಾಡುತ್ತೇನೆ. ಇದಕ್ಕೆ ಒಂದೇ ಒಂದು ಸಲಹೆ ಎಂದರೆ ನೀರನ್ನು ಕಾಯಿಸಿ ಕುಡಿಯುವುದು. ಏಕೆಂದರೆ ಇದು ನೀರಿನಿಂದ ಬರುವ ರೋಗವಾದ್ದರಿಂದ ಕಾಯಿಸಿ ಕುಡಿದರೆ ಸರಿಯೋಗುತ್ತದೆಂದು ನಾನು ಅವರಿಗೆ ತಿಳಿಸುತ್ತೇನೆ. ಶ್ರೀಮಾನ್ ವೀರಭದ್ರಪ್ಪನವರು ಬಳ್ಳಾರಿ ಕಾಲೇಜನ್ನು ಅಲಕ್ಷ್ಯ ಮಾಡಲಾಗಿದೆ ಎಂದು ಹೇಳಿದರು. ಅಲಕ್ಷವಾಗಿದ್ದು ನಿಜ. ಈ ವರ್ಷ 80 ಖಾಲಿ ಜಾಗಗಳನ್ನು ಭರ್ತಿಮಾಡಿ ಆ ಕಾಲೇಜನ್ನು ಒಳ್ಳೆಯ ರೀತಿಯಲ್ಲಿ ತರಬೇಕೆಂಬ ಉದ್ದೇಶ ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಆದ್ದರಿಂದ ಈ ತೊಂದರೆಯೆಲ್ಲಾ ವಿಚಾರಣೆಯಾಗುತ್ತದೆಂದು ಹೇಳುತ್ತೇನೆ. ಕೆಲವು ಮಾನ್ಯ ಸದಸ್ಯರು ಈ ರೋಗದ ವಿಚಾರ ಹೇಳಿದರು. ಇದು ಬಹಳ ಕಡೆ ಇದೆ. ಇದರ ನಿವಾರಣೆಗಾಗಿ ಯಾವ ರೀತಿ ಎಪಿಡಮಿಕ್ ಕಂಟ್ರೋಲ್ ಮಾಡಬೇಕೆಂಬ ಬಗ್ಗೆ ಸರ್ಕಾರ ತೀವ್ರವಾಗಿ ಯೋಚನೆ ಮಾಡುತ್ತಿರುವುದು. ಶ್ರೀಮಾನ್ ಪುಟ್ಟಸ್ವಾಮಿಯವರು ಹಳ್ಳಿಗಳಲ್ಲಿರುವ ಆಸ್ಪತ್ರೆಗಳಲ್ಲಿಯೂ ಹಾಸಿಗೆಗಳನ್ನು ಪ್ರೊವೈಡ್ ಮಾಡಬೇಕೆಂದು ಹೇಳಿದರು. ಇದಕ್ಕೆ ಪಿ.ಎಚ್.ಸಿ.ಯಲ್ಲಿ ಪ್ರಾವಿಜನ್ ಇದೆ. ಕನಿಷ್ಟ 6 ಹಾಸಿಗೆಗಳಾದರೂ ಇರಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಶ್ರೀಮಾನ್ ಮಾದೇಗೌಡರು ಸಣ್ಣ ಆಸ್ಪತ್ರೆಗಳಿಗೂ ಹತ್ತು ಸಾವಿರ ರೂಪಾಯಿಗಳ ಔಷಧವನ್ನು ಒದಗಿಸಬೇಕೆಂದು ಹೇಳಿದರು; ಮತ್ತೆ ಇಷ್ಟೆಲ್ಲಾ ಹಣ ಖರ್ಚು ಮಾಡಿದರೂ ಸಹ ಡಾಕ್ಟರ್‌ಗಳಲ್ಲಿ ಸರ್ವೀಸ್ ಮೆಂಟಾಲಿಟಿ ಇಲ್ಲದಿರುವುದರಿಂದ ಜನಸಾಮಾನ್ಯರಿಗೆ

ಯಾವ ಅನುಕೂಲವೂ ಆಗುತ್ತಿಲ್ಲವೆಂದು ಹೇಳಿದರು. ಡಾಕ್ಟರುಗಳ ಈಗಿರುವ ಮನೋಭಾವ ಬದಲಾವಣೆಯಾಗಬೇಕಾಗಿದೆ ಎಂಬ ವಿಷಯವನ್ನು ಮಾನ್ಯ ಆರ್ಮುಗಂ ಅವರು ಸಹ ಹೇಳಿದರು. ನಾವು ಡಾಕ್ಟರುಗಳಿಗೆ ಸರ್ವೀಸ್ ಕಂಡೀಷನ್ಸ್ ಮತ್ತು ಸಂಬಳಸಾರಿಗೆಯ ಬಗ್ಗೆ ಎಷ್ಟೇ ಅನುಕೂಲ ಮಾಡಿಕೊಟ್ಟಿದ್ದರೂ ಸಹ ಅವರ ಒಂದು ಮನೋಭಾವ ಬದಲಾವಣೆಯಾಗದಿರುವುದಕ್ಕಾಗಿ ನನಗೆ ವ್ಯಥೆಯಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳುವುದೆಲ್ಲಾ ಸುಳ್ಳು ಎಂದು ಆ ಕಡೆಗೆ ತಳ್ಳಿ ಹಾಕುವುದಕ್ಕೆ ನಾನು ತಯಾರಿಲ್ಲ. ತಮ್ಮ ಮನೋಭಾವನೆ ಬದಲಾವಣೆ ಮಾಡಿಕೊಳ್ಳಿ ಎಂದು ಅವರಿಗೆ ನಾನು ಒಂದು ವರ್ಷದ ಕಾಲಾವಕಾಶ ಕೊಟ್ಟಿದ್ದೆ, ಮನೋಭಾವ ಬದಲಾವಣೆಯಾಗಿಲ್ಲ ಎಂಬುದನ್ನು ನಾನು ಮನಗಂಡಿದ್ದೇನೆ. ಸರ್ವೀಸ್ ಕಂಡಿಷನ್ಸ್‌ನಲ್ಲಿ ಏನೇನು ಅನುಕೂಲಗಳು ಬೇಕೋ ಅದನ್ನು ಮಾಡಿಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎಂದು ಅವರಿಗೆ ಹೇಳಿದ್ದೆ. ಮತ್ತು ಅಧಿಕಾರಿಗಳನ್ನು ವಿಕೇಂದ್ರೀಕರಣ ಮಾಡಿ ಫೈನಾನ್ಸಿಯಲ್ ಪವರ್ ಕೊಟ್ಟು ಚೆನ್ನಾಗಿ ಕೆಲಸ ಮಾಡಿ ಎಂದು ಹೇಳಿದರೂ ಕೂಡ ಅವರು ತಮ್ಮ ಮನೋಭಾವನೆಯನ್ನು ಬದಲಾವಣೆ ಮಾಡಿಕೊಂಡಿಲ್ಲ. ಇನ್ನು ಮುಂದಾದರೂ ಅವರು ಬದಲಾವಣೆಯಾಗದಿದ್ದರೆ ಕಾಯಂ ಚಿಕಿತ್ಸೆ ಮಾಡುವುದಕ್ಕೆ ಸರ್ಕಾರ ತಯಾರಾಗಬೇಕಾಗುತ್ತದೆ. ಈಗ ಇವರಿಗೆ ಕೊಳ್ಳುವವರಿದ್ದಾರೆ, ಅದಕ್ಕಿಂತ ಕಡಿಮೆ ತೆಗೆದುಕೊಳ್ಳುವವರು ಸಹ ಇದ್ದಾರೆ. ಈ ಕಾರಣದಿಂದ ಜನತಾ ಸೇವೆಯನ್ನು ಮಾಡುವುದರಲ್ಲಿ ಡಾಕ್ಟರುಗಳು ಮುಂದೆ ಬರುವುದು ಒಳ್ಳೆಯದು. ಈ ಒಂದು ಪರ್ಸೆಂಟೇಜ್ ಜಾಸ್ತಿಯಾಗಬೇಕಾಗಿದೆ. ಇಂದಿಗೂ ಕೂಡ ಕೆಲವು ಡಾಕ್ಟರ್‌ಗಳನ್ನು ದೇವರು ಎಂಬ ದೃಷ್ಟಿಯಿಂದ ಜನರು ನೋಡುತ್ತಾರೆ. ಇದಕ್ಕೆ ಕಾರಣ ಅವರು ಒಳ್ಳೆಯ ಕೆಲಸಗಳನ್ನು ಮಾಡುವುದು. ಇಂತಹ ಡಾಕ್ಟರ್‌ಗಳನ್ನು ಆ ಊರಿನ ಜನರು ಬಿಟ್ಟು ಕೊಡುವುದಕ್ಕೂ ಸಹ ತಯಾರಿರುವುದಿಲ್ಲ.

**ಶ್ರೀ ಕೋಣಂದೂರು ಲಿಂಗಪ್ಪ:** ಅಂತಹವರನ್ನೇ ವರ್ಗ ಮಾಡುತ್ತೀರಿ?

**ಶ್ರೀ ಎಚ್. ಸಿದ್ದವೀರಪ್ಪ** : ಬೇರೆ ಜನರಿಗೂ ಅವರ ಸೇವೆ ದೊರಕಲಿ ಎಂದು ವರ್ಗ ಮಾಡುತ್ತೇವೆ. ಈ ಸಭೆಯ ಮೂಲಕ ವೈದ್ಯಕೀಯ ಇಲಾಖೆಯಲ್ಲಿರುವವರಿಗೆ ನನ್ನ ಕಳಕಳಿಯ ಮನವಿಯಾದರೂ ಇಷ್ಟೇ; ಜನತೆ ಇಂದು ಹುಷಾರಾಗಿದ್ದಾರೆ. ಅವರು ಕಣ್ಮುಚ್ಚಿ ಕುಳಿತಿಲ್ಲ. ಯಾರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬುದನ್ನು ನೋಡುವ ದೃಷ್ಟಿ ಅವರಲ್ಲಿ ಬಂದಿದೆ. ಆದ್ದರಿಂದ ಡಾಕ್ಟರ್‌ಗಳು ಅವರ ಕೆಲಸವನ್ನು ಸರಿಯಾಗಿ ಮಾಡಿಕೊಂಡು ಹೋಗುವುದು ಒಳ್ಳೆಯದು. ಇವೊತ್ತಿನ ದಿವಸ ಯಾರು ಈ ಕೆಲಸದಲ್ಲಿ ನಿರತರಾಗಿದ್ದಾರೆ, ಅವರಲ್ಲಿ ಏನಾದರೂ ಲೋಪದೋಷಗಳು ಕಂಡು ಬಂದರೆ ಕಾನೂನು ದೃಷ್ಟಿಯಿಂದ ಬೇರೆ ಕಡೆಗೆ ವರ್ಗ ಮಾಡಲಾಗುವುದು ಮತ್ತು ಬರಿ ಸಸ್ಪೆಂಡ್ ಮಾಡುವುದರಿಂದಲೇ ಈ

ಸಮಸ್ಯೆ ಬಗೆಹರಿಯುತ್ತದೆಂದು ನಾನು ತಿಳಿದುಕೊಂಡಿಲ್ಲ, ಈ ಸಮಸ್ಯೆಯನ್ನು ಹೇಗೆ ಬಿಡಿಸಬೇಕೆಂಬುದನ್ನು ನಾವು ನೋಡುತ್ತಿದ್ದೇವೆ. ಇವರುಗಳ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿದೆಯೇ ಎಂಬ ಬಗ್ಗೆ ನೋಡಿಕೊಳ್ಳಲು ಸ್ಥಳೀಯ ಪ್ರತಿನಿಧಿಗಳಿಂದ ಒಳಗೊಂಡಂತಹ ಒಂದು ಕಮಿಟಿಯನ್ನು ಮಾಡ ಬೇಕೆಂದಿದ್ದೇವೆ. ಅಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳು ಸರಿಯಾಗಿದೆಯೇ ಎಂಬುದನ್ನು ಕಮಿಟಿಯವರು ನೋಡಿಕೊಳ್ಳಲು ಮತ್ತು ಸರಿಯಾಗಿ ಕೆಲಸ ಕಾರ್ಯವಾಗಲು ಸಲಹೆ ಮಾಡಲು ಇದರಿಂದ ಅನುಕೂಲವಾಗುತ್ತದೆ.

* * *

# ತುಂಗಭದ್ರಾ ಹೊಳೆನೀರು ಕಲುಷಿತ

2, ಮೇ 1973

[ಹರಿಹರ ಪಾಲಿಫೈಬರ್ಸ್‌ನಿಂದ ಬಿಡುವ ರಾಸಾಯನಿಕ ದ್ರವ ಪಕ್ಕದ ತುಂಗಭದ್ರಾ ನದಿಗೆ ಹರಿಯುತ್ತದೆ. ಇದರಿಂದ ಅಲ್ಲಿನ ನೀರು ಕುಡಿಯಲು ಯೋಗ್ಯವಾಗಿಲ್ಲ. ಜನರ ಆರೋಗ್ಯ ಸಹ ಹದಗೆಡುತ್ತಿದೆ. ಕೈಗಾರಿಕಾ ಸಚಿವರು, ಆರೋಗ್ಯ ಸಚಿವರು ಕಾರಖಾನೆ ಮಾಲೀಕರಿಗೆ ಎಚ್ಚರಿಕೆ ಕೊಡಬೇಕು – ಇತ್ಯಾದಿ ಚರ್ಚೆಯನ್ನು ರಾಣೆಬೆನ್ನೂರು ಶಾಸಕ ಕೆ.ಬಿ. ಕೋಳಿವಾಡ ಅವರು ಪ್ರಶ್ನಿಸಿದರು. ಅದಕ್ಕೆ ಸಂಬಂಧಿಸಿದಂತೆ ಚರ್ಚೆ.]

**ಶ್ರೀ ಎಚ್. ಸಿದ್ದವೀರಪ್ಪ:** (ಆರೋಗ್ಯ ಶಾಖೆಯ ಮಂತ್ರಿಗಳು) ನಾನು ಒಂದೆರಡು ಸಾರಿ ಅಲ್ಲಿನ ಸ್ಥಳ ಪರೀಕ್ಷೆ ಮಾಡಿದ್ದೇನೆ. ಅಲ್ಲಿಯ ಮಾನ್ಯ ಸದಸ್ಯರು ರಾಣೇಬೆನ್ನೂರು, ಹಡಗಲಿ ಹಾಗೂ ಹರಪನಹಳ್ಳಿ ಮುಂತಾದ ತಾಲ್ಲೂಕುಗಳಲ್ಲಿ ಬಹಳ ತೊಂದರೆಯಾಗಿದೆ, ಜನರು ಹೊಳೆಯ ನೀರು ಕುಡಿಯುತ್ತಿದ್ದಾರೆ ಎಂದರು. ಅದನ್ನು ಟೆಸ್ಟ್ ಮಾಡಿಸಿದ್ದೇವೆ. ಅದು ಕುಡಿಯುಲಿಕ್ಕೆ ನೀರು ಸರಿಯಿಲ್ಲ. ಅನಾರೋಗ್ಯವುಂಟಾಗುತ್ತದೆ. ಅದರಲ್ಲಿ ಪಾಯ್ಜನಸ್ ಕಂಟೆಂಟ್ಸ್ ಇವೆಯೆಂಬುದು ಗೊತ್ತಾಗಿದೆ. ಕೆಲವು ಕಡೆ ಬೋರ್‌ವೆಲ್ ಹಾಕಿ ಅದನ್ನು ಸರಿಮಾಡಿಕೊಡುತ್ತೇವೆಂದು ಹೇಳಿದರು. ಆದರೂ ನಮ್ಮ ಜನಗಳಿಗೆ ಸಾಕಷ್ಟು ಅನುಕೂಲವಾಗಿಲ್ಲ. ನಾನು ಹೋಗಿ ಹೇಳಿದ ಮೇಲೆ ಜನಗಳು ಬಹಳ ಕಾತುರದಿಂದ ಹಾಹಾಕಾರವನ್ನು ತೋರಿಸಿದ್ದರಿಂದ ಆ ನೀರನ್ನು ವ್ಯವಸಾಯಕ್ಕೆ ಉಪಯೋಗಿಸುವ ಹಾಗೆ ತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆ. ಅಲ್ಲಿ ಬೆಳೆದಿರತಕ್ಕ ಫಸಲನ್ನೂ ಸಹ ನೋಡಿಸಿದ್ದಾರೆ. ನಾನು ವ್ಯವಸಾಯ ಮಂತ್ರಿಗಳಿಗೂ ಸಹ ನೋಡಿಕೊಂಡು ಬನ್ನಿ ಎಂಬುದಾಗಿ ಹೇಳಿದ್ದೇನೆ. ಬೇಳೆ, ಕಬ್ಬು, ತರಕಾರಿ ಹಾಗೂ ಹಣ್ಣು ಚೆನ್ನಾಗಿ ಈಗ ಬೆಳೆಸಿದ್ದಾರೆ. ಫಸಲು ಬಹಳ ಚೆನ್ನಾಗಿ ಬಂದಿದೆಯೆಂದು ನಾನು ಹೇಳುತ್ತೇನೆ. ವ್ಯವಸಾಯ ಇಲಾಖೆಯವರು ಇನ್ನೂ ಎರಡು ವರ್ಷಗಳವರೆಗೆ ಅದನ್ನು ನೋಡಬೇಕೆಂದು ಹೇಳಿದರಂತೆ. ಆ ರೀತಿ ನಿಧಾನ ಮಾಡಿದರೆ ಅಲ್ಲಿನ ಜನರ ಆರೋಗ್ಯ ಕೆಟ್ಟುಹೋಗಿ ಅನೇಕರು ಸತ್ತುಹೋಗುತ್ತಾರೆ. ಆದ್ದರಿಂದ ಕೂಡಲೇ ಅದನ್ನು ಸರಿಮಾಡಬೇಕೆಂದು ನಾನು ಈಗಾಗಲೇ ಪಿಡಬ್ಲ್ಯೂ ಮಂತ್ರಿಗಳಿಗೆ ತಿಳಿಸಿದ್ದೇನೆ.

ಎಷ್ಟು ದುಡ್ಡು ಖರ್ಚಾದರೂ ಆ ನೀರನ್ನು ಪೂರಾ ಹೊಳೆಗೆ ಬಿಡಬಾರದು. ಅಂತಹ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಇತ್ತ ಕಡೆ ಅದನ್ನು ವ್ಯವಸಾಯಕ್ಕೆ ಉಪಯೋಗಿಸಿದರೆ 2 ಸಾವಿರ ಎಕರೆ ನೀರಾವರಿಯಾಗುವ ಅವಕಾಶವಿದೆ. ಇದನ್ನು ಮಾನ್ಯ ವ್ಯವಸಾಯ ಮಂತ್ರಿಗಳಿಗೆ ಹಾಗೂ ಪಿಡಬ್ಲ್ಯೂಡಿ ಮಂತ್ರಿಗಳಿಗೆ ತಿಳಿಸಿದ್ದೇನೆ. ಇದಕ್ಕೆ ಖರ್ಚಾಗತಕ್ಕ ದುಡ್ಡನ್ನು ಅವರೇ ಕೊಟ್ಟು ಸರಿ ಮಾಡಿಸುವುದಕ್ಕೆ ತಯಾರಾಗಿದ್ದಾರೆ. ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕ ದೃಷ್ಟಿಯಿಂದ ಶಿಫಾರಸ್ಸು ಮಾಡುತ್ತಾರೆ. A Plan will be prepared, The P.W.D. Minister has kindly agreed to send an Officer immediately to look into it. The Agriculture Minister has to make up his mind to visit the spot and look into it.

**ಶ್ರೀ ಎಫ್.ಎಸ್. ತಾವರೆ:** ಹಾವೇರಿ ತಾಲ್ಲೂಕಿಗೆ ಇಂತಹ ಹೊಳೆಗಳಿಂದ ಬಹು ದೊಡ್ಡ ಪ್ರಮಾಣದಲ್ಲಿ ನೀರು ಹರಿಯುವ ಕಾಲಕ್ಕೆ ಅಲ್ಲಿ ಔಷಧಿಯ ಪ್ರಮಾಣ ಹೆಚ್ಚಿಗೆ ಇರುವುದರಿಂದ ಅದರ ಸೇವನೆಯಿಂದ ದನಗಳೂ ಹಾಗೂ ಜನಗಳೂ ಕಾಯಿಲೆ ಬೀಳುತ್ತಾರೆ. ಅದಲ್ಲದೆ ವ್ಯವಸಾಯ ಮಂತ್ರಿಗಳ ಕರೆಸುವುದರೊಳಗೆ ಅನೇಕ ಜನರು ಸತ್ತು ಹೋಗಿರುತ್ತಾರೆ. ಇವತ್ತಿನವರೆಗೂ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನೀರು ಹೆಚ್ಚು ಔಷಧಿ ಪ್ರಮಾಣದೊಂದಿಗೆ ಹರಿಯುತ್ತಿದೆ. ಇದು ಬಹಳ ಸೀರಿಯಸ್, ಆದ್ದರಿಂದ ಇದನ್ನು ಸರ್ಕಾರದವರು ಬಹಳ ಜಾಗರೂಕತೆಯಿಂದ ನೋಡಬೇಕು. ಇಲ್ಲದಿದ್ದರೆ ಹಳ್ಳಿಯ ಜನರು ನಿಮಗೂ ನಮಗೂ ಶಾಪ ಹಾಕುತ್ತಾರೆ.

**ಶ್ರೀ ಎಚ್. ಸಿದ್ದವೀರಪ್ಪ:** ನೀವು ಹೇಳಿದ್ದು ಅಕ್ಷರಶಃ ನಿಜ. ಅದರಲ್ಲಿ ಯಾವ ಅನುಮಾನವೂ ಇಲ್ಲ. ಈಗಿರತಕ್ಕ ಪರಿಸ್ಥಿತಿಯಲ್ಲಿ ತಕ್ಷಣ ಕ್ರಮ ತೆಗೆದುಕೊಂಡು ಅಲ್ಲಿ ಹೋಗಿ ನೀರನ್ನು ಜನ ಯಾವ ರೀತಿಯಲ್ಲಿ ಉಪಯೋಗಿಸಬೇಕೆಂಬ ಬಗ್ಗೆ ನಾನು ಮೊನ್ನೆತಾನೇ ಸ್ಪೆಸಿಫಿಕ್ಕಾಗಿ ಹೇಳಿದ್ದೇನೆ. ಸರ್ಕಾರದವರು ಹೇಳಿದ ಹಾಗೆ ಅಲ್ಲಿನ ಜನರೇ ಮುಂದೆ ಬಂದು ಅಲ್ಲಿ ಏನೇನು ಅನುಕೂಲಗಳನ್ನು ಮಾಡಿಕೊಡಬೇಕೋ ಅದನ್ನು ತಕ್ಷಣ ಮಾಡಿಕೊಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ:** ಹಿಂದೆ ಮಾನ್ಯ ಕೈಗಾರಿಕೆಯ ಮಂತ್ರಿಗಳು ಮತ್ತು ಆರೋಗ್ಯ ಮಂತ್ರಿಗಳೂ ಸಹ ಇದೇ ಉತ್ತರವನ್ನು ಹೇಳಿದರು. ಈಗಲೂ ಇದೇ ಭರವಸೆಯನ್ನು ಕೊಡುತ್ತಿದ್ದಾರೆ. ಆದರೂ ಎರಡು ಸಾರಿಯೂ ಇದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಏನೂ ಸುಧಾರಿಸಿಲ್ಲವೆಂದು ನಾನು ಹೇಳುತ್ತಿದ್ದೇನೆ ಅಂದ ಮೇಲೆ ಆ ನೀರನ್ನು ವ್ಯವಸಾಯಕ್ಕೋಸ್ಕರ ಉಪಯೋಗಿಸುವುದಕ್ಕೆ ಸಾಧ್ಯವೇ?

ಇದುವರೆಗೆ ಅದನ್ನು ಜನ ಉಪಯೋಗಿಸುವ ವ್ಯವಸ್ಥೆಯನ್ನು ಮಾಡಿಲ್ಲವೆಂದು ಹೇಳಿದರೆ ಇನ್ನು ಸರ್ಕಾರದಲ್ಲಿ ಏನು ಕ್ರಮ ನಡೆದಿದೆ?

**ಶ್ರೀ ಎಚ್. ಸಿದ್ದವೀರಪ್ಪ:** ಪ್ರಾಯೋಗಿಕವಾಗಿ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಒಂದೇ ವರ್ಷದೊಳಗೆ ಫಸಲು ಬರುವುದಿಲ್ಲ. ಸುಮಾರು 6–7 ತಿಂಗಳವರೆಗೆ ನೋಡಿ ಫಸಲು ಸರಿಯಾಗಿ ಬರುತ್ತಿದೆಯೇ ಇಲ್ಲವೇ ಎಂಬುದನ್ನು ಎಕ್ಸ್‌ಪೆರಿಮೆಂಟ್ ಮಾಡಬೇಕಾಗುತ್ತದೆ. ಆ ಎಕ್ಸ್‌ಪೆರಿಮೆಂಟನ್ನು ಈಗ ಸಂಪೂರ್ಣ ಮಾಡಿ ಫಸಲು ಚೆನ್ನಾಗಿ ಬರುತ್ತದೆಯೇ ಎನ್ನುವುದನ್ನು ಮಾನ್ಯ ಸದಸ್ಯರು ಬೇಕಾದರೆ ಹೋಗಿ ನೋಡಿಕೊಂಡು ಬರಬಹುದು. ಅದಕ್ಕೆ ಬೇರೆಬೇರೆಯಾಗಿ ಟ್ರೀಟ್ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಅಂತಹ ಟ್ರೀಟ್‌ಮೆಂಟ್‌ನಿಂದ ಏನೂ ಪ್ರಯೋಜನವಾಗುವುದಿಲ್ಲ. ಬೇರೆ ಬೇರೆ ಕಡೆಯಿಂದ ಅದಕ್ಕೆ ಟ್ರೀಟ್‌ಮೆಂಟ್ ಮಾಡಬೇಕೆಂದು ತೆಗೆದುಕೊಂಡು ಹೋಗಬೇಕಾದರೆ ಅದಕ್ಕೆ ಅವಕಾಶವನ್ನು ಕೊಡಬಾರದು. ಆದರೆ ಅದರ ಬಗ್ಗೆ ಈಗಾಗಲೇ ಪ್ರೊಪೋಸಲ್ಸ್ ಬಂದಿದೆ. ಅದನ್ನು ಪರೀಕ್ಷೆ ಮಾಡಿಸುತ್ತೇನೆ.

* * *

# ಪ್ರತಿಪಕ್ಷದ ನಾಯಕರ ಸುತ್ತ

## 2, ಜುಲೈ 1952

**ಶ್ರೀ ಎಚ್. ಸಿದ್ದವೀರಪ್ಪ** (ಒಳಾಡಳಿತ ಮತ್ತು ವ್ಯವಸಾಯ ಇಲಾಖೆಗಳ ಮಂತ್ರಿಗಳು) : ಸ್ವಾಮಿ, ಜನಾಬ್ ಇಮಾಂ ಸಾಹೇಬರು ಖೋತಾ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುತ್ತಾ ಕೆಲವು ವಿಷಯಗಳನ್ನು ಪ್ರತಿಪಾದಿಸಿದರು. ಅವರು ಈ ಸಭೆಯ ಪ್ರತಿಪಕ್ಷದ ನಾಯಕರಲ್ಲದೆ ಅನೇಕ ವರ್ಷಗಳ ಕಾಲ ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿಧಾಯಕ ಸಭೆ ಮುಂತಾದ ಸಭೆಗಳಲ್ಲಿದ್ದು ಸಭಾ ಸಂಪ್ರದಾಯಗಳನ್ನು ತಿಳಿದುಕೊಂಡಿದ್ದವರು ಅಲ್ಲದೆ ಹಿಂದೆ ಟ್ರೆಜರಿ ಬೆಂಚಿನಲ್ಲಿಯೂ ಇದ್ದವರು. ಇಂಥವರು ಮಾಡತಕ್ಕ ವಾದ ಯಾವರೀತಿ ಇರಬೇಕೆಂದು ನಿರೀಕ್ಷಣೆ ಮಾಡಿದ್ದೇನೋ ಆ ರೀತಿ ಇರದೆ ಕಟುವಾಗಿಯೂ ಅಲ್ಲದೆ ನಿರಾಧಾರವಾಗಿ, ಬುಡವಿಲ್ಲದೆ ಆರೋಪಣೆಗಳನ್ನು ಕೂಡಿರುವಂಥದೂ ಆಗಿರುವುದನ್ನು ನೋಡಿ ನನ್ನ ಮನಸ್ಸಿಗೆ ಬಹಳ ವ್ಯಥೆಯಾಯಿತು. ಅವರನ್ನು ನಾನು ಬಹಳ ವರ್ಷಗಳಿಂದ ಬಲ್ಲೆ. ಪ್ರತಿಪಕ್ಷದ ನಾಯಕರಾದ ಮೇಲೆ ಅವರು ಅನುಸರಿಸತಕ್ಕ ಧೋರಣೆ ನಮ್ಮ ದೇಶದಲ್ಲಿ ಪ್ರತಿಪಕ್ಷ ಯಾವ ರೀತಿ ಬೆಳೆಯಬೇಕು, ಯಾವ ರೀತಿ ಇರಬೇಕು, ಯಾವ ರೀತಿ ಆದರ್ಶವಾಗಿ ಕೆಲಸ ಮಾಡಬೇಕು ಎಂದು ನಿರೀಕ್ಷಿಸಿದ್ದೇವೋ ಅದಕ್ಕೆ ಧಕ್ಕೆ ತಂದಿದೆ. ಅವರು ಎಡೆಯಿಲ್ಲದ ಅಪಾದನೆ ಮಾಡಿ ಅನೇಕರ ಮನಸ್ಸನ್ನು ನೋಯಿಸಿದರು. ಶ್ರೀಮಾನ್ ಪಟ್ಟಾಭಿರಾಮನ್ ಅವರು ಹೇಳಿದ ಹಾಗೆ, ನನಗೂ ಪದೇ ಪದೇ ಅನ್ನಿಸುತ್ತದೆ. ಈ ಸಭೆಯಲ್ಲಿ ಯಾರಾದರೂ ಸಲಹೆಗಳನ್ನು ಮಾಡಬೇಕಾದರೆ, ಯಾವುದಾದರೂ ವಿಷಯವನ್ನು ಪ್ರತಿಪಾದಿಸಬೇಕಾದರೆ, ತಾವು ಹೇಳಬೇಕಾದ ವಿಚಾರವನ್ನು ಸಭೆಯ ಗಮನಕ್ಕೆ ತರಬೇಕಾದರೆ, ಯಾವ ಭಾಷೆಯನ್ನುಪಯೋಗಿಸಬೇಕು, ಯಾವ ರೀತಿಯಲ್ಲಿ ಹೇಳಬೇಕು ಎಂಬುದನ್ನು ತಿಳಿಯಬೇಕು. ಶ್ರೀಮಾನ್ ಪಟ್ಟಾಭಿರಾಮನ್ ಅವರು ಹೇಳಿದ ಹಾಗೆ ಸರ್ಕಾರದವರು ಈ ಸಮಿತಿಗಳನ್ನು ನಿಯಮಿಸಬೇಕಾದರೆ ಬಹಳ ದೂರದೃಷ್ಟಿಯಿಂದ, ಕೂಲಂಕುಷವಾಗಿ ಎಲ್ಲ ವಿಷಯಗಳನ್ನೂ ಪರೀಕ್ಷಿಸಿ ನೇಮಿಸಿದರೇ ವಿನಾ ಅವರ ಮನಸ್ಸಿನಲ್ಲಿ ಯಾವುದಾದರೂ ಒಂದು ಪಕ್ಷದ ದೃಷ್ಟಿಯಾಗಲಿ ಇನ್ನಾವ ಬೇರೆ ಕಾರಣವಾಗಲಿ ಇರಲಿಲ್ಲವೆಂದು ಈ ಸಭೆಯ ಮುಂದೆ ವಿಶದೀಕರಿಸುತ್ತೇನೆ.

**Mr. Speaker** : The Hon'ble Member cannot interrupt unless the Hon'ble Minister yields.

**ಶ್ರೀ ಎಚ್.ಸಿದ್ದವೀರಪ್ಪ:** ಇಷ್ಟೇ ಅಲ್ಲದೆ ಕೆಲವು ಸದಸ್ಯರು ಈ ಸಭೆಗೆ ಸದಸ್ಯರಾಗಿರುತ್ತಾರೆ. They are worth their weight in gold. ಅವರು ಸಮಿತಿಗಳಲ್ಲಿದ್ದರೆ ಎಷ್ಟುಮಟ್ಟಿಗೆ ಶೋಭಾಯಮಾನವಾಗಿರುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟು ಸಮಿತಿಗಳಿಗೆ ನೇಮಿಸಿದೆವೇ ವಿನಾ ಅವರ್‍ಯಾರೇ ಆಗಲಿ ನಮ್ಮನ್ನು ರೀಜನಲ್ ಅಥವಾ ಕೇಂದ್ರ ಸಮಿತಿಗಳಿಗೆ ಸದಸ್ಯರಾಗಿ ಸೇರಿಸಿಕೊಳ್ಳಿ ಎಂದು ಕೇಳಿದ್ದಿಲ್ಲ. ಸರ್ಕಾರ ಯಾವ ದೃಷ್ಟಿಯಿಂದ, ಯಾವ ಉದ್ದೇಶದಿಂದ ಈ ಸಮಿತಿಗಳನ್ನು ನೇಮಿಸಿತೇ ಆ ಉದ್ದೇಶ ಸಫಲವಾಗಬೇಕಾದರೆ ಈ ಮಹನೀಯರಿದ್ದರೆ ಅನುಕೂಲವಾಗುವುದೆಂದು ನೇಮಿಸಿತೇ ವಿನಾ ಬೇರೆ ಯಾವ ದೃಷ್ಟಿಯಿಂದಲೂ ಅಲ್ಲ.

ಅಷ್ಟೇ ಅಲ್ಲ, ಆ ಸಭೆಗೆ ಸದಸ್ಯರಾಗಬೇಕಾದರೆ ಅವರಿಗೆ ಏನೇನು ಅರ್ಹತೆಗಳಿರಬೇಕು, ಯಾರು ಅದಕ್ಕೆ ಅನರ್ಹರು ಎಂಬುದಕ್ಕೆ ಇಂಡಿಯಾ ಮೋಟಾರ್ ವೆಹಿಕಲ್ಸ್ ಆಕ್ಟ್‌ನಲ್ಲಿ ಕೆಲವು ನಿಯಮಗಳಿವೆ. ಆ ಸಮಿತಿಯವರ ಜವಾಬ್ದಾರಿ ಬಹಳ ಗುರುತರವಾದದ್ದು. ಸರಿಯಾಗಿ ಕೆಲಸಮಾಡಿ, ಸರ್ಕಾರದ ಇಷ್ಟವನ್ನು ಪೂರ್ತಿಗೊಳಿಸಿ, ಕೆಲಸ ಮಾಡತಕ್ಕಂಥ ದಕ್ಷತೆ ಯಾರಲ್ಲಿರುತ್ತದೆಯೆಂದು ಮತ್ತು ಯಾರಲ್ಲಿ ಸರ್ಕಾರಕ್ಕೆ ಅಂಥ ನಂಬಿಕೆ ವಿಶ್ವಾಸಗಳಿರುತ್ತವೆಂದು ಭಾವಿಸಲಾಗುತ್ತದೆಯೋ ಮತ್ತು ಯಾರು ಸರ್ಕಾರದ ನಿಯಮಗಳನ್ನು ಚಾಚೂ ತಪ್ಪದೆ, ಸರಿಯಾದ ರೀತಿಯಲ್ಲಿ ಕೆಲವನ್ನು ಮಾಡತಕ್ಕವರೆಂದು ಭಾವಿಸಲಾಗುತ್ತೋ ಅಂಥವರನ್ನು ನೇಮಕಮಾಡಿಕೊಳ್ಳಬೇಕಾದದ್ದು ಸರ್ಕಾರದವರ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಅಷ್ಟೇ ಅಲ್ಲ – ಇಂಡಿಯನ್ ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ, ಒಂದೇ ಒಂದು ಡಿಸ್‌ಕ್ವಾಲಿಫಿಕೇಷನ್ ಇದೆ. 44 ನೆಯ ವಿಧಿ (2)ನೆಯ ಕ್ಲಾಜ್‌ನಲ್ಲಿ ಈ ರೀತಿ ಹೇಳಲಾಗಿದೆ –

" A provincial transport authority or a regional transport authority shall consist of such number of officials and non-officials as the Provincial Governmnet may think fit to appoint; but no person who has any financial interest, whether as proprietor, employee or otherwise in any transport undertaking shall be appointed as or continue as a member of a provincial or a regional transport authority. "

ಇಷ್ಟೇ ಅದರಲ್ಲಿ ಅಡಕವಾಗಿರತಕ್ಕ ನಿಯಮ, ಈ ನಿಯಮಕ್ಕನುಸಾರವಾಗಿ ನಾವು ಆ ಸಮಿತಿಗಳನ್ನು ನೇಮಕಮಾಡಿದ್ದೇವೆ. ನನಗೆ ಒಂದು ವ್ಯಥೆಯಾಗುತ್ತಿದೆ. ಅದೇನೆಂದರೆ ಹಾಗೆ ನೇಮಕಮಾಡಿರತಕ್ಕ ಸಮಿತಿಗಳು ತಮ್ಮ ಕಾರ್ಯಕ್ರಮಗಳನ್ನು ಷುರು ಮಾಡಿಲ್ಲ. ಆಗಲೇ ನಮ್ಮ ಮಾನ್ಯ ಸದಸ್ಯರಾದ ಜನಾಬ್ ಮಹಮದ್ ಇಮಾಂರವರು ಹೇಳಿದರು, ಕೆಲವು ಷರತ್ತುಗಳನ್ನು ಹಾಕಿದರು,

They must consider each case on its merits; they must be free from party prejudice; they should not misuse their place; they must be persons free from party politics.

ಆದರೆ ಅವರು ಹಾಕಿದಂತಹ ಅಳತೆ ಮಟ್ಟದ ಕೋಲಿನಿಂದಲೇ ಅಳತೆ ಮಾಡಿ ಯಾವ ಸದಸ್ಯರೂ ಆ ಅಳತೆ ಮಟ್ಟಕ್ಕೆ ಬರಲಿಲ್ಲ ಎನ್ನುವುದಕ್ಕೆ ಒಂದಾದರೂ ನಿದರ್ಶನ ಕೊಡತಕ್ಕ ಶಕ್ತಿ ಮಾನ್ಯ ಮಹಮದ್ ಇಮಾಂರವರಿಗೆ ಇದೆಯೇ ಎಂದು ನಾನು ಕೇಳಬೇಕಾಗಿದೆ. ಇದಕ್ಕೆ ಇಂಗ್ಲೀಷಿನಲ್ಲಿ ಒಂದು ಗಾದೆ ಇದೆ "Out of evil cometh good'' ಎಂದು.

ಇವೊತ್ತಿನ ದಿವಸ ಆದ ಚರ್ಚೆಯನ್ನು ನಾವು ನೋಡಿದರೆ ಸಂಸ್ಥಾನದಲ್ಲಿ ಈಗಾಗಲೇ ನೇಮಕಮಾಡಿರತಕ್ಕ ಪ್ರೊವಿನ್‌ಷಿಯಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಮತ್ತು ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಅವರಿಗೆಲ್ಲಾ ಇದು ಒಂದು ಮಾರ್ಗ ಸೂಚಿಸತಕ್ಕಂಥದ್ದಾಗಿದೆ. ಈ ದೃಷ್ಟಿಯಿಂದಲೂ ಅವರು ಒಂದು ಸರಿಯಾದ ರೀತಿಯಲ್ಲೇ ನಡೆಯುತ್ತಾರೆಂದು ನಾನು ನಂಬಿದ್ದೇನೆ. ಈ ದಿವಸ ಆ ಸಭೆಗಳಲ್ಲಿರತಕ್ಕ ಪ್ರತಿಯೊಬ್ಬರೂ ಅಂಥ ಉದಾತ್ತ ಧ್ಯೇಯಗಳನ್ನುಳ್ಳವರೆಂದು ಸರ್ಕಾರಕ್ಕೆ ಮನವರಿಕೆಯಾದ ಮೇಲೆ ನಾವು ಅವರನ್ನು ನೇಮಕ ಮಾಡಿಕೊಂಡಿದ್ದೇವೆ. ಇಷ್ಟು ದೀರ್ಘಕಾಲ ಈ ವಿಷಯದ ಮೇಲೆ ನಡೆದಂಥ ಚರ್ಚೆಯೆಲ್ಲವನ್ನೂ ಅವರು ತಿಳಿದುಕೊಂಡೇ ತಿಳಿದುಕೊಳ್ಳುತ್ತಾರೆ. ಇದರಿಂದ ಅವರೂ ಕೂಡಾ ಸರಿಯಾಗಿ ನಡೆಯುತ್ತಾರೆಂಬ ಭರವಸೆ ಸರ್ಕಾರದವರಿಗೆ ಸಂಪೂರ್ಣವಾಗಿರುತ್ತದೆ.

ಶ್ರೀಮಾನ್ ಬಿ. ಹುಚ್ಚೇಗೌಡರು ಹೇಳಿದರು ಸದಸ್ಯರ ಸಂಖ್ಯೆಯನ್ನು ಬಹಳ ಜಾಸ್ತಿ ಮಾಡಿದ್ದೀರಿ ಎಂದು. ಆದರೆ ಮೈಸೂರು ಸಂಸ್ಥಾನದಲ್ಲಿ ಇಂತಹ ಸಮಿತಿಗಳಲ್ಲಿ ಸೇರಿಕೊಂಡು ದೇಶಕ್ಕೆ ಸೇವೆ ಸಲ್ಲಿಸತಕ್ಕಂಥ ದಕ್ಷರೂ ಅರ್ಹತೆಯುಳ್ಳ ಮಹನೀಯರೂ ಬಹಳವಾಗಿದ್ದಾರೆ. ಆದರೆ ಈಗ ಅವರು ಏನು ಒಂದನ್ನು ಹೇಳಿದರೋ – they must be free from party politics or prejudice ಎಂದು ಅದರಂತೆ ಈ ಸಮಿತಿಗಳಿಗೆ ಒಬ್ಬರನ್ನೇ ಹಾಕಿದ್ದರೆಂದು ಇಟ್ಟುಕೊಳ್ಳೋಣ. ಆ ಒಬ್ಬ ಸದಸ್ಯರು ಆ ರೀತಿ ಆಗದಿದ್ದರೆ ಆಗ ಏನು ಮಾಡಬೇಕು? ಆದುದರಿಂದಲೇ ಒಬ್ಬರಿಗಿಂತ ಇಬ್ಬರು ಲೇಸು, ಹಬ್ಬಕ್ಕಿಂತ ಮದುವೆಲೇಸು ಎಂಬ ಗಾದೆಗನುಗುಣವಾಗಿ ಏಳು ಜನ ಸದಸ್ಯರಿದ್ದರೆ ಎಲ್ಲರಿಗೂ ಸರಿಯಾಗಿ ನೋಡಿಕೊಂಡು ಒಂದು ಸಮಭಾವನೆಯಲ್ಲಿ ನಡೆಯಲು ಅನುಕೂಲವಾಗುತ್ತದೆಂದೂ ಮತ್ತು ಒಂದು ಸರಿಯಾದ ರೀತಿಯಲ್ಲಿ, ನಿಷ್ಪಕ್ಷಭಾವನೆಯಿಂದ ಅವರು ತಮ್ಮ ಅಭಿಪ್ರಾಯಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತದೆಂದೂ ಮತ್ತೂ ಮೈಸೂರು ಸೀಮೆಯಲ್ಲಿ ಇಂಥ ಸಮಾಜ ಸೇವೆ ಸಲ್ಲಿಸತಕ್ಕಂಥ ಶಕ್ತಿ ಇರುವವರಿಗೆಲ್ಲರಿಗೂ ಸೇವೆಮಾಡತಕ್ಕಂಥ ಒಂದು

ಅವಕಾಶಕಲ್ಪಿಸಬೇಕೆಂಬ ದೃಷ್ಟಿಯಿಂದಲೂ ಅವರನ್ನು ನೇಮಕಮಾಡಿದ್ದೇವೆ ವಿನಾ ಒಂದೇ ಪಾರ್ಟಿಯವರನ್ನು ತುಂಬಿಸಬೇಕೆಂಬ ಉದ್ದೇಶದಿಂದ ಮಾಡಿರುವುದಿಲ್ಲ.

ಇಂಥ ಸಮಿತಿಗಳನ್ನು ಮಾಡತಕ್ಕದ್ದರಲ್ಲಿ ಮತ್ತೊಂದು ಉದ್ದೇಶವೇನಿತ್ತೆಂದರೆ ಹೀಗೆ ಸಮಿತಿಗಳನ್ನು ನೇಮಕ ಮಾಡಿ ಇವುಗಳಿಗೆ ಆಯಾ ಸ್ಥಳಗಳ ವಿದ್ಯಮಾನಗಳನ್ನು ಚೆನ್ನಾಗಿ ಅರಿತಿರತಕ್ಕ ಮಹನೀಯರನ್ನು ಈ ಸಮಿತಿಗಳಲ್ಲೇ ಸೇರಿಸಿ ತನ್ಮೂಲಕ ಅವರಿಂದ ದೇಶಕ್ಕೆ ಸೇವೆ ಸಲ್ಲಿಸುವಂತೆ ಮಾಡಬೇಕೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಲಾಯಿತೆಂದು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ನಾವು best men ಗಳನ್ನೇ ಆರಿಸಿದ್ದೇವೆ ಎಂದು ಹೇಳಿರತಕ್ಕ ವಿಚಾರವಾಗಿ ಜನಾಬ್ ಇಮಾಂರವರು ಒಂದು ದೊಡ್ಡ ವ್ಯಾಖ್ಯಾನವನ್ನೇ ಮಾಡಿದರು. ಇದನ್ನು ನಾನು ಸಭೆಯಲ್ಲಿ ಒತ್ತಿ ಹೇಳುತ್ತೇನೆ, ಆ ಸಮಿತಿಗಳಲ್ಲಿ ನೇಮಿಸಿರತಕ್ಕವರನ್ನು ಬಿಟ್ಟರೆ ಇನ್ನುಳಿದವರ ಪೈಕಿಯಾರೂ ಅಂಥ ಸಮರ್ಥರೂ, ದಕ್ಷರು ಇರುವುದಿಲ್ಲವೆಂದು ನಾನು ಹೇಳಲಿಲ್ಲ. ಈ ಸಂಬಂಧವಾಗಿ ಜನಾಬ್ ಇಮಾಂರವರು ಮಾಡಿದ ಅರ್ಥ ಅನರ್ಥವಾಗಿದೆಯೆಂದು ಹೇಳುತ್ತೇನೆ. ಶ್ರೀಮಾನ್ ಪಟ್ಟಾಭಿರಾಮನ್‌ರವರು, ನನ್ನ ರಕ್ಷಣೆಗಾಗಿ ಬಂದು best men ಎಂದು ಪಾರ್ಲಿಮೆಂಟರಿ ಸಾಹಿತ್ಯ ಭಾಷೆಯನ್ನುಪಯೋಗಿಸಿ ಹೇಳಿದರೇ ಶಿವಾಯಿ ಆ ಸದಸ್ಯರು ವಿನಾ ಬೇರೆಯಾರೂ ಅಂಥಾ ದಕ್ಷರಾದವರು ಮೈಸೂರು ಸಂಸ್ಥಾನದಲ್ಲಿಲ್ಲ ಎಂದು ಹೇಳಲಿಲ್ಲ ಮತ್ತು ಅದು ನನ್ನ ವಾದವೂ ಅಲ್ಲ. ಏನಾದರು ಆ ಪಾರ್ಲಿಮೆಂಟರಿ ಸಾಹಿತ್ಯಭಾಷೆಯನ್ನು ಪ್ರಯೋಗಿಸುತ್ತಾ ಹೇಳಿದ್ದಿಷ್ಟೆ – ಅರ್ಹತೆ, ದಕ್ಷತೆ, ಕಾರ್ಯನಿಷ್ಠೆ, ಉದಾತ್ತ ಧ್ಯೇಯಗಳು ಯಾರಲ್ಲಿ ಕಾಣಬಂದವೋ ಅಂಥವರಲ್ಲಿ ಕೆಲವರನ್ನು ನಾವು ಆರಿಸಿಕೊಂಡಿದ್ದೇವೆ ಎಂದು ಹೇಳಿದೆನೇ ಹೊರತು ಬೇರೆ ಯಾರೂ ಅಂಥವರಿಲ್ಲ ಎಂಬ ವಾದ ಮಾಡಲಿಲ್ಲ.

ಶ್ರೀಮಾನ್ ಬಿ. ಪುಚ್ಚೇಗೌಡರು ಹೇಳಿದರು ಬೇರೆಯವರಿಗೆ ಯಾರಿಗೂ ತಾವು ಇದರಲ್ಲಿ ಅವಕಾಶ ಕೊಡಲಿಲ್ಲ ಎಂದು. ಅವರು ಹೇಳಿದ್ದು ಸರಿಯಾದ್ದಲ್ಲ. ಆದರೆ ಯಾರು ಯಾರನ್ನು ಇದಕ್ಕೆ ಹಾಕಬೇಕು, ಯಾರಿಗೆ ಅಂಥಾ disqualification ಇರುವುದಿಲ್ಲ, ಯಾರಿಗೆ ದುಡ್ಡಿನ ಚಪಲ ಇರುವುದಿಲ್ಲ. ಅಂಥವರನ್ನು ನೇಮಕ ಮಾಡಬೇಕಾಗಿತ್ತು. ಆದರೆ ಅವರು ಹಾಗೆ ಎತ್ತಿದ ಒಂದು ಅಕ್ಷೇಪಣೆಗೆ ಸರಿಯಾದ ಉತ್ತರವನ್ನು ಶ್ರೀಮಾನ್ ರುದ್ರಪ್ಪನವರೂ ಮತ್ತು ತಿಮ್ಮಪ್ಪಗೌಡರೂ ಈಗಾಗಲೇ ಕೊಟ್ಟಿದ್ದಾರೆ. ಆದ್ದರಿಂದ ನಾನಿನ್ನು ಇದರ ಬಗ್ಗೆ ಹೆಚ್ಚಾಗಿ ಮಾತನಾಡಲು ಇಷ್ಟಪಡುವುದಿಲ್ಲ.

ಕಡೆಯದಾಗಿ ಒಂದು ವಿಷಯವನ್ನು ತಮ್ಮ ಕ್ಷಮಾಪಣೆ ಪಡೆದು ಹೇಳಬೇಕಾಗಿದೆ. ನಿನ್ನೆಯ ದಿವಸ ತಿಳಿಸಿದ್ದ ವಿಷಯ ತಪ್ಪಾಗಿದೆ. ಅದನ್ನು ಈ ದಿವಸ ಸರಿಪಡಿಸಿಕೊಂಡು ತಿಳಿಸಲು ತಮ್ಮ ಕ್ಷಮಾಪಣೆ ಬೇಡುತ್ತೇನೆ. ಏನೆಂದರೆ–

ನಿನ್ನೆಯ ದಿವಸ ಮದ್ರಾಸ್ state transport authority ಹೋಂ ಸೆಕ್ರೆಟರಿಗಳೆಂದು ಹೇಳಿದ್ದೆ. ಅದು ತಪ್ಪು. ಅದಕ್ಕೆ ಬೇರೆ ಚೇರ್ಮನ್ನರಿದ್ದಾರೆ. ಆದರೆ ಕೆಲವು ದಿವಸಗಳ ಹಿಂದೆ ಆ ರೀತಿ ಇದ್ದದ್ದು ಇತ್ತೀಚೆಗೆ ಬದಲಾವಣೆಯಾಗಿದೆಯೆಂದು ಗೊತ್ತಾಯಿತು. ಇದಕ್ಕಾಗಿ ನಾನು ಕ್ಷಮಾಪಣೆ ಬೇಡುತ್ತೇನೆ.

ಇನ್ನು ಈ ಸಮಿತಿಗಳು ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ಮತ್ತು ದಕ್ಷತೆಯಿಂದ ನಿರ್ವಹಿಸಲು ಅನುಕೂಲವಾಗುವಂತೆ ಬಹಳ ಉದಾತ್ತ ಧ್ಯೇಯಗಳಿಂದ ಹೆಚ್ಚಿನ ಅಧಿಕಾರಗಳನ್ನು ಕೊಡಲಾಗಿದೆಯೇ ವಿನಾ ಬೇರೆ ಏನೂ ಕಾರಣಗಳಿಲ್ಲ. ಈ ಸಮಿತಿಯ ಸದಸ್ಯರು ಯಾರಾದರೂ ಹಾದಿತಪ್ಪಿ ಅಡ್ಡಹಾದಿಗೆ ಹೋಗಿದ್ದಾರೆಂದು ಕಂಡುಬಂದರೆ ಅವರನ್ನು ತಿದ್ದಿ, ಕೂಡಲೇ ಅಂಥಾದ್ದನ್ನೆಲ್ಲಾ ಸರಿಪಡಿಸುತ್ತೇವೆಂದು ಸದ್ಯಕ್ಕೆ ಸಭೆಗೆ ಇಷ್ಟು ಭರವಸೆ ಹೇಳಿದರೆ ಸಾಕೆಂದು ಕಾಣುತ್ತದೆ.

ಶ್ರೀಮಾನ್ ಹುಚ್ಚೇಗೌಡರು ಹೇಳಿದರು – ಸದಸ್ಯರ ಸಂಖ್ಯೆ ಜಾಸ್ತಿ ಆಯಿತು ಎಂದು. ಇನ್ನು ಕೆಲವರು ಅದನ್ನು ಇನ್ನೂ ಜಾಸ್ತಿಮಾಡಬೇಕು ಎಂದು ಹೇಳುತ್ತಿದ್ದಾರೆ. ಆಗಲೇ ಶ್ರೀ ಪಟ್ಟಾಭಿರಾಮನ್‌ರವರು ಹೇಳಿದರು, 'ಯಾರಾದರೂ ಬನ್ನಿ–ನನಗೇನೂ ಅ ಇಷ್ಟವಿಲ್ಲ' ಎಂಬುದಾಗಿ. ಆದರೆ ಯಾವ ಮಾನ್ಯ ಸದಸ್ಯರೂ ಇದನ್ನು ಮನಸ್ಸಿಗೆ ಅಷ್ಟು ಹೆಚ್ಚಿಗೆ ಹಚ್ಚಿಕೊಳ್ಳಬಾರದು. ಅವರೆಲ್ಲರೂ ಅದರಲ್ಲಿದ್ದು ಸೇವೆಮಾಡಬೇಕೆಂಬುದೇ ನಮ್ಮ ಇಷ್ಟ. ಈಗ ನಾನು ಕೊಟ್ಟಂತಹ ಸಮಜಾಯಿಷಿ ಮೇಲೆ ವಿರೋಧ ಪಕ್ಷದವರು ಒಂದು ಒಪ್ಪಿಗೆಗೆ ಬರಲು ಅವಕಾಶ ಇದೆಯೆಂದು ಹೇಳುತ್ತೇನೆ. ಹಾಗೆ ಅವರು ಒಪ್ಪಿಗೆಗೆ ಒಡಂಬಿಟ್ಟರೆ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

* * *

# ಬಜೆಟ್ ಮೇಲಿನ ಚರ್ಚೆ

## 18, ಮಾರ್ಚ್ – 1953

ಶ್ರೀ ಎಚ್.ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು) : ಸ್ವಾಮಿ, ಅಧ್ಯಕ್ಷರೇ, ನನ್ನ ಮಾನ್ಯ ಸ್ನೇಹಿತರು ಇದುವರೆಗೆ ಈಗ ಸುಮಾರು ನಾಲ್ಕು ದಿವಸಗಳ ಕಾಲ ಬಡ್ಜೆಟ್ಟಿನ ಮೇಲೆ ಬಂದ ಅನೇಕ ಚರ್ಚೆಗಳಿಗೆ ಜವಾಬನ್ನು ಕೊಟ್ಟಿರುತ್ತಾರೆ. ಈಗ ನನ್ನ ಪಾಲಿಗೆ ಬಿದ್ದಿರತಕ್ಕದ್ದು ನನಗೆ ಸಂಬಂಧಪಟ್ಟ ಇಲಾಖೆಗಳ ವಿಚಾರದಲ್ಲಿ ಮಾನ್ಯ ಸದಸ್ಯರು ಯಾವ ಯಾವ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೋ ಅವುಗಳ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಸೂಕ್ಷ್ಮವಾಗಿ ಸಭೆಯ ಗಮನಕ್ಕೆ ತರುವುದು, ಕೂಲಂಕಷವಾಗಿ ಹೇಳತಕ್ಕ ಅವಕಾಶ ಬಂದಾಗ ಆ ವಿಷಯಗಳನ್ನು ತಿಳಿಸುತ್ತೇನೆ. ಸದ್ಯಕ್ಕೆ ಸೂಕ್ಷ್ಮವಾಗಿ ಒಂದೆರಡು ಅಂಶಗಳನ್ನು ತಿಳಿಸುತ್ತೇನೆ. ಇವುಗಳನ್ನು ಹೇಳುವುದಕ್ಕೆ ಮುಂಚೆ ಸಾಧಾರಣವಾದ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದಿದ್ದೇನೆ. ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯ ವಿಚಾರದಲ್ಲಿ ಯೋಚನೆ ಮಾಡಬೇಕಾದರೆ ಈ ಹೊತ್ತಿನ ದಿವಸ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಯಾವ ರೀತಿಯಿದೆ, ಇದನ್ನು ಸರಿಪಡಿಸಬೇಕಾದರೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು, ಈ ಪರಿಸ್ಥಿತಿ ಹೀಗೆಯೇ ಇನ್ನೂ ಎಷ್ಟು ವರ್ಷಗಳ ಕಾಲ ನಡೆಯುವುದಕ್ಕೆ ಸಾಧ್ಯ ಎಂಬ ಅಂಶಗಳನ್ನೆಲ್ಲಾ ನಾವು ಯೋಚನೆ ಮಾಡಬೇಕಾಗಿದೆ. ಇದು ಅಧಿಕಾರ ವಹಿಸಿರತಕ್ಕ ಬರಿಯ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಸೇರಿದುದು ಎನ್ನಿಸುವುದಿಲ್ಲ. ನಮ್ಮ ಮಾನ್ಯ ಸ್ನೇಹಿತರಾದ ವಿರೋಧಪಕ್ಷದವರೂ ಸಹ ಈ ಅಂಶವನ್ನು ತೀವ್ರವಾಗಿ ಆಲೋಚನೆ ಮಾಡಬೇಕೆಂದು ಅವರಲ್ಲಿ ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಒಂದು ವಿಷಯವನ್ನು ಹೇಳಬೇಕಾದರೆ, ಬಹಳ ಸುಲಭವಾಗಿ ಇದು ಸರಿಯಲ್ಲ, ಅದು ಸರಿಯಲ್ಲ ಎಂದು ಹೇಳಬಹುದು. ಆದರೆ ಏನು ಮಾಡಬೇಕಾಗಿತ್ತು, ಈಗ ಮಾಡುವುದು ಸರಿಯಿಲ್ಲ, ಹೀಗೆ ಮಾಡಿದ್ದರೆ ಸರಿಯಾಗಿತ್ತು ಎಂದು ವಾದ ಬಂದರೆ ನಾನು ಸೌಹಾರ್ದದಿಂದ ಅದನ್ನು ಸ್ವಾಗತಿಸುತ್ತೇನೆ. ಟೀಕೆ ಮಾಡುವುದು ಬಹಳ ಸುಲಭ. ಟೀಕೆ ಮಾಡುವುದು ತಪ್ಪೆಂದು ನಾನು ಹೇಳುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಟೀಕೆ ಮಾಡಬೇಕಾದುದು ಅತ್ಯಾವಶ್ಯಕವೆಂದು ತಿಳಿದಿದ್ದೇನೆ. ಆದರೆ ಅದು ನಿಜವಾಗಿ

ರಚನಾತ್ಮಕ ಟೀಕೆಯಾಗಿರಬೇಕೇ ಹೊರತು Scathing criticism ಆದರೆ ಪ್ರಯೋಜನವಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರುತ್ತೇನೆ.

ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಹುಚ್ಚೇಗೌಡರು ಮತ್ತು ಇತರ ಕೆಲವು ಮಾನ್ಯ ಸ್ನೇಹಿತರು ವ್ಯವಸಾಯದ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಹೇಳಿದ್ದಾರೆ. ವ್ಯವಸಾಯ ಲಾಭದಾಯಕವಾಗಿಲ್ಲ, ಚೆನ್ನಾಗಿ ನಡೆಯುತ್ತಿಲ್ಲ, ವ್ಯವಸಾಯಗಾರರನ್ನು ಸರ್ಕಾರ ಅಲಕ್ಷ್ಯ ಮಾಡಿದೆ ಎಂಬ ವಾದವನ್ನು ಅವರು ಸಭೆಯ ಮುಂದಿಟ್ಟರು. ಈ ವಿಷಯವನ್ನು ನಾವು ಸ್ವಲ್ಪ ಆಲೋಚನೆ ಮಾಡೋಣ. 1947ನೆಯ ಇಸವಿಯಿಂದ ಸರ್ಕಾರ ವ್ಯವಸಾಯಗಾರನ ವಿಷಯದಲ್ಲಿ ಅವನ ಅಭಿವೃದ್ಧಿಯ ವಿಚಾರದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬುದನ್ನು ನಾನು ಒಂದೆರಡು ಮಾತುಗಳಲ್ಲಿ ತಿಳಿಸುತ್ತೇನೆ. ವ್ಯವಸಾಯಗಾರನ ಕಷ್ಟ ಈ ಹೊತ್ತಿನದಲ್ಲ. ಸುಮಾರು 200 ವರ್ಷಗಳ ಚರಿತ್ರೆಯನ್ನು ತೆಗೆದುಕೊಂಡು ನೋಡಿದರೆ, ಗ್ರಾಮಾಂತರಗಳ ಐಶ್ವರ್ಯ ಪಟ್ಟಣಗಳ ಕಡೆ ಸಾಗಿ ಹೋಗಿದೆ. ಪಟ್ಟಣಗಳ ಜೀವನವನ್ನು ಹಳ್ಳಿಗಳ ಜೀವನದೊಡನೆ ಹೋಲಿಸಿ ನೋಡಿದರೆ ಬಹಳ ಸುಖವಾಗಿ ಕಂಡಿದೆ ಎಂದು ಗೊತ್ತಾಗಿದೆ. ಇದಕ್ಕೆ ಕಾರಣವನ್ನು ಪೂರ್ಣವಾಗಿ ಪಂಚವಾರ್ಷಿಕ ಯೋಜನೆಯನ್ನು ತಯಾರು ಮಾಡಿದ ಮಹನೀಯರು ಚೆನ್ನಾಗಿ ಮನಗಂಡಿದ್ದಾರೆ. ಆದುದರಿಂದಲೇ ಅವರು ತಮ್ಮ ಯೋಜನೆಯಲ್ಲಿ ವ್ಯವಸಾಯಕ್ಕೆ ಅಗ್ರತಾಂಬೂಲವನ್ನು, ಪ್ರಥಮ ಸ್ಥಾನವನ್ನು ಕೊಟ್ಟಿರುವುದನ್ನು ಕಾಣಬಹುದು. ಒಂದೇ ಒಂದು ಉದಾಹರಣೆಯನ್ನು ಹೇಳಬೇಕಾದರೆ, ಈ ಹೊತ್ತು ಬೆಂಗಳೂರು ನಗರದ ಜನ ಸಂಖ್ಯೆಯನ್ನು ತೆಗೆದುಕೊಂಡು ನೋಡೋಣ. ಬೆಂಗಳೂರು ನಗರದಲ್ಲಿ ಹಿಂದಿದ್ದ ಜನಸಂಖ್ಯೆ ಎಷ್ಟು, ಈ ಹೊತ್ತು ಎಷ್ಟಾಗಿದೆ ಎಂಬುದನ್ನು ನೋಡಿದರೆ, ಹೇಗೆ ಜನರು ನಗರಗಳ ಕಡೆ ಗ್ರಾಮಾಂತರಗಳಿಂದ ಬರುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. 1901 ನೆಯ ಸೆನ್ಸಸ್ ಪ್ರಕಾರ 7,76,170. ಬೆಂಗಳೂರಿನ ಜನಸಂಖ್ಯೆ, ಅದೇ 1941 ರಲ್ಲಿ 14,06,760 ಆಗಿತ್ತು. ಅಂದ ಮೇಲೆ ಶೇಕಡ 90.8 ರಷ್ಟು. ಈ ನಗರದ ಜನಸಂಖ್ಯೆ ಹತ್ತು ವರ್ಷಗಳಲ್ಲಿ ಜಾಸ್ತಿಯಾಗಿದೆ. ಇಷ್ಟೇ ಅಲ್ಲದೆ, ದೊಡ್ಡ ದೊಡ್ಡ ಇತರ ನಗರಗಳನ್ನು ತೆಗೆದುಕೊಂಡರೆ, ಅಲ್ಲಿಯೂ ಜನಸಂಖ್ಯೆ ಹೆಚ್ಚಿರುವುದು ಸರ್ವೇ ಸಾಮಾನ್ಯವಾಗಿ ಕಂಡುಬರುತ್ತದೆ. ಇದಕ್ಕೆ ಕಾರಣವೇನೆಂದರೆ, ಸಾಮಾನ್ಯವಾಗಿ ಗ್ರಾಮಾಂತರಗಳಲ್ಲಿ ವಾಸಮಾಡತಕ್ಕವರಿಗೆ ಸಾಮಾನ್ಯವಾದ ಸೌಕರ್ಯಗಳು ಎಷ್ಟರಮಟ್ಟಿಗಿರಬೇಕೋ ಅಷ್ಟು ಮಟ್ಟಿಗಿಲ್ಲ. ವ್ಯವಸಾಯ ಎನ್ನುವುದೂ ಲಾಭದಾಯಕವಾದ ಕಸಬು ಎಂಬುದನ್ನು ಜನ ಮನಗಾಣಬೇಕು. ಅದಕ್ಕೇ ಇದನ್ನು ಮನಗಂಡೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಥಮ ಸ್ಥನ ಕೊಟ್ಟಿರುವುದೆಂದು ತಿಳಿಸಿದ್ದಾರೆ. ಆ ದೃಷ್ಟಿಯಿಂದ ಲೆಕ್ಕ ಹಾಕಿದರೆ, ಈಗ ರಿವರ್ಸ್ ಗೇರ್ ಹಾಕಿ ಗ್ರಾಮಾಂತರಗಳ ಜನರಿಗೆ ಪಟ್ಟಣಗಳ ಜನರಿಗಿಂತ ಹೆಚ್ಚು ಸೌಕರ್ಯ ಒದಗಿಸುವ

ಕಾಲ ಬಂದಿದೆ. ಅದಕ್ಕೇ ಅಗ್ರಸ್ಥಾನವನ್ನು ಕೊಟ್ಟಿದ್ದಾರೆ. ಆದುದರಿಂದ ಗ್ರಾಮಾಂತರಗಳನ್ನು ಸರ್ಕಾರ ಮರೆತಿದೆ, ವ್ಯವಸಾಯಗಾರರ ದೃಷ್ಟಿ ಸರ್ಕಾರಕ್ಕಿಲ್ಲ ಎನ್ನುವುದರಲ್ಲಿ ವಾಸ್ತವಾಂಶವಿಲ್ಲ.

ಈಗ ಗ್ರಾಮಾಂತರಗಳಿಗೇ ಹೆಚ್ಚು ಗಮನ ಕೊಡುತ್ತೇವೆ. ಒಂದೆರಡು ಅಂಕಿ ಅಂಶಗಳನ್ನು ಈ ಸಮಯದಲ್ಲಿ ಕೊಟ್ಟರೆ ತಪ್ಪಾಗಲಾರದು. ನನ್ನ ಮಾನ್ಯ ಸ್ನೇಹಿತರು ಇಮಾಂರವರು ಅವರದೇ ಆದ ಶೈಲಿಯಲ್ಲಿ 'Grow more food schemes a fantastic scheme' ಎಂದು ಹೇಳಿದರು. ಹೆಚ್ಚು ಆಹಾರ ಬೆಳೆಯಿರಿ ಎನ್ನುವ ಯೋಜನೆ ನಾವು ಪ್ರಾರಂಭಮಾಡಿದುದಲ್ಲ, ಅವರ ಕಾಲದಲ್ಲಿಯೂ ಶ್ರೀಮಾನ್ ಸಿದ್ದಪ್ಪನವರ ಕಾಲದಲ್ಲಿಯೂ ಇತ್ತು. ಆಗ ಏಕೆ ಈ ವಾದ ಬರಲಿಲ್ಲ? ಇದನ್ನು ಈ fantastic ಯೋಜನೆಯನ್ನು ಅವರು ಏಕೆ ಮುಂದುವರಿಸಿಕೊಂಡು ಹೋದರು ಎಂದು ಕೇಳಬೇಕಾಗಿದೆ. ಈ ಗ್ರೋ ಮೋರ್ ಫುಡ್ ಯೋಜನೆಯಿಂದ ಆಗಿರತಕ್ಕ ಮೂರು ಕಾಸಿನ ಸಹಾಯವೂ ರೈತಾಪಿ ಜನರು ಮತ್ತು ಬಡವರಿಗೆ ಮುಟ್ಟಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಇದಕ್ಕಾಗಿ ಎಷ್ಟು ಖರ್ಚಾಗಿದೆಯೋ ಅಷ್ಟು ಹಣವು ಗ್ರಾಮಾತರಗಳ ಬೆಳವಣಿಗೆಗೆ ಹೋಗಿದೆಯೆಂದು ಹೇಳಿದರೆ ಬಹುಶಃ ಇದನ್ನು ಟೀಕೆ ಮಾಡಲಾರರು ಎಂದು ಭಾವಿಸಿದ್ದೇನೆ. ಈಗ ಗ್ರೋ ಮೋರ್ ಫುಡ್ ಯೋಜನೆ ತೆಗೆದುಕೊಂಡರೆ ಇದನ್ನು ಇಂಡಿಯಾ ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಿದುದು 1949–50ರಲ್ಲಿ. ಅಲ್ಲಿಂದೀಚೆಗೆ ಈ ಯೋಜನೆ ಯಾವ ರೀತಿ ಕಾರ್ಯಗತವಾಗುತ್ತಿದೆ, ಹೆಚ್ಚು ಆಹಾರ ಬೆಳೆಯಿರಿ ಎನ್ನುವ ಯೋಜನೆಯಿಂದ ದೇಶಕ್ಕೇನಾದರೂ ಸಹಾಯವಾಗಿದೆಯೇ ಎಂಬುದನ್ನು ನೋಡುವುದಕ್ಕೆ ಇಂಡಿಯಾ ಸರ್ಕಾರದವರು ಶ್ರೀ ಕೃಷ್ಣಮಾಚಾರಿ ಸಮಿತಿಯನ್ನು ನೇಮಿಸಿದರು. ಅವರು ಎಲ್ಲವನ್ನೂ ಪರಿಶೀಲಿಸಿ, ಒಂದು ಅಮೂಲ್ಯವಾದ ವರದಿಯನ್ನು ತಯಾರಿಸಿ ಸರ್ಕಾರದ ಮುಂದಿಟ್ಟಿದ್ದಾರೆ. ಅದನ್ನು ಇಮಾಂರವರು ನೋಡಿರಬಹುದೆಂದು ತಿಳಿದುಕೊಂಡಿದ್ದೇನೆ.

ಇಂಡಿಯಾ ದೇಶದಲ್ಲಿ ವ್ಯವಸಾಯವನ್ನು ಬೆಳೆಸಬೇಕಾದರೆ, ಅಭಿವೃದ್ಧಿಪಡಿಸಬೇಕಾದರೆ ಏನೇನು ಕಷ್ಟಗಳಿವೆ, ಯಾವ ರೀತಿ ಈ ಕಷ್ಟಗಳನ್ನು ಬಗೆಹರಿಸಬೇಕು ಎಂಬುದನ್ನೆಲ್ಲಾ ಕೂಲಂಕಷವಾಗಿ ನೋಡಿ ಒಳ್ಳೆಯ ಸಲಹೆಗಳನ್ನು ಮಾಡಿದ್ದಾರೆ. ನನ್ನ ಸ್ನೇಹಿತರಾದ ಇಮಾಂರವರು ಈ ಹೊತ್ತು ಪದೇ ಪದೇ ವ್ಯವಸಾಯಗಾರರೆಂದು ಹೇಳುತ್ತಾರೆ. ವ್ಯವಸಾಯಗಾರರು ನೆಲಹತ್ತಿ ಹೋಗಿದ್ದಾಗ ಆಗಿನ ಕಾಲದಲ್ಲಿ ಅವರು ನೋಡಲಿಲ್ಲವೆಂದು ಹೇಳಿದರೆ ತಪ್ಪಲ್ಲ. ಇಂಡಿಯಾ ಸರ್ಕಾರದವರು ಬೆಲೆಯನ್ನು ಗೊತ್ತುಮಾಡಬೇಕಾದರೆ, ವ್ಯವಸಾಯಗಾರರು ಬೆಳೆದ ಕಮರ್ಷಿಯಲ್ ಕ್ರಾಪ್ಸ್ ಅಥವಾ ದವಸಕ್ಕೆ ಪರಮಾವಧಿ ಬೆಲೆಯನ್ನು ಹೇಗೆ ಗೊತ್ತುಮಾಡುತ್ತೇವೋ ಅದೇ ರೀತಿ ಕನಿಷ್ಠ ಬೆಲೆಯ ಗೊತ್ತು ಮಾಡುವುದು ಮುಖ್ಯ ಎನ್ನುವ ಅಮೂಲ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ನಾವು ಮರೆಯುವ

ಹಾಗಿಲ್ಲ. ಆ ದೃಷ್ಟಿಯಿಂದ ತೆಗೆದುಕೊಂಡರೆ 1919 ರಿಂದ 4,82,94,262 ರೂಪಾಯಿಗಳನ್ನು ಹೆಚ್ಚು ಆಹಾರ ಬೆಳೆಯಿರಿ ಎನ್ನುವ ಯೋಜನೆಗೆ ಇಂಡಿಯಾ ಸರ್ಕಾರದವರ ಸಹಾಯ ಮಾಡಿದ್ದಾರೆ. ಈ ರೀತಿ ಮಾಡಿರುವ ಸಹಾಯದಲ್ಲಿ ನನ್ನ ಮಾನ್ಯ ಸ್ನೇಹಿತರ ಗಮನಕ್ಕೆ ಒಂದು ವಿಷಯವನ್ನು ತರಬೇಕಾಗಿದೆ. ಎರಡು ಭಾರಿ ನೀರಾವರಿ ಯೋಜನೆಗಳಿಗೆ, ಒಳ್ಳೆಯ ಬೀಜಗಳನ್ನು ಕೊಡುವುದಕ್ಕೆ, ಗೊಬ್ಬರ ಕೊಡುವುದಕ್ಕೆ, ಈ ರೀತಿ ಕೆಲವು ಮೈನರ್ ಯೋಜನೆಗಳಿಗೆ ಯಾವ ರೀತಿ ಖರ್ಚು ಮಾಡಿದ್ದೇವೆಂಬುದನ್ನು ಲೆಕ್ಕ ಮಾಡಿದರೆ 3,63,01,689 ರೂಪಾಯಿಗಳಾಗುತ್ತವೆ. ಮೇಜರ್ ನೀರಾವರಿ ಯೋಜನೆಗಳು, ಖಾಯಮ್ಮಾಗಿ ನಮ್ಮ ದೇಶದಲ್ಲಿ ಸದಾ ಕಾಲ ರೈತನಿಗೆ ಅನುಕೂಲ ಮಾಡುವಂಥ, ಅವನ ಆರ್ಥಿಕ ಬೆಳವಣಿಗೆಗೆ ಅನುಕೂಲಾಗುವ ಕೆರೆಗಳು ಮತ್ತು ಲಿಫ್ಟ್ ಇರಿಗೇಷನ್ ಇವುಗಳಿಗೆ ಖರ್ಚು ಮಾಡಿದ್ದೇವೆ.

ನಾವು ಖರ್ಚುಮಾಡಿರುವ ಹಣದಲ್ಲಿ ಶೇಕಡ 91.8 ಭಾಗ ಪ್ರೊಡಕ್ಷನ್ ವರ್ಕ್ಸಿಗೇ ಹಾಕಿದೆ. ಕೇವಲ 8.2 ಪರ್ಸೆಂಟ್ ಗೊಬ್ಬರ ಸರಬರಾಜು ಮಾಡುವ ಯೋಜನೆಗೆ ಹಾಕಿದೆ. ಇದು ಮುಖ್ಯವಾಗಿ ಆಗಬೇಕು. ಫೆಂಟಾಸ್ಟಿಕ್ ಸ್ಕೀಂ ಎಂದು ಹೇಳಿದರೂ, ಶೇಕಡ 8.2 ಭಾಗ ಹೀಗೆ ಹಾಕಿರುವುದು ನಮ್ಮ ದೃಷ್ಟಿಯಲ್ಲಿ ಅಗತ್ಯವಾಗಿದೆ. ಆ ದೃಷ್ಟಿಯಿಂದ ಈ ಹಣದಿಂದ ನಮ್ಮ ದೇಶದ ಆರ್ಥಿಕ ಬೆಳವಣಿಗೆಗೂ ಹೆಚ್ಚು ಆಹಾರ ಬೆಳೆಯುವ ಯೋಜನೆಗೂ ಎಷ್ಟು ಉಪಕಾರವಾಗಿದೆ, ಹೆಚ್ಚು ಆಹಾರ ಬೆಳೆಯುವ ಯೋಜನೆ ಪ್ರಕಾರ ರೈತರಿಗೆ ಎಷ್ಟು ಅನುಕೂಲವಾಗಿದೆ ಎಂಬುದನ್ನು ಮಾನ್ಯ ಸ್ನೇಹಿತರು ಗಮನಿಸಬೇಕೆಂದು ಪ್ರಾರ್ಥಿಸುತ್ತೇನೆ. ನಿಂದೆ ಮಾಡಬಹುದು, ಅದು ತಪ್ಪಲ್ಲ – ನಿಂದೆ ಎಂದು ಹೇಳುವುದಿಲ್ಲ, ನಾವು ಆ ರೀತಿ ಹೇಳುವುದರಿಂದ ಕಣ್ಣಿಗೆ ಅಂಜನ ಹಾಕಿದ ಹಾಗಾಗಬಹುದು – ಒಂದು ವೇಳೆ ಮನುಷ್ಯರು ಮಾಡುವ ದಾರಿಯಲ್ಲಿ ತಪ್ಪಿದ್ದರೆ ತಿದ್ದುವುದಕ್ಕೆ ದಾರಿಯಿದೆ. ಆದರೆ ಫೆಂಟಾಸ್ಟಿಕ್ ಸ್ಕೀಂ ಎಂದು ಹೇಳುವ ವಾದ ಸರಿಯಲ್ಲ ಎಂದು ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆಮೇಲೆ ಇನ್ನೊಂದು ವಿಷಯ ಒಪ್ಪಿಕೊಳ್ಳೋಣ, ಈಗ ಇದು ಕೇವಲ ರೈತರಿಗೆ ಸೇರಿರುವ ಒಂದು ಅನುಕೂಲ. ಇದು ಯಾವುದೆಂದರೆ ನೈಸರ್ಗಿಕವಾದ ಸಂಪತ್ತು ಮೈಸೂರಿನಲ್ಲಿ ಯಾವುದಿದೆಯೋ ಆ ಎಲೆಕ್ಟ್ರಿಸಿಟಿ. ಮೈಸೂರು ದೇಶದಲ್ಲಿ ಎಷ್ಟು ವಿದ್ಯುಚ್ಛಕ್ತಿ ಸೌಕರ್ಯವಿದೆಯೋ ಅಷ್ಟನ್ನೂ ಬೇರೆ ಪ್ರಾಂತಗಳಲ್ಲಿ ಹಿಂದೂಸ್ಥಾನದಲ್ಲೆಲ್ಲೂ ಇಲ್ಲವೆಂದು ಹೇಳುವಷ್ಟನ್ನೂ, ವ್ಯವಸಾಯಕ್ಕಾಗಿ ಉಪಯೋಗಿಸಿ ಸಹಾಯ ಮಾಡುವ ವಿಚಾರದಲ್ಲಿ ಮೊನ್ನೆ ತಾನೆ ರಾಮಮೂರ್ತಿ ಸಮಿತಿಯವರು ಬಂದು ನಮ್ಮ ದೇಶದ ಅಭಾವ ಸ್ಥಳಗಳಿಗೆ ಭೇಟಿ ಕೊಟ್ಟಾಗ ಅಮೂಲ್ಯವಾದ ಸಲಹೆ ಕೊಟ್ಟಿದ್ದಾರೆ. ಅವರ ವರದಿಯಲ್ಲಿ, ಹಿಂದೂಸ್ಥಾನದಲ್ಲಿ ಸಬ್‌ಸಾಯಿಲ್ ವಾಟರ್ ಎಂದರೆ, ಕೆಳಗೆ ಇರುವ ನೀರನ್ನು ವಿದ್ಯುಚ್ಛಕ್ತಿಯಿಂದ ಎತ್ತಿ ರೈತರಿಗೆ ಅನುಕೂಲಮಾಡುವ ಸೌಕರ್ಯ ಮೈಸೂರು ಸಂಸ್ಥಾನದಲ್ಲಿ ಬಿಟ್ಟರೆ ಬೇರೆ ಯಾವ ಕಡೆಯೂ ಇಲ್ಲ ಎಂದು

ಒಂದು ವಾದ ಹೇಳಿದ್ದಾರೆ. ಇಷ್ಟೇ ಅಲ್ಲದೆ, 'ಇದಕ್ಕೆ ಎಷ್ಟು ಹಣ ಬೇಕೋ ಅಷ್ಟನ್ನೂ ನಾವು ಕೊಡುವುದಕ್ಕೆ ತಯಾರಾಗಿದ್ದೇವೆ. ಇದನ್ನು ಮಾಡಿ ರೈತರಿಗೆ ಅನುಕೂಲಮಾಡಿ ಎಂದು ನಮ್ಮ ಮುಂದೆ ಹೇಳಿದ್ದಾರೆ. ಮಾನ್ಯ ಸ್ನೇಹಿತರಿಗೆ ಹೇಳುವುದಾದರೆ Lift Irrigation by electricity ನಮ್ಮ ರಾಜ್ಯದಲ್ಲಿ, ಶ್ರೀಮನ್ಮಹಾರಾಜರವರು 1925ನೆಯ ಇಸವಿಯಲ್ಲಿ ತಮ್ಮ ಭಾಷಣದಲ್ಲಿ ಸೂಚಿಸಿರುವಂತೆ, 1928-29ರಲ್ಲಿ ಮೊದಲನೆಯ ಸಾರಿ ಜಾರಿಗೆ ಬಂದು ಕೆಲವು ಪಂಪುಗಳು ಸರ್ವಿಸ್ಸಿಗೆ ಬಂದಿವೆ. ಆಗ 107 ಪಂಪುಗಳಿದ್ದುವು.

ಆಮೇಲೆ ಇನ್ನೊಂದು ವಾದ ನಮ್ಮ ಸ್ನೇಹಿತರು ಹೇಳಿದರು. ತಕಾವಿ ಸಾಲ ಮುಂತಾದ ರೀತಿಯಲ್ಲಿ ಕೆಲವು ಸಾಲಗಳನ್ನು ರೈತರಿಗೆ ಕೊಡುವ ವಿಚಾರದಲ್ಲಿ ಅನುಕೂಲತೆ ಕಲ್ಪಿಸಿಕೊಡಬೇಕೆಂದು ಹೇಳಿದರು. ಮಾನ್ಯ ಮಿತ್ರರು ಇದಕ್ಕೆ ಆಗಲೇ ಜವಾಬು ಹೇಳಿದ್ದಾರೆ. ರೈತರಿಗೆಷ್ಟು ಕ್ರೆಡಿಟ್ ಫೆಸಿಲಿಟೀಸ್ ಇರಬೇಕೋ ಅಷ್ಟಿಲ್ಲ. ಇದನ್ನು ಗಮನಿಸಿ ವಿಸ್ತಾರಮಾಡಬೇಕು, ರೈತರಿಗೆ ಬೇಕಾದ ಹಣಕಾಸನ್ನು ಹೆಚ್ಚಾಗಿ ಒದಗಿಸಬೇಕು ಎಂಬ ದೃಷ್ಟಿಯಿಂದ ಮುಂದುವರಿಯುತ್ತಿದ್ದೇವೆ. ಶೀಘ್ರದಲ್ಲಿಯೇ ರಿಸರ್ವ್ ಬ್ಯಾಂಕಿನವರು, ಪಂಚವಾರ್ಷಿಕ ಯೋಜನೆಯಲ್ಲಿ ಹೇಳಿರುವ ಹಾಗೆ, ಸಹಾಯಕ್ಕೆ ಬರುವ ನಿರೀಕ್ಷೆಯಿರುವಾಗ ಶೀಘ್ರದಲ್ಲೇ ಈ ಕೊರತೆ ನಿವಾರಣೆಯಾಗುವ ಕಾಲ ಬಂದಿದೆಯೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಕೆಲವು ಮಾನ್ಯ ಸ್ನೇಹಿತರು ಶ್ರೀಮಾನ್ ಹೊಳಲ್ಕೆರೆಯಿಂದ ಬಂದಿರುವ ಶಿವಪ್ಪನವರಿರಬೇಕು – ರಿಸರ್ಚ್ ಸೆಕ್ಷನ್ ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ವಾದ ಮಾಡಿದರು. ಒಂದಂಶ ಹೇಳಬೇಕಾದರೆ, ರಿಸರ್ಚ್ ಸೆಕ್ಷನ್ನಿನಲ್ಲಿ ಕೆಲವು ನ್ಯೂನ್ಯತೆಗಳಿವೆ. ರಿಸರ್ಚ್ ಸೆಕ್ಷನ್ ಯಾವ ಯಾವ ಜಾಗದಲ್ಲಿ ಯಾವ ಯಾವ ಪೈರಿನ ವಿಚಾರದಲ್ಲಿ ರಿಸರ್ಚ್ ಮಾಡುತ್ತದೆಯೋ ಅಲ್ಲೇ ಇರಬೇಕು, ಇದ್ದು ಮುಂದುವರಿಸಿಕೊಂಡು ಹೋಗಬೇಕು ಎಂದು ಬಹಳ ತೀವ್ರವಾಗಿ ಈ ವಿಷಯದಲ್ಲಿ ಮುಂಚೆಯೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆದರೆ ರಿಸರ್ಚ್‌ನಿಂದ ಪ್ರಯೋಜನವಿಲ್ಲ, ರಿಸರ್ಚ್ ಮಾಡತಕ್ಕ ಅವಶ್ಯಕತೆಯಿಲ್ಲ ಎಂಬ ವಾದ ಸರಿಯಲ್ಲ. ನಾವು ಎಷ್ಟು ಮಟ್ಟಿಗೆ ನಿರೀಕ್ಷೆ ಮಾಡಬಹುದೋ ಅಷ್ಟು ಫಲ ದೊರಕಿಲ್ಲವೆಂದು ಹೇಳಿದರೆ, ರಿಸರ್ಚ್ ಎಂದು ಹೇಳುವುದನ್ನು ತಕ್ಷಣ ಹಿಡಿದು ತೋರಿಸುವುದಕ್ಕಾಗುವುದಿಲ್ಲ. It is a continual process going on for several years. ಒಂದು ರಿಸರ್ಚ್ ಮಾಡಿ ಫಲ ತೋರಿಸುವುದಕ್ಕೆ ಒಂದು ಉದಾಹರಣೆ ಹೇಳಬೇಕಾದರೆ, ಕೊಳೆ ರೋಗ ಬಂದಾಗ ತಾವು ನೋಡಿರುವಂತೆ ಎಷ್ಟು ಹೆಚ್ಚಾಗಿ ರಿಸರ್ಚ್ ಮಾಡಿ ಎಷ್ಟು ಅನುಕೂಲವಾಯಿತು! ಅದನ್ನು ನೋಡಿ. ಆ ದೃಷ್ಟಿಯಿಂದ ನೋಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ವ್ಯವಸಾಯದ ಇಲಾಖೆಯ ವಿಚಾರದಲ್ಲಿ ಹೇಳಬೇಕಾದರೆ ಈಗ ನಮ್ಮ ಅಧಿಕಾರಿಗಳಿಗೆ ಚೆನ್ನಾಗಿ ಗೊತ್ತಾಗಿದೆ. ಯಾವ ಇಲಾಖೆಗಳಿಗಿಂತಲೂ ವ್ಯವಸಾಯ ಇಲಾಖೆಯ ವಿಚಾರದಲ್ಲಿ ಎಲ್ಲರ ದೃಷ್ಟಿ ಅದರ ಮೇಲೆ ಬಿದ್ದಿದೆ ಎಂದು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯಿಂದ ಪದೇ ಪದೇ ಅಧಿಕಾರಿಗಳಿಗೆ ಹೇಳುತ್ತಿದ್ದೇನೆ. ಅವರಿಗೆ ಸರಿಯಾದ ಮಾರ್ಗದಲ್ಲಿ ದೇಶಕ್ಕೆ ತಮ್ಮ ಸೇವೆಯನ್ನು ಮಾಡಬೇಕೆಂಬ ಆಸೆ ಈಗಲೂ ಇದೆ. ಅವರು ಯಾವ ರೀತಿಯಲ್ಲಿ ಹೋಗುತ್ತಿದ್ದಾರೆಂಬುದನ್ನೂ ಅವರು ಮಾಡುವ ಕಾರ್ಯಾಚರಣೆಯನ್ನು ನೋಡಿ ಇದನ್ನು ತಿಳಿದುಕೊಂಡಿದ್ದೇನೆ. ಇದಿಷ್ಟು ವ್ಯವಸಾಯದ ಇಲಾಖೆಯ ವಿಚಾರದಲ್ಲಿ ಹೇಳಿದರೆ ಸಾಕಾಗಿದೆ.

ಇನ್ನು ಟ್ರ್ಯಾಕ್ಟರ್ ಸರ್ವೀಸ್ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಶ್ರೀಮಾನ್ ಮರಿಯಪ್ಪನವರು ಟ್ರ್ಯಾಕ್ಟರ್ ಸರ್ವೀಸ್ ವಿಚಾರದಲ್ಲಿ ಒಂದಂಶ ಹೇಳಿದ್ದಾರೆ. ಈ ಟ್ರ್ಯಾಕ್ಟರ್‌ನಿಂದ ನಮ್ಮ ದೇಶದಲ್ಲೇ ಅಲ್ಲ ತೊಂದರೆಯಾಗಿರುವುದು, ಇದಕ್ಕೆ ಅನೇಕ ಕಾರಣಗಳಿವೆ, ಈಗ ಅದನ್ನು ಕೂಲಂಕುಷವಾಗಿ ಹೇಳುವುದಿಲ್ಲ. ಏಕೆಂದರೆ ಕಾಲಾವಕಾಶವಿಲ್ಲ. ಇಂಡಿಯಾ ಸರ್ಕಾರದವರೂ ಸಹ ಈ ಟ್ರಾಕ್ಟರುಗಳು ಸರಿಯಾಗಿ ಕೆಲಸಮಾಡುತ್ತಿಲ್ಲ, ಫಲದಾಯಕವಾಗಿಲ್ಲ, ನಿರೀಕ್ಷಿಸಿರುವಷ್ಟು ಪ್ರಯೋಜನವಾಗಿಲ್ಲ, ಸರಿಪಡಿಸಬೇಕೆಂಬ ದೃಷ್ಟಿಯಿಂದ ಒಂದು ಸಮಿತಿಯನ್ನು ಮೊನ್ನೆ ನೇಮಿಸಿ ಇದಕ್ಕೆ ಕಾರಣವೇನೆಂದು ವಿಮರ್ಶಿಸಲು ಪ್ರಯತ್ನಪಟ್ಟಿದ್ದಾರೆ. ನರಸಿಂಹನ್ ಎಂಬ ಐ.ಸಿ.ಎಸ್. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನೇಮಕಮಾಡಲ್ಪಟ್ಟಿರುವ ಈ ಸಮಿತಿಯ ಟರ್ಮ್ಸ್ ಆಫ್ ರೆಫರೆನ್ಸ್ ನೋಡಿದರೆ, ಈ ಸರ್ವಿಸ್ಸಿನ ಕಷ್ಟವೇನಿದೆಯೆಂಬುದು ಗೊತ್ತಾಗುತ್ತದೆ. ಏನು ಕಷ್ಟ ಅವರಿಗಿದೆಯೋ ನಮಗೂ ಅದು ಇರುವುದರಿಂದ ಒಂದೆರಡು ಅಂಶ ಹೇಳುತ್ತೇನೆ. ಒಂದು ಕಾರಣ, ಟ್ರಾಕ್ಟರ್ಸ್ ಕೊಳ್ಳುತ್ತೇವೆ, ಕೊಂಡ ಮೇಲೆ ಬೇಕಾದ ಸ್ಪೇರ್ ಪಾರ್ಟ್ಸ್ ಸಕಾಲದಲ್ಲಿ ಸಿಕ್ಕುತ್ತಿಲ್ಲ. ಆ ದಿವಸ ನಮಗೆ ಬಂದಿರುವ ತೊಂದರೆ ಇದಕ್ಕೆ ಬೇಕಾದ ಮೆಷಿನರಿ ಇಲ್ಲದಿರುವುದು, ಬೇಕಾದ ಸಲಕರಣೆ, ಸ್ಪೇರ್‌ಪಾರ್ಟ್ಸ್ ಸರಿಯಾಗಿ ಸಿಕ್ಕದಿರುವುದು, ಇದರಿಂದ ಸರಿಯಾಗಿ ಕೆಲಸ ಮಾಡಲು ಅನಾನುಕೂಲವಾಗಿರುವುದು – ಸಾಮಾನ್ಯವಾಗಿ ಇವೇ ಮುಖ್ಯ ಕಾರಣಗಳು.

The terms of the reference of the Committee will be as follows :-

1. The standard of after sales service which the Tractor importers and dealers should be required to possess and standard charges for such service.

2. The minimum stocks of spare parts required to be kept by tractor importers and dealers and the price structure for the various kinds of spares.

3. Facilities to be provided by the Tractor importers and dealers for training of tractor operators.

4. The posibility of starting the manufacure of Tractor implement parts in India.

ಇದನ್ನು ನೋಡಿದರೆ ನಮ್ಮ ದೇಶದಲ್ಲಿ ಅನೇಕ ಕಾರಣಗಳಿಂದ ಕಷ್ಟವಾಗಿ ಈ ಟ್ರಾಕ್ಟರುಗಳು ಸರಿಯಾಗಿ ನಡೆಯುತ್ತಿಲ್ಲ. ಇದಕ್ಕೆ ಇನ್ನೊಂದು ಕಾರಣ ಹ್ಯೂಮನ್ ಎಲಿಮೆಂಟ್ಸ್ ಎಂದು ಹೇಳುವುದು. ಒಂದು ಸಾರಿ ಮಾನ್ಯ ಸದಸ್ಯರಾದ ಮಸಿಯಪ್ಪನವರು ಒಂದು ಪ್ರಶ್ನೆಯಲ್ಲಿ ಹೇಳಿದ್ದರು. ಎಷ್ಟೋ ನಮ್ಮ ಟ್ರಾಕ್ಟರುಗಳು ರಿಪೇರಿಯಾದ ಕೂಡಲೇ ಫ್ಯಾಕ್ಟರಿಯಿಂದ ಹೊರಗಡೆಗೆ ಹೋದಕೂಡಲೆ ಕೆಡುತ್ತವೆ ಎಂದು ಹೇಳಿ ಅವುಗಳಿಂದ ಕೆಲಸ ಮಾಡಿಸುತ್ತಿರಲಿಲ್ಲ. ಒಂದು ರೀತಿಯಲ್ಲಿ ಸ್ಕಟಲ್ ಮಾಡಬೇಕೆಂಬ ಒಂದು ಮನೋಭಾವನೆ ಬೇರೆ ಬಂದಿರುವುದೂ ಒಂದು ಕಾರಣವೆಂದು ಹೇಳಬೇಕಾಗಿದೆ. ಈ ರೀತಿ ಆಗಬೇಕಾದರೆ, ಇದರಲ್ಲಿ ಈ ರೀತಿಯಲ್ಲಿ ತೊಂದರೆಯಿರಬೇಕಾದರೆ ಟ್ರಾಕ್ಟರ್ಸ್ ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದು ಎಷ್ಟು ಕಷ್ಟ ಎಂದು ನೋಡಿ ಹ್ಯಾರಿ ಫರ್ಗಸನ್‌ರವರ ಸರ್ವಿಸ್ ಕೇಳಿದ್ದೇವೆ. ಇದು ಬೆಂಗಳೂರಿನಲ್ಲಿರುವ ರೆಸಿಡೆನ್ಸಿಯಲ್ ಫಾರ್ಮ್; ರಿಪೇರಿ ಮಾಡುವ ಸರ್ವಿಸಿಂಗ್ ಸ್ಟೇಷನ್ ಆಗಿದೆ. ಮೈಸೂರಿನಿಂದ ಹೋಗತಕ್ಕ ಟ್ರಾಕ್ಟರುಗಳನ್ನು ದೆಹಲಿಯಲ್ಲಿರುವ ಸೆಂಟ್ರಲ್ ಟ್ರಾಕ್ಟರ್ಸ್ ಆರ್ಗನೈಜೇಷನ್ನಿನಲ್ಲಿ ರಿಪೇರಿ ಮಾಡಿ ಕೈಲಾದಷ್ಟು ಸೇವೆ ಮಾಡಿದರು. ಹಾಗೆ ಮಾಡುವುದಕ್ಕೆ ಇಷ್ಟೇ ಕಾರಣ. ಹಿಂದೂಸ್ಥಾನದಲ್ಲಿ ಮೆಷಿನರಿಯನ್ನು ಸ್ವಲ್ಪ ಹೆಚ್ಚಿಸುವುದಕ್ಕಾಗಿ ಅವರಿಗೆ ಸೆಲ್ಫ್ ಇಂಟರೆಸ್ಟ್ ಇದೆ. ಆ ದೃಷ್ಟಿಯಿಂದ ಮಾಡಿದರೇವಿನಾ ಮಾಡುತ್ತೇವೆಂದು ಸುಮ್ಮನೆ ಮುಂದೆ ಬರಲಿಲ್ಲ.

ಕೇಂದ್ರ ಸರ್ಕಾರದ ಟ್ರಾಕ್ಟರ್ ವ್ಯವಸ್ಥೆಯ ಬಗ್ಗೆ ನನಗೆ ಪೂರ್ಣ ಮಾಹಿತಿಯಿರುವುದರಿಂದ ಈ ವಿಚಾರವಾಗಿ ನಾನು ಇಷ್ಟು ವಿಸ್ತರಿಸಿ ಹೇಳಬೇಕಾಯಿತು. ಈ ಬಗ್ಗೆ ಖರ್ಚುವೆಚ್ಚಗಳು ನಮಗೆ ವಿಪರೀತವಾಗಿ ಈ ಟ್ರಾಕ್ಟರ್ ಆರ್ಗನೈಜೇಷನ್‌ನಿಂದ ನಾವು ಎಷ್ಟು ಫಲ ನಿರೀಕ್ಷೆ ಮಾಡಿದ್ದೇವೋ ಅಷ್ಟು ಬರಲು ಸಾಧ್ಯವಾಗಲಿಲ್ಲ. ಇದರಿಂದೇನೂ ಹೆಚ್ಚಿನ ಪ್ರಯೋಜನವಿಲ್ಲವೆಂಬ ಖಚಿತಾಭಿಪ್ರಾಯಕ್ಕೆ ಬಂದು ಬುಲ್‌ಡೋಜರ್ ಸಹಾಯದಿಂದ ಈ ಟ್ರಾಕ್ಟರ್‌ನಿಂದಾಗುತ್ತಿದ್ದ ಪ್ರಯೋಜನವನ್ನು ಹೊಂದಿ ಕ್ರಮ ಕ್ರಮೇಣ ಈ ಟ್ರಾಕ್ಟರುಗಳ ಉಪಯೋಗವನ್ನು ಕಡಿಮೆ ಮಾಡುತ್ತಾ ಬಂದೆವು. ಇದೊಂದು ತತ್ವಕ್ಕೆ ಒಳಪಟ್ಟಿರುವುದರಿಂದ ಈ ವಿಚಾರದಲ್ಲಿ ಇನ್ನೂ

ಹೆಚ್ಚು ಹೇಳಲು ಇಷ್ಟಪಡುವುದಿಲ್ಲ. ಕಾರಣವೇನೆಂದರೆ ಈಗಾಗಲೇ 25 ಟ್ರ್ಯಾಕ್ಟರುಗಳು ರೈತರಿಗೆ ಮಾರಾಟವಾಗಿದೆ. ನಮಗೆ ಇದರಿಂದ ಇಷ್ಟು ಕಷ್ಟವಾಗಿರಬೇಕಾದರೆ ಅವರಿನ್ನೆಷ್ಟು ಕಷ್ಟಪಡುತ್ತಿದ್ದಾರೆಂಬುದನ್ನು ಕಣ್ಣಾರೆ ನೋಡುತ್ತಾ ಇರುತ್ತೇನೆ. ಶ್ರೀ ಮರಿಯಪ್ಪನವರು ಇದರ ವಿಚಾರವಾಗಿ ಒಂದು ಅಮೂಲ್ಯ ಸಲಹೆಯನ್ನು ಕೊಟ್ಟರು. ಈ ಟ್ರ್ಯಾಕ್ಟರುಗಳನ್ನು ಒಂದು ಜಾಯಿಂಟ್‌ಸ್ಟಾಕ್ ಕಂಪೆನಿಗಾಗಲಿ, ಕೋ–ಆಪರೇಟಿವ್ ಸೊಸೈಟಿಗಾಗಲಿ ಕೊಟ್ಟು ಅವುಗಳ ಮೂಲಕ ಇದರ ವ್ಯವಸ್ಥೆ ನಡೆಸಿ ಎಂದು ಅವರು ಹೇಳಿದರು. ಈ ಬಿಳಿ ಆನೆಯನ್ನು ಸಾಕುವುದು ಕಷ್ಟ ಸಾಧ್ಯವಾದ ಕೆಲಸವೆಂದು ಇದುವರೆಗೂ ಯಾರೂ ಮುಂದುವರಿದು ಬಂದಿಲ್ಲ. ಈಗಲೂ ಸಹ ಯಾರಾದರು ಮಹನೀಯರು ಮುಂದೆ ಬಂದು ಈ ಕಾರ್ಯವನ್ನು ವಹಿಸಿಕೊಳ್ಳುತ್ತೇವೆಂದೂ, ಈ ಬಗ್ಗೆ ತಮ್ಮ ಕೈಲಾದ ಸಹಾಯವನ್ನು ಮಾಡಬೇಕೆಂದೂ ಸರ್ಕಾರದವರನ್ನು ಅಪೇಕ್ಷಿಸುವುದಾದರೆ, ಈ ವಿಚಾರವನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸಲು ಸಿದ್ಧರಾಗಿದ್ದಾರೆಂದು ಹೇಳುತ್ತೇನೆ.

ಈ ಸಭೆಯ ಮಾನ್ಯ ಸದಸ್ಯರಲ್ಲೊಬ್ಬರಾದ ಶ್ರೀ ಎಸ್.ಆರ್. ನಾಗಪ್ಪಶೆಟ್ಟಿಯವರು, ನಮ್ಮ ಸಂಸ್ಥಾನದಲ್ಲಿ ರೆಗ್ಯುಲೇಟೆಡ್ ಮಾರ್ಕೆಟಿಂಗ್ ವ್ಯವಸ್ಥೆ ಬೇಡ, ಇದರಿಂದ ವ್ಯಾಪಾರಸ್ಥರಿಗೆ ಬಹಳ ತೊಂದರೆಯೆಂದು ತಿಳಿಸಿದರು. ಈ ವ್ಯವಸ್ಥೆ ಹೊಸದೇನೂ ಅಲ್ಲ. 1939ರಲ್ಲಿಯೇ ಈ ಬಗ್ಗೆ ಒಂದು ಕಾನೂನು ಜಾರಿಗೆ ತಂದರೂ ಸಹ 1947ರಲ್ಲಿ ತೀವ್ರ ಕಾರ್ಯಕ್ರಮವನ್ನು ಕೈಗೊಂಡಿದೆ. ಈ ರೆಗ್ಯುಲೇಟೆಡ್ ಮಾರ್ಕೆಟಿಂಗ್ ವ್ಯವಸ್ಥೆಯಿಂದ ದೇಶಕ್ಕೇ ಕುಂದುಂಟಾಗುತ್ತದೆಂಬ ರೀತಿಯಲ್ಲಿ ಅವರು ಹೂಡಿದ ವಾದ ನನಗೆ ಎಳ್ಳಷ್ಟೂ ಹಿಡಿಸುವುದಿಲ್ಲ. ಇದೇ ವಿಚಾರವಾಗಿ ಪ್ರಸ್ತಾಪಿಸುತ್ತಾ ಶ್ರೀ ತಿಮ್ಮಪ್ಪಗೌಡರು ಸಕಲೇಶಪುರದಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟ್ಟನ್ನೂ, ಶ್ರೀ ಭೈರಪ್ಪನವರು ಬೆಂಗಳೂರಿನಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟ್ಟನ್ನೂ ಇಡಬೇಕೆಂದು ಸೂಚಿಸಿದ್ದಾರೆ. ಈ ವ್ಯವಸ್ಥೆ ಬಹಳ ಹಿಂದಿನ ಕಾಲದಿಂದಲೂ ಹಲವಾರು ಪ್ರದೇಶಗಳಲ್ಲಿ ವಾಡಿಕೆಯಲ್ಲಿದೆ. ಇದು ಅಲ್ಲೆಲ್ಲಾ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದುದರಿಂದ ಇದೇನೂ ನಮ್ಮ ದೇಶಕ್ಕೆ ಹೊಸದಲ್ಲ. ಇದು ಹೆಚ್ಚು ಹೆಚ್ಚಾಗಿ ಆಗಬೇಕು, ರೈತಾಪಿ ಜನರಿಗೆ ಇದರ ಸುಖ ಗೊತ್ತಾಗಬೇಕು. ಈ ಪ್ರಾರಂಭದಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆ ಅನುಭವಿಸಿದರೂ ಕ್ರಮ ಕ್ರಮೇಣ ಇದರಿಂದ ಬಹಳ ಅನುಕೂಲವಿದೆ. ಕೆಲವು ಸಂದರ್ಭಗಳಲ್ಲಿ ಈ ರೆಗ್ಯುಲೇಟೆಡ್ ಮಾರ್ಕೆಟ್ ವ್ಯವಸ್ಥೆ ಅನುಕೂಲವಿಲ್ಲ, ಇದನ್ನು ರದ್ದುಗೊಳಿಸಿ ಎಂಬುದಾಗಿ ರೈತರ ಬಾಯಿಂದ ಹೇಳುವ ಸನ್ನಿವೇಶವನ್ನು ಕಲ್ಪಿಸಿರತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಆದರೆ ಸರ್ಕಾರ ಮಟ್ಟಿಗೆ ಈ ವಿಚಾರದಲ್ಲಿ ತಮ್ಮ ತತ್ವವನ್ನು ಬದಲಾಯಿಸುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸುತ್ತೇನೆ.

ಇನ್ನು ನನ್ನ ಮಾನ್ಯ ಮಿತ್ರರಾದ ಶ್ರೀ ಹುಚ್ಚೇಗೌಡರು ಮತ್ತು ಶ್ರೀನಿವಾಸಯ್ಯಂಗಾರ್ಯರು ಆಹಾರ ನೀತಿಯ ವಿಚಾರದಲ್ಲಿ ಪ್ರಸ್ತಾಪಿಸಿದರು. ಇದಕ್ಕಾಗಿ ಬೇರೊಂದು ಕಾಲಾವಕಾಶವನ್ನು ಚರ್ಚೆಗೆ ಕೊಡುವ ಸಂಭವವಿರುವುದರಿಂದ ಹೆಚ್ಚುಕಾಲ ತೆಗೆದುಕೊಳ್ಳದೆ ನನ್ನ ಮಿತ್ರರಾದ ಶ್ರೀ ಮರಿಯಪ್ಪನವರು 1951ನೆಯ ಇಸವಿ ಫೆಬ್ರವರಿ ಅಸೆಂಬ್ಲಿ ಅಧಿವೇಶನದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಸೂಚಿಸಲಿಚ್ಛಿಸುತ್ತೇನೆ. ಅವರು ತಿಳಿಸಿರುವ ಅಂಶವನ್ನು ಅಷ್ಟು ಸ್ಪಷ್ಟವಾಗಿ ತಿಳಿಸಲು ಸಾಧ್ಯವಾಗದ ಕಾರಣ ಅದನ್ನೇ ಓದಿ ಹೇಳುತ್ತೇನೆ : "ಈ ಆಹಾರ ಸಮಸ್ಯೆಯನ್ನು ಎದುರಿಸುವ ಬಗ್ಗೆ ಮತ್ತು ಇದನ್ನು ಸರಿಪಡಿಸುವ ಬಗ್ಗೆ ಎಲ್ಲರ ರಚನಾತ್ಮಕ ಟೀಕೆ ದೇಶದಲ್ಲಿ ಆಹಾರೋತ್ಪನ್ನಗಳ ಬಗ್ಗೆ ಒಂದು ಕ್ರಾಂತಿಕಾರಕ ಚಳುವಳಿ ಮಾಡುವಂಥಾದ್ದಾಗಿರಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗಿಲ್ಲದೆ ಅನ್ಯಥಾ ಟೀಕೆ ಟಿಪ್ಪಣಿಗಳನ್ನು ಹೇಳಬೇಕೆಂದರೆ ಅದಕ್ಕೂ ಬೇಕಾದಷ್ಟು ಅವಕಾಶವಿದೆ. ಆಹಾರದ ವಿಷಯದಲ್ಲಿ ಜನಗಳನ್ನು ಯಾರ ಮೇಲಾಗಲಿ ಎತ್ತಿಕಟ್ಟುವುದು ಬಹಳ ಸುಲಭ. ಆದರೆ ಅದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ದೇಶಕ್ಕೂ ಪ್ರಯೋಜನವಾಗುವುದಿಲ್ಲ. ಆ ದೃಷ್ಟಿಯಿಂದ ಈ ವಿಷಯದಲ್ಲಿ ಎಲ್ಲಾ ಮಾನ್ಯ ಸದಸ್ಯರೂ ಸಹ ಸಹೃದಯದಿಂದ ಮತ್ತು ರಚನಾತ್ಮಕವಾಗಿ ವಿಮರ್ಶೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈಗಿರುವ 75 ಸಾವಿರ ಟನ್‌ನಿಂದ ನಮಗೆ ತೃಪ್ತಿಯಾಗುವುದಿಲ್ಲ ಎಂದು ಕೇಂದ್ರಸರ್ಕಾರವನ್ನು ಹೆಚ್ಚಿಗೆ ಕೊಡಲು ಒತ್ತಾಯ ಮಾಡುತ್ತಿದ್ದೇವೆ. ಆದರೂ ದಕ್ಷಿಣ ಇಂಡಿಯಾದ ಪ್ರಾಂತಗಳು ಯಾವಾಗಲೂ ಕೊರತೆಯ ಪ್ರದೇಶಗಳು ಎಂದು ವ್ಯವಸಾಯುವನ್ನು ವೃದ್ಧಿಮಾಡಿ ಸಾಧ್ಯವಾದಷ್ಟು ಸರಿಪಡಿಸಲು ಇಲ್ಲೂ ಪ್ರಯತ್ನಪಡುತ್ತಿದ್ದೇವೆ.

ಈ ಸಂದರ್ಭದಲ್ಲಿ ಬೊಂಬಾಯಿನ ಆಹಾರ ಮಂತ್ರಿಗಳು ಮಾಡಿರುವ ಭಾಷಣ ನೋಡಿದರೆ ಅಲ್ಲಿ ಕೂಡ ಎಂಥ ಕಷ್ಟ ಪರಿಸ್ಥಿತಿ ಬಂದಿದೆ ಎಂಬುದು ಗೊತ್ತಾಗುತ್ತದೆ. ಕೈಗಾರಿಕಾ ಪ್ರದೇಶಗಳಿರುವ ಪ್ರಾಂತಗಳಲ್ಲಿ ಅಂದರೆ ಬೊಂಬಾಯಿ, ಅಹಮದಾಬಾದ್, ಸೋಲ್ಲಾಪುರ ಮುಂತಾದ ಸ್ಥಳಗಳಲ್ಲೂ ಹಂಚಿಕೆ ಸರಿಯಾಗಿ ನಡೆಸುವುದಕ್ಕೆ ಹೆಚ್ಚಿಗೆ ಆಹಾರ ಧಾನ್ಯ ಬೇಕು, ಅಲ್ಲದೆ ಬೊಂಬಾಯಿಯೂ ಕೂಡ ಕೊರತೆಯ ಪ್ರದೇಶ. ಒಂದು ವರ್ಷ ಮದ್ರಾಸಿನಲ್ಲಿ ಮುಂಗಾರು ಮಳೆ ಸರಿಯಾಗಿ ಬಾರದೆ ಕಷ್ಟವಾಗಿದೆ. ಹೀಗೆ ಕೊರತೆಯಿರುವ ಕಡೆಯ ಪರಿಸ್ಥಿತಿಯನ್ನು ಬಹು ಎಚ್ಚರಿಕೆಯಿಂದ ಪರಿಶೀಲಿಸಬೇಕು. ನಮ್ಮ ದೇಶದಿಂದ ಹೊರಗೆ ಹೋಗುವುದನ್ನೂ ತಡೆಗಟ್ಟಿ ಮತ್ತು ಒಳಗೆ ಎಲ್ಲಿ ಸಾಧ್ಯವೋ ಅಲ್ಲಿ ದೊಡ್ಡ ಮನಸ್ಸು ಮಾಡಿ ಮಹನೀಯರು ಯಾರು ಬೆಳೆಯುತ್ತಾರೋ ಅವರಿಂದ ಸಂಗ್ರಹಿಸಿ, ಯಾರು ಬೆಳೆಯುವುದಿಲ್ಲವೋ ಅವರಿಗೆ ಒದಗಿಸಲು ಸಹಾಯಮಾಡಿ, ಉತ್ಪತ್ತಿ ಹೆಚ್ಚಿಸಲು ಅನುಕೂಲಿಸುವಂತೆ ಮಾಡಬೇಕಾದದ್ದು ಇಡೀ ದೇಶದ ಪ್ರತಿನಿಧಿಗಳ ಕರ್ತವ್ಯ. ಆ ಒಂದು ದೃಷ್ಟಿಯಿಂದ

ದಯವಿಟ್ಟು ವಿಮರ್ಶೆಮಾಡಬೇಕೆಂದು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ, ಮೊದಲೇ ಅರಿಕೆ ಮಾಡಿರುವ ಹಾಗೆ, ಈ ಆಹಾರ ಸಮಸ್ಯೆಯು ಪಕ್ಷದ ಪ್ರಶ್ನೆಯಲ್ಲ ಸರ್ವರ ಪ್ರಶ್ನೆ ಎಂದು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸಬೇಕೆಂದು ಪ್ರಾರ್ಥಿಸಿಕೊಂಡು ಈ ಅಂಶವನ್ನು ಸಭೆಯು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ."

ಈ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ನಮ್ಮ ಆಹಾರ ಸಮಸ್ಯೆಯನ್ನು ಬಿಡಿಸಲು ಪ್ರಯತ್ನ ಪಡಬೇಕು. 1954ರಲ್ಲಿ ಸ್ವಪರಿಪೂರ್ಣತೆ ಬರುತ್ತದೆಂದು ತಿಳಿಸಿದ್ದರು. ಆದರೆ ಬರಲಿಲ್ಲ. ಆಹಾರ ಬೆಳೆಯನ್ನು ಜಾಸ್ತಿ ಮಾಡಿಕೊಳ್ಳುವ ವಿಚಾರವನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು. ಈ ವಿಚಾರವಾಗಿ ಈಗಾಗಲೇ ಹಣಕಾಸಿನ ಸಚಿವರು ತಮ್ಮ ಭಾಷಣದಲ್ಲಿ ತಿಳಿಸಿರುತ್ತಾರೆ. ಆದಕಾರಣ ಇದನ್ನು ದೀರ್ಘವಾಗಿ ಪ್ರಸ್ತಾಪಿಸುವುದಿಲ್ಲ. ಈ ದಿನ ನಾವೆಲ್ಲರೂ ನಮ್ಮ ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ಯಾವ ರೀತಿಯಾಗಿದೆಯೆಂಬುದನ್ನು ಅರಿಯಬೇಕು. ಬಡತನವೇನು, ಅದು ಹೇಗಿರುತ್ತದೆ ಎಂಬುದನ್ನು ನಾವೆಲ್ಲರೂ ಅನುಭವಿಸಿದ್ದೇವೆ. ನಾವು ಯಾರೂ ಬಾಯಲ್ಲಿ ಬೆಳ್ಳಿ ಚಮಚ ಇಟ್ಟುಕೊಂಡು ಹುಟ್ಟಲಿಲ್ಲ. ನಮಗೂ ಈ ಬಡತನದ ಬೇಗೆ ಹೇಗಿರುತ್ತದೆಂಬುದು ಪೂರ್ಣವಾಗಿ ಹೊತ್ತು. ಈಗಿನ ಧಾರಣೆವಾಸಿಗಳ ಏರುಪೇರಿನಿಂದ ಜನರಿಗೇನೋ ಬಹಳ ತೊಂದರೆಯಾಗಿದೆ. ಇದನ್ನು ನಿವಾರಣೆಮಾಡಲು ನಮಗೊದಗಿರುವ ಅಡ್ಡಿ ಎಂದರೆ ಇಂದಿನ ಹಣಕಾಸಿನ ಪರಿಸ್ಥಿತಿ. ಸರ್ಕಾರದವರೂ ವಿಚಾರದಲ್ಲಿ ಸಹಾಯ ಮಾಡುವ ಮನೋಧರ್ಮವುಳ್ಳವರಾಗಿರುತ್ತಾರೆ, ಆದರೆ ಯತ್ನವಿಲ್ಲ. ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳೊಡನೆಯೂ, ಹಣಕಾಸಿನ ಮಂತ್ರಿಗಳೊಡನೆಯೂ ಪತ್ರ ವ್ಯವಹಾರ ನಡೆಸಿ 'ಈ ರೀತಿ ಜನರ ಬಾಧೆಯಿದೆ, ಇದನ್ನೂ ಹೇಗಾದರೂ ಬಗೆಹರಿಸಿ' ಎಂಬುದಾಗಿ ಆಗ್ರಹ ಪೂರ್ವಕವಾಗಿ ಬರೆದರೂ ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳು ಒಂದು ನಿರ್ದಿಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. 'ಸಬ್ಸಿಡಿ ಕೊಡುವ ತತ್ವವನ್ನಿಟ್ಟುಕೊಂಡಿಲ್ಲ, ಅದನ್ನೀಗ ಬಿಟ್ಟುಬಿಟ್ಟಿದ್ದೇವೆ' ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ವಿಚಾರವು ನಿಮಗೇ ಸೇರಿದ್ದು, ಎಂದು ಖಚಿತವಾಗಿ ತಿಳಿಸಿಬಿಟ್ಟಿದ್ದಾರೆ. ನಿನ್ನೆಯ ದಿನ ಶ್ರೀ ರಫಿ ಅಹಮ್ಮದ್ ಕಿದ್ವಾಯಿಯವರಿಂದಲೂ ಇದೇ ರೀತಿಯ ಒಂದು ಜವಾಬು ಬಂತು. ಆದುದರಿಂದ ಈ ಬಗ್ಗೆ ಯಾವ ರೀತಿ ಮುಂದುವರಿಯಬೇಕೆಂಬುದನ್ನು ತೀವ್ರವಾಗಿ ಪರ್ಯಾಲೋಚಿಸಬೇಕಾಗಿದೆ. ಇನ್ನೊಂದು ಅಂಶ, ಕಂಟ್ರೋಲನ್ನು ಪೂರ್ಣವಾಗಿ ರದ್ದುಗೊಳಿಸಬೇಕೆ ಅಥವಾ ಬೇಡವೇ ಎಂಬುದು. ಈ ಆಹಾರ ಸಮಸ್ಯೆಯ ವಿಚಾರವನ್ನು ಪೂರ್ಣವಾಗಿ ಅರಿತಿರತಕ್ಕ ನನ್ನ ಮಾನ್ಯ ಮಿತ್ರರಾದ ಶ್ರೀ ಮರಿಯಪ್ಪನವರು ಈಗಾಗಲೇ ಮುನ್ನೆಚ್ಚರಿಕೆಯನ್ನು ಕೊಟ್ಟಿರುತ್ತಾರೆ. ಈ ವಿಚಾರವನ್ನು ಬಹಳ ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಬೇಕೆಂದು ಅವರು ತಿಳಿಸಿರುತ್ತಾರೆ. ಪೂರ್ಣ

ಡಿ-ಕಂಟ್ರೋಲ್ ಆಗಬೇಕೆಂಬುದು ಇಡೀ ದೇಶದ ವಾದ. ಆದರೆ ಕಾಲ, ಸನ್ನಿವೇಶ, ಪರಿಸ್ಥಿತಿ – ಇವುಗಳನ್ನು ನೋಡಿಕೊಂಡು ಈ ವಿಚಾರದಲ್ಲಿ ಬಹು ಜಾಗರೂಕತೆಯಿಂದ ವರ್ತಿಸಬೇಕಾಗಿದೆ. ಎಲ್ಲವನ್ನೂ ಕೂಲಂಕುಷವಾಗಿ ಪರ್ಯಾಲೋಚಿಸಿ ಈ ಬಗ್ಗೆ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿದೆ. ಈ ವಿಚಾರದಲ್ಲಿ ಇಷ್ಟು ಹೇಳಿದರೆ ಸಾಕೆಂದು ಕಾಣುತ್ತದೆ.

ಇನ್ನು 'ಸರ್ವೀಸ್ ಅಟ್ ಕಾಸ್ಟ್' ಎಂಬ ಬಗ್ಗೆ ಈ ವಾದವನ್ನು 1948ರಲ್ಲಿ ಸಹ ಪ್ರತಿಪಾದಿಸಿರುತ್ತಾರೆ. ಇಂದಿನ ನಮ್ಮ ಹಣಕಾಸಿನ ಪರಿಸ್ಥಿತಿ ಬಿಗಡಾಯಿಸಿಕೊಂಡಿರುವುದರಿಂದಲೇ ನಾವು ಈ ರೀತಿಯ ತೀರ್ಮಾನಕ್ಕೆ ಬಂದಿರುವುದು. ಇನ್ನು ಕೆಲವು ಮಾನ್ಯ ಮಿತ್ರರು ಅಮೂಲ್ಯವಾದ ರಚನಾತ್ಮಕ ಸಲಹೆಗಳನ್ನು ಕೊಟ್ಟಿರುತ್ತಾರೆ. ಆ ರೀತಿ ಸಲಹೆಗಳನ್ನು ಕೊಟ್ಟವರಲ್ಲಿ ಶ್ರೀ ಭೀಮಪ್ಪ ನಾಯಕರೊಬ್ಬರು. ಈ ಬಡ್ಜೆಟ್ಟಿನ ಮೇಲೆ ಇದುವರೆಗೆ ಸುಮಾರು 35 ಮಂದಿ ಸದಸ್ಯರು ಭಾಷಣ ಮಾಡಿರುತ್ತಾರೆ. ಒಬ್ಬೊಬ್ಬರೂ ಒಂದೊಂದು ಸಲಹೆಯನ್ನು ಕೊಟ್ಟಿದ್ದರೆ ನಾನು ಚಿರಋಣಿಯಾಗಿರುತ್ತಿದ್ದೆ. ನಮಗೊದಗಿರುವ ಇಂದಿನ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಲು ರಚನಾತ್ಮಕ ಸಲಹೆಗಳು ಯಾರಿಂದ ಬಂದಿದ್ದರೂ ಅವುಗಳನ್ನು ಸಂತೋಷದಿಂದ ಸ್ವಾಗತಿಸುತ್ತಿದ್ದೆ.

ಇನ್ನು ಕೆಲವು ಸ್ನೇಹಿತರು ಹೊಟೇಲ್ ಆಕ್ಷನ್ ಮಾಡಿ ಎಂದು ಹೇಳಿದ್ದಾರೆ. ಅದನ್ನು ಲಾ ಸೆಕ್ಷನ್ನಿನಲ್ಲಿ ಎಕ್ಸಾಮಿನ್ ಮಾಡಿಸುತ್ತಾ ಇದ್ದೇವೆ. ಕಾನ್‌ಸ್ಟಿಟ್ಯೂಷನ್ ಪ್ರಕಾರ ಕೆಲವು ನಿಯಮಾವಳಿಗಳು ಇವೆ. ಆ ನಿಯಮಾವಳಿಗಳಿಗೆ ಅನುಸರಿಸಿ ಎಷ್ಟು ಮಟ್ಟಿಗೆ ಮಾಡಿಕೊಳ್ಳತಕ್ಕದ್ದು ಸೂಕ್ತವೋ ನೋಡಬೇಕು. ಏನೂ ಪ್ರತಿಬಂಧಕವಿಲ್ಲದಿದ್ದರೆ ಇದನ್ನು ಮಾಡಬೇಕಾದದ್ದು ಒಳ್ಳೆಯದು. ಇದು ನನ್ನ ಅಭಿಪ್ರಾಯ. ಆದರೆ ಹೇಗೆ ಮಾಡಬೇಕು, ಯಾವ ರೀತಿ ಮಾಡಬೇಕು ಎಂಬುದನ್ನು ಕಾನೂನಿನ ಚೌಕಟ್ಟಿನ ಒಳಗೆ ಯೋಚನೆಮಾಡಬೇಕಾಗಿದೆ. ಇಷ್ಟು ಮಾತ್ರ ಈ ಸಮಯದಲ್ಲಿ ಹೇಳುತ್ತೇನೆ.

## ಕೈಗಾರಿಕೆ, ರಸ್ತೆ, ಸಾರಿಗೆ ಇತ್ಯಾದಿ...

ಇನ್ನು ಕೈಗಾರಿಕೆಯ ವಿಚಾರದಲ್ಲಿ ಕೆಲವು ಮಾನ್ಯ ಸ್ನೇಹಿತರು – ಶ್ರೀಮಾನ್ ಮ್ಯಾಸ್ಕರನ್‌ಹ್ಯಾಸ್‌ರವರು, ವೆಂಕಟೇಶ್‌ರವರು, ತಿಮ್ಮಪ್ಪಗೌಡರು ಮೊದಲಾದ ಸ್ನೇಹಿತರು – ಕೆಲವು ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ವಿಚಾರದಲ್ಲಿ ನಾನು ಕೊಂಚ ಅನುಭವದ ಒಂದೆರಡು ಮಾತು ಹೇಳಬೇಕಾದರೆ ಪರೀಕ್ಷೆ ಮಾಡಿದ ಕೆಲವು ಅಂಕಿ ಅಂಶಗಳನ್ನು ಹೇಳುತ್ತೇನೆ. 1951–52ನೇ ಇಸವಿಯಲ್ಲಿ ನಮ್ಮ ಕೈಗಾರಿಕೆಗಳಿಗೆ ಸ್ವಲ್ಪ ತೊಂದರೆಯಿತ್ತು. ಡಿಪ್ರೆಷನ್ ಪೀರಿಯಡ್ ಎಂದು ಹೇಳುತ್ತಾರಲ್ಲಾ ಅದು ಶುರುವಾಯಿತು. 1952–53 ರಲ್ಲಿ ನನಗೆ ಬಂದಿರತಕ್ಕ ಅಂಕಿ ಅಂಶಗಳಿಂದ

ಕೈಗಾರಿಕೆಗಳ ಪರಿಸ್ಥಿತಿ ಏನು ಎಂಬುದನ್ನು ಚಿತ್ರಿಸಿಕೊಳ್ಳಲಿಕ್ಕೆ ಒಂದು ಅವಕಾಶವಿದೆ. ಅದರಂತೆ ಒಂದು ಅಭಿಪ್ರಾಯ ಕಂಡುಬರುತ್ತಾ ಇದೆ. ಎಷ್ಟುಮಟ್ಟಿಗೆ ಲುಕ್ಸಾನಾಗಬಹುದಾಗಿತ್ತೋ ಆ ಲುಕ್ಸಾನುಗಳನ್ನೆಲ್ಲಾ ಸರ್ವಪ್ರಯತ್ನಪಟ್ಟು ಕಡಿಮೆ ಮಾಡಲಿಕ್ಕೆ ಪ್ರಯತ್ನಮಾಡಿದ್ದೇವೆ. 1951–52ರಲ್ಲಿ ನಿವ್ವಳ ನಫೆ 75,98,827 ರೂಪಾಯಿಗಳು ಬಂತು. ಅಲ್ಲಿಂದ ಇದುವರೆಗೆ ಈ ವರ್ಷ 67,16,495 ರೂಪಾಯಿಗಳು ಬಂದಿವೆ. ಇದು ಪ್ರೊವಿಷನಲ್ ಫಿಗರ್ಸ್. ಇದನ್ನು ಯೋಚನೆ ಮಾಡಬೇಕಾದರೆ ಮಾನ್ಯ ಸದಸ್ಯರು ಈ ಅಂಕಿಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನಮ್ಮ ದೇಶದಲ್ಲಿ ಕೈಗಾರಿಕೆಗಳಿಗೆ ಹೇರಳವಾಗಿ ಹಣವನ್ನು ಹಾಕಿದ್ದೇವೆ. 63,030 ಲಕ್ಷ ರೂಪಾಯಿಗಳನ್ನು ನಮ್ಮ 10 ಕೈಗಾರಿಕೆಗಳಲ್ಲಿ ಮಾತ್ರ ಹಾಕಿದ್ದೇವೆ. ಸುಮಾರು 7,589 ಜನ ಕೆಲಸ ಮಾಡುತ್ತಿದ್ದಾರೆ. ಇಷ್ಟೇ ಅಲ್ಲ, 24 ಕೈಗಾರಿಕೆಗಳಲ್ಲಿ 1,42,35,840 ರೂಪಾಯಿಗಳ ಷೇರು ಬಂಡವಾಳವನ್ನು ಹಾಕಿದ್ದೇವೆ. ಇನ್ನೂ ಕೆಲವು ಕೈಗಾರಿಕೆಗಳ ಬೆಳವಣಿಗೆಗಾಗಿ 72 ಲಕ್ಷ ರೂಪಾಯಿ ಲೇಣೆಯನ್ನು ಕೊಟ್ಟಿದ್ದೇವೆ. ಇಷ್ಟೆಲ್ಲಾ ಇರಬೇಕಾದರೆ ನಮ್ಮ ದೇಶದ ಕೈಗಾರಿಕೆಗಳ ಆರ್ಥಿಕಸ್ಥಿತಿಯನ್ನು ಸರಿಪಡಿಸಿಕೊಳ್ಳಲಿಕ್ಕೆ ಸರಿಯಾದ ಸಾಧನೆಗಳನ್ನು ಮಾಡಿಕೊಳ್ಳಬೇಕೆಂದು ಪ್ರಶ್ನೆ ಸರ್ಕಾರಕ್ಕೆ ಬಂದಿಲ್ಲದೇ ಇಲ್ಲ. ಅದೇ ದೃಷ್ಟಿಯಿಂದ ಇವುಗಳನ್ನು ಮುಂದುವರಿಸುತ್ತೇವೆ ಎಂದು ಅಷ್ಟು ಮಾತ್ರ ಹೇಳಿದರೆ ಸಾಕು.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಖಾದಿಯ ವಿಚಾರದಲ್ಲಿ ಸಲಹೆ ಕೊಟ್ಟರು. ಅದಕ್ಕಾಗಿ ಅವರನ್ನು ನಾನು ವಂದಿಸುತ್ತೇನೆ. ಖಾದಿಯ ವಿಚಾರದಲ್ಲಿ ಸರ್ಕಾರದವರು ಎಷ್ಟು ಪ್ರೋತ್ಸಾಹ ಕೊಡಬೇಕೋ ಅಷ್ಟೂ ಕೊಡುತ್ತೇವೆ ಎಂದು ಹೇಳುತ್ತೇನೆ.

ಇನ್ನು ಮುಖ್ಯವಾದ ರೋಡ್‌ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಒಂದೆರಡು ಅಂಕಿಗಳನ್ನು ಹೇಳುತ್ತೇನೆ. ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಪಟ್ಟಾಭಿರಾಮನ್‌ರವರು, ಶ್ರೀಮಾನ್ ಮುನಿಯಪ್ಪನವರು, ರಾಜಶೇಖರಮೂರ್ತಿಗಳು ಮತ್ತು ಇನ್ನೂ ಕೆಲವರು ಮಿತ್ರರು ಮಾತನಾಡಿದರು ಎಂದು ಕಾಣುತ್ತದೆ. ಅವರು ಇವೊತ್ತಿನ ದಿವಸ ಕೆಲವು ಅಂಕಿ ಅಂಶಗಳ ಆಧಾರವುಳ್ಳ ಕೆಲವು ಟೀಕೆಗಳನ್ನು ಮಾಡಿದರು. ರೋಡ್‌ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಕೆಲವು ಅಂಕಿ ಅಂಶಗಳನ್ನು ಇಲ್ಲಿ ಈ ಸಭೆಯ ಮುಂದೆ ಇಡಬೇಕಾದದ್ದು ನನ್ನ ಮೂಲ ಕರ್ತವ್ಯವೆಂದು ತಿಳಿದುಕೊಂಡು ಈ ಸಭೆಯ ಮುಂದೆ ಇಡುತ್ತೆನೆ.

ರೋಡ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಹುಟ್ಟಿದಲಾಗಾಯ್ತು ಇವೊತ್ತಿನವರೆಗೂ ಅದರ ಮೇಲೆ ಸರ್ಕಾರದವರು 30,36,758 ರೂಪಾಯಿಗಳನ್ನು ಹಾಕಿದ್ದಾರೆ. ಇದು ನಮ್ಮ ಸರ್ಕಾರದ ಟ್ರೆಜರಿಯಿಂದ ಬಂದಿರತಕ್ಕ ಹಣ. ಇದರಲ್ಲಿ ಇವೊತ್ತಿನ ದಿವಸ ಆಸ್ತಿ ಎಷ್ಟಿವೆಯೆಂದರೆ 48,37,530 ರೂಪಾಯಿಗಳು. ಇನ್ನೂ

ವಿವರಗಳನ್ನು ಕೊಡಲಿಕ್ಕೆ ತಯಾರಾಗಿದ್ದೇವೆ. ಒಂದು ಅಂಶ ಹೇಳಿದರೆ ಸಾಕು. 25,12,200 ರೂಪಾಯಿಗಳ ಡಿಪ್ರೀಸಿಯೇಷನ್ ತೆಗೆದಿಟ್ಟಿದ್ದೇವೆ. ಮೈಲೇಜ್ ಟ್ಯಾಕ್ಸ್ 9,60,167 ರೂಪಾಯಿಗಳನ್ನು 1948–49 ರಿಂದ ಇಲ್ಲಿಯವರೆಗೂ ಜಮಾಮಾಡಿದ್ದೇವೆ. ಅದರಮೇಲೆ ಇವೊತ್ತಿನ ದಿವಸ ಇರತಕ್ಕ ಬಸ್ಸುಗಳ ವ್ಯಾಲ್ಯೂ, ಇದಿಷ್ಟು ನಮಗೆ ಇರತಕ್ಕ ಆಸ್ತಿ ಆಗುತ್ತದೆ. ಮನಾಪಲಿ ಆಗುವುದಕ್ಕಿಂತ ಮುಂಚೆ, ಇದನ್ನು ಒಂದು ಮೆಷರಿಂಗ್ ರಾಡ್, ಯಾರ್ಡ್‌ಸ್ಟಿಕ್ಕಿನಿಂದ ನೋಡಿದರೆ ಈ ಇಲಾಖೆಯಿಂದ ಒಂದು ಮೈಲಿಗೆ ಎಷ್ಟು ಬರುತ್ತದೆ? ಒಟ್ಟು ಮೈಲೇಜ್ ಲೆಕ್ಕಹಾಕಿಕೊಂಡರೆ ಬರತಕ್ಕ ಉತ್ಪತ್ತಿ ಒಂದು ಮೈಲಿಗೆ 165.5 ಕಾಸು ಬರುತ್ತಾ ಇತ್ತು; ಅದೇ ಇವೊತ್ತು ಎಷ್ಟು ಬರುತ್ತದೆ ಎಂದರೆ 200.5 ಕಾಸು ಸರಾಸರಿ ಬರುತ್ತದೆ. ಖರ್ಚಿನ ವಿಚಾರದಲ್ಲಿ ಒಂದೆರಡು ವಿಷಯ ಹೇಳಬೇಕಾಗಿದೆ. ಇವೊತ್ತಿನ ದಿವಸ ಒಂದು ಮೈಲಿಗೆ 17.301 ಕಾಸು ನಮಗೆ ಖರ್ಚು ಇದೆ. ಇದಕ್ಕೆ ಕಾರಣವೇನೆಂದರೆ, ನಮ್ಮಲ್ಲಿರತಕ್ಕ ಬಸ್ಸುಗಳಲ್ಲಿ ಅನೇಕ ಬಸ್ಸುಗಳನ್ನು ತೆಗೆದುಕೊಂಡು 4 ವರ್ಷಗಳಾಗಿ ಹೋಯಿತು. ಡಿಪ್ರೀಸಿಯೇಷನ್ ವಾಲ್ಯೂ, ಫುಲ್ ವ್ಯಾಲ್ಯೂ ಬಂದಿದ್ದರೂ ರೋಡ್ ಮೇಲೆ ಹಾಕಿದ್ದೇವೆ. ಈಗ ನಮ್ಮಲ್ಲಿರತಕ್ಕ ಬಸ್ಸುಗಳು ಕೇವಲ ಹಳೆಯ ಬಸ್ಸುಗಳಾಗಿರುವುದರಿಂದ ಇತ್ತೀಚೆಗೆ ಹೊಸ ಬಸ್ಸುಗಳನ್ನು ಕೊಂಡುಕೊಂಡಿರುವುದರಿಂದ ಕಡಿಮೆ ಆಗಬಹುದು, ವೇರ್ ಅಂಡ್ ಟೇರ್ ಹೆಚ್ಚಾಗುತ್ತದೆ. ಆದರೆ ಒಂದು ಅನುಕೂಲವನ್ನು ಮರೆಯಬಾರದು – ಅದು ಇನ್‌ಡೈರೆಕ್ಟಾಗಿ ಬಂದಿರುವುದು, ಉದ್ದೇಶಪೂರ್ವಕವಾಗಿ ಅಲ್ಲ – ಮನಾಪಲಿ ರೋಡಿನಲ್ಲಿ ಒಳ್ಳೆಯ ಸಿಮೆಂಟ್ ಮತ್ತು ಟಾರ್ ರಸ್ತೆ ಇರುವುದರಿಂದ ವೇರ್ ಅಂಡ್ ಟೇರ್ ಕಡಿಮೆಯಾಗುತ್ತದೆ. ಆ ದೃಷ್ಟಿಯಿಂದ ಇದರಲ್ಲಿ ಉಳಿತಾಯವಾಗುತ್ತದೆ ಎಂಬ ವಿಷಯವನ್ನು ಮರೆಯಬಾರದು. ಎಲ್ಲ ದೃಷ್ಟಿಯಿಂದಲೂ ಲೆಕ್ಕಹಾಕಿಕೊಂಡು ನೋಡಿದರೆ ಈಗ ತಾವು ಕೊಟ್ಟಿರುವ ಕೆಲವು ಟೀಕೆಗಳು ಸಕಾರಣವಾಗಿಲ್ಲ. ಅದೇನೆಂದರೆ, cut road passengers ಗೆ ಸರಿಯಾದ ಅನುಕೂಲ ಕಲ್ಪಿಸಿಕೊಟ್ಟಿಲ್ಲ ಎಂದು ಹೇಳಿದರು. ಅದಕ್ಕೆ ಕಾರಣ ಇಷ್ಟೆ. ನಮ್ಮಲ್ಲಿ ಸಾಕಷ್ಟು ಬಸ್ಸುಗಳು ಇರಲಿಲ್ಲ. ಆ ದೃಷ್ಟಿಯಿಂದ ಡಿಪ್ರೆಸಿಯೇಷನ್ ರಿಸರ್ವ್ ಫಂಡ್‌ನಿಂದ ಈಗ 30 ಹೊಸ ಬಸ್ಸುಗಳನ್ನು ತೆಗೆದುಕೊಳ್ಳಬೇಕೆಂದು ಆಲೋಚನೆ ಮಾಡಿದ್ದೇವೆ. ಶೀಘ್ರದಲ್ಲೇ ಆ ಹೊಸ ಬಸ್ಸುಗಳನ್ನು ತೆಗೆದುಕೊಂಡು ಲೈನ್‌ಮೇಲೆ ಹಾಕಬೇಕೆಂದು ಇದ್ದೇವೆ.

ಇನ್ನು ಬಾಕಿಯ ವಿಷಯ ನಾನು ಹೇಳಬೇಕಾದರೆ, ಮಾನ್ಯ ಸ್ನೇಹಿತರು 'ಅದೇಕೆ 4 ಲಕ್ಷ ರೂಪಾಯಿಗಳನ್ನು ಈ ಸಾರಿ ಬಡ್ಜೆಟ್ಟಿನಲ್ಲಿ ಕಡಿಮೆ ತೋರಿಸಿದ್ದೀರಿ' ಎಂಬ ಒಂದು ಅಂಶವನ್ನು ಹೇಳಿದರು. ಅದಕ್ಕೆ ಜವಾಬು ಕೊಡಬೇಕಾದ್ದು ಅತಿ ಮುಖ್ಯವಾಗಿದೆ. ನಾವು ಏಕೆ ಅದನ್ನು ಕಡಿಮೆ ಮಾಡಿದ್ದೇವೆ ಎಂದರೆ, ಈ ವರ್ಷದ earningsನಲ್ಲಿ ಸುಮಾರು 4 ಲಕ್ಷ ರೂಪಾಯಿಗಳನ್ನು ಹೋದ ವರ್ಷದ ಡಿಪ್ರಿಸಿಯೇಷನ್ ರಿಸರ್ವ್ ಫಂಡ್, ಪೆಟ್ರೋಲ್ ಬಿಲ್ಸ್ ಇತ್ಯಾದಿಗಳಿಗೆ

ಕೊಡಬೇಕಾಗುತ್ತದೆ. ಅದಕ್ಕೆ ಕಡಿಮೆ ಆಗುತ್ತದೆ. ಅಷ್ಟೇ ಹೊರತು ಬೇರೆ ಕಾರಣ ಇಲ್ಲ. ಈ ವರ್ಷದ ಪ್ರೊವಿಷನಲ್ ಫಿಗರ್ಸ್ ಪ್ರಕಾರ 1 ಲಕ್ಷ ರೂಪಾಯಿ ನಿವ್ವಳ ಲಾಭ ಬರಬಹುದು ಎಂಬ ನಿರೀಕ್ಷೆ ಇದೆ. ಆ ದೃಷ್ಟಿಯಿಂದ ಪಟ್ಟಾಭಿರಾಮನ್‌ರವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ, ಮನಾಪಲಿ ಫೇಲ್ ಆಗುವುದಿಲ್ಲ. ಅವರು ಮನಾಪಲಿ ಒಳ್ಳೆಯದು ಪೂರ್ಣ ಮನಾಪಲಿ ಆಗಬೇಕೆಂದು ಹೇಳಿದ್ದಾರೆ. ಅದೇ ತತ್ವವನ್ನು ಸರ್ಕಾರ ಇಟ್ಟುಕೊಂಡಿದೆ, ಸಮಯ ಬಿದ್ದಾಗ ಪರಿಶೀಲನೆ ಮಾಡುತ್ತದೆ. ಮುಂದೆ ಇಟ್ಟ ಕಾಲನ್ನು ಹಿಂದಕ್ಕೆ ತೆಗೆಯುವುದು ಒಳ್ಳೆಯದಲ್ಲ ಎಂಬ ಅಂಶವನ್ನು ಈ ಸಮಯದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ.

**ಕೆಲವು ಸದಸ್ಯರು** : ಬಿ.ಟಿ.ಸಿ ಮನಾಪಲಿಯ ವಿಚಾರ ಹೇಳಲಿಲ್ಲ; ಬಿ.ಟಿ.ಸಿ ಯನ್ನು ಮನಾಪಲೈಸ್ ಮಾಡಬೇಕು.

**ಶ್ರೀ ಎಚ್. ಸಿದ್ದವೀರಪ್ಪ** : ಬಿಟಿಸಿಯಲ್ಲಿ ತಮಗೆ ಗೊತ್ತಿರತಕ್ಕ ಹಾಗೆ ಅರ್ಧ ಮನಾಪಲಿ ಆಗಿಯೇ ಇದೆ. ಈಗ ಬೇಕಾದದ್ದು ಇನ್ನೂ ಸ್ವಲ್ಪ ಇದೆ. We shall consider it. If it is the view of the House that the B.T.C also should be monopolised. I for one have no objection. We shall consider it.

ಆಮೇಲೆ ಇನ್ನೊಂದು ವಿಷಯ, ಪೋಲೀಸು ಇಲಾಖೆಯ ವಿಚಾರದಲ್ಲಿ ದೇವರ ಅನುಗ್ರಹದಿಂದ ಅಷ್ಟು ಹೆಚ್ಚಾಗಿ ಮಾನ್ಯ ಸದಸ್ಯರು ಯಾರೂ ಟೀಕೆಗಳನ್ನು ಮಾಡಿರುವುದಿಲ್ಲ. ಅದಕ್ಕಾಗಿ ನಾನು ಸಭೆಯವರನ್ನು ವಂದಿಸುತ್ತೇನೆ.

**ಅನೇಕ ಸದಸ್ಯರು** : ಖೋತಾ ಸೂಚನೆಗಳನ್ನು ಬಹಳವಾಗಿ ತರತಕ್ಕವರಿದ್ದೇವೆ.

**ಶ್ರೀ ಎಚ್.ಸಿದ್ದವೀರಪ್ಪ** : ಆದರೆ ಈ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಸಲದ ಬಡ್ಜೆಟ್ಟಿನಲ್ಲಿ ಕೊಂಚ ಹಣವನ್ನು ಜಾಸ್ತಿಯಾಗಿ ಈ ಇಲಾಖೆಗೆ ಒದಗಿಸಲಾಗಿದೆ. ಅದಕ್ಕೆ ಕಾರಣವೇನು ಎಂದು ಕೆಲವರು ಕೇಳಬಹುದು, ಹಾಗೆ ಜಾಸ್ತಿಯಾಗಿರುವುದಕ್ಕೆ ಕೆಲವು ಕಾರಣಗಳಿವೆ. ಈ ಇಲಾಖೆಗೆ ಹೊಸದಾಗಿ ಕೆಲವು ವ್ಯಾನುಗಳನ್ನು ಕೊಂಡುಕೊಳ್ಳಬೇಕಾಗಿದ್ದ ಪ್ರಯುಕ್ತ ಕೊಂಚ ಹಣವನ್ನೊದಗಿಸಿದ್ದೇವೆ. ಈಗ ಹಾಲಿ ಇಲಾಖೆಯವರು ಇಟ್ಟುಕೊಂಡಿರತಕ್ಕ ವ್ಯಾನುಗಳು ಬಹಳ ಹಳೆಯವು, 8–10 ವರ್ಷಗಳ ಕೆಳಗೆ ಕೊಂಡುಕೊಂಡವುಗಳೆಂಬುದನ್ನು ತಾವು ಮರೆಯಬಾರದು. ಅಲ್ಲದೆ ಹಾಗೆ ಇವುಗಳನ್ನು ಮೊದಲು ಕೊಂಡುಕೊಳ್ಳುವಾಗಲೇ ಇವು ಸೆಕೆಂಡ್‌ಹ್ಯಾಂಡ್ ವ್ಯಾನುಗಳಾಗಿದ್ದವು. ಆದರೆ ನಮ್ಮ ಪೊಲೀಸ್ ಇಲಾಖೆಯಲ್ಲಿ ಈ ಬಾಬಿಗೆ ಖರ್ಚುಮಾಡುತ್ತಿರುವುದನ್ನು ಇತರ ಸರ್ಕಾರಗಳ ಪೊಲೀಸ್ ಇಲಾಖೆಯ ಖರ್ಚಿಗೆ ಹೋಲಿಸಿ ನೋಡಿದ್ದೇನೆ. ನಾವು ಖರ್ಚು ಮಾಡುತ್ತಿರುವುದು ತೀರ ನೆಗ್ಲಿಜಬಲ್ ಮೊಬಲಗೆಂದು ತೋರಿರುತ್ತದೆ. ನಾನು ಮೊನ್ನೆ ತಾನೆ ಕೋಲಾರಕ್ಕೆ

ತುರ್ತಾಗಿ ಕೆಲವು ರಿಜರ್ವ್ ಪಡೆಯನ್ನು ಕಳುಹಿಸಬೇಕಾಗಿದ್ದಂಥ ಸಂದರ್ಭ ಬಂದಿತ್ತು. ಆಗ್ಗೆ ಈ ವ್ಯಾನುಗಳ ಸೌಕರ್ಯವಿಲ್ಲದೆ ಬಹಳ ಅಡಚಣೆಯಾಗಿದ್ದಿತು. ಹೀಗೆ ಅನೇಕ ಸಂದರ್ಭಗಳಲ್ಲಿ ತುರ್ತಾಗಿ ಹೋಗಬೇಕಾದ ಪ್ರಸಂಗ ಒದಗುತ್ತಿರುತ್ತದೆ. ಆಗ ಬಹಳ ತೊಂದರೆಯಾಗುತ್ತದೆ. ಇನ್‌ವೆಸ್ಟಿಗೇಷನ್ ಸಂದರ್ಭದಲ್ಲಿ ಸಹ ಅನೇಕ ವೇಳೆ ಈ ವ್ಯಾನುಗಳ ಸೌಕರ್ಯವಿಲ್ಲದೆ ಹೋಗಿ ತೊಂದರೆಯಾಗಿದೆ. ಅಂಥ ತೀರಾ ಅವಶ್ಯಕವಾದ ಪರಿಸ್ಥಿತಿಯಿದ್ದುದರಿಂದಲೇ ಈಗ ಕೆಲವು ವ್ಯಾನುಗಳನ್ನಾದರೂ ಹೊಸದಾಗಿ ಕೊಂಡುಕೊಳ್ಳಬೇಕಾಯಿತು.

ನಿಷ್ಕಾರಣವಾಗಿ ಯಾರೂ ಖರ್ಚುಮಾಡುವುದಿಲ್ಲವೆಂಬ ಅಂಶವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಡಿಪಾರ್ಟ್‌ಮೆಂಟಿನಲ್ಲಿ ಅಂಥದೇನಾದರು ಅನಾವಶ್ಯಕವಾದ ಖರ್ಚುಬಾಬುಗಳಿದ್ದರೆ ಈಗಿರತಕ್ಕ ಇಲಾಖಾ ಮೋಖ್ತೇಸರರೇ ಅದನ್ನು ಬೇಡವೆಂದು ಹೇಳಿರತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಇಂಥಾ ನಿದರ್ಶನಗಳು ಇನ್ನೂ ಇಷ್ಟೋ ನನ್ನ ಗಮನಕ್ಕೆ ಬಂದಿವೆ. ಆದರೆ ಶ್ರೀಮಾನ್ ಟಿ. ಮರಿಯಪ್ಪನವರು ಈ ಇಲಾಖೆಯಲ್ಲಿ ಮಿತವ್ಯಯ ತೋರಿಸಲು ಅವಕಾಶವಿದೆಯೆಂದು ಹೇಳಿದ್ದಾರೆ. ನಾನು ಪ್ರತಿಯೊಂದು ಅಂಶವನ್ನೂ ಕೂಲಂಕಷವಾಗಿ ವಿಮರ್ಶೆ ಮಾಡಿ ನೋಡಿದೆನು. ಅಂಥ ಯಾವುದೂ ಇದ್ದಹಾಗೆ ಕಂಡುಬರಲಿಲ್ಲ. ದೇವರ ದಯೆಯಿಂದ ಏನಾದರೂ ಈ ಫುಡ್‌ಬಾಬು ಹೊರಟುಹೋದರೆ ಇದರಲ್ಲಿ 600 ಜನರವರೆಗೂ ರಿಟ್ರೆಂಚ್ ಆಗಿ ಈ ಒಂದು ಬಾಬಿನಿಂದಲೇ ಸುಮಾರು 3–4 ಲಕ್ಷ ಉಳಿತಾಯವಾಗಬಹುದು. 1952–53ನೆಯ ಸಾಲಿನಲ್ಲಿ ಪೋಲೀಸ್ ಇಲಾಖೆಯಲ್ಲಿ 220 ಜನರನ್ನು ರಿಟ್ರೆಂಚ್ ಮಾಡಲಾಗಿದೆ. ಇದರಲ್ಲಿ ಕೆಲವು ದೊಡ್ಡ ನೌಕರರೂ ಇದ್ದಾರೆ. ಕೆಲವು ಆಫೀಸರ್‌ರನ್ನೂ ರಿಟ್ರೆಂಚ್ ಮಾಡಲಾಗಿದೆ. ಈ ಎಲ್ಲ ದೃಷ್ಟಿಗಳಿಂದಲೂ ಈ ಬಾಬಿಗಾಗಿ ಆಗುತ್ತಿರುವ ಖರ್ಚನ್ನು ನೋಡಿದರೆ ಇದೇನೂ ಅಷ್ಟು ಹೆಚ್ಚಾಗಿರುವಂತೆ ಕಾಣುವುದಿಲ್ಲ. ಈ ಇಲಾಖೆ ತಮ್ಮೆಲ್ಲರಿಗಾಗಿ ಇರತಕ್ಕದ್ದು ಅದರಲ್ಲೂ ಮುಖ್ಯವಾಗಿ ಇದು ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅಂಥವರಿಗಾಗಿ ಇರತಕ್ಕ ಇಲಾಖೆಯಾಗಿದೆ. ಈ ಇಲಾಖೆಯ ವಿಚಾರದಲ್ಲಿ ಖೋತಾಕ್ಕೆ ಕೈಹಾಕಬೇಡಿ ಎಂದು ಮಾನ್ಯ ಸಭೆಗೆ ಈ ಸಂದರ್ಭದಲ್ಲಿ ಒಂದು ಮಾತು ತಿಳಿಸಿದರೆ ಸಾಕು.

ಇನ್ನು ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ ಅವರು ನ್ಯಾಷನಲೈಜೇಷನ್ ಬಗ್ಗೆ ಅಂಕಿಅಂಶಗಳನ್ನು ತಿಳಿಸಿದರು. ನಾನು ಬಹಳವಾಗಿ ಹುಡುಕಿನೋಡಿದೆನು. ಆದರೆ ಆ ಅಂಕಿಅಂಶಗಳೆಲ್ಲೂ ನನ್ನ ಕಣ್ಣಿಗೆ ಬಿದ್ದ ಹಾಗೆ ಕಾಣಲಿಲ್ಲ. ಆದರೆ ಅವರೇ ಈ ಅಂಕಿ ಅಂಶಗಳನ್ನು ನನಗೆ ಒದಗಿಸುವುದಾಗಿ ಹೇಳಿದ್ದಾರೆ.

ಇನ್ನು ತೆರಿಗೆ ವಿಚಾರವಾಗಿ ಅವರು Oppressive taxation ಎಂದು ಹೇಳಿದ್ದಾರೆ. ನಾನೂ ಒಬ್ಬ ರೈತ. ನನಗೂ ಸಾಧಾರಣಮಟ್ಟಿಗೆ ಗೊತ್ತಿದೆ. ಆದರೆ



WD-H-035-19

ತಾವು ಒಬ್ಬ ದೊಡ್ಡ ರೈತರಿರಬಹುದು, ನಾನೊಬ್ಬ ಸಣ್ಣ ರೈತನಾಗಿರಬಹುದು. ನಾವು ರೈತರಿಗೆ ಎಂದೂ ಅಂಥ ತೊಂದರೆ ಕೊಡತಕ್ಕ ಕೆಲಸಗಳನ್ನು ಮಾಡಿಲ್ಲ.

ಕೆಲವು ಮಾನ್ಯ ಸದಸ್ಯರುಗಳು ಕೊಟ್ಟಿರತಕ್ಕ ರಚನಾತ್ಮಕ ಸಲಹೆಗಳಿಗೆ ನಾನು ಅವರನ್ನು ವಂದಿಸುತ್ತೇನೆ. ನನ್ನ ಕೈಲಾದ ಮಟ್ಟಿಗೂ ನಾನು ದೇಶಕ್ಕೆ ಅನುಕೂಲವಾಗುವಂಥ ರೀತಿಯಲ್ಲಿ, ವಿಚಾರಗಳ ಪರಿಶೀಲನೆಯಿಂದ ಕೆಲಸ ಮಾಡುತ್ತೇನೆ. ಇದನ್ನು ನಾನು ಗ್ರಹಿಸಿದ್ದೇನೆ. ನನ್ನ ಮಿತ್ರರಾದ ಶ್ರೀಮಾನ್ ಕೆ. ಲಕ್ಕಪ್ಪನವರು 'ಮೀನಿನ ವಿಚಾರ ಏನು ಮಾಡಿದಿರಿ' ಎಂದು ಕೇಳಿದರು. ಆದರೆ ನನಗೆ ಆ ಮೀನುಗಳ ವಿಚಾರದಲ್ಲಿ ಅಷ್ಟು ಪರಿಶ್ರಮವಿಲ್ಲ ಎಂದು ತಿಳಿಸಿದರೆ ಸಾಕು.

**Mr. SPEAKER** – His point is : are they going to abolish it?

**Sri H. SIDDAVEERAPPA** – I shall consider it. There is much force in what he says. After all the savings will not be as much as he says. I will examine.

**ಶ್ರೀ ಎಸ್. ಎಂ. ಮರಿಯಪ್ಪ** (ಪಿರಿಯಾಪಟ್ಟಣ) : ಈ ತೆರಿಗೆ ರೈತರ ಮೇಲೆಯೇ ಬೀಳುವುದಿಲ್ಲವೆಂದು ತಾವು ಹೇಳಿದಿರಿ, ಹಾಗಾದರೆ ಇದೇನು ದೊಡ್ಡ ದೊಡ್ಡ ಅಧಿಕಾರಿಗಳು ಈ ತೆರಿಗೆಯನ್ನು ಕೊಡುತ್ತಿದ್ದಾರೋ?

**ಶ್ರೀ ಎಚ್.ಸಿದ್ದವೀರಪ್ಪ** : ಆ ಪೋಸ್ಟ್ ಮಾರ್ಟಮ್ಮಿಗೆ ಈಗ ಪ್ರವೇಶಿಸುವುದು ಅಷ್ಟು ಚೆನ್ನಾಗಿಲ್ಲ. ನಗರವಾಸಿಗಳು ತೆರಿಗೆ ಕೊಡುತ್ತಾರೆಂದು ಒಂದು ಮಾತು ಹೇಳಿದರೆ ಸಾಕು. ನಾವು ಈ ಎಲ್ಲಾ ಅಂಶಗಳನ್ನೂ ಪರ್ಯಾಲೋಚನೆ ಮಾಡಿದ್ದೇವೆ.

* * *

# ಖೋತಾ ಸೂಚನೆ ಮೇಲಿನ ಚರ್ಚೆ

## ಮಾರ್ಚ್ 1953

**ಶ್ರೀ ಕೆ. ಪುಟ್ಟಸ್ವಾಮಿ** (ಶ್ರೀರಂಗಪಟ್ಟಣ) : ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ, ಅದನ್ನು ಮಂಡಿಸುತ್ತೇನೆ. 'ಅಸಾಧಾರಣ ವೆಚ್ಚಗಳು' ಎಂಬ ಬಾಬಿನಲ್ಲಿ ಕೋರಿರತಕ್ಕ 17,39,600 ರೂಪಾಯಿಗಳ ಡಿಮ್ಯಾಂಡ್ ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಿಮೆ ಮಾಡಬೇಕು. ಗೋಧಿಯ ಮಾರಾಟದ ಬೆಲೆಯನ್ನು ಆಗಿಂದಾಗ್ಗೆ ಬದಲಾಯಿಸಿ ತನ್ಮೂಲಕ ಸರ್ಕಾರಕ್ಕೆ ನಷ್ಟವೇರ್ಪಟ್ಟಿರುವಂತಾಗಿರುವುದಕ್ಕೆ ಕಾರಣಗಳೇನೆಂಬ ವಿಚಾರವಾಗಿ ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ".

**Mr. SPEAKER** : Cut-motion moved : "That the demand be reduced by Rs. 100".

**ಶ್ರೀ. ಎಚ್. ಸಿದ್ದವೀರಪ್ಪ** (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು) : ಅಧ್ಯಕ್ಷರೇ, ಈ ಖೋತಾ ಸೂಚನೆಯನ್ನು ತಂದಿರುವ ನನ್ನ ಮಾನ್ಯ ಮಿತ್ರರಿಗೆ ವಂದನೆಗಳನ್ನರ್ಪಿಸಬೇಕಾಗಿದೆ. ಕಾರಣ ಇಷ್ಟೆ. ನಾನು ಯಾವ ಯಾವ ವಾದಗಳನ್ನಿಡಬಹುದಾಗಿತ್ತೋ ಅವನ್ನೆಲ್ಲಾ ಅವರೇ ಹೇಳಿರುವುದರಿಂದ ನನ್ನ ಕೆಲಸವನ್ನು ಅವರು ಬಹುಮಟ್ಟಿಗೆ ಹಗುರ ಮಾಡಿದ್ದಾರೆಂದು ಭಾವಿಸುತ್ತೇನೆ. ಆದ್ದರಿಂದ ಒಂದೆರಡು ಅಂಕಿ ಅಂಶಗಳನ್ನು ಮಾತ್ರ ಹೇಳಿದರೆ ಸಾಕು. ಹೋದ ವರ್ಷ 10-4-52 ರಲ್ಲಿ ನಾವು ಗೋಧಿ ಬೆಲೆಯನ್ನು ಹೆಚ್ಚು ಮಾಡಿದ ಸಂದರ್ಭದಲ್ಲಿ ನಮ್ಮಲ್ಲಿ 1,55,870 ಪಲ್ಲ ಗೋಧಿಯೂ, 8,750 ಟನ್ ಗೋಧಿಯ ಸಾಮಾನುಗಳೂ ಇದ್ದವು. ಇಂಡಿಯಾ ಸರ್ಕಾರದವರು ಹಠಾತ್ತನೆ ಸಬ್ಸಿಡಿ ನಿಲ್ಲಿಸಿದ್ದರಿಂದ, ಅದಲ್ಲದೆ capacity to bear the burden ಎಂಬ ತತ್ವವು ಈ ಧಾನ್ಯಕ್ಕೆ ಅನ್ವಯಿಸದಿರುವುದರಿಂದ – ಏಕೆಂದರೆ ಸಾಮಾನ್ಯವಾಗಿ ಬಡವರು ತಿನ್ನತಕ್ಕಂಥದಲ್ಲವಾದುದರಿಂದ – ಇಲ್ಲಿಯೂ ಗೋಧಿಯ ಬೆಲೆಯನ್ನು ಜಾಸ್ತಿ ಮಾಡಬೇಕಾಯಿತು.

ಇದಾದ ಮೇಲೆ ಏನು ಪರಿಣಾಮವಾಯಿತೆಂಬುದನ್ನು ತಿಳಿಯುವುದಕ್ಕೆ ಮುಂಚೆ ಒಂದಂಶವನ್ನು ತಾವು ಮನಸ್ಸಿಗೆ ತಂದುಕೊಳ್ಳಬೇಕು. ಏಕೆಂದರೆ, ನಾವು ವರ್ಷದ ಪ್ರಾರಂಭದಲ್ಲಿ ಕೇಂದ್ರ ಸರ್ಕಾರದವರನ್ನು allotment ಕೇಳಬೇಕಾದರೇ ಒಂದು ವರ್ಷದ ಟಾರ್ಗೆಟ್ ನೋಡಿಕೊಂಡು ಕೇಳಿರುತ್ತೇವೆ. ನಮ್ಮ ಮಾತನ್ನು ಕೇಳಿಕೊಂಡು ಅವರು ಪರದೇಶಗಳಿಗೆ firm ಆರ್ಡರ್‌ಗಳನ್ನು ಕೊಟ್ಟಿರುತ್ತಾರೆ. ಅದರಂತೆ ನಮಗೆ ಆಗಾಗ್ಗೆ ದವಸ ಸರಬರಾಜಾಗುತ್ತಿದೆ. ಹೀಗಾಗಿ 15–5–52ರ ಹೊತ್ತಿಗೆ ಅಂದರೆ ನಾವು ಮತ್ತೆ ದರವನ್ನು review ಮಾಡುವ ಹೊತ್ತಿಗೆ ನಮ್ಮಲ್ಲಿ 2,98,000 ಪಲ್ಲಾಗಳಷ್ಟು ಗೋಧಿ ತುಂಬಿತ್ತು. ಇದರ ಬೆಲೆ ಸುಮಾರು 1 ಕೋಟಿ 5 ಲಕ್ಷವೆಂದಿಟ್ಟುಕೊಳ್ಳಬಹುದು. ಜೊತೆಗೆ ಆಗಿನ ಸಮಯದಲ್ಲಿ ನಮ್ಮ ಸರ್ಕಾರಿ ಡಿಪೋಗಳಲ್ಲಿ ಗೋಧಿಯ offtake ತೀರ ಕಡಿಮೆಯಾಗಿ ಹೋಗಿತ್ತು. ಅಲ್ಲದೆ ದವಸವನ್ನು ಕೆಡದಹಾಗೆ ನೋಡಿಕೊಳ್ಳುವುದಕ್ಕಾಗಿ ನೇಮಿಸಿರುವ ನಮ್ಮ ಸಿಬ್ಬಂದಿಯವರು ಇದ್ದಾರೆ, ಈ ಗೋಧಿ ನಮ್ಮ ದೇಶದಿಂದ ಬರತಕ್ಕದ್ದಲ್ಲ. ಹೊರದೇಶಗಳಿಂದ ದೂರದಿಂದ ಹಡಗಿನಲ್ಲಿ ಬರುವುದಾಗಿದ್ದು ಮೊದಲೇ infested ಅಗಿರುವುದರಿಂದ ಹಾಗೂ ಹಳತು ಹೋಗಿರುತ್ತಾದ್ದರಿಂದ, ದರವನ್ನು ಸ್ವಲ್ಪ ಕಡಿಮೆ ಮಾಡಿದರೂ ಸ್ವಲ್ಪಮಟ್ಟಿಗೆ ಮಾರಾಟವಾಗುತ್ತದೆಂದು ಯೋಚನೆ ಮಾಡಿ ದರವನ್ನು ಸ್ವಲ್ಪ ಕಡಿಮೆ ಮಾಡಿದೆವು. ಆದರೂ it had not the desired effect ಎಂದು ರಿಪೋರ್ಟುಗಳು ಬಂದುವು. ಜೊತೆಗೆ ಎ, ಬಿ, ಸಿ, ಡಿ ಎಂದು ಗ್ರೇಡ್ ಮಾಡಿರುವ ಗೋಧಿಯಲ್ಲಿ ಎ, ಬಿ, ಸಿ ಎಲ್ಲ ಕೆಟ್ಟುಹೋಗುತ್ತಾ, ಆ ಗ್ರೇಡಿಗೆ ಬರುತ್ತಿರುವುದಾಗಿ ಸಂಸ್ಥಾನದ ನಾನಾ ಕಡೆಗಳಿಂದ ವರದಿ ಬಂತು. ಡಿ ಗ್ರೇಡ್ ಎಂದರೆ ಯಾವುದಕ್ಕೂ ಪ್ರಯೋಜನವಿಲ್ಲದ್ದು. ಇದನ್ನು ನೋಡಿ, ನಾವು ಗೋಧಿಯನ್ನು ಬೇಗ ಖರ್ಚು ಮಾಡದೆ ಇದ್ದರೆ ಸರ್ಕಾರದವರಿಗೆ 90 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿಬಿಡುತ್ತದೆಂದು ಗೊತ್ತಾಗಿ, ಅದಕ್ಕೆ ಬದಲು ನಮಗೆ ಸ್ವಲ್ಪ ಲುಕ್ಸಾನಾದರೂ ಪರವಾಗಿಲ್ಲ, ಬಡವರಾದರೂ ತಿನ್ನಲಿ ಎಂಬುದಾಗಿ ಒಂದು ರೀತಿಯಲ್ಲಿ wise economy ದೃಷ್ಟಿಯಿಂದ, ಪೂರಾ ನಷ್ಟವಾಗಿ ಹೋಗುವುದಕ್ಕೆ ಬದಲು ಸ್ವಲ್ಪ ನಷ್ಟವಾಗಲಿ ಎಂಬ ವ್ಯಾವಹಾರಿಕ ದೃಷ್ಟಿಯಿಂದ, ಅನಿವಾರ್ಯವಾಗಿ ಗೋಧಿಯ ಬೆಲೆಯನ್ನು ಕಡಿಮೆ ಮಾಡಿದೆವು. ಹಾಗೆ ಮಾಡಲೇಬೇಕಾಯಿತು. ಅದರಲ್ಲೂ unlimited quantity ಯಾರು ಎಷ್ಟು ಬೇಕಾದರೂ ತೆಗೆದುಕೊಂಡು ಹೋಗಲೆಂದು ಹೇಳಿದ್ದು ಉದ್ದೇಶಪೂರ್ವಕವಾಗಿಯೇ, ಹೇಗಾದರು ಈ ದವಸ ನಮ್ಮ ಕೈಬಿಟ್ಟು ಹೋಗಲಿ ಎಂದು ಮಾಡಿದ್ದು. ಅಮೇಲೆ ಯಾವಾಗ ಪರಿಸ್ಥಿತಿ ಹತೋಟಿಗೆ ಬಂತೋ ಆ ಕೂಡಲೇ ನಮ್ಮ ಯೋಜನೆಗನುಸಾರವಾಗಿ ಮತ್ತೆ ಸರಿಮಾಡಿದೆವು.

ಶ್ರೀಮಾನ್ ಪುಟ್ಟಸ್ವಾಮಿಯವರು ಹೀಗೆ ಪದೇ ಪದೇ ಮಾಡಬಾರದಾಗಿತ್ತೆಂದು ಹೇಳಿದರು. ಮಾನ್ಯ ಸದಸ್ಯರು ಒಂದಂಶವನ್ನು ತಿಳಿಯಬೇಕು. ಆಹಾರದ ವಿಚಾರದಲ್ಲಿ

ನಾವುಗಳು ಎಂದೂ ಒಂದೇ ರೀತಿಯಲ್ಲಿ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. It depends upon the question of demand and supply. ವೇಳೆ, ಸಮಯ ಯಾವ ರೀತಿಯಿದೆಯೆಂಬುದನ್ನು ನೋಡಿಕೊಂಡು, ಪದೇ ಪದೇ, ವರ್ಷೇ ವರ್ಷೇ ಕಾಲಕ್ಕನುಸಾರವಾಗಿ ರೇಷನ್ ಪ್ರಮಾಣವನ್ನೂ, ದರವನ್ನೂ ಗೊತ್ತುಮಾಡಿಕೊಂಡು ಬರಬೇಕೇ ಹೊರತು ಹೀಗೆಯೇ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಪ್ರಾರಂಭದಿಂದ ಮಾಡಿದ್ದೆಲ್ಲಾ ಯೋಚನೆ ಮಾಡಿಯೇ ಮಾಡಿದ್ದಾಗಿದೆ ಎಂದು ಹೇಳುತ್ತೇನೆ. ಇಷ್ಟರಿಂದ ಮಾನ್ಯ ಸೂಚಕರಿಗೆ ಸಮಾಧಾನವಾಗುತ್ತದೆಂದು ನನಗೆ ನಂಬಿಕೆಯಿದೆ. ಅವರು ದಯವಿಟ್ಟು ತಮ್ಮ ಖೋತಾ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

* * *

# ಕೃಷ್ಣರಾಜೇಂದ್ರ ಹಿಲ್‌ಸ್ಟೇಷನ್ ಕುರಿತು

**29 ಮೇ, 1953**

**ಶ್ರೀ ಎಚ್. ಸಿದ್ದವೀರಪ್ಪ :** ಅಧ್ಯಕ್ಷರೇ, ಈ ಹಿಂದೆ ಮಾತನಾಡಿದ ಈರ್ವರು ಮಾನ್ಯ ಸದಸ್ಯರೂ ಅನೇಕ ಉಪಯುಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಈ ಕೃಷ್ಣರಾಜೇಂದ್ರ ಹಿಲ್‌ಸ್ಟೇಷನ್ನನ್ನು All India Tourists Trafffic ನಲ್ಲಿ ಸೇರಿಸಬೇಕೆಂದೂ ಸಹ ಮೊನ್ನೆ ಜನವರಿ ತಿಂಗಳಿನಲ್ಲಿ ನಡೆದ ಕಾನ್ಫರನ್ಸ್‌ನಲ್ಲಿ ಕೂಡ ಸೂಚಿಸಿದ್ದೇವೆ. All India Tourists Stations ನೊಳಗೆ ಇದನ್ನೂ ಸೇರಿಸಿಕೊಂಡು ಅದೇ ತರದ ಮಿಕ್ಕ ಸ್ಟೇಷನ್‌ಗಳಂತೆ ಇಲ್ಲಿಗೂ ಕೆಲವು ಸೌಕರ್ಯಗಳನ್ನು ಕೂಡ ಕೊಡಬೇಕೆಂದು ಒತ್ತಾಯಪಡಿಸುತ್ತಿದ್ದೇವೆ.

ಕೃಷ್ಣರಾಜೇಂದ್ರ ಹಿಲ್‌ಸ್ಟೇಷನ್‌ನಲ್ಲಿರುವ ಒಂದು ಹೆಚ್ಚಿನ ಅನುಕೂಲತೆಯೇನೆಂದರೆ, ನೀರಿನ ವಿಚಾರದಲ್ಲಿ ಇಲ್ಲಿ ಏನೂ ತೊಂದರೆಯಿಲ್ಲ, ಯಥೇಚ್ಛವಾಗಿ ನೀರಿದೆ. ನಂದೀ ಬೆಟ್ಟದಲ್ಲಾದರೋ ಇತ್ತೀಚೆಗೆ ನೀರಿಗೆ ಸ್ವಲ್ಪ ಕಷ್ಟ ಕಂಡುಬಂದಿದೆ; ಆ ತೊಂದರೆಯೂ ಇಲ್ಲಿಲ್ಲ.

ಈ ದೃಷ್ಟಿಯಿಂದಿಲ್ಲಿಗೆ ಅನೇಕ ಇಂಪ್ರೂವ್‌ಮೆಂಟ್ಸ್‌ಗಳನ್ನು ಮಾಡುವುದು ಅವಶ್ಯಕ. ಈಗಾಗಲೇ ಅಲ್ಲಿನ ಬಂಗಲೆಗಳಿಗೆ ರಿಪೇರಿ ವಗೈರೆ ಕೆಲಸಗಳನ್ನು ಹೋದ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸಿ ನಮ್ಮ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಂದ ಸರಿ ಮಾಡಿಸಿದ್ದೇವೆ. ಇನ್ನೂ ಏನೇನು ಇಂಪ್ರೂವ್‌ಮೆಂಟ್ಸ್ ಮಾಡಬೇಕೋ ಅದನ್ನು ಮಾಡಬೇಕೆಂದಿದ್ದೇವೆ, ವರ್ಷೇ ವರ್ಷೇ ಕ್ರಮೇಣ ಅಲ್ಲಿಗೆ ಬೇಕಾದ Furniture lines ಮುಂತಾದವುಗಳನ್ನೆಲ್ಲಾ ತರಿಸಿಕೊಡುತ್ತಿದ್ದೇವೆ.

ಮುಖ್ಯವಾಗಿ ಹೋಟೆಲಿನ ವಿಚಾರದಲ್ಲಿ ಅಲ್ಲಿ ಸರಿಯಾದ ಅನುಕೂಲಗಳಿಲ್ಲವೆಂಬುದು ನಿಜ. ಇದರ ವಿಚಾರದಲ್ಲಿ ಶ್ರೀಮಾನ್ ಸಿದ್ದಪ್ಪನವರು ಹೇಳಿದ ಹಾಗೆ, ಏನು ಮಾಡಬೇಕೆಂಬುದನ್ನು ಆಲೋಚನೆ ಮಾಡೋಣ. ಸರಿಯಾದ ಹೋಟಲಿನವರು ಯಾರಾದರೂ ಬಂದು ಅವರೇನಾದರೂ ಸೌಕರ್ಯಗಳನ್ನು

ಮಾಡಿಕೊಡಬೇಕೆಂದು ಕೇಳಿದರೆ, ಮಾಡಿ ಕೊಡುವುದಾಗಲೀ ಅಥವಾ ಬಾಡಿಗೆ ರಿಯಾಯಿತಿಯೋ ಅಥವಾ ಇನ್ನಾವುದೋ ಸಹಾಯವೋ ಮಾಡುವುದಕ್ಕಾಗಲಿ ಪ್ರಯತ್ನ ಮಾಡುತ್ತೇವೆ. ಮತ್ತು ಅಧಿಕಾರಿಗಳೂ ಯಾವ ರೀತಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂಬ ಬಗ್ಗೆಯೂ ಸೂಚನೆ ಕೊಡುತ್ತೇನೆ. ವಿದ್ಯುಚ್ಛಕ್ತಿಯ ಸರಬರಾಜಿನ ವಿಚಾರದಲ್ಲೂ ಸಹ ಈಗ ತಮಗೆಲ್ಲಾ ಗೊತ್ತಿರುವ ಹಾಗೆ ಅಲ್ಲೊಂದು ಡೈನಮೋ ಈಗ ನಾಲ್ಕು ತಿಂಗಳಿನಿಂದ ನಡೆಯುತ್ತಿದೆ. ಅದಕ್ಕೆ ಬದಲು ಎಲೆಕ್ಟ್ರಿಕ್ ಲೈನ್ ಹಾಕಿಸಿಕೊಡುವುದು ಸಾಧ್ಯವೋ ಎಂಬುದನ್ನೂ ಯೋಚನೆ ಮಾಡುತ್ತೇವೆ.

ಇನ್ನು ಪ್ರಯಾಣ ಸೌಕರ್ಯದ ವಿಷಯದಲ್ಲಿ ನಿಜವಾಗಿಯೂ ಅಲ್ಲಿ ತೊಂದರೆಯಿದೆ. ಆ ಲೈಸು ಅಷ್ಟು ಲಾಭದಾಯಕವಲ್ಲವೆಂದು ಯಾರೂ ಮುಂದೆ ಬರುತ್ತಿಲ್ಲ. ಹೀಗಿರುವಾಗ ನಾವೇ ಯಾರಿಗೇ ಆದರೂ ಹೋಗಿ ಈ ಲೈನನ್ನು ತೆಗೆದುಕೊಳ್ಳಿ ಎಂದು ಕೊಡುವುದು ಕಾನೂನಿಗೆ ವಿರುದ್ಧ. ಇದು ಆ ಎರಡು ಡಿಸ್ಟ್ರಿಕ್ಟ್‌ಗಳ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರಿಗೆ ಸಂಬಂಧಪಟ್ಟ ವಿಷಯ. ಈ ಸಭೆಯ ಅಭಿಪ್ರಾಯವನ್ನು ತಿಳಿದವರಾಗಿ ಶ್ರೀಮಾನ್ ಪಟ್ಟಾಭಿರಾಮನ್‌ರವರೂ ಅಲ್ಲಿದ್ದಾರೆ. ನಾವೂ ನಮ್ಮ ಈ ಸಭೆಯ ಅಭಿಮತವೇನೆಂಬುದನ್ನೂ ಆ S.T.A. ಯವರಿಗೆ ತಿಳಿಸುತ್ತೇವೆ. ಕೊನೆಗೂ ಯಾರೂ ಬಸ್ ಓಡಿಸಲಿಕ್ಕೆ ಮುಂದೆ ಬಾರದೆ ಇದ್ದರೆ ಸರ್ಕಾರವೇ ಇಲಾಖೆಯವರ ಮೂಲಕ ಒಂದು Seven Seater ವ್ಯಾನನ್ನು ಅಲ್ಲಿಟ್ಟು ಪ್ರಯಾಣಿಕರಿಗೆ ಅನುಕೂಲವಾಗುವಂತೆ ಆ ಸೀಸನ್‌ನಲ್ಲಿ ಓಡಿಸಲು ಏರ್ಪಾಡು ಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

ಇನ್ನು ಬಾಕಿಯ ವಿಚಾರದಲ್ಲಿ ಹೆಚ್ಚಿಗೆ ಹೇಳಬೇಕಾದ್ದಿಲ್ಲ. ಈ ಈರ್ವರೂ ಕೊಟ್ಟಿರತಕ್ಕ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಈ ಹಿಲ್‌ಸ್ಟೇಷನ್‌ನ್ನನ್ನು ಎಷ್ಟರಮಟ್ಟಿಗೆ ಆಕರ್ಷಣೀಯವಾಗಿ ಮಾಡಬಹುದೋ ಅಷ್ಟು ಮಾಡಬೇಕೆಂಬುದೇ ಸರ್ಕಾರದವರ ಆಸೆಯಾಗಿದೆ. ಆದ್ದರಿಂದ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

* * *

# ಪೊಲೀಸ್ ಇಲಾಖೆಯಲ್ಲಿನ ಖರ್ಚು ಇತ್ಯಾದಿ

## 22, ಮಾರ್ಚ್ 1953

ಶ್ರೀ ಎಚ್. ಸಿದ್ದವೀರಪ್ಪ : ಅಧ್ಯಕ್ಷರೇ, ಈ ಹಿಂದೆ ಮಾತನಾಡಿದ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ನಾರಾಯಣಗೌಡರು ಮತ್ತು ಶ್ರೀಮಾನ್ ಪಿ.ಆರ್. ರಾಮಯ್ಯನವರೂ, ಪೊಲೀಸ್ ಇಲಾಖೆಯಲ್ಲಿ ಬಹಳ ಖರ್ಚು ಜಾಸ್ತಿಯಾಗುತ್ತಿದೆ, ವರ್ಷೇ ವರ್ಷೇ ಖರ್ಚು ಬೆಳೆಯುತ್ತಾ ಹೋಗುತ್ತಿದೆಯೆಂಬ ಅಂಶವನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ನಿಜ, ಅಂಕಿ ಅಂಶಗಳನ್ನು ಇಟ್ಟುಕೊಂಡು ನೋಡಿದರೆ ಖರ್ಚು ಹೆಚ್ಚಾಗಿ ಕಾಣುವುದು ಸಹಜವಾಗಿಯೇ ಇದೆ. ಆದರೆ ಒಂದಂಶವನ್ನು ನಾವು ಮರೆಯಕೂಡದು. ಪೊಲೀಸ್ ಇಲಾಖೆಯಲ್ಲಿರತಕ್ಕ ಸಿಬ್ಬಂದಿ ಹೆಚ್ಚಾಗಿದೆಯೇ, ಕಡಿಮೆಯಾಗಿದೆಯೇ, ನಮ್ಮ ದೇಶದಲ್ಲಿ ನಮ್ಮ ಜನರಲ್ ರೆವೆನ್ಯೂವಿನಲ್ಲಿ ಶೇಕಡ ಎಷ್ಟು ಭಾಗದಷ್ಟು ಹಣವನ್ನು ಪೊಲೀಸ್ ಇಲಾಖೆಗೆ ಖರ್ಚು ಮಾಡುತ್ತಿದ್ದೇವೆ ಮತ್ತು ಅಲ್ಲಿನ ಅಧಿಕಾರಿಗಳ ಹಾಗೂ ಪೊಲೀಸ್ ನೌಕರರ – ಕಾನ್ಸ್ಟೇಬಲ್‌ಗಳು ಮತ್ತು ದಫೇದಾರರು – ಇಂಥವರ ಸಂಬಳವನ್ನು ಜಾಸ್ತಿ ಮಾಡಿದ್ದೇವೆಯೇ ಅಥವಾ ಹಾಗೆಯೇ ಇಟ್ಟಿದ್ದೇವೆಯೇ, ಈ ಎಲ್ಲಾ ಅಂಶಗಳನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಇದೇ ರೀತಿಯ ಇನ್ನೂ ಅನೇಕ ಖೋತಾ ನಿರ್ಣಯಗಳು ಈಗ ಸಭೆಯ ಮುಂದೆ ಬರಲಿರುವುದರಿಂದ ನಾನು ಈ ಅಂಶವನ್ನು ಸ್ವಲ್ಪ ವಿಶದವಾಗಿಯೇ ತಿಳಿಸಬೇಕೆಂದಿದ್ದೇನೆ.

ಸಾಮಾನ್ಯವಾಗಿ ಒಂದು ದೇಶದ ಪೊಲೀಸ್ ಸಂಖ್ಯಾಬಲ ಎಷ್ಟಿರಬೇಕೆಂದು ನಿಗದಿ ಮಾಡಬೇಕಾದರೆ, ಆ ದೇಶದ ವಿಸ್ತೀರ್ಣ, ಆ ದೇಶದ ಅವಶ್ಯಕತೆ, ಅಲ್ಲಿ ಸಂಚಾರ ಸೌಕರ್ಯಗಳು ಎಷ್ಟರ ಮಟ್ಟಿಗಿವೆ? ಈ ಅಂಶಗಳನ್ನೆಲ್ಲಾ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದುದರ ಜೊತೆಗೆ, ಒಂದು ತತ್ವದಪ್ರಕಾರ ಆ ಪ್ರದೇಶದ ಜನರ criminal properties ಅಂದರೆ ತಕ್ಸೀರು ಮಾಡುವ ಮನೋಭಾವನೆ ಎಷ್ಟಿದೆಯೆಂಬುದನ್ನು ನೋಡಬೇಕಾಗಿದೆ. ಏಕೆಂದರೆ, ಇಂಥವರ ಕಾಟದಿಂದ ಸತ್ಪ್ರಜೆಗಳನ್ನು ತಪ್ಪಿಸಬೇಕಾದರೆ ಎಷ್ಟು ಪೊಲೀಸ್ ಬೇಕೆಂಬುದು ನಾವು ನೋಡಬೇಕಾದ ಮುಖ್ಯವಾದ ಒಂದು ಅಂಶ.

ಈ ಎಲ್ಲಾ ದೃಷ್ಟಿಯಿಂದ ನೋಡುವುದಾದರೆ, ನಮ್ಮಲ್ಲಿರತಕ್ಕ ಪೋಲೀಸ್ ಬಲ ಅಷ್ಟೇನೂ ಹೆಚ್ಚಿನದಲ್ಲವೆಂದು ಅಂಕಿಅಂಶಗಳನ್ನು ಕೊಟ್ಟು ನಾನು ಸಮರ್ಥನೆ ಮಾಡಬಲ್ಲೆ. ಈ ಸಂದರ್ಭದಲ್ಲಿ ನಾನು ಕೆಲವು ಅಂಶಗಳನ್ನು ಮಾತ್ರ ತಮ್ಮ ಮುಂದಿಟ್ಟರೆ ಸಾಕೆನಸುತ್ತದೆ. ಬೊಂಬಾಯಿ, ಮದ್ರಾಸು, ಹೈದರಾಬಾದು, ಉತ್ತರ ಪ್ರದೇಶ – ಈ ಯಾವ ಪ್ರಾಂತಗಳನ್ನು ನೋಡಿದರೂ, ಅಷ್ಟೇಕೆ ಇಡೀ ಇಂಡಿಯಾ ದೇಶದಲ್ಲಿ ತಿರುವಾಂಕೂರು, ಕೊಚ್ಚಿನ್ ಈ ಎರಡನ್ನು ಬಿಟ್ಟರೆ ಬೇರೆ ಯಾವ ಕಡೆಯಲ್ಲೂ ಕೂಡ ಪೋಲೀಸ್ ದಳಕ್ಕಾಗಿ ಜನರಲ್ ರೆವೆನ್ಯೂನಿಂದ ಖರ್ಚುಮಾಡುವ ಹಣವು ನಮ್ಮ ಪ್ರಾಂತದಲ್ಲಿನಷ್ಟು ಕಡಿಮೆಯಾಗಿಲ್ಲವೆಂದರೆ ಮಾನ್ಯ ಸದಸ್ಯರು ತೃಪ್ತರಾಗುತ್ತಾರೆಂದು ನಂಬಿದ್ದೇನೆ. ಈಗ ತಾನೆ ಹಿಂದೆ 21–11–52ರಲ್ಲಿ Fewer crimes in Mysore ಎಂಬ ಶಿರೋನಾಮೆಯಲ್ಲಿ ಮದ್ರಾಸ್ ಮೇಲ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಒಂದು ಲೇಖನವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲಿ ಅಂಕಿ ಅಂಶಗಳನ್ನು ಚೆನ್ನಾಗಿ ಕೊಟ್ಟು ಮೈಸೂರು ದೇಶದಲ್ಲಿ ಎಷ್ಟು ಖರ್ಚು ಮಾಡುತ್ತಿದ್ದಾರೆ, ಬೇರೆ ಬೊಂಬಾಯಿ ಮದ್ರಾಸುಗಳಲ್ಲಿ ಎಷ್ಟೆಷ್ಟು ಖರ್ಚು ಮಾಡುತ್ತಿದ್ದಾರೆಂದು ತೋರಿಸಿದೆ. ನಮ್ಮಲ್ಲಿ ಸರಾಸರಿ 1–0–4 ನಂತೆ ಖರ್ಚು ಮಾಡುತ್ತಿದ್ದೇವೆ. ಅದೇ ಮದ್ರಾಸಿನಲ್ಲಿ ಒಬ್ಬ ಪ್ರಜೆಗೆ 1 ರೂ. 4 ಆಣೆ ಖರ್ಚು ಮಾಡುತ್ತಾರೆ. ಈ ದೃಷ್ಟಿಯಿಂದ ಲೆಕ್ಕಹಾಕಿದರೆ ನಮ್ಮ ಪೋಲೀಸ್ ಇಲಾಖೆಯ ಖರ್ಚು ಅಷ್ಟೇನೂ ಹೆಚ್ಚಲ್ಲವೆಂದು ಎಲ್ಲರೂ ಒಪ್ಪಬೇಕು. ಅಲ್ಲದೆ ನಮ್ಮಲ್ಲಿ ಪೋಲೀಸ್ ಇಲಾಖೆಯ ಖರ್ಚು ಇಷ್ಟು ಕೂಡ ಹೆಚ್ಚಿರುವುದಕ್ಕೆ ಒಂದು ಕಾರಣವನ್ನು ಮನಸ್ಸಿಗೆ ತಂದುಕೊಳ್ಳಬೇಕು. ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಮೊದಲಿದ್ದ ಪೋಲೀಸಿನ ಕರ್ತವ್ಯಗಳು ಈಚೆಗೆಷ್ಟು ಹೆಚ್ಚಾಗಿವೆಯೆಂಬುದನ್ನು ನೋಡಿ. ಆಹಾರದ ಇಲಾಖೆಯ ಕೆಲಸ, ಲಾ ಮತ್ತು ಆರ್ಡರ್ ನೋಡಿಕೊಳ್ಳುವುದು, ಪ್ರೊಹಿಬಿಷನ್ ಮುಂತಾಗಿ ನೂರೆಂಟು ಇಲಾಖೆಗಳ ಕೆಲಸಗಳು ಅವರಿಗೇ ಸೇರಿವೆ. ಹೋಟಲಿನವರು, ಸಿನಿಮಾದವರು ಮೊದಲುಗೊಂಡು ನಗರಗಳ ನಾನಾ ಭಾಗಗಳಲ್ಲಿ ಪೋಲೀಸಿನವರ ಸಹಾಯ ಬೇಕಾಗಿದೆ. ಅಷ್ಟೇಕೆ, ಪಾನನಿರೋಧದ ಇಲಾಖೆಯೊಂದಕ್ಕೇ, ಪಾನ ನಿರೋಧದ ಕೆಲಸಕ್ಕಾಗಿಯೇ ಈಗಿರತಕ್ಕ ಪೋಲೀಸ್ ಇಲಾಖೆಯ ಅರ್ಧ ಭಾಗ ಹೋಗಿದೆ. ಇನ್ನೂ ಅಲ್ಲಿ ಮಾಡಬೇಕಾದ ಕೆಲಸವಿದೆಯೆಂದು ಹೇಳಿದರೆ ತಪ್ಪಲ್ಲ.

ಈ ಪ್ರಕಾರ ಪೋಲೀಸಿನವರಿಗೆ ಅನೇಕ ರೀತಿಯಲ್ಲಿ ಕೆಲಸ ಕಾರ್ಯಗಳು ಹೆಚ್ಚಿದೆ. ಈ ದೃಷ್ಟಿಯಿಂದ ನೋಡುವುದಾದರೆ, ಇತ್ತೀಚೆಗೆ ನಮ್ಮ ಪೋಲೀಸ್ ಇಲಾಖೆಯಲ್ಲಿ ಕಾನ್‌ಸ್ಟೇಬಲ್‌ಗಳ, ದಫೇದಾರರುಗಳ ಒಟ್ಟಿನಲ್ಲಿ ನಾನ್ ಗೆಜೆಟೆಡ್ ನೌಕರರ ಸಂಖ್ಯೆ ಬೇರೆಪ್ರಾಂತಗಳಲ್ಲಿರುವುದಕ್ಕಿಂತಲೂ ಕಡಿಮೆಯಾಗಿದೆಯೆಂದು ಹೇಳಬಹುದು. ಈ ದೃಷ್ಟಿಯಿಂದಲೂ ನೋಡಿ, ಕೊನೆಗೂ ನಮ್ಮ ಪೋಲೀಸ್

ಸಂಖ್ಯಾಬಲ ಜಾಸ್ತಿಯೆಂದು ಹೇಳುವುದಾದರೆ, ನನಗೇನು ಅದನ್ನು ಸಭೆಯವರ ಅಭಿಪ್ರಾಯಕ್ಕೆ ಬಿಡುತ್ತೇನೆ.

ಆಮೇಲೆ ಇವರುಗಳ ಸಂಬಳ ಕಡಿಮೆ ಎಂಬ ಪ್ರಶ್ನೆ ಬಂತು. ಅದನ್ನು ನಾನೂ ಒಪ್ಪುತ್ತೇನೆ. ಎಲ್ಲೆಲ್ಲಿ ಹಣಕಾಸಿನ ಪರಿಸ್ಥಿತಿ ಅವಕಾಶಕೊಡುತ್ತದೆಯೋ ಅಲ್ಲಿ ಜಾಸ್ತಿ ಮಾಡುತ್ತೇವೆ. ಈಗ ಅವರುಗಳ ಗ್ರೇಡುಗಳು ಸ್ವಲ್ಪ ಮಟ್ಟಿಗೆ ಉತ್ತಮವಾಗುವ ಹಾಗೆ ಮಾಡಿದ್ದೇವೆ. ಈ ದೃಷ್ಟಿಯಿಂದ ನಾವು ಮಾಡತಕ್ಕ ಖರ್ಚು ಜಾಸ್ತಿಯೆಂದು ಹೇಳುವ ಹಾಗಿಲ್ಲವೆಂದು ನಾನು ಭಾವಿಸುತ್ತೇನೆ. ಶ್ರೀಮಾನ್ ಪಿ.ಆರ್. ರಾಮಯ್ಯನವರು ನಮ್ಮದು ವೆಲ್‌ಫೇರ್ ಸ್ಟೇಟ್ ಆಗಿರುವುದರಿಂದ ಇಂಥ ವೆಲ್‌ಫೇರ್ ಸ್ಟೇಟ್‌ನಲ್ಲಿ ಪೊಲೀಸ್ ದಳಕ್ಕೆ ಹೆಚ್ಚಿಗೆ ಅವಶ್ಯಕವಿಲ್ಲ ಎಂದು ಹೇಳಿದರು. ಅವರು ಹೇಳಿದ ತತ್ವವನ್ನು ನಾನೂ ಒಪ್ಪುತ್ತೇನೆ. ಆದರೆ ಅವರು ಭಾವಿಸುವಂಥ Ideal state of affairs ಇನ್ನೂ ನಮ್ಮಲ್ಲಿಲ್ಲ. ಪ್ಲೇಟೋವಿನ ರಿಪಬ್ಲಿಕ್ ಎಂದರೆ ಯಾವ Ideal stateನ್ನು ನಾವು ಭಾವಿಸುತ್ತೇವೆಯೋ ಅದು ಒಂದು ದೃಷ್ಟಿಯಿಂದ ನೋಡಿದರೆ 'ಅನಾರ್ಕಿ' ಎಂದು ಹೇಳಬೇಕು ಅಷ್ಟೆ. ಎಲ್ಲಿಯವರೆಗೂ ನಾವು organised societyಯಲ್ಲಿರುತ್ತೇವೆಯೋ ಅಲ್ಲಿಯವರೆಗೆ ಪೊಲೀಸ್ ಇರಬೇಕಾದದ್ದು ಅವಶ್ಯಕ. ಈ ದೃಷ್ಟಿಯಿಂದ ಲೆಕ್ಕಹಾಕಿದರೆ ನಾವು ಈಗಿರತಕ್ಕ ಪೊಲೀಸ್ ದಳವನ್ನು ಕಡಿಮೆ ಮಾಡುವ ಸ್ಥಿತಿಯಲ್ಲಿಲ್ಲವೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಈ ಇಲಾಖೆಗೆ ಏಕೆ ಇಷ್ಟು ಖರ್ಚಾಯಿತೆಂದು ಇನ್ನೊಂದು ಕಾರಣವನ್ನೂ ಕೂಡ ಹೇಳುತ್ತೇನೆ. ಹಿಂದೆ ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಅರಮನೆಯಲ್ಲಿ ಒಂದು ದಳವಿತ್ತು: Palace Guards ಎಂದು ಅರಮನೆಯಲ್ಲಿಟ್ಟುಕೊಂಡಿದ್ದರು. ಇತ್ತೀಚೆಗೆ ಇವರುಗಳನ್ನು ನಮ್ಮ ಪೊಲೀಸ್ ದಳಕ್ಕೇ ಸೇರಿಸಿದ್ದೇವೆ. ಇದೊಂದರಿಂದಲೇ ನಮಗೆ 4,10,800 ರೂಪಾಯಿಗಳಷ್ಟು ಖರ್ಚು ಜಾಸ್ತಿಯಾಗಿದೆ.

ಇನ್ನೊಂದು ವಿಷಯವೇನೆಂದರೆ ಹಂಗಾಮಿಯಾಗಿ ಆಹಾರ ಇಲಾಖೆ ಮುಂತಾದ ಇಲಾಖೆಗಳಿಗೆ ಕೆಲವರನ್ನು ಇಟ್ಟುಕೊಂಡಿದೆ. ನಾನು ಮೊನ್ನೆ ತಾನೇ ಹೇಳಿದ ಹಾಗೆ, ದೇವರ ದಯೆಯಿಂದ ಆಹಾರ ಹತೋಟಿಯನ್ನು ತೆಗೆದರೆ, ಸುಮಾರು ನಾಲ್ಕು ಲಕ್ಷ ರೂಪಾಯಿಗಳವರೆಗೆ ಉಳಿಸಬಹುದು. ಆದಷ್ಟು ಈ ವರ್ಷವೇ ಕೊಂಚ ಮಟ್ಟಿಗಾದರೂ ಖರ್ಚನ್ನು ಕಡಿಮೆಮಾಡಬೇಕೆಂಬುದು ನಮ್ಮ ಆಶೆ. ಮೊದಲೇ ಹೇಳುವುದಕ್ಕೆ ಬದಲಾಗಿ ಕಾರ್ಯ ರೂಪದಲ್ಲಿ ತೋರಿಸಬೇಕೆಂದು ನನ್ನ ಇಚ್ಛೆ.

**ಶ್ರೀ ಕೆ.ಪುಟ್ಟಸ್ವಾಮಿ** (ಶ್ರೀರಂಗಪಟ್ಟಣ) : ಜನರೆಲ್ಲ ಕಂಟ್ರೋಲ್ ತೆಗೆದುಹಾಕಿ ಎಂದು ಹೇಳುತ್ತಿದ್ದಾರೆ. ಆದರೂ ದೇವರ ದಯೆಯಿದ್ದರೆ, ಎಂದು ಹೇಳುತ್ತೀರಿ, ರಾಜ್ಯಾಂಗದ ಗತಿ ಏನಾಗಬೇಕು, ಹೀಗೆ ಹೇಳಿದರೆ?

**ಶ್ರೀ ಎಚ್. ಸಿದ್ದವೀರಪ್ಪ** : ರಾಜ್ಯಾಂಗಕೂಡ ದೇವರ ದಯೆಯಿಂದ ನಡೆಯಬೇಕು. ಇನ್ನು ಎ.ಎಸ್.ಪಿ ಮತ್ತು ಡಿಐಜಿಗಳ ವಿಚಾರ ಹೇಳಿದರು. ಈ ವಿಷಯ ಮಾತನಾಡಬೇಕಾದರೆ ಇವರು ಇಷ್ಟು ಜನರಿದ್ದಾರೆಂಬುದನ್ನು ಗಮನಿಸಬೇಕು. ಒಟ್ಟು 27 ಜನ ಎ.ಎಸ್.ಪಿಗಳಿದ್ದಾರೆ. ಪೊಲೀಸ್ ಇನ್‌ಸ್ಪೆಕ್ಟರನ್ನು ಏಕ್‌ದಮ್ ಡಿ.ಎಸ್.ಪಿಗಳಾಗಿ ಪ್ರಮೋಟ್ ಮಾಡುವುದು ತಪ್ಪು, ಇನ್‌ಸ್ಪೆಕ್ಟರ್ ಸ್ಥಾನಕ್ಕೂ ಡಿ.ಎಸ್.ಪಿ. ಸ್ಥಾನಕ್ಕೂ ಅಜಗಜಾಂಗತರ. ಅಲ್ಲದೆ ಎ.ಎಸ್.ಪಿ ಬರಿಯ ಪೋಸ್ಟ್ ಆಫೀಸ್ ಎಂದು ಹೇಳುವುದಕ್ಕಾಗುವುದಿಲ್ಲ. ಇವರಿಗೂ ಒಂದೊಂದು ಜೂರಿಸ್‌ಡಿಕ್ಷನ್ ಇರುತ್ತದೆ. ಡಿ.ಎಸ್.ಪಿ ಯ ಪ್ರತಿನಿಧಿಯಾಗಿ ಕೆಲವು ಡೆಲಿಗೇಟೆಡ್ ಅಧಿಕಾರಗಳನ್ನಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಹೀಗಿರುವಾಗ ಏಕ್‌ದಮ್ ಪೊಲೀಸ್ ಇನ್‌ಸ್ಪೆಕ್ಟರಿಗೆ ಡಿ.ಎಸ್.ಪಿಯಾಗಿ ಬಡ್ತಿ ಕೊಟ್ಟರೆ ಆಡಳಿತ ಧರ್ಮದೃಷ್ಟಿಯಿಂದ ಸರಿಯೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನನ್ನ ಖಚಿತವಾದ ಅಭಿಪ್ರಾಯವನ್ನು ಹೇಳುವುದಾದರೆ ಎ.ಎಸ್.ಪಿ ಸ್ಥಾನಗಳಿರುವುದು ಸಂಸ್ಥಾನದ ಆಡಳಿತದ ಹಿತ ದೃಷ್ಟಿಯಿಂದ ತಪ್ಪಾಗಲಾರದೆಂದು ನನ್ನ ಅಭಿಪ್ರಾಯ.

ಇನ್ನು ಡಿ.ಐ.ಜಿಗಳ ವಿಚಾರ. ಈಗಾಗಲೇ 'ಇಂಟಿಗ್ರೇಷನ್ ಆಫ್ ಸರ್ವೀಸಸ್' ಆಗಿ ಇನ್‌ಡಿಯನ್ ಪೊಲೀಸ್ ಸರ್ವೀಸ್ ಎಂದಾಗಿದೆ. ಅದಕ್ಕೆ ಇವೆಲ್ಲಾ ಸೇರಿವೆ. ಇದರ ಸಂಬಂಧವಾಗಿ ಇಂತಿಂಥ ಕೇಡರಿನಲ್ಲಿ ಇಷ್ಟಿಷ್ಟು ಸ್ಥಾನಗಳಿರಬೇಕೆಂದು ನಿರ್ದಿಷ್ಟವಾಗಿ ನಿಗದಿಯಾಗಿದೆ. ಇಷ್ಟೇ ಅಲ್ಲ, ಡಿ.ಐ.ಜಿ ಹುದ್ದೆಗಳಿರುವುದು ಮೈಸೂರು ಒಂದೇ ಸಂಸ್ಥಾನದಲ್ಲಿ. ಬಾಕಿ ಸಂಸ್ಥಾನಗಳಲ್ಲಿಯೂ ಇವೆ. ಈ ಅಧಿಕಾರಿಗಳಿಗೆ ನಿರ್ದಿಷ್ಟ ಕಾರ್ಯ ಜವಾಬ್ದಾರಿ ಇದೆಯೆಂಬುದನ್ನು ಮರೆಯಬಾರದು. ಈ ಎಲ್ಲ ದೃಷ್ಟಿಯಿಂದಲೂ, ನಾನು ಇಷ್ಟು ಮಾತ್ರ ಹೇಳುತ್ತೇನೆ, ಎಲ್ಲೆಲ್ಲಿ ಅನಾವಶ್ಯಕವಾದ ಖರ್ಚಿದೆಯೆಂದು ತೋರುತ್ತದೆಯೋ ಅಲ್ಲೆಲ್ಲಾ ಅದಕ್ಕೆ ಅವಕಾಶ ಕೊಡದೇ ಇರುವ ಹಾಗೆ, ದಕ್ಷತೆಯನ್ನು ಕಾಪಾಡಿಕೊಂಡು ನಡೆದುಕೊಳ್ಳಲು ಯಾವಾಗಲೂ ಸಿದ್ಧನಾಗಿದ್ದೇನೆ. ಇಷ್ಟು ವಿವರಣೆಯನ್ನು ನಾನು ಕೊಟ್ಟಿರುವ ದೃಷ್ಟಿಯಿಂದ ಈ ಖೋತಾ ಸೂಚನೆಯನ್ನು ಮಾನ್ಯ ಸ್ನೇಹಿತರು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

* * *

# ಪೊಲೀಸ್ ಗ್ರೇಡ್ ಚರ್ಚೆ

## 22 , ಮಾರ್ಚ್ 1953

**ಶ್ರೀ ಎಚ್. ಸಿದ್ದವೀರಪ್ಪ:** ಸ್ವಾಮಿ, ಮಾನ್ಯ ಮಿತ್ರರಾದ ಶ್ರೀ ಪುಟ್ಟಸ್ವಾಮಿಯವರು ಹೇಳಿರತಕ್ಕಂಥ ಅಂಶದ ತತ್ವವು ಬಹಳಮಟ್ಟಿಗೆ ಒಪ್ಪಲು ಅರ್ಹವಾದುದು. ಈ ವಿಚಾರದಲ್ಲಿ ಸ್ಥಳದ ಅನುಭವವಿರುವ ಪ್ರಕಾರ ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದೇವೆ. ಪೊಲೀಸು ಆಡಳಿತ ಮುಖ್ಯವಾಗಿ ಒಂದು ತಾಲ್ಲೂಕಿನಲ್ಲಿ ಅಥವಾ ಹೋಬಳಿಯಲ್ಲಿದ್ದರೆ ಅಲ್ಲಿ ಯಾವ ರೀತಿ ಸಬ್‌ಇನ್‌ಸ್ಪೆಕ್ಟರ್ ಕೆಲಸ ಮಾಡುತ್ತಾನೋ ಅದರ ಮೇಲೆ ಇಡೀ ಇಲಾಖೆಯ ಆಗುಹೋಗು ಅವಲಂಬಿಸಿಕೊಂಡಿರುತ್ತದೆಂದು ಹೇಳಿದರೆ ಎಲ್ಲರೂ ಒಪ್ಪುವರು. ಸಾಮಾನ್ಯವಾಗಿ ಸಬ್‌ಇನ್ಸ್‌ಪೆಕ್ಟರ್ ಕೆಲಸ ಗುರುತರವಾದ ಜವಾಬ್ದಾರಿಯಿಂದ ಕೂಡಿದೆ. ದೊಡ್ಡ ದೊಡ್ಡ ಕಾಗ್ನಿಜಬಲ್ ಕೇಸುಗಳ ಇನ್‌ವೆಸ್ಟಿಗೇಷನ್ ಕಾನೂನು ಪ್ರಕಾರ ಅವರಿಗೆ ವಹಿಸಿದೆ, ಸಂಬಳ ಸಾರಿಗೆಯಲ್ಲಿ ಅಷ್ಟು ದೊಡ್ಡ ವ್ಯತ್ಯಾಸವಿರಬಾರದೆಂಬುದು ಅಂಗೀಕಾರಕ್ಕೆ ಅರ್ಹವಾದ ತತ್ವ. ಆ ದೃಷ್ಟಿಯಿಂದಲೇ ಶ್ರೀ ಪುಟ್ಟಸ್ವಾಮಿಯವರು ಹೇಳುವ ಹಾಗೆ, ಹಿಂದೆ ಹ್ಯಾಮಿಲ್ಟನ್‌ರವರು ಐಜಿಪಿ ಆಗಿದ್ದಾಗ, ಗ್ರ್ಯಾಜುಯೇಟುಗಳನ್ನು ಸಬ್ ಇನ್‌ಸ್ಪೆಕ್ಟರ್ ಕೆಲಸಕ್ಕೆ ತೆಗೆದುಕೊಂಡರೆ ಆಡಳಿತದಲ್ಲಿ ದಕ್ಷತೆ ಚೆನ್ನಾಗಿರುತ್ತದೆಯೆಂದು ಮಾಡಿರುವುದು ನಿಜ. ನನ್ನ ಅನುಭವದಲ್ಲಿ ಸಹ ಎಲ್ಲೆಲ್ಲಿ ಪದವೀಧರರು ಸಬ್ ಇನ್‌ಸ್ಪೆಕ್ಟರಾಗಿದ್ದಾರೋ ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿದೆ. ಕಾರ್ಯನಿರ್ವಹಣೆ ಚೆನ್ನಾಗಿ ಮಾಡುತ್ತಿದ್ದಾರೆ ಎಂದು ಕಂಡುಬಂದಿದೆ. ಆಡಳಿತ ವರದಿಗಳಿಂದಲೂ, ಅವರು ಮಾಡುವ ಕಾರ್ಯಕ್ರಮದಿಂದಲೂ ಇದು ಗೊತ್ತಾಗುತ್ತದೆ. ಪುಟ್ಟಸ್ವಾಮಿಯವರು ಹೇಳಿದ ಹಾಗೆ ಮೊದಲು ನಾಲ್ಕು ಗ್ರೇಡುಗಳಿದ್ದವು.

ಮೊದಲನೆಯ ಗ್ರೇಡಿಗೆ 120 ರೂಪಾಯಿ, ಎರಡನೆಯದಕ್ಕೆ 100 ರೂಪಾಯಿ, ಮೂರನೆಯದಕ್ಕೆ 80, ನಾಲ್ಕನೆಯದಕ್ಕೆ 70 ರೂಪಾಯಿ, ಹೀಗೆ ನಾಲ್ಕು ಗ್ರೇಡುಗಳಿದ್ದವು. ಆದರೆ 3 ಮತ್ತು 4ನೆಯ ಗ್ರೇಡುಗಳಲ್ಲಿರುವ ಗ್ರಾಜುಯೇಟುಗಳಿಗೆ ಜಾಗ್ರತೆ ಬಡ್ತಿ ಸಿಕ್ಕದೆ ಸ್ಟ್ಯಾಗ್ನೇಟ್ ಆಗುವುದರಿಂದ ಜಿಗುಪ್ಸೆ ಅಥವಾ ಬೇಜಾರಾಗುತ್ತದೆ ಎಂದು ಹೇಳಿದರೆ ತಪ್ಪಲ್ಲ. ಆಗ ಆ ಸಂದರ್ಭವಿದ್ದುದನ್ನು ಸರ್ಕಾರ ಮನಗಂಡು, ಈ ದೃಷ್ಟಿಯಿಂದ ಬಹಳ ನಿಸ್ವಾರ್ಥತೆಯಿಂದ ಸೇವೆ ಮಾಡತಕ್ಕಂಥ ನೌಕರರಿಗೆ ತೊಂದರೆಯಾಗಿದೆಯೆಂದು ತಿಳಿದು, ಸಮರ್ಪಕವಾದ ರೀತಿಯಲ್ಲಿ ಚಾಲತಿ ಸಾಲಿನಲ್ಲಿ

ಒಂದು ಸರ್ಕಾರಿ ಆಜ್ಞೆಯನ್ನು ಮಾಡಲಾಗಿದೆ. ಅದರ ಪ್ರಕಾರ 70–4–90–90–5–120–120–6–150 ಈ ರೀತಿಯ ಸ್ಟ್ಯಾಗ್ನೆಂಟ್ ಆಗದ ಹಾಗೆ ಸರಿಯಾದ ಒಂದು ಆಜ್ಞೆಯನ್ನು ಮಾಡಿದ್ದೇವೆ. ಇದು ಯಾವ ಸಮಯದಲ್ಲಿ ಮಾಡಿರುವುದು ಎಂಬುದನ್ನು ಸಹ ದಯವಿಟ್ಟು ಸಭೆ ಯೋಚನೆ ಮಾಡಬೇಕು. ಅದನ್ನು ಮಾಡಿರುವ ಸಂದರ್ಭವನ್ನು ಸಭೆಯ ಮುಂದಿಡುತ್ತೇನೆ. ಈ ರೀತಿಯಲ್ಲಿ ಮಾಡಿದ್ದರಿಂದ ಯಾವ ರೀತಿಯ ಹೆಚ್ಚಿನ ಹಣಕಾಸಿನ ಹೊರೆಯೂ ಪ್ರಜೆಯ ಮೇಲೆ ಹಾಕಲ್ಪಟ್ಟಿಲ್ಲ. ಇರುವುದರಲ್ಲೇ, ಮಂಜೂರುಮಾಡಿಕೊಟ್ಟಿರುವ ಬಡ್ಜೆಟ್ಟಿನಲ್ಲೇ ಸರಿದೂಗಿಸಿದ್ದೇವೆ. ಹಣಕಾಸಿನ ಪರಿಸ್ಥಿತಿ ತೃಪ್ತಿಕರವಾಗಿಲ್ಲದಿದ್ದರೂ ಮಾಡಬೇಕಾದದ್ದು ಅತ್ಯಾವಶ್ಯಕ, ಅದನ್ನು ಮಾಡದಿದ್ದರೆ ಅವರಿಗೆ ಅನ್ಯಾಯವಾಗುತ್ತದೆ ಎಂಬ ದೃಷ್ಟಿಯಿಂದ ಮಾಡಿದ್ದೇವೆ. ಈ ರೀತಿಯಾಗಿ ಮಾಡಿರುವುದರಿಂದ ಬಹಳ ಮಟ್ಟಿಗೆ ಅವರಿಗಿದ್ದ ಕೊರತೆ ಕಡಿಮೆಯಾಗುತ್ತದೆಂಬ ನಂಬಿಕೆ ನನಗಿದೆ.

ಇನ್ನು ಎ.ಎಸ್.ಪಿಗಳ ವಿಚಾರದಲ್ಲಿ ಐ.ಪಿ.ಎಸ್. ಆಫೀಸರುಗಳಿಗೆ ಸಂಬಳ ಬಹಳ ಜಾಸ್ತಿಯಾಗಿದೆಯೆಂದು ಹೇಳಿದರು. ಐ.ಪಿ.ಎಸ್. ಆಫೀಸರುಗಳ ವಿಷಯದಲ್ಲಿ ನಾವೇನೂ ಮಾಡುವ ಹಾಗಿಲ್ಲ. It is an integrated service. It is a service which has got a common scale throughout the length and breadth of the country. ಅದನ್ನನುಸರಿಸಿ ಒಂದು ಬೇರೆ ಗ್ರೇಡುಕೊಡಿ ಎಂದು ಹೇಳುವುದು ಸೂಕ್ತವಲ್ಲ; ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಕಂಡುಬಂದಿರುವುದರಿಂದ ಏನೂ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ)** : ಹಣ ಉಳಿಸುವುದಕ್ಕೆ ಇಷ್ಟು ಐ.ಪಿ.ಎಸ್. ಅಧಿಕಾರಿಗಳು ಬೇಡವೆಂದು ಹೇಳಬಹುದಲ್ಲವೇ?

**ಶ್ರೀ ಎಚ್. ಸಿದ್ದವೀರಪ್ಪ** : ಮುಖ್ಯವಾಗಿ, ಒಂದು ರೀತಿಯಲ್ಲಿ ತೀರ್ಮಾನವಾಗಿದೆ. ಈಗ ಬೇಡವೆಂದು ಹೇಳುವುದು ಸುಲಭವಲ್ಲ. ಇನ್ನೊಂದುಮುಖ್ಯ ಅಂಶವನ್ನು, ಅಂದರೆ ಪೊಲೀಸ್ ಇಲಾಖೆ ಜಮಾದಾರರು, ದಫೇದಾರರು, ಕಾನ್‌ಸ್ಟೇಬಲ್ಲುಗಳ ವಿಚಾರದಲ್ಲಿ ಯೋಚನೆಮಾಡಬೇಕಾದುದು ಇದೆ. ಈಗಿನ ಪ್ರಕೃತ ಪರಿಸ್ಥಿತಿಯಲ್ಲಿ ಏನನ್ನು ಮಾಡಬಹುದೆಂಬುದನ್ನು ಒಂದು ದೃಷ್ಟಿಯಿಂದ ಸರ್ಕಾರದವರು ತೀವ್ರವಾಗಿ ಆಲೋಚಿಸುತ್ತೇವೆ.

**Mr. SPEAKER** : It refers to the Sub –Inspectors' grades.

**ಶ್ರೀ ಎಚ್. ಸಿದ್ದವೀರಪ್ಪ** : Thank you, Sir. ಆ ದೃಷ್ಟಿಯಿಂದ ನಾವು ಯೋಚನೆ ಮಾಡಿದ್ದರಲ್ಲಿ ಈಗಿರತಕ್ಕಂಥ ವ್ಯವಸ್ಥೆ, ಹೊಸದಾಗಿ ಆಗಿರುವ ಸರ್ಕಾರಿ ಆರ್ಡರು. ಸಬ್‌ಇನ್‌ಸ್ಪೆಕ್ಟರುಗಳಿಗೆ ಬಹಳ ಮಟ್ಟಿಗೆ ತೃಪ್ತಿಕರವಾಗಿದೆಯೆಂದು ಕಂಡಿದೆ. ನನ್ನ ಮಾನ್ಯ ಮಿತ್ರರು ಈ ಭರವಸೆಯಿಂದ ಅಥವಾ ಈ ಸಮಜಾಯಿಷಿಯಿಂದ, ತಮ್ಮ ಖೋತಾನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

* * *

# ಲಿಫ್ಟ್ ಇರಿಗೇಷನ್ ಹಾಗೂ ವಿದ್ಯುತ್ ಬಗ್ಗೆ

## 17, ಜುಲೈ 1953

**ಶ್ರೀ ಎಚ್. ಸಿದ್ದವೀರಪ್ಪ** (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು) : ಸ್ವಾಮಿ, ಕೋಲಾರ ಡಿಸ್ಟ್ರಿಕ್ಟ್ ಡಿಸ್ಟ್ರಸ್‌ಗೆ ಒಳಗಾಗಿರುವ ಪ್ರದೇಶವಾಗಿರುವುದರಿಂದ 'ಲಿಫ್ಟ್ ಇರಿಗೇಷನ್'ಗಾಗಿ ವಿದ್ಯುಚ್ಛಕ್ತಿ ಒದಗಿಸಬೇಕೆಂಬುದೇ ಸರ್ಕಾರದವರ ನೀತಿಯಾಗಿದೆ. ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ 148 ಇರಿಗೇಷನ್ ಪಂಪುಗಳನ್ನು ಹಾಕಬೇಕೆಂದು ಹೇಳಿ 9,98,000 ರೂಪಾಯಿಗಳಿಗೆ ಒಂದು 'Detail Survey' ಆಗಿದೆ. ಆದರೆ, ತಾವು ಆಗಲೇ ಹೇಳಿದ ಹಾಗೆ, ಸರ್ಕಾರದವರು ಪಂಪುಗಳನ್ನು ಹಾಕಿಕೊಡಬೇಕಾದರೆ, ಅದು ಸಾಮಾನ್ಯವಾಗಿ ಲಾಭದಾಯಕವಾಗಿದ್ದು ಹಾರ್ಸ್‌ಪವರಿಗೆ ಒಂದು ಸಾವಿರ ರೂಪಾಯಿನಂತೆ ವರ್ಕ್ ಆಗುವಂತಿರಬೇಕೆಂದು ಒಂದು ನಿಯಮವನ್ನೂ ಇಟ್ಟುಕೊಂಡಿದ್ದಾರೆ. ಹೀಗಿರುವಾಗ ಈ ಕೆಲಸ 1,400 ರೂಪಾಯಿಗಳಿಗೆ ವರ್ಕ್ ಆಗುತ್ತದೆ. ಆದ್ದರಿಂದ ಸರ್ಕಾರ ಏನು ಒಂದು ನೀತಿಯನ್ನಿಟ್ಟುಕೊಂಡಿದೆಯೋ ಅದನ್ನು ಸಂದರ್ಭಾನುಸಾರ, ಒಂದು ವೇಳೆ ಒಂದಾನೊಂದು ಪ್ರದೇಶದಲ್ಲಿ 50 ಅಥವಾ 100 ರೂಪಾಯಿಗಳು ಹೆಚ್ಚಾದರೂ ಯೋಚನೆ ಮಾಡದೆ ಅದನ್ನು ಕೈಕೊಳ್ಳುತ್ತಲಿದ್ದಾರೆ.

ಹಾಗಿದ್ದರೂ, ಇಲ್ಲಿ ಖರ್ಚು ವೆಚ್ಚಗಳನ್ನು ನೋಡಿದ್ದರಲ್ಲಿ ಖರ್ಚು ಸ್ವಲ್ಪ ಮಟ್ಟಿಗೆ ಹೆಚ್ಚಾಯಿತೆಂದು ಯೋಚನೆಮಾಡಬೇಕಾಗಿದೆ. ಅಲ್ಲದೆ ಇತ್ತೀಚೆಗೆ ತಾನೆ ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕುಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದೆ. ಲೈನ್ ಹಾಕಿರುವುದೇ ಈಗೀಗ. ಆದ್ದರಿಂದ ಇನ್ನು ಮುಂದೆ ಪಂಪುಗಳನ್ನು ಕೊಡುವ ವಿಷಯವನ್ನು ಯೋಚನೆ ಮಾಡುವವರಾಗಿದ್ದೇವೆ. ಖರ್ಚು 1,100 ರೂಪಾಯಿಗಳವರೆಗೂ ಹೋಗುತ್ತದೆಂಬ ದೃಷ್ಟಿಯಿಂದ ಇದನ್ನು ಬಿಡುವುದು ಸರಿಯಲ್ಲವೆಂಬದನ್ನು ನಾನೂ ಒಪ್ಪುತ್ತೇನೆ.

ಆದರೆ ಕೋಲಾರ ಜಿಲ್ಲೆಯಲ್ಲಿ ಇನ್ನೊಂದು ಕಷ್ಟವೂ ಇದೆ. ಅಲ್ಲೀಗ 25 ಸೈಕಲ್ ಕರೆಂಟ್ ಇರುವುದರಿಂದ ಹೋದವರ್ಷವೂ ಕೂಡ ಎಷ್ಟು ಹಣ ಆ ಭಾಗಕ್ಕೆ ಒದಗಿಸಿದ್ದೇವೋ ಅಷ್ಟು ಹಣವನ್ನು ಕೂಡ ಪೂರಾ ಖರ್ಚು ಮಾಡುವುದಕ್ಕಾಗಿಲ್ಲ. ಏಕೆಂದರೆ 25 ಸೈಕಲ್ ಕರೆಂಟು ಯಾವ ಪ್ರಾಜೆಕ್ಟಿನಿಂದ ಬರುತ್ತಿದೆಯೆಂಬುದು ತಮಗೇ ಗೊತ್ತಿದೆ. ಕೆಲವು ಕೈಗಾರಿಕಾ ಕಾರ್ಖಾನೆಗಳಿಗೆ ಕೂಡ 100% ರಷ್ಟು ವಿದ್ಯುಚ್ಛಕ್ತಿಯನ್ನು ಕಟ್ ಮಾಡಬೇಕಾಗಿ ಬಂದಿತ್ತು. ಈ ಕಷ್ಟವನ್ನು ತಪ್ಪಿಸುವುದಕ್ಕಾಗಿ freequency conversion ಕೆಲಸ ತ್ವರಿತವಾಗಿ ಈಗ ನಡೆಯುತ್ತಿದೆ. ತಮಗೇ ಗೊತ್ತಿರುವ ಹಾಗೆ 50ಲಕ್ಷ ರೂಪಾಯಿಗಳನ್ನು ಇಂಡಿಯಾ ಸರ್ಕಾರದವರು ಮಂಜೂರು ಮಾಡಿದ್ದಾರೆ. ಅಷ್ಟೇ ಅಲ್ಲ. ಈ ಕೆಲಸ ಬಹಳ ತ್ವರಿತವಾಗಿ ನಡೆಯಬೇಕೆಂಬ ದೃಷ್ಟಿಯಿಂದ ಇದಕ್ಕಾಗಿಂರೇ ಬೇರೊಂದು ಸಿಬ್ಬಂದಿಯಿಟ್ಟು, ಒಬ್ಬ ಸೂಪರಿನ್‌ಟೆಂಡೆಂಟರನ್ನೂ ಸ್ಪೆಷಲ್ ಆಫೀಸರಾಗಿ ನೇಮಿಸಿರುವುದಲ್ಲದೆ ಒಬ್ಬ ರೆವೆನ್ಯೂ ಆಫೀಸರನ್ನೂ ಅವರ ಸಹಾಯಕ್ಕಾಗಿ ಕೊಟ್ಟಿದ್ದೇವೆ. ರೆವೆನ್ಯೂ ಆಫೀಸರನ್ನು ಕೊಟ್ಟಿರುವ ಉದ್ದೇಶವೇನೆಂದರೆ ಅಲ್ಲಿ ಲೈನು ಹಾಕಬೇಕಾದರೆ ರೈತರು ಮುಚ್ಚಳಿಗೆ ಮುಂತಾದುವುಗಳನ್ನು ಕೊಡುವುದಕ್ಕೆ ತಡಮಾಡಬಹುದು; ಅದಕ್ಕೊಬ್ಬರು ರೆವೆನ್ಯೂ ಆಫೀಸರೇ ಇದ್ದರೆ, ಮುಚ್ಚಳಿಗೆ ಮುಂತಾದುಗಳನ್ನು ಬೇಗ ಬೇಗ, More or less on war footing, ಕೂಡಲೇ ಮಾಡಿಸಿಕೊಡಲು ಅನುಕೂಲವಾಗುತ್ತದೆಂದು ರೆವೆನ್ಯೂ ಆಫೀಸರನ್ನೂ ಅವರ ಜೊತೆಗೆ ನೇಮಿಸಿದ್ದೇವೆ. ಅವರು ಯಾವ ಲೈನು ಹಾಕುತ್ತಿದ್ದಾರೋ ಅಲ್ಲಿ ಯಾವ ಮುಚ್ಚಳಿಕೆ ಮಾಡಿಸಿಕೊಡಬೇಕು, ಜನರು ಯಾವ ರೀತಿ ಅರ್ಜಿ ಕೊಡಬೇಕು, ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ತೋರಿಸಿಕೊಡುತ್ತಾರೆ. ಈಗ ಇದರಂತೆ ಕೆಲಸ ನಡೆಯುತ್ತಿದೆ. ಇಷ್ಟೇ ಅಲ್ಲ, ಈ 50 ಲಕ್ಷ ರೂಪಾಯಿಗಳನ್ನು ಈ ಆರು ತಿಂಗಳಲ್ಲೇ ಖರ್ಚುಮಾಡಿದರೂ ಇಂಡಿಯಾ ಸರ್ಕಾರದವರು ಇನ್ನೂ 50 ಲಕ್ಷ ರೂಪಾಯಿಗಳನ್ನು ಇದೇ ಸಾಲಿನಲ್ಲಿ ಲಿಫ್ಟ್ ಇರಿಗೇಷನ್ ಬಗ್ಗೆ ಒದಗಿಸಿಕೊಡುತ್ತಾರೆಂಬ ಭರವಸೆಯಿದೆ. ಈ ರೀತಿ Lift Irrigation by electricityಯನ್ನು ಕೈಗೊಳ್ಳುವಂತೆ ಮಾಡಬೇಕೆಂಬ ಉದ್ದೇಶ ಮತ್ತು ಆಸೆ ಇಂಡಿಯಾ ಸರ್ಕಾರದವರಿಗಿದೆಯೆಂದು ನನಗೆ ಗೊತ್ತಿದೆ. ಆದ್ದರಿಂದ ಕೆಲಸ ತ್ವರಿತವಾಗಿ ನಡೆಯಬೇಕು ಅಷ್ಟೇ.

ಇದೇ ಸಂದರ್ಭದಲ್ಲಿ ಒಂದು ವಿಷಯ ಹೇಳುವುದಾದರೆ, ಈ ವರ್ಷ, 1952–53ನೆಯ ಸಾಲಿನಲ್ಲಿ ಎಷ್ಟು ಹಣವನ್ನು ಇದಕ್ಕಾಗಿ ಮೀಸಲಾಗಿಟ್ಟಿದ್ದೇವೋ ಅಷ್ಟನ್ನೂ ಕೂಡ ಈ official year ಆಗುವುದರೊಳಗೇ ಖರ್ಚು ಮಾಡಲಾಗಿದೆ. ಜೊತೆಗೆ ಇನ್ನೂ ಒಂದೆರಡು ಲಕ್ಷ ಹೆಚ್ಚಿಗೆ ಖರ್ಚಾಗಿದೆಯೆಂದೇ ಹೇಳಬಹುದು. ಲ್ಯಾಪ್ಸ್ ಸ್ವಲ್ಪವೂ ಆಗಿಲ್ಲವೆಂದು ಈ ಸಭೆಯಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಎಲೆಕ್ಟ್ರಿಕ್ ಲೈನನ್ನು ಕೊಟ್ಟರೂ,

ಅನೇಕರು ಆ ಲೈನನ್ನು ತೆಗೆದುಕೊಂಡು ಹೋಗಿ ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳಬಹುದೋ ಅಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳುವುದಕ್ಕೆ ನಮ್ಮ ರೈತರಿಗೆ ಶಕ್ತಿಯಿಲ್ಲವೆಂಬುದೂ ನಮಗೆ ಗೊತ್ತಿದೆ. ಏಕೆಂದರೆ ಇದು ಡಿಸ್ಟ್ರೆಸ್ ಏರಿಯಾ. ಇದನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರದವರು ಒಂದು ಯೋಚನೆ ಮಾಡುತ್ತಿದ್ದೇವೆ. ಏನೆಂದರೆ ಎಲೆಕ್ಟ್ರಿಸಿಟಿ ಎಲ್ಲೆಲ್ಲಿ ತೆಗೆದುಕೊಂಡು ಹೋಗುತ್ತೇವೆಯೋ ಅಲ್ಲೆಲ್ಲಾ G.M.F ಗ್ರಾಂಟ್ಸ್‌ನಿಂದ, ಆ ವಿದ್ಯುಚ್ಛಕ್ತಿಯನ್ನು ಸರ್ವೀಸ್ ಮಾಡಿಸುವುದಕ್ಕಾಗಿ ಯಾವ ಜಮೀನಿನಲ್ಲಿ ನೀರು ಬರುತ್ತದೆಂದು ಗೊತ್ತಾಗುತ್ತದೋ ಅಲ್ಲಿ ಆ ಜಮೀನಿನವರಿಂದ ಮುಚ್ಚಳಿಕೆ ತೆಗೆದುಕೊಂಡು ನಾವೇ ಮೋಟಾರ್ ಹಾಕಿಸಿಕೊಟ್ಟು, ಪಂಪಿಟ್ಟು ನೀರನ್ನೊದಗಿಸಿಕೊಟ್ಟು, ಆ ಹಣವನ್ನು ಸುಲಭವಾದ ಕಂತಿನ ರೂಪದಲ್ಲಿ ತೆಗೆದುಕೊಳ್ಳಬೇಕಾದದ್ದು ಅತ್ಯಾವಶ್ಯಕವೆಂದು ಭಾವಿಸಿದ್ದೇವೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಅನೇಕ ಕಡೆ ನಾವು 2–3 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಲೈನ್ ಹಾಕಿಸಿಕೊಟ್ಟರೂ, ಆ ಪ್ರದೇಶದಲ್ಲಿ 100 ಜನರಿಗೆ ಪ್ರಯೋಜನವಾಗುವ ಹಾಗಿದ್ದರೂ 2–3 ಜನರಿಗೆ ಮಾತ್ರ ಅದನ್ನು ಉಪಯೋಗಿಸಿಕೊಳ್ಳಲು ಶಕ್ತಿಯಿರುತ್ತದೆ. ಬಾಕಿಯವರಿಗೆ ಸಾಮಾನ್ಯವಾಗಿ ನಾವು ಕೇಳುವ 100 ರೂಪಾಯಿಗಳ ಡಿಪಾಜಿಟ್ ಹಣವನ್ನು ಕೊಡುವುದಕ್ಕೆ ಕೂಡ ಕಷ್ಟವಾಗಿರುತ್ತದೆ. ಆ ದೃಷ್ಟಿಯಿಂದ ನಾವು ಹಣ ಖರ್ಚು ಮಾಡುವ ಕಡೆ ಅದರಿಂದ ಮ್ಯಾಕ್ಸಿಮಮ್ ಬೆನಿಫಿಟ್ ತೆಗೆದುಕೊಳ್ಳುವ ದೃಷ್ಟಿಯಿಂದ, ನಾನು ಮೊದಲೇ ಹೇಳಿದಂತೆ, ಒಂದು ಹೊಸ ವಿಧಾನವನ್ನು ಜಾರಿಗೆ ತರಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಈ ಸ್ಕೀಮು ಜಯಪ್ರದವಾಗಿ ಅದರಿಂದ ದೇಶದ ಉತ್ಪತ್ತಿ ಜಾಸ್ತಿಯಾಗಬೇಕೆಂದು ಯಾವ ಆಸೆ ಮಾನ್ಯ ಸದಸ್ಯರಿಗಿದೆಯೋ ಅದೇ ಆಸೆ ಸರ್ಕಾರದವರಿಗೂ ಇದೆ. ಆದ್ದರಿಂದ ಈ ಭರವಸೆಯ ಮೇಲೆ ತಾವು ತೃಪ್ತರಾಗಿ ಈ ಖೋತಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ.

ಮಾನ್ಯ ಸದಸ್ಯರು ಹೇಳಿದ ಹಾಗೆ 13 ಜಾಗಗಳ ಪೈಕಿ ಈಗಾಗಲೇ 6 ಜಾಗಗಳ ವಿಷಯದಲ್ಲಿ ಎಸ್ಟಿಮೇಟ್ ತಯಾರಾಗಿ ಇನ್ನೇನು ಮಂಜೂರಾಗುವ ಸ್ಟೇಜಿನಲ್ಲಿದೆ. ಬಾಕಿ ಜಾಗಗಳಲ್ಲಿ, keeping in view the economy of the unit, ಕೆಲಸ ಮಾಡುತ್ತಿದ್ದೇವೆ. ಇದರ ಮೇಲೆ ಈಗಾಗಲೇ ಚಳ್ಳಕೆರೆ ತಾಲ್ಲೂಕಿನಲ್ಲಿ 160 ಪಂಪ್‌ಗಳು ಸರ್ವಿಸ್ಸಿನಲ್ಲಿವೆ. ಬಾಕಿ ಕಡೆಯೂ ಮಾಡುತ್ತಿದೆ. ಎಲ್ಲೆಲ್ಲಿ ಮಾಡಬೇಕು, ಎಷ್ಟು ಮಟ್ಟಿಗೆ ಮಾಡಬೇಕು ಎಲ್ಲಿ ಸಾಧ್ಯವೆಂಬುದನ್ನು ಅಧಿಕಾರಿಗಳು ಹೋಗಿ ತನಿಖೆ ಮಾಡುತ್ತಾರೆ. ಅವರಿಗೆ ಸೂಕ್ತ ರೀತಿಯಲ್ಲಿ instructions ಕೊಡಲಾಗುತ್ತದೆ. ಈ ಭರವಸೆಯ ಮೇಲೆ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಸ್ವಾಮಿ, ಮಳವಳ್ಳಿ ತಾಲ್ಲೂಕಿನಲ್ಲಿ ಇದುವರೆಗೆ ಎಷ್ಟೆಷ್ಟು ಮನವಿಗಳಿದ್ದವೋ ಅವೆಲ್ಲವನ್ನೂ ಪರಿಶೀಲನೆ ಮಾಡಿ, ಸರ್ವೆ ಮಾಡಿ, ಯೋಜನೆಮಾಡಿ, ಮಂಜೂರಾಗಿವೆ.

ಇದುವರೆಗಿದ್ದವೆಲ್ಲವೂ ಆಗಿವೆ. ಇತ್ತೀಚೆಗೆ ನಾಲ್ಕು ಪಂಪುಗಳನ್ನು ಕೊಡಬೇಕೆಂದು ಅರ್ಜಿಗಳು ಬಂದು ಆರ್ಡರ್ ಆಗಿದೆ, ಕೆಲಸ ನಡೆಯುತ್ತಿದೆ. ಇನ್ನು ಮುಂದೆ ಮನವಿಗಳು ಬಂದರೆ ಆಗ ಪರಿಶೀಲನೆ ಮಾಡೋಣ.

ಒಂದಂಶವನ್ನು ಮಾತ್ರ ಈ ಸಮಯದಲ್ಲಿ ಹೇಳಬೇಕು. 50 ಲಕ್ಷ ರೂಪಾಯಿ ಕೊಟ್ಟಿರುವುದು ಈಗಾಗಲೇ ಈ ಸಭೆಯ ಮುಂದೆ ಬಂದಿದೆ. ಇದನ್ನು ಕೊಡುವಾಗ ಇಂತಿಂಥ ಕೆಲಸಗಳಿಗೇ, ಇಂಥ ಸ್ಥಳಗಳಿಗೇ ಕೊಡಬೇಕೆಂಬ ಷರತ್ತುಗಳನ್ನು ಹಾಕಿ earmark ಮಾಡಿ, ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆ. ಅವರು ಸೂಚಿಸಿದ ತಾಲ್ಲೂಕುಗಳಿಗೇ ಕೊಡಬೇಕು. ಅಲ್ಲಿ ಏನು ಕೆಲಸ ಮಾಡಬೇಕು, ಏನು ಸಹಾಯ ಮಾಡಬೇಕು ಎಂಬುದು ನಿರ್ದಿಷ್ಟವಾಗಿದೆ. ಮುಂದೆ ಇಂಥ ಮನವಿಗಳು ಬಂದರೆ ಸರ್ಕಾರದವರು ಸಹಾನುಭೂತಿಯಿಂದ ನೋಡುತ್ತಾರೆ.

**ಶ್ರೀ ಎಂ. ಚಿಕ್ಕಲಿಂಗಯ್ಯ** : ಶಿಂಷಾನದಿಯ ಅಣೆ ?

**ಶ್ರೀ ಎಚ್. ಸಿದ್ದವೀರಪ್ಪ** : ಅದನ್ನು ಪರಿಶೀಲನೆ ಮಾಡುತ್ತೇವೆ.

ಸ್ವಾಮಿ, ನನ್ನ ಸ್ನೇಹಿತರು ಶ್ರೀಮಾನ್ ತಿಮ್ಮಪ್ಪಗೌಡರು ಮಲೆನಾಡಿನ ಪ್ರಾಂತ್ಯವಾದ ಈ ಪ್ರದೇಶದಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚು ಕೊಟ್ಟಿಲ್ಲವೆಂದು ಹೇಳಿದರು. ಅಂಕಿ ಅಂಶಗಳನ್ನು ನೋಡಿದರೆ, ಅವರ ವಾದಕ್ಕೆ ಸಮರ್ಥನೆ ದೊರೆಯುವಂತಿದೆ. ಮಲೆನಾಡು ಪ್ರಾಂತ್ಯದಲ್ಲಿ ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ಪಂಪುಗಳನ್ನು ಕೊಟ್ಟಿರುವುದು ಬಹಳ ಕಡಿಮೆಯಾಗಿದೆ. ಇದು ಯಾವ ದೃಷ್ಟಿಯಿಂದ, ಹೇಗಾಯಿತು ಎಂದು ಯೋಚನೆ ಮಾಡಿದರೆ, ಸರ್ಕಾರಕ್ಕೆ ಅಲ್ಲಿಗೆ ಕೊಡಬಾರದೆಂಬ ಅಭಿಪ್ರಾಯವೇನೂ ಇರಲಿಲ್ಲ. ಇಲ್ಲಿಯವರೆಗೆ ಅಲ್ಲಿಗೆ ಕೊಡಬೇಕೆಂದು ಕೇಳತಕ್ಕ ಅವಶ್ಯಕತೆಯಿರಲಿಲ್ಲವೆಂದು ತೋರುತ್ತದೆ. ಇತ್ತೀಚೆಗೆ ಅನೇಕ ಕಡೆ ಮಳೆಯಿಲ್ಲದೆ ತೊಂದರೆಯಾಗಿರುವುದರಿಂದ, ಈಗ ಅಲ್ಲಿಯೂ ಬೇಕಾಗಿದೆ. ಕಡೂರು, ತರೀಕೆರೆ, ಹಾಸನ ಈ ಕೆಲವು ಭಾಗಗಳಲ್ಲಿ ನಾನು ನೋಡಿದ ಹಾಗೆ, ಅವು ಮಲೆನಾಡಾದರೂ ಮಳೆಯಿಲ್ಲದೆ ವಿದ್ಯುಚ್ಛಕ್ತಿ ಬೇಕೆಂಬ ವಾದ ಬಂದಿದೆ. ಇದನ್ನು ಸರ್ಕಾರದವರು ಸಹಾನುಭೂತಿಯಿಂದ ಯೋಚನೆ ಮಾಡಲೇಬೇಕು.

ಇನ್ನೊಂದು ವಿಷಯವನ್ನು ಈ ಸಮಯದಲ್ಲಿ ಮಾನ್ಯ ಸ್ನೇಹಿತರಾದ ತಿಮ್ಮಪ್ಪಗೌಡರಿಗೆ ತಿಳಿಸಬೇಕಾಗಿದೆ. ಈ 50 ಲಕ್ಷ ರೂಪಾಯಿಗಳನ್ನು ಹಂಚಬೇಕಾದರೆ ಇದರಲ್ಲಿ ನಮ್ಮ ಸರ್ಕಾರದ ಕೈವಾಡವೇನೂ ಇಲ್ಲ, ಮೂರು ಜಿಲ್ಲೆಗಳಿಗೆ ಮಾತ್ರ *ಹಂಚಬೇಕೆಂಬುದು ಈ ಸರ್ಕಾರದ ನೀತಿಯೇನೂ ಅಲ್ಲ.* ಇದಕ್ಕೆ ಕಾರಣ ಹೇಳುತ್ತೇನೆ. ಕಳೆದ ವರ್ಷ ಸಂಸ್ಥಾನದಲ್ಲಿ ಅಭಾವಸ್ಥಿತಿ ಬಂದಾಗ ಇಂಡಿಯಾ ಸರ್ಕಾರದವರು ಶ್ರೀ ರಾಮಮೂರ್ತಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ ಎಲ್ಲೆಲ್ಲಿ ಕ್ಷಾಮವಿದೆಯೋ ಅಲ್ಲಿ ಖಾಯಂ ಪರಿಹಾರ ಕೊಡಬೇಕಾದರೆ ಯಾವ ಯೋಜನೆಯನ್ನು



WD-H-035-20

ಹಾಕಬೇಕೆಂದು ಯೋಚನೆ ಮಾಡಿ ಸಲಹೆ ಮಾಡುವುದಕ್ಕಾಗಿ ಕಳುಹಿಸಿದರು. ಅವರು ಇಲ್ಲಿಗೆ ಬಂದು ಬಯಲು ಸೀಮೆಗಳಾದ ಚಳ್ಳಕೆರೆ, ಮೊಳಕಾಲ್ಮೂರು ಇಂಥಾ ಪ್ರದೇಶಗಳಿಗೆ ಹೋದಾಗ ಅಲ್ಲಿ ನೀರಿನ ಸೌಕರ್ಯವನ್ನು ನೋಡಿ, ಮೈಸೂರು ದೇಶದ ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ದೊರೆಯುತ್ತಿರುವುದನ್ನು ಗಮನಿಸಿ, ಇಂಡಿಯಾ ಸರ್ಕಾರದವರಿಗೆ ಖಚಿತವಾಗಿ ಶಿಫಾರಸು ಮಾಡಿದ್ದಾರೆ. ಆ ಪ್ರದೇಶದಲ್ಲಿ ಸರಾಸರಿ ಮಳೆ ಈ ರೀತಿ ಇದೆ. ನೀರಿನ ಸೌಕರ್ಯ ಈ ರೀತಿ ಇದೆ ಎಂಬುದನ್ನು ಗಮನಿಸಿ ಖಾಯಂ ಪರಿಹಾರಮಾರ್ಗವನ್ನು ಶಿಫಾರಸು ಮಾಡುತ್ತೇವೆ, ಅಲ್ಲಿಗೆ ವಿದ್ಯುಚ್ಛಕ್ತಿ ಕೊಟ್ಟು ಸಹಾಯ ಮಾಡಬೇಕು ಎಂದು ಹೇಳಿದರು. ಎಲ್ಲೆಲ್ಲಿಗೆ ವಿದ್ಯುಚ್ಛಕ್ತಿಯನ್ನೂ ನೀರಾವರಿಗೆ ಕೊಟ್ಟು ಸಹಾಯಮಾಡಬೇಕೆಂದು ರಾಮಮೂರ್ತಿ ಸಮಿತಿಯವರು ಶಿಫಾರಸು ಮಾಡಿದರೋ ಅಲ್ಲಿಗೆ ಕೊಡಬೇಕೆಂದು ಇಂಡಿಯಾ ಸರ್ಕಾರದವರು ಹಣವನ್ನು ಮಂಜೂರು ಮಾಡಿದರು.

ಒಂದು ತತ್ವವನ್ನು ನಾನು ಒಪ್ಪುತ್ತೇನೆ. “All good things in life should be equitably shared by all'' ಎಂಬ ತತ್ವವನ್ನು ನಾನು ಒಪ್ಪುತ್ತೇನೆ. ನಮ್ಮ ಮುಖ್ಯಮಂತ್ರಿಗಳೂ ಈ ವಿಚಾರದಲ್ಲಿ ಇಂಡಿಯಾ ಸರ್ಕಾರಕ್ಕೆ ಬರೆದಿದ್ದಾರೆ. ಈಚೆಗೆ ನಮ್ಮ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯನ್ನು ಎಲ್ಲ ಭಾಗದವರೂ ಕೇಳುತ್ತಾರೆ. ಇದರ ಬೆಲೆ ರೈತರಿಗೆ ಹೆಚ್ಚು ಹೆಚ್ಚಾಗಿ ಗೊತ್ತಾಗುತ್ತಿದೆ. ಬಾಕಿ ಜಿಲ್ಲೆಗಳಿಗೂ ಇನ್ನೂ ಹೆಚ್ಚಾಗಿ ಇದರ ಸೌಕರ್ಯ ಒದಗಿಸಬೇಕು ಎಂದು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದಾರೆ. ಇದನ್ನು ಮುಂದುವರಿಸುತ್ತೇವೆ. ಒಂದು ವೇಳೆ ಯಾವ ಕಾರಣದಿಂದಲಾದರೂ ಅವರು ಕೊಡತಕ್ಕ ಸಾಲದ ಹಣವನ್ನು ಇದಕ್ಕೆ ಉಪಯೋಗಿಸುವುದಕ್ಕೆ ಅವಕಾಶವಾಗದಿದ್ದರೆ, ಗ್ರೋ ಮೋರ್ ಫುಡ್ ಫಂಡ್ನಿಂದ ಸಹಾಯಮಾಡಬೇಕಾಗಿ ಬಂದರೆ ಹೇಗೆ ಮಾಡಬೇಕೆಂಬುದನ್ನೂ ಆಲೋಚನೆ ಮಾಡುತ್ತಿದ್ದೇವೆ.

ಸ್ವಾಮಿ, ಈ ಖೋತಾ ನಿರ್ಣಯದ ಮೂಲೋದ್ದೇಶದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ನನ್ನ ಮಾನ್ಯ ಮಿತ್ರರಿಗೆ ತಿಳಿಸಬೇಕಾಗಿದೆ. ಈಗಾಗಲೆ ಎಲ್ಲಾ ಕಡೆಯಲ್ಲೂ ಸರ್ವೆ ಮಾಡುತ್ತಿದ್ದಾರೆ. ವಿದ್ಯುಚ್ಛಕ್ತಿಯ ಸರಬರಾಜಿಗೆ ಅಗತ್ಯವಾದ ಸಾಮಾನುಗಳನ್ನು ತರಿಸಲಾಗುತ್ತಿದೆ. ಸದ್ಯದಲ್ಲೇ ಸಾಕಷ್ಟು ವಿದ್ಯುಚ್ಛಕ್ತಿಯನ್ನು ಸರಬರಾಯಿಮಾಡಬೇಕೆಂದಿದ್ದೇವೆ. ಆದರೆ ಇದರಲ್ಲಿ ಒಂದು ವಿಚಾರವಾಗಿದೆ. ಅವರು ಅರ್ಜಿಕೊಟ್ಟು ಕೇಳಿರತಕ್ಕ ಸ್ಥಳಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗಿದ್ದರೆ ಸರ್ಕಾರಕ್ಕೆ ಅವುಗಳಿಂದ ಎಷ್ಟೆಷ್ಟು ರಿಟರ್ನ್ ಬರಬೇಕೋ ಅಷ್ಟು ಬರುವಂತೆ ಕಾಣುತ್ತಿಲ್ಲ. ಸರ್ಕಾರಿ ಆಜ್ಞೆಯಲ್ಲಿ ಹೇಳಿರುವಂತೆ 7 ಪರ್ಸೆಂಟ್ ರಿಟರ್ನ್ ಬಂದರೆ ಮಾತ್ರವೇ ಅಂಥ ಕಡೆಗೆ ಇದನ್ನು ಕೊಡಬೇಕೆಂದಿರುತ್ತದೆ. ಆದರೆ ಅದಕ್ಕೂ ಒಂದು ರಿಯಾಯಿತಿಯನ್ನು ಕೊಟ್ಟಿದ್ದೇವೆ. ಈಗಾಗಲೇ ರಾಮನಾಥಪುರ, ಬಸವಪಟ್ಟಣಗಳಿಗೆ

ವಿದ್ಯುಚ್ಛಕ್ತಿಯನ್ನೊದಗಿಸಲು 2,15,800 ರೂಪಾಯಿಗಳ ಅಂದಾಜು ತಯಾರಾಗಿದೆ. ಆದರೆ ಅದರಿಂದ ಶೇಕಡ 5 ಮಾತ್ರ ರಿಟರ್ನ್ ಬರುತ್ತದೆ. ಇನ್ನು ಗೊರೂರಿಗೆ 95 ಸಾವಿರದಲ್ಲಿ ಒಂದು ಅಂದಾಜು ತಯಾರಾಗಿದೆ. ಅದರಂತೆ ಬರತಕ್ಕ ರಿಟರ್ನ್ ಮಾತ್ರ ಶೇಕಡ 3.3. ಮಲ್ಲಪಟ್ಟಣಕ್ಕೆ 75 ಸಾವಿರದಲ್ಲಿ ಅಂದಾಜು ತಯಾರಾಗಿದೆ. ಶೇಕಡ 1.6 ಮಾತ್ರ ರಿಟರ್ನ್ ಬರುತ್ತವೆ. ಆದುದರಿಂದ ನಾನಾಗಲೇ ತಮ್ಮಲ್ಲಿ ಅರಿಕೆ ಮಾಡಿಕೊಂಡಿರುವಂತೆ ಇನ್ನೂ ಅನೇಕ ಜನ ರೈತರಿಗೆ ಇದರಿಂದ ಒಂದು ಪ್ರೋತ್ಸಾಹ ಹುಟ್ಟುವಂತೆ ಮಾಡಲು ಅವರಿಗೆ ಇದನ್ನು ಒದಗಿಸಬೇಕೆಂದಿರುತ್ತೇನೆಂಬ ಭರವಸೆಯನ್ನು ನಾನು ತಮಗೆ ನೀಡುತ್ತೇನೆ. ಇಷ್ಟು ಹೇಳಿದ ಮೇಲೆ ತಾವು ಇದನ್ನೂ ವಾಪಸ್ಸು ತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ.

* * *

# ಮೈಸೂರು ಪೋಲೀಸ್ (2ನೇ ಮಸೂದೆ) ಬಿಲ್

## 18, ಜುಲೈ 1953

ಈ ಮಸೂದೆಯ ಅಗತ್ಯವನ್ನು ಒಂದೆರಡು ಮಾತುಗಳಲ್ಲಿ ಹೇಳಿ ಈ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಬೇಡುತ್ತೇನೆ. ನಮ್ಮ ದೇಶದಲ್ಲಿ ಈಗಾಗಲೇ ಇಂಥ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಎರಡು ಕಾನೂನುಗಳಿವೆ. ಒಂದನೆಯದು ಮೈಸೂರು ಪೋಲೀಸ್ ಆಕ್ಟ್ 1906, ಇದು ಆಗಿಂದಾಗ್ಗೆ ತಿದ್ದುಪಡಿಯಾಗುತ್ತಿದೆ. ಎರಡನೆಯದು ಮೈಸೂರು ಲಾಟರೀಸ್ ಅಂಡ್ ಪ್ರೈಸ್ ಕಾಂಪಿಟೇಷನ್ ಕಂಟ್ರೋಲ್ ಅಂಡ್ ಟ್ಯಾಕ್ಸ್ ಆಕ್ಟ್ 1951. ಈಗಿರತಕ್ಕ ಮಸೂದೆ ಕಾನೂನಿನ 1ನೆಯ ಸೆಕ್ಷನ್‌ನಲ್ಲಿ ಒಂದು ಅರ್ಥ ವಿವರಣೆ ಇದೆ. ಅದರಲ್ಲಿ ಗೇಮಿಂಗ್ ಎಂದರೆ ಏನೆಂಬ ವಿಚಾರವನ್ನು ಹೇಳಿದೆ.

ಆ ಸೆಕ್ಷನ್‌ನಲ್ಲಿ ಈ ರೀತಿ ಇದೆ:

1. Gaming does not include a lottery but includes all forms of wagering or betting. except wagering. or betting on horse race when such wagering or betting takes place :-

i. on the date on which such race is runs and

ii. in an enclosure which the license of the race course on which such race is to be run, has set apart for the purpose under the terms of the licence issued under section 4 of the Mysore Race Course Licensing Act, 1952 (Mysore Act VIIC of 1952) in respect of such race course.

In sub-clause (2) the definition of the instruments of gaming is given. Sub-clause (3) gives the definition of common gaming house.

ಇತ್ತೀಚೆಗೆ ನಮ್ಮ ಸಂಸ್ಥಾನದಲ್ಲಿ ಓ.ಸಿ. ಅಥವಾ ಸಟ್ಟಾ ಆಟವೆಂದು ಆಡುತ್ತಾರೆ. ಈ ಆಟದ ನಿಯಮವೇನು, ಇದು ಯಾವ ರೀತಿ ಇರುತ್ತದೆ ಎಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳುವುದಾದರೆ, ಇದೊಂದು ಜೂಜಿನ ಆಟ. ಇದರಲ್ಲಿ ಹಣಕಟ್ಟುವವನು ಸಂಖ್ಯೆಯನ್ನು ಹೇಳಬೇಕು. ಇದರಲ್ಲಿ ಸಿಂಗಲ್ ಡಿಜಿಟ್ ಮತ್ತು ಡಬ್ಬಲ್ ಡಿಜಿಟ್ ಎಂದಿರುತ್ತದೆ. ಅಮೇರಿಕಾದಲ್ಲಿ ಒಂದು ತಾರೀಖಿನಲ್ಲಿ ಹತ್ತಿಯ ಬೆಲೆ Opening ಮತ್ತು Closing ಹೇಗಿರುತ್ತದೆ ಎಂದು ನಿರ್ದಿಷ್ಟವಾಗಿ ಹೇಳಬೇಕು. ಸಿಂಗಲ್ ಡಿಜಿಟ್ ಬೆಟ್ ಆದರೆ ಇವನು ಹೇಳಿದ ಪ್ರಕಾರ ಬಂದರೆ ಒಂದಕ್ಕೆ ಎಂಟರಷ್ಟು ಹಣ ಇವನಿಗೆ ಬರುತ್ತದೆ, ಡಬಲ್ ಡಿಜಿಟ್ ಆದರೆ ಒಂದಕ್ಕೆ ಎಂಬತ್ತರಷ್ಟು, ಎಂದರೆ ಒಂದು ರೂಪಾಯಿ ಕಟ್ಟಿದರೆ 80 ರೂಪಾಯಿ ಕೊಡುತ್ತಾರೆ. ಇವನು ಹೇಳಿದ ಅಂಕಿ ಸರಿಯಾಗಿಬಿಟ್ಟಿದ್ದರೆ, ಇದು ಸೂಕ್ಷ್ಮವಾಗಿ ಈ ಆಟದ ಸ್ವಭಾವ. ಇತ್ತೀಚೆಗೆ ನಮ್ಮ ಸಂಸ್ಥಾನದಲ್ಲಿ ಎಲ್ಲಿ ನೋಡಲಿ ಈ ಆಟ ಬಹಳ ಹೆಚ್ಚಾಗಲು ಪ್ರಾರಂಭವಾದುದು ನಾನು ವಾಸವಾಗಿರುವ ದಾವಣಗೆರೆ ನಗರದಲ್ಲಿ. ಅಲ್ಲಿ ಹತ್ತಿ ವ್ಯಾಪಾರವೂ ಜಾಸ್ತಿ. ಓ.ಸಿ. ಆಟವೆಂದು ಬಹಳ ಜನರು ಆಡುತ್ತಿದ್ದರು. ನಾನಂತು ಆಡಿಲ್ಲ. ಈ ಓ.ಸಿ. ಆಟದಿಂದ ಎಷ್ಟೋ ಜನರು ಮನೆಮಾರುಗಳನ್ನು ಕಳೆದುಕೊಂಡಿದ್ದಾರೆ. ಎಷ್ಟೋ ಜನರು ಹುಚ್ಚು ಹಿಡಿದು ಹೋಗಿದ್ದಾರೆ. ಅನೇಕರು ಮಾಡಬಾರದ ಕೆಲಸಗಳನ್ನು ಮಾಡಿದ್ದಾರೆ. ನಾನು ಕಣ್ಣಾರೆ ನೋಡಿದ್ದೇನೆ. ಲಕ್ಷಾಧೀಶ್ವರರು ಭಿಕ್ಷುಕರಾಗಿ ಬಿದ್ದಿರುವುದನ್ನು ನೋಡಿದ್ದೇನೆ.

**ಶ್ರೀ ಎಂ.ವಿ. ರಾಮರಾವ್** (ತುಮಕೂರು) :– ಓ.ಸಿ. ಆಟವೆಂದರೇನು?

**ಶ್ರೀ ಎಚ್. ಸಿದ್ದವೀರಪ್ಪ** :– Opening and closing rates of cotton ಎಂದು.

ಒಂದು ಉದಾಹರಣೆಗಾಗಿ ತಾ. 16–7–53ನೆಯ ಡೆಕ್ಕನ್‌ಹೆರಾಲ್ಡ್ ಪತ್ರಿಕೆಯ ಒಂದು ಕಟ್ಟಿಂಗನ್ನು ಇಟ್ಟುಕೊಂಡಿದ್ದೇನೆ. ಇದರಲ್ಲಿ ನ್ಯೂಯಾರ್ಕ್ ಕಾಟನ್ ವಿಚಾರ ತಿಳಿಸಿದೆ. ಜುಲೈ 15ರಲ್ಲಿ ಕಾಟನ್ ಓಪನಂಗ್ ರೇಟ್ 34.04 ಎಂತಲೂ ಕಾಟನ್ ಕ್ಲೋಸಿಂಗ್ ರೇಟು 34.05 ಎಂತಲೂ ತಿಳಿಸಿದೆ. ಹೀಗಿರತಕ್ಕ ಅಂಕಿಗಳಲ್ಲಿ ಯಾವ ರೀತಿ ಸ್ಪೆಕ್ಯುಲೇಟ್ ಮಾಡುತ್ತಾರೆಂದರೆ, ಈ ಅಂಕಿಗಳಲ್ಲಿ ಯಾವುದಾದರೂ ಒಂದು ಸಂಖ್ಯೆ ಕರೆಕ್ಟಾದರೆ ಒಂದಕ್ಕೆ ಎಂಟರಷ್ಟನ್ನೂ ಎರಡು ಸಂಖ್ಯೆಗಳೂ ಕರೆಕ್ಟಾದರೆ ಆಗ ಒಂದಕ್ಕೆ 80 ರಷ್ಟನ್ನೂ ಕೊಡುತ್ತಾರಂತೆ; ಇದನ್ನು ಸಟ್ಟಾ ಆಟ ಎಂದು ಕರೆಯುತ್ತಿದ್ದಾರೆ.

ಈಗ ಈ ದೃಷ್ಟಿಯಿಂದ ಇದನ್ನು ನಾವು ನೋಡುವುದಾದರೆ ಬೆಂಗಳೂರಿನಲ್ಲಿ ಈಗ ಇದರ ಒಂದು ದೊಡ್ಡ ವಿಪತ್ತು ಪ್ರಾರಂಭವಾಗಿದೆ. ಗಂಡ ಕೆಲಸಕ್ಕೆ ಹೋದರೆ ಹೆಂಡತಿ ಮನೆಯಲ್ಲಿರುವ ತಟ್ಟೆ-ಬಟ್ಟೆಗಳನ್ನು ಗಿರವಿಟ್ಟು ಹಣವನ್ನು ತಂದು ಈ ಸಟ್ಟ ಆಟಕ್ಕೆ ಹಾಕಿ ಆ ಹಣವನ್ನೆಲ್ಲ ಕಳೆದುಕೊಂಡ ಪರಿಣಾಮವಾಗಿ ಆ ಗಂಡಹೆಂಡರಿಗೆ ವ್ಯಾಜ್ಯ ಬಂದು ಆ ಸಂಸಾರವೇ ಒಡೆದುಹೋಗುವಂಥಾ ಪರಿಸ್ಥಿತಿಯುಂಟಾಗಿದೆ, ಎಂಬುದಾಗಿ ನನಗೆ ಈ ರೀತಿ ಅನೇಕ ವರದಿಗಳು ಬರುತ್ತಿವೆ. ಇದೇ ರೀತಿಯಾಗಿ ಇನ್ನೂ ಅನೇಕ ಸಂಸಾರಗಳು ಇದಕ್ಕೆ ತುತ್ತಾಗಿ ಬಹಳ ತೊಂದರೆಗೀಡಾಗಿವೆ. ಸಣ್ಣ ಸಣ್ಣ ಹುಡುಗರೂ ಸಹ ಈ ಆಟ ಪ್ರಾರಂಭಿಸಿ ತಂದೆತಾಯಿಗಳು ಮನೆಯಲ್ಲಿಟ್ಟ ದುಡ್ಡು ಕಾಸುಗಳನ್ನೆಲ್ಲಾ ಹೊಡೆದುಕೊಂಡುಹೋಗಿ ಈ ಸಟ್ಟಾ ಆಟಕ್ಕೆ ಹಾಕುತ್ತಿದ್ದಾರೆಂದು ನಮಗೆ ವರದಿಗಳು ಬರುತ್ತಿವೆ. ಅನೇಕ ಸಣ್ಣ ಸಣ್ಣ ಕಳ್ಳತನಗಳಿಗೂ ಈ ಆಟವೇ ಕಾರಣವೆಂದು ಕಂಡುಬರುತ್ತಿದೆ. ವರ್ತಮಾನ ಪತ್ರಿಕೆಗಳಲ್ಲೂ ಕೂಡ ಇದರ ಹಾವಳಿ ಎಷ್ಟಕ್ಕೆ ಹೋಗಿದೆಯೆಂಬುದರ ಬಗ್ಗೆ ಹೇಳಿಕೆಗಳು ಬರುತ್ತಿವೆ. ಪೊಲೀಸ್‌ನವರು ಈ ಸಂಬಂಧವಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಆದರೆ ಅದಕ್ಕೆ ಕಾನೂನು ದೃಷ್ಟಿಯಲ್ಲಿ ಕೆಲವು ತೊಂದರೆಗಳಿವೆ. ಆ ವಿಚಾರವನ್ನು ನಾನಾಗಲೇ ತಮಗೆ ಅರಿಕೆ ಮಾಡಿಕೊಂಡಿದ್ದೇನೆ.

ಸಮಾಜದಲ್ಲಿ ಅನೇಕ ಅಂತಸ್ತಿನ ಜನರಿದ್ದಾರೆ. ಅವರೂ ಸಹ ಈ ಆಟ ಪ್ರಾರಂಭಿಸಿದ್ದಾರೆ. ಹೀಗೆ ಈ ಒಂದು ಆಟದ ಪ್ರಭಾವ ಕೂಲೆಗಾರರಿಂದ ಹಿಡಿದು ಶ್ರೀಮಂತರವರರೆಗೂ ಬಿದ್ದು ಎಲ್ಲರೂ ಇದಕ್ಕೆ ಇಂದು ಬಲಿಯಾಗಿ ಹಾಳಾಗುತ್ತಿದ್ದಾರೆ. ಈಗ ಬೆಂಗಳೂರು ನಗರದಲ್ಲಿ ತಾವು ಯಾವ ಬೀದಿಯಲ್ಲಿ ನೋಡಿದರೂ ಈ ಆಟದ ಟಿಕೆಟ್‌ಗಳಿಗಾಗಿ ಸಾವಿರಾರು ಜನರು ಕ್ಯೂನಲ್ಲಿ ನಿಂತಿರುವುದು ಕಂಡುಬರುತ್ತದೆ. ಹೀಗೆ ಈ ಒಂದು ಜೂಜಾಟ ಯಾವ ಮಟ್ಟಕ್ಕೆ ಬಂದಿರುತ್ತದೆಯೆಂಬುದು ಈ ಜನರು ಕ್ಯೂನಲ್ಲಿ ನಿಂತಿರುವುದರಿಂದಲೇ ತಮಗೆ ವೇದ್ಯವಾಗಬಹುದು. ಅನೇಕ ಸಂದರ್ಭಗಳಲ್ಲಿ ಸಂಚಾರ ಸೌಕರ್ಯಗಳಿಗೂ ಕೂಡ ಅವಕಾಶವಿಲ್ಲದಹಾಗೆ ಎಷ್ಟೋ ಅಡ್ಡಿ ಅಡಚಣೆಗಳುಂಟಾಗುವಷ್ಟರಮಟ್ಟಿಗೆ ಇದು ಹರಡಿಕೊಂಡಿದೆ. ಈ ಜೂಜಾಟದಿಂದ ಏನೇನು ಕೇಡುಗಳಾಗುತ್ತವೆಂಬುದನ್ನು ನಾನು ಪುನಃ ವಿವರಿಸಬೇಕಾದ್ದಿಲ್ಲ. ಜೂಜೆಂಬುದು ಮಹಾ ಕೆಟ್ಟದ್ದು. ಇದು ಯಾರನ್ನೂ ಬಿಟ್ಟಿಲ್ಲ. 'ಜೂಜಾಡಿ ಕೆಟ್ಟರು **ಪಂಚ ಪಾಂಡವರು**' ಎಂದು ತಮಗೆಲ್ಲಾ ಗೊತ್ತೇ ಇದೆ. ಧರ್ಮರಾಯನನ್ನು ಶಕುನಿಯು ಜೂಜಿಗೆ ಕರೆದಾಗ ಆ ವಿದ್ಯೆ ನನಗೆ ಬರುವುದಿಲ್ಲವೆಂದು ಪಗಡೆಯ ಆಟಕ್ಕೆ ಹೋಗಿ ತನ್ನ ರಾಜ್ಯ ಮತ್ತು ಸರ್ವಸ್ವವನ್ನೂ ಕಳೆದುಕೊಂಡಾಗ್ಯೂ ಅದನ್ನು ಬಿಡದೆ ಕಡೆಗೆ ತನ್ನ ಹೆಂಡತಿಯನ್ನೇ ಒತ್ತೆ ಇಟ್ಟು ಜೂಜಾಡಿದ ವಿಚಾರ ತಮಗೆ ಗೊತ್ತಿರತಕ್ಕದ್ದೇ ಆಗಿದೆ.

**ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು)** : ಅಂಥ ಮಹನೀಯರೇ ಆಡಿರುವಾಗ ನಾವೇಕೆ ಆಡಬಾರದು?

**ಶ್ರೀ ಎಚ್. ಸಿದ್ದವೀರಪ್ಪ** : ಹೀಗೆ ಯಾರೇ ಆಗಲಿ ಒಂದಾವರ್ತಿ ಜೂಜಿಗೆ ನಿಂತ ಮೇಲೆ ಅದರಿಂದ ಅವರ ವರ್ತನೆಗಳು ಎಲ್ಲಿಗೆ ಮುಟ್ಟುತ್ತವೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಈ ಜೂಜಾಟಗಳು ದಿನೇ ದಿನೇ ಹೆಚ್ಚುತ್ತಾ ಬಂದಂತೆಲ್ಲಾ ಕ್ಯಾಂಟೀನ್ ಮತ್ತು ಕ್ಲಬ್‌ಗಳಲ್ಲಿ ಸಹ ಇದರ ಪ್ರಭಾವ ಹೆಚ್ಚಾಗಿ ರಾತ್ರಿಯೆಲ್ಲಾ ನಿದ್ರೆಗೆಟ್ಟು ಆಡುತ್ತಿರುವಂಥ ಜನರು ಇರಬಹುದೆಂದು ತೋರುತ್ತಿದೆ. ಹೀಗೆ ಈ ಜೂಜಾಟದಿಂದ ತೊಂದರೆ ಎಲ್ಲರಿಗೂ ಆಗುತ್ತಿದೆ. ತತ್ರಾಪಿ ಕೂಲಿಗಾರರಿಗೂ ಮತ್ತು ಮಧ್ಯಮ ವರ್ಗದವರಿಗೂ ಇದರಿಂದ ಬಹಳ ತೊಂದರೆಯಾಗುತ್ತಿದೆ.

ಪೋಲೀಸಿನವರೂ ಅನೇಕ ಕೇಸುಗಳನ್ನು ಹಾಕಿದರು. ಆ ಕೇಸುಗಳು ಹೈಕೋರ್ಟಿನವರೆಗೂ ಹೋಗಿ ಕಾನೂನಿನ ಪರಿಶೀಲನೆ ನಡೆಸಲಾಯಿತು. ಆಗ ಈ ಕೇಸುಗಳನ್ನು ಸಿಂಗಲ್ ಬೆಂಚಿಗೆ ರೆಫರ್ ಮಾಡಿದರು. ಆಗ ಜಸ್ಟಿಸ್ ಬಾಲಕೃಷ್ಣಯ್ಯನವರು ಕಾನೂನಿನಲ್ಲಿ ನ್ಯೂನತೆಯಿರುವುದರಿಂದ ಈ ವಿಚಾರವನ್ನು ಬೆಂಚ್ ಆಫ್ ಜಡ್ಜ್‌ಸ್‌ಗೆ ರೆಫರ್ ಮಾಡಬೇಕೆಂದು ತೀರ್ಮಾನವಿತ್ತರು. ಆಗ ಅದನ್ನು ಬೆಂಚ್ ಆಫ್ ಜಡ್ಜಸ್‌ಗೆ ರೆಫರ್ ಮಾಡಿದಾಗ ಡಿಫರಿಂಗ್ ಜಡ್ಜ್‌ಮೆಂಟ್ ಬಂದು ಜಸ್ಟೀಸ್ ವಾಸುದೇವಮೂರ್ತಿಯವರು ಒಂದು ತೀರ್ಪನ್ನು ಕೊಟ್ಟು ಈಗಿರತಕ್ಕ ಕಾನೂನು ಪ್ರಕಾರ ಕೇಸು ಹಾಕುವುದಕ್ಕೆ ಅವಕಾಶವಿಲ್ಲ, ಇದಕ್ಕೆ ಕಾನೂನನಲ್ಲಿ ಅವಕಾಶವಿರುವುದಿಲ್ಲ. ಹಾಗೆ ಕೇಸುಗಳನ್ನು ಹಾಕಬೇಕಿದ್ದರೆ ಕಾನೂನು ಸರಿಯಾಗಿ ತಿದ್ದುಪಡಿಯಾಗಬೇಕು, ಇದು ಅತ್ಯಾವಶ್ಯಕವಾಗಿ ಮಾಡಲೇಬೇಕಾದಂಥ ವಿಚಾರವೆಂದು ತಿಳಿಸಿ, ಕಡೆಗೆ ಅಪರಾಧಿಗಳನ್ನು ಖುಲಾಸೆ ಮಾಡಿದರು. ಅವರು ಹಾಗೆ ಅಪರಾಧಿಗಳನ್ನು ಖುಲಾಸೆ ಮಾಡುವಾಗ ಜಡ್ಜ್ ಮೇಲಿನ Concluding ಪ್ಯಾರಾದಲ್ಲಿ ಹೀಗೆ ಹೇಳಿದ್ದಾರೆ.

"Before leaving this case I must add that there is no doubt that this particular form of gambling which, it appears, is enormously on the increase is pernicious and reprehensible and the State must put it down. I think this present decision may furnish the reason or opportunity to amend the Mysore Police Act or Section 12 of the Mysore. Betting Tax Act IX of 1932 to bring it in conformity with the corresponding Madras *and Calcutta Acts, so that* all forms of serious and harmful wagering may be *more clearly and readily punishable*"

This judgment was delivered on 8th July 1953.

ಈ ಸಟ್ಟಾ ಎಂಬ ಜೂಜಾಟವನ್ನು ತಡೆಗಟ್ಟಲು ಸರ್ಕಾರದವರು ಕಾನೂನಿನಲ್ಲಿ ಸರಿಯಾದ ಬದಲಾವಣೆಗಳನ್ನು ಮಾಡತಕ್ಕದ್ದು ಅಗತ್ಯವೆಂಬುದಾಗಿ ಕಂಡುಬಂದಿತು. ಆ ಒಂದು ದೃಷ್ಟಿಯಿಂದ ಈಗಾಗಲೇ ಬೊಂಬಾಯಿ ಮತ್ತು ಮದ್ರಾಸ್ ಸರ್ಕಾರಗಳವರು ಯಾವ ರೀತಿ ಒಂದು ಕಾನೂನನ್ನು ಅಲ್ಲಿ ಜಾರಿಗೆ ತಂದಿರುತ್ತಾರೋ ಅದರ ಪ್ರಕಾರವೇ ನಾವೂ ಸಹ ಇಲ್ಲಿ ಈ ಗೇಮಿಂಗ್ ಎಂಬ ಡೆಫೆನಿಷನ್ನನ ಸೆಕ್ಷನ್ ಏನಿದೆಯೋ ಅದರ ಸ್ಲೋಪನ್ನು ಎನ್‌ಲಾರ್ಜ್ ಮಾಡಿ ಅದರ ಮಿತಿಯೊಳಗೆಯೇ ಈ ಜೂಜಾಟಗಳೆಲ್ಲ ಬರುವ ಹಾಗೆ ಈಗ ಇರತಕ್ಕ ಆಕ್ಟಿಗೆ ಕೆಲವು ತಿದ್ದುಪಡಿಗಳನ್ನು ಮಾಡಿದ್ದೇವೆ. ಈಗ ಸೆಕ್ಷನ್ (18) ರಲ್ಲಿ ಹೇಳಿರುವುದು ಬಹಳ ರೆಸ್ಟ್ರಿಕ್ಟೀವ್ ಆಗಿರುತ್ತದೆ. ಈ ಗೇಮಿಂಗ್ ಎಂಬ ಪದದ ಅರ್ಥದಲ್ಲಿ ವೇಜರಿಂಗ್, ಬೆಟ್ಟಿಂಗ್, ವರ್ಲ್ಡ್ ಕಾಂಪಿಟೇಷನ್ ಸಟ್ಟಾ ಜೂಜು ಇತ್ಯಾದ ಯಾವ ಬಗೆಯ ಜೂಜೇ ಆಗಲಿ ಅಥವಾ ಅದಕ್ಕೆ ಸಂಬಂಧಪಟ್ಟ ಯಾವ ವಸ್ತುಗಳೇ ಆಗಲಿ, ಅಥವಾ ಸ್ಥಳಗಳೇ ಆಗಲಿ ಇತ್ಯಾದಿಗಳೆಲ್ಲವೂ ಆ ಸೆಕ್ಷನ್ನಿನಲ್ಲಿ ಒಳಗೊಳ್ಳುವಂತೆ ಇದನ್ನು ಈಗ ವಿಸ್ತಾರಗೊಳಿಸಲಾಗಿದೆ. ಸೆಕ್ಷನ್ (38) ರಲ್ಲಿ ಹೇಳಿರುವ ಪ್ರಕಾರ ಇದರ ಸ್ಕೋಪ್ ಬಹಳ ರಿಸ್ಟ್ರಿಕ್ಟಿವ್ ಆಗಿತ್ತು. ಈಗ ಇದನ್ನು ಮದ್ರಾಸ್ ಆಕ್ಟಿನಲ್ಲಿ ಅವರು ಯಾವ ರೀತಿ ಬದಲಾವಣೆ ಮಾಡಿಕೊಂಡಿದ್ದಾರೋ ಅದೇ ರೀತಿ ನಾವೂ ಇಲ್ಲಿ ಬದಲಾವಣೆ ಮಾಡಿಕೊಂಡಿದ್ದೇವೆ. ಕ್ಲಾಸ್ ನಾಲ್ಕರಲ್ಲಿ ಹೇಳಿರುವಂತೆ ಸೆಕ್ಷನ್ 56ನ್ನೂ ಬದಲಾವಣೆ ಮಾಡಿದ್ದೇವೆ. ಇನ್ನು ಸೆಕ್ಷನ್ (63) ರಲ್ಲಿ ಅವಶ್ಯಕವಾದ ಕೆಲವು ಕಾನ್‌ಸಿಕ್ವೆನ್ಷಿಯಲ್ ಬದಲಾವಣೆಗಳನ್ನು ಮಾಡಲಾಗಿದೆ. ಮೇಲಾಗಿ ಬೆಟ್ಟಿಂಗ್ ಆಕ್ಟ್‌ನಲ್ಲಿರುವ ಸೆಕ್ಷನ್ (2) ರಲ್ಲಿರುವ ಒಳಕ್ಲಾಜ್, (1) ಮತ್ತು (2) ರನ್ನು ಬದಲಾವಣೆ ಮಾಡಿರತಕ್ಕ ಸೆಕ್ಷನ್‌ಗಳಿಗೆ ನೋಂದಾವಣೆಕೆಯಾಗಿರುವಂತೆ ಮಾಡಲು ಅವುಗಳನ್ನು ಕೈಬಿಡಲಾಗಿದೆ. ಬದಲಾವಣೆ ಮಾಡಿರತಕ್ಕ ಸೆಕ್ಷನ್‌ಗಳಿಗೆ ನೋಂದಾವಣಿಕೆಯಾಗಿರುವಂತೆ ಮಾಡಲು ಅವುಗಳನ್ನು ಕೈಬಿಡಲಾಗಿದೆ. ಈಗ ಮಾಡಿರತಕ್ಕ ಆಕ್ಟ್‌ನಲ್ಲಿ to make this Act foolproof and knaveproof, ಎಂದರೆ ಯಾವ ರೀತಿಯಲ್ಲಿಯೇ ಆಗಲಿ, ಈ ಗ್ಯಾಬ್ಲಿಂಗ್ ಎನ್ನುವುದನ್ನು ತಡೆಗಟ್ಟಬೇಕು, ಇದರಿಂದ ಸಮಾಜಕ್ಕೆ ಆಗತಕ್ಕ ಕೇಡನ್ನು ತಪ್ಪಿಸಬೇಕು ಎಂಬ ದೃಷ್ಟಿಯಿಂದ ಇದನ್ನು ತಿದ್ದುಪಡಿ ಮಾಡಲಾಗಿದೆ. ಹೈಕೋರ್ಟಿನ ತೀರ್ಮಾನದ ಪ್ರಕಾರ ಈಗ ಈ ಬಿಲ್ಲಿನ ತಿದ್ದುಪಡಿ ಸಭೆ ಮುಂದೆ ಇಟ್ಟಿದ್ದೇನೆ. ಆದುದರಿಂದ ಸಭೆಯವರೆಲ್ಲರೂ ಈ ಬಿಲ್ಲಿಗೆ ತಮ್ಮ ಸರ್ವಾನುಮತದ ಒಪ್ಪಿಗೆಯನ್ನು ಕೊಡಬೇಕೆಂದು ಪ್ರಾರ್ಥನೆ.

* * *

## ಪೊಲೀಸ್ ತಿದ್ದುಪಡಿ ಮಸೂದೆ ಬಗ್ಗೆ

### 24, ಜುಲೈ, 1953

**ಶ್ರೀ ಎಚ್. ಸಿದ್ದವೀರಪ್ಪ** : ಪೊಲೀಸ್ ತಿದ್ದುಪಡಿ ಮಸೂದೆಯ ಮೇಲೆ ಭಯ ಭೀತಿಗಳನ್ನು ಕೆಲವು ಮಾನ್ಯ ಸದಸ್ಯರು ವ್ಯಕ್ತಪಡಿಸಿರುವುದನ್ನು ಕೇಳಿ ನನಗೆ ಆಶ್ಚರ್ಯವಾಗಿದೆ. ಇದಕ್ಕೇನಾದರೂ ಕಾರಣವಿದೆಯೇ ಎಂಬುದನ್ನು ಪರಿಶೀಲಿಸಿದರೆ ನನಗಂತೂ ಒಂದೂ ಕಂಡುಬಂದಿಲ್ಲ. ಈ ವಿಚಾರವಾಗಿ ನಾನು ಮೊದಲೇ ಹೇಳಿದ್ದೇನೆ, ಇದು ಪೊಲೀಸ್ ಆಕ್ಟ್‌ಗೆ ಸಂಬಂಧಪಟ್ಟದು, ಇದನ್ನೇನೂ ನಾನು ಇಂದು ಹೊಸದಾಗಿ ಮೈಸೂರು ಸಂಸ್ಥಾನದಲ್ಲಿ ಜಾರಿಗೆ ತಂದಿಲ್ಲ. ಈ ರೀತಿ ತರಬೇಕೆಂಬ ಉದ್ದೇಶವೂ ಇಲ್ಲ. ಈಗ ಜಾರಿಯಲ್ಲಿರತಕ್ಕ ಕಾನೂನಿನಿಂದ ಹಲವಾರು ತೊಂದರೆಗಳಿವೆಯೆಂದು ನಾಗರಿಕರಿಂದ ಅನೇಕ ದೂರುಗಳು ಬಂದಿರುವುದರಿಂದ ಇದನ್ನು ಸರಿಪಡಿಸಬೇಕೆಂಬ ದೃಷ್ಟಿಯಿಂದ ಇದನ್ನು ತಂದಿದ್ದೇವೆ. ಮೊದಲು ಈ ತಿದ್ದುಪಡಿಯಲ್ಲಿ ನಮೂದಾಗಿರುವ ಅಂಶಗಳು ಬೆಂಗಳೂರು, ಮೈಸೂರು, ದಾವಣಗೆರೆಗಳಿಗೆ ಅನ್ವಯಿಸಬೇಕೆಂದಿದೆ. ಪ್ರಾರಂಭದಲ್ಲಿ ಇದನ್ನು ಪ್ರಾಯೋಗಿಕವಾಗಿ ಈ ಮುಖ್ಯ ಸ್ಥಳಗಳಿಗೆ ಮಾತ್ರ ಅನ್ವಯಿಸಿ ಅದರ ಪರಿಣಾಮವನ್ನು ನೋಡಿಕೊಂಡು ಅನಂತರ ಇತರ ಭಾಗಗಳಿಗೆ ಇದನ್ನು ಅನ್ವಯಿಸುವ ವಿಚಾರವನ್ನು ಪರಿಶೀಲಿಸಲಾಗುತ್ತದೆ. ಈ ವಿಚಾರವನ್ನು ಮಾನ್ಯ ಮಿತ್ರರು ಕೆಲವರು ಅದ್ಭುತಾಕಾರ ಮಾಡಿ ಮನಸ್ಸಿನಲ್ಲಿ ಇಲ್ಲದ ಭಯಭೀತಿಗಳನ್ನು ಈ ಬಗ್ಗೆ ವ್ಯಕ್ತಪಡಿಸುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ಈಗಾಗಲೇ ಈ ಅಧಿಕಾರವನ್ನು ಪೊಲೀಸ್ ಅಧಿಕಾರಿಗಳಿಗೆ ವಹಿಸಿದ್ದು ಬೆಂಗಳೂರಿನಲ್ಲಿ ಮತ್ತು ಮದ್ರಾಸಿನಲ್ಲಿ ಜಾರಿಯಲ್ಲಿದೆ. ಅಲ್ಲದೆ ಸರ್ಕಾರದವರು ಎಷ್ಟರಮಟ್ಟಿಗೆ ಜನತೆಯ ಗೌರವ ಘನತೆಗಳಿಗೆ ಧಕ್ಕೆ ಬಾರದಂತೆ ವರ್ತಿಸಬೇಕೆಂಬ ದೃಷ್ಟಿಯಿಂದ 38(ಎ) ಮತ್ತು 38(ಬಿ) ಯಲ್ಲಿ ಈ ಪೊಲೀಸ್ ಅಧಿಕಾರಿಗಳ ಅಧಿಕಾರ ವ್ಯಾಪ್ತಿಯ ವಿಚಾರವನ್ನು ಸ್ಪಷ್ಟವಾಗಿ ತಿಳಿಸಿದೆ. *It is subject to such general or special orders of the Magistrate.*

ಇದನ್ನು ನೋಡಿದರೆ ಸರ್ಕಾರದವರಿಗೆ ನ್ಯಾಯಾಧೀಶರ ವಿಚಾರದಲ್ಲಿ ಅಷ್ಟೊಂದು ನಂಬಿಕೆ ಇಲ್ಲವೆಂದು ಈ ಸಭೆಯ ಮಾನ್ಯ ಸದಸ್ಯರೊಬ್ಬರು ವ್ಯಕ್ತಪಡಿಸಿದ ಅಭಿಪ್ರಾಯದಲ್ಲಿ ತಿರುಳಿಲ್ಲವೆಂದು ಹೇಳಬೇಕಾಗಿದೆ. ಯಾವ ದೃಷ್ಟಿಯಿಂದ ನೋಡಿದರೂ ಇದನ್ನು ವಿರೋಧಿಸಿ ಮಾತನಾಡಿದವರ ವಾದ ಬರೀ ಪ್ರಚಾರ ರೂಪವಾದ ವಾದವಾಗಿ ಪರಿಣಾಮಿಸಿದೆಯೇ ಹೊರತು ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಂಡು ಅವಕ್ಕನುಗುಣವಾಗಿ ಆಡಿದ ವಾದವಲ್ಲವೆಂಬುದು ಎದ್ದು ಕಾಣುತ್ತಿದೆ.

38 (ಎ) ಮತ್ತು 38 (ಬಿ) ಪ್ರಕಾರ ಮ್ಯಾಜಿಸ್ಟ್ರೇಟರಿಗೂ ಅಧಿಕಾರವಿದೆ. ಲೈಸೆನ್ಸ್ ಕೊಡಬೇಕಾದರೆ ಈ ರೀತಿ ಕೊಡಬೇಕು ಎಂಬ ಬಗ್ಗೆ ಡೈರೆಕ್ಷನ್ ಅದರಲ್ಲಿದೆ. ಜನರಲ್ ಪವರ್ಸ್ ಮತ್ತು ಸ್ಪೆಷಲ್ ಪವರ್ಸ್ ಪ್ರಕಾರ ಸಾಮಾನ್ಯ ಕೇಸ್‌ನಲ್ಲಿ ಪೋಲೀಸ್ ಅಧಿಕಾರಿಗಳು ದುರುಪಯೋಗ ಪಡಿಸುತ್ತಾರೆಂದರೆ ಅಂಥ ಸಂದರ್ಭಗಳಲ್ಲೆಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಬಹುದು. ಇಂಥ ಸೌಲಭ್ಯ ಬೊಂಬಾಯಿಯಲ್ಲಿಲ್ಲ, ಮದರಾಸಿನಲ್ಲಿಲ್ಲ ಮತ್ತು ಬಂಗಾಳದಲ್ಲಿಲ್ಲ. ಹೀಗಿರುವಲ್ಲಿ ಇದನ್ನು ವಿರೋಧಿಸಿ ಮಾತನಾಡಿದ ಸದಸ್ಯರ ವಾದ ವಿಚಿತ್ರವಾಗಿ ಕಾಣುತ್ತದೆ.

**Sri D. Venkataramaiah :** On a point of explanation, Sir.

**Sri H.Siddaveerappa :** I am not yielding.

**Sri D. Venkataramaiah :** He is a signatory to the select Committee Report.

**Sri H. Siddaveerappa :** What does it mean? I am not opposing. I am only supporting.

ಒಟ್ಟಿನಲ್ಲಿ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ಮಾತನಾಡಿದ ಸದಸ್ಯರ ವಾದ ಬರೀ ಪ್ರಚಾರ ರೂಪದ ವಾದವಾಗಿದೆ. ಸರ್ಕಾರದ ಮೇಲೆ ಆರೋಪಣೆ ಮಾಡಬೇಕೆಂಬ ಒಂದೇ ದೃಷ್ಟಿಯಿಂದ ಕೂಡಿದ ವಾದವಾಗಿದೆ. ವಾಸ್ತವಾಂಶಗಳನ್ನು ಪರಿಶೀಲನೆಗೆ ತೆಗೆದುಕೊಂಡು ಅದಕ್ಕನುಗುಣವಾದ ರಚನಾತ್ಮಕ ಸಲಹೆಗಳೇನೂ ಅವರ ವಾದದಲ್ಲಿ ಕಂಡು ಬಂದಿಲ್ಲ. 38(ಬಿ) ಯಲ್ಲಿ ಯಾವ ಯಾವ executive officer ಯಾವ ಯಾವ ಕೆಲಸವನ್ನು ಮಾಡಬೇಕೋ ಅದನ್ನು ಮಾಡಲೇಬೇಕೆಂಬುದು ನಮೂದಾಗಿದೆ. ಯಾವ ಅಧಿಕಾರಿಯಾದರೂ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರೆ ಅಪೀಲಿಗೆ ಅವಕಾಶವನ್ನು ಕಲ್ಪಿಸಲಾಗಿದೆ.

ಆದ್ದರಿಂದ ಇಷ್ಟು ಮಾತ್ರ ಹೇಳುತ್ತೇನೆ. ಮ್ಯಾಜಿಸ್ಟ್ರೇಟರಿಗೆ ಯಾವ ರೀತಿಯಿಂದ ಒಂದು ಅಧಿಕಾರವನ್ನು ಕೊಡಬೇಕು, supremacy of law ಎಂದು ಅವರು ಹೇಗೆ law ವಿಚಾರದಲ್ಲಿ ಅಥವಾ ಜ್ಯೂಡಿಷಿಯೆರಿ ವಿಚಾರದಲ್ಲಿ ಒಂದು ಗೌರವ ತೋರಿಸಬೇಕೆಂಬ ವಾದವನ್ನು ಹೇಳುತ್ತಾರೆಯೋ ಅದಕ್ಕೆ ಒಂದು ಗುಂಜಿ ತೂಕ ಮೇಲಾಗಿಯೇ ಇರಬೇಕೆಂಬ ಮನೋಭಾವ ನಮಗೆ ಇದೆ. ಈಗ ಶ್ರೀಮಾನ್ ವೀರಬಸಪ್ಪನವರು ತಂದಿರತಕ್ಕ ತಿದ್ದುಪಡಿ ಸಾಧ್ಯವಾಗಿದೆ, ಸಮರ್ಪಕವಾಗಿದೆ, ಒಪ್ಪಿಕೊಳ್ಳುವುದಕ್ಕೆ ಅರ್ಹವಾಗಿದೆ; ಆದ್ದರಿಂದ ಅವರ ತಿದ್ದುಪಡಿಯನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

* * *

## ಅನುದಾನದ ಮೇಲಿನ ಚರ್ಚೆ (ವ್ಯವಸಾಯ)

### 25, ಮಾರ್ಚ್ 1953

**ಶ್ರೀ ಎಚ್. ಸಿದ್ದವೀರಪ್ಪ** : ಮೊದಲು ಹಣಕಾಸಿಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸುತ್ತೇನೆ. 1951–52ರಲ್ಲಿ ವ್ಯವಸಾಯದ ಇಲಾಖೆಗೆ 68,30,000 ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಲಾಗಿತ್ತು. ಆ ಸಾಲಿನಲ್ಲಿ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಅನಾವಶ್ಯಕವಾದ ಕೆಲವು ಬಾಬುಗಳನ್ನು ತೆಗೆದು ಆದಷ್ಟುಮಟ್ಟಿಗೆ ಖೋತಾ ಮಾಡಬೇಕೆಂಬ ದೃಷ್ಟಿಯಿಂದ ಕೆಲಸ ಮಾಡಿದ್ದರಿಂದ ಆ ವರ್ಷದ actuals 47,06,000 ರುಪಾಯಿಗಳು ಮಾತ್ರ ಆದವು. ಅಲ್ಲಿಗೆ 24,23,000 ರೂಪಾಯಿಗಳಿಗೆ ಬಡ್ಜೆಟ್ ಅಂದಾಜಾಗಿದ್ದರೂ, ಅದರಲ್ಲಿಯೂ ಅಲ್ಲಿ ಇಲ್ಲಿ ಬೇಕಿಲ್ಲದ, ಅಂದರೆ ಅವಶ್ಯಕವಾಗಿ ಕಾಣದ, ಕೆಲವು ಬಾಬುಗಳನ್ನು ಕಡಿಮೆ ಮಾಡಿದ್ದರಮೇಲೆ, ರಿವೈಸ್ಡ್ ಎಸ್ಟಿಮೇಟ್ ಪ್ರಕಾರ 50,09,000 ರೂಪಾಯಿಗಳು ಮಾತ್ರ ಆಗಿರುವುದು ಬಡ್ಜೆಟ್ಟಿನಲ್ಲೇ ಕಾಣಬರುತ್ತದೆ. ಈ ರೀತಿಯಾಗಿ ಇಲ್ಲಿಯೂ 11,31,000 ರೂಪಾಯಿಗಳಷ್ಟು ಉಳಿತಾಯವನ್ನು ತೋರಿಸಿದೆ. ಆಮೇಲೆ ಈ ಇಲಾಖೆಗೆ ಸಂಬಂಧಪಟ್ಟಂತೆ ಬರುವ ಸಾಲಿಗೆ, ಅಂದರೆ 1953–54ಕ್ಕೆ 59,93,000 ರೂಪಾಯಿಗಳನ್ನು ಕೊಟ್ಟಿದೆ.

**Sri L. Siddappa** (Channagiri) **:** What are the items in which savings have been effected – such huge savings in a department like the Agricultural Department?

**ಶ್ರೀ ಎಚ್.ಸಿದ್ದವೀರಪ್ಪ:** ಅತ್ಯಾವಶ್ಯಕವಾಗಿಲ್ಲದ ಕೆಲವು ಬಾಬುಗಳನ್ನು ಕಡಿಮೆ ಮಾಡಿದೆ. ಯಾವು ಯಾವುವನ್ನು ಕಡಿಮೆ ಮಾಡಿದೆಯೆನ್ನುವುದಕ್ಕೆ ವಿವರಗಳು ಈಗ ನನ್ನಲ್ಲಿಲ್ಲ. ಇದರ ಮೇಲೆ ಚರ್ಚೆ ಮುಗಿಯುವುದರೊಳಗಾಗಿ ವಿವರಗಳನ್ನು ತರಿಸಿಕೊಡಲು ಪ್ರಯತ್ನ ಮಾಡುತ್ತೇನೆ. ಇದನ್ನೆಲ್ಲಾ ನಾನು ಈಗೇಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಸದಸ್ಯರು ಇದರ ಸಂಬಂಧದಲ್ಲಿ ಎತ್ತಬಹುದಾದ ಆಕ್ಷೇಪಣೆಗಳಿಗೆ ಅಷ್ಟಾಗಿ ಅವಕಾಶವಿಲ್ಲದಿರಲಿ ಎಂದು ನಾನು ಈ ಮೊದಲೇ ಹೇಳುತ್ತಿದ್ದೇನೆ. ಹಣಕಾಸಿನ

ವಿಚಾರದಲ್ಲಿ ಹೆಚ್ಚಿಗೆ ಅವಶ್ಯಕತೆಯಿಲ್ಲದೆ ಇರತಕ್ಕ ಬಾಬುಗಳಲ್ಲಿ ಎಷ್ಟು ಖೋತಾ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು, consistent with the efficiency, and working of the Department, ಕಡಿಮೆ ಮಾಡಬೇಕೆಂದಿದ್ದೇವೆಂದು ನಾನು ಹೇಳಬಯಸುತ್ತೇನೆ.

ಇನ್ನು 1952–53ನೆಯ ಸಾಲಿನಲ್ಲಿ ಈ ಇಲಾಖೆಯಲ್ಲಿ ನಡೆದಿರುವ ಕಾರ್ಯಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮುಖ್ಯವಾಗಿ ಈ ಸಾಲಿನಲ್ಲಿ ನಾವು ಮಾಡಿರುವ ಕಾರ್ಯವೆಂದರೆ, ರಿಸರ್ಚ್ ವಿಚಾರಕ್ಕೆ ಬಹಳ ಹೆಚ್ಚಿನ ಗಮನವನ್ನು ಕೊಟ್ಟಿರುವುದು. ಹೋದ ಸಾರಿ ಬಡ್ಜೆಟ್ಟಿನ ಮೇಲೆ ಮತ್ತು ಡಿಮ್ಯಾಂಡುಗಳ ಸಂಬಂಧದಲ್ಲಿ ನಡೆದ ಚರ್ಚೆಗಳ ಪರಿಣಾಮವಾಗಿ ನಾನು ರಿಸರ್ಚ್ ಸೆಕ್ಷನ್ನಿಗೆ ಹೋಗಿ ರಿಸರ್ಚಿಗೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನೂ ಸೇರಿಸಿ ಸಭೆ ಕರೆದು ಒಂದಂಶವನ್ನು ಸ್ಪಷ್ಟವಾಗಿ ತಿಳಿಸಿದ್ದೇನೆ. ಏನೆಂದರೆ ರಿಸರ್ಚ್ ಮಾಡುವ ದೃಷ್ಟಿ ಸುಮ್ಮನೆ ಲ್ಯಾಬೋರೇಟರಿಯಲ್ಲಿ ಕುಳಿತುಕೊಂಡು ಏನೋ ಮಾಡಿಕೊಂಡಿರುವುದಲ್ಲ. Tangible results ನ್ನು ತೋರಿಸಬೇಕು. ಪ್ರತಿಯೊಂದು ವಿಷಯದಲ್ಲೂ, ಆಹಾರಕ್ಕೆ ಸಂಬಂಧಪಟ್ಟ ದಿನಸಿಗಳಲ್ಲೇ ಆಗಲಿ ಅಥವಾ ವ್ಯಾಪಾರದ ಬೆಳೆಗಳಿಗೆ ಸಂಬಂಧಪಟ್ಟ ದಿನಸಿಗಳಲ್ಲೇ ಆಗಲಿ, ರಿಸರ್ಚ್ ಮಾಡುವ ದೃಷ್ಟಿ, ಜನರಿಗೆ ಅದರಿಂದ ಸುಖವಾದ ಪರಿಣಾಮವಾಗಬೇಕು. ಎಂಬುದು ನಮ್ಮ ಅಭಿಪ್ರಾಯವೆಂದು ಸ್ಪಷ್ಟವಾಗಿ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅಷ್ಟೇ ಅಲ್ಲ, ಅವರಿಗೆ ನಾನು ಹೇಳಿದ್ದೇನೆ, ಬರೀ ಬೆಂಗಳೂರು ಒಂದೇ ನಗರದಲ್ಲಿ ನಮ್ಮ ಸಂಶೋಧನಾ ಕೇಂದ್ರಗಳನ್ನು ಕೇಂದ್ರೀಕರಣ ಮಾಡಿ ಅಲ್ಲಿಂದಲೇ ಸಂಸ್ಥಾನದ ಎಲ್ಲಾ ಕಡೆಗೂ ನಮ್ಮ ರಿಸರ್ಚಿನ ಫಲಗಳನ್ನು ತಿಳಿಯುವಂತೆ ಮಾಡುತ್ತೇವೆ ಎನ್ನುವುದು ಸೂಕ್ತವಲ್ಲ. ಅದಕ್ಕೆ ಬದಲು ಯಾವ ಯಾವ ಬೆಳೆ ಎಲ್ಲೆಲ್ಲಿ ಹೆಚ್ಚಿಗೆ ಬೆಳೆಯುತ್ತದೆಯೋ ಅಲ್ಲಿಗೇ ವರ್ಗಾವಣೆ ಮಾಡಬೇಕೆಂದು ತಿಳಿಸಿದ್ದೇವೆ. ಅದೃಷ್ಟವಶಾತ್, ಈಗ ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ವಿದ್ಯುಚ್ಛಕ್ತಿ ಇದೆ. ರಿಸರ್ಚ್ ಸೆಕ್ಷನ್ನಿಗೆ ಬೇಕಾದ ಉಪಕರಣಗಳನ್ನು ಉಪಯೋಗಿಸಲು ವಿದ್ಯುಚ್ಛಕ್ತಿಯ ಸಹಾಯ ಬೇಕಾಗಿದ್ದರೆ ಆ ಅನುಕೂಲವೂ ಸುಲಭವಾಗಿ ದೊರೆಯುತ್ತದೆ. ಆದ್ದರಿಂದ ಮುಖ್ಯವಾಗಿ ಆಯಾ ಧಾನ್ಯಗಳು ಹೆಚ್ಚಾಗಿ ಬೆಳೆಯುವ ಪ್ರದೇಶಗಳಲ್ಲೇ ಇಂಥಾ ಪರಿಶೋಧನಾ ಕೇಂದ್ರಗಳನ್ನು ಏರ್ಪಡಿಸಬಹುದು ಎಂದು ತಿಳಿಸಿದ್ದೇನೆ. ಉದಾಹರಣೆಗೆ ಬತ್ತದ ರಿಸರ್ಚ್ ಮಾಡಬೇಕಾದರೆ ಶಿವಮೊಗ್ಗ ಅಥವಾ ಮಂಡ್ಯ ಪ್ರದೇಶಕ್ಕೆ ಹೋಗಬೇಕು ಎಂದು ಹೇಳಿದ್ದೇನೆ. ಇದನ್ನು ತಪ್ಪಿ ಇಲ್ಲೇ ಒಂದೇ ಸ್ಥಳದಲ್ಲಿ ಮಾಡಿದರೆ ಅದಕ್ಕೆ ಸರ್ಕಾರದವರ ಮನ್ನಣೆಯಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ. ಇದೇ ದೃಷ್ಟಿಯಿಂದ ಈಗ ತ್ವರಿತವಾಗಿ ರಿಸರ್ಚ್ ಸೆಕ್ಷನ್‌ಗಳನ್ನು ಎಲ್ಲೆಲ್ಲಿ ಮಾಡಬೇಕೋ ಅಲ್ಲಿ ಮಾಡಿಕೊಂಡು ಕಾರ್ಯವನ್ನು ಮುಂದುವರಿಸುತ್ತಿದ್ದೇವೆ.

ಆಮೇಲೆ, ಆಲೂಗಡ್ಡೆಯು ವಿಚಾರದಲ್ಲಿ ಈಗಿನ ಸಂಶೋಧನೆ ಫಲಕಾರಿಯಾಗುವ ರೀತಿ ನಡೆಯುತ್ತಿದೆ. ಬತ್ತದ ವಿಚಾರದಲ್ಲಿಯೂ ಕೂಡ ಹಾಗೆಯೇ ಆಗಿದೆ. ಎರಡು ಸಂಶೋಧನೆಗಳು ನಡೆದು, ಅದರ ಫಲಿತಾಂಶ ಇಷ್ಟರಲ್ಲೇ ಬರುತ್ತದೆ. ಹತ್ತಿಯ ವಿಚಾರದಲ್ಲಿ ಶ್ರೀಮಾನ್ ಪಂಚಾಕ್ಷರಯ್ಯನವರು ತೀವ್ರಾಸಕ್ತಿ ತೋರಿಸಿದ್ದಾರೆ. ಎಂ.ಎ. ಹತ್ತಿಯನ್ನು ಬದಲಾಯಿಸುವುದಕ್ಕೆ ಏನು ಮಾಡಿದ್ದೀರೆಂದು ಕೇಳಿದರು. ಈ ವಿಚಾರದಲ್ಲಿಯೂ ಸಂಶೋಧನೆ ನಡೆಸಲು ಕಾರ್ಯಕ್ರಮ ಕೈಗೊಂಡಿದ್ದೇವೆ. ಸದ್ಯದಲ್ಲೇ ಸರಿಯಾದ ತಳಿಯನ್ನು ಕಂಡುಹಿಡಿಯಲು ತಕ್ಕ ಕಾರ್ಯಕ್ರಮ ಕೈಗೊಳ್ಳುತ್ತಿದ್ದೇವೆ.

ಇನ್ನು ಜೋಳದ ವಿಚಾರ. ಮೈಲೋ ಎಂಬುದನ್ನು ನಾವು ಅನೇಕ ವರ್ಷಗಳಿಂದ ನೋಡುತ್ತಿದ್ದೇವಷ್ಟೆ. ಇದು ನಮ್ಮ ದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆಯೇ ಎಂಬುದನ್ನು ಪರೀಕ್ಷೆ ಮಾಡುತ್ತಿದ್ದೇವೆ. ಇದು ಅಮೆರಿಕಾ ದೇಶದ್ದು. ಈ ವಿಷಯದಲ್ಲಿ ಇನ್ನೂ ಸಂಶೋಧನೆ ಮಾಡಿಸುತ್ತಿದ್ದೇವೆ. ಮಾನ್ಯ ಸದಸ್ಯರು ಎ.ಸಿ. ಫಾರಮ್ಮಿಗೆ ಹೋದರೆ ಅಲ್ಲಿ ನಡೆಯುತ್ತಿರುವ ಕೆಲಸವೇನೆಂಬುದು ಗೊತ್ತಾಗುತ್ತದೆ. ಅಲ್ಲಿಗೆ ಹೋದಾಗ ಒಂದು ತೆನೆಯನ್ನು ಕೊಟ್ಟರು. ಉತ್ತೇಜನಕರವಾದ ಫಲಿತಾಂಶ ಬರುತ್ತಿದೆಯೆಂದು ಕಾಣುತ್ತದೆ. ಇದನ್ನು ಇನ್ನೂ ಸಂಶೋಧನೆ ಮಾಡಿ ಫಲಿತಾಂಶವನ್ನು ತೋರಿಸಬೇಕೆಂದು ಹೇಳಿದ್ದೇವೆ. ಇದರಿಂದ ಉತ್ಪತ್ತಿ ಜಾಸ್ತಿ ಬರುತ್ತದೆ, ತೆನೆ ದೊಡ್ಡದಾಗಿರುತ್ತದೆ. ಇದನ್ನು ನಾವು ಸಂಶೋಧನೆ ಶಾಖೆಗೆ ತಿಳಿಸಿದ್ದೇವೆ.

ಗೊಬ್ಬರದ ವಿಚಾರದಲ್ಲಿಯೂ ಸಂಶೋಧನೆಯ ಕೆಲಸ ನಡೆಯುತ್ತಿದೆ. ಸಾಯಿಲ್ ಸರ್ವೆ ವಿಚಾರದಲ್ಲಿ ಅನೇಕ ಖೋತಾ ನಿರ್ಣಯಗಳು ಬಂದಿವೆ. ಇದು ಪ್ರಾಮುಖ್ಯವಾದ ವಿಷಯ. ಸಂಸ್ಥಾನದಲ್ಲಿ ಇದರ ವಿಷಯದಲ್ಲಿಯೂ ಆದಷ್ಟು ಕಾರ್ಯಕ್ರಮ ಕೈಗೊಳ್ಳಬೇಕೆಂದು ಲಕ್ಕವಳ್ಳಿಯ ಪ್ರದೇಶದಲ್ಲಿ ಇದನ್ನು ಯಾವ ರೀತಿ ಮಾಡಬೇಕೆಂಬ ವಿಷಯದಲ್ಲಿ ಕಾರ್ಯ ನಡೆಸುತ್ತಿದ್ದೇವೆ. ವಿಶ್ವೇಶ್ವರಯ್ಯ ನಾಲೆಯ ಪ್ರದೇಶದ ಜಮೀನಿನಲ್ಲಿ ಸತ್ವ (Fertility) ಕಡಿಮೆಯಾಗುತ್ತಿದೆ, ಇದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿಯಲು intensive survey ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಒಂಭತ್ತು ಸಾವಿರ ಹಳ್ಳಿಗಳಲ್ಲಿ ರೂರಲ್ ಕಂಪೋಸ್ಟ್ ಯೋಜನೆಯನ್ನು ಮಾಡಿದ್ದೇವೆ. ಇದರಿಂದ 50 ಲಕ್ಷ ಟನ್ನುಗಳಷ್ಟು ಗೊಬ್ಬರ ಹೆಚ್ಚಾಗಿದೆಯೆಂದು ಕಂಡುಬಂದಿದೆ. ಅಲ್ಲದೆ ಟೌನ್ ಮುನಿಸಿಪಾಲಿಟಿಗಳಲ್ಲಿ ಅರ್ಬನ್ ಕಂಪೋಸ್ಟ್ ಯೋಜನೆ ಚೆನ್ನಾಗಿ ಕೆಲಸ ಮಾಡುತ್ತಿದೆಯೆಂದು ವರದಿ ಬಂದಿದೆ. ಎಷ್ಟು ಮಟ್ಟಿಗೆ ಯಾವ ಯಾವ ಕೆಲಸವನ್ನು ಮಾಡುತ್ತಿದ್ದೇವೆಂಬುದನ್ನು ತಿಳಿಸುವ ದೃಷ್ಟಿಯಿಂದ ಇದನ್ನೆಲ್ಲಾ ಹೇಳಿದ್ದೇನೆ. ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಹೇಳಿದರೆ ತಪ್ಪಾಗಲಾರದು. ಮಳೆ ಹೋಗಿ ಅನೇಕ ಕಡೆ ತೊಂದರೆಯಾಗಿರುವ ಸಮಯದಲ್ಲಿ

ಹೈದರಾಬಾದಿಗೆ ಹೋಗಿ ಅತ್ಯುತ್ತಮವಾದ ಬಿಳಿಯ ಜೋಳವನ್ನು ತಂದು ಸಂಸ್ಥಾನಕ್ಕೆ ಕೊಟ್ಟರು. ಇದರಿಂದ ಎಷ್ಟು ಸಹಾಯವಾಗಿದೆಯೆಂದರೆ, ಬಹುಶಃ ಪ್ರತಿಪಕ್ಷದ ನಾಯಕರು ಕೂಡ ಈ ಕೆಲಸಕ್ಕೆ ಮೆಚ್ಚಿಗೆಯನ್ನು ಸೂಚಿಸುತ್ತಾರೆಂದು ನನ್ನ ನಂಬಿಕೆ.

**Sri L. Siddappa:** I convey congratulation.

**ಶ್ರೀ ಎಚ್. ಸಿದ್ದವೀರಪ್ಪ** : ಸಂಸ್ಥಾನಕ್ಕೆ ಲಕ್ಷಾಂತರ ಪಲ್ಲ ಜೋಳ ಬಂತು. ಇದರಿಂದ ಎಷ್ಟೋ ಆಹಾರಾಭಾವ ಕಡಿಮೆಯಾಗಿದೆ ಎಂಬುದನ್ನು ಈಗಾಗಲೇ ಪ್ರತಿ ಪಕ್ಷದವರೂ ಹೇಳಿರುವುದರಿಂದ, ಪುನಃ ನಾನು ಹೇಳುವುದಿಲ್ಲ. ಇದೊಂದು ಸ್ತುತ್ಯ ಕಾರ್ಯವನ್ನು ನಮ್ಮ ಇಲಾಖೆಯವರು ಮಾಡಿದ್ದಾರೆ.

ಇನ್ನು ಗ್ರೋಮೋರ್ ಫುಡ್ ವಿಷಯದಲ್ಲಿ ಎರಡು ಅಂಶಗಳನ್ನು ಹೇಳಬೇಕಾಗಿದೆ. ಬಹುಶಃ ಈ ಸಂಬಂಧವಾದ ಖೋತಾ ಸೂಚನೆಗಳು ಚರ್ಚೆಗೆ ಬರಬಹುದು; ಆಗ ಇದರ ವಿಚಾರವನ್ನು ಹೇಳಬೇಕಾದರೆ, ನನ್ನ ಮಿತ್ರರಾದ ಇಮಾಂರವರು ಕೃಷ್ಣಮಾಚಾರಿ ಸಮಿತಿಯ ವರದಿಯನ್ನು ಓದಿದ್ದಾರೆಂದು ಭಾವಿಸಿದ್ದೇನೆ.

**ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು)** : ನಮಗೆ ಯಾರು ಕೊಡುತ್ತಾರೆ, ಬಡಪಾಯಿಗಳಿಗೆ ! (ನಗು!)

**ಶ್ರೀ ಎಚ್. ಸಿದ್ದವೀರಪ್ಪ:** ನಾನು ಡೆಲ್ಲಿಗೆ ಹೋಗಿದ್ದಾಗ ತಂದಿದ್ದ ಒಂದು ಪ್ರತಿ ನನ್ನಲ್ಲಿದೆ, ಅದನ್ನು ಬೇಕಾದರೆ ಕೊಡುತ್ತೇನೆ.

ಮುಖ್ಯವಾಗಿ Schemes of permanent value such as Lift Irrigation, ಬಾವಿಗಳನ್ನು ತೆಗೆಸುವುದು, ಕೆರೆಗಳನ್ನು ಸರಿಪಡಿಸುವುದು ಮುಂತಾದ ಕೆಲಸಗಳಿಗೆ ಪ್ರಾಮುಖ್ಯತೆ ಕೊಟ್ಟಿದೆ. ಈ ಸಮಿತಿಯವರು ಇಡೀ ದೇಶದಲ್ಲಿ ಈ ಕೆಲಸಗಳು ನಡೆಯುತ್ತಿವೆ ಎಂಬುದನ್ನು ಹೇಳುತ್ತಾ, ಇಂಥ ಖಾಯಂ ಉಪಯೋಗವಾಗುವ ಯೋಜನೆಗಳಿಗೆ ಹೇಗೆ ಸರ್ಕಾರದವರು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆಂಬುದನ್ನು ತಿಳಿಸಿದ್ದಾರೆ. In 1947-48, 24 percent of the amount spent on Grow More Food was used for schemes of permanent value : In 1951-52, 84 percent has been spent on such works. ಇದು ಅಖಿಲಭಾರತಕ್ಕೆ ಸಂಬಂಧಪಟ್ಟ ಅಂಕಿ. ನಮ್ಮಲ್ಲಿ ಸುಮಾರು ಶೇಕಡ 92ರಷ್ಟು ಈ Schemes of permanent value ಮೇಲೆ ಖರ್ಚು ಮಾಡುತ್ತಿದ್ದೇವೆ. ನಮ್ಮ ಮಿತ್ರರಿಗೆ ಗೊತ್ತಿರುವ ಹಾಗೆ ತೆಂಗಿನ ಗಿಡವನ್ನು ಹಾಕಿದ ದಿವಸವೇ ಅದು ಕಾಯಿ ಬಿಡುವುದಿಲ್ಲ. ಯಾವುದೇ ಕೆಲಸವನ್ನು ತೆಗೆದುಕೊಳ್ಳಲಿ ತಕ್ಷಣ ಪ್ರತಿಫಲ ದೊರೆಯುವುದಿಲ್ಲ; ಸ್ವಲ್ಪ ಕಾಲ ತಡೆಯಬೇಕು. ಕೆಲವು ಕಡೆಗಳಲ್ಲಿ ಈಗಾಗಲೇ ಪ್ರತಿಫಲ ಬರುತ್ತಿದೆ. ಇನ್ನು ಕೆಲವು ವರ್ಷಗಳಲ್ಲಿ ಇದರ ಪೂರ್ಣಫಲ ಬರುವ

ನಿರೀಕ್ಷೆಯಿದೆ. ಅಲ್ಲಿಯವರೆಗೂ ಶ್ರೀಮಾನ್ ಗೋಪಾಲ ಗೌಡರು ಕಾದು ನೋಡಬೇಕೆಂಬುದೇ ನನ್ನ ಪ್ರಾರ್ಥನೆ.

Lift Irrigation ಯೋಜನೆ ಬಹಳ ಮುಖ್ಯವಾದುದು. 'ಗ್ರೋ ಮೋರ್ ಫುಡ್' ಯೋಜನೆಯಲ್ಲಿ ಈ ವರ್ಷ ಪ್ರಾಮುಖ್ಯತೆಯನ್ನು ಕೊಟ್ಟಿರುವುದು Lift irrigation by electricityಗೆ. ಇಲ್ಲಿಗೆ ಬಂದು ಡಿಸ್ಟ್ರೆಸ್ ಪ್ರದೇಶವನ್ನು ನೋಡಿಕೊಂಡು ಹೋಗಿರುವ ರಾಮಮೂರ್ತಿ ಸಮಿತಿಯವರಿಂದ ಹೆಚ್ಚು ಹುರುಪು ಬಂದಿದೆ. ಅವರೂ ಸಬ್ ಸಾಯಿಲ್‌ವಾಟರ್ ಉಪಯೋಗಿಸುವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದಾರೆ.

* * *

# ನೀರಾವರಿ ಕಾಮಗಾರಿ ಕುರಿತು

## 25, ಮಾರ್ಚ್ 1953

**ಶ್ರೀ ಎಚ್. ಸಿದ್ದವೀರಪ್ಪ** : ಸ್ವಾಮಿ, ನಾನು ಪ್ರಾರಂಭ ಭಾಷಣದಲ್ಲೇ ಈ ರೀತಿಯಾಗಿ ಕೆಲವು ಟೀಕೆಗಳು ಬರುತ್ತವೆಂದು ನಿರೀಕ್ಷಣೆ ಮಾಡಿ, ಈ ಮೊದಲೇ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತಂದಿದ್ದೇನೆ.

ಆದರೆ ಈಗ ತಾನೆ ಮಾತನಾಡಿದ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಮಹಮದ್ ಇಮಾಂರವರು ಹೇಳಿರತಕ್ಕದ್ದನ್ನು ನಾನು ಸಂಪೂರ್ಣವಾಗಿ ತಪ್ಪು ಎಂದು ಹೇಳುವುದಿಲ್ಲ. ಆದರೆ ಇದು ಎಷ್ಟರಮಟ್ಟಿಗೆ ಫಲಕಾರಿಯಾಗಬೇಕಾಗಿತ್ತೋ ಅಷ್ಟರಮಟ್ಟಿಗೆ ಫಲಕಾರಿಯಾಗಿಲ್ಲವೆಂಬ ಅರ್ಥ ಬರುವ ರೀತಿಯಲ್ಲಿ ಟೀಕೆ ಮಾಡಿ ತೋರಿಸಿದ್ದಾರೆಂದು ನಾನು ಭಾವಿಸುತ್ತೇನೆ. ಇಲ್ಲಿ ತೋರಿಸಿರತಕ್ಕ ಅಂಶಗಳನ್ನು ತಾವು ನೋಡುವುದಾದರೆ ನಾವು ಸತ್ಯಾಂಶವನ್ನು ಚಾಚೂ ಮರೆಮಾಚದಂತೆ ತೋರಿಸುತ್ತೇವೆಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಆದರೆ ಇದರಿಂದ ಎಷ್ಟು ಫಲಕಾರಿಯಾದ ಪ್ರಯೋಜನಗಳಾಗಿವೆ ಎಂಬುದು ಟೀಕೆ ಮಾಡತಕ್ಕಂಥ ಜನರ ಕಣ್ಣಿಗೆ ಬೀಳತಕ್ಕುದ್ದು ಬಹಳ ಕಷ್ಟವೆಂದು ಈ ಮೊದಲೇ ನಾನು ತಿಳಿಸಿದ್ದೇನೆ. ಆದರೆ ಇದೇನೂ ಅಂಥ ಒಂದು ಕುರುಡು ದಾರಿಯಲ್ಲಿ ಹೋಗುತ್ತಿಲ್ಲವೆಂಬ ಅಂಶವನ್ನು ತಾವು ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ. ಕಳೆದ ಸಾಲಿನಲ್ಲಿ ಈ ಕಾಂಪೋಸ್ಟ್ ಮೆನ್ಯೂರ್ ಸ್ಕೀಮಿಗಾಗಿ ಬಡ್ಜೆಟ್ಟಿನಲ್ಲಿ 10 ಲಕ್ಷ ರೂಪಾಯಿಗಳನ್ನೊದಗಿಸಲಾಗಿತ್ತು. ಆದರೆ ನಾವು ಇದರ ಫಲಿತಾಂಶವೇನಾಗುತ್ತದೋ ಎಂಬ ಆಲೋಚನೆಯಿಂದ ಹಾಗೆ ಹಣವನ್ನೊದಗಿಸಿದ್ದರೂ, ಆ ಮೊಬಲಗಿನಲ್ಲಿ ಒಂದು ಕಾಸನ್ನಾದರೂ ಸಹ ಖರ್ಚು ಮಾಡಿರುವುದಿಲ್ಲ. ತಾವು ಬಡ್ಜೆಟ್ ಪುಸ್ತಕವನ್ನು ಬೇಕಾದರೆ ತೆಗೆದು ನೋಡಬಹುದು. ಆ ಹಣವೆಲ್ಲವೂ ಹಾಗೆಯೇ ಉಳಿದಿದೆ. ಎಲ್ಲಿ ಖರ್ಚು ಮಾಡಿದರೆ ಅದರಿಂದ ನಮಗೆ ಸರಿಯಾದ ಫಲ ದೊರೆಯುತ್ತದೆ, ಎಲ್ಲಿ ಖರ್ಚು ಮಾಡಿದರೆ ಅದರಿಂದ ಸರಿಯಾದ ಫಲ ದೊರಕುವುದಿಲ್ಲವೆಂಬ ಅಂಶ ನಮಗೂ ಸಹ ಚೆನ್ನಾಗಿ



WD-H-035-21

ಮನದಟ್ಟಾಗಿರುತ್ತದೆ. ಹಾಗೆ ಅನಾವಶ್ಯಕವಾದ ಬಾಬಿಗೆಲ್ಲಾ ಹಣವನ್ನು ಖರ್ಚು ಮಾಡುತ್ತಿಲ್ಲವೆಂಬ ಭರವಸೆಯನ್ನು ನಾನು ತಮಗೆ ಕೊಡುತ್ತೇನೆ.

We do not stand on izzat or anything of the sort.

ಇದನ್ನು ಸಾರ್ವಜನಿಕರೂ ಸದ್ವಿನಿಯೋಗಪಡಿಸಿಕೊಳ್ಳಲಿ ಎಂದು ಇದನ್ನು ತಮ್ಮೆಲ್ಲರ ಮುಂದೆ ಇಟ್ಟಿದ್ದೇನೆ. ಆದರೆ ಇದರಲ್ಲಿ ಯಾವ ದೃಷ್ಟಿಯಿಂದ ನೋಡಿದರೂ ಅನುಕೂಲವಾಗುತ್ತಿಲ್ಲವೆಂದು ದಯವಿಟ್ಟು ಯಾರೂ ಆಲೋಚನೆ ಮಾಡಬೇಡಿ.

This is a very valuable document and I am going to make a present of this. Please read and find out whether the G.M.F scheme is successful or not. This is a learned document produced by the T. T.Krishnamachari Committee wherein they have surveyed the whole thing.

ಇದರಲ್ಲಿ ನಾವು ನಮ್ಮ ಪ್ರೊಡಕ್ಷನ್ ಎಷ್ಟರಮಟ್ಟಿಗೆ ಹೆಚ್ಚಿರುತ್ತದೆಯೆಂಬುದನ್ನು ತೋರಿಸಿದ್ದೇವೆ. ಆದರೆ ನಾವು ಹೇಗೆ ಅಂಡರ್ ಎಸ್ಟಿಮೇಟ್ ಮಾಡಿದ್ದೇವೆಯೇ ಹೊರತು, ಇದರಲ್ಲಿ ಓವರ್ ಎಸ್ಟಿಮೇಟ್ ಮಾಡಿಲ್ಲವೆಂಬುದನ್ನು ಈ ಪುಸ್ತಕದಲ್ಲಿ ಚೆನ್ನಾಗಿ ಹೇಳಿದ್ದಾರೆ. ಆದರೆ ನಾವು ಈಗ ಯಾವ ಯಾವುದಕ್ಕಾಗಿ ಖರ್ಚುಮಾಡಬೇಕೆಂದಿದ್ದೇವೆಯೋ ಆ ಹಣವೆಲ್ಲವನ್ನೂ ಇರಿಗೇಷನ್ ಬಾಬಿಗೇ ಹಾಕಬೇಕೆಂಬ ಆಸೆ ತಮಗಿರುವ ಹಾಗೆ ಕಾಣುತ್ತದೆ. ಆ ಅಂಶವನ್ನು ತಾವು ಗಮನಿಸುವುದಾದರೆ, ತಾವು ತಮ್ಮ ಕಾಲದಲ್ಲಿ ಪ್ರಾರಂಭಮಾಡಿ ಕೈ ಬಿಟ್ಟಿದ್ದಂಥ ನೀರಾವರಿ ಕಾಮಗಾರಿಗಳನ್ನೆಲ್ಲಾ ನಾವು ಕೈಕೊಂಡು ಆ ಕೆಲಸಗಳನ್ನೆಲ್ಲಾ ಪೂರ್ತಿಯಾಗಿ ಮುಗಿಸುತ್ತಾ ಬಂದಿದ್ದೇವೆ. ಆ ಕೆಲಸಗಳೆಲ್ಲಾ ಪೂರ್ತಿಯಾಗಿ ಮುಗಿಯುತ್ತಾ ಬಂದಿದೆ. ಅದನ್ನು ತಾವು ಪರ್ಯಾಲೋಚನೆ ಮಾಡಿದರೆ ಮತ್ತೆ ಯಾವುದನ್ನೂ ಖರ್ಚುಮಾಡದಿರುವಷ್ಟು ಹಣವನ್ನು ಉದಾರವಾಗಿ ಈ ನೀರಾವರಿ ಬಾಬಿಗೆ ನಾವು ಖರ್ಚುಮಾಡುತ್ತಿದ್ದೇವೆಂಬುದು ಗೊತ್ತಾಗುತ್ತದೆ. ತಾವು ಈ ಬಗ್ಗೆ ಹೆಚ್ಚಿನ ಸಂಶಯ ಪಡಬೇಕಾಗಿಲ್ಲ. ಇದರಿಂದ ಏನೂ ಪ್ರಯೋಜನವಿಲ್ಲವೆಂಬುದನ್ನು ತಾವು ನಮಗೆ ಮನದಟ್ಟು ಮಾಡಿಕೊಡುವ ಕಾಲಕ್ಕೆ ನಾವು ಇದನ್ನು ಕೂಡಲೇ ತೆಗೆದುಹಾಕಲು ಸಿದ್ಧರಾಗಿದ್ದೇವೆಂಬ ಅಂಶವನ್ನು ಈ ಸಮಯದಲ್ಲಿ ನಾನು ತಮಗೆ ತಿಳಿಸಿದರೆ ಸಾಕಾಗಿದೆ.

ಇನ್ನು ಟ್ರಾಕ್ಟರ್‌ಗಳ ವಿಚಾರವಾಗಿ ಮಾತನಾಡುತ್ತಾ ಮಾನ್ಯ ಸದಸ್ಯರು ನಮ್ಮ ದೇಶಕ್ಕೆ ಇವುಗಳಿಂದ ಎಷ್ಟರಮಟ್ಟಿನ ಪ್ರಯೋಜನವಾಗಬೇಕಾಗಿತ್ತೋ ಅಷ್ಟಾಗಿಲ್ಲವೆಂದು ಹೇಳಿದರು. 1946-47ರಲ್ಲಿ ಈ ಟ್ರಾಕ್ಟರುಗಳ ಬಗ್ಗೆ 21,58,802

ರೂಪಾಯಿಗಳು ಖರ್ಚಾಗಿವೆ. ಟ್ರಾಕ್ಟರುಗಳು ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ಹೇಳಿದರು.

**ಶ್ರೀ ಎಚ್.ಎಸ್. ರುದ್ರಪ್ಪ :** ಟ್ರಾಕ್ಟರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೋ, ಜನರು ಸರಿಯಾಗಿ ಕೆಲಸ ಮಾಡುತ್ತಿಲ್ಲವೋ?

**ಶ್ರೀ ಎಚ್. ಸಿದ್ದವೀರಪ್ಪ :** ಅದಕ್ಕೆ ನಾನಾ ಕಾರಣಗಳಿವೆ. ಆದರೆ ಅವರು ಅಷ್ಟಾಗಿ ಅವುಗಳು ಫಲಕಾರಿಯಾಗಿ ಕೆಲಸ ಮಾಡಲಿಲ್ಲವೆಂದು ಹೇಳಿದರು. ಆ ವರ್ಷ 85 ಸಾವಿರ ಎಕರೆ ಜಮೀನನ್ನು ಸಾಗುವಳಿ ಮಾಡಲಾಗಿದೆ, ಈ ಟ್ರಾಕ್ಟರುಗಳಿಂದ.

ಆದರೆ ನಮ್ಮ ಮಾನ್ಯ ಸದಸ್ಯರು ಇಬ್ಬರ ವಿಚಾರವಾಗಿ ಒಂದು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ರೆಫ್ಯೂಟ್ ಮಾಡಲೇಬೇಕಾಗಿದೆ. ಆ ಎರಡು ಜನರೂ ಈ ಟ್ರಾಕ್ಟರುಗಳಿಂದ ಪಡೆದುಕೊಂಡ ಪ್ರತಿಫಲಕ್ಕೆ ಸರಿಯಾಗಿ ಹಣವನ್ನು ಸರ್ಕಾರಕ್ಕೆ ಪಾವತಿ ಮಾಡಿದ್ದಾರೆ. ಆದರೆ ಈ ವಿಚಾರವನ್ನು ಪ್ರಸ್ತಾಪಮಾಡಿರತಕ್ಕ ಮಾನ್ಯ ಸದಸ್ಯರು ಈಗ ಸಭೆಯಲ್ಲಿದ್ದಿದ್ದರೆ ಅವರಿಗೆ ಸಾಕಷ್ಟು ಅಂಕಿ ಅಂಶಗಳನ್ನೆಲ್ಲಾ ಒದಗಿಸಿ, ಇದರಲ್ಲಿ ವ್ಯತ್ಯಾಸವೇನಿರುತ್ತದೆಯೆಂಬುದನ್ನು ತಿಳಿಸಬಹುದಾಗಿತ್ತು. ಹೀಗೆ ಈ ಟ್ರಾಕ್ಟರುಗಳಿಂದ 85 ಸಾವಿರ ಎಕರೆ ಜಮೀನು ಸಾಗುವಳಿಯಾಗಿದೆ. ಆ ಎರಡು ಜನಗಳದೂ ಸೇರಿ, ಇದರಲ್ಲಿ 25 ಎಕರೆ ಇರಬಹುದು.

**ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ) :** ಅವರ ಕಣ್ಣಿಗೆ ಬಿದ್ದವರು ಆ ಎರಡು ಜನಗಳು ಮಾತ್ರ.

**ಶ್ರೀ ಎಚ್. ಸಿದ್ದವೀರಪ್ಪ :** ಇನ್ನು ಈ ವೆಲ್‌ಸಬ್‌ಸಿಡಿ ಬೇಡ. ಇದನ್ನು ನಿಲ್ಲಿಸಿಬಿಡಿ ಎಂದು ಹೇಳಿದ್ದಾರೆ. ಆದರೆ ಅನೇಕರು ಆ ವೆಲ್‌ಸಬ್‌ಸಿಡಿಯಿಂದ ಅನೇಕ ಕಡೆಗಳಲ್ಲಿ ಅನುಕೂಲವಾಗಿದೆ, ಇದನ್ನು ಮುಂದುವರಿಸಿ ಎಂದು ಕೇಳುತ್ತಿದ್ದಾರೆ ನಿಜ. ಕೆಲವರು ಆ ರೀತಿಯಾಗಿ ದುರುಪಯೋಗಪಡಿಸಿಕೊಂಡಿದ್ದಾರೆ. ಅದಕ್ಕೆ ಯಾವ ರೀತಿ ಸರ್ಕಾರದವರು ತೀವ್ರ ಕಾರ್ಯಕ್ರಮ ತೆಗೆದುಕೊಂಡು ಪೆನಾಲ್ಟಿ ಕೂಡ ಹಾಕಿ ವಸೂಲು ಮಾಡಿದ್ದಾರೆಂಬುದು ತಮಗೇ ಗೊತ್ತಿದೆ. ಆದ್ದರಿಂದ you have to take both the sides of the picture. ಕೊಂಚ ಭಾಗ ನೀವು ಹೇಳಿದಂತೆಯೂ ಆಗಿತ್ತು. ಯಾರು ಯಾರು ಹಣ ತೆಗೆದುಕೊಂಡು ದುರುಪಯೋಗಪಡಿಸಿಕೊಂಡರೋ ಅವರ ಮೇಲೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳದೆ ಇಲ್ಲ. ಆದ್ದರಿಂದ ಒಟ್ಟಿನಲ್ಲಿ ಇದನ್ನು ನಿಲ್ಲಿಸುವುದು ಸೂಕ್ತವಲ್ಲವೆಂದು ಹೇಳಬಹುದು.

ನಮ್ಮ ಮಾನ್ಯ ಸ್ನೇಹಿತರಾದ ಗೋಪಾಲಗೌಡರು Grow More Food ಇಷ್ಟು ವರ್ಷಗಳಿಂದಿದ್ದರೂ ಆಹಾರದ ಧಾನ್ಯಗಳ ಬೆಲೆ ಏರುತ್ತಲೇ ಇದೆ ಎಂದು ಹೇಳಿದರು. ಮಾನ್ಯ ಸದಸ್ಯರು ಒಂದಂಶವನ್ನು ತಿಳಿಯಬೇಕು. ಆಹಾರ ಧಾನ್ಯಗಳ

ಬೆಲೆಗಳು ಜಾಸ್ತಿಯಾಗಿರುವುದು ಅಂತರರಾಷ್ಟ್ರೀಯ ಬೆಲೆಗಳಿಗನುಸಾರವಾಗಿ. ಆದ್ದರಿಂದ ಬೆಲೆಗಳನ್ನು ನೋಡುವಾಗ ನಮ್ಮ ಒಂದು ದೇಶವನ್ನು ಮಾತ್ರ ನೋಡಕೂಡದು. ಅಖಿಲ ಭಾರತಕ್ಕೆ ಅದು ಸಂಬಂಧಪಟ್ಟಿದೆಯಲ್ಲದೆ World price structure ಗೆ ಕೂಡ ಸಂಬಂಧಪಟ್ಟಿದೆ. ಪ್ರಪಂಚದ ಬೆಲೆಗಳ ಏರಿಳಿತಕ್ಕೆ ಕಾರಣ ನಾವಲ್ಲ. ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಅದು ಅವಲಂಭಿಸುತ್ತದೆ. ಜೊತೆಗೆ ಪ್ರಕೃತಿ ನಮ್ಮ ಮೇಲೆ ಮುನಿಸಿಕೊಂಡು ಹೀಗಾಯಿತೆನ್ನಬಹುದು.

**ಶ್ರೀ ಎಚ್.ಎಸ್. ರುದ್ರಪ್ಪ** : ರೈತರಿಗೆ ಹೆಚ್ಚಿಗೆ ಬೆಲೆ ಕೊಟ್ಟಿದ್ದೇ ಕಾರಣ. ಅವರು ಹಿಂದೆ ಕಡಿಮೆ ಕೊಡುತ್ತಿದ್ದರು.

**ಶ್ರೀ ಎಚ್. ಸಿದ್ದವೀರಪ್ಪ** : ಶ್ರೀಮಾನ್ ರುದ್ರಪ್ಪನವರು ಹೇಳಿದ ಹಾಗೆ, ನಿಮ್ಮ ಕಾಲದಲ್ಲಿ ಎಷ್ಟುಕೊಡುತ್ತಿತ್ತು; ಈಗ ಎಷ್ಟು ಹೆಚ್ಚು ಕೊಡುತ್ತಿದೆಯೆಂಬುದಕ್ಕೆಲ್ಲಾ ಲೆಕ್ಕವಿದೆ.

**ಶ್ರೀ ಎಲ್. ಸಿದ್ದಪ್ಪ** : ಆದರೂ ಆಗ ಜನರು ಎಷ್ಟೋ ಸುಖವಾಗಿದ್ದರು.

**ಶ್ರೀ ಎಚ್. ಸಿದ್ದವೀರಪ್ಪ** : ಈಗ ರೈತರು ಸುಖವಾಗಿದ್ದಾರೆಯೇ ಇಲ್ಲವೇ ಎಂಬುದನ್ನು ನೀವು ಅಷ್ಟು ಯೋಚನೆ ಮಾಡಬೇಕಾದ್ದಿಲ್ಲ. Because I know more intimately about the agriculturists as much as you do at least. ರೈತರನ್ನೇ ಬೇಕಾದರೆ ಕೇಳಿ. 25 ರೂಪಾಯಿಗಳನ್ನು ಕೊಟ್ಟಿರುವುದು ಬಹಳ ಚೆನ್ನಾಗಿದೆಯೆಂದು ಅವರೇ ಒಪ್ಪಿಕೊಳ್ಳುತ್ತಾರೆ.

There is no parallel in the history of Mysore for the last 60 years where two-thirds of the State continually suffer like this, where there are acute distress conditions. That is the reason for the increase of prices and not the grow more food campaign. In fact, the grow more food campaign results have not been visibly seen for the simple reason that unfortunately for the last three or four years we have been subject to continual distress conditions and also for the reason that on account of the controls and the indirect effect of the same, money crops have been grown on a larger area than food crops. There are various other reasons. We have provided facilities for growing more. It is for the people either to grow more food or any other crop. We must create conditions where growing more food is more protitable and feasible rather than growing any other crop.

ಒಟ್ಟಿನಲ್ಲಿ ನಾವು ಲೆಕ್ಕ ಹಾಕುವುದಾದರೆ – ಅದಕ್ಕೆ ಅಂಕಿ ಅಂಶಗಳನ್ನು ಕೊಡುವುದು ಅನಾವಶ್ಯಕವೆಂದು ನಾನಾಗಲೇ ಹೇಳಿದ್ದೇನೆ – ಅಲ್ಲಿ ಕೆಲಸ ಸಮರ್ಪಕವಾಗಿ ನಡೆಯುತ್ತಿದೆಯೆನ್ನಬೇಕು. ಆದರೆ ಫಲಿತಾಂಶಗಳು ಸಮರ್ಪಕವಾಗಿ ಕಣ್ಣಿಗೆ ಕಾಣದಿರಬಹುದು ಅಷ್ಟೆ. ಇದಕ್ಕೆ ಕಾರಣ ಈ ಸ್ಕೀಮಲ್ಲ, ಬೇರೆ ಕಾರಣಗಳು ಎಂಬುದನ್ನು ತಿಳಿಯಬೇಕು. ನಮ್ಮ ಅನುಭವದಲ್ಲಿ ಎಲ್ಲೆಲ್ಲಿ ವೇಸ್ಟ್ ಆಗುತ್ತಿದೆ, ಯಾವ ಯಾವ ಸ್ಕೀಮಿನಲ್ಲಿ ಲೋಪದೋಷಗಳಿವೆ, ಅಂಥ ಸ್ಕೀಮುಗಳನ್ನು ಕಡಿಮೆ ಮಾಡುವುದಕ್ಕೆ ಯಾವಾಗಲೂ ತಯಾರಿದ್ದೇವೆ. ಈ ವಿವರಣೆಯ ಮೇಲೆ ಮಾನ್ಯ ಶಿವರುದ್ರಪ್ಪನವರು ದೊಡ್ಡ ಮನಸ್ಸು ಮಾಡಿ ತಮ್ಮ ಖೋತಾ ಸೂಚನೆಯನ್ನು ವಾಪಸು ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

* * *

# ಜಾನುವಾರು ತಳಿಯ ಬಗ್ಗೆ ಚರ್ಚೆ

## 26, ಮಾರ್ಚ್ 1953

**ಶ್ರೀ ಎಚ್. ಸಿದ್ದವೀರಪ್ಪ :** ಸ್ವಾಮಿ, ಶ್ರೀಮಾನ್ ನಾಗಪ್ಪಶೆಟ್ಟರು ಹೇಳಿದ ವಿಷಯದಲ್ಲಿ – ಮಲೆನಾಡಿನಲ್ಲಿ ತಳಿಗಳನ್ನು ಉತ್ತಮಪಡಿಸಬೇಕೆಂಬ ದೃಷ್ಟಿಯಿಂದ ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆಂಬ ವಿಷಯದಲ್ಲಿ ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಕೂಲಂಕುಷವಾಗಿ ಪ್ರಸ್ತಾಪ ಮಾಡಿದ್ದೆ. ಸೂಳೆಕೆರೆ ಫಾರಂ ಪ್ರಾರಂಭಮಾಡಿದ್ದೇವೆ. ಮಲೆನಾಡಿನಲ್ಲಿ ಹುಲ್ಲನ್ನು ಉತ್ತಮಪಡಿಸಬೇಕು, ದನಗಳ ಕೊರತೆಯನ್ನು ತಪ್ಪಿಸಲು ಅವುಗಳ ಆಹಾರದ ವಿಷಯದಲ್ಲಿ ಏನು ಮಾಡಬೇಕು, ತಳಿಗಳನ್ನು ಉತ್ತಮಪಡಿಸಲು ಏನು ಕೆಲಸಮಾಡಬೇಕು ಇತ್ಯಾದಿ ವಿಚಾರಗಳಲ್ಲಿ ಪ್ರಯತ್ನಪಡುತ್ತಲೇ ಇದ್ದೇವೆ. ಅಜ್ಜಂಪುರದಲ್ಲಿ ಒಂದು ಫಾರಂ ಏರ್ಪಾಡುಮಾಡಿದ್ದೇವೆ. ಹೆಚ್ಚು ಕಾಲಾವಕಾಶವಿಲ್ಲದಿರುವುದರಿಂದ ನಾನು ಈಗ ಹೆಚ್ಚು ವಿವರಗಳಿಗೆ ಹೋಗುವುದಿಲ್ಲ.

**ಶ್ರೀ ಎಸ್.ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ) :** ಇವುಗಳಿಗೆಲ್ಲಾ ಒಂದು ಲಕ್ಷ ಚಿಲ್ಲರೆ ಖರ್ಚುಮಾಡಿದರೆ ಮಲೆನಾಡಿನ ದನಗಳು ಅಭಿವೃದ್ಧಿಯಾಗುತ್ತವೆಯೇ?

**ಶ್ರೀ ಎಚ್. ಸಿದ್ದವೀರಪ್ಪ :** ಸಂಶೋಧನೆ ನಡೆಸುತ್ತಿದ್ದೇವೆ. ಅಭಿವೃದ್ಧಿ ಮಾಡುವುದೇ ಸರ್ಕಾರದ ಉದ್ದೇಶ, ಅಲ್ಲಿ ಮುಖ್ಯವಾಗಿ ದನಗಳು ಬರಿಯ ಬತ್ತದ ಹುಲ್ಲನ್ನು ತಿನ್ನುವುದರಿಂದ ನಿರ್ವೀರ್ಯವಾಗಿವೆಯೆಂದು ಹೇಳುತ್ತಾರೆ. ಇದಕ್ಕೆ ಯಾವ ರೀತಿ ಮಾಡಬೇಕೆಂಬುದನ್ನು ಕಂಡು ಹಿಡಿಯುವ ಉದ್ದೇಶದಿಂದ ಸಂಶೋಧನೆ ನಡೆಸುತ್ತಿದ್ದೇವೆ. ಇದು ಬಹು ಮುಖ್ಯವಾದ ವಿಷಯ. ಇದು ಮುಂದುವರಿಯುತ್ತದೆಂದು ಭರವಸೆಕೊಡುತ್ತೇನೆ.

ಇನ್ನು ಅಧಿಕಾರಿಗಳ ವಿಷಯದಲ್ಲಿ ಹೇಳಿದರು. ಇನ್ನೊಬ್ಬರು ಡೆಪ್ಯುಟಿ ಡೈರೆಕ್ಟರನ್ನು ನಿಯಮಿಸಬೇಕೆಂದು ಯೋಚನೆ ಮಾಡುತ್ತಿದ್ದೇನೆ.

**Mr. Speaker** : They used to get some powder-mineral powder or salt. We had once purchased.

**ಶ್ರೀ ಎಚ್. ಸಿದ್ದವೀರಪ್ಪ :** ಅದನ್ನೂ ಮಾಡುತ್ತಿದ್ದೇವೆ. ಬತ್ತದ ಹುಲ್ಲಿಗೆ ಸ್ವಲ್ಪ ರುಚಿ ಬರಲೆಂದು ಅದನ್ನು ನೀರಿನಲ್ಲಿ ನೆನಸಿ, ಅದಕ್ಕೆ ಸೇರಿಸುತ್ತಿದ್ದೇವೆ. ಇದು ಇನ್ನೂ ಸಂಶೋಧನೆಯಾಗುತ್ತಿದೆ. ಅದರ ಫಲವೇನಾಗುತ್ತದೆಂದು ಇನ್ನೂ ನೋಡಬೇಕು, ಚಿಕ್ಕಮಗಳೂರಿನಲ್ಲಿ 'ಅರ್ಟಿಫಿಷಿಯಲ್ ಇನ್‌ಸೆಮಿನೇಷನ್' ಕೇಂದ್ರವನ್ನು ಪ್ರಾರಂಭಿಸಿದ್ದೇವೆ. ಅದರ ಫಲವನ್ನೂ ನೋಡೋಣ. ಮಲೆನಾಡಿನಲ್ಲಿ 48 ಕೇಂದ್ರಗಳಿವೆ.

ಇನ್ನೊಬ್ಬರು ಶಿಕ್ಷಣ ಪಡೆದ ಅಧಿಕಾರಿಗಳಿದ್ದಾರೆ, ಅವರ ಸರ್ವೀಸನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಅದನ್ನೂ ಯೋಚನೆ ಮಾಡುತ್ತೇವೆ.

ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಮುಖ್ಯವಾಗಿ ಹಾಲಿನ ವಿಚಾರ ಹೇಳಿದರು. ಅದನ್ನು ವ್ಯಸನದಿಂದ ಒಪ್ಪಿಕೊಳ್ಳಬೇಕಾಗಿದೆ. ನಮ್ಮ ಸಂಸ್ಥಾನದಲ್ಲಿ ಹಾಲು ಬಹಳ ಕಡಿಮೆ. ಅಖಿಲ ಭಾರತದ ಲೆಕ್ಕ 5 ಔನ್ಸ್ ಬಂದರೆ, ನಮ್ಮದು ಕೇವಲ ಅರ್ಧ ಅಥವಾ ಒಂದು ಔನ್ಸ್ ಬರುತ್ತದೆ. ಇದನ್ನು ಬಹಳ ದೂರ ದೃಷ್ಟಿಯಿಂದ ಯೋಚನೆ ಮಾಡಬೇಕು. ಇದನ್ನು ಯಾವ ರೀತಿ ಉತ್ತಮ ಪಡಿಸಬೇಕೆಂಬುದನ್ನು ನಮ್ಮ ಅಧಿಕಾರಿಗಳು ತೀವ್ರಾಸಕ್ತಿಯಿಂದ ಯೋಚನೆ ಮಾಡುತ್ತಿದ್ದಾರೆ. ಸರ್ಕಾರದ ದೃಷ್ಟಿಯಲ್ಲಿದೆ. ಇದನ್ನು ಬಗೆಹರಿಸುವುದಕ್ಕೆ ಏನು ಮಾಡಬೇಕೆಂಬುದನ್ನು ಯೋಚನೆಮಾಡುತ್ತೇವೆ.

ಅವರು ಇನ್ನೊಂದು ವಿಷಯ ಹೇಳಿದರು. ಅರ್ಟಿಫಿಷಿಯಲ್ ಇನ್‌ಸೆಮಿನೇಷನ್ ವಿಚಾರದಲ್ಲಿ 'ಪೆಡಿಗ್ರಿ' 'ಪ್ರಾಜನ್' ನೋಡಿಕೊಳ್ಳಬೇಕೆಂದು ಹೇಳಿದರು. ಇದು ಸೂಕ್ತ ಸಲಹೆ. ಇದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಸರಿಪಡಿಸುವುದಕ್ಕೆ ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ. ಈ ಸಂಬಂಧದಲ್ಲಿ ಇಂಗ್ಲೆಂಡಿನಿಂದ ವಿಮಾನದ ಮೂಲಕ ತರಿಸಿ ಪ್ರಯೋಗ ಮಾಡಿದ್ದಾರೆ, ಫಲ ಬಹಳ ಚೆನ್ನಾಗಿ ಬಂದಿದೆ. ಕರು ಬಹಳ ಚೆನ್ನಾಗಿದೆ. I wish you (referring to Sri S. Srinivasa Iyengar) come and see those calves. They have really come very well. ಆದರೂ ಇದು ಮುಂದೆ ಹೇಗೆ ಬರುತ್ತದೆ, ಪೆಡಿಗ್ರಿ, ಪ್ರಾಜೆನ್ಸಿ ನೋಡಬೇಕು. ಇನ್ನೂ ಒಂದು ವರ್ಷವಾಗಿಲ್ಲ. ಮುಂದೆ ತಳಿ ಹೇಗಾಗುತ್ತದೆ, ಸರಿಯಾಗಿ ಬರುತ್ತದೆಯೇ ಎಂಬುದನ್ನು ನೋಡಿ ಯೋಚನೆ ಮಾಡಬೇಕು. ಅವರು ಹೇಳಿದಂತೆ, ನಮ್ಮ ದೇಶದ ರೈತನಗೆ ಅತಿ ಮುಖ್ಯ ಆಸ್ತಿಯಾದ ಗೋ ಸಂಪತ್ತನ್ನು ಹೆಚ್ಚು ಮಾಡಬೇಕು, ಅಭಿವೃದ್ಧಿಪಡಿಸಬೇಕು ಎಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈ ದೃಷ್ಟಿಯಿಂದ ಸರ್ವರೂ ಈ ಡಿಮ್ಯಾಂಡಿಗೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

* * *

# ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪನೆ ಕುರಿತು

## 29, ಮಾರ್ಚ್ 1953

**ಶ್ರೀ ಎಚ್. ಸಿದ್ದವೀರಪ್ಪ** : ನನ್ನ ಮಾನ್ಯ ಸ್ನೇಹಿತರು ಸಂಸ್ಥಾನದಲ್ಲಿ ರೇಷ್ಮೆ ಉತ್ಪತ್ತಿಯಾಗತಕ್ಕಂಥ ಪ್ರದೇಶದಿಂದ ಅದರಲ್ಲೂ ಹೆಚ್ಚಾಗಿ ಉತ್ಪತ್ತಿಯಾಗುವ ಪ್ರದೇಶದಿಂದ ಬರುವುದರಿಂದ ನನಗಿಂತ ಹೆಚ್ಚಾದ ಮಾಹಿತಿ ಅವರಿಗಿದೆ. ಒಟ್ಟು ಸಂಸ್ಥಾನದಲ್ಲಿ ಈಗ ಉತ್ಪತ್ತಿಯಾಗುವ 280 ಲಕ್ಷ ಪೌಂಡಿನಲ್ಲಿ ಮೈಸೂರು ಡಿಸ್ಟ್ರಿಕ್ಟ್ ಒಂದರಲ್ಲೇ 200 ಲಕ್ಷ ಪೌಂಡು ರೇಷ್ಮೆ ಉತ್ಪತ್ತಿಯಾಗುತ್ತಿದೆ. ಇದೇ ರೀತಿಯಲ್ಲಿ ಸಂಸ್ಥಾನದ ಅನೇಕ ಕಡೆ ಬೆಂಗಳೂರು, ಕೋಲಾರ, ಮಂಡ್ಯದಲ್ಲಿ ಕೆಲವು ಭಾಗ, ತುಮಕೂರು ಡಿಸ್ಟ್ರಿಕ್ಟಿನ ಕೆಲವು ಕಡೆ ಉತ್ಪತ್ತಿಯಾಗುತ್ತಿದೆ. ಸಂಸ್ಥಾನದಲ್ಲಿ ಸಹಸ್ರಾರು ಸಂಸಾರಗಳು ಈ ಕಸಬನ್ನು ಉಪಕಸಬನ್ನಾಗಿ ಮಾಡಿಕೊಂಡು ಈಗ ಜೀವನ ಮಾಡುತ್ತಿದ್ದಾರೆ. ಇದು ಲಕ್ಷಾಂತರ ಜನರ ಜೀವನದ ಉಪಕಸಬಾಗಿರುವ ಕೈಗಾರಿಕೆ ಮತ್ತು ವ್ಯವಸಾಯ ಎಂಬುದನ್ನು ಸರ್ಕಾರದವರು ಚೆನ್ನಾಗಿ ಮನಗಂಡಿದ್ದಾರೆ. ಮಾನ್ಯ ಸದಸ್ಯರು ಈ ಸಮಯದಲ್ಲಿ ಕೆಲವು ಮಾತುಗಳನ್ನು ಹೇಳಿದರು. ಸರ್ಕಾರದವರು ಈ ಕೈಗಾರಿಕೆ ವಿಚಾರದಲ್ಲಿ ಸದಾ ಎಚ್ಚರಿಕೆಯಿಂದ ನಡೆಯುತ್ತಿದ್ದಾರೆ. ಸೆಂಟ್ರಲ್ ಸಿಲ್ಕ್ ಬೋರ್ಡಿನಲ್ಲಿ ಅಥವಾ ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ಆಗಾಗ್ಗೆ ಇದಕ್ಕೆ ಸಂಬಂಧಪಟ್ಟಹಾಗೆ ಏನೇನು ನಡೆಯುತ್ತಿದೆಯೆಂದು ನೋಡಿ ಯಾವ ಕಾನೂನು ಮತ್ತು ಅನುಕೂಲ ನಮ್ಮ ಸಂಸ್ಥಾನಕ್ಕೆ ಆಗಬೇಕಾಗಿದೆ ಎಂಬ ವಿಚಾರದಲ್ಲಿ ಸಂಸ್ಥಾನದ ಪರವಾಗಿ ನೊಡಿಕೊಳ್ಳುತ್ತಿದ್ದೇನೆ ಎಂಬುದನ್ನು ಈ ಸಮಯದಲ್ಲಿ ಹೇಳುವುದು ಅನಾವಶ್ಯಕ. ಈಗ ಸೆಂಟ್ರಲ್ ಸಿಲ್ಕ್ ಬೋರ್ಡ್ ಸಂಸ್ಥೆ ಯಾವ ರೀತಿಯಲ್ಲಿ ಸಹಾಯ ಮಾಡುತ್ತಿದೆ ಎಂಬುದನ್ನು ನೋಡಬಹುದು. ಹೋದ ಸಾರಿ ಇದಕ್ಕೆ ಸಂಬಂಧಪಟ್ಟ ಕಾನೂನು ಮಾಡಿರುವುದು ಸಭೆಗೆ ಗೊತ್ತಿದೆ. ಮೊನ್ನೆ ತಾನೆ ಈ ಸಭೆಯಲ್ಲಿರುವ ಅನೇಕ ಮಾನ್ಯ ಸದಸ್ಯರು ಮತ್ತು ಬೇರೆಯವರನ್ನು ಕರೆಸಿ ಕೇಳಿ ಯಾವ ರೀತಿ ರೂಲ್ಸ್ ಮಾಡಿದರೆ ಈ ಕೈಗಾರಿಕೆಗೆ ಅನುಕುಲವಾಗುತ್ತದೆ ಎಂಬ ವಿಚಾರವನ್ನು ಕೂಲಂಕುಷವಾಗಿ ಪರೀಕ್ಷೆ ಮಾಡಿದೆ. ಇದು ಕೋಠಿಯವರಿಗೂ ಮತ್ತು ಇತರರಿಗೂ ಪರಿಚಯವಾಗಿದೆ.

ರೆಗ್ಯುಲೇಟೆಡ್ ಮಾರ್ಕೆಟ್ ಇರಬೇಕೆಂಬ ವಾದ ಅನೇಕ ಮಿತ್ರರಿಂದ ಇಡಲ್ಪಟ್ಟಿದೆ. ಅದರಲ್ಲೂ ಶ್ರೀ ಪಾಪಣ್ಣನವರು ಈ ವಿಚಾರದಲ್ಲಿ ಹೆಚ್ಚು ನಿಗಾ ವಹಿಸಿ ರೆಗ್ಯುಲೇಟೆಡ್ ಮಾರ್ಕೆಟ್ ಇಲ್ಲದಿದ್ದರೆ ನೀವೇನು ಮಾಡಿದರೂ ಪ್ರಯೋಜನವಾಗುವುದಿಲ್ಲ, ರೆಗ್ಯುಲೇಟೆಡ್ ಮಾರ್ಕೆಟ್ ಅತ್ಯಾವಶ್ಯಕ, ಈಗ ದಳ್ಳಾಳಿಗಳಿಗೆ, ಮತ್ತು ಒಬ್ಬಿಬ್ಬರಿಗೆ ಹೆಚ್ಚು ಲಾಭ ಬರುವುದು ಎಂದು ವಾದ ಮಾಡಿದ್ದಾರೆ. ಸರ್ಕಾರದವರು ಇದನ್ನೆಲ್ಲಾ ಪರಿಶೀಲಿಸಿ ಯಾವ ರೀತಿ ಸಹಾಯ ನೀಡಬೇಕು ಎಂದು ಯೋಚನೆ ಮಾಡಿ, ಈ ವಿಚಾರದಲ್ಲಿ ಸಂಪೂರ್ಣ ಸಹಾನುಭೂತಿಯುಳ್ಳವರಾಗಿ ಆದಷ್ಟು ಜಾಗ್ರತೆ ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪಿಸಬೇಕೆಂದು ಒಂದು ನೀತಿಯನ್ನನುಸರಿಸಿ ಈ ವಿಚಾರದಲ್ಲಿ ರೂಲ್ಸನ್ನು ಪಬ್ಲಿಕ್ ಮಾಡಿದ್ದಾರೆ. ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ನಮ್ಮ ಮೈಸೂರಿನ ಮಾನ್ಯ ಸ್ನೇಹಿತರು ಮೈಸೂರು ಫಿಲೇಚರ್‌ನಲ್ಲಿ ಎಷ್ಟು ಷೇರು ಇದೆಯೆಂದು ಕೇಳಿದರು. 1,500 ಷೇರುಗಳಿವೆಯೆಂದು ಖಚಿತವಾಗಿ ಹೇಳಬಲ್ಲೆ. ಒಂದು ಷೇರಿಗೆ ಹತ್ತು ರೂಪಾಯಿ, ತಮಗೆ ಕೊಟ್ಟಿರುವ ಬಡ್ಜೆಟ್ಟಿನಲ್ಲಿ ಇದು ನಮೂದಾಗಿರುವುದನ್ನು ನೋಡಬಹುದು.

ಈಗ ಮೈಸೂರು ಫಿಲೇಚರ್‌ಗೆ ಸಂಬಂಧಿಸಿದ ಹಾಗೆ ಏಳು ಭಾಗಗಳಲ್ಲಿ ಇದರ ಕಾರ್ಖಾನೆಗಳಿವೆ. ಈ ಏಳು ಪ್ರದೇಶಗಳು ಮೈಸೂರು, ಟಿ.ನರಸೀಪುರ, ಚಾಮರಾಜನಗರ, ಕುದೇರು, ಸಂತೇಮಾರನಹಳ್ಳಿ, ಮಾಂಬಳ್ಳಿ ಮತ್ತು ಶಿಡ್ಲಘಟ್ಟ. ಇವುಗಳ capacity 7 ರಿಂದ 840 ಬೇಸಿನ್‌ಗಳಷ್ಟಿದ್ದು ಈ ಪೈಕಿ 450 ಬೇಸಿನ್‌ಗಳಷ್ಟು ಕೆಲಸ ಮಾಡದೆ, ಮೈಸೂರು, ಟಿ. ನರಸೀಪುರ ಮತ್ತು ಚಾಮರಾಜನಗರ ಈ ಮೂರು ಸ್ಥಳಗಳಲ್ಲಿ ಮಾತ್ರ ಕೆಲಸ ನಡೆಯುತ್ತಿದೆ.

**Mr. Speaker:** Sri Madappa has heard your speech in the conferene. He was present there.

ಶ್ರೀ ಎಚ್. ಸಿದ್ದವೀರಪ್ಪ : ಒಟ್ಟಿನಲ್ಲಿ ಈ ವಿಚಾರವಾಗಿ ಅವರು ಹೇಳಿರುವುದಕ್ಕೂ ಸರ್ಕಾರದವರ ಅಭಿಪ್ರಾಯಕ್ಕೂ ಯಾವ ರೀತಿಯ ಭಿನ್ನಾಭಿಪ್ರಾಯವೂ ಇಲ್ಲ.

ಸಾಲದ ವಿಚಾರವಾಗಿ ಒಂದು ಮಾತು ಹೇಳುತ್ತೇನೆ. ಸರ್ಕಾರದವರು ಇವರಿಗೆ ಸಾಲ ಕೊಡದೇ ಇದ್ದಿದ್ದರೆ ಇವರು ಈ ಕೆಲಸ ಮಾಡುತ್ತಿರಲಿಲ್ಲ. ಇದಕ್ಕಾಗಿ ಇವರೆಲ್ಲರೂ ಸರ್ಕಾರದವರನ್ನು ವಂದಿಸಬೇಕಾಗಿದೆ. ಈ ಸಾಲ ಕೊಟ್ಟಿರುವುದು ಷೇರ್ ಹೋಲ್ಡರುಗಳ ಅನುಕೂಲಕ್ಕಾಗಿ ಅಲ್ಲ. ಈ ಕೈಗಾರಿಕೆ ಅಭಿವೃದ್ಧಿಗೊಳ್ಳಲಿ ಎಂಬ ಉದ್ದೇಶದಿಂದ. ಈ ದಿನ ಸಾಲ ಕೊಡುವುದನ್ನು ನಿಲ್ಲಿಸಿದರೆ ಅವರು ಎಲ್ಲರೂ ಮೂಗು ಬಾಯಿ ಹಿಡಿದು ಕುಳಿತುಕೊಳ್ಳಬೇಕಾಗುತ್ತದೆ. ಈ ಕೈಗಾರಿಕೆಯಲ್ಲಿ

ನಿರತರಾಗಿರುವವರಿಗೆ ಜೀವನಕ್ಕೆ ಒಂದು ದಾರಿಯಾಗಲಿ ಎಂಬ ಉದ್ದೇಶದಿಂದ ಸಾಲವನ್ನು ಕೊಡುವುದನ್ನು ನಿಲ್ಲಿಸಿಲ್ಲ. ಇದನ್ನು ನಾವು Human point of view ನಿಂದ ನೋಡಬೇಕು. ಈ ದಿನ ರೇಷ್ಮೆಗೆ ಡಿಮ್ಯಾಂಡ್ ಇಲ್ಲ, ಮಾರ್ಕೆಟ್ ಇಲ್ಲ. ಇರತಕ್ಕ ಮಾರ್ಕೆಟ್ಟಿನಲ್ಲಿ cost of production ಕಡಿಮೆ ಮಾಡಿ ಯಾವ ರೀತಿ ಮಾಡಬೇಕೆಂದು ಆಲೋಚಿಸುತ್ತಿದೆ. This is an article of luxury. ಈಗ ಕೃತಕ ರೇಷ್ಮೆಯ ಕಾಂಪಿಟೇಷನ್ ಜಾಸ್ತಿಯಾಗಿ ಒಳ್ಳೆಯ ರೇಷ್ಮೆಗೆ ತೊಂದರೆಯುಂಟಾಗಿದೆ. ಈ ವಿಚಾರದಲ್ಲಿ ಯಾವ ರೀತಿ ಮುಂದುವರಿಯಬೇಕೆಂಬ ಬಗ್ಗೆ ನಮ್ಮ ಸರ್ಕಾರದವರೂ ಮತ್ತು ಸೆಂಟ್ರಲ್ ಸಿಲ್ಕ್ ಬೋರ್ಡ್‌ನವರೂ ಯೋಚಿಸುತ್ತಿದ್ದಾರೆ. ಈ ಕೈಗಾರಿಕೆಗೆ ಹೆಚ್ಚಿನ ನಿಗಾ ಕೊಡಬೇಕೆಂಬುದು ಸರ್ಕಾರದ ಇರಾದೆ. ಮಾನ್ಯ ಮಿತ್ರರು ಈ ವಿಚಾರದಲ್ಲಿ ಕಳವಳ ಪಡಬೇಕಾಗಿಲ್ಲ, ಕೈಲಾದಮಟ್ಟಿಗೂ ಸಹಾಯ ಮಾಡುತ್ತೇವೆಂದು ಹೇಳಿದರೆ ಸಾಕಾಗಿದೆ ಎಂದು ನನ್ನ ಅಭಿಪ್ರಾಯ.

**Mr. Speaker:** His anxiety is that the India Government are importing raw silk to a very large extent. Is it true? Does it not affect our interests? That is what he asks.

**ಶ್ರೀ ಎಚ್. ಸಿದ್ದವೀರಪ್ಪ :** ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರಿಗೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ಅವರು ಈ ವಿಚಾರದಲ್ಲಿ ಮುಂದುವರಿಯಬೇಕಾದರೆ ನಮ್ಮ ಸಲಹೆಯನ್ನು ಕೇಳುತ್ತಾರೆ. ಈ ರೀತಿ ಆದರೆ ತೊಂದರೆ ಇದೆಯೇ, ನಿಮ್ಮ ಅಭಿಪ್ರಾಯವೇನು ಎಂಬುದಾಗಿ ನಮ್ಮ ಸಲಹೆ ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರು responsive ಆಗಿದ್ದಾರೆಂದು ಹೇಳಿದರೆ ಸಾಕಾಗಿದೆ.

* * *

# ಪೊಲೀಸ್ ತಿದ್ದುಪಡಿ ಪ್ರಸ್ತಾಪ

**31, ಮಾರ್ಚ್ 1953**

**Sri H. Siddaveerappa:** Sir, I beg to move: "That the Mysore Police (Amendment) Bill, 1953, be taken into consideration" ಸ್ವಾಮಿ, ಈ ಮಸೂದೆಗೆ ಸಂಬಂಧಪಟ್ಟ ಉದ್ದೇಶವನ್ನು Statement of Objects and Reasons ನಲ್ಲಿ ವಿಶದವಾಗಿ ತಿಳಿಸಿರುತ್ತೇನೆ. ಇಂಥ ಕಾನೂನು ನಮ್ಮ ದೇಶಕ್ಕೆ ಹೊಸದಾದರೂ ಬಾಕಿ ದೇಶಗಳಲ್ಲಿ ಜಾರಿಯಲ್ಲಿದೆ, ಅದನ್ನನುಸರಿಸಿ ಈ ಮಸೂದೆಯನ್ನು ತಂದಿದೆಯೆಂಬುದನ್ನು ಅದರಲ್ಲಿ ವಿಶದಪಡಿಸಿದ್ದೇನೆ. ಮುಖ್ಯವಾಗಿ ಬೊಂಬಾಯಿ ಪೊಲೀಸ್ ಆಕ್ಟ್ ಮಾದರಿಯಲ್ಲಿ ಇದನ್ನು ಮಾಡಿ ಸಭೆಯ ಮುಂದೆ ತಂದಿದೆ. ಇದರ ಉದ್ದೇಶವಾದರೂ ಇಷ್ಟೆ : ಈ ಹೊತ್ತಿನ ದಿವಸ ಲೌಡ್ ಸ್ಪೀಕರ್ ಅಥವಾ ಧ್ವನಿವರ್ಧಕ ಯಂತ್ರಗಳು ಬಹಳ ಹೆಚ್ಚಾಗಿ ನೆಮ್ಮದಿ ಇಲ್ಲವಾಗಿದೆ. ಅದರಿಂದ ಏನಾಗಿದೆಯೆಂದರೆ, ಸ್ವಲ್ಪ ಮನಸ್ಸಿನ ಶಾಂತಿಯನ್ನು ಪಡೆಯೋಣ ಅಥವಾ ವಿಶ್ರಾಂತಿಯನ್ನು ಪಡೆಯೋಣ ಎಂದರೆ ನಾಗರಿಕರಿಗೆ ಅವಕಾಶವಿಲ್ಲದಿರುವ ಹಾಗಾಗಿ ಅವರು ಬಹಳ ತೊಂದರೆಗೀಡಾಗಿದ್ದಾರೆ. ಲೌಡ್ ಸ್ಪೀಕರು ಎಲ್ಲಿ ಹಾಕಿದ್ದಾರೋ ಅಲ್ಲಿ ಕಿವಿಗೆ ಹತ್ತಿ ಹಾಕಿಕೊಂಡು ಮನೆಯಲ್ಲಿದ್ದರೂ ಜೀವನ ಮಾಡುವುದಕ್ಕೆ ಕಷ್ಟವಾಗಿದೆಯೆಂದು ಅನೇಕರು ನನ್ನಲ್ಲಿ ಹೇಳಿದ್ದಾರೆ. ಈ ತೊಂದರೆಯನ್ನು ತಡೆಯುವುದಕ್ಕೆ ಕಷ್ಟವಾಗಿದೆ. ಇದರ ಕಷ್ಟವನ್ನು ತಪ್ಪಿಸದೇಯಿದ್ದರೆ ನರಗಳ ದೌರ್ಬಲ್ಯ ಕೂಡ ಉಂಟಾಗುತ್ತದೆಂದು ಅನೇಕ ಜನ ಅವರ ಸಂಕಟಗಳನ್ನು ಹೇಳಿದ್ದಾರೆ. ಸುಮಾರು ಹದಿನೈದು ದಿನಗಳ ಕೆಳಗೆ ರಾತ್ರಿ ಹನ್ನೊಂದು ಗಂಟೆಯಲ್ಲಿ ಒಬ್ಬ ವಿದ್ಯಾರ್ಥಿ ನನಗೆ ಫೋನ್ ಮಾಡಿದ. ಏನೆಂದು ವಿಚಾರಿಸಲು, ನಾನು ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿ, ಪರೀಕ್ಷೆಗೆ ಓದುತ್ತಿದ್ದೇನೆ, ಈ

ಲೌಡ್‌ಸ್ಪೀಕರುಗಳಿಂದ ನನಗೆ ಬಹಳ ತೊಂದರೆಯಾಗಿದೆ. ನಿಮ್ಮ ಲಾಲ್‌ಬಾಗ್ ಗೇಟನ್ನಾದರೂ ತೆಗೆಸಿಕೊಡಿ, ಇಲ್ಲದಿದ್ದರೆ ನಾನು ಓದುವುದು ಸಾಧ್ಯವಿಲ್ಲ. ಪರೀಕ್ಷೆ ಪಾಸು ಮಾಡದಿದ್ದರೆ ಮುಂದಿನ ನನ್ನ ಜೀವನಕ್ಕೇ ತೊಂದರೆಯಾಗುತ್ತದೆ. ಕಿಟಕಿ ಬಾಗಿಲು ಹಾಕಿಕೊಂಡು ಕಿವಿಗೆ ಹತ್ತಿ ಇಟ್ಟುಕೊಂಡರೂ ಓದುವುದು ಕಷ್ಟವಾಗಿದೆಯೆಂದು ಆತ ತನ್ನ ಕಷ್ಟವನ್ನ ತಿಳಿಸಿದ. ಈ ಹೊತ್ತಿನ ದಿವಸ ಎಲ್ಲಿ ನೋಡಲಿ, ಸಿನಿಮಾಗಳು, ಹೋಟೇಲುಗಳು ಹೆಚ್ಚಾಗಿ ಬೆಳಿಗ್ಗೆ ಇನ್ನೂ ಐದು ಗಂಟೆಯಾಗಿರುವುದಿಲ್ಲ, ಹಾಸಿಗೆಯಿಂದ ಜನ ಎದ್ದಿರುವುದಿಲ್ಲ ಆಗಲೇ ಈ ಡೆಡ್ ಮ್ಯೂಸಿಕ್ ಷುರು ಆಗಿರುತ್ತದೆ. ಇದರಿಂದ ಅನೇಕರು ತೊಂದರೆ ಅನುಭವಿಸಿದ್ದಾರೆ. ಇದಷ್ಟೇ ಅಲ್ಲದೆ ಇನ್ನೂ ಅನೇಕ ವಿಧವಾಗಿ ಗ್ರಾಮಾಫೋನ್ ರಿಕಾರ್ಡುಗಳನ್ನು ಹಾಕುವುದು, ಅನೇಕ ವಿಧವಾದ ಶಬ್ದಗಳನ್ನು ಮಾಡುವುದು ಇವೆಲ್ಲ ನಡೆಯುತ್ತಿವೆ. ಇವುಗಳನ್ನು ಹತೋಟಿ ಮಾಡಿ ಕಡಿಮೆ ಮಾಡದೇಯಿದ್ದರೆ, ದೊಡ್ಡ ದೊಡ್ಡ ನಗರಗಳಲ್ಲಿ ಸಾರ್ವಜನಿಕರು ವಾಸ ಮಾಡುವುದೇ ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದ್ದೇವೆ. ಇದಕ್ಕೆ ಸಾರ್ವಜನಿಕ ಮನ್ನಣೆಯಿದೆಯೆಂದು ನಂಬಿದ್ದೇನೆ.

* * *

# ಮೈಸೂರು ಪೋಲೀಸ್ ತಿದ್ದುಪಡಿ ಮುಂದುವರಿಕೆ

## 1, ಏಪ್ರಿಲ್ 1953

**ಶ್ರೀ ಎಚ್. ಸಿದ್ದವೀರಪ್ಪ** : ಸ್ವಾಮಿ, ನಿನ್ನೆಯ ದಿವಸ ತಮ್ಮ ಅಪ್ಪಣೆಯ ಮೇರೆಗೆ ಈ ಪೋಲೀಸ್ ತಿದ್ದುಪಡಿ ಮಸೂದೆಯನ್ನು ಈ ದಿವಸಕ್ಕೆ ಮುಂದೆ ಹಾಕಲಾಯಿತು. ನಿನ್ನೆಯ ದಿವಸ ಕೆಲವು ಮಾನ್ಯ ಸದಸ್ಯರು ಈ ಮಸೂದೆಯ ವಿಚಾರದಲ್ಲಿ ಮಾತನಾಡುತ್ತಾ ಇದರಲ್ಲಿರುವ ಕೆಲವು ಲೋಪಗಳನ್ನು ಸಭೆಯ ಗಮನಕ್ಕೆ ತಂದು ಇದರಲ್ಲಿ ಅವಶ್ಯಕವೆಂದು ಕಂಡು ಬಂದ ತಿದ್ದುಪಡಿಗಳನ್ನು ಮಾಡಬೇಕೆಂದು ಸೂಚಿಸಿದ ಮೇಲೆ ಶ್ರೀ ಪಟ್ಟಾಭಿರಾಮನ್, ಶ್ರೀ ಶ್ರೀನಿವಾಸ ಐಯ್ಯಂಗಾರ್ ಮತ್ತು ಶ್ರೀ ಶ್ರೀ ಭೀಮಪ್ಪ ನಾಯಕ್ ಇವರ ಸಲಹೆಗಳನ್ನು ಪಡೆದು ಕೆಲವು ವಿಷಯಗಳನ್ನಾಲೋಚನೆ ಮಾಡಿ, ಯಾವ ಯಾವ ತಿದ್ದುಪಡಿಗಳು ಅತ್ಯಾವಶ್ಯಕವೆಂದು ಕಂಡುಬಂದುವೋ ನಿನ್ನೆಯ ಚರ್ಚೆಯ ಪರಿಣಾಮವಾಗಿ ಅಥವಾ ಹೊರಪಡಿಸಿದ ಅಭಿಪ್ರಾಯಗಳಿಗನುಗುಣವಾಗಿ ಆ ಕೆಲವು ತಿದ್ದುಪಡಿಗಳನ್ನು ಸಭೆಯ ಮುಂದಿಟ್ಟಿದ್ದೇನೆ. ಅಲ್ಲದೆ ಹೊಸದಾಗಿ ಆಗಬೇಕಾದ ಒಂದು ತಿದ್ದುಪಡಿಯ ಅವಶ್ಯಕತೆ ಕಂಡು ಬಂದಿದ್ದರಿಂದ ಅದನ್ನೂ ಇಲ್ಲಿಯೇ ಸೇರಿಸಲಾಗಿದೆ. ಈ ಮೊದಲೇ ನಾನು 2ನೆಯ ಕ್ಲಾರಿಗೆ ತಿದ್ದುಪಡಿಯನ್ನು ಕೊಟ್ಟಿದ್ದೆ; ಈಗ ಅದು ಅನಾವಶ್ಯಕವಾಗುತ್ತದೆ. ಏಕೆಂದರೆ ಅದನ್ನೂ ಇಲ್ಲೇ ಸೇರಿಸಿ ಒಟ್ಟಾಗಿ ಕೊಟ್ಟಿದ್ದೇನೆ.

ಮುಖ್ಯವಾಗಿ ಈಗ ಮಾಡಿರತಕ್ಕ ಬದಲಾವಣೆಗಳಾವುವೆಂಬುದನ್ನು ಸೂಕ್ಷ್ಮವಾಗಿ ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಮಸೂದೆಯನ್ನು ನಿನ್ನೆಯ ದಿವಸ ಸಭೆಯ ಮುಂದೆ ಮಂಡಿಸಿದಂಥ ಕಾಲದಲ್ಲಿ ಕೆಲವು ಮಾನ್ಯ ಸದಸ್ಯರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆ ಅಭಿಪ್ರಾಯವೇನೆಂದರೆ ಸರ್ಕಾರದವರು ಈ ಬಿಲ್ಲನ್ನು ಸಾರ್ವತ್ರಿಕವಾಗಿ ಇಡೀ ಸಂಸ್ಥಾನದ ಎಲ್ಲ ಭಾಗಗಳಿಗೂ ಅನ್ವಯಿಸುವಂತೆ ಮಾಡಿದ್ದಾರೆ. ಇದರಿಂದ ಗ್ರಾಮಾಂತರ ಪ್ರದೇಶಗಳವರಿಗೆ ತೊಂದರೆಯಾಗಬಹುದು. ಆದರೆ ಈಗ ಪೋಲೀಸ್ ಆಕ್ಟ್ ಪ್ರಕಾರ ಅದರ ವ್ಯಾಪ್ತಿಯೇನಿದ್ದರೂ ಕೇವಲ ಪಟ್ಟಣ

ಪ್ರದೇಶಗಳಿಗೆ ಮಾತ್ರ ಅನ್ವಯವಾಗುತ್ತಿತ್ತು. ಅಂಥದನ್ನು ಈಗ ಇಡೀ ಸಂಸ್ಥಾನಕ್ಕೆ ಅನ್ವಯವಾಗುವಂತೆ ತಂದಿರುತ್ತೀರಿ. ಈ ಲೌಡ್ ಸ್ಪೀಕರಿನ ಒಂದು ನ್ಯೂಸನ್ಸ್ ಅಥವಾ ಹಾವಳಿ ಇನ್ನೂ ಹಳ್ಳಿಗಳಿಗೆ ಬಂದಿಲ್ಲ. ಇದರ ಅವಶ್ಯಕತೆಯೇನಿದ್ದರೂ ನಗರಗಳಿಗೂ ಮತ್ತು ದೊಡ್ಡ ದೊಡ್ಡ ಪಟ್ಟಣಗಳಿಗೂ ಇರಬಹುದು. ಅದಕ್ಕೋಸ್ಕರವಾಗಿ ಈ ಬಿಲ್ಲನ್ನು ಇಡೀ ಸಂಸ್ಥಾನಕ್ಕೇ ಅನ್ವಯಿಸುವಂತೆ ಮಾಡಬೇಕಾಗಿಲ್ಲವೆಂದು ತಿಳಿಸಿದ್ದರು. ಆ ವಿಚಾರವನ್ನು ನಾನು ಗಮನದಲ್ಲಿಟ್ಟುಕೊಂಡಿದ್ದು ಈ ಬಗ್ಗೆ ನಾನೇ ಒಂದು ತಿದ್ದುಪಡಿಯನ್ನು ತಂದು ಇದನ್ನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡಿದ್ದೇನೆ. ಈಗ ಈ ಮಸೂದೆ ಮೈಸೂರು, ಬೆಂಗಳೂರು ಮತ್ತು ಎಲ್ಲ ಜಿಲ್ಲಾ ಕಸಬಾಗಳಿಗೂ ಮತ್ತು ತಾಲ್ಲೂಕು ಕಸಬೆಗಳಿಗೂ ಅನ್ವಯವಾಗುವ ಹಾಗೆ ಮಾತ್ರ ಮಾಡಿದೆ. ಅನಂತರ ಹಾಗೆ ಅನ್ವಯ ಮಾಡಿರತಕ್ಕ ಸ್ಥಳಗಳ ಜೊತೆಗೆ ದಾವಣಗೆರೆ, ಕೆ.ಜಿ.ಎಫ್ ಮತ್ತು ಭದ್ರಾವತಿ – ಈ ಮೂರು ಸ್ಥಳಗಳಲ್ಲಿಯೂ ಸಹ ಈ ಆಕ್ಟ್ ಕೂಡಲೇ ಜಾರಿಗೆ ಬರತಕ್ಕದೆಂದು ಮಾಡಲಾಗಿದೆ. ಮತ್ತು ಹೀಗೆ ಆಜ್ಞೆ ಮಾಡಿರುವುದರ ಜೊತೆಗೆ ಸರ್ಕಾರದವರು ಅಗತ್ಯ ತೋರಿಬಂದಾಗ ಈ ಕಾನೂನನ್ನು ಇತರ ಸ್ಥಳಗಳಿಗೂ ಸಹ ಅನ್ವಯ ಮಾಡತಕ್ಕಂಥ ಒಂದು ಅಧಿಕಾರವನ್ನು ತಮ್ಮ ಕೈಲಿಟ್ಟುಕೊಂಡಿರುವುದಕ್ಕೆ ಒಂದು ಅವಕಾಶವಿರಬೇಕೆಂದು ಉದ್ದೇಶಿಸಲಾಗಿದೆ. ಹಾಗೆ ಒಂದು ಅಧಿಕಾರವನ್ನು ಚಲಾಯಿಸತಕ್ಕ ಅವಕಾಶ ಸರ್ಕಾರದವರ ಕೈಲಿದ್ದರೆ ಅಗತ್ಯಬಿದ್ದಾಗ ಒಂದು ನೋಟಿಫಿಕೇಷನ್ನನ್ನು ಹೊರಡಿಸುವುದರ ಮೂಲಕ ಎಲ್ಲಿ ಅಂಥ ಅನಾನುಕೂಲಗಳು ಜರುಗುತ್ತವೆಯೋ ಅಂಥ ಸ್ಥಳಗಳಿಗೆ ಇದನ್ನು ಉಪಯೋಗಿಸಿ, ಅಲ್ಲಿಯ ಜನರಿಗೆ ಒಂದು ಅನುಕೂಲ ನೀಡಲು ಅವಕಾಶವಾಗತಕ್ಕ ರೀತಿಯಲ್ಲಿ ನಾನು ಬದಲಾವಣೆ ಮಾಡಿ ತಂದಿದ್ದೇನೆ.

ಈಗ ನಮ್ಮ ಮುಂದೆ ಇರತಕ್ಕ ಬಿಲ್ಲಿನಲ್ಲಿರುವ ಕ್ಲಾಜು (2) ರಲ್ಲಿ ಈ ಸೆಕ್ಷನ್ 33 (ಎ)ಗೆ ಕೊಟ್ಟಿರತಕ್ಕ ತಿದ್ದುಪಡಿ ಯಾವ ರೀತಿಯಿರುತ್ತದೆಯೆಂದರೆ –

"disturbance, discomfort or injury or risk of annoyance." ಎಂದು ಇದೆ.

ಇನ್ನು Clause (ii) in sub-section (1) of Section 38 (A) for the word 'risk' ಎಂದು ಹೇಳಿರುವ ಆ ಶಬ್ದ ಅಷ್ಟು ಚೆನ್ನಾಗಿ ಕಿವಿಗೆ ಕೇಳಿಸುವುದಿಲ್ಲವೆಂದು ಹೇಳಿ ಈಗ ಈ ಪದಕ್ಕೆ ಬದಲಾಗಿ ಕಾನೂನಿಗೆ ಅನುಗುಣವಾಗಿರತಕ್ಕಂಥ ಮತ್ತೊಂದು ಪದವನ್ನು ಉಪಯೋಗಿಸಲಾಗಿದೆ. ಅದು ಯಾವುದೆಂದರೆ 'likelihood' ಎಂಬ ಶಬ್ದವನ್ನು ಸೇರಿಸಬೇಕೆಂದು ಒಂದು ತಿದ್ದುಪಡಿಯನ್ನು ಸೂಚಿಸಿರುತ್ತೇನೆ –

ಒಂದು ಲೀಗಲ್ ಫ್ರೇಜಿಯಾಲಜಿಗೆ ಅನುಸಾರವಾಗಿರಲೆಂದು ಈಗ ಈ 'Likelihood' ಎಂಬ ಪದವನ್ನು ಸೇರಿಸಿದೆ. ಬೊಂಬಾಯಿನ ಆಕ್ಟಿನಲ್ಲಿ ಆ ಶಬ್ದವಿತ್ತು. ಆದಕಾರಣ ಈಗ ಈ 'risk' ಎಂಬ ಶಬ್ದವನ್ನು ತೆಗೆದುಹಾಕಿ 'Likelihood' ಎಂಬ ಪದವನ್ನು ಸೇರಿಸಿದೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ಅಂಶವನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಅದೇನೆಂದರೆ, ನಮ್ಮ ಕಾನೂನನ್ನೂ ಸಹ ಈಗಾಗಲೇ ಬೊಂಬಾಯಿ ಮತ್ತು ಮದ್ರಾಸು ಪ್ರಾಂತ್ಯಗಳಲ್ಲಿ ಹೇಗೆ ಅನೇಕ ವರ್ಷಗಳಿಂದ ಜಾರಿಗೆ ತಂದಿರತಕ್ಕ ಕಾನೂನಿರುತ್ತದೆಯೋ ಅದೇ ರೀತಿಯಲ್ಲಿ ಇರುವಂತೆ ಮಾಡುವುದು ಒಳ್ಳೆಯದು. ಏತಕ್ಕೆಂದರೆ ಅಲ್ಲಿ ಈ ಕಾನೂನು ಒಳ್ಳೆಯದು. ಏತಕ್ಕೆಂದರೆ ಅಲ್ಲಿ ಈ ಕಾನೂನು ಅನೇಕ ವರ್ಷಗಳಿಂದ ಜಾರಿಯಲ್ಲಿರುವುದರಿಂದ ಅಲ್ಲಿ ಅನೇಕ ಕೇಸುಗಳು ನಡೆದು ಹೈಕೋರ್ಟಿನವರೆಗೂ ಹೋಗಿ ಅಲ್ಲಿ ತೀರ್ಮಾನವಾಗಿರುತ್ತದೆ. ಆ ಡಿಸಿಷನ್‌ಗಳಿಂದ ನಮಗೆ ಬಹಳ ಅನುಕೂಲವಿದೆ. ಅದಕ್ಕೋಸ್ಕರವಾಗಿ ಈ ಪದವನ್ನು ಬದಲಾವಣೆ ಮಾಡಲಾಗಿದೆ.

ಇನ್ನು ಮಾನ್ಯ ಶ್ರೀ ಕೆ. ಪಟ್ಟಾಭಿರಾಮನ್‌ರವರು ಒಂದು ವಿಚಾರವನ್ನು ಬದಲಾವಣೆ ಮಾಡಬೇಕೆಂದು ಹೇಳಿದ್ದರು. ಅದಕ್ಕನುಸಾರವಾಗಿ ಹಾಗೆ ಬದಲಾವಣೆ ಮಾಡುವುದೇ ಉತ್ತಮವಾದುದೆಂದು ನನಗೂ ಹೊಳೆಯಿತು. ಅದಕ್ಕಾಗಿಯೇ ನಾನೇ ತಿದ್ದುಪಡಿಯನ್ನು ಸೂಚಿಸಿರುತ್ತೇನೆ. ಇದಕ್ಕನುಸಾರವಾಗಿ ಸೇವಿಂಗ್ ಕ್ಲಾಜನ್ನು ಬದಲಾವಣೆ ಮಾಡಲಾಗಿದೆ. ಹೀಗೆ ನಾನು ಏನೊಂದು ಬದಲಾವಣೆ ಮಾಡಿದ್ದೇನೋ ಅದಕ್ಕನುಸಾರವಾಗಿ ಮುಂದಕ್ಕೆ ಏನೇನು ಕಾನ್‌ಸಿಕ್ವೇನ್ಸಿಯಲ್ ಬದಲಾವಣೆಗಳಾಗಬೇಕೋ ಅವುಗಳನ್ನು ಮಾತ್ರ ಬದಲಾವಣೆ ಮಾಡಲಾಗಿವೆ.

ಇನ್ನು ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಕ್ಲಾಜ್ (4) ರ ಪ್ರಕಾರ ಆಗಬಾರದ ಅನಾಹುತಗಳಾಗಬಹುದು. ಇದನ್ನು ಸರಿಪಡಿಸಬೇಕೆಂದು ಹೇಳಿದ್ದರು. ಪ್ರತಿದಿನ ರಾತ್ರಿ 10 ಗಂಟೆಯಾದ ಮೇಲೆ ಬೆಳಗಾಗುವ ತನಕ ಎಂದರೆ ಬೆಳಗಿನ 6 ಗಂಟೆಯವರೆಗೂ ಸುಖವಾಗಿ ಎಲ್ಲರೂ ನಿದ್ರೆ ಮಾಡಲು ಒಂದು ಸದವಕಾಶ ಬೇಕು. ಇದು ಪ್ರತಿಯೊಬ್ಬರಿಗೂ ಇರತಕ್ಕಂಥ ಒಂದು ದೈವದತ್ತವಾದ ಹಕ್ಕು. ಒಂದು ದಿವಸ ರಾತ್ರಿ ಶ್ರೀ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರಿಗೆ 2 ಗಂಟೆಯವರೆಗೂ ನಿದ್ರೆಗೆ ಅವಕಾಶವಿಲ್ಲದಂತೆ ತೊಂದರೆಯಾದಾಗ ಅವರಿಗೆ ಇದರ ಅಗತ್ಯವೆಷ್ಟಿರುತ್ತೆಂಬುದು ಗೊತ್ತಾಗುತ್ತದೆ. ಇಂಥ ಒಂದು ವಿರಾಮ ಫುಲ್ ರೆಸ್ಟ್ ಪ್ರತಿಯೊಬ್ಬರಿಗೂ ಇರಲೇಬೇಕಾದ್ದು ಅತ್ಯಗತ್ಯ. ಪ್ರತಿಯೊಬ್ಬರಿಗೂ ಯಾವ ತೊಂದರೆಯೂ ಇಲ್ಲದಂತೆ ಸುಖವಾಗಿ ನಿದ್ರೆ ಮಾಡತಕ್ಕಂಥ ಒಂದು ಅವಕಾಶ ಕಲ್ಪಿಸಿಕೊಡಬೇಕಾದದ್ದು ತೀರ ಅವಶ್ಯಕ. ಇಂಥ ಸಂದರ್ಭಗಳಲ್ಲಿ ಒಂದು ಲೈಸನ್ಸ್ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲದಿದ್ದರೆ ಯಾರು ಬೇಕಾದರೂ ಎಷ್ಟು ಹೊತ್ತಾದರೂ ಹೀಗೆ ಒಂದು ನ್ಯೂಸೆನ್ಸ್

ಮಾಡಲು ಮತ್ತು ತನ್ಮೂಲಕ ಜನರಿಗೆ ನಿದ್ರಾಭಂಗವಾಗಲು ಅವಕಾಶವಾಗುತ್ತದೆ. ಆದರೆ ಈ ಲೈಸೆನ್ಸ್ ಪಡೆಯತಕ್ಕ ಸಂದರ್ಭ ರಾತ್ರಿಹೊತ್ತಿಗೆ ಅನ್ವಯಿಸುತ್ತದೆಯೇ ಹೊರತು ಮಿಕ್ಕ ಎಲ್ಲ ಸಂದರ್ಭಗಳಲ್ಲಿಯೂ ಇದರ ಅವಶ್ಯಕತೆ ಇರುವುದಿಲ್ಲ. ಇನ್ನು ಈ ಲೈಸೆನ್ಸ್ ಕೊಡುವ ವಿಚಾರದಲ್ಲಿ ಆ 56ನೆಯ ಸೆಕ್ಷನ್ನಿನಲ್ಲಿ ಅನೇಕ ಕ್ಲಾಜುಗಳಿವೆ. ಅವುಗಳನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಬಹಳ ದೀರ್ಘಾಲೋಚನೆ ಮಾಡಿ ತಂದಿದ್ದೇನೆ. ಸಿನಿಮಾ ಇತ್ಯಾದಿಗಳ ಒಳಗಡೆ ಅವರು ಬೇಕಾದಷ್ಟು ಶಬ್ದ ಮಾಡಿಕೊಳ್ಳಲಿ – ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಆ ಶಬ್ದ ಮಾತ್ರ ಈಚೆಗೆ ಬರಬಾರದು. ಅವರು ಸೌಂಡ್ ಫ್ರೂಫ್ ಇತ್ಯಾದಿಗಳನ್ನು ಹಾಕಿಕೊಂಡು ಇದನ್ನು ಆ ರೀತಿ ಮಾಡಿಕೊಳ್ಳಲು ಅವಕಾಶವಿದೆಯೆಂಬ ಇತ್ಯಾದಿ ಅನೇಕ ವಿಚಾರಗಳನ್ನೆಲ್ಲಾ ಬಹಳ ದೀರ್ಘವಾಗಿ ಆಲೋಚಿಸಿ, ಇದರ ಸಾಧಕ ಬಾಧಕಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿಕೊಂಡೇ ಇದನ್ನು ತಂದಿದ್ದೇನೆ.

**ಶ್ರೀ ಬಿ ರಾಚಯ್ಯ (ಯಳಂದೂರು) :** ಇದು ಟೂರಿಂಗ್ ಟಾಕೀಸ್‌ಗಳಿಗೂ ಅನ್ವಯಿಸುತ್ತದೆಯೇ?

**ಶ್ರೀ ಎಚ್. ಸಿದ್ದವೀರಪ್ಪ :** ಈಗ ಇದರ ವ್ಯಾಪ್ತಿಯನ್ನು ಎಲ್ಲ ತಾಲ್ಲೂಕುಗಳಿಗೂ, ನಗರಗಳಿಗೂ ಇಡಲಾಗಿದೆ. ಈಗ ಇದರ ಸಾಧಕ ಬಾಧಕಗಳನ್ನು ಇಲ್ಲಿ ನೋಡಿಕೊಂಡು, ಆನಂತರ ಇದನ್ನು ಹಳ್ಳಿಗಳಿಗೂ ಜಾರಿಗೆ ಕೊಡತಕ್ಕದ್ದನ್ನು ಆಲೋಚನೆ ಮಾಡಲಾಗುತ್ತದೆ. ಆದರೆ ಈ ಮಸೂದೆ ಮೇಲೆ ಇಷ್ಟೊಂದು ಭ್ರಮಣೆಯಾಗತಕ್ಕ ರೀತಿಯಲ್ಲಿ ಚರ್ಚೆಗಳಾಗುತ್ತವೆಂದು ನಾನು ತಿಳಿದಿರಲಿಲ್ಲ. ಆದರೆ ಈಗ ಈ ಕಾನೂನಿನ ವ್ಯಾಪ್ತಿ ಪ್ರತಿಯೊಂದು ಜಿಲ್ಲಾ ಕಸಬೆಗಳಿಗೂ ಮತ್ತು ತಾಲ್ಲೂಕು ಕಸಬೆಗಳಿಗೂ ಅನ್ವಯಿಸುವಂತೆ ಮಾಡಿರುವುದರಿಂದ ಟೂರಿಂಗ್ ಟಾಕೀಸ್‌ಗಳಾಗಲೀ ಅಥವಾ ಮತ್ತೆ ಯಾವುದೇ ಆಗಲಿ, ಅವುಗಳಿಗೆಲ್ಲಕ್ಕೂ ಈ ಕಾನೂನು ಅನ್ವಯವಾಗುತ್ತದೆ. ಆದರೆ ಎಲ್ಲಿ ಮುನಿಸಿಪಲ್ ಏರಿಯಾ ಆಗಿರುವುದಿಲ್ಲವೋ ಅಂಥ ಪ್ರಾದೇಶಿಕ ಟೂರಿಂಗ್ ಟಾಕೀಸುಗಳು ಹೋದರೆ ಆಗ ಅವುಗಳಿಗೆ ಅಲ್ಲಿ ಈ ಕಾನೂನನ್ನು ಅನ್ವಯಿಸುವಂತೆ ಮಾಡುವುದಕ್ಕಾಗುವುದಿಲ್ಲ. ಆದರೆ ಈಗ ನಾನಾಗಲೇ ತಿಳಿಸಿರುವ ಪ್ರಕಾರ ಇದನ್ನು ಕೇವಲ ನಗರ ಪ್ರದೇಶಗಳಿಗೂ ಮತ್ತು ಕೆಲವು ದೊಡ್ಡ ದೊಡ್ಡ ಪಟ್ಟಣಗಳಿಗೂ ಅನ್ವಯಿಸುವಂತೆ ಮಾಡಲು ಕೆಲವು ಮೂಲಭೂತ ಬದಲಾವಣೆಗಳನ್ನೂ ಮತ್ತು ಅಂಥ ಮೂಲಭೂತ ಬದಲಾವಣೆಗಳಿಗನುಸಾರವಾಗಿ ಮಾಡತಕ್ಕ ಕಾನ್‌ಸಿಕ್ವೇನ್ಷಿಯಲ್ ಆದ ಚಿಕ್ಕ ಪುಟ್ಟ ಬದಲಾವಣೆಗಳನ್ನು ಮಾಡಿ, ಈ ಮಾನ್ಯ ಸಭೆಯವರು ಅಂಗೀಕರಿಸಲು ಯೋಗ್ಯವಾಗಿರುವಂತೆ ಇದನ್ನು ತಯಾರಿಸಿ ತಂದಿರಲಾಗಿರುತ್ತದೆ. ಆದುದರಿಂದ ಸರ್ವರೂ ಇದಕ್ಕೆ ಸರ್ವಾನುಮತದಿಂದ ಅಂಗೀಕಾರ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಶ್ರೀ ಎಚ್. ಸಿದ್ದವೀರಪ್ಪ :** ಶ್ರೀ ಪಾಪಣ್ಣನವರು ಕೈಗಾರಿಕೆ ಮತ್ತು ವ್ಯವಸಾಯ ನಮ್ಮ ದೇಶದಲ್ಲಿ ಎಷ್ಟು ತ್ವರಿತವಾಗಿ ಮುಂದುವರಿಯಬೇಕು ಮತ್ತು ಉದ್ಧಾರವಾಗಬೇಕು ಎಂಬ ಆಶೆಯನ್ನಿಟ್ಟುಕೊಂಡಿರುತ್ತಾರೆಯೋ ಅಷ್ಟು ಮಟ್ಟಿಗೆ ಮುಂದುವರಿಯದೇ ಇರುವುದರಿಂದ ಅವರ ಮನಸ್ಸಿನಲ್ಲಿದ್ದ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. ಅವರು ಕೈಗಾರಿಕೆಯ ವಿಚಾರದಲ್ಲಿ ಪೂರ್ಣ ಅನುಭವವನ್ನೇನೋ ಪಡೆದಿದ್ದಾರೆ. ವ್ಯವಸಾಯವನ್ನೇ ಅವಲಂಭಿಸಿಕೊಂಡಿರತಕ್ಕ ರೈತರು ಕೈಗಾರಿಕೆಯಲ್ಲಿ ಹೇಗೆ ಮುಂದುವರಿಯಬೇಕೆಂಬ ವಿಚಾರದಲ್ಲಿ ಉಪಯುಕ್ತ ಸಲಹೆಗಳನ್ನು ಕೊಟ್ಟಿರುತ್ತಾರೆ. ಖಾಸಗೀ ಜನರು ಕೈಗಾರಿಕೋದ್ಯಮದಲ್ಲಿ ತೊಡಗಬೇಕು, ಅದರಲ್ಲಿ ಎಡರುತೊಡರುಗಳು ಬಂದರೆ ಸರ್ಕಾರದವರು ಅದಕ್ಕೆ ನೆರವಾಗಬೇಕು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಕೈಗಾರಿಕಾ ಪ್ರಗತಿಯನ್ನು ಮೈಸೂರು ಸಂಸ್ಥಾನಕ್ಕಾಗಿ ಬೇರೆಯಾಗಿ Isolate ಮಾಡಿ ಇಡಲು ಸಾಧ್ಯವಾಗುವುದಿಲ್ಲ. ಈ ಪ್ರಗತಿ ಇಡೀ ಪ್ರಪಂಚದ ರೀತಿ ನೀತಿಯ ಮೇಲೆ ಅವಲಂಬಿಸಿದೆ ಎಂಬುದನ್ನೂ, ಕೈಗಾರಿಕಾ ಪ್ರಗತಿಗೂ moral force ಗೂ ನಿಕಟ ಸಂಬಂಧವಿದೆಯೆಂಬುದನ್ನೂ ನಾನು ಆ ಮಾನ್ಯ ಸದಸ್ಯರಿಗೆ ಒತ್ತಿ ಹೇಳಬೇಕಾಗಿಲ್ಲ. ಇದು ಹೇಗೆ moral force ಮೇಲೆ ಅವಲಂಬನೆಯಾಗಿದೆಯೆಂಬುದನ್ನು ನಾನು ಇಟಲಿಗೆ ಹೋಗಿದ್ದಾಗ ಅಲ್ಲಿ ನೋಡಿದೆ.

ಇಟಲಿ ದೇಶ sericulture ವಿಚಾರದಲ್ಲಿ ಬಹಳ ಮುಂದುವರಿದಿದೆ. ಅಲ್ಲಿ 600 ಲೂಮುಗಳು ಕೆಲಸ ಮಾಡುತ್ತಿರುವ ಒಂದು ಫ್ಯಾಕ್ಟರಿಯನ್ನು ನೋಡಿದೆ. ಅದು ಕೆಲಸ ಮಾಡದೆ ಮುಚ್ಚಲ್ಪಟ್ಟಿದ್ದು ಅದನ್ನು ಬೇರೊಂದು ಫ್ಯಾಕ್ಟರಿಯನ್ನಾಗಿ ಪರಿವರ್ತನೆಗೊಳಿಸುವ ಕಾರ್ಯ ನಡೆಯುತ್ತಿತ್ತು. ಏಕೆ ಹೀಗಾಯಿತೆಂದು ನಾನು ಅವರನ್ನು ಪ್ರಶ್ನಿಸಿದಾಗ ಅವರು ಹೇಳಿದರು, ಪ್ರಪಂಚದಲ್ಲಿಯೇ ಇದಕ್ಕೆ slump ಬಂದಿರುವುದರಿಂದ, ಈ ಕೈಗಾರಿಕೆಗೆ ತೊಂದರೆ ಉಂಟಾಗಿದೆ. ಮೊದಲು ಇಂಡಿಯಾಕ್ಕೆ export ಮಾಡುತ್ತಿದ್ದುದು ಈಗ ನಿಂತುಹೋಗಿರುವುದರಿಂದ ಹೀಗಾಗಿ ಇದನ್ನು ಮುಚ್ಚಿದೆಯೆಂದು ತಿಳಿಯಿತು. ಈ ಕೈಗಾರಿಕೆಯ ಪ್ರಗತಿಗೆ ಬಂದಿರುವ ಕಷ್ಟವೇನೆಂದರೆ, ಆರ್ಟಿಫಿಷಿಯಲ್ ಸಿಲ್ಕ್, ರೇಯಾನ್ ಸಿಲ್ಕ್ ಎಂಬುದು ಬಂದು, ಇದು ಜನರ ಕಣ್ಣಿಗೆ ಥಳಕ್ಕಾಗಿ ಕಾಣುವುದರಿಂದ, ಅಗ್ಗವಾಗಿ ಸಿಕ್ಕುವುದರಿಂದ ರೇಷ್ಮೆ ಕೈಗಾರಿಕೆಯಲ್ಲಿ ನಿರತರಾಗಿರುವ ಮಧ್ಯಮ ತರಗತಿಯವರಿಗೆ ತೊಂದರೆಯುಂಟಾಗಿದೆ. ಹೀಗಾಗಿ ಇದು ಖರ್ಚಾಗದೆ ನಿಂತಿದೆ. ಸೆಂಟ್ರಲ್ ಸಿಲ್ಕ್ ಬೋರ್ಡ್‌ನ ಪ್ರತಿಯೊಂದು ಮೀಟಿಂಗಿನಲ್ಲಿಯೂ ಸದಸ್ಯರು ಈ ಸಮಸ್ಯೆಯನ್ನು ಹೇಗೆ ಬಿಡಿಸಬೇಕೆಂಬುದನ್ನು ಯೋಚಿಸುತ್ತಿದ್ದಾರೆ. ಇಂಡಿಯಾ ದೇಶದಲ್ಲಿ ಈ ಆರ್ಟಿಫಿಷಿಯಲ್ ಸಿಲ್ಕ್ ತಯಾರು



WD-H-035-22

ಮಾಡತಕ್ಕ ಅನೇಕ ಕಂಪನಿಗಳು ಸ್ಥಾಪಿತವಾಗಿವೆ. ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಮತ್ತು ಟ್ಯಾರಿಫ್ ಬೋರ್ಡಿನವರು ಮುಂದೆ ಯಾವ ರೀತಿ ಮಾಡಬೇಕೆಂಬ ಬಗ್ಗೆ ಯೋಚಿಸುತ್ತಿದ್ದಾರೆ. ಅಲ್ಲದೆ ಈ ಕೈಗಾರಿಕೆ ಮತ್ತು ವಾಣಿಜ್ಯ ವಿಚಾರವನ್ನು ಚೆನ್ನಾಗಿ ಅರಿತಿರುವ ಶ್ರೀ ಕರ್ಮರ್‌ಕರ್‌ರವರ ಸಾಹಸದಿಂದ ಏನೇ ಎಡರುತೊಡರುಗಳು ಬಂದರೂ ಈ ಉದ್ಯಮ ಇನ್ನೂ ತಲೆಯೆತ್ತಿಕೊಂಡಿದೆ ಎಂಬುದನ್ನು ಯಾರೂ ಮರೆಯಬಾರದು.

ಈ ವಿಚಾರದಲ್ಲಿ ಅಂದರೆ ಈ ಕೈಗಾರಿಕಾಭಿವೃದ್ಧಿ ವಿಚಾರದಲ್ಲಿ ಇದು ಕೇಂದ್ರ ಸರ್ಕಾರದ ಸಹಾಯದಿಂದಲೇ ನಡೆಯಬೇಕೆಂಬುದನ್ನು ನಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು.

**ಒಬ್ಬ ಸದಸ್ಯರು** : ಈಗ್ಗೆ ಎರಡು ವರ್ಷಗಳಿಂದ ಈ ಉದ್ಯಮದ ಪ್ರಗತಿಸಾಧನೆಗೆ ನಮ್ಮ ಸರ್ಕಾರ ಏನು ಮಾಡಿದೆ?

**ಶ್ರೀ ಎಚ್. ಸಿದ್ದವೀರಪ್ಪ** : ಹೇಳುತ್ತೇನೆ, ನಮ್ಮ ಸರ್ಕಾರದವರು ಈ ವಿಚಾರದಲ್ಲಿ ಎರಡು ವರ್ಷಗಳ ಕಾಲದಿಂದ research ವಿಚಾರದಲ್ಲಿ ಮುಂದುವರಿದಿದ್ದಾರೆ. ಅಲ್ಲದೆ ಬಿಳಿಗಿರಿರಂಗನಬೆಟ್ಟದ ಹತ್ತಿರ ಕೃಷ್ಣರಾಜೇಂದ್ರ ಮಿಲ್‌ನಲ್ಲಿ ಈ ಬಗ್ಗೆ ಕೆಲಸ ಎಷ್ಟು ಮಟ್ಟಿಗೆ ನಡೆದಿದೆಯೆಂಬುದು ತಮಗೆಲ್ಲಾ ವೇದ್ಯವಾಗಿದೆ. ದೇಶದಲ್ಲಿ mulberry cultivation ಹೆಚ್ಚಿಸಲು ಸರ್ಕಾರದವರು ಈ ಎರಡು ವರ್ಷಗಳಿಂದ ಎಷ್ಟೊಂದು ಕಾರ್ಯಕ್ರಮವನ್ನು ಕೈಗೊಂಡಿದ್ದಾರೆಂಬುದನ್ನು ಬಡ್ಜೆಟ್ಟನ್ನು ಪರಾಂಬರಿಸಿದರೆ ಕಾರ್ಯವಾಗಿದೆಯೇ ಅಥವಾ ಇಲ್ಲವೇ ಎಂಬುದು ಗೊತ್ತಾಗುತ್ತದೆ. ಇದರ ಪ್ರಕಾರ mulberry cultivation ಗಾಗಿ 1950–51ರಲ್ಲಿ 90,500; 1951–52ರಲ್ಲಿ 1,05,000 ಎಕರೆಗಳು; 1952–53ರಲ್ಲಿ 1,05,000 ಎಕರೆಗಳು. ಹೀಗಿರುವುದು ನೋಡಿದರೆ progress ಆಗದೆ ಇದ್ದರೂ ಈಗಿರುವ slumpನಲ್ಲಿ ಸಹ retard ಆಗದೇ ಇರುವುದು ಒಂದು ವಿಧದಲ್ಲಿ ಪ್ರೋಗ್ರೆಸ್ ಆಗಿದೆಯೆಂದೇ ತಿಳಿಯಬಹುದಾಗಿದೆ. ಅಲ್ಲದೆ ರೇಷ್ಮೆ ಉತ್ಪನ್ನದಲ್ಲಿಯೂ ಸಹ 1950–51 ರಲ್ಲಿ 11 ಲಕ್ಷ ಪೌಂಡುಗಳಷ್ಟಿದ್ದು, 1952–53 ರಲ್ಲಿ 15 ಲಕ್ಷ ಪೌಂಡುಗಳಷ್ಟಾಗಿದೆ.

**ಶ್ರೀ ಎಂ. ರಾಜಶೇಖರಮೂರ್ತಿ** : ಹಿಲ್ ಸ್ಟೇಷನ್ ಮೇಲೆ ಬಿಲ್ಡಿಂಗ್ ಆಗಿದೆಯೇ? ಈ ವಿಚಾರ ಹತ್ತಾರು ವರ್ಷಗಳಿಂದ ಹಾಗೆಯೇ ಇದೆ.

**ಶ್ರೀ. ಎಚ್. ಸಿದ್ದವೀರಪ್ಪ** : ಈ ವಿಚಾರದಲ್ಲಿ ಸ್ವಲ್ಪ ಮಟ್ಟಿಗೆ ನಿಧಾನವಾಗಿದೆಯೆಂಬುದನ್ನು ಒಪ್ಪಿಕೊಳ್ಳುವುದರಲ್ಲಿ ತಪ್ಪಿಲ್ಲ. In some cases there is avoidable delay ಎಂಬುದು ಸರ್ಕಾರದ ಗಮನಕ್ಕೆ ಬಂದು ಈ ವಿಚಾರದಲ್ಲಿ ಶೀಘ್ರವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿರುತ್ತೇನೆ.

**Mr. Speaker :** From 14 lakhs of pounds it has gone up to 15 lakhs of pounds, that is what you say?

**Sri H. Siddaveerappa: Yes,** ಹಿಲ್ ಸ್ಟೇಷನ್‌ನಲ್ಲಿ ಮನೆಗಳು ಆಗಿವೆಯೋ, ಇಲ್ಲವೋ ಎಂಬ ವಿಚಾರದಲ್ಲಿ ಮಾನ್ಯ ಮಿತ್ರರು ಪ್ರಸ್ತಾಪಿಸಿದರು. ಬಿಳಿಗಿರಿರಂಗನಬೆಟ್ಟದ ಮೇಲೆ ಈ ಬಗ್ಗೆ ಕಾರ್ಯಕ್ರಮವನ್ನು ಪೂರ್ತಿಯಾಗಿ ಕೈಗೊಂಡಿದೆ. ಕೆ.ಆರ್. ಹಿಲ್ಸ್‌ನಲ್ಲಿ ಮಂಜೂರು ಆಗಿ, ಆ ಬಗ್ಗೆ ಕಾರ್ಯಕ್ರಮ ತ್ವರಿತವಾಗಿ ನಡೆಯುತ್ತಿದೆ. ಆದಷ್ಟು ಜಾಗ್ರತೆ ಪೂರ್ತಿ ಮಾಡಬೇಕೆಂದಿದೆ. ಇನ್ನೊಂದು ಜಾಗವಿದೆ, ಅದು ಮೊದಲು ತೋಟಗಾರಿಕೆ ಇಲಾಖೆಗೆ ಸೇರಿತ್ತು. ಈಗ ಆ ಬಿಲ್ಡಿಂಗ್ ಆಗುವವರೆಗೆ ಈ ತೋಟಗಾರಿಕೆ ಇಲಾಖೆಗೆ ಸೇರಿದುದು ಉಪಯುಕ್ತವಾದ ಬಿಲ್ಡಿಂಗು, ಅದನ್ನು ತೆಗೆದುಕೊಳ್ಳಬೇಕೆಂದು ತಿಳಿಸಿರುತ್ತೇನೆ.

ಇನ್ನು Loans ಎಷ್ಟು ಇದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಪರಿಶೀಲಿಸುವುದೇ ಆದರೆ, 1950–51 ರಲ್ಲಿ 25 ಸಾವಿರ ಇದ್ದುದು ಪ್ರಕೃತ ಸಾಲಿನಲ್ಲಿ 50 ಸಾವಿರದವರೆಗೆ ಏರಿದೆ. ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡರೆ ಶೇಕಡ 40 ರಷ್ಟು total demand ಮಾತ್ರ meet ಮಾಡಲು ಸಾಧ್ಯವಾಗಿದೆ. ಈ ಅಂಶವನ್ನು ಹೇಳುವಾಗ ತಮ್ಮೆಲ್ಲರ ಮನಸ್ಸಿನಲ್ಲಿ ಒಂದು ಶಂಕೆ ಬಂದಿರಬಹುದೆಂದು ನನಗೆ ತೋರುತ್ತದೆ. ಇದೇನು ಈ ಬಗ್ಗೆ legislation ಇನ್ನೂ ಜಾರಿಗೆ ಬಂದಿಲ್ಲವಲ್ಲಾ, ಇದಕ್ಕೇನು ಕಾರಣ ಎಂದು. ನಾನು ತಮಗೆ ಡೇಟ್‌ವಾರಾಗಿ ಈ ಬಗ್ಗೆ ಯಾವ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದೆಯೆಂಬುದನ್ನು ಇದಕ್ಕೆ ಸಂಬಂಧಿಸಿದ legislation pass ಆದ ಮೇಲೆ ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಇಲಾಖೆಯಲ್ಲಿ ಎಲ್ಲಿ ನಿಧಾನವಾಗಿದೆಯೆಂದು ಕಂಡುಬಂದಿದೆಯೋ ಅಲ್ಲಿ ಇದನ್ನು ತ್ವರಿತಗೊಳಿಸಿ, ನೋಟಿಫಿಕೇಷನ್ ಸಹ issue ಮಾಡಿ, ಪುನಃ ಇದು ಸೆಲೆಕ್ಟ್ ಕಮಿಟಿ ಪರಿಶೀಲನೆಗೆ ಹೋಗಿ ಅಲ್ಲಿಗೆ ನಿಂತಿದೆ. ಈ ಸ್ಟೇಜ್‌ನಲ್ಲಿದೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ವಿಚಾರದಲ್ಲಿ ತಡವಾಗಿದೆಯೆಂದು ಒಪ್ಪಿಕೊಳ್ಳುವುದರಲ್ಲಿ ಅಭ್ಯಂತರವಿಲ್ಲ. ಆದರೆ ಇನ್ನೂ ಈ ರೀತಿ ತಡವಾಗುವುದಕ್ಕೆ ಅವಕಾಶ ಕೊಡದೆ ಆದಷ್ಟು ಜಾಗ್ರತೆ ಈ ವಿಚಾರದಲ್ಲಿ ಕಾರ್ಯಕ್ರಮ ಕೈಗೊಳ್ಳುತ್ತೇನೆಂದು ತಮಗೆ ಈ ಸಮಯದಲ್ಲಿ ಭರವಸೆ ಕೊಡುತ್ತೇನೆ.

ಶ್ರೀ ಪಾಪಣ್ಣನವರಿಗೆ ಅರಿಕೆ ಮಾಡುವುದು ಇಷ್ಟು : ಡಿಪಾರ್ಟ್‌ಮೆಂಟಿನವರು ಈ ವಿಚಾರದಲ್ಲಿ ಮನಃಪೂರ್ವಕವಾಗಿ ಕೆಲಸ ಮಾಡಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದಾರೆ, ಸರ್ಕಾರದವರಿಗೂ ಈ ವಿಚಾರದಲ್ಲಿ ನಿರ್ಲಕ್ಷ್ಯವಿಲ್ಲ, ಅವರಿಗೆ ಅಲಕ್ಷ್ಯ ಮಾಡಬೇಕೆಂಬ ಮನೋಭಾವ ಖಂಡಿತವಾಗಿಯೂ ಇಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ರಾಜಶೇಖರ ಮೂರ್ತಿಯವರು ರೇಷ್ಮೆ ಗೂಡಿನ ಧಾರಣೆ ಹೆಚ್ಚು ಹೆಚ್ಚಾಗುತ್ತಾ ಇರುವ ವಿಚಾರವನ್ನು ತಿಳಿಸಿದರು. ಇದನ್ನು ವಿಚಾರಿಸಿದ್ದೇನೆ. ಬಹುಶಃ demand and supply ಮೇಲೆ ನಿರೀಕ್ಷಣೆಗಿಂತ ಹೆಚ್ಚಾಗಿ ಬಂದಿರುವುದರಿಂದ ಹೀಗಾಗಿದೆ. ಇದನ್ನು ಸರಿಪಡಿಸಬೇಕು, ಈ ರೀತಿ unregulated ಆಗಿ ಬಿಡುವುದು ಸರಿಯಲ್ಲ ಎಂಬ ಅಂಶವನ್ನು ಸಂಬಂಧಪಟ್ಟ ಇಲಾಖೆಗೆ ತಿಳಿಸಿದ್ದೇನೆ. ಬಹುಶಃ ಈ ಸಂಬಂಧದ legislation ಬರುವ ವೇಳೆಗೆ ಇದು ಸರಿ ಹೋಗಬಹುದು.

ಶ್ರೀ ಬಿ.ಪಿ. ನಾಗರಾಜಮೂರ್ತಿಯವರು Regulated Market ವಿಚಾರ ಪ್ರಸ್ತಾಪಿಸಿದರು. ಈ ವಿಚಾರದಲ್ಲಿ cost of production ಆದಷ್ಟು ಕಡಿಮೆಮಾಡಿಕೊಳ್ಳುವುದಕ್ಕೆ ಏನು ಕಾರ್ಯಕ್ರಮ ಕೈಗೊಳ್ಳಬೇಕೆಂಬ ಬಗ್ಗೆ expert committee ಯೊಂದು ನೇಮಕವಾಗಿದೆ. ಅವರ ಸಲಹೆಗಳನ್ನು ಸರ್ಕಾರದವರು ಪರಿಶೀಲಿಸಿ, ಭಾರತದ ಇತರ ಭಾಗಗಳಲ್ಲಿ ಈ ಬಗ್ಗೆ ಯಾವ ರೀತಿಯ ವ್ಯವಸ್ಥೆಯಿದೆ ಎಂಬುದನ್ನು ಪರಿಶೀಲನೆಗೆ ತೆಗೆದುಕೊಂಡು ತೀರ್ಮಾನಕ್ಕೆ ಬರುತ್ತಾರೆ. ಈ ಬಗ್ಗೆ ಜಪಾನಿನಿಂದ ಮೋಟಾರು ತರಿಸಿ ಟಿ.ನರಸೀಪುರದಲ್ಲಿ ಸ್ಥಾಪಿಸಿದರೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಇಷ್ಟೇ ಅಲ್ಲದೆ Research Station ಬಲಪಡಿಸಬೇಕು. ಇಲ್ಲಿಯ ಕೆಲಸ ಕಾರ್ಯಗಳನ್ನು ಮತ್ತಷ್ಟು ಹುರುಪುಗೊಳಿಸಲು ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ಫಂಡ್ ಕೇಳಿರುತ್ತೇವೆ. ಬಹುಶಃ ಬರುವ ವರ್ಷ ಈ ಬಗ್ಗೆ ಹೆಚ್ಚಿನ ಕಾರ್ಯ ಸಾಧನೆ ಆಗಿರುತ್ತದೆಂದು ಹೇಳಿದರೆ ತಮ್ಮೆಲ್ಲರ ಮನಸ್ಸಿಗೆ ಒಪ್ಪಿಗೆ ಆದೀತು ಎಂದು ನಿರೀಕ್ಷಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

* * *

# ಕೈಗಾರಿಕೆಗಳಿಗೆ ಸರ್ಕಾರದ ಸಾಲ

## 29, ಮಾರ್ಚ್ 1954

ಶ್ರೀ ಎಚ್.ಸಿದ್ದವೀರಪ್ಪ : ಸ್ವಾಮಿ, ನಾನು ಕೈಗಾರಿಕೆಗಳ ಮೇಲೆ ಸಂಬಂಧಪಟ್ಟ ಸಾಲಗಳ ವಿಷಯದಲ್ಲಿ ಎತ್ತಿರತಕ್ಕ ಅಂಕಿ ಅಂಶಗಳ ವಿಚಾರವಾಗಿ ಮಾತ್ರ ಮಾತನಾಡಿ, ವ್ಯವಸಾಯ ಮತ್ತು ಬಾಕಿ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಸಾಲಗಳ ವಿಚಾರವಾಗಿ ಮಾತನಾಡುವುದಕ್ಕೆ ಸಾಕಾದಷ್ಟು ಕಾಲವನ್ನು ಮಾನ್ಯ ಸ್ನೇಹಿತರಿಗೆ ಬಿಡುತ್ತೇನೆ.

ಕೈಗಾರಿಕೆಗಳ ವಿಚಾರದಲ್ಲಿ ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್ಯರು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಹಿಂದೆ ಇದೇ ಅಧಿವೇಶನದಲ್ಲಿ ಮಾನ್ಯ ಸಭೆಯ ಮುಂದೆ ಶ್ರೀಮಾನ್ ಎಸ್. ಕರಿಯಪ್ಪನವರ ಪ್ರಶ್ನೆ ಬಂದಿದ್ದು ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಆ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತಂದಿದ್ದೇನೆ. ಕಳೆದ 5 ವರ್ಷಗಳಲ್ಲಿ ಯಾವ ಯಾವ ಖಾಸಗೀ ಕೈಗಾರಿಕೆಗಳವರಿಗೆ ಸರ್ಕಾರ ಸಾಲವನ್ನು ಕೊಟ್ಟಿದೆ, ಎಷ್ಟು ಸಾಲವನ್ನು ಕೊಟ್ಟಿದೆ; 1–3–1953ನೇ ತಾರೀಖಿನವರೆಗೆ ಅವರ ಅಸಲು ಎಷ್ಟಿದೆ, ಬಡ್ಡಿ ಮತ್ತು compound interest ಎಷ್ಟು ಬಾಕಿ ಇದೆ ಎಂಬ ಅಂಶಗಳನ್ನು ಒದಗಿಸಿದ್ದೇನೆ. ನನ್ನಲ್ಲಿರತಕ್ಕ ಅಂಕಿಅಂಶಗಳ ಪ್ರಕಾರ ಪುನಃ ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಏಕೆಂದರೆ, ಯಾವುದು ಕೊಟ್ಟಿದ್ದೇನೆ, ಯಾವುದು ಕೊಟ್ಟಿಲ್ಲ ಎಂಬುದು ಜ್ಞಾಪಕ ಇಲ್ಲದೇ ಇರುವುದರಿಂದ ಅಂಕಿ ಅಂಶಗಳನ್ನೂ ಮತ್ತೆ ಹೇಳುತ್ತೇನೆ – 70,95,000 ರೂಪಾಯಿ ಸಾಲಕೊಟ್ಟಿದೆ. ಈ ಸಂಸ್ಥೆಗಳಲ್ಲಿ ಇರತಕ್ಕ ಅಸಲು 29,54,000 ರೂಪಾಯಿ, ಬಡ್ಡಿ 1 ಲಕ್ಷ 37 ಸಾವಿರ ರೂಪಾಯಿ ಬರಬೇಕಾಗುತ್ತದೆ. ವಸೂಲಿ ಕ್ರಮವನ್ನು ಸರ್ಕಾರದವರು ಕೈಕೊಂಡು ಸೂಕ್ತವಾಗಿ ಮತ್ತು ಸಮರ್ಪಕವಾಗಿ ನಡೆಯುತ್ತಾ ಇದೆ ಎಂಬ ಅಂಶವನ್ನು ಅವರ ಗಮನಕ್ಕೆ ತರುತ್ತೇನೆ. ತಾವು ಪ್ರಾಮುಖ್ಯವಾಗಿ 2–3 ಕಂಪೆನಿಗಳ ವಿಚಾರವನ್ನು ಹೇಳಿದ್ದರಿಂದ ಆ ವಿಷಯವಾಗಿ ಈ ಸಭೆಯ ಮುಂದೆ ಪ್ರಸ್ತಾಪಿಸಬೇಕಾಗಿದೆ. ದಾವಣಗೆರೆಯಲ್ಲಿರತಕ್ಕ ಎರಡು ಕಂಪೆನಿಗಳ ವಿಚಾರ ಹೇಳಿದರು. ಒಂದು ಕಂಪನಿಯವರು ತಾವು ಕೊಡಬೇಕಾದ

ಅಸಲು ಮತ್ತು ಬಡ್ಡಿ ಒಂದು ನಿಗದಿಯಾದ ತಾರೀಖಿನವರೆಗೆ ಸಂಪೂರ್ಣವಾಗಿ ಪಾವತಿಮಾಡಿದ್ದಾರೆ. ಅದರ ಮುಂದೆ ಮೊದಲಿದ್ದ ಸಾಲದ ಟರ್ಮ್ಸ್‌ನ ಪ್ರಕಾರ ಡಿಫಾಲ್ಟರ್ಸ್ ಆಗಿದ್ದಾರೆ. ಅನೇಕ ಕಾರಣಗಳಿಂದ ಈ ರೀತಿಯಾಗಿದೆ, ನಮಗೆ ಕೆಲವು ಉಪಯುಕ್ತವಾದ ಅವಕಾಶಗಳನ್ನು ಮಾಡಿಕೊಟ್ಟರೆ ನಿಮ್ಮ ಸಾಲವನ್ನು ತೀರಿಸುತ್ತೇವೆ ಎಂಬ ಒಂದು ಭರವಸೆಯನ್ನು ಕೊಟ್ಟರು. ಈಗ ಕೆಲವು ತಿಂಗಳುಗಳಿಂದ ಪಾವತಿ ಮಾಡುತ್ತಾ ಇದ್ದಾರೆ. ಷರತ್ತಿನ ಪ್ರಕಾರ ಸಾಧ್ಯವಾದಷ್ಟು ಮುಗಿದಿದೆ, ಹಣ ಎಷ್ಟು ಬರಬೇಕೋ ಅಷ್ಟು ಬರುತ್ತಾ ಇದೆ. ಸಾಲವನ್ನು ಕೊಟ್ಟ ಮೇಲೆ ಸಂಪೂರ್ಣವಾಗಿ ವಾಪಸು ತೆಗೆದುಕೊಳ್ಳಬೇಕಾದದ್ದು ಬಹಳ ಮುಖ್ಯ. ಅದೇ ರೀತಿ ವಸೂಲಾಗುತ್ತಾ ಇದೆ ಎಂಬ ಅಂಶವನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಪುನಃ ರಿವೈಸ್ಡ್ ಅಗ್ರಿಮೆಂಟ್ ಆಗಿಲ್ಲ. ಯಾವ ರೀತಿ ಅದನ್ನು ಮಾಡಬೇಕು ಎಂಬುದನ್ನು ಸರ್ಕಾರ ನೋಡುತ್ತಾ ಇದೆ.

ಇನ್ನು ಮುಖ್ಯವಾಗಿ ನಿಮ್ಮ (ಶ್ರೀ ಶ್ರೀನಿವಾಸ ಅಯ್ಯಂಗಾರ್ಯರ) ಊರಿನಲ್ಲಿ ಇರತಕ್ಕ ಕಂಪನಿಯ ವಿಚಾರದಲ್ಲಿ ತಮಗೇ ಗೊತ್ತಿದ್ದ ಹಾಗೆ 1940ನೇ ಇಸವಿಯಿಂದ 10 ಲಕ್ಷ 75 ಸಾವಿರ ರೂಪಾಯಿ ಸಾಲ ಕೊಟ್ಟಿರುವುದಿಲ್ಲದೆ 8 ಲಕ್ಷ ರೂಪಾಯಿ ಮೈಸೂರು ಬ್ಯಾಂಕಿಗೆ ಜಮಾ ಆಗಿ ಕೊಟ್ಟಿರತಕ್ಕ ಹಣ ಇದೆ. ಈಗ ಅದನ್ನು ಏನು ಮಾಡಬೇಕು ಎಂಬುದೇ ಇವೊತ್ತಿನ ದಿವಸ ಒಂದು ದೊಡ್ಡ ಜಟಿಲವಾದ ಪ್ರಶ್ನೆ ಆಗಿದೆ. ಸರ್ಕಾರ ಏನಾದರೂ ತಾನಾಗಿ ಕೊಡತಕ್ಕ ಸಹಾಯ ಸಲ್ಲಿಸದಿದ್ದರೆ ಅದನ್ನು ಬೇಕು ಅನ್ನತಕ್ಕವರು ಅನೇಕ ಜನ ರೈತರು ಮತ್ತು ಕೈಗಾರಿಕೆಯುವರಿಗೆ ತೊಂದರೆಯಾಗುತ್ತದೆ.

ಇದನ್ನು ಯಾವ ರೀತಿ ಮಾಡಬೇಕು ಇಂಡಿಯಾ ಸರ್ಕಾರದ ಮುಂದೆ ಸಮಾಲೋಚನೆ ಮಾಡಬೇಕೆ ಎಂಬ ಈ ಎಲ್ಲಾ ಅಂಕಿ ಅಂಶಗಳನ್ನೂ ಬಹಳ ಕೂಲಂಕಷವಾಗಿ ಪರಿಶೀಲನೆ ಮಾಡುತ್ತಾ ಇದ್ದೇನೆ. ಇದು ಯಾವ ರೀತಿಯಾಗಿದೆ ಎಂಬ ವಿಚಾರ ಇತ್ಯರ್ಥವಾಗಿಲ್ಲ – ಇದನ್ನು ನಾನು ಮೊನ್ನೆ ಪ್ರಸ್ತಾಪ ಮಾಡಿದ್ದೇನೆ, ಪುನಃ ಹೇಳಬೇಕಾದದ್ದು ಅನಾವಶ್ಯಕ.

ಇನ್ನೊಂದು ಅಂಶವನ್ನು ನಾನು ಮುಖ್ಯವಾಗಿ ಪ್ರಸ್ತಾಪ ಮಾಡಬೇಕಾಗಿರುವುದು ರೆಂಕೊ ವಿಚಾರ. ಅದಕ್ಕೆ ಅಂಕಿ ಅಂಶ ಕೊಟ್ಟಿದ್ದೇನೆ. 1954–55ರಲ್ಲಿ ಕೊಟ್ಟಿರುವುದನ್ನು ನೋಡಬಹುದು. 1948ನೆಯ ಇಸವಿಗೆ 22 ಲಕ್ಷ ರೂಪಾಯಿಗಳ ಬಾಕಿಯಿತ್ತು. ಆಗ ಸರ್ಕಾರದವರಿಗೆ ಇದು ನಡೆಯಬೇಕಾದರೆ ಇನ್ನೂ ಕೆಲವು ಸಹಾಯ ಮಾಡಬೇಕೆಂದು ಕಂಡುಬಂದುದರಿಂದ ಕ್ಯಾಷ್ ಕ್ರೆಡಿಟ್ ಲೋನ್ 17 ಲಕ್ಷ ರೂಪಾಯಿಗಳನ್ನು ಶೇಕಡ 4 ರಂತೆ ಬಡ್ಡಿ ಹಾಕಿಕೊಟ್ಟರು. ಪುನಃ ಸಹಾಯ ಮಾಡಬೇಕಾದ ಅವಶ್ಯಕತೆ ಕಂಡದ್ದರಿಂದ ಮತ್ತೆ 8 ಲಕ್ಷ ರೂಪಾಯಿಗಳ ಕ್ಯಾಷ್ ಕ್ರೆಡಿಟ್ ಲೋನ್ ಕೊಟ್ಟರು. 25 ಲಕ್ಷ ರೂಪಾಯಿಗಳಿದ್ದುದನ್ನು ಈಗ ಕಡಿಮೆ

ಮಾಡಬೇಕು ಎಂದು ಹಣಕಾಸಿನ ಮಂತ್ರಿಗಳು 18 ಲಕ್ಷ ರೂಪಾಯಿಗಳಿಗೆ ಇಳಿಸುವಂತೆ ಆರ್ಡರು ಮಾಡಿದ ಹಾಗೆ ನೆನಪಿದೆ. ರೆಂಕೊ ಒಂದು ಕಂಪೆನಿ ಹಾಗಲ್ಲ. ಈ ದಿವಸ ನಮಗೆ ಬರಬೇಕಾಗಿರುವುದು 19,76,000 ರೂಪಾಯಿಗಳು. ಇದರಲ್ಲಿರುವ ಕಷ್ಟ ಏನೆಂದರೆ, ಕ್ಯಾಷ್ ಕ್ರೆಡಿಟ್ ಲೋನ್ ಬರಬೇಕಾದರೆ ರೇಡಿಯೋ ಸೆಕ್ಷನ್ ನಾವೆಷ್ಟು ಸಮರ್ಪಕವಾಗಿ ಕೆಲಸ ಮಾಡಬೇಕೆಂದು ಅಪೇಕ್ಷೆ ಪಟ್ಟೆವೋ ಅಷ್ಟು ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಆಗಿಲ್ಲ. ಇದಕ್ಕೆ World events ಕಾರಣ. ಇದು ಸರಿಹೋಗುವುದಕ್ಕೆ energy meters ಮತ್ತು ಪ್ಲಾಸ್ಟಿಕ್ ಸೆಕ್ಷನ್ ಅವಶ್ಯಕ. ಅದನ್ನು ತರಿಸಿ ಹಾಕುವ ನಿರೀಕ್ಷೆಯಿದೆ. ಇದಲ್ಲದೆ ನಾನೇ ಅಲ್ಲಿ ಕುಳಿತು ಅಂಕಿ ಅಂಶಗಳನ್ನು ನಾಲ್ಕು ಗಂಟೆಗಳ ಕಾಲ ನೋಡಿದ್ದೇನೆ. ಅಲ್ಲಿರುವ ಲೇಬರ್ ಸಮರ್ಪಕವಾಗಿದೆ. ಅದು ಯಾವ ರೀತಿ ಸರಿಹೋಗಬೇಕೆಂಬ ವಿಚಾರವನ್ನು ಸರ್ಕಾರ ತೀವ್ರವಾಗಿ ಆಲೋಚಿಸಬೇಕಾಗಿದೆ.

ಕೊನೆಯದಾಗಿ ಹರಿಜನರ ಸಾಲದ ವಿಚಾರದಲ್ಲಿ ಇಬ್ಬರು ಮಹನೀಯರು ಬಹಳ ಕಳಕಳಿಯಿಂದ ಈ ಸಭೆಯ ಮುಂದೆ ಅನೇಕ ಅಂಶಗಳನ್ನು ಹೇಳಿದರು, ಅದರಲ್ಲಿ ಕೆಲವು ಸೂಕ್ತವಾಗಿದೆ. ಹಿಂದೆ ಕೈಗಾರಿಕೆಗಳಿಗೆ ಸಾಲ ಕೊಡುವ ವಿಚಾರದಲ್ಲಿ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆಯೆಂದು ಕೇಳಿದರು. ಹರಿಜನರ ವಿಚಾರದಲ್ಲಿ ಅವರ ಆರ್ಥಿಕ ಸ್ಥಿತಿ ಸರಿಹೋಗಬೇಕೆಂಬ ವಿಷಯದಲ್ಲಿ ಸರ್ಕಾರದ ಭಿನ್ನಾಭಿಪ್ರಾಯವಿಲ್ಲವೆಂಬುದನ್ನು ಒತ್ತಿ ಹೇಳಬೇಕಾದ ಅವಶ್ಯಕತೆಯಿಲ್ಲ. ಈಚೆಗೆ ನಡೆದಿರುವ ಒಂದು ಉದಾಹರಣೆ ಹೇಳಬೇಕೆಂದರೆ ಸರ್ಕಾರ ತಮಗೆ ಗೊತ್ತಿರುವ ಹಾಗೆ ತಂಗಡಿ ಚಕ್ಕೆ ಕೈಗಾರಿಕೆ, ಚರ್ಮ ಹದ ಮಾಡುವುದು ಮುಂತಾದುವುಗಳಲ್ಲಿ ಹೆಚ್ಚಾಗಿ ಹರಿಜನರು ಕಷ್ಟಪಟ್ಟು ಕೆಲಸ ಮಾಡುತ್ತಾರೆ, ಅವರಿಗೆ ಸರಿಯಾದ ಪ್ರತಿಫಲ ಸಿಕ್ಕಬೇಕು ಎಂದು ವಿಚಾರ ಮಾಡಿ ಅದಕ್ಕೆ ಸಹಕಾರ ಸಂಘ ಮಾಡಿ ಬೇಕಾದ ಸಹಾಯ ನೀಡಲು ಅವಕಾಶ ಮಾಡಿದರು. ಇದರಿಂದ ಅವರಿಗೆ ಪ್ರಯೋಜನ ದೊರೆತಿದೆ. ಇಷ್ಟೇ ಅಲ್ಲ – ಚಪ್ಪಲಿ ತಯಾರಿಸಲು ಸಹಕಾರ ಸಂಘವಿದೆ. ಪೋಲೀಸು ಇಲಾಖೆಯಲ್ಲಿ ಅವರಿಗೆ ಸಾಧ್ಯವಾದ ಸಹಾಯ ಮಾಡಬೇಕೆಂಬ ಉದ್ದೇಶವನ್ನಿಟ್ಟು ಸುಮಾರು 80 ಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಇಷ್ಟೇ ಅಲ್ಲದೆ ಎಲ್ಲಾ ಸಹಕಾರ ಸಂಘಗಳೂ ಮುಂದೆ ಬಂದು ಅವರಿಗೆ ಉತ್ತೇಜನ ಕೊಡುವ ಹಾಗೆ ಪ್ರಯತ್ನ ಮಾಡಬೇಕೆಂಬುದು ಸರ್ಕಾರದ ದೃಷ್ಟಿಯಲ್ಲಿದೆ. ಈ ರೀತಿ ಸರ್ಕಾರಕ್ಕೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅವರನ್ನು ಮುಂದುವರಿಸಬೇಕೆಂಬುದೇ ಸರ್ಕಾರದ ಆಸೆಯಾಗಿದೆ ಎಂಬುದನ್ನು ಈ ಮೂಲಕ ಸ್ಪಷ್ಟವಾಗಿ ವ್ಯಕ್ತಪಡಿಸುತ್ತೇನೆ. ಇನ್ನು ನನ್ನ ಮಾನ್ಯ ಮಿತ್ರರಿಗೆ ಅವಕಾಶ ಕೊಡುತ್ತೇನೆ.

* * *

# ಗಣ್ಯರು ಕಂಡಂತೆ

## ಎಚ್. ಸಿದ್ದವೀರಪ್ಪ

ಆಸೆಗೆ ಸತ್ತುದು ಕೋಟಿ
ಆಮಿಷಕೆ ಸತ್ತುದು ಕೋಟಿ
ಹೊನ್ನು ಹೆಣ್ಣು ಮಣ್ಣಿಗೆ ಸತ್ತುದು ಕೋಟಿ
ಗುಹೇಶ್ವರಾ ನಿಮಗಾಗಿ ಸತ್ತವರಾರನೂ ಕಾಣೆ
– ಅಲ್ಲಮಪ್ರಭು

# ಅಪರೂಪದ ರಾಜಕೀಯ ಮುತ್ಸದ್ಧಿ

**- ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು,** ಸಾಣೇಹಳ್ಳಿ

ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಮಠಾಧೀಶರಲ್ಲೇ ಅಪರೂಪದ ವ್ಯಕ್ತಿತ್ವ ಹೊಂದಿದ್ದವರು. ಅವರು ರಾಜಕಾರಣಿಗಳಿಗೆ ನೇರವಾಗಿ ಮಾರ್ಗದರ್ಶನ ಮಾಡುತ್ತಿದ್ದರು. ಅವರ ಕಾಲದಲ್ಲಿ ಹೆಚ್. ಸಿದ್ಧವೀರಪ್ಪ, ಡಿ. ದೇವರಾಜ ಅರಸ್, ವೀರೇಂದ್ರ ಪಾಟೀಲ್, ಬಿ. ಡಿ. ಜತ್ತಿ, ಎಸ್. ನಿಜಲಿಂಗಪ್ಪ ಮುಂತಾದ ಮೊದಲ ದರ್ಜೆಯ ರಾಜಕಾರಣಿಗಳು ಆಗಾಗ ಶ್ರೀ ಮಠಕ್ಕೆ ಬಂದು ರಾಜಕೀಯ ಮಾರ್ಗದರ್ಶನ ಪಡೆಯುತ್ತಿದ್ದರು. ಆಗ ಸಿರಿಗೆರೆ ಸ್ವಾಮಿಗಳು ಸೀತರೆ ವಿಧಾನಸಭೆ ನಡುಗುತ್ತದೆ ಎನ್ನುವ ಪ್ರತೀತಿ ಇತ್ತು. ಶ್ರೀಗಳವರಿಗೆ ರಾಜಕೀಯ ಸ್ವಾಮಿಗಳೆಂಬ ಹೆಸರೂ ಬಂದಿತ್ತು. ಸಿರಿಗೆರೆ ಗುರುಗಳು ಮನಸ್ಸು ಮಾಡಿದರೆ ಯಾರನ್ನು ಬೇಕಾದರೂ ಸೋಲಿಸಬಲ್ಲರು, ಗೆಲ್ಲಿಸಬಲ್ಲರು ಎಂದು ಜನರು, ನೇತಾರರು ಮಾತನಾಡಿಕೊಳ್ಳುತ್ತಿದ್ದರು. ಅದರಲ್ಲಿ ಸತ್ಯವೂ ಇತ್ತು. ಹಾಗಂತ ಅವರು ತೆರೆಮರೆಯಲ್ಲಿ ರಾಜಕೀಯ ಮಾಡುತ್ತಿರಲಿಲ್ಲ. ಅರ್ಹರನ್ನು ಗೆಲ್ಲಿಸಬೇಕೆಂದು ಬಹಿರಂಗವಾಗಿಯೇ ಕರೆ ಕೊಡುತ್ತಿದ್ದರು. ತಾವು ಬೆಂಬಲಿಸಿದವರನ್ನು ಗೆಲ್ಲಿಸುತ್ತಿದ್ದರು.

'ಸ್ವಾಮಿಗಳಿಗೇಕೆ ರಾಜಕೀಯ' ಎನ್ನುವ ಕುಹಕಿಗಳ ಪ್ರಶ್ನೆಗೆ 'ಸ್ವಾಮಿಗಳೇಕೆ ರಾಜಕೀಯ ಮಾಡಬಾರದು' ಎಂದು ಕೇಳುತ್ತಿದ್ದರು. 'ಮಠ ಜಡವಸ್ತು. ಅದಕ್ಕೆ ರಾಜಕೀಯ ಬೇಕಿಲ್ಲ. ಮಠಾಧಿಪತಿ ಚೈತನ್ಯವಸ್ತು. ಮೊದಲು ಪ್ರಜೆ, ನಂತರವೇ ಮಠಾಧಿಪತಿ. ನಮ್ಮ ಸಂವಿಧಾನವು ಯಾವನೇ ಪ್ರಜೆಯು ಸನ್ಯಾಸಿಯಾಗಕೂಡದು, ಮಠಾಧಿಪತಿಯಾಗಕೂಡದು, ಬ್ರಹ್ಮಚಾರಿಯಾಗಕೂಡದು ಎಂದೇನೂ ಹೇಳಿಲ್ಲ. ಮಹಾ ಮಹಾ ರಾಜಕೀಯ ವ್ಯಕ್ತಿಗಳ ಸುತ್ತ ಇರುವವರು ಸನ್ಯಾಸಿ ವೇಷ ಧರಿಸಿರುವ ವ್ಯಕ್ತಿಗಳೇ. ಬ್ರಹ್ಮಚಾರಿ ಬಿರುದು ಹೊತ್ತಿರುವ ವ್ಯಕ್ತಿಗಳೇ. ಇದು ನಮ್ಮ ದೇಶದಲ್ಲಿ ಎಲ್ಲೆಲ್ಲೂ ಕಂಡುಬರುತ್ತಿರುವ ವಿಷಯ... ಮಠಾಧಿಪತಿಯೇ ಆಗಲಿ, ಸನ್ಯಾಸಿಯೇ ಆಗಲಿ, ಬ್ರಹ್ಮಚಾರಿಯೇ ಆಗಲಿ ಸಂವಿಧಾನಬದ್ಧ ಪ್ರಜೆಯಲ್ಲವೇ? ನಮ್ಮ ಸಂವಿಧಾನವು ಸೂಚಿಸುವಂತೆ ಹುಚ್ಚನಿಗೆ, ಕ್ರಿಮಿನಲ್ ಅಪರಾಧಿಗೆ, 21 ವಯಸ್ಸು ಮುಟ್ಟದವನಿಗೆ

ಪ್ರಜಾತನದ ಹಕ್ಕಿಲ್ಲ. ...' ಹೀಗೆ ಅವರ ವಿಚಾರಧಾರೆ ಸಾಗುವುದು. ಅವರು ರಾಜಕಾರಣಿಗಳಿಗೆ ಸಿಂಹಸ್ವಪ್ನರಾಗಿದ್ದರು. ತಪ್ಪು ಮಾಡಿದ ರಾಜಕಾರಣಿ ಎಷ್ಟೇ ದೊಡ್ಡವನಾಗಿದ್ದರೂ ನೇರವಾಗಿ ಎಚ್ಚರಿಸುತ್ತಿದ್ದರು. 1974ರಲ್ಲಿ ಬೆಂಗಳೂರಲ್ಲಿ ನಡೆದ ತರಳಬಾಳು ಹುಣ್ಣಿಮೆಯ ಉದ್ಘಾಟನೆಗೆ ಅಂದಿನ ಮುಖ್ಯಮಂತ್ರಿ ದೇವರಾಜ ಅರಸ್ ಬರಬೇಕಾಗಿತ್ತು. ಅವರು ನಿಗದಿತ ಸಮಯಕ್ಕೆ ಬಾರದ್ದರಿಂದ ಶ್ರೀಗಳವರೇ ಉದ್ಘಾಟನೆ ಮಾಡಿ ವೇದಿಕೆಗೆ ಬರುತ್ತಿದ್ದಂತೆ ಮುಖ್ಯಮಂತ್ರಿಗಳ ಆಗಮನವಾಯ್ತು. ಕಾಲದ ಪ್ರಜ್ಞೆ ಇಲ್ಲದವರು ಮುಖ್ಯಮಂತ್ರಿಗಳಾದರೆ ನಾಡಿಗೆ ಒಳಿತಾಗದು ಎಂದು ಮುಖದ ಮೇಲೆ ಹೊಡೆದಂತೆ ಹೇಳಿದರು. ಕ್ಷಮೆ ಕೇಳಿದ ಮುಖ್ಯಮಂತ್ರಿಗಳು ಮುಂದೆ ಹೀಗಾಗದಂತೆ ಎಚ್ಚರಹಿಸುವುದಾಗಿ ಭಾಷೆ ಕೊಟ್ಟರು.

ಮೇಲಿನ ಮಾತುಗಳನ್ನು ಹೇಳುವ ಹಿನ್ನೆಲೆಯಲ್ಲಿ ಮುತ್ಸದ್ಧಿ ರಾಜಕಾರಣಿ ಸಿದ್ದವೀರಪ್ಪನವರು ಬೆಳೆದ ಪರಿಯನ್ನು ಗಮನಿಸಬೇಕು. ಅವರು ಶ್ರೀ ತರಳಬಾಳು ಜಗದ್ಗುರು ಪೀಠದ ನಿಷ್ಠಾವಂತ ಭಕ್ತರು. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಕೃಪಾಶೀರ್ವಾದದಡಿ ತಮ್ಮ ರಾಜಕೀಯ ಶಕ್ತಿಯನ್ನು ರೂಪಿಸಿಕೊಂಡವರು. ಅವರ ಎದುರಾಳಿ ಗಾಂಜಿ ವೀರಪ್ಪನವರು. ಇಬ್ಬರೂ ಅಷ್ಟೇ ಸಮರ್ಥರು. ಇಬ್ಬರೂ ಲಿಂಗವಂತ ಸಮಾಜದ ಒಂದೊಂದು ಪಂಗಡ ಪ್ರತಿನಿಧಿಸುತ್ತಿದ್ದವರು. ಚುನಾವಣೆ ಬಂದರೆ ಹರಿಹರ ಕ್ಷೇತ್ರ ರಾಜ್ಯದಲ್ಲೇ ಕುತೂಹಲ ಕೆರಳಿಸುತ್ತಿತ್ತು. ಅವರು ಗೆದಿಯುತ್ತಾರೆ, ಇವರು ಗೆದಿಯುತ್ತಾರೆ ಎಂದು ಪಣ ಕಟ್ಟುತ್ತಿದ್ದರು. ಚುನಾವಣೆಯ ಕಾವು ಇನ್ನು ಈ ಜನಾಂಗವನ್ನು ಎಂದಿಗೂ ಒಂದಾಗಲು ಬಿಡುವುದಿಲ್ಲ ಎನ್ನುವ ವಾತಾವರಣವಿರುತ್ತಿತ್ತು. ಪತ್ರಿಕೆಯವರು ಒಂದೆಡೆ ಮುರಗಿ ಸ್ವಾಮಿಗಳು ಮತ್ತೊಂದಡೆ ಸಿರಿಗೆರೆ ಸ್ವಾಮಿಗಳು ಕುಸ್ತಿ ಆಡುತ್ತಿರುವಂತೆ ವ್ಯಂಗ್ಯಚಿತ್ರ ಬರೆದು ಜಂಗಿ ಕುಸ್ತಿ ಎನ್ನುವ ಅಡಿಬರಹದಲ್ಲಿ ಪ್ರಕಟಿಸುತ್ತಿದ್ದರು. ಆದರೆ ಫಲಿತಾಂಶ ಬಂದನಂತರ ಸಿದ್ದವೀರಪ್ಪ ಹಾಗೂ ಗಾಂಜಿ ವೀರಪ್ಪ ಹೆಗಲಮೇಲೆ ಕೈ ಹಾಕಿ ಅಭಿನಂದಿಸುತ್ತ ತಮ್ಮ ಕ್ಷೇತ್ರದಲ್ಲಿ ಶಾಂತಿ ಕಾಯ್ದುಕೊಳ್ಳಲು ಕಾರಣರಾಗುತ್ತಿದ್ದರು. ದ್ವೇಷದ ರಾಜಕಾರಣ ಅವರದಾಗಿರಲಿಲ್ಲ. ತಮಗೆ ಅವರು ಮತ ಕೊಟ್ಟಿಲ್ಲ, ಇವರು ಮತ ಕೊಟ್ಟಿಲ್ಲ ಎಂದು ಅಂಥವರ ಮೇಲೆ ಹಗೆತನ ಸಾಧಿಸುವ ಸಣ್ಣತನ ಸಿದ್ದವೀರಪ್ಪನವರಲ್ಲಿರಲಿಲ್ಲ. ತಮ್ಮನ್ನು ದ್ವೇಷಿಸುವವರನ್ನೂ ಪ್ರೀತಿಸುತ್ತ ಅವರ ಕೆಲಸ ಕಾರ್ಯಗಳನ್ನು ತ್ವರಿತವಾಗಿ ಮಾಡಿಕೊಡುತ್ತಿದ್ದರು. ಲಿಂಗಾಯತರಲ್ಲಿ ಅದೂ ಸಾಧು ಜನಾಂಗದಲ್ಲೇ ಮೊದಲ ದರ್ಜೆಯ ರಾಜಕಾರಣಿ ಎನ್ನುವ ಪ್ರಖ್ಯಾತಿ ಅವರದಾಗಿತ್ತು. ಅವರಿಗೆ ಮುಖ್ಯಮಂತ್ರಿ ಆಗುವ ಎಲ್ಲ ಅವಕಾಶಗಳಿದ್ದಾಗಲೂ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ದೇವರಾಜ ಅರಸ್ ಅವರನ್ನು ಬೆಂಬಲಿಸುವ ಮೂಲಕ ಜಾತ್ಯತೀತ ನಿಲವಿಗೆ ಕಾರಣರಾದರು. ಆಗ ಹಲವರು ಗುರುಗಳು ನಮ್ಮ ಜನಾಂಗಕ್ಕೆ ದ್ರೋಹ ಮಾಡಿದರು ಎಂದು ದೂರಿದ್ದೂ ಉಂಟು. ಅದಕ್ಕೆ ಸೊಪ್ಪು ಹಾಕದ ಗುರುಗಳು ನೀನು ಅರಸ್ ಅವರೊಂದಿಗೆ ಹೊಂದಿಕೊಂಡು ನಾಡಿಗೆ ಉತ್ತಮ

ಆಡಳಿತ ಕೊಡಬೇಕೆಂದು ಕಿವಿ ಮಾತು ಹೇಳಿದರು. ತಮ್ಮ ಆದೇಶದಂತೆ ನಡೆಯುವೆ ಎಂದು ಹೇಳಿ ಸಿದ್ದವೀರಪ್ಪನವರೂ ಅದೇ ರೀತಿ ನಡೆದುಕೊಂಡು ತಮ್ಮ ದೊಡ್ಡತನ ತೋರಿದರು.

ಸರ್ಕಾರದಲ್ಲಿ ಯಾವ ಖಾತೆ ಕೊಟ್ಟರೂ ಅದನ್ನು ಸಮರ್ಥರೀತಿಯಿಂದ ನಿರ್ವಹಿಸುವ ಚಾಕಚಕ್ಯತೆ ಸಿದ್ದವೀರಪ್ಪನವರಲ್ಲಿತ್ತು. ಅವರು ಏನಾದರೂ ತಪ್ಪು ಮಾಡಿದ್ದು ತಿಳಿದರೆ ತಕ್ಷಣ ಗುರುಗಳು ಅವರ ಕಿವಿ ಹಿಂಡಿ ಸರಿಪಡಿಸುತ್ತಿದ್ದರು. ಶ್ರೀಮಠದ ವಕೀಲರಾಗಿಯೂ ಸಿದ್ದವೀರಪ್ಪನವರು ಸೇವೆ ಸಲ್ಲಿಸಿದ್ದುಂಟು. ಗೃಹಸಚಿವರಾಗುತ್ತಲೇ ಗುರುಗಳ ದರ್ಶನಕ್ಕೆ ಶ್ರೀಮಠಕ್ಕೆ ಬಂದಿದ್ದರು. ಅವರ ಕಾರು ಮಠದ ಮುಂದೆ ಎಡಕ್ಕೆ ನಿಲ್ಲುವ ಬದಲು ಬಲಕ್ಕೆ ನಿಂತಿತ್ತು. ಅದನ್ನು ಕಂಡ ಗುರುಗಳು ಕಾನೂನು ಸಚಿವರೇ ರಸ್ತೆಯ ನಿಯಮಗಳನ್ನು ಪಾಲಿಸದಿದ್ದರೆ ಈ ನಾಡಿನಲ್ಲಿ ಹೇಗೆ ಕಾನೂನು ಜಾರಿಗೊಳಿಸುತ್ತೀರಿ ಎಂದು ಛೇಡಿಸಿದರು. ಅದಕ್ಕೆ ಸಿದ್ದವೀರಪ್ಪನವರು ಅಷ್ಟೇ ತಮಾಷೆಯಾಗಿ ನಾನು ಇಲ್ಲಿಗೆ ಬಂದಿರುವುದು ತಮ್ಮ ಭಕ್ತನಾಗಿಯೇ ಹೊರತು ಕಾನೂನು ಸಚಿವನಾಗಿ ಅಲ್ಲ ಎಂದು ಉತ್ತರಿಸಿದರು. ಅದಕ್ಕೆ ಗುರುಗಳು ಕಾನೂನು ಭಕ್ತರಿಗೊಂದು, ಸ್ವಾಮಿಗಳಿಗೊಂದು, ಮಂತ್ರಿಗಳಿಗೊಂದು, ಸಾಮಾನ್ಯ ಪ್ರಜೆಗೊಂದು ಇರುತ್ತದೆಯೇ ಎಂದು ಕೇಳುವ ಮೂಲಕ ಅವರ ತಪ್ಪಿನ ಅರಿವು ಮಾಡಿಕೊಟ್ಟರು. ಎಂಥ ಸಂದರ್ಭದಲ್ಲೂ ಯಾರೂ ಕಾನೂನು ಮುರಿಯಬಾರದು. ಕಾನೂನಿನನ್ವಯ ಜನರಿಗೆ ಸಹಾಯ ಮಾಡಬೇಕು. ಕಾನೂನು ಹೇಳುತ್ತ ಜನರಿಗೆ ಕಿರುಕುಳ ಕೊಡಬಾರದು. ಕಾನೂನು ಇರುವುದು ತಪ್ಪಿತಸ್ಥರಿಗೆ ಶಿಕ್ಷೆ ಕೊಡಲು. ಅದನ್ನು ಬಿಟ್ಟು ಕಾನೂನಿನ ನೆಪದಿಂದ ಸಜ್ಜನರಿಗೆ ಕಿರುಕುಳ ನೀಡಬಾರದು ಎಂದು ಹಿತವಚನ ಹೇಳುತ್ತಿದ್ದರು. ಸಿದ್ದವೀರಪ್ಪನವರು ಗುರುಗಳ ಯಾವ ಮಾತನ್ನೂ ಉಲ್ಲಂಘಿಸಿದವರಲ್ಲ. ಹಾಗಂತ ಎಲ್ಲದಕ್ಕೂ ಗೋಣು ಹಾಕುತ್ತಿರಲಿಲ್ಲ. ಏನಾದರೂ ಸಮಸ್ಯೆ ಬಂದರೆ ಪರಸ್ಪರ ಚರ್ಚೆಯ ಮೂಲಕ ಪರಿಹರಿಸಿಕೊಳ್ಳುತ್ತಿದ್ದರು. ಒಮ್ಮೆ ಒಂದು ಸಣ್ಣ ಕಾರಣಕ್ಕಾಗಿ ಹಿರಿಯೂರು ಕಾರ್ಯಕ್ರಮದಲ್ಲಿ ಬಹಿರಂಗವಾಗಿಯೇ ಸಿದ್ದವೀರಪ್ಪನವರನ್ನು ತರಾಟೆಗೆ ತೆಗೆದುಕೊಂಡು ನಾವು ಹೇಳಿದ ಮೇಲೂ ನೀನೇಕೆ ಅವನ ವಿರುದ್ಧ ಮತ್ತೊಬ್ಬರನ್ನು ನಿಲ್ಲಿಸಿದೆ? ನಾವೂ ಅದನ್ನೇ ಮಾಡಿದ್ದರೆ ನೀನೆಲ್ಲಿರುತ್ತಿದ್ದೆ ಎಂದು ದಬಾಯಿಸಿದರು. ಅಲ್ಲಿದ್ದ ಜನರಿಗೆ ಆತಂಕ, ಆಶ್ಚರ್ಯ. ಕಾನೂನು ಸಚಿವರಿಗೆ ಸಾರ್ವಜನಿಕವಾಗಿ ಹೀಗೆ ತರಾಟೆಗೆ ತೆಗೆದುಕೊಳ್ಳುವುದು ಸಾಮಾನ್ಯ ಸಂಗತಿಯೇ? ಅಲ್ಲಿಗೆ ಅವರ ಗುರು ಶಿಷ್ಯ ಸಂಬಂಧ ಮುಗಿಯಿತೆಂಬ ಭಾವನೆ ಹಲವರದಾಗಿತ್ತು. ಆದರೆ ಆ ಭಾವನೆ ಸುಳ್ಳಾಗಿ ಪ್ರಸಾದಕ್ಕೆ ಮಂತ್ರಿಗಳನ್ನು ಕರೆ ಎಂದು ಮರಿಗೆ ಹೇಳಿದರು. ಉಭಯತರೂ ಏನೂ ನಡೆದೇ ಇಲ್ಲವೇನೋ ಎನ್ನುವಂತೆ ಅದು ಇದು ಮಾತನಾಡುತ್ತ ಪ್ರಸಾದ ಸ್ವೀಕರಿಸಿದರು.

ಸಿದ್ದವೀರಪ್ಪನವರು ತಮ್ಮ ಅಧಿಕಾರದ ಅವಧಿಯಲ್ಲಿ ಸಾಧ್ಯವಾದಷ್ಟು ಜನರಿಗೆ ಸಹಾಯ ಮಾಡಿದರೇ ಹೊರತು ಯಾರಿಗೂ ತೊಂದರೆ ಕೊಡುವ ಗುಣ ತೋರಲಿಲ್ಲ.

ಅವರಿಗೆ ಅಧಿಕಾರ ಸೇವೆ ಸಲ್ಲಿಸಲು ದೊರೆತಿರುವ ಸೌಭಾಗ್ಯ ಎನ್ನುವ ಉದಾತ್ತ ಭಾವ ಇತ್ತೇ ಹೊರತು ಹಣ ಮಾಡುವ, ತಮಗಾಗದವರ ಮೇಲೆ ಸೇಡು ತೀರಿಸಿಕೊಳ್ಳುವ ಸ್ಥಾನ ಎನ್ನುವ ಕುತ್ಸಿತ ಮನೋಭಾವ ಇರಲಿಲ್ಲ. ಸಿದ್ದವೀರಪ್ಪನವರಂಥ ರಾಜಕಾರಣಿಗಳು ಸಿಗುವುದು ಇಂದಂತೂ ದುರ್ಲಭ. ಮಂತ್ರಿಯಾಗಿದ್ದರೂ ಎಲ್ಲರ ಜೊತೆ ವಿಶ್ವಾಸದಿಂದ ಮಾತನಾಡುತ್ತ ಅವರ ಸಮಸ್ಯೆ ಕೇಳುತ್ತ ಸಾಧ್ಯವಾದ ಸಹಾಯ ಮಾಡುತ್ತಿದ್ದರು. 60 ವರ್ಷ ಆದಮೇಲೆ ಸ್ವಾಮಿಯಾಗಲಿ, ರಾಜಕಾರಣಿಯಾಗಲಿ ಅಧಿಕಾರದಲ್ಲಿ ಮುಂದುವರಿಯಬಾರದು ಎನ್ನುವ ನಿಲವು ನಮ್ಮ ಗುರುಗಳದ್ದಾಗಿತ್ತು. ಅದಕ್ಕನುಗುಣವಾಗಿ ಅವರು ತಮ್ಮ 60ನೆಯ ವಯಸ್ಸಿಗೆ ದಾವಣಗೆರೆಯಲ್ಲಿ ಸಮಾಜದ ಸಭೆ ಕರೆದು ತ್ಯಾಗಪತ್ರ ಸಲ್ಲಿಸಿ ಮಠದ ಜಗದ್ಗುರು ಸ್ಥಾನದಿಂದ ಹೊರಬಂದರು. ಆಗ ಸಿದ್ದವೀರಪ್ಪನವರು ಕಣ್ಣೀರು ಸುರಿಸುತ್ತ ತಾವು ಏಕಾಏಕಿ ಈ ನಿರ್ಧಾರ ತೆಗೆದುಕೊಂಡರೆ ಈ ಸಮಾಜದ ಗತಿ ಏನು? ಇದನ್ನು ಮುನ್ನಡೆಸುವವರು ಯಾರು? ತಮಗೇನು ಅನಾರೋಗ್ಯವಿಲ್ಲ. ಗಟ್ಟಿಮುಟ್ಟಾಗಿದ್ದೀರಿ. ತಾವೇ ಮುಂದುವರಿಯಬೇಕು ಎಂದು ಎಷ್ಟೇ ಕೇಳಿಕೊಂಡರೂ ಗುರುಗಳು ತಮ್ಮ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಉನ್ನತ ಸ್ಥಾನದಲ್ಲಿರುವವರು ತಮ್ಮ 60ನೆಯ ವರ್ಷಕ್ಕೆ ಅಧಿಕಾರದಿಂದ ಕೆಳಗಿಳಿದು ಕಿರಿಯರಿಗೆ ಮಾರ್ಗದರ್ಶನ ಮಾಡಬೇಕು. ಆಗ ಮಠ, ರಾಷ್ಟ್ರ ಬೆಳೆಯುವುದು ಎನ್ನುವ ನಿಲವು ಗುರುಗಳವರದಾಗಿತ್ತು. ಅವರ ಆದರ್ಶ ನಿಜಕ್ಕೂ ಮೆಚ್ಚುವಂತಹುದು. ಅವರು ನುಡಿದಂತೆ ನಡೆದು ಪೀಠದ ಸರ್ವ ಅಧಿಕಾರದಿಂದ ಮುಕ್ತರಾದರು. ಆದರೆ ಮುಂದೆ ಅದೇನು ಕಾರಣವೋ ಸಿದ್ದವೀರಪ್ಪನವರಿಗೂ ಗುರುಗಳಿಗೂ ವಿರಸ ಬೆಳೆದು ಸಿದ್ಧವೀರಪ್ಪನವರು ಮಠಕ್ಕೆ ಬರದಂತಾದರು. ನೂತನ ಜಗದ್ಗುರುಗಳನ್ನು ಆಯ್ಕೆ ಮಾಡಿಕೊಳ್ಳಲು ಸಮಿತಿ ರಚನೆ ಆಯಿತು. ಆ ಸಮಿತಿ ಶ್ರೀ ತರಳಬಾಳು ಶಿವಮೂರ್ತಿಯವರನ್ನು ತರಳಬಾಳು ಪೀಠದ ಮುಂದಿನ ಪಟ್ಟಾಧಿಕಾರಿಗಳೆಂದು ಆಯ್ಕೆ ಮಾಡಿತು. ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಪೂಜ್ಯರು ಅವರನ್ನು ವಿದೇಶಕ್ಕೆ ಕಳಿಸಿದರು. ಆದರೆ ಇತ್ತ ಸಿದ್ದವೀರಪ್ಪನವರ ಕೆಲವು ಪಟಾಲಮ್‌ನವರು ಈ ಸ್ವಾಮಿಗಳಿಗೆ ಅಧಿಕಾರ ಬಿಟ್ಟುಕೊಡುವ ಮನಸ್ಸಿಲ್ಲ. ಅದಕ್ಕಾಗಿ ಅವರನ್ನು ವಿದೇಶಕ್ಕೆ ಕಳಿಸಿದ್ದಾರೆ. ಅವರು ವಿದೇಶದಿಂದ ವಾಪಸ್ಸು ಬರುವರೆಂದು ಹೇಗೆ ಹೇಳುವುದು. ಅಲ್ಲೇ ಸಂಸಾರಿಗಳಾದರೆ ಗತಿ ಏನೆಂದು ತಮ್ಮ ಹೊಲಸು ನಾಲಗೆಯಿಂದ ನೀಚ ಮಾತುಗಳನ್ನಾಡುತ್ತಿದ್ದರು. ಆದರೆ ಇತ್ತ ಪಟ್ಟಾಭಿಷೇಕದ ವ್ಯವಸ್ಥೆ ಆಗಿ ಸರ್ಕಾರದ ಅನುಮತಿಗಾಗಿ ಜಿಲ್ಲಾಧಿಕಾರಿಗಳ ಮೂಲಕ ಪತ್ರ ಹೋಯಿತು. ಸಿದ್ದವೀರಪ್ಪನವರೇ ಕಾನೂನು ಸಚಿವರಾದ್ದರಿಂದ ಪೀಠ ಪೂರ್ಣಪ್ರಮಾಣದಲ್ಲಿ ಖಾಲಿಯಾಗಿದೆಯೇ? ಖಾಲಿ ಆಗದಿದ್ದರೆ ಅನುಮತಿ ಕೊಡುವ ಸಂದರ್ಭವೇ ಉದ್ಭವಿಸದು ಎನ್ನುವ ಆಕ್ಷೇಪದ ಪತ್ರ ಡಿಸಿಯವರಿಗೆ ಬಂತು. ಗುರುಗಳು ಅದಕ್ಕೆ ಅಷ್ಟೇ ಖಾರವಾಗಿ ಉತ್ತರ ಬರೆಸಿದ್ದು ನಮ್ಮ ಸ್ಮೃತಿಪಟಲದಲ್ಲಿ ಇನ್ನೂ ಹಸಿರಾಗಿದೆ. ಕಾನೂನು ಮಂತ್ರಿಗಳಿಗೆ ಕಾನೂನು ಏನೆಂದು ತಿಳಿದ ಹಾಗಿಲ್ಲ. ಮುಖ್ಯಮಂತ್ರಿಗಳು ರಾಜಿನಾಮೆ ಕೊಟ್ಟರೆ

ಮುಂದಿನ ವ್ಯವಸ್ಥೆ ಆಗುವವರೆಗೆ ಅವರೇ ಉಸ್ತುವಾರಿ ಮಂತ್ರಿಗಳಾಗಿ ಅಧಿಕಾರದಲ್ಲಿರಬೇಕು ಎಂದು ರಾಜ್ಯಪಾಲರು ಹೇಳುವುದಿಲ್ಲವೇ? ಅದೇ ರೀತಿ ನಾವು ಉಸ್ತುವಾರಿ ಗುರುಗಳಾಗಿ ಮಠದ ಜವಾಬ್ದಾರಿ ನಿರ್ವಹಿಸುತ್ತಿದ್ದೇವೆ. ಪೀಠ ಪೂರ್ಣ ಪ್ರಮಾಣದಲ್ಲೇ ಖಾಲಿಯಾಗಿದೆ. ಇದರಲ್ಲಿ ಸಂಶಯಪಡುವ ಅಗತ್ಯ ಏನಿದೆ ಎನ್ನುವ ರೀತಿಯಲ್ಲಿ ಉತ್ತರ ಬರೆಸಿ ಕಳುಹಿಸಿದ್ದರು. ಸಿದ್ದವೀರಪ್ಪನವರು ನೂತನ ಜಗದ್ಗುರುಗಳ ಪಟ್ಟಾಭಿಷೇಕ ಮಹೋತ್ಸವಕ್ಕೂ ಬರಲಿಲ್ಲ! ರಾಜಕಾರಣ ಯಾರನ್ನು ಯಾವಾಗ ಹೇಗೆ ಬದಲಾಯಿಸುತ್ತದೆ ಎನ್ನುವುದನ್ನು ಬಲ್ಲವರಾರು?

ರಾಜಕಾರಣಿಗಳು ರಾಜಕಾರಣಿಗಳಾಗಿಯೇ ವರ್ತಿಸಬಹುದು. ಆದರೆ ಗುರುಗಳಾದವರು ಎಂದೂ ತಮ್ಮ ತಾಯ್ತನ ಬಿಟ್ಟುಕೊಡುವುದಿಲ್ಲ ಎನ್ನುವುದಕ್ಕೆ ಸಿದ್ದವೀರಪ್ಪನವರ ಮರಣ ಪ್ರಸಂಗದ ಘಟನೆ ಸಾಕ್ಷಿಯಾಗಿದೆ. ಅವರು ನಿಧನರಾದ ಸುದ್ದಿ ತಿಳಿಯುತ್ತಲೇ ಶ್ರೀ ಜಗದ್ಗುರುಗಳು ಸಿರಿಗೆರೆಯಿಂದ ದಾವಣಗೆರೆಗೆ ಧಾವಿಸಿ ಅವರ ಪಾರ್ಥಿವ ಶರೀರಕ್ಕೆ ಹೂಪತ್ರೆ ಹಾಕಿ ಅಂತಿಮ ಗೌರವ ಸಲ್ಲಿಸಿದರು. ಪಾರ್ಥಿವ ಶರೀರವನ್ನು ಹುಟ್ಟೂರಾದ ಹನಗವಾಡಿಯಲ್ಲಿ ಸಂಸ್ಕಾರ ಮಾಡಬೇಕೇ? ಮದುವೆಯಾದ ಬಾತಿಯಲ್ಲಿ ಮಾಡಬೇಕೇ ಎನ್ನುವ ವಿಚಾರದಲ್ಲಿ ಎರಡೂ ಊರಿನ ಜನರ ನಡುವೆ ದೊಡ್ಡ ಜಗಳವೇ ಆಯ್ತು. ಹನಗವಾಡಿಯವರು ಏನಾದರೂ ಸರಿಯೇ ಹೆಣ ಬಿಟ್ಟುಕೊಡಬಾರದು ಎಂದು ಹೊಡೆದಾಡಲು ಕಣಗೆಗಳ ಸಮೇತ ಸಿದ್ಧರಾಗೇ ಬಂದಿದ್ದರು. ಆಗ ಗುರುಗಳು ಎಲ್ಲ ಜನರನ್ನೂ ಸಮಾಧಾನ ಪಡಿಸಿ ನೀವು ನೀವೇ ಜಗಳವಾಡುವುದು ಬೇಡ. ಅವರ ಅಂತಿಮ ಸಂಸ್ಕಾರ ಎಲ್ಲಿ ಆಗಬೇಕೆಂದು ಅವರ ಶ್ರೀಮತಿಯವರಿಗೆ ಸಿದ್ದವೀರಪ್ಪನವರು ಹೇಳಿರಬಹುದು. ಆ ತಾಯಿಯನ್ನೇ ಕೇಳೋಣ ಎಂದರು. ಅವರ ಶ್ರೀಮತಿಯವರನ್ನು ಕರೆದು ನೋಡಮ್ಮ ನಿಮ್ಮ ಯಜಮಾನರ ಸಂಸ್ಕಾರ ಎಲ್ಲಿ ಆಗಬೇಕೆಂದು ಅವರು ನಿನಗೆ ಹೇಳಿರಬಹುದು. ನೀನು ಎಲ್ಲಿ ಹೇಳುತ್ತೀಯೋ ಅಲ್ಲೇ ಅಂತಿಮ ಸಂಸ್ಕಾರ ಮಾಡೋಣ ಎಂದರು. ಆಗ ಆ ತಾಯಿ 'ಬಾತಿಯಲ್ಲಿ' ಎಂದು ಹೇಳುತ್ತಲೇ ಹನಗವಾಡಿ ಜನರು "ದ್ರೋಹ, ದ್ರೋಹ, ವಂಚನೆ, ಅವರು ಹಾಗೆ ಹೇಳಲು ಸಾಧ್ಯವಿಲ್ಲ. ಹುಟ್ಟೂರನ್ನು ಬಿಟ್ಟು ಹೆಂಡತಿಯ ಊರಲ್ಲಿ ಸಂಸ್ಕಾರ ಮಾಡಬೇಕೆಂದು ಯಾವ ಗಂಡ ಹೇಳುತ್ತಾನೆ? ಇದೆಲ್ಲ ಆ ತಾಯಿಯ ತವರು ಪ್ರೀತಿ" ಎಂದು ಕೂಗುತ್ತ ಹೊರನಡೆದರು. ಆಗಬಹುದಾಗಿದ್ದ ಬಹುದೊಡ್ಡ ಅನಾಹುತ ಗುರುಗಳ ಮಧ್ಯಪ್ರವೇಶದಿಂದ ತಪ್ಪಿತು. ಮಹಾನ್ ನಾಯಕರ ಸಮಾಧಿ ಶಾಂತರೀತಿಯಿಂದಲೇ ನಡೆಯಿತು. ಕನ್ನಡ ನಾಡು ಒಬ್ಬ ಅಪರೂಪದ ರಾಜಕಾರಣಿಯನ್ನು ಕಳೆದುಕೊಂಡು ಬಡವಾಯಿತು. ಮತ್ತೆ ಸಿದ್ದವೀರಪ್ಪನವರಂಥ ಹೃದಯವಂತ ರಾಜಕಾರಣಿಗಳನ್ನು ಈ ನಾಡು ಕಾಣುವಂತಾದರೆ ಅದು ಸಿದ್ದವೀರಪ್ಪನವರಿಗೆ ಸಲ್ಲಿಸುವ ಅರ್ಥಪೂರ್ಣ ಗೌರವ ಎನ್ನುವುದು ನಮ್ಮ ಭಾವನೆ.

★

# ಸಾಮಾಜಿಕ ಕಳಕಳಿಯ ಸಚಿವರು

– ಗೊ.ರು. ಚನ್ನಬಸಪ್ಪ,

ಅಧ್ಯಕ್ಷರು : ಕರ್ನಾಟಕ ಜಾನಪದ ಅಕಾಡೆಮಿ

**"ಪ್ರಜಾಸತ್ತೆಯ ಒಬ್ಬ ಪ್ರತಿನಿಧಿಯಾಗಿ, ಸರ್ಕಾರದ ಹೊಣೆಯ ಒಬ್ಬ ಸಚಿವರಾಗಿ ಸಿದ್ದವೀರಪ್ಪನವರು ತಾಳಿದ ನಿಲುವು ನಿಜಕ್ಕೂ ಮಾನವೀಯ; ಸ್ಮರಣೀಯ. ಈ ಸಂದರ್ಭ ಸಾಮಾಜಿಕ ನ್ಯಾಯದ ಬಗೆಗೆ ಅವರಿಗಿದ್ದ ಕಳಕಳಿಗೆ ಸಾಕ್ಷಿಯಾಗಿದೆ...... .......ಸಿದ್ದವೀರಪ್ಪನವರು ನಗುತ್ತಿದ್ದುದು ಅಪರೂಪ. ಆದರೆ ಅವರು ನಕ್ಕಾಗಲೇ ನಿಜವಾದ ಸಿದ್ದವೀರಪ್ಪನವರನ್ನು ಕಾಣಬಹುದಾಗಿತ್ತು. ಅವರು ನನ್ನ ದೃಷ್ಟಿಯಲ್ಲಿ ಹೂವಿಗೆ ಹೂವು. ಉಕ್ಕಿಗೆ ಉಕ್ಕು".**

ಶ್ರೀ ಸಿದ್ದವೀರಪ್ಪನವರು ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ಸಚಿವರಾಗಿದ್ದಾಗ ನಾನು ಅದೇ ಇಲಾಖೆಯಲ್ಲಿ ವಿಶ್ವಬ್ಯಾಂಕ್ ನೆರವಿನ ಭಾರತ ಜನಸಂಖ್ಯಾ ಯೋಜನೆಯ ಪ್ರಕಟಣಾ ವಿಭಾಗದ ಸಂಪಾದಕನಾಗಿದ್ದೆ. ಇಲಾಖಾ ಚಟುವಟಿಕೆಗಳ ಪ್ರಸಾರ ಮತ್ತು ಪ್ರಕಟಣೆಗಳ ಕಾರ್ಯಭಾರ ನನ್ನದಾಗಿದ್ದ ಕಾರಣ ಸಂಬಂಧಪಟ್ಟ ಸಚಿವರೊಡನೆ ಸಹಜವಾಗಿಯೇ ನಿಕಟ ಸಂಪರ್ಕವಿತ್ತು.

ಸಾಮಾನ್ಯವಾಗಿ "ಗಡುಸು" ಸ್ವಭಾವದವರೆನಿಸಿದ್ದ ಸಿದ್ದವೀರಪ್ಪನವರ ಬಳಿಗೆ ಹೋಗುವುದು, ಅವರೊಡನೆ ಮಾತಾಡುವುದು ಎಂದರೆ ಇಲಾಖೆಯ ಅಧಿಕಾರಿಗಳು ಹಿಂಜರಿಯುತ್ತಿದ್ದರೆಂದೇ ಹೇಳಬೇಕು. ಒಂದು ರೀತಿಯಲ್ಲಿ ಅವರು 'ರಿಸರ್ವ್' ಸ್ವಭಾವದ ಸಚಿವರಾಗಿದ್ದಂತೆ ಸರಳ ಸ್ವಭಾವದವರೂ ಆಗಿದ್ದರೆಂಬುದು ಬಹಳ ಜನರಿಗೆ ತಿಳಿದಿರಲಾರದು. ಆದರೆ, ಅದೇನು ಕಾರಣವೋ ನನ್ನ ಬಗೆಗೆ ಅವರು 'ಅಧಿಕಾರ' ತೋರಿದ್ದಕ್ಕಿಂತ ಅಭಿಮಾನ ತೋರಿದ್ದೇ ಹೆಚ್ಚು. ಹಾಗಾಗಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ನನ್ನನ್ನು ಸಚಿವರ 'ಆಪ್ತವಲಯ'ದಲ್ಲಿ ಸೇರಿಸಿದ್ದುಂಟು. ಈ ಆಪ್ತ ವಲಯಕ್ಕೆ ರಾಜಕೀಯ ಪರಿಸರದಲ್ಲಿ ಏನೆಲ್ಲ ಅರ್ಥಗಳು ಇರಬಹುದಾದರೂ, ನಾನಂತೂ ಆ 'ಆಪ್ತವಲಯ'ವನ್ನು ನನ್ನ ಸ್ವಂತಕ್ಕಾಗಿ ಬಳಸಿಕೊಂಡವನಲ್ಲ. ಹಾಗಾಗಿ,

ಸಿದ್ದವೀರಪ್ಪನವರು ಆಡಳಿತದಲ್ಲಿ ಬಿಗಿ ಧೋರಣೆಯನ್ನು ತೋರುತ್ತಿದ್ದರೂ ನನ್ನ ಬಗೆಗೆ ಮಾತ್ರ ಸರಳವಾಗೇ ಇದ್ದರು.

ನಾನು ಇಲಾಖೆಯಲ್ಲಿದ್ದಾಗ ಕುಟುಂಬ ಯೋಜನೆಯ ಪ್ರಚಾರಕ್ಕಾಗಿ ಸಿದ್ದಪಡಿಸುತ್ತಿದ್ದ ಸಾಹಿತ್ಯ ಮತ್ತು ಸಂಘಟಿಸುತ್ತಿದ್ದ ಕಾರ್ಯಕ್ರಮಗಳು ಸಚಿವ ಸಿದ್ದವೀರಪ್ಪನವರಿಗೆ ತೃಪ್ತಿಯನ್ನು ತರುತ್ತಿದ್ದುದು ನನ್ನ ಬಗೆಗೆ ಅವರು ಮೃದು ಧೋರಣೆ ತಾಳಲು ಕಾರಣವಿದ್ದಿರಬೇಕು. ಆ ಸಂದರ್ಭದಲ್ಲಿ ನಾನು ಯೋಚಿಸಿ ಆರಂಭಿಸಿದ 'ಕುಟುಂಬ' ಎಂಬ ಭಿತ್ತಿ ವಾರ್ತಾಪತ್ರ ಇಡೀ ದೇಶದಲ್ಲಿ ಅದೇ ಮೊದಲನೆಯದಾಗಿದ್ದು, ಕೇಂದ್ರ ಸರ್ಕಾರದ ಸಚಿವ ಸಂಪುಟ ಸಮಿತಿಯ ಮತ್ತು ನಾಡಿನ ಪ್ರಮುಖ ಪತ್ರಿಕೆಗಳ ಮೆಚ್ಚಿಗೆ ಗಳಿಸಿದ್ದನ್ನು ಸಿದ್ದವೀರಪ್ಪನವರು ಗಮನಿಸಿದ್ದರು.

ಜೊತೆಗೆ ಆಕಾಶವಾಣಿ, ಸಭೆ – ಸಮಾರಂಭ ಇತ್ಯಾದಿ ಸಂದರ್ಭಗಳಲ್ಲಿ ಸಚಿವರಾಗಿ ಸಿದ್ದವೀರಪ್ಪನವರು ಮಾಡಬೇಕಾಗಿದ್ದ ಭಾಷಣಗಳು. ನೀಡಬೇಕಾಗಿದ್ದ ಟಿಪ್ಪಣಿಗಳನ್ನು ಸಿದ್ದಪಡಿಸುವ ಕೆಲಸವೂ ಸಂಬಂಧಪಟ್ಟ ವಿಭಾಗದಲ್ಲಿದ್ದ ಕಾರಣ ನನ್ನ ಮೇಲೆ ಬೀಳುತ್ತಿತ್ತು. ಹಾಗಾಗಿ ಅವರೊಡನೆ ಆಗಾಗ ಮಾತನಾಡುವ ಸಂದರ್ಭಗಳು ಬರುತ್ತಿದ್ದವು. ಈ ಸಂಪರ್ಕದಿಂದಾಗಿ, ಹೊರನೋಟಕ್ಕೆ ಅವರು 'ಸರಸ' ಸ್ವಭಾವಕ್ಕೆ ಸಲ್ಲುವಂತೆ ಕಾಣದಿದ್ದರೂ ತುಂಬ ಸಹೃದಯಿ ಎಂಬುದನ್ನು ನಾನು ಕಂಡುಕೊಂಡಿದ್ದೆ.

ಒಂದು ಸಂದರ್ಭ : ಬೆಂಗಳೂರು ಆಕಾಶವಾಣಿಯ ಮೂಲಕ (ಆಗಿನ್ನೂ ದೂರದರ್ಶನ ಬಂದಿರಲಿಲ್ಲ) ಆಗಿಂದಾಗ ಆರೋಗ್ಯ ಸಚಿವರ ಭಾಷಣ ಅಥವಾ ಸಂದೇಶಗಳ ಪ್ರಸಾರ ಕಾರ್ಯಕ್ರಮವಿರುತ್ತಿತ್ತು. ಆಕಾಶವಾಣಿಯಲ್ಲಿ ಕುಟುಂಬ ಯೋಜನಾ ವಿಭಾಗಕ್ಕೆ ಒಬ್ಬ ಪ್ರತ್ಯೇಕ ಕಾರ್ಯಕ್ರಮಾಧಿಕಾರಿ ಇದ್ದರು. ಅವರ ಹೆಸರು ಮುನಿಕೃಷ್ಣಪ್ಪ. ಜನಸಂಖ್ಯಾ ಯೋಜನೆಯ ಬಗೆಗೆ ವ್ಯಾಪಕ ಪ್ರಚಾರ ನಡೆಸಬೇಕಾಗಿದ್ದ ಕಾರಣ ಇಲಾಖೆಯ ನನಗೂ ಆಕಾಶವಾಣಿಯ ಮುನಿಕೃಷ್ಣಪ್ಪನವರಿಗೂ ಸಹಜವಾಗಿಯೇ ನಿಕಟ ಸಂಪರ್ಕ ಬೆಳೆದಿತ್ತು. ಮುನಿಕೃಷ್ಣಪ್ಪನವರು ಸಚಿವ ಸಿದ್ದವೀರಪ್ಪನವರಿಗೂ ಪರಿಚಿತರಾದರು.

ಒಮ್ಮೆ ಮುನಿಕೃಷ್ಣಪ್ಪ ನನ್ನ ಬಳಿ ಬಂದು ಒಂದು ವಿಷಯ ಪ್ರಸ್ತಾಪಿಸಿದರು. ಅದೆಂದರೆ, ಅವರ ಹತ್ತಿರದ ಸಂಬಂಧಿಯೊಬ್ಬರು ಸರ್ಕಾರಿ ವೈದ್ಯರಾಗಿದ್ದರು. ಅವರು ಸ್ನಾತಕೋತ್ತರ ಪದವಿ ಶಿಕ್ಷಣಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಆದರೆ ಆಯ್ಕೆ ಸಮಿತಿ ಅವರನ್ನು ಯಾವುದೋ ನಿಯಮ ಪ್ರಕಾರ ಆಯ್ಕೆ ಮಾಡಿರಲಿಲ್ಲ. ಸಂಬಂಧಪಟ್ಟ ಸಚಿವರು ವಿಶೇಷ ಸಂದರ್ಭವೆಂದು ಪರಿಗಣಿಸಿ ಆಯ್ಕೆ ಮಾಡಬಹುದೆಂದೂ ಸಿದ್ದವೀರಪ್ಪನವರಿಗೆ ನಾನು ಒಂದು ಮಾತು ಹೇಳಬೇಕೆಂದೂ ಮುನಿಕೃಷ್ಣಪ್ಪನವರು ನನಗೆ ತಿಳಿಸಿದರು.

ಸಚಿವರೊಡನೆ ಇಂತಹ ಯಾವುದೇ ವೈಯಕ್ತಿಕ ಸಂಬಂಧದ ವಿಷಯಗಳನ್ನು ಎಂದೂ ಮಾತನಾಡದ ನಾನು 'ಅದು ಸಾಧ್ಯವಿಲ್ಲದ ಮಾತು' ಎಂದು ಮುನಿಕೃಷ್ಣಪ್ಪನವರಿಗೆ ಹೇಳಿದೆ. ಹಾಗೆಯೇ, "ಸಚಿವರಿಗೆ ನಿಮ್ಮ ಪರಿಚಯವೇ ಇರುವುದರಿಂದ ನೀವೇ ನೇರವಾಗಿ ಅವರನ್ನು ಕಾಣಬಹುದು" ಎಂದು ತಿಳಿಸಿದೆ. ಅವರು ತಮ್ಮ ಅಂಜಿಕೆಯನ್ನು ವ್ಯಕ್ತಪಡಿಸಿ ನನಗೇ ತುಂಬಾ ಒತ್ತಾಯ ಮಾಡಿದರು.

ನಾನಿದ್ದ ಇಲಾಖೆಯ ಕಾರ್ಯಕ್ರಮಗಳಿಗೆ ಆಕಾಶವಾಣಿಯ ಸಹಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಸಂಪರ್ಕ ಅಗತ್ಯವಿದ್ದ ಕಾರಣ ನಾನು ಮುನಿಕೃಷ್ಣಪ್ಪನವರ ಒತ್ತಾಯಕ್ಕೆ ಮಣಿಯಬೇಕಾಯಿತು. ಅಂತೇ ಮಾರನೆಯ ದಿನ ಬೆಳಗ್ಗೆ ಸಚಿವರ ಮನೆಗೇ ಅವರನ್ನು ಕರೆದೊಯ್ದು ಅತ್ಯಂತ ಅಳುಕಿನಿಂದಲೇ ವಿಷಯ ಪ್ರಸ್ತಾಪಿಸಿದೆ. ಸಚಿವರು ಸಾವಧಾನವಾಗಿ ನಾನು ಹೇಳಿದ್ದನ್ನೆಲ್ಲ ಆಲಿಸಿದರು. ನನ್ನ ಜೊತೆಯಲ್ಲಿದ್ದ ಮುನಿಕೃಷ್ಣಪ್ಪನವರಿಗೂ ಸಚಿವರ ಸಮಾಧಾನ ಕಂಡು ಧೈರ್ಯ ಬಂದಂತೆ ಕಂಡಿತು. "ಸಾರ್ ನಾವು ಪರಿಶಿಷ್ಟ ಸಮುದಾಯದ ಕೊರಮ ಜನಾಂಗಕ್ಕೆ ಸೇರಿದವರು. ನಮ್ಮ ಜನಾಂಗದಲ್ಲಿ ವೈದ್ಯಕೀಯ ಪದವೀಧರರಾಗುವುದೇ ಕಷ್ಟ. ಇನ್ನು ಸ್ನಾತಕೋತ್ತರ ಪದವಿ ಶಿಕ್ಷಣದ ಅವಕಾಶ ಪಡೆಯುವುದು ಇನ್ನೂ ಕಷ್ಟ. ದಯವಿಟ್ಟು ನನ್ನ ಬಂಧುವಿಗೆ ಅವಕಾಶ ಕಲ್ಪಿಸಿಕೊಡಬೇಕು" ಎಂದು ಕೇಳಿಕೊಂಡರು.

ತಕ್ಷಣವೇ ಸಚಿವರು ತಮ್ಮ ಆಪ್ತ ಕಾರ್ಯದರ್ಶಿಯವರನ್ನು ಕರೆದು ಸಂಬಂಧಪಟ್ಟ ಆಯ್ಕೆ ಸಮಿತಿಯ ಅಧಿಕಾರಿಯೊಡನೆ ದೂರವಾಣಿ ಸಂಪರ್ಕ ಮಾಡಿಕೊಡಲು ಸೂಚಿಸಿದರು. ಆಗ ಆಯ್ಕೆ ಸಮಿತಿಯ ಕಾರ್ಯದರ್ಶಿ ಬೌರಿಂಗ್ ಆಸ್ಪತ್ರೆ ಮೇಲ್ವಿಚಾರಣಾಧಿಕಾರಿಯಾಗಿದ್ದವರು, ಅಂದು ನಮ್ಮ ಕಣ್ಣೆದುರಿಗೇ ನಡೆದ ದೂರವಾಣಿ ಸಂಭಾಷಣೆಯ ಸಾರವಿದು:

ಸಚಿವರು ಆ ಕಾರ್ಯದರ್ಶಿಗೆ ವಿಷಯವನ್ನು ತಿಳಿಸಿದರು. ಆ ಕಡೆಯಿಂದ ಬಂದ ಉತ್ತರಕ್ಕೆ ಪ್ರತಿಕ್ರಿಯಿಸಿ, "ಅದೆಲ್ಲಾ ಇರಬಹುದು, ಈ ವ್ಯಕ್ತಿ ವೈದ್ಯಕೀಯ ಪದವಿ ಪಡೆಯಲು ಆರೇಳು ಪ್ರಯತ್ನಗಳನ್ನು ನಡೆಸಿರಬಹುದು. ಆದರೆ ಆತನ ಸ್ಥಿತಿಯಲ್ಲಿ ಪಾಸು ಮಾಡಿರುವುದೇ ಹೆಚ್ಚು. ನನ್ನ ಜೊತೆಯಲ್ಲಿ ವಿದ್ಯಾರ್ಥಿಯಾಗಿದ್ದ ಒಬ್ಬಾತ 10 ಸಲ ಪರೀಕ್ಷೆಗೆ ಕುಳಿತು ಕೊನೆಗೂ ಪಾಸಾದ. ಇಲ್ಲಿ ಪಾಸಾಗುವುದು ಮುಖ್ಯ. ಈ ಜನಾಂಗದಲ್ಲಿ ಇಷ್ಟು ಓದಿದವರೇ ಇಲ್ಲ. ಈತನೇನೋ ಎಂ.ಬಿ.ಬಿ.ಎಸ್. ಮಾಡಿದ್ದಾನೆ. ಸ್ನಾತಕೋತ್ತರ ಪದವಿ ಶಿಕ್ಷಣದ ಪ್ರವೇಶದ ಆಯ್ಕೆಗೆ ನೀವು ಕೆಲವೊಂದು ಸೂತ್ರಗಳನ್ನು ಹಾಕಿಕೊಂಡಿರಬಹುದು, ಆದರೆ ಮಾನವೀಯ ದೃಷ್ಟಿ ಮತ್ತು ಸಾಮಾಜಿಕ ನ್ಯಾಯ ನಿಮ್ಮ ಸೂತ್ರಗಳಿಗಿಂತ ಮುಖ್ಯ. ಈತನಿಗೆ ಮೊದಲು ಅವಕಾಶ ಕಲ್ಪಿಸಿಕೊಡಿ" – ಎಂದು ಸಹಜ ಅಧಿಕಾರವಾಣಿಯಲ್ಲಿ ಸೂಚಿಸಿದರು.

ಆದರೆ ದೂರವಾಣಿಯು ಇನ್ನೊಂದು ಕಡೆಯಿಂದ "ಅದು ಸಾಧ್ಯವಾಗುವಂತಿಲ್ಲ, ನಿಯಮಗಳಿಗೆ ವಿರುದ್ಧವಾಗುತ್ತದೆ" ಎಂದು ಉತ್ತರ ಬಂದಿರಬೇಕು. ಅದನ್ನು ಕೇಳಿದ ಕೂಡಲೇ ಸಿದ್ದವೀರಪ್ಪನವರು ತುಸು ವ್ಯಗ್ರರಾಗಿ "I say, who made the rules?" ನಿಮಗೂ ಗೊತ್ತಿದೆ. "Every rule has an exception. ಆ ವಿನಾಯಿತಿ ಈ ವೈದ್ಯನಿಗೂ ದೊರಕಲಿ" ಎಂದರು. ಆದರೂ ಅತ್ತ ಕಡೆಯಿಂದ ಮತ್ತೆ ಅದೇ ರಾಗ ಬಂತೆಂದು ಕಾಣುತ್ತದೆ, ಸಚಿವರು ಕೂಡಲೇ, "I say if you are not in a position to do it, bring the file immediately. i will see what to do. The file should reach my table within next half an hour" ಎಂದು ಆದೇಶಿಸಿ ದೂರವಾಣಿ ಸಾಧನವನ್ನು ಕೆಳಗಿಟ್ಟುಬಿಟ್ಟರು.

ಆಡಳಿತ ಮತ್ತು ಕಾನೂನಿನ ಸ್ಪಷ್ಟ ಅರಿವು ಮತ್ತು ಸಾಮಾಜಿಕ ನ್ಯಾಯ ಇರುವ ಸಚಿವರಿಂದ ಮಾತ್ರ ಇಂತಹ ಮಾತು ಬರಲು ಸಾಧ್ಯ. ಹೇಳುವುದೇನು? ಸಚಿವರ ಸೂಚನೆಯಂತೆ ಆಯ್ಕೆ ಸಮಿತಿಯ ಕಾರ್ಯದರ್ಶಿಗಳು ಕಡತದೊಂದಿಗೆ ಬಂದೇಬಿಟ್ಟರು. ಸಚಿವರೊಂದಿಗೆ ಮತ್ತೆ ದೂರವಾಣಿಯಲ್ಲಿ ಹೇಳಿದ್ದನ್ನೇ ಹೇಳಿದರು. ಆಗ ಸಚಿವ ಸಿದ್ದವೀರಪ್ಪನವರು ಸಮಾಧಾನದಿಂದಲೇ "ನೀವು ಹೇಳುವುದೆಲ್ಲಾ ನನಗೂ ಅರ್ಥವಾಗುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ನ್ಯಾಯ ಒದಗಿಸುವುದು ನಮ್ಮ ಕರ್ತವ್ಯ. ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ನಾನು ವಿಶೇಷ ಅನುಮತಿ ನೀಡಿದ್ದೇನೆ. ಆತನಿಗೆ ಅವಕಾಶ ಕೊಡೋಣ" ಎಂದು ಆಜ್ಞೆ ಮಾಡಿಬಿಟ್ಟರು.

ಆ ಸಂದರ್ಭದಲ್ಲಿ ಪ್ರಜಾಸತ್ತೆಯ ಒಬ್ಬ ಪ್ರತಿನಿಧಿಯಾಗಿ, ಸರ್ಕಾರದ ಹೊಣೆಯ ಒಬ್ಬ ಸಚಿವರಾಗಿ ಸಿದ್ದವೀರಪ್ಪನವರು ತಾಳಿದ ನಿಲುವು ನಿಜಕ್ಕೂ ಮಾನವೀಯ; ಸ್ಮರಣೀಯ. ಈ ಸಂದರ್ಭ ಸಾಮಾಜಿಕ ನ್ಯಾಯದ ಬಗೆಗೆ ಅವರಿಗಿದ್ದ ಕಳಕಳಿಗೆ ಸಾಕ್ಷಿಯಾಗಿದೆ. ನೇಮ - ನಿಯಮಗಳ ನೆಪ ಹೇಳಿ ದಿಕ್ಕು ತಪ್ಪಿಸುವ ಅಧಿಕಾರಿಗಳಿಗೆ ಮಾನವೀಯ ಪ್ರಜ್ಞೆ ಮೂಡಿಸುತ್ತದೆ.

ಇಲ್ಲಿ ಸಿದ್ದವೀರಪ್ಪನವರು ಯಾವುದೇ ನಿಯಮವನ್ನು ಉಲ್ಲಂಘಿಸಿಲ್ಲ. ಇರುವ ನಿಯಮದ ವ್ಯಾಪ್ತಿಯಲ್ಲೇ ಸಚಿವಸ್ಥಾನದ ವಿವೇಚನೆಯನ್ನು ಬಳಸಿ ನ್ಯಾಯ ಒದಗಿಸಿದ್ದಾರೆ. ಅವಕಾಶ ವಂಚಿತವಾಗಲಿದ್ದ ಒಬ್ಬ ದಲಿತವರ್ಗದ ವ್ಯಕ್ತಿಗೆ ಸಹಾಯಮಾಡಿದ್ದಾರೆ. ಇಂತಹ ದಿಟ್ಟತನ, ವಸ್ತುನಿಷ್ಠತೆ, ನ್ಯಾಯ ಪ್ರಜ್ಞೆಗಳು ಯಾವಾಗ ಸಾಧ್ಯವಾಗುತ್ತವೆಂದರೆ, ಅಂತಹ ನಿಲುವು ತಾಳುವ ವ್ಯಕ್ತಿ ಕಾನೂನಿನ ಇತಿಮಿತಿಗಳನ್ನು ಬಲ್ಲವನಾಗಿರಬೇಕು. ಆಡಳಿತದ ಅವಕಾಶಗಳನ್ನು ಅರಿತವನಾಗಿರಬೇಕು. ಎಲ್ಲಕ್ಕಿಂತ ಮಿಗಿಲಾಗಿ ಸಾಮಾಜಿಕ ಹೊಣೆಗಾರಿಕೆಯ ಬದ್ಧತೆ ಇರಬೇಕು. ಸಿದ್ದವೀರಪ್ಪನವರಿಗೆ

ಇವೆಲ್ಲ ಇದ್ದ ಕಾರಣದಿಂದಾಗಿಯೇ ಪ್ರಸ್ತಾಪಿಸಿದ ಪ್ರಸಂಗದಲ್ಲಿ ದಲಿತ ವರ್ಗದ ವೈದ್ಯನೊಬ್ಬನಿಗೆ ಸ್ನಾತಕೋತ್ತರ ಶಿಕ್ಷಣ ಪಡೆಯುವ ಅವಕಾಶ ದೊರಕಿತು.

ಶ್ರೀ ಸಿದ್ದವೀರಪ್ಪನವರು ರಾಜಕೀಯವಾಗಿ ಸಾಕಷ್ಟು ಸೋಲು - ಗೆಲುವುಗಳನ್ನು ಅನುಭವಿಸಿದರೂ ಮನಸ್ಸಿನ ಅಸಮತೋಲನವನ್ನು ಕಳೆದುಕೊಂಡವರಲ್ಲ. ಆದರೆ ಸರ್ಕಾರಿ ಅಧಿಕಾರಿಗಳು ಸಮರ್ಥವಾಗಿ ಕಾರ್ಯನಿರ್ವಹಿಸದಿದ್ದಾಗ ಅವರು ಉಗ್ರರಾಗುತ್ತಿದ್ದುದು ನಿಜ. ಹಾಗೆಯೇ ಪ್ರಾಮಾಣಿಕ ಸೇವೆ ಸಲ್ಲಿಸುವವರ ಬಗೆಗೆ ಅಷ್ಟೇ ಸರಳವಾಗಿರುತ್ತಿದ್ದುದೂ ನಿಜ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಚಿವರಾಗಿ ಆಡಳಿತ ನಡೆಸುವವರಿಗೆ ಈ ಎರಡೂ ಗುಣಗಳು ಇರಬೇಕಾಗುತ್ತದೆಂದು ಕಾಣುತ್ತದೆ.

ಎಚ್. ಸಿದ್ದವೀರಪ್ಪನವರು ನಗುತ್ತಿದ್ದುದು ಅಪರೂಪ. ಆದರೆ ಅವರು ನಕ್ಕಾಗಲೇ ನಿಜವಾದ ಸಿದ್ದವೀರಪ್ಪನವರನ್ನು ಕಾಣಬಹುದಾಗಿತ್ತು. **ಅವರು ನನ್ನ ದೃಷ್ಟಿಯಲ್ಲಿ ಹೂವಿಗೆ ಹೂವು. ಉಕ್ಕಿಗೆ ಉಕ್ಕು.**

* * *

# ನನ್ನ ತಂದೆ ನಿಷ್ಠೂರವಾದಿ

**– ಡಾ. ಎಚ್.ಎಸ್. ಹಾಲಸ್ವಾಮಿ, ವೈದ್ಯರು, ಅಮೇರಿಕಾ.**

'ಹರಿಹರ ತಾಲ್ಲೂಕು ವಿಧಾನಸಭಾ ಕ್ಷೇತ್ರದಿಂದ ನನ್ನ ತಂದೆ ಶ್ರೀ ಎಚ್. ಸಿದ್ದವೀರಪ್ಪನವರು ಮೂರುಬಾರಿ ಆಯ್ಕೆಯಾಗಿದ್ದರು. ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ದೇವರಾಜ ಅರಸು ಅಧಿಕಾರಾವಧಿಯಲ್ಲಿ ಸಚಿವರಾಗಿದ್ದರು. **ಅರಸು ಹಾಗೂ ನನ್ನ ತಂದೆ ನಡುವೆ ಮುಖ್ಯಮಂತ್ರಿ ಪದವಿಗೆ ಪೈಪೋಟಿ ಇತ್ತು....'.**

ಕಳೆದ ಐವತ್ತು ವರ್ಷಗಳಿಗೂ ಮಿಕ್ಕಿ ನಾನು ವಿದೇಶದಲ್ಲಿ ವೈದ್ಯನಾಗಿ ಸೇವೆ ಸಲ್ಲಿಸಿದ್ದೇನೆ. ನನ್ನ ಕುಟುಂಬದೊಂದಿಗೆ ಸದ್ಯ ಅಮೇರಿಕಾದಲ್ಲಿ ನೆಲೆಸಿರುವೆ. ಭಾರತ, ಕರ್ನಾಟಕ – ಬೆಂಗಳೂರು ಸಂಬಂಧ ನಿರಂತರವಾಗಿದೆ. ನನ್ನ ತಂದೆ ಶ್ರೀ ಎಚ್. ಸಿದ್ದವೀರಪ್ಪನವರು ನಾನು ವೈದ್ಯನಾಗಬೇಕೆಂದು ಕನಸು ಕಂಡವರು. ಆದರ್ಶ ಬದುಕು ನಡೆಸಿದ ಅವರು ನನಗೆ ಉತ್ತಮ ಶಿಕ್ಷಣ ಕೊಟ್ಟವರು. ಪ್ರೀತಿಯಿಂದ ಸಾಕಿದ ನನ್ನನ್ನು ಮೈಸೂರು ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಅನುವು ಮಾಡಿಕೊಟ್ಟರು. ಆಗ ಇಡೀ ರಾಜ್ಯಕ್ಕೆ ಇದ್ದದ್ದು ಮೈಸೂರು ಮೆಡಿಕಲ್ ಕಾಲೇಜು ಮಾತ್ರ. ಆಗಿನ ಸಂದರ್ಭ 'ನನ್ನ ಮಗ ಡಾಕ್ಟರ್, ಎಂಜಿನಿಯರ್' ಎಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತಿದ್ದ ಕಾಲ.

ವೃತ್ತಿಯಲ್ಲಿ ಅವರೊಬ್ಬ ಖ್ಯಾತ ವಕೀಲರು. ಸಮಾಜ ಸೇವೆ, ರೈತಪರ ಹೋರಾಟ, ರಾಜಕಾರಣ ಅವರ ಬದುಕಿನ ಒಂದು ಭಾಗ. ಹಾಗೆ ನೋಡಿದರೆ ರಾಜಕಾರಣದಲ್ಲಿ ಪಳಗಿದ ಹುಲಿ ಅನ್ನಬಹುದು.

**ಮೊದಲ ಆಯ್ಕೆಯಲ್ಲೇ ಸಚಿವರು** – ಐವತ್ತರ ದಶಕದಿಂದ ಎಪ್ಪತ್ತರ ದಶಕದವರೆಗೆ ಕರ್ನಾಟಕದ ರಾಜಕಾರಣದಲ್ಲಿ ನನ್ನ ತಂದೆ ಮಹತ್ವದ ಪಾತ್ರ ವಹಿಸಿದವರು. ರಾಜ್ಯ ಕಂಡ ಉತ್ತಮ ರಾಜಕಾರಣಿ, ಪ್ರಾಮಾಣಿಕ ಆಡಳಿತಗಾರ, ಅತ್ಯುತ್ತಮ ಸಂಸದೀಯಪಟು ಆಗಿದ್ದರು. ಶಾಸಕರಾಗಿ ಆಯ್ಕೆಯಾದ ಮೊದಲ ಸಂದರ್ಭದಲ್ಲೇ ಕೆಂಗಲ್ ಹನುಮಂತಯ್ಯನವರ ಸಂಪುಟದಲ್ಲಿ ಸಚಿವರಾದವರು. ಮುಂದೆ ಸರ್ಕಾರದ ವಿವಿಧ ಇಲಾಖೆಯ ಸಚಿವ ಹುದ್ದೆ, ವಿರೋಧಪಕ್ಷದ ಸ್ಥಾನ ಅಲಂಕರಿಸಿದವರು. ಕೂದಲೆಳೆ ಅಂತರದಲ್ಲಿ ಒಮ್ಮೆ ಮುಖ್ಯಮಂತ್ರಿ ಪದವಿಯಿಂದ ವಂಚಿತರಾದವರು. ಜೀವನದಲ್ಲಿ ಸಿಹಿ, ಕಹಿ – ಎರಡನ್ನು ಸಮಾನಾಗಿ ಉಂಡವರು. ಲೆಕ್ಕಹಾಕಿದರೆ ಕಹಿಯೇ ಹೆಚ್ಚೇನೋ.... ಅವರು ದೈವಭಕ್ತರಾಗಿದ್ದರೂ ಮೌಢ್ಯತೆ, ಆಡಂಬರದ ಭಕ್ತಿಗೆ ಒಳಗಾದವರಲ್ಲ. ಎಂದೂ ನಿರಾಶೆಗೊಂಡವರಲ್ಲ. you Should never question His judgement, sometimes God helps by negotion ಎಂದು ಸಮಾಧಾನ ತೆಗೆದುಕೊಳ್ಳುತ್ತಿದ್ದರು. ಶುದ್ಧಹಸ್ತರು. ನಿಸ್ಪೃಹ ರಾಜಕಾರಣಿ. ನಿಷ್ಠುರವಾದಿ. ಇದ್ದದ್ದನ್ನು ಇದ್ದಂತೆ ಹೇಳುವ ನೇರ ಮಾತುಗಾರರು. ಹೊರಗೆ ನೋಡಲು ಸ್ವಲ್ಪ ಗಡುಸು ವ್ಯಕ್ತಿಯಹಾಗೆ ಕಂಡರೂ, ಮೃದು ಹೃದಯಿ.

ರೈತರ ನೋವು, ದು:ಖಗಳಿಗೆ ಸ್ಪಂದಿಸಿ ವರ್ತಕವೃಂದದಿಂದ ಅವರಿಗೆ ಆಗುತ್ತಿದ್ದ ಅನ್ಯಾಯ ಸರಿಪಡಿಸಲು ರೈತರನ್ನು ಸಂಘಟಿಸಿ, ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪಿಸಿ ಅವರಿಗೆ ನೈತಿಕ ಬೆಂಬಲ ಕೊಟ್ಟವರು ನನ್ನ ತಂದೆ. ರೈತರನ್ನು ಸಂಘಟಿಸಿದ್ದರ ಫಲವಾಗಿ ಅವರಿಗೆ ವರ್ತಕರಿಂದ ಬೆದರಿಕೆಗಳು ಬಂದವು. ಮುಂದೆ 1957ರ ವಿಧಾನಸಭಾ ಚುನಾವಣೆಯಲ್ಲಿ, ಸೋಲು ಅನುಭವಿಸಬೇಕಾಯಿತು. ನನಗೆ ಆಗ 20ವರ್ಷ. ಹೊರಗೆ ಮೆಟ್ಟಿಲಮೇಲೆ ಕುಳಿತು ಅಳುತ್ತಿದ್ದುದನ್ನು ಯಾರೋ ಅವರಿಗೆ ಒಳಗೆ ಹೋಗಿ ತಿಳಿಸಿದಾಗ ಕೂಡಲೇ ನನ್ನ ಬಳಿ ಬಂದು 'your father is just defeated in an Election, HE IS NOT DEAD' ಎಂದು ನನ್ನ ಕಣ್ಣೀರು ಒರಸಿ, ಅವರೇ ಸ್ವಂತ ನನಗೆ ಇಷ್ಟವಿಲ್ಲದಿದ್ದರೂ ಬಲವಂತಮಾಡಿ ಊಟ ಮಾಡಿಸಿದ್ದರು. ಅವರ ಪ್ರೀತಿ ನನ್ನ ಮೇಲೆ ಒಂದು ಮೇರು ಪರ್ವತದಂತಿತ್ತು.

ಮುಂದಿನ ಅವರ ರಾಜಕೀಯ ಭವಿಷ್ಯದ ಬಗ್ಗೆ ಅವರ ಆತ್ಮೀಯ ಒಡನಾಡಿಗಳು Safe constituencyಗೆ ಹೋಗಿ ಚುನಾವಣೆಗೆ ನಿಲ್ಲಿ, ನಿಮಗೆ ಹೊಳಲ್ಕೆರೆ, ಅರಸೀಕೆರೆ ಸೂಕ್ತ ಸ್ಥಳಗಳು ಎಂದು ಸಲಹೆ ಕೊಟ್ಟರು. ಅದಕ್ಕೆ ಅವರು ಹರಿಹರ ತಾಲ್ಲೂಕಿನ ಜನ ನನ್ನನ್ನು ಇಂದು ತಿರಸ್ಕರಿಸಿರಬಹುದು, ನಾಳೆ ಕಾಲ ಹೀಗೆ ಇರೊಲ್ಲ – ಆ ಜನರೇ ನನ್ನನ್ನು ಮತ್ತೆ ಗೆಲ್ಲಿಸುತ್ತಾರೆ. ನಾನು ಇಲ್ಲೇ ಇದ್ದು ಜನರ ಕಷ್ಟಸುಖಕ್ಕೆ ಸ್ಪಂದಿಸುವೆ ಅಂದರು. ಮುಂದೆ ಅವರ ಮಾತು ನಿಜವಾಯಿತು.

## ತಪ್ಪಿದ ಮುಖ್ಯಮಂತ್ರಿ ಪದವಿ!

ಯಾವ ಜನ ನನ್ನ ತಂದೆಯನ್ನು ಸೋಲಿಸಿದ್ದರೋ, ಅದೇ ಜನ ಎರಡುಬಾರಿ ಅವರನ್ನು ಗೆಲ್ಲಿಸಿದರು. ಒಂದರ್ಥದಲ್ಲಿ ಅದೊಂದು ಕುರುಕ್ಷೇತ್ರ. ತಂದೆಯವರದ್ದು ಛಲದ ಸ್ವಭಾವ. ಅತಿ ಗಾಢವಾದ ಸ್ನೇಹ ಮತ್ತು ಮೈತ್ರಿ – ಅಷ್ಟೇ ಹಗೆತನ ತೀಕ್ಷ್ಣವಾಗಿತ್ತು. ಅವರು ರಾಜ್ಯದ ಪ್ರಮುಖ ರಾಜಕಾರಣಿ ಆದರು. ವಿರೋಧಪಕ್ಷದ ನಾಯಕರಾದರು. ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದರು. ಇದಕ್ಕೆ ಅವರು ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲರನ್ನು ಮುಖ್ಯಮಂತ್ರಿ ಗಾದಿಯಿಂದ ಇಳಿಸಿದ್ದೇ ಮಹತ್ವದ ಉದಾಹರಣೆ ಆದರೆ ಸರ್ಕಾರ ಹಳಿ ತಪ್ಪಿದಾಗ ಟೀಕೆ ಟಿಪ್ಪಣಿಗಳಿಂದ ಸರಿದಾರಿಗೆ ತಂದದ್ದೂ ಉಂಟು.. ಮತ್ತೆ ಅರಸು ಸಂಪುಟದಲ್ಲಿ ಸಚಿವರಾದರು. ಜನತೆಗೆ ಕೊಟ್ಟಿದ್ದ ಭರವಸೆ ಹಾಗೂ ಜನರ ನಿರೀಕ್ಷೆ ಸುಳ್ಳು ಮಾಡಲಿಲ್ಲ.

ಹರಿಹರ ತಾಲ್ಲೂಕು ವಿಧಾನಸಭಾ ಕ್ಷೇತ್ರದಿಂದ ಮೂರುಬಾರಿ ಆಯ್ಕೆಯಾಗಿದ್ದರು. ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ದೇವರಾಜ ಅರಸು ಅಧಿಕಾರಾವಧಿಯಲ್ಲಿ ಸಚಿವರಾಗಿದ್ದರು. ಅರಸು ಹಾಗು ನನ್ನ ತಂದೆ ನಡುವೆ ಮುಖ್ಯಮಂತ್ರಿ ಪದವಿಗೆ ಪೈಪೋಟಿ ಇತ್ತು. ದೆಹಲಿ ಹೈಕಮಾಂಡ್ ಶ್ರೀಮತಿ ಇಂದಿರಾಗಾಂಧಿಯೇ ಎಲ್ಲಾ ನಿರ್ಣಯಗಳ ಸೂತ್ರದಾರರಾಗಿದ್ದರಿಂದಾಗಿ ತಂದೆ ಬಳಿ ಸುಳಿದಿದ್ದ ನಾಯಕತ್ವದ ಸ್ಥಾನ ದೇವರಾಜ ಅರಸು ಅವರಿಗೆ ಸಂದಿತು.

ಆರಂಭದಲ್ಲಿ ತಂದೆಯವರು ಅರಸು ಅವರನ್ನು ಹಿಂಬಾಲಿಸಲಿಲ್ಲ. ಆದರೆ ಹೈಕಮಾಂಡ್ ಕರೆದು ಅರಸು ನಿಮ್ಮನ್ನು ಸಚಿವರನ್ನಾಗಿ ಮಾಡುತ್ತಾರೆ, ಅವರಿಗೆ ಸಹಕರಿಸಿ ಎಂದಿದ್ದರಿಂದಾಗಿ ಸಚಿವರೂ ಆದರು. ಮುಂದೆ ಇಬ್ಬರ ನಡುವೆ ಭಿನ್ನಾಭಿಪ್ರಾಯ ಹೆಚ್ಚಾದ್ದರಿಂದ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟರು. ಆರೋಗ್ಯದ ಕಾರಣದಿಂದಾಗಿ ಮತ್ತೆ ಚುನಾವಣೆಗೆ ನಿಲ್ಲಲಿಲ್ಲ.

ತಂದೆಯವರು ಸಚಿವರಾಗಿದ್ದ ಸಂದರ್ಭದಲ್ಲಿ ಅನೇಕ ಜನಪರವಾದ ಕೆಲಸ ಮಾಡಿದ್ದಾರೆ. ಕಾನೂನು, ನಿಯಮಾವಳಿಗಳ ಅನ್ವಯ ಶ್ರೀಸಾಮಾನ್ಯನಿಗೆ, ರೈತರಿಗೆ, ಕಾರ್ಮಿಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪನಿ, ಕೆ.ಜಿ.ಎಫ್ ಗೋಲ್ಡ್ ಮೈನ್ಸ್ ರಾಷ್ಟ್ರೀಕರಣ ಮಾಡಿದ್ದು ಇವರ ಹೆಗ್ಗುರುತು. ಕೆ.ಜಿ.ಎಫ್ ವಿಚಾರದಲ್ಲಿ ಜವಾಹರಲಾಲ್ ನೆಹರೂ ಅಸಮಾಧಾನ ಹೊಂದಿದ್ದರು. ಮೌಂಟ್‌ಬ್ಯಾಟನ್‌ರಿಗೆ ಆತ್ಮೀಯರಾಗಿದ್ದ ಜಾನ್ ಟೇಲರ್ ಅಂಡ್ ಕಂಪನಿ ವಿರುದ್ಧ ತಂದೆ ಯುದ್ಧ ಸಾರಿದ್ದರು. ಕೆಂಗಲ್‌ರ ಮೂಲಕ ಪ್ರಧಾನಿ ನೆಹರು ಅವರೂ ತಂದೆ ಬಗ್ಗೆ ಅತೃಪ್ತಿಯನ್ನೂ ವ್ಯಕ್ತಪಡಿಸಿದ್ದರು. ಇದೆಲ್ಲದರ ಜತೆ ರಾಜ್ಯದಲ್ಲಿ ಆರೋಗ್ಯ ಸಚಿವರಾಗಿದ್ದಾಗ "ವೈದ್ಯಕೀಯ ವಿಶ್ವವಿದ್ಯಾಲಯ"ಕ್ಕೆ ಚಾಲನೆ ಕೊಟ್ಟವರು ಇವರೇ ಆದರೂ ಆ ಸಂದರ್ಭ ಅದು ಕೈಗೂಡಲಿಲ್ಲ. ಆದರೆ ಅವರು ಕನಸು ಕಂಡ ಮೂರೂವರೆ

ದಶಕದ ನಂತರ ರಾಜ್ಯದಲ್ಲಿ ವೈದ್ಯಕೀಯ ವಿಶ್ವವಿದ್ಯಾಲಯ ಅಸ್ಥಿತ್ವಕ್ಕೆ ಬಂದಿರುವುದು ವೈದ್ಯನಾದ ನನಗೂ ಸಂತೊಷ ಉಂಟುಮಾಡಿದೆ.

## ಮಹಾರಾಜರು, ಸುತ್ತೂರು ಶ್ರೀ, ಸಿರಿಗೆರೆ ಶ್ರೀಗಳೊಂದಿಗೆ....

ಮೈಸೂರು ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರ ಜತೆ ತಂದೆಯವರ ಆತ್ಮೀಯತೆ, ಒಡನಾಡ ತುಂಬಾ ಚನ್ನಾಗಿತ್ತು. ಇದು ಕೆಲವರ ಅಸೂಯೆಗೂ ಕಾರಣವಾಗಿತ್ತು. ಹಾಗೆಯೇ ಮೈಸೂರಿನ ಸುತ್ತೂರು ಹಿರಿಯ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳ ಬಗ್ಗೆಯೂ ಅಪಾರ ಪ್ರೀತಿ, ಗೌರವ ಹೊಂದಿದ್ದರು.

ಸಿರಿಗೆರೆ ತರಳಬಾಳು ಹಿರಿಯ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಮನೆತನದ ಸ್ವಾಮಿಗಳು. ಹೀಗಾಗಿ ಬೃಹನ್ಮಠಕ್ಕೆ ಆತ್ಮೀಯ ಒಡನಾಟದ ಸಂಪರ್ಕ ಇತ್ತು. ಮಠಕ್ಕೆ ಸಂಬಂಧಿಸಿದ ಜಮೀನು ವಿವಾದ, ಕೋರ್ಟು ವ್ಯವಹಾರದ ಬಗ್ಗೆ ಸ್ವಾಮೀಜಿ ಜತೆ ಚರ್ಚಿಸುತ್ತಿದ್ದರು.

ಜೊತೆಗೆ ತಿಂಗಳಲ್ಲಿ 2 – 3 ಬಾರಿ ಮೈಸೂರು ಸಂಪರ್ಕ ಇಟ್ಟುಕೊಂಡರು. ಮಹಾರಾಜರು, ಸುತ್ತೂರು ಸ್ವಾಮಿಗಳು – ಈ ಇಬ್ಬರ ಭೇಟಿ ಮುಂದುವರೆಸಿದರು. ಅದರಲ್ಲೂ ತಂದೆಯವರ ಕೊನೆಯ ದಿನಗಳಲ್ಲಿ ಸುತ್ತೂರು ಸ್ವಾಮೀಜಿ ಅವರ ಜತೆ ಮಾತಾಡಬೇಕು, ಮಠಕ್ಕೆ ಹೋಗಬೇಕು, ಕೆಲಕಾಲವಾದರೂ ಅವರ ಬಳಿ ಇರಬೇಕು, ಅವರನ್ನು ಭೇಟಿ ಆಗಬೇಕು ಅಂತ ಅವರಿಗೆ ಅನ್ನಿಸುತ್ತಿತ್ತು. ಬಹುಶ: ಇದು ಸಿರಿಗೆರೆ ಹಿರಿಯ ಸ್ವಾಮಿಗಳಿಂದ ಮಾನಸಿಕವಾಗಿ ದೂರವಾಗಿದ್ದರ ಸೂಚನೆಯೋ ಏನೋ...

ಮಹಾರಾಜರೂ ಇವರನ್ನು ಪ್ರೀತಿ, ವಿಶ್ವಾಸದಿಂದ ಕಾಣುತ್ತಿದ್ದರು, ತಿಂಗಳಲ್ಲಿ ಒಂದೆರಡುಬಾರಿ ಅವರ ಭೇಟಿ ಆಗುತ್ತಿತ್ತು. ಈಗಿನ ವಿಶಾಲ ಬೆಂಗಳೂರು ಅರಮನೆ ಮೈದಾನದಲ್ಲಿರುವ ಅರಮನೆಯಲ್ಲಿ ಮಹಾರಾಜರ ಹಾಗೂ ತಂದೆಯವರ ಭೇಟಿ ಹೆಚ್ಚು ನಡೆಯುತ್ತಿತ್ತು. ಆಶ್ಚರ್ಯ ಏನೂ ಅಂದ್ರೆ, ತಂದೆಯವರು ಮಹಾರಾಜರಿಗೆ ಮನೆಯಲ್ಲಿ ಮಾಡಿದ್ದ ದಾವಣಗೆರೆಕಡೆಯ ಜೋಳದರೊಟ್ಟಿ, ಚಟ್ನಿ, ಪಲ್ಯ, ಮೊಸರು ತೆಗೆದುಕೊಂಡು ಹೋಗುತ್ತಿದ್ದುದು. ಈ ವಿಷಯ ಕೆಲವರಿಗೆ ನಂಬಲೂ ಆಗಲಿಲ್ಲ. ಇದರಿಂದಲೇ ತಿಳಿಯಬಹುದು – ಮಹಾರಾಜರು ಹಾಗೂ ತಂದೆ ನಡುವಿನ ಬಾಂಧವ್ಯ ಎಂಥಾದ್ದು ಅಂತ. ನಾನು ಯುವಕನಾಗಿ ಮಹಾರಾಜರನ್ನು ಹತ್ತಿರದಿಂದ ಗಮನಿಸಿದ್ದೇನೆ. ಅಷ್ಟೆ ಅಲ್ಲ, ತಂದೆಯವರಿಗೆ ಅವರ ಕೊನೆಯ ದಿನಗಳವರೆವಿಗೂ ಜತೆಯಲ್ಲಿದ್ದು ಸೇವೆ ಮಾಡುವ ಪುಣ್ಯ ಒದಗಿತ್ತು.

ತಂದೆಯವರು ಹಾಗು ಮಹಾರಾಜರ ನಡುವಿನ ಸ್ನೇಹಕ್ಕೆ ಬೆಲೆಕಟ್ಟಲಾಗದ ಉಡುಗೊರೆಯೊಂದು ಹುಡುಕಿ ಬಂದಿತ್ತು. ಅರಮನೆಯ ಒಂದು ಭಾಗದಲ್ಲಿ ಎಕರೆಯಷ್ಟು ಪ್ರದೇಶವನ್ನು ಮಹಾರಾಜರು ಬರೆದು ಕೊಡಲು ಮುಂದಾಗಿದ್ದರು.

ಇದನ್ನು ತಂದೆಯವರು ನಯವಾಗಿ ನಿರಾಕರಿಸುತ್ತ, 'ಇದು ನಿಮ್ಮ ನನ್ನ ನಡುವಿನ ಸ್ನೇಹ ಪ್ರೀತಿಗೆ ಬೆಲೆ ಕಟ್ಟಿದಂತಾಗುತ್ತದೆ. ನಿಮ್ಮ ಪ್ರೀತಿ, ವಿಶ್ವಾಸ, ಔದಾರ್ಯ ದೊಡ್ಡದು' – ಎಂದು ವಿನಯದಿಂದ ತಿರಸ್ಕರಿಸಿದ್ದ ದೊಡ್ಡವ್ಯಕ್ತಿ ನನ್ನ ತಂದೆ ಎಚ್. ಸಿದ್ದವೀರಪ್ಪ ಎಂಬ ಹೆಮ್ಮೆ ನನಗಿದೆ.

**ಆದರ್ಶನೀಯರು:** ತಂದೆಯವರು ಒಳ್ಳೆ ಓದುಗರು. ಅಪಾರ ಪುಸ್ತಕ ಸಂಗ್ರಹ ಹೊಂದಿದ್ದರು. ಕಾನೂನು ಪರಿಣತಿ ಅಷ್ಟೇ ಅಲ್ಲ, ಸಾಹಿತ್ಯದ ಬಗ್ಗೆಯೂ ಆಸಕ್ತರಾಗಿದ್ದರು. ವಚನಗಳು, ಸರ್ವಜ್ಞನ ತ್ರಿಪದಿಗಳು, ಕವಿ ಡಿ.ವಿ.ಜಿ ಅವರ 'ಮಂಕುತಿಮ್ಮನ ಕಗ್ಗ'ದ ಬಗ್ಗೆ ಅರಿತಿದ್ದರು. ದ.ರಾ. ಬೇಂದ್ರೆ, ಕುವೆಂಪು, ತೀ.ನಂ.ಶ್ರೀ ಅವರುಗಳ ಕೃತಿಗಳ ಸಂಗ್ರಹವೂ ಇತ್ತು. ಕನ್ನಡ – ಇಂಗ್ಲೀಷ್ ಸಮಸಮ ಅನ್ನುವಷ್ಟು ಸಂಗ್ರಹ ಹೊಂದಿದ್ದರು.

ಗಾಂಧೀಜಿ, ಸರ್ ಎಂ. ವಿಶ್ವೇಶ್ವರಯ್ಯ, ಅಂಬೇಡ್ಕರ್, ಸರ್ದಾರ್ ವಲ್ಲಬಾಯ್ ಪಟೇಲ್, ಲಾಲ್ ಬಹದ್ದೂರ್ ಶಾಸ್ತ್ರಿ ಇವರಿಗೆ ಆದರ್ಶನೀಯರು. ಆಗ ಕೇಂದ್ರದಲ್ಲಿ ಹಣಕಾಸು ಸಚಿವರಾಗಿದ್ದ ಶ್ರೀ ಟಿ.ಟಿ. ಕೃಷ್ಣಮಾಚಾರಿ ತಂದೆಯವರಿಗೆ ತುಂಬಾ ಬೇಕಾದವರಾಗಿದ್ದರು.

* * *

# ಹಠವಾದಿಯೂ, ಉತ್ತಮ ಸಂಸದೀಯ ಪಟುವೂ...

– ಎಚ್. ಶಿವಪ್ಪ

ಮಾಜಿ ಸಚಿವರು, ಕರ್ನಾಟಕ ಸರ್ಕಾರ

**ಶ್ರೀ ಎಚ್. ಸಿದ್ದವೀರಪ್ಪನವರು ಬಹಳ ಹಠವಾದಿ. ಅಧಿಕಾರ ಎಲ್ಲಿದೆ ಅಂದರೆ ಪೆನ್ನಿನಲ್ಲಿದೆ ಅನ್ನುತ್ತಿದ್ದರು. ಹಿಡಿದ ಕೆಲಸವನ್ನು ಸಾಧಿಸುವವರೆಗೂ ಬಿಡುತ್ತಿರಲಿಲ್ಲ......... ಅವರ ರಾಜಕೀಯ ಉಚ್ಛ್ರಾಯ ಸ್ಥಿತಿಯ ದಿನಗಳಲ್ಲಿ ಅವರು ರಾಜ್ಯದ ಚುಕ್ಕಾಣಿ ಹಿಡಿವ ಮುಖ್ಯಮಂತ್ರಿಯೂ ಆಗುತ್ತಾರೆಂಬ ಸುದ್ದಿಯಿತ್ತು. ಶ್ರೀ ಡಿ. ದೇವರಾಜ ಅರಸು ಪ್ರತಿಸ್ಪರ್ಧಿ ಆಗಿದ್ದರು ಅನ್ನುವುದು ಸಿದ್ದವೀರಪ್ಪನವರು ಏರಿದ ಎತ್ತರ ಸೂಚಿಸುತ್ತದೆ.**

ಎಚ್. ಸಿದ್ದವೀರಪ್ಪನವರ ವಯಸ್ಸಿಗೂ ನನಗೂ ಅಜಗಜಾಂತರ ವ್ಯತ್ಯಾಸವಿದೆ. ಅವರು ನಮ್ಮ ತಾಲ್ಲೂಕು ಹನಗವಾಡಿಯಲ್ಲಿ ಜನಿಸಿದವರು. ಬಡ ರೈತ ಕುಟುಂಬದಿಂದ ಬಂದವರು. ಆ ಕಾಲದಲ್ಲಿ ಅವರೊಬ್ಬ ಪ್ರಖ್ಯಾತ ಕ್ರಿಮಿನಲ್ ವಕೀಲರಾಗಿದ್ದು, ತಮ್ಮ ವಕೀಲ ವೃತ್ತಿಯನ್ನು ದಾವಣಗೆರೆಯಲ್ಲಿ ಆರಂಭಿಸಿದ್ದರು. ಗಡುಸು ವ್ಯಕ್ತಿತ್ವ ಹೊಂದಿದ್ದಂತಹ ವ್ಯಕ್ತಿ. ಒಳ್ಳೆ ಮಾತುಗಾರರು. ಉತ್ತಮ ಭಾಷಣಕಾರರು. ಜನರನ್ನು ಸೆಳೆವ ಶಕ್ತಿಯಿತ್ತು. ಆಕರ್ಷಣೀಯ ವ್ಯಕ್ತಿಯೂ ಆಗಿದ್ದರು. ನೋಡಲು ಅವರ ದೇಹಾಕೃತಿ ಕುಳ್ಳು ಅಂಥ ಕಂಡ್ರೂ ವ್ಯಕ್ತಿತ್ವ ದೊಡ್ಡದು. ಬಹಳ charismatic man.

ಅವರು ಬದುಕಲ್ಲಿ ಏರಿಳಿತಗಳನ್ನು ಕಂಡವರು. ಅಧಿಕಾರ ಹಲವು ಹಂತಗಳಲ್ಲಿ ಅವರ ಬಳಿ ಸುಳಿದಿದೆ. ಹಾಗೆ ದೂರವೂ ಹೋಗಿದೆ. ಅವರೊಬ್ಬ ಉತ್ತಮ ಆಡಳಿತಗಾರರು. ಅಧಿಕಾರಿಗಳು ಅವರಿಗೆ ಹೆದರಿ ಕೆಲಸ ಮಾಡುತ್ತಿದ್ದರು. ಶಾಸಕರಾಗಿ ಕ್ಷೇತ್ರದ ಜನ ಮನ ಗೆದ್ದವರು. ಅದೇ ಬೆನ್ನಲ್ಲೇ ಜನರಿಂದಲೂ ತಿರಸ್ಕಾರಕ್ಕೊಳಗಾದವರು. ಮತ್ತೆ ಗೆದ್ದು ಶಾಸಕರು, ಸಚಿವರಾಗಿದ್ದವರು. ಈ ಎಲ್ಲಾ ಸಂದರ್ಭಗಳನ್ನು ನಾವು ಕಂಡಿದ್ದೇವೆ. ರಾಜ್ಯದ ಸಚಿವರಾಗಿ ಬೇರೆಬೇರೆ ಸ್ಥಾನ ಅಲಂಕರಿಸಿದವರು. ರಾಜ್ಯ ವಿಧಾನಸಭೆಯ ವಿರೋಧಪಕ್ಷದ ನಾಯಕರಾಗಿದ್ದವರು.....

He never bother about consequences of the said speeches. He use to command effectively, forcefully and voilently in this Area. He became so in state. He was very able Administrator, there is no second opinion about him, about his administration. He was very Agressive and Ascertive in a submission in his Talks. He use to talk with authority, ಕೆಲ ಸಂದರ್ಭಗಳು ನೆನಪಿಗೆ ಬರುತ್ತವೆ.....

ಸಿದ್ದವೀರಪ್ಪನವರು ಬಹಳ ಹಠವಾದಿ. ಅಧಿಕಾರ ಎಲ್ಲಿದೆ ಅಂದರೆ ಪೆನ್ನಿನಲ್ಲಿದೆ ಅನ್ನುತ್ತಿದ್ದರು. ಹಿಡಿದ ಕೆಲಸವನ್ನು ಸಾಧಿಸುವವರೆಗೂ ಬಿಡುತ್ತಿರಲಿಲ್ಲ. ಯಾವುದಾದರೊಂದು ಕೆಲಸ ಕಷ್ಟ ಅಂದರೂ ಅದನ್ನು ಸಾಧಿಸಿ ತೋರಿಸುವ ದೃಢವಿಶ್ವಾಸ ಅವರಲ್ಲಿತ್ತು. ಯಾವುದನ್ನೇ ಆದರೂ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮಾಡುತ್ತಿದ್ದರು. ಯಾವುದಕ್ಕೂ ಅಂಜುತ್ತಿರಲಿಲ್ಲ. ಅವರು ಯಾರಿಗೂ ಹೆದರುತ್ತಿರಲಿಲ್ಲ. He use to speak what he felt .He use to speak with all commanded his force.. ಅಂಥ ಒಂದು meturity talk ಇತ್ತು. ಅವರು ಭಾಷಣ ಮಾಡಲು ನಿಂತರೆ pin drop silence, well informed speeches ... very knowledgeble with all authority, he use to speak. ಆ ಒಂದು nature ಮತ್ತು quality ಹಿಡಿತ ಅವರಿಗೆ ಇತ್ತು. ಆಕರ್ಷಕ ವ್ಯಕ್ತಿತ್ವ ಅವರದ್ದು. ಯಾವುದೇ ವಿಚಾರದಲ್ಲಿ ಹೇಡಿ ಅಲ್ಲ. ಬಹಳ ಗಾಂಭೀರ್ಯ, ಘನತೆಯಿತ್ತು. ಒಬ್ಬ ರಾಜಕಾರಣಿಗೆ ಇರಬೇಕಾದ ಎಲ್ಲಾ ಮೌಲಿಕ ಗುಣಗಳೂ ಇದ್ದವು. ಅವರಿಗೆ ಆಂಗ್ಲಭಾಷೆ ಮೇಲೆ ಪ್ರಭುತ್ವ ಇತ್ತು. ಹೀಗಾಗಿ ಸದನದಲ್ಲಿ ಅಧಿಕಾರಯುತವಾಗಿ, ನಿರರ್ಗಳವಾಗಿ ಗಂಟೆಗಟ್ಟಲೆ ಇಂಗ್ಲೀಷಿನಲ್ಲಿ ಮಾತಾಡಿದ್ದಾರೆ. ಮಾಹಿತಿ ಸಂಗ್ರಹಿಸಿ, ಅದನ್ನು ಸದನದಲ್ಲಿ ಅರ್ಥಪೂರ್ಣವಾಗಿ ಮಂಡಿಸಿದ್ದಾರೆ. ಅವರ ರಾಜಕೀಯ ಉಚ್ಛ್ರಾಯ ಸ್ಥಿತಿಯ ದಿನಗಳಲ್ಲಿ ಅವರು ರಾಜ್ಯದ ಚುಕ್ಕಾಣಿ ಹಿಡಿವ ಮುಖ್ಯಮಂತ್ರಿಯೂ ಆಗುತ್ತಾರೆಂಬ ಸುದ್ದಿಯೂ ಹಬ್ಬಿತ್ತು. ಶ್ರೀ ಡಿ. ದೇವರಾಜ ಅರಸು ಪ್ರತಿಸ್ಪರ್ಧಿ ಆಗಿದ್ದರು ಅನ್ನುವುದು ಸಿದ್ದವೀರಪ್ಪನವರು ಏರಿದ ಎತ್ತರ ಸೂಚಿಸುತ್ತದೆ. ಅದೃಷ್ಟ ಕೊನೆಯಲ್ಲಿ ಕೈಕೊಟ್ಟಿತ್ತು.

**ನಾವು ಗಾಂಜೀ ವೀರಪ್ಪ ಬೆಂಬಲಿಗರು:**

ರಾಜಕೀಯವಾಗಿ ನಾವು ಅವರ ವಿರುದ್ಧ ಪಕ್ಷದವರು. ಇನ್ನೊಂದು ಕ್ಯಾಂಪ್‌ನಲ್ಲಿದ್ದು ಹೋರಾಟ ಮಾಡಿದ್ದೇವೆ. ಅನೇಕ ಭಿನ್ನಾಭಿಪ್ರಾಯ ಇದ್ದರೂ ವೈಯಕ್ತಿಕ ನೆಲೆಯಲ್ಲಿ ಅವರ ಹೋರಾಟ, ಛಲ, ಹಠಮಾರಿತನದಿಂದ ಕಲಿಯುವುದು ಬಹಳಷ್ಟಿದೆ ಅನ್ನಿಸಿತ್ತು. ನಾವು ಅವರ ರಾಜಕೀಯ ಬದ್ಧವೈರಿ ಆಗಿದ್ದ ಗಾಂಜೀ ವೀರಪ್ಪನವರ ಬೆಂಬಲಿಗರಾಗಿದ್ದೆವು. ಅವತ್ತು ಚುನಾವಣೆ ಸಂದರ್ಭದಲ್ಲಿ ರಾಜ್ಯದ ಗಮನವೆಲ್ಲಾ

ಹರಿಹರದತ್ತಲೇ ಇರುತ್ತಿತ್ತು. ರಾಜ್ಯದ ಚುನಾವಣೆಯ ಮಹತ್ವ – ಬಿರುಸುಗಳನ್ನು ನೋಡಬೇಕು ಅಂದ್ರೆ ಹರಿಹರಕ್ಕೆ ಬರಬೇಕು ಅನ್ನುವಂಥಾ ವಾತಾವರಣ ನಿರ್ಮಾಣವಾಗಿತ್ತು. ಆ ದಿನಗಳ ಚುನಾವಣೆ ಸಂದರ್ಭವನ್ನು "ಗಾಂಜೀ ವೀರಪ್ಪ – ಸಿದ್ದವೀರಪ್ಪ ಕುಸ್ತಿ", "ಎರಡು ಸಿಂಹಗಳ ಸೆಣಸಾಟ" ಅಂತಲೇ ಜನ ಭಾವಿಸಿದ್ದರು. ಪತ್ರಿಕೆಗಳವರೂ ಹಾಗೇ ಬರೆಯುತ್ತಿದ್ದರು.

ಭದ್ರಾ ಸಕ್ಕರೆ ಕಾರಖಾನೆ ಕಟ್ಟುವ ವಿಚಾರದಲ್ಲಿ ಈ ಇಬ್ಬರು ನಾಯಕರಲ್ಲೂ ಭಿನ್ನಾಭಿಪ್ರಾಯ, ಮುನಿಸು, ಮುಸುಕಿನ ಗುದ್ದಾಟ ನಡೆಯಿತು. ಸಿದ್ದವೀರಪ್ಪನವರಿಗೆ ದಾವಣಗೆರೆ ಬಳಿಯ ಕುಕ್ಕುವಾಡದಲ್ಲಿ ಸಕ್ಕರೆ ಕಾರಖಾನೆ ಸ್ಥಾಪಿಸುವ ಕನಸಿದ್ದರೆ; ಗಾಂಜೀ ವೀರಪ್ಪನವರಿಗೆ ಹರಿಹರ ದಾವಣಗೆರೆ ಮಧ್ಯ ಬಾತಿ ಬಳಿ ಕಾರಖಾನೆ ಸ್ಥಾಪಿಸುವ ಕನಸಿತ್ತು. ಆದರೆ ಒಂದು ಹಂತದಲ್ಲಿ ಸಿದ್ದವೀರಪ್ಪನವರ ಕೈ ಮೇಲಾಗಿ ಕುಕ್ಕುವಾಡ ಬಳಿ ಸಕ್ಕರೆ ಕಾರಖಾನೆ ಅಸ್ಥಿತ್ವಕ್ಕೆ ಬಂತು. ಆಗ ಅಧಿಕಾರ ಅವರ ಕೈಯಲ್ಲಿತ್ತು.

ಮುಂದೆ ನನ್ನ ರಾಜಕೀಯಗುರು ಕಂಡಿದ್ದ ಕನಸು ನನಸಾಗಿಸುವ ಜವಾಬ್ದಾರಿ ಹೊತ್ತೆ. ಗಾಂಜೀ ವೀರಪ್ಪನವರು ಸತ್ತಮೇಲೆ ಅವರ ಶಿಷ್ಯನಾಗಿ ಹೋರಾಟ ಕೈಗೆತ್ತಿಕೊಂಡೆ. ರಾಜಕೀಯ ಬದಲಾವಣೆಯಿಂದಾಗಿ ಹೋರಾಟ ಗಟ್ಟಿ ಮಾಡಿಕೊಂಡು ಈ ಇಬ್ಬರು ಹುಲಿಗಳು ಸೆಣಸಿದ್ದ ಹರಿಹರ ಕ್ಷೇತ್ರಕ್ಕೆ ಕಾಲಿಡಬೇಕಾಯಿತು. ಭದ್ರಾ ಸಕ್ಕರೆ ಕಾರಖಾನೆಗೆ ಚಾಲನೆ ಕೊಡಲು ಷೇರು ಸಂಗ್ರಹಕ್ಕೆ ತೊಡಗಿದೆ. ಇದರಿಂದ ಸಿದ್ದವೀರಪ್ಪನವರಿಗೆ ಸಿಟ್ಟು ಬಂತು. ನಾವೂ ಒಂದು ಪ್ರತಿತಂತ್ರ ಬಳಸಿದೆವು. ಅವರ ಮತ್ತೊಬ್ಬ ರಾಜಕೀಯ ಶತ್ರು ಆಗಿದ್ದ ಕೊಂಡಜ್ಜಿ ಬಸಪ್ಪ ಅವರ ಸಹಾಯ ಪಡೆದು, ಹೋರಾಟದಿಂದ ಸಕ್ಕರೆ ಕಾರಖಾನೆ ಅಸ್ಥಿತ್ವಕ್ಕೆ ತಂದೆ.

ನನ್ನ ಹೋರಾಟ, ಸಾಧಿಸಿದ ಛಲ ನೋಡಿ ಕೊನೆ ಗಳಿಗೆಯಲ್ಲಿ ಹತ್ತಿರ ಆದರು. ರಾಜಕೀಯದಲ್ಲಿ ಬೇರೆದಾರಿ ತುಳಿದಿದ್ದರೂ ಅವರ ವಯಸ್ಸು, ವ್ಯಕ್ತಿತ್ವ, ಸಾಧನೆಗೆ ಬೆಲೆ ಕೊಟ್ಟೆ. ಬೆಂಗಳೂರಿನಲ್ಲಿ, ದಾವಣಗೆರೆಯಲ್ಲಿ ಭೇಟಿ ಆದಾಗ ಸಂತೋಷದಿಂದ ಕೈಹಿಡಿದು ತಮ್ಮ ಕಾರ್ಯಕರ್ತರಿಗೆ, ಸ್ನೇಹಿತರಿಗೆ ನನ್ನ ಹೋರಾಟದ ಬಗ್ಗೆ ಹೇಳಿದರು. ಅವರೊಬ್ಬ ಬಿಚ್ಚು ಮನಸ್ಸಿನ ಮೇಧಾವಿ. ಅವರಲ್ಲಿ ಕಪಟ ಇರಲಿಲ್ಲ. ನೇರ ಮನುಷ್ಯ. ಎದುರು ಬದರು ಮುಖಕ್ಕೆ ಕನ್ನಡಿ ಹಿಡಿದಂತೆ ಮಾತು ಝಾಡಿಸಿಬಿಡುತ್ತಿದ್ದರು.

## ಕೊನೆದಿನಗಳು ಘೋರ:

ಸಿರಿಗೆರೆ ಶ್ರೀ ತರಳಬಾಳು ಹಿರಿಯ ಜಗದ್ಗುರು ಜತೆ ಸಣ್ಣ ಮುನಿಸು ಕೂಡ ಇತ್ತು. ಆದಾಗ್ಯೂ ಮಠಕ್ಕೆ ಸಹಾಯಕರೂ ಆಗಿದ್ದರು. ಹರಿಹರ ಕ್ಷೇತ್ರದ ಇಬ್ಬರು

ಮಹಾನ್ ಧುರೀಣರು – ಎಚ್. ಸಿದ್ದವೀರಪ್ಪ ಹಾಗೂ ಗಾಂಜೀ ವೀರಪ್ಪ. ಆದರೆ ಈ ಇಬ್ಬರು ನಾಯಕರ ಕೊನೆಯ ದಿನಗಳು ಆಶಾದಾಯಕವಾಗಿರಲಿಲ್ಲ. ಇಬ್ಬರ 'ಸಾವೂ' ಏಕರೀತಿ ದು:ಖದ ಸಾವಾಯಿತು! ಯಾರೂ ಕೊನೆ ಗಳಿಗೆಯಲ್ಲಿ ನೋಡಿಕೊಳ್ಳೋರು ಇರಲಿಲ್ಲ! ಹರಿಹರದ ಎರಡು ಹುಲಿಗಳ ಹೋರಾಟ ಅಂತ ಏನು ಕರೆಯುತ್ತಿದ್ದರು, ಅವರಿಬ್ಬರ ಅಂತ್ಯದ ದಿನಗಳು "ಟ್ರಾಜಿಡಿ!" ಘೋರ. ಕೊನೆಗೆ ಸಂಬಂಧಿಗಳೂ ಇಲ್ಲದಂತಾಯಿತು. ಮೇಧಾವಿಗಳ ಸಾವು ಹೀಗೆ ಅಂತ್ಯವಾಯಿತು.

ಶ್ರೀ ಎಚ್. ಸಿದ್ದವೀರಪ್ಪ ಈ ರಾಜ್ಯದ ಉನ್ನತ ಸಚಿವ ಹುದ್ದೆ ಅಲಂಕರಿಸಿದ್ದವರು, ಸಾಮಾಜಿಕ ಸ್ಥಾನಮಾನ ಹೊಂದಿದ್ದವರು. ಅವರ ಒಬ್ಬನೇ ಪುತ್ರ ಹಾಲಸ್ವಾಮಿ ಡಾಕ್ಟರ್ ವೃತ್ತಿಯಲ್ಲಿದ್ದ. ವಿದೇಶಕ್ಕೆ ಹೋದ. ತಂದೆಯ ಕೊನೆ ಕಾಲಕ್ಕೆ ನೋಡಲೂ ಬರಲಿಲ್ಲ. ಸಿದ್ದವೀರಪ್ಪ ಅವರ ಮೊಮ್ಮಗಳು ಆಶಾ ಅಂತ ಶುಶ್ರೂಷೆ ಮಾಡಿದಳು. ಜನ ಆಕೆಯನ್ನೇ ಮಗಳೆಂದು ಭಾವಿಸಿದ್ದರು.

* * *

## ಇಟ್ಟ ಹೆಜ್ಜೆ

ಸಚಿವ ಎಚ್. ಸಿದ್ದವೀರಪ್ಪನವರು ಒಬ್ಬ ದೊಡ್ಡ ವ್ಯಕ್ತಿಗಳಾದುದರಿಂದ ಅವರು ಒಂದಾವರ್ತಿ ಮುಂದೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯತಕ್ಕವರಲ್ಲ. ರಾಜಕೀಯದಲ್ಲಿ ಒಂದು ಉಚ್ಚ ವ್ಯಕ್ತಿತ್ವವನ್ನು ಪಡೆದವರಾಗಿದ್ದಾರೆ.

(ದಿನಾಂಕ 27. 2. 1970 : ಸದನ ಚರ್ಚೆಯಲ್ಲಿ)

**– ಎಂ. ಭಾಸ್ಕರ್ ಶೆಟ್ಟಿ,** ಕಾಪು ಕ್ಷೇತ್ರದ ಶಾಸಕರು.

# ರೈತಪರ ಕಾಳಜಿ ಮೊದಲ ಆದ್ಯತೆ

– ಆರ್.ಜಿ. ಸಿದ್ದಪ್ಪ

ಹಿರಿಯ ವಕೀಲರು, ದಾವಣಗೆರೆ

ಶ್ರೀ ಎಚ್. ಸಿದ್ದವೀರಪ್ಪನವರು ಹೆಸರುವಾಸಿಯಾದ ವಕೀಲರಾಗಿದ್ದು ದಾವಣಗೆರೆ – ಚಿತ್ರದುರ್ಗದಲ್ಲಿ ತಮ್ಮ ಈ ವೃತ್ತಿಯಲ್ಲಿ ಅನುಕರಣೀಯರಾಗಿದ್ದರು.

ನಾನು 1947ರಲ್ಲಿ ದಾವಣಗೆರೆಯಲ್ಲಿ ಲಾಯರ್ ವೃತ್ತಿಯನ್ನು ಕೈಗೊಂಡಾಗಿನಿಂದ ಅವರ ಪರಿಚಯ ಬೆಳೆಯಿತು. ಅವರು ಲಾಯರಾಗಿದ್ದುಕೊಂಡೆ ಸಾರ್ವಜನಿಕ ಕೆಲಸಗಳನ್ನು ಸಹಾ ಮಾಡುತ್ತಿದ್ದರು. ಉದಾಹರಣೆಗೆ ಹೇಳುವುದಾದರೆ – ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ರೈತರು ತಾವು ಬೆಳೆದ ಮಾಲನ್ನು ದಲ್ಲಾಳರ ಮೂಲಕ ಮಾರಾಟ ಮಾಡಲು ತಂದಾಗ ರೈತರಿಂದ ಧರ್ಮ, ಪಕ್ಕಿ, ತಳಗಾಯಿ ಎಂದು ಪಾಲು ಪಡೆಯುತ್ತಿದ್ದರು. ಇಂಥಹ ನ್ಯಾಯಸಮ್ಮತವಲ್ಲದ ಸಂಗತಿಗಳನ್ನು ಕಣ್ಣಾರೆ ಕಂಡರು. ಹೆಚ್ಚುವರಿ ಕಮೀಷನ್, ರೈತರಿಗೆ ಕೈಗಡ – ಮುಂಗಡವಾಗಿ ನೀಡಿದ ಹಣಕ್ಕೆ ದುಬಾರಿ ಬಡ್ಡಿಯನ್ನು ವಸೂಲಿ ಮಾಡುವುದನ್ನು ಕಂಡು ರೈತರಿಗೆ ಆಗತಕ್ಕ ಅನ್ಯಾಯವನ್ನು ತಡೆಗಟ್ಟುವ ಉದ್ದೇಶದಿಂದ ಅವರ ಹೆಸರಲ್ಲಿ **"ರೈತರ ಫಸಲುಗಳ ಮಾರಾಟದ ಸಹಕಾರ ಸಂಘ"** ಎಂಬ ಒಂದು ಸಹಕಾರ ಸಂಘವನ್ನು ಸ್ಥಾಪಿಸಿದರು. ಅವಕ್ಕೆ 1952ರವರೆಗೂ ಅಧ್ಯಕ್ಷರಾಗುವ ಮೂಲಕ ರೈತರಿಂದ ವಸೂಲಿ ಮಾಡುತ್ತಿದ್ದ ತಳಗಾಯಿ, ಕಮೀಷನ್, ಅಧಿಕ ಬಡ್ಡಿ ಇನ್ನಿತರ ಅನ್ಯಾಯಗಳಿಗೆ ಹೋರಾಟದ ಮೂಲಕ ಪರಿಹಾರ ಕಂಡುಕೊಂಡರು. ಅನ್ಯಾಯ ಆದರೂ ಮೌನವಾಗೇ ಸಹಿಸಿಕೊಂಡಿದ್ದ ರೈತರಲ್ಲಿ ಆತ್ಮವಿಶ್ವಾಸ ತುಂಬಿದರು ಶ್ರೀ ಎಚ್. ಸಿದ್ದವೀರಪ್ಪನವರು.

1947 ರಿಂದ 1960ರವರೆಗೆ ರೈತರಿಗೆ ಅವರ ಕಸುಬಿಗೆ ಬೇಕಾದ ನೇಗಿಲು, ಕುಳದಪಟ್ಟಿ, ಕುಡ, ಹಳಿಪಟ್ಟಿ, ಹಾರೆ, ಗುದ್ದಲಿ ಮುಂತಾದ ಪರಿಕರಗಳ ಸರಬರಾಜು ಕಡಿಮೆ ಇತ್ತು. ಈ ಪರಿಕರಗಳನ್ನು ನೇರವಾಗಿ 'ಭದ್ರಾವತಿ ಐರನ್ ಅಂಡ್ ಸ್ಟೀಲ್

ಕಂಪನಿ'ಗೆ ಸಂಪರ್ಕಿಸಿ, ತಾವು ಹುಟ್ಟು ಹಾಕಿದ ಸಹಕಾರ ಸಂಘಕ್ಕೆ ತರಿಸಿಕೊಂಡರು. ಮುಂದೆ ಅವು ರೈತರಿಗೆ ನಿಗದಿತ ಕಂಟ್ರೋಲ್ ಬೆಲೆಗೆ ಸುಲಭವಾಗಿ ಸಿಕ್ಕುವಂತೆ ವ್ಯವಸ್ಥೆ ಮಾಡಿದ್ದರು.

ಇದರ ಜತೆಗೆ ರೈತರ ದೈನಂದಿನ ಉಪಯೋಗಕ್ಕೆ ಬೇಕಾದ ಪಂಚೆ ಮತ್ತು ಬಿಳಿ ಬಟ್ಟೆಗಳಿಗೂ ಆಗ ಅಭಾವ ಇದ್ದುದನ್ನು ಕಂಡು ಆ ವಸ್ತುಗಳನ್ನೂ ಸಹಾ ಮಿಲ್‌ಗಳಿಂದ ನೇರವಾಗಿ ತರಿಸಿ ಮಾರಾಟ ಮಾಡುತ್ತಿದ್ದರು. ಈ ಅವಧಿಯಲ್ಲಿ ಬೆಲ್ಲ, ಬೇಳೆ, ಗೋಧಿ, ಅಕ್ಕಿ – ದಿನಸೀ ಸಾಮಾನುಗಳಿಗೂ ಅಭಾವವಿದ್ದು ಸಾರ್ವಜನಿಕರಿಗೆ ನಿಗದಿತ ಬೆಲೆಗೆ ಸಿಕ್ಕುತ್ತಿರಲಿಲ್ಲ. ಈ ಅಗತ್ಯ ಪದಾರ್ಥಗಳನ್ನು ತಾವೇ ಹುಟ್ಟುಹಾಕಿದ ರೈತಸಂಘದಿಂದಲೇ ಮಾರಾಟಮಾಡುವ ವ್ಯವಸ್ಥೆ ಮಾಡಿದರು.

ದಾವಣಗೆರೆ ತಾಲ್ಲೂಕಿನ 'ಕೊಡಗನೂರು' ಎಂಬ ಗ್ರಾಮದಲ್ಲಿ ಸಿದ್ದವೀರಪ್ಪನವರು ಜಿಲ್ಲಾ ಬೋರ್ಡು ಹೈಸ್ಕೂಲು ಸ್ಥಾಪಿಸಿದರು. ಆಗ ಅವರು ಚಿತ್ರದುರ್ಗ ಜಿಲ್ಲಾ ಬೋರ್ಡಿನ ಸದಸ್ಯರಾಗಿದ್ದರು.

ಹೈಸ್ಕೂಲಿಗೆ ಬಡ – ಮಧ್ಯಮ ರೈತರ ಮಕ್ಕಳು 6 – 8 ಮೈಲುಗಳಿಂದ ದಿನವೂ ನಡೆದು ಬರುತ್ತಿದ್ದರು. ಮುಖದಲ್ಲಿ ಬಳಲಿಕೆ ಕಾಣುತ್ತಿತ್ತು. ಇವರ ಕಷ್ಟ ಅರಿತು 'ಸಾರ್ವಜನಿಕ ವಿದ್ಯಾರ್ಥಿ ನಿಲಯ' ತೆರೆಯಲು ಮನಸ್ಸು ಮಾಡಿದರು. ಹೈಸ್ಕೂಲಿನ ಹಾಸ್ಟಲ್‌ಗಾಗಿ ಜೋಳಿಗೆ ಹಿಡಿದು ರೈತರಷ್ಟೇ ಅಲ್ಲ ನಗರದ ವರ್ತಕರಿಂದಲೂ ದವಸಧಾನ್ಯ, ಹಣ ಸಂಗ್ರಹಿಸಿದರು. ಅಲ್ಲೊಂದು ಅವರ ಕನಸಿನ ಪುಟ್ಟ ಹಾಸ್ಟಲ್ ಅಸ್ತಿತ್ವಕ್ಕೆ ಬಂತು. ಇದು ಕೆಲವು ವರ್ಷ ಸುಗಮವಾಗಿ ನಡೆದು ಗ್ರಾಮೀಣ ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅನುಕೂಲವಾಯಿತು.

ನಾನು ಸಿದ್ದವೀರಪ್ಪನವರ ಆದೇಶದಂತೆ 1948 – 49ನೇ ಸಾಲಿನಿಂದ 1959 – 60ನೇ ಸಾಲಿನವರೆಗೆ ರೈತಸಂಘದ ಚಟುವಟಿಕೆಯಲ್ಲಿ ಸಕ್ರಿಯ ಅಧ್ಯಕ್ಷನಾಗಿ ಜತೆಗೆ ಜಿಲ್ಲಾ ಬೋರ್ಡ್ ಹೈಸ್ಕೂಲಿನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದೆ. '1952' – ಸಿದ್ದವೀರಪ್ಪನವರು ರೈತರ ಕಷ್ಟಕ್ಕಾಗಿ ಸ್ಥಾಪಿಸಿದ ಸಹಕಾರ ಸಂಘದ ಅಧ್ಯಕ್ಷ ಸ್ಥಾನ ತೊರೆಯುವುದು ಅನಿವಾರ್ಯವಾಗಿತ್ತು. ಅದೊಂದು ಅವರ ಸಾರ್ವಜನಿಕ ಹಾಗೂ ರಾಜಕೀಯ ಬದುಕಿನಲ್ಲಿ ಮಹತ್ವದ ತಿರುವಿನ ಕಾಲ. ಭಾರತದ ಸ್ವಾತಂತ್ರ್ಯ ನಂತರದ ಪ್ರಥಮ ಸಾರ್ವಜನಿಕ ಪ್ರಜಾಸತ್ತಾತ್ಮಕ ಚುನಾವಣೆಯಲ್ಲಿ ಅವರು ಹರಿಹರ ಕ್ಷೇತ್ರದಿಂದ ಸ್ಪರ್ಧಿಸಿ ಜಯಭೇರಿ ಗಳಿಸಿದರು.

* * *

# 'ಪಾಪದ ಹಣ ಬೇಡ ಅಂದ್ರು'

–ಮುದೇಗೌಡ್ರ ರೇವಣಸಿದ್ದಪ್ಪ
ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.

**'ತಮಗಿದ್ದ ಅನುಭವ, ಸಂಪರ್ಕ ಹಾಗೂ ಸಚಿವ ಹುದ್ದೆಯಿಂದ ಹಣ, ಆಸ್ತಿ ಮಾಡುವ ಅವಕಾಶ ಇದ್ದರೂ ಸ್ವಂತಕ್ಕೇನೂ ಮಾಡಿಕೊಳ್ಳಲಿಲ್ಲ. 'ಪಾಪದ ಹಣ ಬೇಕಿಲ್ಲ, ಇಂಥ ಹಣದಿಂದ ಮಕ್ಕಳು ಕೆಟ್ಟುಹೋಗುತ್ತಾರೆ, ಸಮಾಜ ಕಂಠಕರಾಗುತ್ತಾರೆ' – ಎಂದು ಖಡಕ್ ಆಗಿ ಹೇಳಿ ಬೆಚ್ಚಿ ಬೀಳಿಸುತ್ತಿದ್ದರು. ಪ್ರಾಮಾಣಿಕರಾಗಿದ್ದರು'**

ಕರ್ನಾಟಕ ರಾಜಕಾರಣದಲ್ಲಿ ಅಂಥಾ ಗಟ್ಟಿಗರನ್ನು ಕಾಣಲಿಲ್ಲ. ಅವರೊಬ್ಬ ಶಿಸ್ತಿನ ಸಿಪಾಯಿ. ಸಮಯಕ್ಕೆ ಬೆಲೆ ಕೊಟ್ಟ ಅಪರೂಪದ ರಾಜಕಾರಣಿ. ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಕಚೇರಿಗೆ ಹಾಜರಾಗುತ್ತಿದ್ದರು. ಮಾತು ಗಡುಸು. ಸ್ವಭಾವ ಮೃದು. ಅಧಿಕಾರಿಗಳು ತಪ್ಪು ಮಾಡಿದರೆ ಕ್ಷಮೆ ಇರಲಿಲ್ಲ. ಆಗ ಅವರು ರಾಜ್ಯ ಗೃಹ ಮಂತ್ರಿ. ಮೊದಲ ಬಾರಿಗೆ ಆಯ್ಕೆಯಾದಾಗಲೇ ಮಹತ್ವದ ಖಾತೆ. ಅವರ ಕಾರ್ಯ ವೈಖರಿಗೆ ಬಹುಶ: ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರೇ ಮೂಗಿನ ಮೇಲೆ ಬೆರಳಿಟ್ಟುಕೊಂಡಿರಬೇಕು! ಅಂಥಾ 'ಡೋಂಟ್ ಕೇರ್ ಅಡ್ಮಿನಿಸ್ಟ್ರೇಟರ್'. ಆಗಿನ್ನೂ ವಿಧಾನಸೌಧ ಇರಲಿಲ್ಲ. ಅಠಾರ ಕಛೇರಿಯಲ್ಲಿ ಆಡಳಿತ. ಅವತ್ತು ಗೃಹಖಾತೆ ನಿಭಾಯಿಸೋದು ಅಷ್ಟು ಸುಲಭವಾಗಿರಲಿಲ್ಲ. ಅತ್ಯುತ್ತಮ ಕ್ರಿಮಿನಲ್ ವಕೀಲರೆಂದು ಆಗಲೇ ರಾಜ್ಯಕ್ಕೇ ಪ್ರಸಿದ್ಧರಿದ್ದರು. ಕಾನೂನನ್ನು ಕರಗತ ಮಾಡಿಕೊಂಡಿದ್ದರು.

ಗೃಹ ಸಚಿವರಾಗಿದ್ದಾಗ ಪೊಲೀಸ್ ಇಲಾಖೆಯಲ್ಲಿ ಏನೋ ತಪ್ಪು ಘಟಿಸಿದೆ ಅನ್ನಿಸಿತು. ಕೂಲಂಕಷ ಪರಿಶೀಲಿಸಿದರು. ಹೌದು, ರಾಜ್ಯ ಪೊಲೀಸ್‌ನ ಮುಖ್ಯ ಹುದ್ದೆಯ – ಐ.ಜಿ.ಪಿ. ತಪ್ಪೆಸಗಿದ್ದರು. ಗೃಹ ಸಚಿವರು ರಜೆಯ ಮೇಲೆ ತೆರಳಲು ಆದೇಶಿಸಿದರು. ಆತ ಕೇರ್ ಮಾಡಲಿಲ್ಲ. ಇವರಿಗೆ ಅವಮಾನದ ಸಂದರ್ಭ ಅದು. ಕೋಪ ಬಂತು. ತಮಗೆ ಬೇಕಿದ್ದ ನಿಷ್ಠಾವಂತ, ಪ್ರಾಮಾಣಿಕನನ್ನು ಹೊರರಾಜ್ಯದಿಂದ

24 ಗಂಟೆ ಒಳಗೆ ಹುಡುಕಿ ಕರೆಸಿದರು. ಒಂದೇ ದಿನದಲ್ಲಿ ತಪ್ಪು ಮಾಡಿದ ಅಧಿಕಾರಿ ಮನೆಗೆ ತೆರಳಿದ. ಇದು ಅವರ ತಾಖತ್ತು. ಸಚಿವರು ಗೆದ್ದು ಮುಗುಳ್ನಕ್ಕರು.

– ರಾಜ್ಯ ಕಂಡ ಪ್ರಾಮಾಣಿಕ, ಧೈರ್ಯವಂತ ಸಚಿವರೆಂದೇ ಬಿಂಬಿತರಾಗಿದ್ದ ಶ್ರೀ ಎಚ್. ಸಿದ್ದವೀರಪ್ಪನವರು. ಹರಿಹರ ಕ್ಷೇತ್ರ ಪ್ರತಿನಿಧಿಸಿದರೂ ದಾವಣಗೆರೆಯೇ ಅವರ ಕೇಂದ್ರಸ್ಥಾನ.

ಅವರು ಲಿಂಗಾಯಿತ ಸಮಾಜದ ಹೆಮ್ಮೆಯ ಪ್ರತಿನಿಧಿಯೇನೋ ನಿಜ. ಇಡೀ ಸಮಾಜ ಅವರ ಹಿಂದೆ ಇತ್ತು ಅನ್ನುವುದೂ ಅಷ್ಟೇ ಸತ್ಯ. ಆದರೆ ಅವರು ಎಂದೂ ಜಾತಿ ರಾಜಕಾರಣ ಮಾಡಲಿಲ್ಲ. ಎಲ್ಲ ಜಾತಿ ಜನಾಂಗವನ್ನೂ ಸಮಾನವಾಗಿ ನೋಡುತ್ತಿದ್ದರು. ಇದಕ್ಕೆ ಪುರಾವೆಯಾಗಿ ಅವರನ್ನು ಬೆಂಬಲಿಸಿ, ಸದಾ ರಕ್ಷಿಸಿದವರು ಹರಿಹರದ ಬಲಗೈ ಬಂಟನಂತಿದ್ದ ದುರ್ಗೋಜಿ ರಾಮಣ್ಣ, ಕುರುಬ ಜನಾಂಗದ ಬೀರಪ್ಪ, ಎರಸೀಮೆ ನೀಲಪ್ಪ, ಹುಗ್ಗಿ ಬಸಪ್ಪ ಮೊದಲಾದವರು ಅವರ ಕಟ್ಟಾ ಬೆಂಬಲಿಗರಾಗಿದ್ದರು.

ರೈತರು ಬೆಳೆದ ಕಬ್ಬಿಗೆ ಮಾನ್ಯತೆ ಸಿಕ್ಕಬೇಕು, ಈ ಭಾಗದಲ್ಲಿ ಒಂದು ಸಕ್ಕರೆ ಕಾರ್ಖಾನೆ ತೆರೆಯಬೇಕು ಎಂದು ಕನಸು ಕಂಡರು. ಆರಂಭದಲ್ಲೇ ಈ ಕುರಿತು ನಮ್ಮೆಲ್ಲರ ಜತೆ ಚರ್ಚಿಸಿದ್ದರು. ಕಾರ್ಖಾನೆಗೆ ಯೋಜನೆಯೇನೋ ಸಿದ್ದವಾಯಿತು, ಆದರೆ ಅಷ್ಟು ದೊಡ್ಡಮೊತ್ತ ಕಲೆಹಾಕುವುದು ಹೇಗೆ? ಯೋಚಿಸಿದ ನಮ್ಮೆಲ್ಲರ ಕೈಯಲ್ಲೂ ಭಾರೀ ಹಣ ಇರಲಿಲ್ಲ. ಎರಡು ಮೂರುವರ್ಷ ರೈತರಿಂದಲೇ ಷೇರು ಮಾರಾಟದಿಂದ ಸಣ್ಣ ಮೊತ್ತದ ಹಣ ಸಂಗ್ರಹಿಸಲಾಯಿತು.

ಈ ನಡುವೆ ಹರಿಯಾಣದ ಸಕ್ಕರೆ ಕಾರ್ಖಾನೆಗಳನ್ನು ನೋಡಿಬರಲು ಸಿದ್ದವೀರಪ್ಪನವರು ನಮ್ಮನ್ನೆಲ್ಲ ಕರೆದುಕೊಂಡು ಹೋದರು. ಕೆಲವರು ದೆಹಲಿಗೆ ನೇರವಾಗಿ ವಿಮಾನದಲ್ಲಿ ಬಂದು ಹರಿಯಾಣ ಸೇರಿಕೊಂಡರು. ಶಾಮನೂರು ಶಿವಪ್ಪ, ಗುಂಜನೂರು ಶಿವಾನಂದ್, ರೈತಸಂಘದ ಕೆಲವರು ಅವರ ಜತೆ ಕಾರ್ಖಾನೆಗಳಿಗೆ ಭೇಟಿ ನೀಡಿ ಬಂದೆವು. ಮುಂದೆ ಕುಕ್ಕವಾಡದಲ್ಲಿ ಕಾರ್ಖಾನೆ ಅದ್ದೂರಿಯಾಗಿ ಆರಂಭವಾದದ್ದು ಇತಿಹಾಸ. ಹಲವು ವರ್ಷಗಳ ಕನಸು ನನಸಾದ ಬಗ್ಗೆ ಅವರಿಗೆ ಸಂತೃಪ್ತಿ ಇತ್ತು. ರೈತರ ನಡುವೆ ಇರುವುದೆಂದರೆ ಅವರಿಗೆ ಇಷ್ಟ ಈ ಮೊದಲೇ ರೈತಸಂಘ ಆರಂಭಿಸಿ ರೈತರಿಗೆ ಉಪಕಾರ ಮಾಡಿದ್ದರು.

ಇಷ್ಟಾದರೂ ಚುನಾವಣೆಯ ಗೆಲುವು ಸದಾ ಅವರ ಬೆನ್ನಿಗೇನೂ ಇರಲಿಲ್ಲ. ಕ್ಷೇತ್ರದಲ್ಲಿ ಕೆಲವು ವಿರೋಧಿಗಳು ನಡೆಸಿದ ಕುತಂತ್ರಕ್ಕೆ ಬಲಿಯಾದರು. ಸೋಲು ಕಂಡಾಗ ಸುಮ್ಮನೆ ಕೂರದೆ ಜನರ ನಡುವಿದ್ದೇ ಕೆಲಸಮಾಡಿದರು. ಮುಂದಿನ ಚುನಾವಣೆಯಲ್ಲಿ ಮತ್ತೆ ಗೆಲುವನ್ನು ತಮ್ಮದಾಗಿಸಿಕೊಂಡರು. ಅವರಿಗೆ ಸೋಲು –



WD-H-035-24

ಗೆಲುವು ಒಂದೇ ನಾಣ್ಯದ ಎರಡು ಮುಖ ಇದ್ದಂತೆ. ಹರಿಹರ ಎಂದರೆ ಅದು ಹುಲಿಗಳ ಕಾದಾಟ ಎನ್ನುವಂತಾಗಿತ್ತು. ಗಾಂಜಿ ವೀರಪ್ಪ ಇವರ ಎದುರಾಳಿ. ಭಾರೀ ಪೈಪೋಟಿ ನಡುವೆ ಒಮ್ಮೆಯಂತೂ 524 ಮತಗಳ ಅಂತರದಿಂದ ಗೆದ್ದಿದ್ದರು. ಆಗ ಭ್ರಷ್ಟರೂ ಇರಲಿಲ್ಲ, ಪಕ್ಷದಿಂದ ಹಣ ಬರುತ್ತಿರಲಿಲ್ಲ. ಜನಗಳೇ ಶ್ರೀರಕ್ಷೆ.

ಸಿದ್ದವೀರಪ್ಪನವರು ರಾಜ್ಯಕ್ಕೆ, ದೇಶಕ್ಕೆ ದುಡಿದರೇ ವಿನ: ಸ್ವಂತಕ್ಕೆ ಏನೂ ಮಾಡಿಕೊಳ್ಳಲಿಲ್ಲ. ದೇವರಾಜ ಅರಸು ಸಂಪುಟದಲ್ಲಿ ಸಚಿವರಾಗಿದ್ದರೂ ಅದು ತೇಪೆ ಕೆಲಸವಾಗಿತ್ತು. ಅರಸು ಕಾಲದಲ್ಲಿ ಕೆಲವು ಅಹಿತಕರ ಘಟನೆಗಳು ನಡೆದವು. ಯುವ ಕಾಂಗ್ರೆಸ್‌ನ ಧೋರಣೆ ಇಷ್ಟವಾಗುತ್ತಿರಲಿಲ್ಲ. ಜತೆಗೆ ಭ್ರಷ್ಟಾಚಾರವೂ ನುಸುಳಿದ್ದು ಇವರನ್ನು ಇರಸುಮುರಸಿಗೆ ಸಿಲುಕಿಸಿತ್ತು. ತಮಗಿದ್ದ ಅನುಭವ, ಸಂಪರ್ಕ ಹಾಗೂ ಸಚಿವ ಹುದ್ದೆಯಿಂದ ಹಣ, ಆಸ್ತಿ ಮಾಡುವ ಅವಕಾಶ ಇದ್ದರೂ ಸ್ವಂತಕ್ಕೇನೂ ಮಾಡಿಕೊಳ್ಳಲಿಲ್ಲ. 'ಪಾಪದ ಹಣ ಬೇಕಿಲ್ಲ, ಇಂಥ ಹಣದಿಂದ ಮಕ್ಕಳು ಕೆಟ್ಟುಹೋಗುತ್ತಾರೆ, ಸಮಾಜ ಕಂಟಕರಾಗುತ್ತಾರೆ' – ಎಂದು ಖಡಕ್ ಆಗಿ ಹೇಳಿ ಬೆಚ್ಚಿ ಬೀಳಿಸುತ್ತಿದ್ದರು. ಪ್ರಾಮಾಣಿಕರಾಗಿದ್ದರು. ನ್ಯಾಯದ ಪರವಾಗಿದ್ದರು. ಕೊನೆಯ ದಿನಗಳಲ್ಲಿ ಅವರ ಕೈಯಲ್ಲಿ ಹಣವೂ ಇರಲಿಲ್ಲ.

'ಸಾವು' ಸುಖದ ಸಾವಾಗಲಿಲ್ಲ. ಬೆಂಗಳೂರಿನ ಆಸ್ಪತ್ರೆಯಲ್ಲಿ ಕೊನೆ ಉಸಿರೆಳೆದರು. ಕೊನೆ ದಿನಗಳಲ್ಲಿ ಅವರ ಮೊಮ್ಮಗಳು ಆಶಾ ಜತೆಗಿದ್ದು ಮನಸ್ಸು ತುಂಬಿ ಆರೈಕೆ ಮಾಡಿದಳು. ಚಿಕ್ಕವಳಿದ್ದಾಗಿನಿಂದ ತಾತನ ಬಳಿಯೇ ಬೆಳೆದಿದ್ದಳು. ಆಕೆ ಮೊಮ್ಮಗಳು ಆಗಿದ್ದಕ್ಕೆ ಸಾರ್ಥಕ.

ಇವತ್ತಿನ ರಾಜಕಾರಣಕ್ಕೆ ದಿಕ್ಕುದೆಸೆ ಇಲ್ಲ. ಹೊಡಿಮಗ, ಕಡಿಮಗ ಅನ್ನೋರೆ ತುಂಬಿದ್ದಾರೆ. ಸುಂಗಣ್ಣಗಳೇ ಎಲ್ಲೆಲ್ಲೂ. ಭ್ರಷ್ಟಾಚಾರ ಮಿತಿಮೀರಿದೆ. ಸಿದ್ದವೀರಪ್ಪನವರಂಥವರು ಇವರಿಗೆ ನೆನಪಾಗುತ್ತಾರೆಯೆ?

* * *

# ದಕ್ಷತೆಗೆ ಹೆಸರಾದ ಶ್ರೀ ಎಚ್. ಸಿದ್ದವೀರಪ್ಪ

– ಕೆ. ಆರ್. ಜಯದೇವಪ್ಪ, ರಾಜ್ಯಸಭಾ ಮಾಜಿ ಸದಸ್ಯರು

"Rules are there to guide us and not to bind us" – ಈ ಮಾತು ಹೇಳಿದವರು ಮತ್ತಾರು ಅಲ್ಲ ಹಿಂದಿನ ಮೈಸೂರು ರಾಜ್ಯದ ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರ ಸಚಿವ ಸಂಪುಟದಲ್ಲಿದ್ದ ಶ್ರೀ ಸಿದ್ದವೀರಪ್ಪನವರು. ಗೃಹ ಸಚಿವರೆಂದೇ ಕರೆಯಲ್ಪಡುತ್ತಿದ್ದ ಅವರು ಹಣಕಾಸು, ಕೈಗಾರಿಕೆ, ಕಾನೂನು, ಸಾರಿಗೆ, ಆರೋಗ್ಯ, ರೇಷ್ಮೆ, ಪಶುಸಂಗೋಪನೆ ಮುಂತಾದ ಖಾತೆಗಳನ್ನು ಸಹ ನಿರ್ವಹಿಸಿ ಧೀರ ಹಾಗೂ ದಕ್ಷ ಸಚಿವರೆಂದೇ ಖ್ಯಾತಿ ಪಡೆದಿದ್ದರು. ಆಗಿನ ದಿನಗಳಲ್ಲಿ ಮಂತ್ರಿಗಳಿಗಿಂತ ರಾಜ್ಯ ಮುಖ್ಯ ಕಾರ್ಯದರ್ಶಿಯ ಮಾತಿಗೆ ಹೆಚ್ಚು ಬೆಲೆ ಇರುತ್ತಿತ್ತು. ಶ್ರೀ ಸಿದ್ದವೀರಪ್ಪನವರು ಒಂದು ಸಂದರ್ಭದಲ್ಲಿ ಮುಖ್ಯ ಕಾರ್ಯದರ್ಶಿಗಳಿಗೆ ಒಂದು ಟಿಪ್ಪಣಿ ಕಳುಹಿಸಿ ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ತಿಳಿಸಿದಾಗ ಮುಖ್ಯ ಕಾರ್ಯದರ್ಶಿಯವರು Rules are not permitting me to issue such Orders ಎಂದು ಹಿಂಬರಹ ಬರೆದು ಕಳುಹಿಸಿದ್ದರು. ಅದಕ್ಕೆ ಪ್ರತಿಯಾಗಿ ಸಿದ್ದವೀರಪ್ಪನವರು ಪ್ರಾರಂಭದಲ್ಲಿ ತಿಳಿಸಿದಂತೆ "Of course Rules are there to guide us and not to bind us do it immediately and intimate me" ಎಂದು ತಿಳಿಸಿದ್ದರು. ಆಗ ಅಠಾರ ಕಛೇರಿಯಲ್ಲಿ (ಈಗಿನ ಉಚ್ಚ ನ್ಯಾಯಾಲಯದ ಕಟ್ಟಡ) ಎಲ್ಲರ ಬಾಯಲ್ಲೂ ಅದೇ ಮಾತು. ಅಂತಹ ದಿಟ್ಟತನ ಅವರ ಮಾತಿನಲ್ಲಿ ಹಾಗೂ ನಡೆಯಲ್ಲೂ ಇತ್ತು ಎಂಬುದು ಅವರನ್ನು ಸಮೀಪದಿಂದ ನೋಡಿದವರಿಗೆ ಗೊತ್ತಿರುವ ವಿಷಯ.

ಅವರ ದಿಟ್ಟತನಕ್ಕೆ ಇನ್ನೊಂದು ಉದಾಹರಣೆ : ಆಗಿನ ರಾಜ್ಯ ಪೊಲೀಸ್ ಮಹಾ ವರಿಷ್ಠಾಧಿಕಾರಿಗಳಾಗಿದ್ದ ಶ್ರೀ ಬಾಬುರೆಡ್ಡಿಯವರ ಅಧಿಕಾರ ಹಸ್ತಾಂತರ. ಆಗಿನ ದಿನಗಳಲ್ಲಿ ಐ.ಪಿ.ಎಸ್. ಹಾಗೂ ಐ.ಎ.ಎಸ್. ಅಧಿಕಾರಿಗಳ ನೇಮಕ ಹಾಗೂ ವರ್ಗಾವಣೆ ಕೇಂದ್ರ ಸರ್ಕಾರದಿಂದ ಆಗ ಬೇಕಾಗಿತ್ತು. ಹೀಗಾಗಿ ಈ ವರ್ಗದ

ಅಧಿಕಾರಿಗಳು ಸಚಿವರ ಮಾತಿಗೆ ಮನ್ನಣೆ ಕೊಡುತ್ತಲಿದ್ದುದು ವಿರಳ. ಶ್ರೀ ಬಾಬು ರೆಡ್ಡಿಯುವರು ಮುಖ್ಯಮಂತ್ರಿಗಳಿಗೇ ಮರ್ಯಾದೆ ಕೊಡುತ್ತಿರಲಿಲ್ಲ. ಸಭೆ, ಸಮಾರಂಭಗಳಲ್ಲಿ ಅವರ ಎದುರಿಗೇ ಸಿಗರೇಟು ಸೇದುತ್ತಲಿದ್ದರು. ಇದರಿಂದ ಇರಿಸು ಮುರಿಸಿಗೆ ಒಳಗಾದ ಕೆಂಗಲ್ ಹನುಮಂತಯ್ಯನವರು ಸಿದ್ದವೀರಪ್ಪನವರಿಗೆ "ದೆಹಲಿಗೆ ಹೋಗಿ ಹೇಗಾದರೂ ಮಾಡಿ ಇವರ ಎತ್ತಂಗಡಿ ಮಾಡಿಸಿ", ಎಂದು ಹೇಳಿದರಂತೆ. ಅದರಂತೆ ಶ್ರೀ ಸಿದ್ದವೀರಪ್ಪನವರು ರಹಸ್ಯವಾಗಿ ದೆಹಲಿಗೆ ಹೋಗಿ ಕೇಂದ್ರ ಸಚಿವರ ಮನ ಒಲಿಸಿ ಅವರ ವರ್ಗಾವಣೆ ಆದೇಶ ಕೈಯಲ್ಲಿಯೇ ತೆಗೆದುಕೊಂಡು ಬಂದು ಸಿನಿಮೀಯ ರೀತಿಯಲ್ಲಿ ಅವರಿಂದ ಅಧಿಕಾರ ಹಸ್ತಾಂತರ ಮಾಡಿಸಿದರು. ಈ ಸುದ್ದಿ ಆಗ ಬಹಳ ಹೆಸರುವಾಸಿಯಿದ್ದ 'ಕಿಡಿ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಶೇಷಪ್ಪನವರಿಗೆ ರಾಜಕಾರಣಿಗಳು ಹೆದರುತ್ತಿದ್ದರು. ಯಾರ ಮುಲಾಜಿಗೂ ಒಳಗಾಗದೇ ಶ್ರೀ ಶೇಷಪ್ಪನವರು ಇಂತಹ ಕ್ಲಿಷ್ಟ ವಿಷಯಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಲಿದ್ದರು. ರಾಜಕಾರಣಿಗಳು ದೆಹಲಿಗೆ ಹೋದರೆ ಆಗ ಸುದ್ದಿ ಆಗುತ್ತಿತ್ತು. ಈ ವಿಷಯ ಬಹಿರಂಗ ಪಡಿಸುವಂತಿರಲಿಲ್ಲ. ಯಾವ ಮೂಲೆಗಳಿಂದಾಗಲೀ ವಾಸ್ತವಾಂಶ ಶ್ರೀ ಶೇಷಪ್ಪನವರು ಸಂಗ್ರಹಿಸುತ್ತಿದ್ದರು. ಅದೇ ರೀತಿ ಈ ವಿಷಯದಲ್ಲೂ 'ಗೃಹ ಸಚಿವರು ಬುರ್ಖಾ ಧರಿಸಿ ದೆಹಲಿಗೆ ಹೋಗಿ ಪೊಲೀಸ್ ವರಿಷ್ಠಾಧಿಕಾರಿಗಳವರ ವರ್ಗಾವಣೆ ಆದೇಶ ಪಡೆದು ತಂದರು' ಎಂದು ತಮ್ಮ 'ಕಿಡಿ' ಪತ್ರಿಕೆಯಲ್ಲಿ ಪ್ರಕಟಿಸಿ ಸುದ್ದಿ ಮಾಡಿದ್ದರು.

ಶ್ರೀ ಕಡಿದಾಳ್ ಮಂಜಪ್ಪನವರು ಆಗ ರೆವಿನ್ಯೂ ಸಚಿವರಾಗಿದ್ದರು. ರೇಸ್ ಕೋರ್ಸ್ ರಸ್ತೆಯಲ್ಲಿರುವ ಸರ್ಕಾರಿ ಬಂಗಲೆಯಲ್ಲಿ ಶ್ರೀ ಸಿದ್ದವೀರಪ್ಪನವರು ವಾಸವಾಗಿದ್ದ ಬಂಗಲೆಯ ಪಕ್ಕದಲ್ಲಿರುವ ಬಂಗಲೆಯಲ್ಲಿ ಇವರ ವಾಸ. ಇಬ್ಬರೂ ಆತ್ಮೀಯ ಸ್ನೇಹಿತರು. ಐ.ಎ.ಎಸ್ ಅಧಿಕಾರಿಗಳದ್ದೇ ಆಗ ಕಾರುಬಾರು. ಸಚಿವರು ಜಿಲ್ಲೆಯಲ್ಲಿ ಪ್ರವಾಸ ಮಾಡಬೇಕಾಗಿದ್ದಲ್ಲಿ ಜಿಲ್ಲಾಧಿಕಾರಿಗಳದ್ದೇ ಅಂತಿಮ ತೀರ್ಮಾನ. ಕಾನೂನಿನ ಸಂಬಂಧವಾಗಿ ಗಲಾಟೆ ಆಗಲಿದೆ ಎಂದು ತಿಳಿದು ಬಂದರೆ ಸಚಿವರು ಜಿಲ್ಲೆಯಲ್ಲಿ ಪ್ರವಾಸ ಮಾಡುವಂತಿರಲಿಲ್ಲ. ಜಿಲ್ಲಾಧಿಕಾರಿಗಳು ಸಚಿವರು ಜಿಲ್ಲೆಗೆ ಆಗಮಿಸಿದಾಗ ಜಿಲ್ಲೆಯ ಗಡಿಯಲ್ಲಿ ಸ್ವಾಗತಿಸಿ ಅವರ ಜೊತೆಗೇ ಇದ್ದು ಜಿಲ್ಲೆಯ ಗಡಿಯವರೆವಿಗೂ ಹೋಗಿ ಬೀಳ್ಕೊಟ್ಟು ಬರುತ್ತಿದ್ದರು.

ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ಶ್ರೀ ಕಡಿದಾಳ್ ಮಂಜಪ್ಪನವರು ಏನಾದರೂ ಸೂಚನೆ ಕೊಟ್ಟಾಗ I Know my responsibilities sir. I am an IAS Officer ಎಂದು ಉತ್ತರ ಕೊಡುತ್ತಲಿದ್ದರಂತೆ. ಶ್ರೀ ಕಡಿದಾಳ್ ಮಂಜಪ್ಪನವರು ಮೃದು ಸ್ವಭಾವದವರು. ಶ್ರೀ ಸಿದ್ದವೀರಪ್ಪನವ ಜೊತೆ ಮಾತನಾಡುತ್ತಾ ಶಿವಮೊಗ್ಗ ಜಿಲ್ಲಾಧಿಕಾರಿಗಳು ಏನಾದರೂ ಹೇಳಿದರೆ ಮೇಲ್ಕಂಡಂತೆ ಹೇಳುತ್ತಾರೆ ಸ್ವಲ್ಪ ನೋಡಿಕೊಳ್ಳಿ

ಎಂದು ಹೇಳಿದರಂತೆ. ನಂತರ ಶ್ರೀ ಸಿದ್ದವೀರಪ್ಪನವರು ಶಿವಮೊಗ್ಗ ಜಿಲ್ಲೆಯ ಪ್ರವಾಸಕ್ಕೆ ಹೋಗಿದ್ದಾಗಲೂ ಸಹ ಅದೇ ಜಿಲ್ಲಾಧಿಕಾರಿ ಮೇಲ್ಕಂಡಂತೆ I am an IAS Officer, I know my responsibilities sir ಎಂದಾಗ ಶ್ರೀ ಸಿದ್ದವೀರಪ್ಪನವರು ತಮ್ಮ ಕನ್ನಡಕವನ್ನು ಸ್ವಲ್ಪ ಕೆಳಗೆ ಸರಿಸಿ ಕಣ್ಣು ಕೆಂಪಗೆ ಮಾಡಿ I say you may be an IAS Officer, I am a political leader, carry out my instruction ಎಂದು ಗುಡುಗಿದಾಗ ಐ.ಎ.ಎಸ್. ಆಫೀಸರ್ ತೆಪ್ಪಗಾದರಂತೆ. ಎಲ್ಲಾ ಅಧಿಕಾರಿಗಳೂ ಇವರಿಗೆ ಹೆದರುತ್ತಿದ್ದರು.

ಶ್ರೀ ಸಿದ್ದವೀರಪ್ಪನವರು ವೃತ್ತಿಯಲ್ಲಿ ವಕೀಲರಾಗಿದ್ದವರು. ಅವರು ಅನೇಕ ಕ್ರಿಮಿನಲ್ ಮೊಕದ್ದಮೆಗಳಲ್ಲಿ, ಹೆಸರು ಮಾಡಿದ್ದರು. ಆಗ ನ್ಯಾಯಾಧೀಶರು ಆಂಗ್ಲರು ಇದ್ದರು. ಒಮ್ಮೆ ಇವರು ಒಂದು ಮೊಕದ್ದಮೆಯಲ್ಲಿ ವಾದ ಮಾಡುತ್ತಿರುವಾಗ ನ್ಯಾಯಾಧೀಶರು ಮಧ್ಯ ಪ್ರವೇಶಿಸಿ Mr. Lawyer you are telling lie ಎಂದರಂತೆ. ತಕ್ಷಣವೇ ಸಿದ್ದವೀರಪ್ಪನವರು If you say that I am telling lie, I will say that you are unworthy to occupy the chair, how can you say that I am telling lie? ಎಂದಾಗ ನ್ಯಾಯಾಧೀಶರಾದಿಯಾಗಿ ಹಾಜರಿದ್ದ ಎಲ್ಲಾ ವಕೀಲರು ಸ್ತಬ್ದರಾದರಂತೆ. ಅಂತಹ ಎದೆಗಾರಿಕೆ ಅವರದಾಗಿತ್ತು. ಈಗ ಅಂತಹವರು ಹುಡುಕಿದರೂ ಸಿಗಲಿಕ್ಕಿಲ್ಲ.

ಹಲವಾರು ಕಾರಣಗಳಿಂದ ನಾನು ವಿದ್ಯಾಭ್ಯಾಸವನ್ನು ನಿಲ್ಲಿಸಿದಾಗ ಶ್ರೀ ಸಿದ್ದವೀರಪ್ಪನವರು ನನಗೆ ವಿದ್ಯಾಭ್ಯಾಸ ಮುಂದುವರಿಸಲು ಹೇಳಿ ಮೈಸೂರಿನಲ್ಲಿ ಹಿಂದಿನ ಸುತ್ತೂರು ಜಗದ್ಗುರುಗಳವರಿಗೆ ಕಾಗದ ಕೊಟ್ಟು ಹಾಸ್ಟೆಲಿನಲ್ಲಿ ಉಚಿತ ಪ್ರವೇಶ ಕೊಡಿಸಿ ಪ್ರೋತ್ಸಾಹಿಸಿದ್ದರು.

ಮೈಸೂರಿನಲ್ಲಿ ನಾನು ವಿದ್ಯಾಭ್ಯಾಸ ಮಾಡುತ್ತಿದ್ದಾಗ ಶ್ರೀಯುತರು ಆಗ ರಾಜ್ಯ ಖಾದಿ ಬೋರ್ಡಿನ ಅಧ್ಯಕ್ಷರಾಗಿದ್ದರು ಮತ್ತು ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದರು. ಮೈಸೂರಿಗೆ ಬಂದಾಗ ಬೆಳಿಗ್ಗೆ ವಾಯು ವಿಹಾರಕ್ಕೆ ಬರಲು ತಿಳಿಸುತ್ತಿದ್ದರು. ಆಗ ಅವರೇ ಮೇಲ್ಕಂಡ ಘಟನೆಗಳನ್ನು ಹೇಳುತ್ತಿದ್ದರು. ಬೆಂಗಳೂರಿನಲ್ಲಿ ಹಿರಿಯ ವಕೀಲರಲ್ಲಿ ಕಲಿಯುವಂತೆ ಅವರೇ ನನಗೆ ಸಲಹೆ ಕೊಟ್ಟಿದ್ದರು. ನನ್ನನ್ನು ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದರು. ನನ್ನ ಚಿಕ್ಕಪ್ಪ ಕೂಲಂಬಿ ಬಸಪ್ಪ ಕಾಂಗ್ರೆಸ್‌ನಲ್ಲಿದ್ದು ಸಿದ್ದವೀರಪ್ಪನವರಿಗೆ ನಿಕಟವಾಗಿದ್ದರು. ನನ್ನ ಸಹೋದರ ಕೆ. ಆರ್. ಸೋಮಶೇಖರಪ್ಪನವರಿಗೆ ವೈದ್ಯಕೀಯ ಶಿಕ್ಷಣಕ್ಕೆ ಅನುವು ಮಾಡಿಕೊಟ್ಟಿದ್ದರು. ಹೀಗೆ ವೈಯಕ್ತಿಕವಾಗಿ ನಮ್ಮ ಮನೆತನಕ್ಕೂ ಸಹಾಯ ಹಸ್ತ ನೀಡಿದ ಸಂಬಂಧ ಇತ್ತು.


ಶ್ರೀ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಇವರು ವಿರೋಧ ಪಕ್ಷದ ನಾಯಕರು. ಪಾಟೀಲರ ಮಂತ್ರಿಮಂಡಲ ಬಹುಮತ ಕಳೆದುಕೊಳ್ಳಲು ಶ್ರೀ ಸಿದ್ದವೀರಪ್ಪನವರೇ ಕಾರಣರು. ಪಾಟೀಲರ ರಾಜೀನಾಮೆ ನಂತರ ಶ್ರೀ ಸಿದ್ದವೀರಪ್ಪನವರೇ ಮುಂದಿನ ಮುಖ್ಯಮಂತ್ರಿಗಳು ಎಂದಾಗಿತ್ತು. ಆದರೆ ಆಗಿನ ಕೇಂದ್ರ ಸರ್ಕಾರದಲ್ಲಿ ರೈಲ್ವೇ ಸಚಿವರಾಗಿದ್ದ ಕೆಂಗಲ್ ಹನುಮಂತಯ್ಯ, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ದೇವರಾಜ ಅರಸು, ಯುವನಾಯಕ ಆರ್. ಗುಂಡೂರಾಯರು ಸೇರಿಕೊಂಡು ಲಿಂಗಾಯತರಿಗೆ ಮುಖ್ಯಮಂತ್ರಿ ಸ್ಥಾನ ನೀಡದಂತೆ ಮಸಲತ್ತು ಮಾಡಿದರು. ಅದರಲ್ಲಿ ಯಶಸ್ವಿ ಆದರು. ಇಲ್ಲವಾಗಿದ್ದಲ್ಲಿ ಶ್ರೀ ಸಿದ್ದವೀರಪ್ಪನವರು ರಾಜ್ಯದ ಮುಖ್ಯಮಂತ್ರಿ ಆಗಬೇಕಿತ್ತು. ಅದು ತಪ್ಪಿ ಹೋಯಿತು. ರಾಜಕಾರಣದಲ್ಲಿ ಇವೆಲ್ಲಾ ಸರ್ವೆ ಸಾಮಾನ್ಯ. ಎತ್ತರಕ್ಕೆ ತೆಗೆದುಕೊಂಡು ಹೋಗುವುದು ಮತ್ತು ಕೆಳಕ್ಕೆ ತಳ್ಳುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಆದರೆ ಅದು ಈಗ ಹೆಚ್ಚಾಗಿದೆ.

ಹರಿಹರ ತಾಲ್ಲೂಕಿನ ಹನಗವಾಡಿ ಗ್ರಾಮದಲ್ಲಿ ಸಾಮಾನ್ಯ ಕೃಷಿಕರ ಕುಟುಂಬದಲ್ಲಿ ಹುಟ್ಟಿ ವಕೀಲ ವೃತ್ತಿ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಹೆಸರು ಮಾಡಿದ ಶ್ರೀ ಎಚ್. ಸಿದ್ದವೀರಪ್ಪನವರ ಶ್ರೀಮತಿ ಮಹದೇವಮ್ಮ ಈಗ ಜೀವಂತವಿಲ್ಲ. ಇರುವ ಏಕಮಾತ್ರ ಪುತ್ರ ಡಾ॥ ಹಾಲಸ್ವಾಮಿಯವರು ಅಮೇರಿಕಾದಲ್ಲಿ ಶಾಶ್ವತವಾಗಿ ನೆಲೆಸಿರುವುದರಿಂದ ಶ್ರೀ ಸಿದ್ದವೀರಪ್ಪನವರು ಜನರ ಮನದಿಂದ ಮರೆಯಾಗಿದ್ದಾರೆ. ಈಗ ಅವರು ಬರೀ ನೆನಪು ಮಾತ್ರ.

* * * * *



ಶ್ರೀ ಎಚ್. ಸಿದ್ದವೀರಪ್ಪ (ಮಾಜಿ ಗೃಹ ಸಚಿವರು)



ಶ್ರೀ ಎಚ್. ಸಿದ್ದವೀರಪ್ಪ (ಮಾಜಿ ಗೃಹ ಸಚಿವರು)



ಎಚ್. ಸಿದ್ದವೀರಪ್ಪ ತಮ್ಮ ಪತ್ನಿ ಮಹಾದೇವಮ್ಮ ಹಾಗೂ ಪುತ್ರ ಹಾಲಸ್ವಾಮಿ



ಎಚ್. ಸಿದ್ದವೀರಪ್ಪ ತಮ್ಮ ಪತ್ನಿ ಮಹಾದೇವಮ್ಮ




ಅಮೇರಿಕದಲ್ಲಿ ನೆಲೆಸಿರುವ ಪುತ್ರ ಡಾಕ್ಟರ್ ಬಾಲಸ್ವಾಮಿ ಅವರೊಂದಿಗೆ



ಪುತ್ರ ಡಾಕ್ಟರ್ ಬಾಲಸ್ವಾಮಿ ವಿವಾಹ ಸಂದರ್ಭ. ಕುಟುಂಬ ಹಾಗೂ ಬಂಧು-ಮಿತ್ರರೊಂದಿಗೆ




ಪುತ್ರ ಡಾಕ್ಟರ್ ಹಾಲಸ್ವಾಮಿ ಮದುವೆ ಸಂದರ್ಭದಲ್ಲಿ



ಏಕಮಾತ್ರ ಪುತ್ರ ಡಾಕ್ಟರ್ ಹಾಲಸ್ವಾಮಿ ಕುಟುಂಬದೊಂದಿಗೆ



ಇಳಿವಯಸ್ಸಲ್ಲಿ ತಮ್ಮ ಮೊಮ್ಮಗಳೊಂದಿಗೆ ಎಚ್. ಸಿದ್ದವೀರಪ್ಪ




ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಅವರೊಂದಿಗೆ ಮಂತ್ರಿ ಮಂಡಲ
ಟಿ. ಚೆನ್ನಯ್ಯ, ಎ.ಜಿ. ರಾಮಚಂದ್ರರಾವ್, ಕೆಂಗಲ್ ಹನುಮಂತಯ್ಯ,
ಕಡಿದಾಳ್ ಮಂಜಪ್ಪ, ಎಚ್. ಸಿದ್ದವೀರಪ್ಪ, ನಾಗನಗೌಡ



ವಿಶೇಷ ಮಾವಿನತಳಿಯ ಹಣ್ಣುಗಳ ಪರಿಶೀಲನೆಯಲ್ಲಿ ಮುಖ್ಯಮಂತ್ರಿ ಕೆಂಗಲ್ ಅವರ ಜತೆ ಎಚ್. ಸಿದ್ದವೀರಪ್ಪ



ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಹಾಗೂ ಇತರರೊಂದಿಗೆ ಎಚ್. ಸಿದ್ದವೀರಪ್ಪ
(ಎಡದಿಂದ ಮೊದಲನೆಯವರು)



ಗಣ್ಯರ ನಿರೀಕ್ಷಣೆಯಲ್ಲಿ ಎಚ್. ಸಿದ್ಧವೀರಪ್ಪ



ಕಟ್ಟಡ ಕಾಮಗಾರಿ ಪರಿಶೀಲನೆಯಲ್ಲಿ ಎಚ್. ಸಿದ್ಧವೀರಪ್ಪ



ಮುಖ್ಯಮಂತ್ರಿಯಾಗಿ ಕಡತ ನೋಡುತ್ತಿರುವ ಎಸ್. ನಿಜಲಿಂಗಪ್ಪ



ಮಾಜಿ ಉಪ ರಾಷ್ಟ್ರಪತಿ ಬಿ.ಡಿ. ಜತ್ತಿ ಅವರೊಂದಿಗೆ ಉಪಹಾರ



ಪುಟ್ಟೂರು ಹನಗವಾಡಿಯಲ್ಲಿ ಗ್ರಾಮ ಸಮಸ್ಯೆ – ಚರ್ಚೆ




ಸಭೆಯೊಂದರಲ್ಲಿ ಸಚಿವರು, ಶಾಸಕರು ಸಾರ್ವಜನಿಕರು




ಪ್ರೌಢಶಾಲೆಯೊಂದರ ಉದ್ಘಾಟನೆ ನಂತರದ ಚಿತ್ರ



ಗ್ರಾಮ ಭೇಟಿ ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ಬಾವಿ ಪರಿಶೀಲನೆ



ರಾಜಭವನದಿಂದ ಹೊರ ಬರುತ್ತಿರುವ ಎಚ್. ಸಿದ್ದವೀರಪ್ಪ
ಮಾಜಿ ಮುಖ್ಯಮಂತ್ರಿ ಬಿ.ಡಿ. ಜತ್ತಿ ಅವರೊಂದಿಗೆ



ಮುಖ್ಯಮಂತ್ರಿ, ಸಚಿವರು, ಶಾಸಕರು ಹಾಗೂ ಅಧಿಕಾರಿಗಳೊಂದಿಗೆ ಅಪರೂಪದ ಛಾಯಾಚಿತ್ರ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು (PWS 1942)